
ಕಯ್ಯಾರ ಗದ್ಯ ಸೌರಭ

ಸಂಪಾದಕರು
ರಾಧಾಕೃಷ್ಣ ಕೆ. ಉಳಿಯತ್ತಡ್ಕ



ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

ಕಯ್ಯಾರ ಗದ್ಯ ಸೌರಭ

(ಆಯ್ದ ಭಾಷಣಗಳು ಮತ್ತು ಲೇಖನಗಳು)

ಸಂಪಾದಕರು :

ರಾಧಾಕೃಷ್ಣ ಕೆ. ಉಳಿಯತ್ತಡ್ಕ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು

ಕಯ್ಯಾರ ಗದ್ಯ ಸೌರಭ
(ಆಯ್ದ ಭಾಷಣಗಳು ಮತ್ತು ಲೇಖನಗಳು)

ಸಂಪಾದಕರು :

ರಾಧಾಕೃಷ್ಣ ಕೆ. ಉಳಿಯತ್ತಡ್ಕ

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು

Gadya Sourabha :

Prose of Nadoja Dr. Kayyara Kinhanna Rai

K. Uliyathadka, 'Drishya', P.O

671124, Mobile : 09995119326

: Kannada Pusthaka Pradhikara
Kannada Bhavan, J.C. Road.
Bangalore - 560002

2011

: 1000

Rs. 150-00

: Master Graphics Badiadka
P.O. Perdala, 671551
Kasaragod.
Ph : 04998 285734
e-mail : mastergraphic@rediffmail.com

Chaithanya Shilpa Graphcis
3rd Main Road, Chamarajpet, B'lore
Ph : 26607996

ಕನ್ನಡ ಪುಸ್ತಕ ಪ್ರಾಧಿಕಾರ ಕನ್ನಡ ಪುಸ್ತ[illegible]
ಸಂಸ್ಥೆಯಾಗಿದ್ದು, ಕನ್ನಡ ಪುಸ್ತಕ ಪ್ರಕಾಶಕರು [illegible]
ಏಳಿಗೆಗಾಗಿ ಹಲವಾರು ಯೋಜನೆಗಳನ್ನು ಹಾಕಿಕೊಂಡು [illegible]
ಅನುಷ್ಠಾನಗೊಳಿಸುತ್ತಾ ಬರುತ್ತಿದೆ. ಸಾಮಾನ್ಯವಾಗಿ ಜನಪ್ರಿಯ [illegible]
ಮಾರಾಟವಾಗುವುದರಿಂದ ಅವುಗಳ ಪ್ರಕಟಣಾ [illegible]
ಕನ್ನಡ ಪುಸ್ತಕ ಪ್ರಕಾಶಕರು ಸಮರ್ಥವಾಗಿ ಈ [illegible]
ಅಂಗಸಂಸ್ಥೆಗಳಾದ ಪ್ರಾಧಿಕಾರ, ಅಕಾಡೆಮಿಗಳು [illegible]
ಸಾಮಾಜಿಕ ಜವಾಬ್ದಾರಿಗಳಿರಬೇಕಾದ ಕಾರಣದಿಂದ [illegible]
ಸಾಹಿತ್ಯ ಪ್ರಕಾರಗಳನ್ನು, ಹೊರತುಪಡಿಸಿದ ಕೃತಿಗಳನ್ನು, ಪ್ರಕಟಿಸಿ [illegible]
ತಲುಪಿಸುವುದು ಈ ಸಂಸ್ಥೆಯ ಜವಾಬ್ದಾರಿಯಾಗಿದೆ [illegible]
ಸಮರ್ಥವಾಗಿ ನಿರ್ವಹಿಸುತ್ತಾ ಬಂದಿದೆ

ಕನ್ನಡದ ಹಿರಿಯ ಮಹಾನ್ ಚೇತನ ನಾಡೋಜ ಡಾ|| ಕಯ್ಯಾರ ಕಿಞ್ಞಣ್ಣ ರೈ [illegible] ಹೋರಾಟಗಾರರು. ನೂರರ ಸಂಭ್ರಮದ ಹೊಸ್ತಿಲಲ್ಲಿರುವ [illegible] ಲೇಖನಗಳ ಸಂಗ್ರಹವನ್ನು ಹೊರತರುತ್ತಿರುವುದು ಪ್ರಾಧಿಕಾರದ [illegible] ಸಂಸ್ಕೃತ, ಇಂಗ್ಲೀಷ್, ತುಳು, ಮಲೆಯಾಳಂ [illegible] ವರೆಗೆ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. [illegible] ಕಳೆದ ಐದು ದಶಕಕ್ಕೂ ಹೆಚ್ಚಿನ ಕಾಲದಿಂದ ಹೋರಾಟ ನಡೆಸುತ್ತ [illegible] ಇಳಿವಯಸ್ಸಿನಲ್ಲಿಯೂ ಕಡಿಮೆಯಾಗಿಲ್ಲ. [illegible] ಪತ್ರಿಕೋದ್ಯಮಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸುಧಾರಕರಾಗಿ ಸಮರ್ಪಣಾಭಾವದಿಂದ ದುಡಿದ ಅವರ ಬದುಕಿನ ಅನುಭವ ವಿಸ್ತಾರವಾದದ್ದು. ಕಯ್ಯಾರರು ಗದ್ಯ-ಪದ್ಯ ಎರಡರಲ್ಲೂ ಪರಿಣಿತರು. ಅವರ ಎಲ್ಲ ಲೇಖನಗಳ ಸಮಗ್ರ ಸಂಪುಟವನ್ನು ಹೊರತರಬೇಕೆಂಬುದು ಪ್ರಾಧಿಕಾರದ ಆಶಯವಾದರೂ ನಮಗೆ ಇರುವ ಸೀಮಿತ ಅವಕಾಶದಲ್ಲಿ ಪ್ರಾತಿನಿಧಿಕವಾಗಿ ಹತ್ತು ಲೇಖನ, ಭಾಷಣಗಳನ್ನು ಮಾತ್ರ ಹೊರತರುತ್ತಿದ್ದೇವೆ. ಮಹಾತ್ಮಗಾಂಧಿಯವರ ತತ್ವಾದರ್ಶನಗಳಲ್ಲಿ ಅಚಲನಂಬಿಕೆ ಇರುವ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಪುರಸ್ಕಾರಗಳು ಸಂದಿವೆ. ಭೌಗೋಳಿಕವಾಗಿ ಕನ್ನಡ ನಾಡಿನಿಂದ ಹೊರಗಿದ್ದರೂ ಇಂದಿಗೂ ಕನ್ನಡಕ್ಕಾಗಿ ಹೋರಾಡುತ್ತಿರುವ ಅವರ ಸಾಧನೆ ಹಿರಿಯದು. ಅವರ ಅಪಾರವಾದ ಸಾಹಿತ್ಯ ರಾಶಿಯಿಂದ ನಮ್ಮ ಕೋರಿಕೆಯ ಮೇರೆಗೆ ಹತ್ತು ಲೇಖನಗಳನ್ನು ಸಂಪಾದಿಸಿಕೊಟ್ಟಿರುವ ಹಿರಿಯ ಕವಿ ಹಾಗೂ ಪತ್ರಕರ್ತ ಶ್ರೀ ರಾಧಕೃಷ್ಣ ಕೆ. ಉಳಿಯತ್ತಡ್ಕ ಅವರಿಗೂ, ಗೌರವಾನ್ವಿತ ಕಯ್ಯಾರರಿಗೂ, ಪ್ರಾಧಿಕಾರದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

ಈ ಕೃತಿಯನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ, ನನ್ನ ಆಪ್ತ ಕಾರ್ಯದರ್ಶಿ ಶ್ರೀ ಕೆ. ಮುಕುಂದನ್, ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಎಂದಿನಂತೆ ಕನ್ನಡ ಓದುಗರು ತುಂಬುಸಹೃದಯದಿಂದ ಈ ಪುಸ್ತಕವನ್ನು ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

ಡಾ|| ಸಿದ್ಧಲಿಂಗಯ್ಯ
ಅಧ್ಯಕ್ಷರು

ಸಂಪಾದಕರ ನುಡಿ

ನಾಡೋಜ ಡಾ. ಕಯ್ಯಾರ ಕಿಞ್ಞಣ್ಣ ರೈಗಳ ಆಯ್ದ ಗದ್ಯ ಕೃತಿಗಳನ್ನು ಕನ್ನಡ ಸಾಂಸ್ಕೃತಿಕ ಲೋಕಕ್ಕೆ ಸಮರ್ಪಿಸಲು ಸಂತೋಷವಾಗುತ್ತದೆ. ಕರ್ನಾಟಕ ಸರಕಾರದ ಕನ್ನಡ ಪುಸ್ತಕ ಪ್ರಾಧಿಕಾರದ ವಿನಂತಿ ಮೇರೆಗೆ ಇದನ್ನು ಸಿದ್ಧ ಪಡಿಸಲಾಗಿದೆ. ಕಾರಣಕರ್ತರಾದ ಪ್ರಾಧಿಕಾರದ ಅಧ್ಯಕ್ಷ ಡಾ. ಸಿದ್ಧಲಿಂಗಯ್ಯ, ಸರ್ವಸದಸ್ಯರು, ಆಡಳಿತಾಧಿಕಾರಿಯವರು ಅಭಿನಂದನಾರ್ಹರು.

ಕಯ್ಯಾರರು ಕರಾವಳಿಯ ಆಧುನಿಕ ಮಹಾಕವಿಯೆಂದೇ ಪ್ರಸಿದ್ಧರು. ಭಾರತೀಯ ಕಾವ್ಯ ಮೀಮಾಂಸೆಯನ್ನು ಅರಗಿಸಿಕೊಂಡ ಅವರು ನವೋದಯದ ಆರಂಭಕಾಲದಲ್ಲಿ ಕವನಿಸಲು ಪ್ರಾರಂಭಿಸಿದವರು. ಅವರ ಭಾವಗೀತೆಗಳು, ಕಥನ ಕವನಗಳು, ಹೋರಾಟಕ್ಕೆ ಕರೆಕೊಡುವ ಪದ್ಯಗಳು, ಪ್ರಗತಿಗಾಮಿ ಧೋರಣೆಯ ರಚನೆಗಳು ಕನ್ನಡ ಸಾಹಿತ್ಯಕ್ಕೆ ಮಹತ್ವದ ಕೊಡುಗೆಗಳಾಗಿ ಸಂದಿವೆ.

ಕನ್ನಡಾಂತರ್ಗತ ತುಳುನಾಡಿನಲ್ಲಿ ಜನಿಸಿದ ರೈಗಳು ಕನ್ನಡ, ಸಂಸ್ಕೃತ, ಇಂಗ್ಲೀಷ್ ಭಾಷೆಗಳಲ್ಲಿ ಪಾಂಡಿತ್ಯ ಹೊಂದಿದವರು. ಅವರ ಮತೃಭಾಷೆ ತುಳು. ಮಲಯಾಳದಲ್ಲೂ ಪ್ರಭುತ್ವವನ್ನು ಸಾಧಿಸಿದ್ದಾರೆ. ವೇದೋಪನಿಷತ್ತು. ಪುರಾಣೇತಿಹಾಸಗಳ ಬಗ್ಗೆ ಜ್ಞಾನವಿದೆ. ಕೃಷಿ ಮತ್ತು ಸಾಹಿತ್ಯಕೃಷಿ ಅವರ ಪ್ರೀತಿಯ ವೃತ್ತಿಗಳು. ಎರಡರಲ್ಲೂ ಯಶಸ್ಸು ಪಡೆದಿದ್ದಾರೆ.

ಪೆರಡಾಲ ನವಜೀವನ ಪ್ರೌಢ ಶಾಲೆಯಲ್ಲಿ ಸುದೀರ್ಘಕಾಲ ಕನ್ನಡ ಭಾಷೆ ಮತ್ತು ಸಾಹಿತ್ಯವನ್ನು ಬೋಧಿಸಿದ ಕಯ್ಯಾರರಿಗೆ ಆ ವೃತ್ತಿಗೆ ಸೇರುವ ಮೊದಲೇ ವಿಸ್ತಾರವಾದ ಜೀವನಾನುಭವವಿತ್ತು. ಪತ್ರಿಕೋದ್ಯಮಿಯಾಗಿ, ಸ್ವಾತಂತ್ರ್ಯ ಹೋರಾಟಗಾರನಾಗಿ, ಸಮಾಜ ಸುಧಾರಕನಾಗಿ ಅರ್ಪಿತ ಭಾವದಿಂದ ದುಡಿದ ಅಪ್ಪಟ ಅನುಭವವದು.

ಕರ್ನಾಟಕ ಏಕೀಕರಣ ಚಳುವಳಿಯ ಮುಂಚೂಣಿಯಲ್ಲಿದ್ದ ಕಯ್ಯಾರರು ಭಾಷಾವಾರು ಪ್ರಾಂತ್ಯ ರಚನೆಯ ದುಷ್ಪರಿಣಾಮದ ಫಲವಾಗಿ ಅಚ್ಚಗನ್ನಡ ಪ್ರದೇಶ ಕಾಸರಗೋಡು ಕೇರಳದ ವಶವಾದಾಗ ಬಹಳಷ್ಟು ನೊಂದುಕೊಂಡರು. ಕನ್ನಡದ

ಕಟ್ಟಾಳುವಾಗಿ, ಗಡಿನಾಡ ಕಿಡಿಯಾಗಿ ಕಾಸರಗೋಡನ್ನು ಮರಳಿ ಕರ್ನಾಟಕಕ್ಕೆ ಸೇರಿಸಲು ನಡೆದ ಹೋರಾಟದಲ್ಲಿ ಪ್ರಧಾನ ಪಾತ್ರವಹಿಸಿದರು. ವೃದ್ಧಾಪ್ಯದಲ್ಲೂ ಅದೇ ಕೆಚ್ಚನ್ನು ಉಳಿಸಿಕೊಂಡಿದ್ದಾರೆ.

ತಾನು ಹುಟ್ಟಿ ಬೆಳೆದ ನೆಲ ಪ್ರಕೃತ ಕೇರಳ ರಾಜ್ಯದಲ್ಲಿದ್ದರೂ ಮಲಯಾಳ ಭಾಷಾ ಸಂಸ್ಕೃತಿಯನ್ನು ದ್ವೇಷಿಸುವ ಮನೋಭಾವ ಅವರಲಿಲ್ಲ. ಮಲೆಯಾಳ ಸಾಹಿತ್ಯ ಸಾಧಕರೊಂದಿಗಿನ ಸಂಪರ್ಕವನ್ನು ಉಳಿಸುತ್ತಲೇ ಬಂದಿದ್ದಾರೆ. ಕುಮಾರನಾಶಾನರ ಮೂರು ಖಂಡಕಾವ್ಯಗಳನ್ನು ಮತ್ತು ಮಲೆಯಾಳ ಸಾಹಿತ್ಯ ಚರಿತ್ರೆಯನ್ನು ಕನ್ನಡಿಸಿದ್ದಾರೆ.

ಮಹಾತ್ಮಾ ಗಾಂಧೀಜಿಯವರ ತತ್ವಾದರ್ಶಗಳಲ್ಲಿ ಅಚಲ ನಂಬಿಕೆಯಿರಿಸಿದ್ದ ಕಯ್ಯಾರರು ಒಂದೂವರೆ ದಶಕಗಳ ಕಾಲ ಬದಿಯಡ್ಕ ಪಂಚಾಯುತ್ ಅಧ್ಯಕ್ಷರಾಗಿ ಸಾಮಾಜಿಕ ಕೆಲಸ ಕಾರ್ಯಗಳಿಗೆ ನೇತೃತ್ವ ನೀಡಿದ್ದರು. ಮಹಾತ್ಮಾಜಿಯವರ ಗ್ರಾಮಸ್ವರಾಜ್ಯದ ಕಲ್ಪನೆಯನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಪ್ರಯತ್ನಿಸಿದರು. ಹಳ್ಳಿಗಳ ಉದ್ಧಾರವೇ ದೇಶೋದ್ಧಾರವೆಂದು ನಂಬಿ ವಿವಿಧ ಯೋಜನೆಗಳಿಗೆ ಕಾಯಕಲ್ಪ ನೀಡಿದ್ದರು. ಅಧ್ಯಾಪಕರಿಗಿರುವ ರಾಷ್ಟ್ರಪ್ರಶಸ್ತಿ, ಸಾಹಿತಿಗಳಿಗಿರುವ ಅಕಾಡೆಮಿ ಪ್ರಶಸ್ತಿ, ಅತ್ಯುತ್ತಮ ಪಂಚಾಯತ್ ಅಧ್ಯಕ್ಷರಿಗಿರುವ ರಾಜ್ಯಪ್ರಶಸ್ತಿ, ಕನ್ನಡ ಸಾಹಿತ್ಯ ಪರಿಷತ್ತುಗಳ ಗೌರವ ಸದಸ್ಯತ್ವ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಸಹಿತ ಹಲವಾರು ಪ್ರಶಸ್ತಿ, ಪುರಸ್ಕಾರ, ಗೌರವ, ಅಭಿನಂದನೆಗಳು ಅವರಿಗೆ ಸಂದಿವೆ.

ಕವಿ ಕಯ್ಯಾರರು ಪದ್ಯ ಗದ್ಯಗಳೆರಡರಲ್ಲೂ ಸಿದ್ಧಹಸ್ತರು. ಅವರ ಗದ್ಯ ಬರವಣಿಗೆ ಹೃದ್ಯವಾಗಿದೆ. ಸತ್ವಯುತವಾದ ಭಾಷೆ, ಸರಳ ಸುಂದರ ಓಜೋಪೂರ್ಣವಾದ ಶೈಲಿ ಗಮನ ಸೆಳೆಯುತ್ತದೆ. ವಿಚಾರ ವಿಮರ್ಶೆಗಳು ಚಿಂತನೆಗೆ ಹಚ್ಚುತ್ತವೆ. ಇತಿಹಾಸ, ಸಂಶೋಧನೆಗಳು ನಾಡು–ನುಡಿಯ ಕುರಿತಾಗಿದೆ. ವ್ಯಕ್ತಿ ಚಿತ್ರಗಳಂತೂ ವಿಶಿಷ್ಟವಾಗಿವೆ.

ಕಯ್ಯಾರರ ಸಾಹಿತ್ಯ ಚಿಂತನೆಗಳನ್ನೊಳಗೊಂಡ 'ಸಾಹಿತ್ಯ ದೃಷ್ಟಿ ಹೊತ್ತಗೆ 1989ರಲ್ಲಿ ಪುತ್ತೂರು ಕರ್ನಾಟಕ ಸಂಘದಿಂದ ಪ್ರಕಟವಾಗಿತ್ತು. ಭಿನ್ನ ಸಂದರ್ಭಗಳಲ್ಲಿ ಮಾಡಿದ ಹದಿನೈದು ಭಾಷಣ ಹಾಗೂ ಲೇಖನಗಳ ಸಂಕಲನವಿದು. ಅವುಗಳಲ್ಲಿನ ಕೆಲವನ್ನು ಇಲ್ಲಿ ನೀಡಲಾಗಿದೆ. ಜನಪರ ಕಾಳಜಿಯನ್ನು ಪ್ರತಿನಿಧಿಸುವ ಅವರ 'ಅನ್ನದೇವರು ಮತ್ತು ಇತರ ಕಥೆಗಳು', ಲಕ್ಷ್ಮೀಶನ ಜೈಮಿನಿ ಭಾರತದಿಂದ ಅತ್ಯುತ್ತಮ ಕಥಾರತ್ನಗಳನ್ನು ಆಯ್ದು ಸರಳ ಗದ್ಯದಲ್ಲಿ ಉಣಬಡಿಸಿದ 'ಲಕ್ಷ್ಮೀಶನ ಕಥೆಗಳು' ವ್ಯಕ್ತಿ ಚಿತ್ರಣ ಸಂಕಲನ 'ರತ್ನರಾಶಿ' ಮೊದಲಾದುವುಗಳು ಈ ಸಂಪುಟದಲ್ಲಿಲ್ಲ.

ರೈಗಳು ವ್ಯಾಕರಣ ಮತ್ತು ಪ್ರಬಂಧಗಳನ್ನು ಬರೆದಿದ್ದಾರೆ. ಭಾಷಾ ಪಠ್ಯಗಳನ್ನು ರಚಿಸಿದ್ದಾರೆ. ವಿದ್ಯಾರ್ಥಿಗಳ ವ್ಯಕ್ತಿತ್ವವನ್ನು ರೂಪಿಸುವುದಕ್ಕೆ ಅನುಕೂಲವಾಗುವ ಕೆಲಸ ಅವರಿಂದ ನಡೆದಿದೆ. ಅಧ್ಯಾಪನ ವೃತ್ತಿಯಲ್ಲಿದ್ದು ತನ್ನ ಸ್ವಾನುಭವಪೂರ್ವಕವಾಗಿ

[illegible] ಅಭಿಪ್ರಾಯಗಳಿಗೆ ನೆರವಾಗುತ್ತದೆ. [illegible] ಅವರಿಗೆ ಪ್ರಸಿದ್ಧಿ ತಂದುಕೊಟ್ಟಿದೆ. ಸಂಸ್ಕೃತ ಮತ್ತು [illegible] ಕೃತಿಗಳನ್ನು ಅನುವಾದಿಸಿದ್ದರು ಆದರೆ ಅವುಗಳನ್ನು

[illegible] ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳ ಬಗ್ಗೆ [illegible] ರಚಿಸಿದ್ದಾರೆ. ಅವುಗಳಲ್ಲಿ 'ಮಹಾಕವಿ ಗೋವಿಂದ [illegible] ಭಾಗಗಳನ್ನು ನೀಡಲಾಗಿದೆ.ಕೆ. ವಿ. ಶಂಕರೇಗೌಡ ಸ್ಮಾರಕ [illegible] ಕಯ್ಯಾರರು ಮಾಡಿದ ಉಪನ್ಯಾಸ 'ಸಂಸ್ಕೃತಿಯ [illegible] ಗಕ್ಕೆ ಮೌಲಿಕವಾದ ಕೊಡುಗೆಯಾದ ಕಾರಣ ಅದನ್ನು [illegible] ದೃಷ್ಟಿಕೋನವನ್ನು ಅಖಿಲ ಕರ್ನಾಟಕ 66ನೆಯ [illegible] ದಲ್ಲಿ ಅವರು ಮಾಡಿದ ಅಧ್ಯಕ್ಷ ಭಾಷಣದಲ್ಲಿ [illegible] ಆ ಭಾಷಣದ ಕೆಲವು ಭಾಗಗಳನ್ನು ನೀಡಲಾಗಿದೆ. [illegible] ಗಳ ಆತ್ಮಕಥನ. ಅವರಿಗೆ 80 ವರ್ಷಗಳಾದಾಗ [illegible] ಸಿದ ಸಂದರ್ಭದಲ್ಲಿ ಅದು ಬಿಡುಗಡೆಯಾಗಿತ್ತು. [illegible] ಹೋರಾಟ, ಎಲ್ಲವೂ ಅದರಲ್ಲಿದೆ. ಕಾಸರಗೋಡಿನ [illegible] ಅದು ಪಡೆದುಕೊಂಡಿದೆ. ಆತ್ಮಕಥನದ [illegible] ಭಾಗಗಳನ್ನು ಇದರಲ್ಲಿ ಪೋಣಿಸಲಾಗಿದೆ.

ಕಯ್ಯಾರರ ಹಲವಾರು ಲೇಖನಗಳು ನಾಡಿನ ವಿವಿಧ ಪತ್ರಿಕೆಗಳಲ್ಲಿ, ಸ್ಮರಣ ಸಂಚಿಕೆಗಳಲ್ಲಿ ಪ್ರಕಟವಾಗಿವೆ. ಸಮಗ್ರ ಗದ್ಯ ಪ್ರಕಟಿಸುವುದಾದರೆ ಸಾವಿರಾರು ಪುಟಗಳಷ್ಟಾಗಬಹುದು. ಇಲ್ಲಿ ಅವರ ಆಯ್ದ ಗದ್ಯವನ್ನು ಪ್ರಕಟಿಸಲಾಗಿದೆ. ತೊಂಭತ್ತೇಳರ ಹರೆಯದಲ್ಲಿರುವ ಗಡಿನಾಡು ಕಾಸರಗೋಡಿನ ಗಾರುಡಿಗ, ಗಂಡುದನಿಯ ಕವಿ, ಹೋರಾಟಗಾರ, ಬಹುಶ್ರುತ ವಿದ್ವಾಂಸ ರೈ ನಿಜವಾಗಿಯೂ ಕನ್ನಡದ ಸಂಪತ್ತು.

'ಕಯ್ಯಾರ ಗದ್ಯ ಸೌರಭ' ಪ್ರಕಟವಾಗಲು ಕನ್ನಡ ಪುಸ್ತಕ ಪ್ರಾಧಿಕಾರವೇ ಕಾರಣ. ಅಧ್ಯಕ್ಷ ಡಾ. ಸಿದ್ಧಲಿಂಗಯ್ಯ ಮೂರನೇ ಬಾರಿ ಕಾಸರಗೋಡಿಗಾಗಮಿಸಿದ ಸಂದರ್ಭದಲ್ಲಿ ಅವರನ್ನು ಕರ್ನಾಟಕ ಗಮಕ ಕಲಾ ಪರಿಷತ್ತಿನ ಕೇರಳ ಘಟಕಾಧ್ಯಕ್ಷ ಟಿ. ಶಂಕರನಾರಾಯಣ ಭಟ್ ಅವರು ಕಯ್ಯಾರರ ಪೆರಡಾಲದ 'ಕವಿತಾ ಕುಟೀರ.'ಕ್ಕೆ ಕರೆದುಕೊಂಡು ಹೋಗಿದ್ದರು. ಕಯ್ಯಾರರನ್ನು ಪುಸ್ತಕ ಪ್ರಾಧಿಕಾರದ ವತಿಯಿಂದ ಗೌರವಿಸಲಾಗಿತ್ತು. ಮಾತ್ರವಲ್ಲದೆ ಅವರ ಆಯ್ದ ಗದ್ಯವನ್ನು ಪ್ರಕಟಿಸುವ ಬಗ್ಗೆ ಸಮಾಲೋಚನೆ ನಡೆಸಲಾಯಿತು. ಕೃತಿ ಸಂಪಾದನೆಯ ಜವಾಬ್ದಾರಿಯನ್ನು ನನಗೆ ಒಪ್ಪಿಸಿದರು. ಗುರುಗಳಾದ ಕಯ್ಯಾರರ ಕೃತಿಗಳನ್ನು ಓದುವ ಮತ್ತು ಆಯ್ಕೆ ಮಾಡುವ

ಅವಕಾಶ ಲಭಿಸಿದ್ದು ನನ್ನ ಮಹಾಭಾಗ್ಯವೆಂದೇ ತಿಳಿದಿದ್ದೇನೆ.

ಅಕ್ಷರ ಜೋಡಣೆಯಲ್ಲಿ ಸಹಕರಿಸಿದ ಬದಿಯಡ್ಕ ಮಾಸ್ಟರ್ ಗ್ರಾಫಿಕ್ಸ್‌ನ ಮಾಲಕ ಕೇಳು ಮಾಸ್ತರ್ ಅಗಲ್ಪಾಡಿ ಮತ್ತು ಸಿಬಂದಿಗಳಿಗೆ ಹಾರ್ದಿಕ ನೆನಕೆಗಳು. ಅಂದವಾಗಿ ಮುದ್ರಿಸಿದ ....ಹೃತ್ಪೂರ್ವಕ ಕೃತಜ್ಞತೆಗಳು.

ರಾಧಾಕೃಷ್ಣ ಕೆ. ಉಳಿಯತ್ತಡ್ಕ

ಕಾಸರಗೋಡು

31–12–2011

ಅನುಕ್ರಮಣಿಕೆ

ಸಾಹಿತ್ಯ : ಜೀವನಾನುಭವದ ಸೃಷ್ಟಿ

ಎಲ್ಲಿ ಕಡಲರಾಣಿ ದಿನನಿತ್ಯವೂ ಸಮಸ್ತ ಜನತೆಯನ್ನು ತನ್ನ ಜಲ ತರಂಗನಾದದಿಂದ ಎಚ್ಚರಗೊಳಿಸುತ್ತಿರುವಳೋ ಎಲ್ಲಿ ಇಬ್ಬರು ನದೀದೇವಿಯರು ತಮ್ಮ ಎಡ ಬಲ ತೋಳ ತೆಕ್ಕೆಯಲ್ಲಿ ನಗರ ಹಾಗೂ ನಾಗರಿಕರನ್ನು ಸದಾ ತೂಗಿಸಿಕೊಂಡು ವಾತ್ಸಲ್ಯದ ಶೀತಲವಾರಿ ಸಿಂಚನದಿಂದ ಮುದಗೊಳಿಸುತ್ತಿರುವರೋ. "ತೆಂಗಿನ ಮಡಲಿನ ಮರೆಯಲ್ಲಿ ಮರೆಯುವ" ಉದ್ಯಾನಪುರವೆಂದು ಪ್ರಸಿದ್ಧಿ ಪಡೆದ, ಈ ಸುಂದರ ಮಂಗಳೂರು ನಗರದಲ್ಲಿ ಜರಗುವ ದಕ್ಷಿಣ ಕನ್ನಡ ಜಿಲ್ಲೆಯ ದ್ವಿತೀಯ ಸಾಹಿತ್ಯ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನಾಗಿ ಆಯ್ಕೆ ಮಾಡಿ ಮನ್ನಣೆಯ ಮಣೆಯಲ್ಲಿ ಕುಳ್ಳಿರಿಸಿದ ನಿಮ್ಮೆಲ್ಲರ ಹೃದಯೋದಾರತೆಗೆ ಕೃತಜ್ಞತಾಪೂರ್ವಕ ತಲೆಬಾಗುತ್ತೇನೆ. ಕರ್ನಾಟಕ ರಾಜ್ಯಕ್ಕೆ ಸೇರಬೇಕಾಗಿದ್ದರೂ ಹೊರಗಿನವರಾಗಿ ಉಳಿದ, ಹೊರಗುಳಿದರೂ ಕನ್ನಡಿಗರಾಗಿಯೇ ಇರುವ, ನಮ್ಮೊಂದಿಗರಾದ ಕಾಸರಗೋಡಿನ ಲಕ್ಷಾಂತರ ಕನ್ನಡಿಗರ ಇಂದಿನ ಈ ತ್ರಿಶಂಕು ಸ್ಥಿತಿಗೆ ಮನ ಕರಗಿದ ನಿಮ್ಮ ಸಹಾನುಭೂತಿ ಸಾಂತ್ವನಗಳ ಸಂಕೇತವಿದೆಂದೂ ತಿಳಿದುಕೊಂಡು ನಿಮ್ಮೆಲ್ಲರ ಆ ಸದಾಶಯುವನ್ನು ಬಹುಮಾನಿಸುತ್ತೇನೆ. ಗುರುಹಿರಿಯರಿಗೆಲ್ಲಾ ವಂದಿಸಿ, ಈ ಸಂದರ್ಭಕ್ಕೆ ಯೋಗ್ಯವೆಂದು ತೋರಿದ ಕೆಲವು ವಿಚಾರಗಳನ್ನು ನಿಮ್ಮ ಮುಂದಿಡಲು ಅನುಮತಿ ಯಾಚಿಸುತ್ತೇನೆ.

ಅರ್ಧಶತಮಾನಕ್ಕಿಂತ ಹಿಂದೆ, ಸುಮಾರು ಒಂದು ದಶಕಗಳ ಕಾಲ, ರಾಷ್ಟ್ರಸಿಂಹ ಬಂಧನದ ಬಲೆಯನ್ನು ಹರಿದು ಹೊರಬರಲು ವೀರಾವೇಶದಿಂದ ಇದ್ದ ಸ್ಫೂರ್ತಿಮಯ ದಿನಗಳಲ್ಲಿ, ಇದೇ ಮಂಗಳೂರಲ್ಲಿ ವಿದ್ಯಾರ್ಥಿಯಾಗಿ, ಅಧ್ಯಾಪಕನಾಗಿ, ಪತ್ರಿಕೋದ್ಯಮಿಯಾಗಿ, ರಾಷ್ಟ್ರೀಯ ಸಾಮಾಜಿಕ ಕಾರ್ಯಕರ್ತನಾಗಿ, ಇಂತು, ವಿವಿಧ ಕ್ಷೇತ್ರಗಳಲ್ಲಿ ಎಡೆಬಿಡದೆ ನಡೆಸಿದ ಚಟುವಟಿಕೆಗಳನ್ನು ಇಂದು ಸ್ಮರಿಸಿಕೊಳ್ಳುತ್ತೇನೆ. ಹಿರಿಯರಾದ ಪಂಜೆ, ಪೈ, ಮುಳಿಯ, ಕಾಮತ್, ಕಡೆಂಗೋಡ್ಲು ಇಂತಹ ಸಾಹಿತ್ಯಜ್ಞರ ಪರಿಚಯ, ದೇಶಭಕ್ತರಾದ ಕಾರ್ನಾಡ್, ಕಾರಂತ, ಶೆಟ್ಟಿ, ಮಲ್ಯ, ಕಿಲ್ಲೆ ಇಂತಹವರ ಸ್ಫೂರ್ತಿ, ಕಂಠೀರವ. ನವಯುಗ, ಸ್ವದೇಶಾಭಿಮಾನಿ, ರಾಷ್ಟ್ರಬಂಧು, ಪ್ರಭಾತ,

* 1984 ಜನವರಿ 12 ಮತ್ತು 13ರಂದು ಮಂಗಳೂರಿನಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲೆಯ ದ್ವಿತೀಯ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ.

ನವಭಾರತ, ಇಂತಹ ಪ್ರಸಿದ್ಧ ಪತ್ರಿಕೆಗಳ ಸಂಪರ್ಕ, ಮಿತ್ರ ಮಂಡಳಿ, ಪ್ರಕಾಶ ಎಸೋಸಿಯೇಶನ್, ಪ್ರಗತಿಶೀಲ ಸಾಹಿತ್ಯ ಸಂಘ, ಪತ್ರಿಕೋದ್ಯೋಗಿ ಸಂಘ – ಈ ತೆರನ ಸಂಘ ಸಂಸ್ಥೆಗಳ ಚಟುವಟಿಕೆ, ಗೆಳೆಯರಾದ ವಾಸುದೇವ ರಾವ್, ಕುಳುಕುಂದ, ನಾವಡ, ಬಾಳಿಗ, ಇದಿನಬ್ಬ, ಕೀಕಾನ, ಪಿ.ಕೆ. ಇಂತಹ ಮಿತ್ರರ ಒಡನಾಟ – ಇಂತು ನೆನಪಿನ ಗನಿಯಿಂದ ಎಷ್ಟೋ ಹೊಳೆಯುವ ಹರಳುಗಳನ್ನು ಎತ್ತಿ ತೋರಿಸಬಹುದಾದ – ನನ್ನ ಹಲವಾರು ಆಸಕ್ತಿಗಳಿಗೆ ನೀರೆರೆದು ಈ ಬಾಳಿನ ಗಿಡವನ್ನು ಪೋಷಿಸಿದ ಆ ಅವಿಸ್ಮರಣೀಯ ದಿನಗಳನ್ನು ಅಭಿಮಾನಪೂರ್ವಕ ನೆನೆಯುತ್ತಾ, ಅದೇ ಮಂಗಳೂರಲ್ಲಿ ಜರಗುವ ಈ ದ್ವಿತೀಯ ಜಿಲ್ಲಾ ಸಾಹಿತ್ಯ ಸಮ್ಮೇಳನಕ್ಕೆ ಅಧ್ಯಕ್ಷನಾಗಿ ಆಯ್ಕೆಯಾದುದು ನನ್ನ ಜೀವನದ ಒಂದು ಯೋಗವೆಂದು ತಿಳಿದುಕೊಂಡು ಈ ಸ್ಥಾನವನ್ನು ಸ್ವೀಕರಿಸುತ್ತೇನೆ.

'ಸಾಹಿತ್ಯ' ಎಂಬುದು ಸಂಸ್ಕೃತ ಭಾಷಾಪದ ಸಹಿತ ಎಂಬ ಮೂಲ ಪದದಿಂದ ಆಗಿದೆ. ಮಿಳನ, ಕೂಡುವಿಕೆ ಎಂಬುದು ಅದರರ್ಥ. ಪರಸ್ಪರ ಸಾಪೇಕ್ಷಗಳೂ ತುಲ್ಯರೂಪವಾದುವುಗಳೂ ಆದ ವಸ್ತು ವಿಷಯಗಳು, ಒಮ್ಮೆಗೆ ಒಂದೇ ಕ್ರಿಯೆಯಲ್ಲಿ ಮಿಳನವಾಗುವುದು – ಎಂದರೆ ಕೂಡುವುದು ಎಂಬುದು ಸಾಹಿತ್ಯ ಪದದ ವ್ಯಾಖ್ಯೆ, ಹಿತದಿಂದ ಕೂಡಿರಬೇಕು ಎಂಬುದೂ ಅದರ ಮುಂದಿನ ವಿವರಣೆ. ಸಾಹಿತ್ಯ ಸರ್ವಥಾ ಅಹಿತಕರವಾಗಬಾರದು. ನೆಲ, ನೀರು, ಬೆಂಕಿ, ಗಾಳಿ, ಆಕಾಶ ಇವುಗಳ ಕೂಡುವಿಕೆಯಿಂದ ಆಗುವ ಸೃಷ್ಟಿ ಕ್ರಿಯೆಯೆಲ್ಲವೂ ಈ ವ್ಯಾಖ್ಯೆಯಂತೆ ಸಾಹಿತ್ಯ. ಆದರೆ ನಾವಿಂದು ಇಂಗ್ಲೀಷ್ ಭಾಷೆಯ 'ಲಿಟರೇಚರ್' ಪದಕ್ಕೆ ಸಮಾನಾರ್ಥದಲ್ಲಿ ಸಾಹಿತ್ಯ ಪದವನ್ನೇ ಬಳಸುತ್ತೇವೆ. ಲೇಖನಿ, ಮಸಿ, ಕಾಗದ, ಮುದ್ರಣ, ವಾಚನ ಇವುಗಳ ಕೂಡುವಿಕೆಯೇ ಈ ಸಾಹಿತ್ಯ. ಇಂತಹ ಸಾಹಿತ್ಯವನ್ನು ಕುರಿತು ಯೋಚಿಸಲು ಸೇರಿದ ಸಾಹಿತ್ಯಜ್ಞರ ಸಮ್ಮೇಳನ ನಮ್ಮೀ ಸಾಹಿತ್ಯ ಸಮ್ಮೇಳನ.

ಸಾಹಿತ್ಯ ಹಿತಕರವಾಗಿರಬೇಕೆಂದು ಹೇಳಿದೆವು. ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು. ಅಮಲು ಸೇವಿಸದಿರು – ಇಂತು ರಾಜಾಜ್ಞೆಯಂತೆ ಹೇಳುವ ಹಿತಬೋಧೆಯ ಈ ಸಾಹಿತ್ಯಕ್ಕೆ 'ಪ್ರಭು ಸಮ್ಮಿತ' ಎನ್ನುತ್ತಾರೆ. ವೇದಾದಿಗಳು ಈ ಸಾಲಿನವು. ಎರಡನೆಯದು ಮಿತ್ರಸಮ್ಮಿತೆ: ಗೆಳೆಯನೊಬ್ಬನಿಗೆ ರಾಜಾಜ್ಞೆಯಂತೆ ಹಾಗೆ ಮಾಡು, ಹೀಗೆ ಮಾಡದಿರು ಎಂಬ ರೀತಿ ಹೇಳದೆ, ಯಾವುದೋ ಒಂದು ಘಟನೆಯನ್ನು ಆತನಿಗೆ ಕಥಾರೂಪದಲ್ಲಿ ತಿಳಿಸಿ ಅದರ ಪರಿಣಾಮದ ಅನುಭವದಿಂದ ಗೆಳೆಯನನ್ನು ಸರಿದಾರಿಗೆ ತರುವಂತೆ, ಪುರಾಣಾದಿಗಳನ್ನು ಓದಿ, ರಾವಣನ ಹಾಗೆ ವರ್ತಿಸಿದಲ್ಲಿ ಆತನ ಗತಿಯೇ ಆಗುತ್ತದೆಂದೂ, ರಾಮನ ರೀತಿಯಲ್ಲಿ ನಡೆದರೆ ಶ್ರೇಯಸ್ಸುಂಟಾಗುತ್ತದೆಂದೂ ಬೋಧಿಸುವುದೇ ಮಿತ್ರ ಸಮ್ಮಿತೆ. ಕೊನೆಯದು ಕಾಂತಾ ಸಮ್ಮಿತೆ : ಇನಿಯಳು ಇನಿಯನನ್ನು ಒಲಿಸಿ ಸರಿದಾರಿಗೆ ತರುವ ರೀತಿ. ಕಾವ್ಯ, ನಾಟಕ, ಕಥೆ, ಕಾದಂಬರಿ

ಇವುಗಳ ಶ್ರವಣ ವಾಚನಗಳಿಂದ ದೊರಕುವ ಹಿತಬೋಧೆ; ಅದರಲ್ಲಿ ಬರುವ ರಸಸನ್ನಿವೇಶ, ಅಲಂಕಾರ ವ್ಯಂಗ್ಯೋಕ್ತಿ, ಧ್ವನಿ ಇತ್ಯಾದಿ ಪ್ರಯೋಗಗಳು ಕಾಂತಾ ಸಮ್ಮಿತೆಗೆ ಸಹಾಯಕಗಳು. ಪ್ರಭು ಸಮ್ಮಿತೆ, ಮಿತ್ರ ಸಮ್ಮಿತೆಗಳಿಗಿಂತ ಈ ಕಾಂತಾ ಸಮ್ಮಿತೆಯ ರೀತಿ ಬಹು ಭೂರಿ ಜನರಿಗೆ ಒಪ್ಪುವಂತಹುದಾದುದರಿಂದ, ಸಾಹಿತ್ಯವೆಂದರೆ ಇಂದು ಕಾಂತಾ ಸಮ್ಮಿತೆಯೇ ಆಗಿದೆ. ನಮ್ಮ ಸಮ್ಮೇಳನಗಳ ಚರ್ಚೆಗಳ ವ್ಯಾಪ್ತಿಯೂ ಹೆಚ್ಚಾಗಿ ಇಷ್ಟಕ್ಕೇ ಸೀಮಿತವಾಗುತ್ತಿರುವುದಾದರೂ ಸಾಹಿತ್ಯ ಪದದ ವ್ಯಾಪ್ತಿಯೆಂತು ವಿಶಾಲವೋ ಅಂತೆ ಸಾಹಿತ್ಯದ ಪ್ರಕಾರವೂ ವಿಶಾಲವಾಗಿದೆಯೆಂದು ನಾವು ತಿಳಿದುಕೊಳ್ಳಬೇಕು.

ವಾಗ್ದೇವತೆಯ ಸ್ವರೂಪವನ್ನು ವೈಯಾಕರಣಿಯೊಬ್ಬನು, 'ಸರ್ವ ಭಾಷಾ ಮಯೀ ದೇವಿ' ಎಂದು ತಿಳಿಸಿದನು. ಮನುಷ್ಯ ಮನುಷ್ಯರಲ್ಲಿಯೂ ಕೆಲವೊಂದು ವೈಯಕ್ತಿಕ ಭಿನ್ನತೆಯಿದ್ದರೂ ಮಾನವೀಯತೆ ಎಂಬ ಸರ್ವವ್ಯಾಪ್ತಿ ಗುಣ, ಎಲ್ಲರಲ್ಲಿಯೂ ಏಕ ಸಮಾನವಾಗಿ ಕಾಣುವಂತೆ, ದೇಶ ವಿದೇಶಗಳ ಬೇರೆ ಬೇರೆ ಸ್ಟೇಶನುಗಳಿಗೆ ತಿರುಗಿಸಿದಾಗ ಭಿನ್ನಭಿನ್ನ ಸ್ವರ ಕೇಳಿ ಬಂದರೂ ಒಂದೇ ರೇಡಿಯೋ ಪೆಟ್ಟಿಗೆಯಿಂದ ಅವೆಲ್ಲವೂ ಹೊರಸೂಸುವಂತೆ, ಸಕಲ ಭಾವಗಳೂ ಅವುಗಳಿಗೆ ಸಂಬಂಧಿಸಿದ ಸರ್ವ ಸಾಹಿತ್ಯಗಳೂ ಎಷ್ಟು ಬೇರೆ ಬೇರೆಯೆಂದು ತೋರಿದರೂ ಮೂಲತಃ ಒಂದೇ ಆಗಿರುತ್ತದೆ. ಸಂತೋಷದಲ್ಲಿ ನಗುವುದು, ದುಃಖದಲ್ಲಿ ಅಳುವುದು, ಕ್ರೋಧಗೊಂಡು ಸಿಡಿದೇಳುವುದು, ಕಷ್ಟಪಟ್ಟವರ ಕುರಿತು ಕನಿಕರಗೊಳ್ಳುವುದು, ನಲ್ಲನಲ್ಲೆಯರು ಪ್ರೇಮಿಸುವುದು, ಮಕ್ಕಳಲ್ಲಿ ವಾತ್ಸಲ್ಯ ಇಂತಹ ಸಹಜ ಕ್ರಿಯೆ ಪ್ರಪಂಚದ ಎಲ್ಲೆಡೆಯ ಎಲ್ಲಾ ಮನುಷ್ಯರಲ್ಲಿಯೂ ಸಮಾನವಿರುವಂತೆ ಆಡುವ ಮಾತುಗಳಲ್ಲಿಯೂ ಹಲವು ಸಂದರ್ಭದಲ್ಲಿ ಒಂದೇ ಧ್ವನಿ ಮೂಡುತ್ತದೆ. ಅಮ್ಮಾ, ಅಂಬಾ, ಮಾ, ಮಾತೃ, ಮದರ್ ಎಂಬ ಸಮಾನ ಸ್ವರದಿಂದ ಪ್ರಪಂಚದ ಹಲವು ಕಡೆ ತಾಯಿಯನ್ನು ಸಂಬೋಧಿಸುವುದು ಕಂಡು ಬರುತ್ತದೆ. ತಾಯಿ ಎಂಬ ಭಾವನೆ ಬಂದಾಗ ಈ ಸ್ವರವೇ ಸಹಜ ಪ್ರೇರಣೆಯಾಗುವುದು. ಇದಕ್ಕೆ ಕಾರಣವಿರಬಹುದು. ಹವೆ, ಆಹಾರ, ವಾತಾವರಣ ಇಂತಹವುಗಳ ವ್ಯತ್ಯಾಸದಿಂದ ಉಚ್ಚಾರ ಭೇದ ಉಂಟಾಗುತ್ತದೆ. ಸಿಂಧು ಪದವೇ ಹಿಂದುವಾಯಿತು. ಈ ಜಿಲ್ಲೆಯ ಸೀಮಿತ ಪ್ರದೇಶದಲ್ಲಿಯೇ ಸೊಪ್ಪು ಎನ್ನುವುದು, ತುಳುವಿನಲ್ಲಿ ಸಪ್ಪು, ತಪ್ಪು, ಚಪ್ಪು ಎಂಬೀ ಸ್ವರಭೇದದಿಂದ ಉಚ್ಚಾರಗೊಳ್ಳುತ್ತದೆ. ಬಹುಕಾಲ, ಬಹುಜನ ಹೇಳುತ್ತಾ ಬಂದುದೇ ರೂಢಿಯಾಗಿ ಭಾಷೆಯೆನಿಸುವುದು. ಈ ದೃಷ್ಟಿಯಿಂದ ಪರ್ಯಾಲೋಚಿಸುವಾಗ ಬಹಿರಂಗವಾಗಿ ಪ್ರಭೇದಗಳು ಕಂಡು ಬಂದರೂ ಆಂತರಿಕವಾಗಿ ಎಲ್ಲವೂ ಸಮಾನ ಮೂಲದವುಗಳೆನಿಸಿ, ವಾಗ್ದೇವತೆ ಸರ್ವ ಭಾಷಾಮಯೀ ದೇವಿ ಆಗಿರುವುದು ಸತ್ಯವೆಂದು ತೋರುವುದು. ಇಂದು ಇಲ್ಲಿ ಒಂದು ಜಿಲ್ಲೆಯ ಕನ್ನಡಿಗರು ಸೇರಿ ಸಾಹಿತ್ಯ ಸಮ್ಮೇಳನ ನಡೆಸುತ್ತಿದ್ದರೂ,

ಇದು ಸರ್ವಭಾಷಾಮಯೀ ದೇವಿಯ ಆರಾಧನೆಯೇ ಆಗಿದೆಯೆಂದು ಭಾವಿಸಬೇಕಾಗಿದೆ.

ಸರ್ವ ಭಾಷೆಗಳ ಈ ಸಮನ್ವಯ ತತ್ವವನ್ನು ನಿತ್ಯಜೀವನದಲ್ಲಿ ಕಾರ್ಯರೂಪದಲ್ಲಿ ಆಚರಿಸುತ್ತಿರುವವರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕನ್ನಡಿಗರು ಅಗ್ರಗಣ್ಯರೆನ್ನಬಹುದು. ಇಲ್ಲಿನ ಅಧಿಕ ಸಂಖ್ಯೆಯ ಜನರ ತಾಯ್ನುಡಿ ತುಳು. ನೀವು ಈ ಸಮ್ಮೇಳನಕ್ಕೆ ಅಧ್ಯಕ್ಷನಾಗಿ ಆಯ್ಕೆ ಮಾಡಿದ ನನ್ನ ತಾಯ್ನುಡಿಯೂ ತುಳುವೆನ್ನಲು ನಾನು ಅಭಿಮಾನ ಪಡುತ್ತೇನೆ. ಈ ಪ್ರದೇಶವನ್ನು ಐತಿಹಾಸಿಕವಾಗಿ ತುಳು ನಾಡೆಂದೇ ಕರೆಯುತ್ತಾರೆ. ಮಹಾಪ್ರಾಣಾಕ್ಷರ, ಪರುಷಾಕ್ಷರ ರಹಿತವಾದ, ಲಲಿತವೂ ಮಧುರವೂ ಆದ ಪದಪುಂಜಗಳಿಂದ ಕೂಡಿದ ತುಳು ಭಾಷೆಯ ಚೆಲುವನ್ನು ಡಾ। ಕಾಲ್ಡ್‌ವೆಲ್‌ನಂತಹ ಭಾಷಾಶಾಸ್ತ್ರಜ್ಞರೇ ಕೊಂಡಾಡಿದ್ದಾರೆ. 'ಅಯ್ಯಯ್ಯ ಎಂಚ ಪೊರ್ಲಾಂಡೆಂದು' ತುಳುವರೂ ಮೆಚ್ಚುವಂತೆ ತನ್ನ ಕನ್ನಡದ ಮಹಾಕಾವ್ಯವನ್ನು ತುಳುವರ ಮನ ಮೋಹಿಸುವ ಶೈಲಿಯಲ್ಲಿ ಬರೆದು ರತ್ನಾಕರವರ್ಣಿ ಕೃತಾರ್ಥನಾದನು. ಈ ಕೃತಾರ್ಥತೆಗೆ ಮೂಲ ಕಾರಣವೆಂದರೆ ಆತನೂ ತುಳುನಾಡಿನವನೇ ತುಳುವನೇ ಆಗಿರುವುದು. ಅದರಂತೆ ತುಳುವನಾದ ಮುದ್ದಣನು, 'ಕನ್ನಡಂ ಕತ್ತುರಿಯಲ್ತೆ' ಎಂದು ಅದರ ಪರಿಮಳವನ್ನು ಪಸರಿಸಿದನು. ಕೊಂಕಣಿ ಮಾತೃಭಾಷೆಯ ಕನ್ನಡದ ಮೊದಲ ರಾಷ್ಟ್ರಕವಿ ಗೋವಿಂದ ಪೈ 'ತನು ಕನ್ನಡ, ಮನ ಕನ್ನಡ, ನುಡಿ ಕನ್ನಡ ಎಮ್ಮವು' ಎಂದು ಹಿಗ್ಗಿ ಹಾಡಿದರು. ಅದರಂತೆ 'ಕನ್ನಡವನುಳಿದೆನಗೆ ಅನ್ಯ ಜೀವನವಿಲ್ಲ' ಎಂದವರು ಕೊಂಕಣಿ ತಾಯ್ನುಡಿಯ ಬೆನಗಲ್ ರಾಮರಾಯರು. ತುಳುವರಂತೆ, ಕೊಂಕಣಸ್ಥರಂತೆ, ಮರಾಠಿ, ಮಲಯಾಳಿ ಭಾಷಿಕರೂ ಇಲ್ಲಿ ಕನ್ನಡದ ಕೆಲಸವನ್ನು ಧಾರಾಳ ಮಾಡಿದ್ದಾರೆ; ಈಗಲೂ ಮಾಡುತ್ತಿದ್ದಾರೆ. ಭಾಷಾ ಸಾಹಿತ್ಯದಲ್ಲಿನ ಈ ಸಮನ್ವಯದ ಸಹನೆಯ ಸಂಸ್ಕಾರ ದಕ್ಷಿಣ ಕನ್ನಡದ ಜನರ ಸಮಷ್ಠಿ ಜೀವನದಲ್ಲಿ ತುಂಬಿ ಅವರ ಬದುಕನ್ನು ಸಾರ್ಥಕವಾಗಿಸಿದೆ.

ಈ ಭಾಷಾ ಸಮನ್ವಯ ದೃಷ್ಟಿ. ಧರ್ಮ ಸಮನ್ವಯತೆವರೆಗೂ ವ್ಯಾಪಿಸಿ, ಇಲ್ಲಿನ ಜನರನ್ನು ಸಹಿಷ್ಣುಗಳನ್ನಾಗಿ ಸಂಸ್ಕೃತಿ ಸಂಪನ್ನರನ್ನಾಗಿಸಿದೆ. ಎಲ್ಲ ಧರ್ಮಗಳೂ ಸಕಲ ಮತ ತತ್ವಗಳೂ ಒಬ್ಬನೇ ದೇವರ ಅಸ್ತಿತ್ವವನ್ನು ತಿಳಿಸುತ್ತದೆಯೆಂಬ ಪರಮ ಸತ್ಯವನ್ನು ಇಲ್ಲಿನ ಕವಿ ರತ್ನಾಕರವರ್ಣಿ ಇಂತು ಸೊಗಸಾಗಿ ಸಾರಿ ಹೇಳಿರುವನು. "ತ್ರಿಜಗತ್ಸ್ವಾಮಿ, ಜೀನೇಂದ್ರ, ಬುದ್ಧ, ಶಿವ, ಲೋಕಾರಾಧ್ಯ, ಸವಜ್ಞ, ಶಂಭು, ಜಗನ್ನಾಥ, ಜಗತ್ ಪಿತಾಮಹ, ಹರಿ, ಶ್ರೀಕಾಂತ ವಾಣೀಶ, ವಿಷ್ಣು, ಜೀತಾನಂಗ, ಜೀನೇಶ, ಪಶ್ಚಿಮ ಸಮುದ್ರಾಧೀಶ್ವರ, ಬೇಗದಿಂ ನಿಜಮಂ ತೋರು ದಯಾಳುವೇ! ತಳುವಿದೇಂ, ರತ್ನಾಕರಾಧೀಶ್ವರಾ ॥"

ಜಿನೇಂದ್ರ, ಬುದ್ಧ, ಶಿವ, ವಿಷ್ಣು, ವಾಣೀಶ – ಇವರೆಲ್ಲರೂ ತ್ರಿಜಗತ್ ಸ್ವಾಮಿಗಳು ಎಂಬ ವಿಶಾಲ ಧಾರ್ಮಿಕ ಭಾವನೆ ಇಲ್ಲಿದೆ. ದ್ವೈತ ಮಠಗಳು, ಅದ್ವೈತ ಮಠಗಳು, ಜಿನಯತಿಗಳು, ಜೋಗಿಮಠ, ಕ್ರಿಶ್ಚಿಯನ್ ಚರ್ಚುಗಳು, ಮುಸ್ಲಿಂ ಮಸೀದಿಗಳು – ಎಲ್ಲವೂ ಇಲ್ಲಿ ಕಂಗೊಳಿಸುತ್ತಿದ್ದು ಪರಸ್ಪರ ಸೌಹಾರ್ದದಿಂದ, ಅನ್ಯೋನ್ಯತೆಯಿಂದ ಜನತೆ ಕೂಡಿ ಬಾಳುತ್ತಿದ್ದಾರೆ. ಶ್ರೀ ಕ್ಷೇತ್ರ ಧರ್ಮಸ್ಥಳದ ಶಿವ ದೇವಾಲಯಕ್ಕೆ ಜೈನ ಹೆಗಡೆಯವರುಗಳು ಧರ್ಮದರ್ಶಿಗಳಾಗಿದ್ದಾರೆ. ಅಲ್ಲಿ ವರ್ಷಂಪ್ರತಿ ಸರ್ವಧರ್ಮ ಸಮ್ಮೇಳನ ಜರಗುತ್ತದೆ. ಇಲ್ಲಿನ ಕೆಲವು ದೇವಾಲಯಗಳಿಗೆ, ಚರ್ಚುಗಳಿಗೆ, ಮಸೀದಿಗಳಿಗೆ ಅನ್ಯಧರ್ಮೀಯರೂ ಹರಕೆ ಕಾಣಿಕೆ ಸಲ್ಲಿಸುತ್ತಿರುವರು. ಜನತೆಯಲ್ಲಿ ಇಂತಹ ಉತ್ತಮ ಸಂಸ್ಕಾರವನ್ನು ಉಂಟುಮಾಡಲು ಸಕಲ ಧರ್ಮ ಭಾಷೆ ಸಾಹಿತ್ಯಗಳು ನೆರವಾಗಿವೆಯೆಂಬುದು ಶ್ಲಾಘನೀಯ.

ಕನ್ನಡದ ಪ್ರಾಚೀನತೆಯನ್ನು ನಿಖರವಾಗಿ ಹೇಳಲು ಆಗದೆ ಇದ್ದರೂ ಇದು ಅತ್ಯಂತ ಪ್ರಾಚೀನವಾದ ಭಾಷೆಯೆಂದು ವಿದ್ವತ್ಸಂಶೋಧಕರು ಅಭಿಪ್ರಾಯ ಪಡುತ್ತಾರೆ. ಕ್ರಿಸ್ತಪೂರ್ವದ ಮೂರನೇ ಶತಮಾನದ ಗ್ರೀಕ್ ಪ್ರಹಸನವೊಂದರಲ್ಲಿ ಕನ್ನಡ ಮಾತುಗಳು ಬಂದಿವೆಯೆಂದು ಗೋವಿಂದ ಪೈ ಹೇಳಿದರು. ಅಲ್ಲಿನ ಆ ಮಾತುಗಳೆಲ್ಲವೂ ತುಳುವಿನವು ಎಂದು ಇನ್ನಷ್ಟು ವಿಶದೀಕರಣಗಳೊಂದಿಗೆ ಈಚೆಗೆ ಸ್ಕ್ವಾ| ಲೀ। ಪಿ. ಎಸ್. ರೈಗಳು ಸಾಧಿಸಿದ್ದಾರೆ. ಗ್ರೀಕ್ ಪ್ರಹಸನದ ಆ ಮಾತುಗಳ ಸನ್ನಿವೇಶ, ದಕ್ಷಿಣದ ಕನ್ನಡ ಕರಾವಳಿ ಪ್ರದೇಶವೆಂಬುದರಿಂದಲೂ ರೈಗಳ ವಿವರಣೆಯಲ್ಲಿ ತೋರುವ ಹೆಚ್ಚಿನ ಖಚಿತತೆಯಿಂದಲೂ ಅಲ್ಲಿನ ಆ ಮಾತುಗಳು ತುಳುವಿನವು ಎಂದು ಒಪ್ಪಿಕೊಳ್ಳಲು ಹೆಚ್ಚಿನ ಆಧಾರ ಸಿಗುತ್ತದೆ. ಎಲ್ಲಾ ಭಾಷೆಗಳಲ್ಲೂ ಕೆಲವೊಂದು ಸಹಜ ಪ್ರಕ್ರಿಯೆ ಸಮಾನವಾಗಿ ಕಂಡು ಬರುತ್ತವೆ ಎಂದು ಹಿಂದೆ ಹೇಳಿದಂತೆ ಅದರಲ್ಲೂ ದ್ರಾವಿಡ ಭಾಷಾ ವರ್ಗಕ್ಕೆ ಸೇರಿದ ತುಳು ಕನ್ನಡ ಭಾಷೆಗಳಲ್ಲಿ ಹೆಚ್ಚಿನ ಸಾಮಾನ್ಯ ಸಹಜವಾಗಿ ಇರಬಹುದಾದಂತೆ, ಗ್ರೀಕ್ ಪ್ರಹಸನದ ಭಾಷೆ ಕನ್ನಡವಾದರೂ ತುಳುವಾದರೂ ಕನ್ನಡವೆಂತೋ ಅಂತೆಯೇ ತುಳು ಭಾಷೆಯೂ ಪ್ರಾಚೀನವಾಗಿದೆಯೆಂದು ನಾವು ಅಭಿಮಾನಪಟ್ಟುಕೊಳ್ಳಬಹುದು.

ಯಾವುದೇ ಭಾಷೆಯಲ್ಲಾಗಲೀ ಸಾಹಿತ್ಯದ ಉದಯ ಜಾನಪದ ಹಾಡುಗಳಿಂದ ಆಗುತ್ತದೆ. ಜಾನಪದ ಸಾಹಿತ್ಯ ಬಾಯಿಂದ ಬಾಯಿಗೆ ಬಂದುದು. ವೇದವೂ ಇಂತಹ ಒಂದು ಮುಖ್ಯೋದ್ಗತ ಸಾಹಿತ್ಯ. ಮುಂದೆ ಶಿಲೆಯಲ್ಲಿ, ಲೋಹಗಳಲ್ಲಿ, ಶಾಸನಗಳ ಸಾಹಿತ್ಯ ಪ್ರಾರಂಭವಾಯಿತು. ಆಮೇಲೆ ಕಂಠಪತ್ರಗಳ ಬರಹಗಳು. ಇಂದು ಮುದ್ರಣ ಕಲೆಯ ಸೌಕರ್ಯದಿಂದ ಸಾಹಿತ್ಯ ಸಹಸ್ರಬಾಹುವಾಗಿ ವಿಸ್ತಾರಗೊಂಡಿದೆ. ಕರ್ನಾಟಕದಲ್ಲಿ ಸಿಗುವ ಪ್ರಾಚೀನ ಶಾಸನ ಕ್ರಿ. ಪೂ. ಮೂರನೆಯ ಶತಮಾನದ್ದು; ಅಶೋಕನ ಕಾಲದ್ದು. ಅವು ಪ್ರಕೃತ ಸಂಸ್ಕೃತ ಭಾಷೆಗಳಲ್ಲಿವೆ. ಆಮೇಲಿನದು ಐದನೆಯ ಶತಮಾನದ

ಹಲ್ಮಿಡಿ ಶಾಸನ. ಏಳನೆ ಶತಮಾನದ ಬಾದಾಮಿಯ ಶಾಸನದಲ್ಲಿ ಕಾವ್ಯ ಸಾಹಿತ್ಯಾಂಶ ಕಂಡು ಬರುವುದರಿಂದ ಆ ಕಾಲಕ್ಕೆ ಛಂದೋಬದ್ಧವಾದ ಕವಿತಾ ರಚನೆ, ಅಲಂಕಾರಾದಿಗಳ ಪ್ರಯೋಗ ಕನ್ನಡದಲ್ಲಿ ಪ್ರಚುರವಿದ್ದಿರಬೇಕೆಂದು ತಿಳಿದುಕೊಳ್ಳಬಹುದು. ಆದರೂ ಆ ಕಾಲದ ಸಾಹಿತ್ಯ ಕೃತಿಗಳು ಇನ್ನೂ ಲಭಿಸಿಲ್ಲ.

ನಮಗಿಂದು ಉಪಲಬ್ಧವಾದ ಆದಿಯ ಕನ್ನಡ ಗ್ರಂಥ ಕವಿರಾಜಮಾರ್ಗ. ರಾಷ್ಟ್ರಕೂಟ ವಂಶದ ನೃಪತುಂಗನು ಇದನ್ನು ಬರೆದನೆಂದು ಪ್ರತೀತಿ. ಆದರೆ ಸಂಶೋಧಕರು ಇದನ್ನು ಬರೆದವನು ಶ್ರೀ ವಿಜಯನೆಂದೂ ಕವೀಶ್ವರನೆಂದೂ ಹೇಳುತ್ತಾರೆ. ಈ ಗ್ರಂಥದಲ್ಲಿ ಕನ್ನಡದ್ದೇ ಆದ ಕೆಲವೊಂದು ವೈಶಿಷ್ಟ್ಯಗಳನ್ನು ಹೇಳಿದೆ. ಕಾವೇರಿಯಿಂದ ಗೋದಾವರಿ ವರೆಗಿನ ಕನ್ನಡ ನಾಡಿನ ವಿಸ್ತಾರ, ಕನ್ನಡದ ತಿರುಳೆನ್ನುವ ಊರುಗಳು, ಕನ್ನಡಿಗರು ಕುರಿತೋದದೆ ಇದ್ದರೂ ಕಾವ್ಯಪ್ರಯೋಗ ಪರಿಣತ ಮತಿಗಳೆಂಬ ವಿಚಾರ, ಚತ್ತಾಣಬೆದಂಡೆ ಕಬ್ಬಗಳ ವಿಷಯ, ದಕ್ಷಿಣೋತ್ತರ ಮಾರ್ಗಗಳು, ಇಂತಹ ಕನ್ನಡದ್ದೇ ಎನ್ನಬಹುದಾದ ಹಲವು ಸಂಗತಿಗಳು ಇದರಲ್ಲಿವೆ. ಕವಿರಾಜ ಮಾರ್ಗ ಒಂದು ಲಕ್ಷಣ ಗ್ರಂಥವಾಗಿರುವುದರಿಂದ, ಇದಕ್ಕಿಂತ ಮೊದಲು ಲಕ್ಷ ಗ್ರಂಥಗಳು ಧಾರಾಳ ರಚಿತವಾಗಿರಬೇಕೆಂದು ಸಹಜವಾಗಿ ತಿಳಿದುಕೊಳ್ಳಬಹುದು. ಅದಕ್ಕೆ ಆಧಾರವಾಗಿ ವಿಮಲೋದಯ, ನಾಗಾರ್ಜುನಾದಿ ಕವಿಗಳ ಹೆಸರುಗಳನ್ನೂ ಇತರ ಕವಿಗಳ ಕಾವ್ಯಾಂಶಗಳನ್ನೂ ಇದರಲ್ಲಿ ಉದ್ಧರಿಸಿ ಹೇಳಲಾಗಿದೆ.

ಒಂಬತ್ತನೆಯ ಶತಮಾನದಿಂದ ಹದಿನೆಂಟನೆಯ ಶತಮಾನದ ವರೆಗೆ, ರಾಷ್ಟ್ರಕೂಟ – ಚಾಳುಕ್ಯ – ಗಂಗರ ಕಾಲಗಳಲ್ಲಿ, ಕಳಚುರ್ಯ – ಹೊಯ್ಸಳರ ಕಾಲಗಳಲ್ಲಿ, ವಿಜಯನಗರದ ಹಾಗೂ ಮೈಸೂರಿನ ಒಡೆಯರ ಕಾಲಗಳಲ್ಲಿ ವಿಪುಲ ಕನ್ನಡ ಪದ್ಯ ಗದ್ಯ ಚಂಪೂ ಗ್ರಂಥಗಳು ರಚಿತವಾದವು. ಕನ್ನಡ ಸಾಹಿತ್ಯದ ಬೆಳವಣಿಗೆಗೆ ಆಗ ರಾಜಾಶ್ರಮವೂ ದೊರಕಿತು. ಆದಿಕವಿ ಎನಿಸಿದ ಪಂಪನೇ ಕನ್ನಡದಲ್ಲಿ ಮಹಾಕಾವ್ಯವನ್ನು ಬರೆದವರಲ್ಲಿ ಮೊದಲಿಗನು. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಪಂಪ ಮಹಾಕವಿಯ ಮಹಾವಾಕ್ಯ ಸರ್ವಮಾನ್ಯ. ಪಂಪನೂ ಪೊನ್ನನೂ ರನ್ನನೂ ಕೂಡಿ ಕನ್ನಡದ ಕವಿರತ್ನತ್ರಯರು, ಚಾವುಂಡರಾಯ, ನಾಗವರ್ಮ, ನಾಗಚಂದ್ರ, ನಯಸೇನ, ಕರ್ಣಪಾರ್ಯ, ನೇಮಿಚಂದ್ರ, ಅಗ್ಗಳ, ಜನ್ನ, ಗುಣವರ್ಮ, ರುದ್ರಭಟ್ಟ, ಕೇಶಿರಾಜ, ಷಡಕ್ಷರಿ ಇಂತಹ ಉದ್ದಾಮ ಕವಿಗಳು ಗದ್ಯಪದ್ಯ ಗ್ರಂಥಗಳನ್ನು ಬರೆದು, ಕನ್ನಡ ಸಾಹಿತ್ಯವನ್ನು ಸಮೃದ್ಧಿಗೊಳಿಸಿದರು. ಶಿವ ಕೋಟ್ಯಾಚಾರ್ಯನ 'ವಡ್ಡಾರಾಧನೆ' ಕನ್ನಡದ ಮೊದಲ ಗದ್ಯ ಗ್ರಂಥವಾಗಿದೆ. ಈ ಕವಿಯ ಕಾಲ ಕ್ರಿಸ್ತಶಕ ಒಂಬತ್ತನೆಯ ಶತಮಾನ. ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಗದ್ಯ ಗ್ರಂಥಗಳು ತೀರಾ ಅಪೂರ್ವ. ವಡ್ಡಾರಾಧನೆಯನ್ನು ಬಿಟ್ಟರೆ ಚಾವುಂಡರಾಯ ಪುರಾಣ ದೊರಕುತ್ತದೆ. ಸಂಸ್ಕೃತದ ಪ್ರಸಿದ್ಧ ಗದ್ಯ ಕೃತಿಯಾದ ಬಾಣಭಟ್ಟನ 'ಕಾದಂಬರಿ'ಯನ್ನೂ ನಾಗವರ್ಮನು ಗದ್ಯ ಪದ್ಯ ಮಿಶ್ರಿತ ಶೈಲಿಯಲ್ಲಿ

ಬರೆದನು. ಚಂಪೂ ರಚನೆಯ ಮೋಹ, ಅದರಲ್ಲೂ ಪದ್ಯ ರಚನೆಗೆ ಹೆಚ್ಚಿನ ಒಲವು ಕನ್ನಡದ ಪ್ರಾಚೀನ ಕವಿಗಳದಾಗಿತ್ತು. ಗದ್ಯದ ಬರಗಾಲವನ್ನು, ಪದ್ಯದ ಅತಿವೃಷ್ಟಿಯನ್ನು ಹೀಗೆ ಸಾಹಿತ್ಯದ ಕೃಷಿ ಕೊಳೆತು ಹೋಗುತ್ತಿರುವುದನ್ನು ಗಮನಿಸಿ, ಸಂಕ್ರಮಣ ಕಾಲದ ಕವಿ ಮುದ್ದಣ 'ಪದ್ಯಂ ವಧ್ಯಂ, ಗದ್ಯಂ ಹೃದ್ಯಂ, ಹೃದ್ಯಮಪ್ಪ ಗದ್ಯದೊಳು ಪೇಳ್ವುದು' ಎಂದು ತಿಳಿಸಬೇಕಾಯಿತು. ವಿಜಯನಗರದ ಅರಸರ ಕಾಲದಲ್ಲಿ, ಮೈಸೂರೊಡೆಯರ ಕಾಲದಲ್ಲಿ ಬರವಣಿಗೆಯ ಶೈಲಿಯಲ್ಲಿ ಹಾಗೂ ಭಾಷೆಯಲ್ಲಿ ತುಸು ಮಾರ್ಪಾಟು ತೋರಿದರೂ ಭಾಷೆ ನಡುಗನ್ನಡವಾಗಿ, ಛಂದಸ್ಸು ಷಟ್ಪದಿ ತ್ರಿಪದಿಗಳಾಗಿ ರೂಢಿಗೆ ಬಂದರೂ ಒಟ್ಟಿನಲ್ಲಿ ಹೆಚ್ಚಿನ ಹೊಸತನ ಕಂಡುಬರಲಿಲ್ಲ. ಆ ಮೇಲೆ ಭಾಷೆಯಲ್ಲಿ. ಬರವಣಿಗೆಯಲ್ಲಿ, ವಿಷಯದಲ್ಲಿ, ಶೈಲಿಯಲ್ಲಿ, ಹೆಚ್ಚಿನ ಕ್ರಾಂತಿ ಕಂಡದ್ದು ಶರಣರ ವಚನ ಸಾಹಿತ್ಯದಲ್ಲಿ. ಸಾಮಾನ್ಯ ಜನತೆಯ ಬಳಿಗೆ ಕನ್ನಡ ಸಾಹಿತ್ಯವನ್ನು ಕೊಂಡೊಯ್ದು ಕೀರ್ತಿ ವಚನಕಾರರಿಗೆ ಸಲ್ಲುತ್ತದೆ.

ದಕ್ಷಿಣ ಕನ್ನಡದ ಸಾಹಿತ್ಯದ ಪ್ರಾಚೀನತೆ ಕ್ರಿಸ್ತಶಕ ಹದಿಮೂರನೆಯ ಶತಮಾನಕ್ಕಿಂತ ಹಿಂದಕ್ಕೆ ಹೋಗುವುದಿಲ್ಲ. ಉದ್ಭಟ ಕಾವ್ಯದ ಸೋಮರಸ, ಜೀವಂಧರ ಷಟ್ಪದಿಯ ಕೋಟೇಶ್ವರ ಕವಿ. ಜ್ಞಾನಚಂದ್ರಾಭ್ಯುದಯದ ಕಲ್ಯಾಣ ಕೀರ್ತಿ, ಭಾರತ, ರಸರತ್ನಾಕರಗಳ ಸಾಳ್ವಕವಿ, ಗೋಮಟೇಶ್ವರ ಚರಿತೆಯ ಚಂದ್ರಮಕವಿ, ನಾಗಕುಮಾರ ಚರಿತೆಯ ಬಾಹುಬಲಿ, ಭ್ರಮರ ಗೀತೆಯ ವಾದಿರಾಜ ಸ್ವಾಮಿ, ಪದ್ಮಾವತೀ ಚರಿತೆಯ ಪದ್ಮನಾಭ ಕವಿ, ಶಬ್ದಾನುಶಾಸನದ ಭಟ್ಟಾಕಳಂಕ, ಅಹಿಂಸಾ ಚರಿತೆಯ ಸಾಯಣ, ತುರಂಗ ಭಾರತದ ಪರಮದೇವ, ರತ್ನಶೇಖರ ಚರಿತೆಯ ಪಟ್ಟಾಭಿರಾಮ, ಭರತೇಶ ವೈಭವದ ರತ್ನಾಕರವರ್ಣಿ – ಇವರೆಲ್ಲರೂ ಈ ಪ್ರದೇಶದ ಪ್ರಾಚೀನ ಕವಿವರೇಣ್ಯರು. ಇವರಲ್ಲಿ ಹೆಚ್ಚಿನವರು ದೇಶೀಯ ಛಂದಸ್ಸಿನಲ್ಲಿಯೇ ಕಾವ್ಯ ರಚಿಸಿದ್ದಾರೆ. ಇಂತು ದೇಶೀಯ ಛಂದಸ್ಸಿನಲ್ಲಿ ಬರೆಯಲು ಮೂಲ ಕಾರಣ ಯಕ್ಷಗಾನ ಸಾಹಿತ್ಯದ ಪ್ರಭಾವವೇ ಇರಬೇಕೆಂದು ತೋರುತ್ತದೆ.

ಬಾರ್ಕೂರು, ಮಂಗಳೂರು, ಕಾರ್ಕಳ, ವಿಟ್ಲ ಮೊದಲಾದ ಸೀಮೆಗಳನ್ನು ಸಣ್ಣ ಸಣ್ಣ ದೊರೆಗಳು, ಬೈರರಸರು, ಚೌಟರು, ಬಂಗರು, ಮೂಲರು, ಸಾಮಂತ ರಸರು ಆಳುತ್ತಿದ್ದರೂ ಇಲ್ಲಿನ ಸಾಹಿತ್ಯ ರಚನೆಗೆ ರಾಜಾಶ್ರಯ ಒದಗಲಿಲ್ಲ. ಅನ್ಯರ ಹಂಗಿಲ್ಲದೆ ಇದ್ದರೆ ಮನುಷ್ಯ ಸ್ವತಂತ್ರನಾಗಿ ಬದುಕುವ ಅರ್ಹತೆ ಪಡೆವಂತೆ, ಇಲ್ಲಿನ ಸಾಹಿತ್ಯಕಾರರೂ ಶ್ರೀಮಂತರ ಸಹಾಯವಿಲ್ಲದೆ ಬರೆದರು. 'ಭವತಿ ಭಿಕ್ಷಾಂದೇಹಿ'ಯ ಸಪ್ತಾಕ್ಷರೀಮಂತ್ರ ಜಪಿಸುತ್ತಾ ಮುದ್ದಣ ಅಸದೃಶ ಕಾವ್ಯ ರಚಿಸಿದ. ಕೊನೆಗೆ ಕ್ಷಯರೋಗಕ್ಕೆ ತುತ್ತಾಗಿ ಅಕಾಲ ನಿಧನ ಹೊಂದಿದರೂ ಆತನ ಕಾವ್ಯ ಸೂರ್ಯ ಚಂದ್ರರಿರುವ ವರೆಗೆ ಶಾಶ್ವತವಿರುತ್ತದೆ. ಹಿಂದೆ ಮದ್ರಾಸು ಸಂಸ್ಥಾನದಲ್ಲಿದ್ದಾಗಲೂ ಈ ಜಿಲ್ಲೆ ಅದರ ಬಾಲದ ತುದಿಯಲ್ಲಿ ನೇತಾಡುವಂತಿತ್ತು. ಇಂದು ಕರ್ನಾಟಕಕ್ಕೆ ಸೇರಿದರೂ ಅವಸ್ಥೆ

ಹಿಂದಿನಂತೆಯೇ. ಮದ್ರಾಸಿನಲ್ಲಿದ್ದಾಗಲೂ ತಮಿಳು ತೆಲುಗಿಗೆ ದೊರಕುತ್ತಿದ್ದ ಸರಕಾರೀ ಸಹಾಯ ಇಲ್ಲಿ ಕನ್ನಡಕ್ಕೆ ಸಿಗುತ್ತಿರಲಿಲ್ಲ. ಇಂದು ಕರ್ನಾಟಕಕ್ಕೆ ಸೇರಿದ ಮೇಲೂ ಬೆಂಗಳೂರು, ಮೈಸೂರಿನ ಸಾಹಿತಿಗಳಿಗೆ ಸಿಗುವ ಸೌಕರ್ಯ ಈ ಕಡೆಯವರಿಗೆ ದೊರಕುತ್ತಿಲ್ಲವೆಂಬುದನ್ನು ವಿಷಾದ ಪೂರ್ವಕ ಹೇಳಬೇಕಾಗುತ್ತದೆ. ಹೀಗಿದ್ದರೂ ಇಲ್ಲಿನ ಸಾಹಿತಿಗಳು ಕೆಲವರು ಸ್ವತಂತ್ರ ಶಕ್ತಿಯಿಂದ ಕರ್ನಾಟಕದ ಸೀಮೋಲ್ಲಂಘನವನ್ನೂ ಮಾಡಿ ಅಖಿಲ ಭಾರತ ವ್ಯಾಪ್ತಿಯ ಕೀರ್ತಿಗಳಿಸಿದ್ದು ನಾವು ಹೆಮ್ಮೆ ಪಡತಕ್ಕ ಸಂಗತಿಯಾಗಿದೆ.

ಪ್ರಕೃತಿಯ ವರಪ್ರಸಾದವಾಗಿ ಇಲ್ಲಿನ ಜನತೆಗೆ ದೊರಕಿದ ಯಕ್ಷಗಾನ ಕಲಾಸಾಹಿತ್ಯ ಮಾಧ್ಯಮ ದಕ್ಷಿಣ ಕನ್ನಡಿಗರನ್ನು ಉತ್ತಮಿಕೆಗೆ ಎತ್ತಲು ಸರ್ವಸಹಾಯವನ್ನು ಮಾಡಿದೆ. ಆಬಾಲವೃದ್ಧರಾದಿಯಾಗಿ, ಅಕ್ಷರಸ್ಥರು ಎಂತೋ ಅಂತೆ ನಿರಕ್ಷರಕುಕ್ಷಿಗಳ ಮನಸ್ಸನ್ನು ಅರಳಿಸಿದೆ. ಅವರ ಹೃದಯ ಬುದ್ಧಿಗಳಿಗೆ ಉತ್ತಮ ಉಣಿಸನ್ನು ನೀಡಿ ಪುಷ್ಟಿಗೊಳಿಸಿದೆ. ಗದ್ದೆಯ ಕೆಸರಲ್ಲಿ ದುಡಿಯುವ ರೈತರಿಗೆ, ಕಡಲ ತೆರೆಗಳ ಮೇಲೆ ದೋಣಿ ತೇಲಿಸಿ ಮೃತ್ಯು ಮುಖದ ಒಳಹೊಕ್ಕು ಬರುವ ಮೀನುಗಾರರಿಗೆ, ಸೊಂಟಕ್ಕೆ ಹರಿತ ಕತ್ತಿ ಸಿಕ್ಕಿಸಿ ತೆಂಗು ತಾಳೆಗಳ ಉನ್ನತ ವೃಕ್ಷಗಳನ್ನು ಏರಿ ಇಳಿಯುವ ಮೂರ್ತೆದಾರರಿಗೆ, ಇಂತು ನಿಸರ್ಗದ ನಿಷ್ಠುರ ರಮಣೀಯತೆಯಲ್ಲಿ ನಿತ್ಯ ಜೀವಿಸುವ ಈ ಜಿಲ್ಲೆಯ ಸಾಮಾನ್ಯ ಜನತೆಗೆ ಅವರ ಎಲ್ಲಾ ನೋವು ನಲಿವುಗಳ ಕಲಾಮಯವಾದ ಅಭಿವ್ಯಕ್ತಿಯನ್ನು ನೀಡುವ ಯಕ್ಷಗಾನ ಸದಾ ಅವರನ್ನು ಸುಂದರ ಸ್ವಪ್ನಲೋಕದಲ್ಲಿ ತೇಲಾಡಿಸುತ್ತದೆ. ಸಂಜೆಯಿಂದ ಮುಂಜಾವದ ತನಕ ಎವೆಯಿಕ್ಕದೆ, ತಲ್ಲೀನರಾಗಿ, ಭಾಗವತರ ಹಾಡುಗಳನ್ನೂ ವೇಷಗಳ ಕುಣಿತಗಳನ್ನೂ ಚೆಂಡೆಮದ್ದಳೆಗಳ ಹೊಡೆತವನ್ನೂ ಪುರಾಣಗಳ ನೀತಿಕಥೆಗಳನ್ನೂ ಗ್ರಹಿಸುತ್ತಾ, ಬದುಕನ್ನು ಹಸನುಗೊಳಿಸುವ ಭಾಗ್ಯ ಈ ಜನರದ್ದು. ಕ್ರಿಸ್ತಶಕ ಹದಿನಾಲ್ಕನೆಯ ಶತಮಾನಕ್ಕಿಂತ ಹಿಂದಿನ ಯಕ್ಷಗಾನ ಕೃತಿ ಇಂದು ದೊರಕದೆ ಇದ್ದರೂ ಆ ಮೇಲಿನ ಯಕ್ಷಗಾನ ಸಾಹಿತ್ಯ ರಚನೆ ಅತ್ಯಂತ ವಿಪುಲವಾದುದು. ಈಚೆಗೆ ತುಳು ಭಾಷೆಯಲ್ಲಿಯೂ ಯಕ್ಷಗಾನ ಸಾಹಿತ್ಯ ರಚನೆಯಾಗುತ್ತಿದ್ದು ಜನಪ್ರೀತಿಗಳಿಸುತ್ತಿದೆ. ಇಲ್ಲಿ ಯಕ್ಷಗಾನ ಕಲಾವಿದರು ರಾಷ್ಟ್ರೀಯ, ಅಂತಾರಾಷ್ಟ್ರೀಯ ರಂಗಸ್ಥಳಗಳಲ್ಲಿ ಪ್ರದರ್ಶನ ನೀಡಿ ಲೋಕಪ್ರಿಯತೆಯನ್ನು ಗಳಿಸುತ್ತಿರುವುದು ಸಂತೋಷದ ಸಂಗತಿ.

ದಕ್ಷಿಣ ಕನ್ನಡದ ಅಗ್ರಗಣ್ಯ ಸಾಹಿತ್ಯಕಾರರದ್ದು ಒಬ್ಬೊಬ್ಬರದ್ದೂ ಒಂದೊಂದು ವಿಕ್ರಮ. ಮಹಾಕಾವ್ಯ ರಚನೆಗೆ ಸಂಸ್ಕೃತದ ವೃತ್ತಗಳನ್ನೋ ವಾರ್ಧಿಕ ಭಾಮಿನೀ ಷಟ್ಪದಿಗಳನ್ನೋ ಉಪಯೋಗಿಸುವ ಆ ಘನ ಗಾಂಭೀರ್ಯ ಶೈಲಿಯಿಂದ ದೂರ ನಿಂತು. ಸರಳವಾದ ಭಾಷೆಯಲ್ಲಿ, ಸಾಂಗತ್ಯದ ಹಾಡು ರೂಪದಲ್ಲಿ, ಭೋಗ–ಯೋಗಗಳೆರಡನ್ನೂ ಅತ್ಯುನ್ನತಿಗೇರಿಸಿ ಕನ್ನಡ, ತೆಲುಗು, ತುಳು ಜನರೆಲ್ಲರ ಮನ

ಮೆಚ್ಚಿಸಿದ ಮಹತ್ವ ರತ್ನಾಕರವರ್ಣಿಯದು. ಹಳೆಗಾಲದ ಭಾಷೆಗೆ ಹೊಸಗಾಲದ ಮೆರುಗನ್ನು ಕೊಟ್ಟು ಗದ್ಯ ಕಾವ್ಯದಲ್ಲಿ ಪತಿ-ಪತ್ನಿಯರ ಮೋಹಕ ಸರಸ ಸಂಭಾಷಣೆಯ ನಾಟಕೀಯತೆಯನ್ನು ತಂದು, ವಸ್ತು ಹಳತಾದರೂ ಹೊಸ ರೀತಿಯಲ್ಲಿ ಕಾವ್ಯ ರಚಿಸಿದ ಕೀರ್ತಿ ಮುದ್ದಣನದ್ದು. ಕನ್ನಡದ ಪ್ರಥಮ ಸಾಮಾಜಿಕ ಕಾದಂಬರಿ ಬರೆದ ಖ್ಯಾತಿ ಗುಲ್ವಾಡಿ ವೆಂಕಟರಾಯರದು. ಮೊದಲ ಸಣ್ಣ ಕಥೆಯನ್ನು ಬರೆದ ಹೆಸರು ಪಂಜೆಯವರದು. ಪ್ರಾಸದ ಸಂಕಲೆಯಿಂದ ಕನ್ನಡ ಕವಿತಾ ಕಾಮಿನಿಯನ್ನು ಬಿಡುಗಡೆಗೊಳಿಸಿದ ಹೆಗ್ಗಳಿಕೆ ಗೋವಿಂದ ಪೈಗಳದು. ಮೊದಲ ಆಂಗ್ಲ ಕವಿತಾನುವಾದದ ಪ್ರಯೋಗ ಹಟ್ಟಂಗಡಿ ನಾರಾಯಣರಾಯರದು. ಮೊದಲ ಪತ್ರಿಕೆಯಾದ 'ಮಂಗಳೂರು ಸಮಾಚಾರ'ವನ್ನು ಹೊರತಂದ ಯಶಸ್ಸು ಇಲ್ಲಿನ ಬಾಸೆಲ್ ಮೀಶನ್ ಸಂಸ್ಥೆಯದ್ದು. ಇಂದಿನೀ ಸುಂದರ ಕನ್ನಡ ಲಿಪಿಯನ್ನು ಕೆತ್ತಿದ ಅಕ್ಷರ ಶಿಲ್ಪದ ಖ್ಯಾತಿ ಅತ್ತಾವರ ಅನಂತಾಚಾರಿ ಅವರದು. ಇಂತಹ ಇಲ್ಲಿನವರ ಹಲವು ಕನ್ನಡ ಸಾಹಿತ್ಯ ಸಾಧನೆ ಸಿದ್ಧಿಗಳು ಚಿರಸ್ಮರಣೀಯ. ಈ ಮಹನೀಯರು ನಡೆದು ಸವೆಸಿದ ಹಾದಿಯಲ್ಲಿ ಇಂದಿಗೂ ಹಲವರು ಹಿರಿಯ ಕಿರಿಯ ಧೀಮಂತ ಸಾಹಿತ್ಯಜ್ಞರು ವಿವಿಧ ರಂಗಗಳಲ್ಲಿ ಮುನ್ನಡೆದು ಕನ್ನಡದ ಕೀರ್ತಿ ಪತಾಕೆಯನ್ನು ಇನ್ನೂ ಎತ್ತರಕ್ಕೆ ಎತ್ತಿ ಹಿಡಿಯುತ್ತಿರುವುದು ಹೆಮ್ಮೆ ಪಡುವಂತಹುದು.

ಎರಡು ಮಹಾಯುದ್ಧಗಳು ಜಗತ್ತಿನ ಜನಜೀವನದಲ್ಲಿ, ಜನರ ನಂಬುಗೆಗಳಲ್ಲಿ, ತತ್ವಾದರ್ಶಗಳ ಅನುಸರಣೆಯಲ್ಲಿ ಮಹತ್ವದ ಮಾರ್ಪಾಡುಗಳನ್ನು ತಂದವು. ಹಲವು ಅಂಧ ವಿಶ್ವಾಸಗಳು ಬುಡ ಮೇಲಾದುವು. ಸಾಮಾಜಿಕ, ರಾಜಕೀಯ ಕ್ರಾಂತಿ ಉಂಟಾದುವು. ವೈಜ್ಞಾನಿಕ ವಿಚಾರಶೀಲತೆ ಪ್ರಚಾರವಾಯಿತು. ಭ್ರಮೆಗಳು, ಅಸತ್ಯಗಳು ಇಲ್ಲವಾದುವು. ಪ್ರಭುಗಳು, ಶ್ರೀಮಂತರು ಮಾತ್ರ ಲೋಕವನ್ನು ಆಳುವವರಲ್ಲ, ಪ್ರಜೆಗಳು ಕಾರ್ಮಿಕರು ಕೂಡ ಆಳಬಲ್ಲರು ಎಂದೂ ನಿಸರ್ಗ ನಿರ್ಮಿತಗಳಲ್ಲಿ ಭೂಮಿ, ನೀರು, ಬೆಳಕು, ಗಾಳಿ, ಆಕಾಶ ಎಲ್ಲದರಲ್ಲಿಯೂ ಎಲ್ಲರಿಗೂ ಸಮಾನಾವಕಾಶ ಎಂದೂ ಸಂಪತ್ತಿನಲ್ಲಿ ಸರ್ವರಿಗೂ ಸಮ ಪಾಲು ಎಂದೂ ಇಂತಹ ನೂತನ ಸಿದ್ಧಾಂತಗಳು ಸ್ಥಾಪಿತವಾದುವು. ಪ್ರಪಂಚದ ದಿನನಿತ್ಯದ ಆಗುಹೋಗುಗಳು ಪತ್ರಿಕೆಗಳಿಂದ, ರೇಡಿಯೋ, ದೂರದರ್ಶನಗಳಿಂದ ಪ್ರತಿಯೊಬ್ಬರ ಮನೆ ಬಾಗಿಲಿಗೆ ತಲಪುವಂತಾಯಿತು. ಹಳೆಯ ದುಃಸ್ವಪ್ನಗಳು ಕಳೆದುಹೋಗಿ ಹೊಸ ಬದುಕಿನ ಸೂರ್ಯೋದಯದ ನಿರೀಕ್ಷೆ ಹೆಚ್ಚಿತು. ಹೊಸ ಜಗತ್ತಿನ ನಿರ್ಮಾಣ ಕಾರ್ಯಕ್ಕೆ, ಈ ನೂತನ ಆಕಾಂಕ್ಷೆಗೆ ತಕ್ಕಂತಹ ಅಭಿವೃದ್ಧಿಗೆ ಸಾಹಿತ್ಯವೂ ಮಾಧ್ಯಮವಾಯಿತು. ಹೊಸ ಕಾಲಕ್ಕೆ ಹೊಸ ಸಾಹಿತ್ಯ ರೂಪುಗೊಂಡಿತು. ಹೊಸ ನೀರು ಉಕ್ಕಿ ಬಂದು ಕೊಳೆತ ಹಳೆ ಕೆಸರನ್ನು ಕೊಚ್ಚಿಕೊಂಡು ಹೋಯಿತು.

ಹೊಸಯುಗದ ಈ ಆರಂಭ ಕಾಲದಲ್ಲಿ ಉಂಟಾದ ಕನ್ನಡ ಸಾಹಿತ್ಯದ ಪರಿವರ್ತನೆಯ ಚಕ್ರಕ್ಕೆ ಹೆಚ್ಚಿನ ಚಾಲನೆ ದಕ್ಷಿಣ ಕನ್ನಡ ಜಿಲ್ಲೆಯ ಮಟ್ಟಿಗೆ ದೊರೆತದ್ದು ಕ್ರೈಸ್ತ ಮಿಶನರಿಗಳಿಂದ, ಬಾಸೆಲ್ ಮಿಶನಿನವರಿಂದ; ಮುದ್ರಣಾಲಯವನ್ನು, ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ, ಹೊಸ ಹಳೆಯ ಗ್ರಂಥಗಳನ್ನು ಪ್ರಕಟಿಸಿ, ವ್ಯಾಕರಣ ಛಂದಸ್ಸು, ಪಠ್ಯ ಪುಸ್ತಕಗಳನ್ನು ಪ್ರಕಟಿಸಿ, ಕಿಟೆಲ್ ನಿಘಂಟುವಿನಂತಹ ಹೊಸ ಕೋಶವೊಂದನ್ನು ರಚಿಸಿ, ಪಾಶ್ಚಾತ್ಯ ತತ್ವ ಆದರ್ಶಗಳ ಪರಿಚಯ ಮಾಡಿಸಿ, ಆಂಗ್ಲ ಭಾಷಾಭ್ಯಾಸಕ್ಕೆ ಅನುಕೂಲಗೈದು – ಹೀಗೆ ಹಲವು ವಿಧಗಳಲ್ಲಿಯೂ ಇಲ್ಲಿನ ಕನ್ನಡ ಜನತೆಯ ಮಾನಸಿಕ ಬೌದ್ಧಿಕ ವಿಕಾಸಕ್ಕೆ ಅವರು ನೆರವು ನೀಡಿದ್ದನ್ನು ಸ್ಮರಿಸಿಕೊಳ್ಳಬೇಕು. ಅವರ ಮೂಲ ಉದ್ದೇಶ ಕ್ರೈಸ್ತ ಧರ್ಮದ ಪ್ರಚಾರವಾಗಿತ್ತಾದರೂ ಅಷ್ಟಕ್ಕೇ ಕಾರ್ಯಕ್ಷೇತ್ರವನ್ನು ಅವರು ಸೀಮಿತಗೊಳಿಸದೆ ಈ ಪ್ರದೇಶದ ಸಾಂಸ್ಕೃತಿಕ, ಶೈಕ್ಷಣಿಕ ಪ್ರಗತಿ ಚಾಲನೆ ನೀಡಿದರು. ತುಳು ಪಾಡ್ದನಗಳನ್ನೂ ಪ್ರಕಟಿಸಿ, ಇಲ್ಲಿನ ಜನ ಸಾಮಾನ್ಯರ ಭಾಷೆಯಾದ ತುಳುವಿನಲ್ಲಿ ಅನೇಕ ಗದ್ಯ ಪದ್ಯ ಕೃತಿಗಳನ್ನು ಪ್ರಕಟಿಸಿ, ತುಳು ಭಾಷೆಗೆ ಗ್ರಾಂಥಿಕ ಸ್ಥಾನಮಾನವನ್ನು ಮೊತ್ತಮೊದಲು ನೀಡಿದ ಕೀರ್ತಿ ಕೂಡ ಅವರಿಗೇ ಸಲ್ಲಬೇಕಾಗಿದೆ. ಬಾಸೆಲ್ ಮಿಶನ್ ಸಂಸ್ಥೆಯ ಮೂಲಕ ಪ್ರೊಟೆಸ್ಟಾಂಟರು ಕೈಕೊಂಡ ಕಾರ್ಯಕ್ರಮದಂತೆ, ಮುಂದೆ ಕೆಥೋಲಿಕ್ ಕ್ರೈಸ್ತ ಮಿಶನರಿಗಳೂ ಇಲ್ಲಿ ಶೈಕ್ಷಣಿಕ ಹಾಗೂ ಇತರ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಜಲ್ಲೆಯ ಸಾಂಸ್ಕೃತಿಕ ರಂಗದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸಿದರು. ಆ ಪೈಕಿ ಮಂಗಳೂರಿನ ಸೈಂಟ್ ಎಲಾಶಿಯಸ್ ಕಾಲೇಜು, ಸೈಂಟ್ ಅಗ್ನೆಸ್ ಕಾಲೇಜ್ – ಈ ಉಭಯ ವಿದ್ಯಾಸಂಸ್ಥೆಗಳ ಕೊಡುಗೆ ಅತ್ಯಂತ ಮಹತ್ವದ್ದು. ಮಣಿಪಾಲದ ಮಹಾಶಿಲ್ಪಿಯೆಂದು ಖ್ಯಾತರಾದ ಡಾ। ಮಾಧವ ಪೈಗಳು ಆಧುನಿಕ ಕಾಲದಲ್ಲಿ ಈ ಜಿಲ್ಲೆಯಾದ್ಯಂತ ಸ್ಥಾಪಿಸಿದ ಹಲವಾರು ಶೈಕ್ಷಣಿಕ ಸಂಸ್ಥೆಗಳು, ಕಲಾ ವಿಜ್ಞಾನ ಮಹಾವಿದ್ಯಾಲಯಗಳು, ಇಲ್ಲಿನ ಕನ್ನಡಿಗರ ಸಾಹಿತ್ಯಿಕ ಸಾಂಸ್ಕೃತಿಕ, ಜೀವನದ ವಿಕಸನದಲ್ಲಿ ಪ್ರಮುಖ ಪಾತ್ರವಹಿಸಿವೆ. ಇದರಂತೆ ಶ್ರೀ ಧರ್ಮಸ್ಥಳದ ಶ್ರೀ ಹೆಗ್ಡೆಯವರು ಸ್ಥಾಪಿಸಿದ ಶೈಕ್ಷಣಿಕ ಸಂಸ್ಥೆಗಳು, ಕೆನರಾ, ಬೆಸೆಂಟ್, ಶಿರ್ವ, ಶ್ರೀ ನಾರಾಯಣಗುರು ಕಾಲೇಜುಗಳು, ವಿದ್ಯಾ ಸಂಸ್ಥೆಗಳು ಈ ಹಲವಾರು ಶಿಕ್ಷಣ ಸಂಸ್ಥೆಗಳ ನಿರಂತರ ಸೇವೆಯ ಸತ್ಫಲವಾಗಿ ಇಲ್ಲಿನ ಸಾಕ್ಷರತೆಯ ಸಂಖ್ಯೆ ಇಡೀ ಕರ್ನಾಟಕದಲ್ಲಿ ಮುಂಚೂಣಿಯಲ್ಲಿರುವುದನ್ನೂ ನಾವು ನೆನಪಿಸಿಕೊಳ್ಳಬೇಕು. ಇವೆಲ್ಲವುಗಳಿಗೂ ಕಳಶವಿಟ್ಟಂತೆ ಮಂಗಳೂರು ವಿಶ್ವವಿದ್ಯಾಲಯ ಹಾಗೂ ಅಲ್ಲಿನ ಸ್ನಾತಕೋತ್ತರ ಕೇಂದ್ರಗಳು ಕನ್ನಡ ಸಾಹಿತ್ಯ ಸಂಸ್ಕೃತಿಗಳಿಗೆ ಇಂದು ಉತ್ತಮ ಕೊಡುಗೆ ನೀಡುತ್ತವೆ.

ಮೇಲೆ ಹೇಳಿದ ಸಂಸ್ಥೆಗಳಿಗೆ ಏನೇನೂ ಕಡಿಮೆಯಿಲ್ಲದೆ, ಪ್ರತ್ಯಕ್ಷವಾಗಿ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿ, ಪ್ರಾಚೀನ ಕಾಲದಿಂದ ಆಧುನಿಕ ಕಾಲದವರೆಗಿನ ಸಮಗ್ರ

ಕನ್ನಡ ಸಾಹಿತ್ಯಕ್ಕೆ ಹೆಚ್ಚಿನ ಜೀವನಸತ್ವವನ್ನು ತುಂಬಿಸಿದ ಸಂಸ್ಕೃತ ಭಾಷೆಯ ನೆರವನ್ನು ನೀಡಿದ ಪ್ರಾಮುಖ್ಯವಾದ ಮೂರು ಮಹಾ ಸಂಸ್ಕೃತ ವಿದ್ಯಾಲಯಗಳ ವಿಷಯವಾಗಿ ನಾನಿಲ್ಲಿ ಪ್ರಸ್ತಾವಿಸಬಯಸುತ್ತೇನೆ. ಅವುಗಳೆಂದರೆ, ಉಡುಪಿಯ ಕಾರ್ಕಳದ ಮತ್ತು ಪೆರಡಾಲದ ಮಹಾವಿದ್ಯಾಲಯಗಳು, ಸಂಸ್ಕೃತ ಸಾಹಿತ್ಯದ ಅಭ್ಯಾಸದ ಜತೆಗೆ ಇಲ್ಲಿ ಕನ್ನಡ ಬಾಷೆಯಲ್ಲಿಯೂ ವಿದ್ವತ್ಪದವಿ ಪಡೆಯಲು ಶಿಕ್ಷಣ ನೀಡುತ್ತಿದ್ದರೆಂಬುದನ್ನು ನಾವು ಅರಿತು ಕೊಂಡಿರಬೇಕು. ಹಿಂದೆ ಮದ್ರಾಸ್ ಸಂಸ್ಥಾನದ ಹೆಚ್ಚಿನ ವಿದ್ಯಾಲಯಗಳಲ್ಲಿ, ಆಮೇಲೆ ಕರ್ನಾಟಕ ರಾಜ್ಯ ನಿರ್ಮಾಣಗೊಂಡ ಪ್ರಾರಂಭ ಕಾಲದಲ್ಲಿ ಈ ಮೂರು ಸಂಸ್ಥೆಗಳಲ್ಲಿ ಉಚ್ಚ ಶಿಕ್ಷಣ ಪಡೆದ ಸಂಸ್ಕೃತ ಕನ್ನಡ ವಿದ್ವಾಂಸರೇ ಈ ಉಭಯ ಭಾಷೆಗಳ ಪಂಡಿತರಾಗಿ ಪಾಠ ಪ್ರವಚನ ಮಾಡುತ್ತಿದ್ದ ರೆಂಬುದು ಗಣನೀಯ. ಇಲ್ಲಿ ಶಿಕ್ಷಣ ಪಡೆದ ಎಷ್ಟೋ ಮಂದಿ ಉಭಯ ಭಾಷಾ ಸಾಹಿತ್ಯ ಕ್ಷೇತ್ರಗಳಲ್ಲಿ ಕವಿಗಳಾಗಿ, ಕತೆಗಾರರಾಗಿ, ವಿಮರ್ಶಕರಾಗಿ. ಸಂಶೋಧಕರಾಗಿ. ಲೇಖಕರಾಗಿ, ವಾಗ್ಮಿಗಳಾಗಿ ಈ ಜಿಲ್ಲೆಯ ಸಾರಸ್ವತ ಸಂಪತ್ತನ್ನು ಸಮೃದ್ಧಿಗೊಳಿಸುವರೆ ಅಮೂಲ್ಯ ಕೊಡುಗೆ ನೀಡಿದ್ದಾರೆ.

ಮೇಲಿನ ಮಾತುಗಳನ್ನು ಹೇಳುವಾಗ, ಇಂದು, ಕರ್ನಾಟಕ ರಾಜ್ಯದ ಕೆಲವರಲ್ಲಿ ಸಂಸ್ಕೃತ ಶಿಕ್ಷಣದ ಕುರಿತಿರುವ ಭಿನ್ನಾಭಿಪ್ರಾಯುವನ್ನು ನಾನು ಗಣನೆಗೆ ತಂದುಕೊಂಡಿದ್ದೇನೆ. ಕನ್ನಡ ಕಾವ್ಯ ಸಾಹಿತ್ಯ ರಚನೆ ಸಂಸ್ಕೃತವನ್ನು ಬಹಳ ಅವಲಂಬಿಸಿದೆ. ಛಂದಸ್ಸು, ರಸ, ಅಲಂಕಾರ ಶಾಸ್ತ್ರಗಳ ಮಟ್ಟಿಗೂ ಸಂಸ್ಕೃತವೇ ಕನ್ನಡಕ್ಕೆ ಹೆಚ್ಚಿನ ಆಧಾರ. ಕನ್ನಡದ್ದೆಂಬ ಮೊದಲ ಶಾಸನದಲ್ಲಿನ, 'ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ ಬಾಧಿಪ್ಪಕಲಿಗೆ ಕಲಿಯುಗ ವಿಪರೀತನ್' ಈ ಪದ್ಯದಲ್ಲಿ ಪ್ರತ್ಯಯ ಹೊರತು ಮಿಕ್ಕೆಲ್ಲವೂ ಸಂಸ್ಕೃತ ಪದಗಳೇ. ಮೊದಲ ಕನ್ನಡ ಗ್ರಂಥ ಕವಿರಾಜ ಮಾರ್ಗ, ಸಂಸ್ಕೃತದ ದಂಡಿಕವಿಯ ಕಾವ್ಯಾದರ್ಶನದ ಆಧಾರದಿಂದ ಬರೆದುದು. ಮೊದಲ ಕನ್ನಡದ ಮಹಾಕವಿ ಪಂಪನು, ವ್ಯಾಸಮುನೀಂದ್ರ ರುಂದ್ರ ವಚನಾಮೃತ ವಾರ್ಧಿಯನ್ನು ಈಸಿ, ಮಹಾಕಾವ್ಯ ಬರೆದಿದ್ದಾನೆ. ಆಧುನಿಕ ಕಾಲದ ಮಹಾಕವಿ ಕುವೆಂಪು! ಲಕ್ಷ ನಕ್ಷತ್ರಮಯ ವಕ್ಷಾಂತರಿಕ್ಷದ ಕ್ಷೀರ ಸಾಗರದಿಂ ಕಿಶೋರಶಶಿ ಬರುವಂತೆ ಎಂಬೀ ಸಂಸ್ಕೃತದ ಪದ ಭೂಯಿಷ್ಠವಾದ ಶೈಲಿಯಲ್ಲಿ ಕಾವ್ಯ ರಚಿಸಿದ್ದಾರೆ. ಭಾರತದ ಇತರ ಯಾವ ಭಾಷೆಯಲ್ಲೂ ಇರದ ನಾವೆಲ್ ಎಂಬೀ ಸಾಹಿತ್ಯ ಪ್ರಕಾರಕ್ಕೆ ಕನ್ನಡಿಗರು ಸಂಸ್ಕೃತದ ಬಾಣಭಟ್ಟನ ಗದ್ಯಕಾವ್ಯವಾದ ಕಾದಂಬರಿ ಎಂಬ ಹೆಸರನ್ನೇ ಇಟ್ಟಿದ್ದಾರೆ. ಅಲ್ಲಿ 'ಕಾದಂಬರಿ' ಎನ್ನುವ ಪ್ರಯೋಗ, ಆ ಕಥೆಯ ನಾಯಿಕೆಯ ಹೆಸರಾಗಿ ಬಂದಿದೆ. ಹೊರತು, ಯಾವುದೇ ರೀತಿಯ ಸಾಹಿತ್ಯ ಪ್ರಕಾರವೆಂದು ಉಪಯೋಗವಾಗಿಲ್ಲ. ಆಧುನಿಕ ಕರ್ನಾಟಕದ ಕಾದಂಬರಿಕಾರರಾದ ಅ. ನ. ಕೃಷ್ಣರಾಯರ ಭಾಷಾ ಶೈಲಿ ಸಂಸ್ಕೃತಮಯ. ಕನ್ನಡ ಮಾತ್ರವಲ್ಲ ತೆಲುಗು, ಮಲೆಯಾಳ ಭಾಷೆಗಳಲ್ಲೂ ಇದೇ

ರೀತಿ. ಮಲೆಯಾಳದಲ್ಲಿ ಮಣಿಪ್ರವಾಳ ಶೈಲಿಯೆಂಬುದೊಂದು ಸಂಸ್ಕೃತಮಯ ಸಂಸ್ಕೃತ ವಿಭಕ್ತಿ ಪ್ರತ್ಯಯಸಹಿತವಾದ ಪ್ರಯೋಗದ ಶೈಲಿಯೇ ಇದೆ. ಹಿಂದಿ, ಮರಾಠೀ, ಗುಜರಾಥಿ ಇತ್ಯಾದಿ ಭಾಷೆಗಳೂ ಸಂಸ್ಕೃತದ ನೆರವಿನಿಂದಲೇ ಸಮೃದ್ಧವಾಗಿವೆ. ವಿಶ್ವ ಕವಿ ಠಾಕೂರರು 'ಜನ ಗಣ ಮನ ಅಧಿನಾಯಕ ಜಯ ಹೇ ಭಾರತ ಭಾಗ್ಯವಿಧಾತಾ' ಎಂದು ಮೊದಲಾದ ಕವನಗಳನ್ನು ಸಂಸ್ಕೃತಮಯವಾಗಿಯೇ ಬರೆದರು. ಶುಭ್ರಜ್ಯೋತ್ಸ್ನಾಪುಲಕಿತಯಾಮಿನೀಂ ಫುಲ್ಲಕುಸುಮಿತ ದ್ರುಮದಲ ಶೋಭಿನೀಂ, ಸುಹಾಸಿನೀಂ, ಸುಮಧುರ ಭಾಷಿಣೀಂ. ವಂದೇ ಮಾತರಂ – ಬಂಕಿಂ ಚಟರ್ಜಿಯವರ ಈ ರಾಷ್ಟ್ರಗೀತೆಯಲ್ಲಿ ಸಂಸ್ಕೃತ ಪದಗಳೇ ಇವೆ. ಇಂದು ಅನವಶ್ಯಕ. ಧಾರಾಳ ತದ್ಭವ ಅಪಭ್ರಂಶ ಪದಗಳನ್ನು ಪ್ರಯೋಗಿಸಿ ಮೂಲ ಸಂಸ್ಕೃತ ಪದಗಳನ್ನು ಉಪಯೋಗಿಸದೆ ತಮಿಳರೇನೋ ಸಾಧನೆ ಮಾಡಿದ್ದಾರೆಂದರೆ ಕನ್ನಡಿಗರೂ ಆ ರೀತಿ ಮಾಡಬೇಕೆಂದಿಲ್ಲ. ನಮ್ಮ ಕವಿಗಳಾದ ಆಂಡಯ್ಯ, ತಿಮ್ಮಪ್ಪಯ್ಯ, ಪುಟ್ಟಣ್ಣ ಗೌಡರು ಕೂಡ ಕಬ್ಬಿಗರ ಕಾವ, ಸೊಬಗಿನ ಬಳ್ಳಿ, ಕಾಲೂರ ಚೆಲುವೆ – ಗ್ರಂಥಗಳಲ್ಲಿ ಈ ಸಾಹಸ ಮಾಡಿದ್ದಾರೆ. ಕರ್ಮಣಿಯ ಸರದೊಳ್ ಚೆಂಬವಳಂ ಕೋದಂತಿರೆ, ಹದನರಿತು, ಪದ ಹಾಗೂ ಅದರ ಸರಿಯಾದ ಅರ್ಥ ತಿಳಿದು ಸಂಸ್ಕೃತವನ್ನು ಉಪಯೋಗಿಸಿದರೆ ಅದು ಸಲ್ಲಕ್ಷಣವಲ್ಲದೆ ಸರ್ವಥಾ ಅವಲಕ್ಷಣವಲ್ಲ. ಶುದ್ಧವಾದ ಉಚ್ಚಾರಣೆಗೂ ಸಂಸ್ಕೃತ ಭಾಷೆ ಸಹಾಯ ಮಾಡುತ್ತದೆ. ಹಾಗಾಗಿ ನಾವು ಸಂಸ್ಕೃತಕ್ಕೆ 'ಕೃತಜ್ಞ'ರಾಗಿರಬೇಕು. ಹೊರತು ಕೃತಘ್ನರಾಗಕೂಡದು.

ಕನ್ನಡ ಪ್ರೇಮ ಅನ್ಯಭಾಷಾ ವಿರೋಧಿಯಲ್ಲ, ಇತರರಿಗೆಲ್ಲ ಕೆಡುಕು ಬಗೆದು ತಾನು ಒಳ್ಳೆಯವನೆನಿಸುವುದು ಸಾಧ್ಯವಾಗದು. ತುಳು, ಕೊಂಕಣಿ, ಮರಾಠೀ, ಮಲೆಯಾಳೀ ಮಾತೃಭಾಷೆಯವರು ಇಲ್ಲಿ ಕನ್ನಡವನ್ನು ಮನಸಾ ಪ್ರೀತಿಸುತ್ತಾರೆ. ಕನ್ನಡದ ಶ್ರೇಷ್ಠ ಲೇಖಕರ ಪಂಕ್ತಿಯಲ್ಲಿ ಅವರು ಸೇರುತ್ತಾರೆ. ತುಳು ಭಾಷೆಯದ್ದೇ ಆದ ಒಂದು ಲಿಪಿ ಇದ್ದರೂ ತುಳುವರು, ಅವರ ಭಾಷೆಗೆ ಇಂದು ಕನ್ನಡ ಲಿಪಿಯನ್ನು ಉಪಯೋಗಿಸುತ್ತಾರೆ. ಕೊಂಕಣಿ ಭಾಷೆಯವರು ದೇವನಾಗರಿ ಲಿಪಿಯನ್ನು ಉಪಯೋಗಿಸದೆ ಕನ್ನಡ ಲಿಪಿಯಲ್ಲಿ ಬರೆಯುತ್ತಾರೆ. ಇಲ್ಲಿನ ತುಳು, ಕೊಂಕಣಿ, ಕನ್ನಡಾಂತರ್ಗತವೆಂದು ಎಲ್ಲರೂ ಒಪ್ಪುತ್ತಾರೆ. ಕನ್ನಡ ತಾಯ್ನುಡಿಯವರೆಗೂ ಅದರಲ್ಲಿ ವಿಶ್ವಾಸವಿದೆ. ನಾಡಿನ ಹಿತಕ್ಕೆ, ಭಾಷೆಯ ಏಳಿಗೆಗೆ, ದೇಶದ ಐಕ್ಯಕ್ಕೆ ಹಾಗೂ ಸಮಗ್ರತೆಗೆ ಇಂತಹ ನೆಲೆ ಪೂರಕ ಹೊರತು ಮಾರಕವಲ್ಲ. ತದ್ವಿರುದ್ಧ, ಇಲ್ಲಿ ತುಳು, ಕೊಂಕಣಿ ಮೊದಲಾದ ಇತರ ಭಾಷಿಕರ ತಲೆ ಮೆಟ್ಟಿ ಕನ್ನಡವನ್ನೇ ಕಡ್ಡಾಯ ಮಾಡುತ್ತೇವೆ ಎಂಬ ಹಠತೊಟ್ಟಲ್ಲಿ ಅಪಸ್ವರ ಕೇಳಬಹುದು. ಇಲ್ಲಿನದು ಸೌಹಾರ್ದದ ನಿರ್ಮಲ ವಾತಾವರಣ. ಹಾಗಾಗಿಯೇ ಈ ಕಡೆಯಲ್ಲಿ ಗೋಕಾಕ ವರದಿ ಕಾಲದಲ್ಲಿ ಯಾರೂ ಯಾರಿಗೂ ಕಲ್ಲು ಬಿಸಾಡಲಿಲ್ಲ; ವಾಹನ ಸುಡಲಿಲ್ಲ; ಜೀವಹಾನಿ ಮಾಡಲಿಲ್ಲ ಹಾಗೆ

ಮಾಡದೆ ಇರುವುದು ನಮ್ಮ ಜನರ ಯೋಗ್ಯತೆ ಹೊರತು ಸರ್ವಥಾ ಅಯೋಗ್ಯತೆಯಲ್ಲ. ಭಾಷೆಯ ಕುರಿತಾಗಲಿ, ಮತಧರ್ಮದ ಕುರಿತಾಗಲಿ, ಸಹನೆ, ಸಹಿಷ್ಣುತೆ, ಸೌಹಾರ್ದ, ಅನ್ಯೋನ್ಯತೆ ಇನ್ನಷ್ಟು ವೃದ್ಧಿಯಾಗಿ ನಾಡು ನುಡಿಗಳು ಸಂಸ್ಕೃತಿ ಸಂಪನ್ನವಾಗಲಿ ಎಂದು ನಾವು ಬಯಸಬೇಕು.

ಸಾಹಿತ್ಯ ಚರಿತ್ರಕಾರರು ಕೆಲವರು ಕನ್ನಡ ಸಾಹಿತ್ಯವನ್ನು ಜೈನ ಬ್ರಾಹ್ಮಣ ವೀರಶೈವ ಸಾಹಿತ್ಯಗಳೆಂದು ವಿಂಗಡಿಸಿ ಅನ್ಯಾಯ ಮಾಡಿದರೆಂದು ತೋರುತ್ತದೆ. ಪಂಪ, ರನ್ನರನ್ನು ನಾವು ಓದುವುದು ಅವರು ಕವಿಗಳೆಂದಲ್ಲದೆ, ಜೈನರೆಂದಲ್ಲ; ಅಂತೆಯೇ ಕುಮಾರವ್ಯಾಸನನ್ನೋ ರಾಘವಾಂಕನನ್ನೋ ಅವರು ಬ್ರಾಹ್ಮಣರೆಂದೋ ವೀರಶೈವರೆಂದೋ ನಾವು ಓದುತ್ತಿಲ್ಲ; ಕವಿಗಳೆಂದು ಬಹುಮಾನಿಸುತ್ತೇವೆ. ಯಾವ ಮತದ ಯಾವ ಜಾತಿಯ ತಾಯಿತಂದೆಯರ ಶಿಶುವಾಗಿ ಯಾವನಾದರೂ ಕವಿ ಜನಿಸಿದ್ದರೆ ಆ ಬಗ್ಗೆ ಆತನು ಮಾಡಿದ ಅಪರಾಧ ಏನೂ ಇಲ್ಲ. ಹಾಗೆ ಜನಿಸುವುದು ಆತನ ಸ್ವೇಚ್ಛೆ ಅಲ್ಲವೇ ಅಲ್ಲ. ಒಬ್ಬನು ಕವಿ ಸಾಹಿತಿ ಆಗಬೇಕಾಗಿದ್ದರೆ ಆತನಲ್ಲಿ ಇಚ್ಛಾಶಕ್ತಿ ಇರಬೇಕು; ಸಾಧನೆ ಸಾಹಸಗಳು ಬೇಕು. ಹಾಗಾಗಿ ಕವಿ ಸಾಹಿತಿಗಳಲ್ಲಿ ಜಾತಿಮತಗಳನ್ನು ಅರಸುವುದು ತೀರಾ ತಿಳಿಗೇಡಿತನ. ಇಂದು ಶೂದ್ರ ಸಾಹಿತ್ಯ, ಪಂಚಮ ಸಾಹಿತ್ಯ ಎಂಬ ಭಿನ್ನ ಸ್ವರ ಕೇಳಿ ಬಂದಿದ್ದರೆ, ಅದಕ್ಕೆ ಹಿಂದಿನವರು ಮಾಡಿದ ಆ ಜಾತೀಯ ವಿಂಗಡನೆಯೇ ಪ್ರೇರಣೆ ಎಂದು ತಿಳಿದಿರಬೇಕು. ಇಂದಿಗೂ ನಮ್ಮಲ್ಲಿ ಕೆಲವರು ಜೈನ ಬ್ರಾಹ್ಮಣ ವೀರಶೈವ ಸಾಹಿತಿಗಳೆಂದು, ಜನ್ಮದಿಂದ ತಾನಾಗಿ ಸುಲಭವಾಗಿ ಬಂದ ಪ್ರತಿಷ್ಠೆಯ ಲಾಭ ಪಡೆದುಕೊಳ್ಳಲು ಉತ್ಸುಕರಿರುವಾಗ, ಶೂದ್ರ, ಪಂಚಮ ಸಾಹಿತ್ಯಗಳ ವರ್ಗೀಕರಣವನ್ನು ಯಾವ ಮುಖದಿಂದ ಖಂಡಿಸುವುದು. ಸಾಹಿತ್ಯ ಸರ್ವಾತ್ಮನಾ ಶುದ್ಧ ರೂಪದಲ್ಲಿ ಸಾಹಿತ್ಯವೇ ಆಗಿರಬೇಕು ಹೊರತು ಅದು ಬೇರೇನಾದರೂ ಆಗಿದ್ದರೆ ಅದು ಸಾಹಿತ್ಯವೂ ಅಲ್ಲ. ಶುದ್ಧವೂ ಅಲ್ಲ, ಸಂಸ್ಕೃತಿ ಸಂವರ್ಧನೆಗೆ ಸಹಾಯಕವೂ ಅಲ್ಲ. ತಮ್ಮ ಹುಟ್ಟಿನ ಕುರಿತು, ಜಾತಿಮತಗಳ ಕುರಿತು ಯಾರಾದರೂ ಅಭಿಮಾನ ಇಟ್ಟುಕೊಂಡಲ್ಲಿ, ಅದು ವೈಯಕ್ತಿಕ ವಿಚಾರ. ಸಾಹಿತ್ಯವೆಂಬುದು ಸಾರ್ವಜನಿಕ – ಸರ್ವಕಾಲೀನ, ಕವಿ, ಸಾಹಿತಿ ಜಾತಿಮತಾತೀತ. ತಮ್ಮ ಅಸದೃಶ ಕೃತಿರತ್ನಗಳಿಂದ ಇಡೀ ಮಾನವ ಸಮಾಜದಲ್ಲಿ ಸಾರ್ವಕಾಲಿಕ ಮನ್ನಣೆ ಪಡೆವ ಅರ್ಹತೆಯುಳ್ಳ ಪಂಪನನ್ನೋ ಕುಮಾರವ್ಯಾಸನನ್ನೋ ರಾಘವಾಂಕನನ್ನೋ ಜಾತಿಮತಗಳ ಪಂಜರದೊಳಗೆ ಪ್ರತಿಷ್ಠಿಸಿ, ಸಂತೋಷ ಪಡುವವರು ಸಾಹಿತ್ಯಕ್ಕೂ ಸಮಾಜಕ್ಕೂ ತುಂಬಾ ಅನ್ಯಾಯವನ್ನೇ ಮಾಡುತ್ತಾರೆ. ದೇಶವನ್ನು ವಿಭಜಿಸಿ, ಆಳಲು ಬಿತ್ತಿದ ಈ ತೆರನ ವಿಷಬೀಜದ ಮೊಳಕೆಗಳನ್ನು ಸಮೂಲಾಗ್ರ ಕಿತ್ತೆಸೆಯದಿದ್ದರೆ ನಮ್ಮ ಸಾಹಿತ್ಯ ಸಂಸ್ಕೃತಿಗಳಿಗೆ ಉಳಿಗಾಲವಿಲ್ಲ.

ಲೋಕದಲ್ಲಿ, ಸಮಾಜದಲ್ಲಿ ಇರುವ ಬಹುಸಂಖ್ಯೆಯ ಜನರು ದೀನರು, ದುಃಖಿತರು, ಸಂಕಷ್ಟ ಸಮಸ್ಯೆಗಳ ಸುಳಿಯಲ್ಲಿ ಸಿಲುಕಿದವರು. ಅವರೆಲ್ಲರ ಕುರಿತು ಸಾಹಿತ್ಯಕಾರನಿಗೆ ಕನಿಕರವಿರಲೇಬೇಕು. ಅದು ಮಾನವೀಯ ಗುಣ, ಸಮಾಜವನ್ನು ಸಾಹಿತ್ಯ ಪ್ರತಿಬಿಂಬಿಸಿದರೆ ಮಾತ್ರ ಅದು ಸ್ವೀಕಾರಾರ್ಹವಾಗುತ್ತದೆ; ಸಮಾಜಿಕರ ದುಃಖದುಮ್ಮಾನಗಳಿಗೆ ಸಾಂತ್ವನ ನೀಡುವಂತಹ ಬರವಣಿಗೆ ಸದಾ ಸ್ವಾಗತ; ಅವಶ್ಯವೂ ಕೂಡ. ಹಿಂದೆ ಹೇಳಿದಂತೆ ಈ ಸಾಂತ್ವನ ಸಹಾನುಭೂತಿಗಳು ಹಿತಕರವಾಗಿರಬೇಕು; ರಚನಾತ್ಮಕವಾಗಿರಬೇಕು. ವಿಧ್ವಂಸಕವಿರಕೂಡದು. ದುಷ್ಟ ಪದ್ಧತಿಗಳನ್ನು, ಕುಟಿಲ ನೀತಿಗಳನ್ನು ಖಂಡಿಸುವಲ್ಲಿ, ಬಳಸುವ ಭಾಷೆ ಮೊನಚಾಗಿದ್ದರೆ ತಪ್ಪೇನಿಲ್ಲ; ಆದರೆ ಅದರ ಪರಿಣಾಮ ಕ್ರಿಮಿನಲ್ ಆಗಬಾರದು. ನಾವು ಇತರರಿಗೆ ಶಾರೀರಿಕವಾಗಿ ಹೊಡೆಯುಬಹುದು, ಕಡಿಯುಬಹುದು; ಆದರೆ ಅವರೇನಾದರೂ ಕೈಕಟ್ಟಿ ಕುಳಿತಿರುವುದಿಲ್ಲವೆಂಬ ಪ್ರಜ್ಞೆ ನಮ್ಮಲ್ಲಿ ಇರಲೇಬೇಕು; ಪರಸ್ಪರ ಎಲ್ಲರೂ ಹೊಡೆದಾಡಿ, ಕಡಿದಾಡಿ ಕೊಂಡಿದ್ದರೆ, ಅದರ ಪರಿಣಾಮ ಸಮಾಜ ರಚನೆಯಲ್ಲ, ಸಮಾಜ ನಾಶ. ಅದು ಸಂಸ್ಕೃತಿಯಲ್ಲ; ಸಂಹಾರ. ಅದು ನಾಗರಿಕತೆಯಲ್ಲ; ಪಶುಬುದ್ಧಿ, ಸಾಹಿತ್ಯ ಯಾವಾಗಲೂ ಸಂಸ್ಕಾರವನ್ನು ಉಂಟುಮಾಡುತ್ತಿರಬೇಕು. ಎಲ್ಲರೂ ಕೂಡಿಬಾಳುವಂತೆ, ಬದುಕು ಸಹ್ಯವಾಗುವಂತೆ ಸಹಾಯ ಮಾಡುವ ಸಾಹಿತ್ಯ ಸದಾ ಸ್ವಾಗತ.

ಜೀವನದ ಆಳವಾದ ಅನುಭವದ ಪರಿಪಕ್ವತೆಯಿಂದ ಸೃಷ್ಟಿಯಾದ ಸಾಹಿತ್ಯ ಶಾಶ್ವತವಾಗಿ ಉಳಿಯುತ್ತದೆ. ಪ್ರಕೃತಿಯನ್ನು, ಪ್ರಪಂಚವನ್ನು, ಸಮಾಜವನ್ನು ತೆರೆದ ಕಣ್ಣುಗಳಿಂದ, ಜಾಗ್ರತ ಬುದ್ಧಿಯಿಂದ ಸದಾ ವೀಕ್ಷಿಸಿ, ಪ್ರತಿಕ್ರಿಯೆಗೊಳ್ಳುವ ವ್ಯುತ್ಪನ್ನ ಮತಿ ಉತ್ತಮ ಸಾಹಿತ್ಯಕಾರನಾಗುತ್ತಾನೆ. ಅಂಥವನ ಮಾತುಗಳನ್ನು ಅರ್ಥ ಹಿಂಬಾಲಿಸುತ್ತದೆ. ಶೈಲಿ ಆತನಿಗೆ ಸ್ವಾಯತ್ತ ಅಲಂಕಾರಿಕ ಪದ ರಚನೆ, ರಸಸ್ಯಂದಿಯಾದ ಸನ್ನಿವೇಶ ಸೃಷ್ಟಿ, ನವನವೋನ್ಮೇಷಶಾಲಿಯಾದ ಪ್ರತಿಭೆ ಇವೆಲ್ಲವೂ ಅವನ ವಶವತಿ. ಸಮೃದ್ಧವಾದ ಜೀವನ ಮಾಡಿದವರ ಒಡನಾಟದಿಂದಲೂ ವಿದ್ವಜ್ಜನರ ಸಹವಾಸದಿಂದಲೂ ಮೇಧಾವಿಗಳು ಬರೆದ ಗ್ರಂಥಗಳ ಅಭ್ಯಾಸದಿಂದಲೂ ಸಾಹಿತ್ಯ ಸೃಷ್ಟಿಗೆ ಸಹಾಯವಾಗುತ್ತದೆ. ಇದೆಲ್ಲವನ್ನೂ ರೂಢಿಸಿಕೊಳ್ಳಬೇಕಾದರೆ ನಿಷ್ಠೆ, ಶ್ರದ್ಧೆ ಇರಬೇಕು. ತಪಸ್ಸು ಎನ್ನುವುದು ಇದನ್ನೇ. ನಾನೃಷಿಃ ಕುರುತೇ ಕಾವ್ಯಂ – ಋಷಿಯಲ್ಲದವ ಕಾವ್ಯ ರಚಿಸಲಾರ ಎಂಬೀ ಮಾತು ಇದರಿಂದಾಗಿಯೇ ಬಂತು. ಸಾಹಿತ್ಯ ಮಾತ್ರವೆಂದೇನು? ಜೀವನದ ಯಾವುದೇ ಕ್ಷೇತ್ರದಲ್ಲಿಯೂ ಯಶಸ್ವಿಯೆನಿಸಬೇಕಾದರೆ ಈ ನಿಷ್ಠೆ ಶ್ರದ್ಧೆಗಳು ಇರಲೇಬೇಕು. 'ಸಾಹಿತ್ಯ ಎಲ್ಲವರಿಗಿಲ್ಲ' ಎಂದ ಸರ್ವಜ್ಞನ ಮಾತಿನ ಅರ್ಥ ಇದೆ. ನಿಷ್ಠಾವಂತರಿಗೆ, ಶ್ರದ್ಧಾವಂತರಿಗೆ, ಅನುಭವ ಶಾಲಿಗಳಿಗೆ, ಪ್ರಯತ್ನಶೀಲರಿಗೆ ಮಾತ್ರ ಸಾಹಿತ್ಯದ ಸಿದ್ಧಿ. ಸಾಹಿತ್ಯಕಾರರು ಕೇವಲ ಭ್ರಮಾಲೋಕದಲ್ಲಿ ತೇಲಾಡುತ್ತಿರದೆ, ಕಟುಸತ್ಯದ ವಾಸ್ತವ ಪ್ರಪಂಚಕ್ಕೆ ಇಳಿದು, ಅಲ್ಲಿನ ಸಿಹಿಕಹಿಗಳೆಲ್ಲವನ್ನೂ

ನುಂಗುವ ನೀಲಕಂಠರಾಗಿಯೂ ಶೋಭಾಜನರಾಗಬೇಕು. ಇಂತು ಸಾಹಿತಿಗಳೆಲ್ಲರೂ ಯಶಸ್ವಿಗಳಾಗಲಿ ಎಂದು ಹಾರೈಸುತ್ತಾ ಕೊನೆಗೆ ಕೆಲವೊಂದು ಸೂಚನೆಗಳನ್ನು ನಿಮ್ಮ ಮುಂದಿಡಲು ಬಯಸುತ್ತೇನೆ.

1. ಸಮ್ಮೇಳನದಲ್ಲಿ ಚರ್ಚಿತವಾದ ಮುಖ್ಯ ವಿಷಯಗಳೆಲ್ಲವನ್ನೂ ಇನ್ನಷ್ಟು ವಿವೇಚಿಸಿ, ಮುಂದಿನ ವರ್ಷ ಆ ಹಾದಿಯಲ್ಲಿ ಹೆಚ್ಚಿನ ಪ್ರಗತಿ ನಡೆಯುವ ಸಾಧನೆ ಮಾಡುವುದು.

2. ಜಿಲ್ಲೆಯ ಸಾಹಿತ್ಯಕಾರರ ಮತ್ತು ಅವರ ಕೃತಿಗಳ ಸಮಗ್ರ ಪರಿಚಯಾತ್ಮಕವಾದೊಂದು ಗ್ರಂಥವನ್ನು ಸಂಪಾದಿಸುವುದು.

3. ಜಿಲ್ಲಾ ಸಾಹಿತ್ಯ ಸಮ್ಮೇಳನವನ್ನು ವರ್ಷಕ್ಕೆ ಒಂದು ಕೇಂದ್ರದಂತೆ ಪ್ರತಿ ತಾಲೂಕು ಕೇಂದ್ರದಲ್ಲಿಯೂ ಪ್ರತಿವರ್ಷವೂ ಸಂಘಟಿಸುವುದು.

4. ಇಲ್ಲಿನ ಖ್ಯಾತ ಸಾಹಿತಿಗಳು ಹಾಗೂ ಅವರ ಕೃತಿಗಳು ಮರೆವೆಯ ಮುಸುಕಿನಲ್ಲಿ ಮುಚ್ಚಿ ಹೋಗದಂತೆ ಆ ಸಾಹಿತಿಗಳ ಮತ್ತು ಅವರ ಕೃತಿಗಳ ಕುರಿತು ಸಮಗ್ರ ಸಂಪುಟವನ್ನು ಹೊರತರುವುದು. ಉದಾ : ಎಂ. ಎನ್. ಕಾಮತ್, ಬೆನಗಲ್ ರಾಮರಾವ್, ಉಗ್ರಾಣ ಮಂಗೇಶರಾವ್, ಕೊರಡ್ಕಲ್ ಶ್ರೀನಿವಾಸ ರಾವ್, ಮರಿಯಪ್ಪ ಭಟ್ಟ, ಪೇಕಲ ರಾಮ ನಾಯಕ, ಜೆ. ವಾಮನ ಭಟ್ಟ, ಕುಡ್ಪಿ ವಾಸುದೇವ ಶೆಣೈ, ಬೇಲಗದ್ದೆ ಅಪ್ಪಯ್ಯ, ಮಚ್ಚಿಮಲೆ ಶಂಕರನಾರಾಯಣ ರಾವ್, ಎಂ. ವಿ. ಪ್ರಭು – ಇತ್ಯಾದಿ.

5. ಮಂಗಳೂರು ಮಿತ್ರ ಮಂಡಳಿ, ಕಾಂತಾವರ ಕನ್ನಡ ಸಂಘ ಇಷ್ಟರಲ್ಲೇ ಈ ಜಿಲ್ಲೆಯ ಕವಿಗಳ ಪ್ರಾತಿನಿಧಿಕ ಕವನ ಸಂಗ್ರಹಗಳನ್ನು ಹೊರತಂದದ್ದು ಸ್ತುತ್ಯ. ಅದರಂತೆ, ಇಲ್ಲಿನ ಕತೆಗಾರರ, ಏಕಾಂಕ ನಾಟಕಕಾರರ ಪ್ರಬಂಧ ಹರಟೆಗಾರರ, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಉತ್ತಮ ಪ್ರಾತಿನಿಧಿಕ ಸಂಗ್ರಹ ಗ್ರಂಥಗಳು ಪ್ರಕಟವಾಗಬೇಕು.

6. ಪುಸ್ತಕಗಳನ್ನು ಪಡೆದುಕೊಂಡು ಓದುವ ಅಭ್ಯಾಸವನ್ನು ಪೋಷಿಸಬೇಕು. ಕೇರಳದಂತಹ ಕಡಿಮೆ ಆರ್ಥಿಕ ಸಂಪನ್ನತೆಯ ರಾಜ್ಯದಲ್ಲಿ ಕೂಡ ಈ ವಿಷಯದಲ್ಲಿರುವ ಪ್ರೋತ್ಸಾಹ **ನೋಡಿದರೆ**, ಇದು ಕನ್ನಡಿಗರ ಆರ್ಥಿಕ ಸಮಸ್ಯೆಯಲ್ಲ. ಕೇವಲ ಮಾನಸಿಕ ನಿರ್ಧಾರದ ಪ್ರಶ್ನೆ ಎಂದು ತಿಳಿಯದಿರದು.

7. ಮನೆಮನೆಯಲ್ಲಿ ಗ್ರಂಥಭಂಡಾರದ ಚಳವಳಿ ಪ್ರಬಲಗೊಳ್ಳಬೇಕು. ಜಿಲ್ಲೆಯಲ್ಲಿ ಪ್ರಕಟವಾದ ಪ್ರತಿಯೊಂದು ಪುಸ್ತಕದ ಸಾವಿರ ಪ್ರತಿಯಾದರೂ ಕಡಿಮೆ ಪಕ್ಷ ಒಮ್ಮೆಗೆ ಮಾರಾಟವಾಗುವ ಸನ್ನಿವೇಶ ಒದಗಬೇಕು.

8. ಸಹಕಾರೀ ಇಲಾಖೆಯ ಸಕ್ರಿಯ ಸಹಾಯ ಪಡೆದು ಕೇರಳ ಸಹಕಾರೀ ಸಾಹಿತ್ಯ ಪ್ರವರ್ತಕ ಸಂಘದಂತಹ ಒಂದು ಪ್ರಕಾಶನ ಸಂಸ್ಥೆ ಪ್ರಾರಂಭ ಮಾಡ

ತಕ್ಕದ್ದು. ಬರೆದ ಗ್ರಂಥಗಳು ಪ್ರಕಟಗೊಳ್ಳಲು, ಪ್ರಕಟಿತ ಪುಸ್ತಕಗಳಿಗೆ ಸರಿಯಾದ ರಾಯಧನ ದೊರಕಲು ಇದರಿಂದ ಸಹಾಯವಾಗುತ್ತದೆ.

9. ವಿದ್ಯಾರ್ಥಿ ಹಾಗೂ ಯುವ ಪ್ರತಿಭೆಗಳನ್ನು ಉತ್ತೇಜಿಸುವುದು. ಅವರಲ್ಲಿರುವ ಅದಮ್ಯ ಶಕ್ತಿಯನ್ನು ಸಾಹಿತ್ಯದ ಕಡೆಗೆ ಹರಿಸುವುದು. ಇದರಿಂದ ಇಂದು ರಾಜಕೀಯವಾಗಿಯೋ ಅರಾಜಕೀಯವಾಗಿಯೋ ಎಲ್ಲೆಡೆ ಏರುತ್ತಾ ಹೋಗುವ ಬಿಸಿ ಕಡಿಮೆಯಾಗಿ ಸಾಹಿತ್ಯ ಸಂಸ್ಕೃತಿಗಳ ಪ್ರಸಾರದ ಜತೆಗೆ ಸಮಾಜದಲ್ಲಿಯೂ ವಿದ್ಯಾಲಯಗಳಲ್ಲಿಯೂ ಶಿಸ್ತು, ಸಂಯಮ ಏರ್ಪಡುವುದು. ಈ ದಿಸೆಯಲ್ಲಿ ಅಧ್ಯಾಪಕರು ಮತ್ತು ಹೆತ್ತವರು ಹೆಚ್ಚಿನ ಆಸಕ್ತಿವಹಿಸುವುದು ಒಳ್ಳೆಯದು.

10. ಉತ್ತಮ ಗ್ರಂಥಗಳನ್ನು ಅಲ್ಲಲ್ಲಿ ವಿದ್ಯಾಲಯಗಳಲ್ಲಿಯೂ ನಗರ ಗ್ರಾಮ ಕೇಂದ್ರಗಳಲ್ಲಿಯೂ ವಿದ್ವಾಂಸರ ಮೂಲಕ ಸಾಹಿತ್ಯ ವಿಚಾರಗೋಷ್ಠಿಗಳನ್ನು ಏರ್ಪಡಿಸುವುದು.

11. ಕೇರಳದ ಕಬಂಧಬಾಹು ಆಕ್ರಮಿಸಿ, ನುಂಗಿ ನೀರ್ಕುಡಿವ ಮೊದಲೇ, ಕಾಸರಗೋಡಿನ ಗಡಿ ಪ್ರದೇಶದಲ್ಲಿ, ಅಲ್ಲಿನ ಕನ್ನಡಿಗರು ನಿರಂತರ ಜೀವನ್ಮರಣ ಹೋರಾಟಮಾಡಿ ಉಳಿಸಲು ಯತ್ನಿಸುತ್ತಿರುವ ಕನ್ನಡ ಸಾಹಿತ್ಯ ಸಂಸ್ಕೃತಿಗಳ ರಕ್ಷಣೆಗೆ ಜಿಲ್ಲೆಯವರ ಉದಾರ ಸಹಾಯ ಸಹಾನುಭೂತಿ ಸಂರಕ್ಷಣೆ ನೀಡುವುದು.

●

ಕಾವ್ಯ : ಜಾಗೃತ ಚೇತನದ ಪ್ರತಿಬಿಂಬ

ಎನ್ನ ಜನನಿಯ ಪುಣ್ಯಗರ್ಭದೊಳು ನಾ ಜನಿಸೆ
ನೆರವಾದ ಆ ಅಗೋಚರ ಶಕ್ತಿಗೆ;
ಎನ್ನ ಮೈಮನಗಳಿಗೆ ಬಾವನ್ನ ತಂಪೆನಿಸೆ
ಕಾಯುತಿಹ ಕಾರುಣ್ಯದಾ ಮೂರ್ತಿಗೆ;
ಎನ್ನ ಬಾಳಿನ ಬಟ್ಟಲಲಿ ಜೇನನೆರೆದೆರೆದು
ಬದುಕ ಸವಿಯಾಗಿಸಿದ ಆ ನಲ್ಮೆಗೆ;
ಎನ್ನ ತಗ್ಗಿದ ಶಿರಕೆ ಹರಕೆಯಕ್ಷತೆಸುರಿದು
ಬೆಳ್ಗೊಡೆಯ ನೆರಳಿತ್ತ ಆ ಬಲ್ಮೆಗೆ;

ಸಲಿಸುವೆ ಕೃತಜ್ಞತೆಯ ಋಣವೆನಗೆ ಹಿರಿದು;
ಸಲಿಸುವೆನು ವಂದನೆಯ ಬೊಗಸೆ ಕೈಮುಗಿದು;
ಸಲಿಸುವೆನು ಸ್ನೇಹವನು ಮನಸಾರೆ ನೆನೆದು;
ಸಲಿಪೆ ಸರ್ವಸ್ವವನು – ಸುಖಿಯು ಹೊರೆಯಿಳಿದು!

ಹದಿನೈದು ವರ್ಷಗಳ ಹಿಂದೆ, ಇದೇ ನವಂಬರ ಒಂದನೆಯ ತೇದಿಯಂದು, ಇದೇ ತುಳುನಾಡಿನ ತಂಪು ನೆಲದಿಂದ, ಯಾವ ಕುಟಿಲ ರಾಜಕೀಯದ ರಾಕ್ಷಸ ಮುಷ್ಟಿಯ ಪಶುಶಕ್ತಿಯು, ಈ ಜೀವಸಸಿಯನ್ನು ಕೇರಳದ ಮರುಧರೆಗೆ ಕಿತ್ತೊಗೆಯಿತೋ ಆ ನೃಶಂಸತೆಗೆ, ಬಹುಶಃ ಮನಕರಗಿದ ನೀವು ಹೀಗೊಮ್ಮೆ ಮಮತೆಯಿಂದ ನಿಮ್ಮೀ ತೆಂಗಿನ ಕಂಗಿನ ತೋಟದ ನೆರಳಿಗೆ ಅದೇ ಸಸಿಯನ್ನು ತಂದು ನೀರೆರೆದು ನಟ್ಟಂತೆ, ನನ್ನನ್ನು ಇಂದಿನ ಕವಿಗೋಷ್ಠಿಯ ಅಧ್ಯಕ್ಷಪೀಠದಲ್ಲಿ ಕೂರಿಸಿ ಮೆರೆಸಿ ಮನ್ನಣೆ

1971ರ ನವಂಬರ 1ರಂದು ಕಾರ್ಕಳದಲ್ಲಿ ಜರಗಿದ ದಕ್ಷಿಣ ಕನ್ನಡ ಜಿಲ್ಲಾ ಪ್ರಥಮ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷ ಭಾಷಣ

ಮಾಡಿದ್ದೀರಿ. ನಿಮ್ಮ ಹೃದಯದ ಉದಾರತೆಗೆ, ಪ್ರೀತಿವಿಶ್ವಾಸಗಳಿಗೆ ನಾನು ಸಂಬಂಧಪಟ್ಟ ನಿಮ್ಮೆಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ವಿದ್ಯೆಯಲ್ಲಿ, ಬುದ್ಧಿಯಲ್ಲಿ, ವಯಸ್ಸಿನಲ್ಲಿ, ಯೋಗ್ಯತೆಯಲ್ಲಿ ಹಿರಿಯರಾದವರು ಇಲ್ಲಿ ವಿರಾಜಮಾನರಾಗಿ ಇದ್ದಾರೆ. ಅವರೆಲ್ಲರ ಶುಭಾಶಯಗಳಿಂದ ನಾನೀ ಹೊಣೆಗಾರಿಕೆಯ ಕಾರ್ಯವನ್ನು ಯಥಾಸಾಂಗವಾಗಿ ನಿರ್ವಹಿಸಲು ಶಕ್ತನಾಗುವೆನೆಂದು ನಂಬಿದ್ದೇನೆ. ಆ ನಂಬಿಕೆ ಭರವಸೆಗಳಿಂದ ನಿಮ್ಮ ಮುಂದೆ ಈ ಕೆಲವು ಮಾತುಗಳನ್ನು ನಿವೇದಿಸಿಕೊಳ್ಳಲು ಅನುಮತಿ ಯಾಚಿಸುತ್ತೇನೆ.

ಕನ್ನಡ ಕಾವ್ಯಗಂಗೋತ್ರಿಯ ಉಗಮ ಎಂದಿಗೆ ಆಯಿತು ಎಂಬುದರ ಕುರಿತು ನಿಷ್ಕೃಷ್ಟವಾಗಿ ತಿಳಿಸತಕ್ಕ ಆಧಾರಗಳು, ಕಾಲದ ತೆರೆಯ ಮರೆಗೆ ಸರಿದು ಅಗೋಚರವಾಗಿ ಹೋಗಿದ್ದರೂ, ಕ್ರಿ. ಶ. ಏಳನೆಯ ಶತಮಾನದ್ದೆಂದು ಹೇಳಲಾದ ಬಾದಾಮಿಯ ಶಾಸನದ ಈ ತ್ರಿಪದಿ ಆ ಕಾಲಕ್ಕೇ ಕನ್ನಡದ ಕಾವ್ಯಚೇತನ ಎಷ್ಟು ಪ್ರಬುದ್ಧವಾಗಿತ್ತೆಂಬುದನ್ನು ಮನವರಿಕೆ ಮಾಡಿಕೊಳ್ಳಲು ನಮಗೆ ಸಹಾಯಕವಾಗುತ್ತದೆ:

"ಸಾಧುಗೆ ಸಾಧು ಮಾಧುರ್ಯ್ಯಂಗೆ ಮಾಧುರ್ಯ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ್ – ಪೆಱತಲ್ಲ !"

ಕನ್ನಡಿಗನಾದ ಓರ್ವ ವ್ಯಕ್ತಿಯ ಚಿತ್ರವನ್ನು ತೋರಿಸುವ ಈ ತ್ರಿಪದಿ, ಅಂದಿನ ಕನ್ನಡಿಗರ ಧೀರೋದಾತ್ತ ವ್ಯಕ್ತಿತ್ವವನ್ನೂ ತಿಳಿಸುತ್ತದೆ. ಇಂದಿನ ಮತ್ತು ಮುಂದಿನ ಕನ್ನಡಿಗರಿಗೂ ಇದು ಒಂದು ಆದರ್ಶವನ್ನು ತೋರಿಸುವಂತಿದೆ.

"ಸುರಚಾಪಂಬೋಲೆ ವಿದ್ಯುಲ್ಲತೆಗಳತೆಜವೋಲ್ ಮಂಜುವೋಲ್‌ತೋಱ ಬೇಗಂ ಪಿರಿಗುಂ ಶ್ರೀ ರೂಪಲೀಲಾ ಧನವಿಭವ ಮಹಾರಾಶಿಗಳ್ ನಿಲ್ಲವಾರ್ಗಂ..............."

ಎಂಬೀ ಪದ್ಯಪಂಕ್ತಿಗಳುಳ್ಳ ಶ್ರವಣಬೆಳಗೊಳದ ಶಾಸನಪದ್ಯವನ್ನು ಪರೀಕ್ಷಿಸಿದರೆ ಅಂದಿನವರ ಕವಿತಾಪ್ರತಿಭೆ, ಅಲಂಕಾರ, ಪ್ರಯೋಗಚಾತುರ್ಯವೇ ಮುಂತಾದ ಕಾವ್ಯಗುಣಗಳನ್ನು ನಾವು ಗಮನಿಸಬೇಕು. ಆ ಕಾಲಕ್ಕೆ ಹಿಂದೆಯೇ ಕನ್ನಡ ಕವಿತಾರಚನೆ ತೊಡಗಿತ್ತೆಂದು ನಿರ್ವಿವಾದವಾಗಿ ಹೇಳಬಹುದು. ಕ್ರಿ.ಶ. ಒಂಬತ್ತನೆಯ ಶತಮಾನದಲ್ಲಿ ಕವಿರಾಜಮಾರ್ಗದಂತಹ ಲಾಕ್ಷಣಿಕ ಗ್ರಂಥವೊಂದು ರಚಿತವಾಗಬೇಕಿದ್ದರೆ ಅದಕ್ಕಿಂತ ಹಿಂದೆ ಅನೇಕ ಕವಿಗಳು ಹಲವಾರು ಮಾರ್ಗಗಳನ್ನು ಹಿಡಿದು ಕಾವ್ಯರಚನೆಗೆ ತೊಡಗಿದ್ದರೆಂದೂ ಹಾಗಾಗಿ ಅವರಿಗೆಲ್ಲಾ ಒಂದು ರಾಜಮಾರ್ಗವನ್ನು ನೃಪತುಂಗನು ನಿರ್ದೇಶಿಸಿದನೆಂದೂ ತಿಳಿಯಲಾಗುತ್ತದೆ. ಚತ್ತಾಣ, ಬೆದಂಡೆಯಂತಹ ಕಾವ್ಯರೂಪಗಳ ವಿವರ, 'ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತಮತಿಗಳ್' ಆದ ನಾಡವರ್ಗಗಳ ಪ್ರಸ್ತಾಪ, ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ, ಪರಮ

ಶ್ರೀವಿಜಯ, ಕವೀಶ್ವರ ಮುಂತಾದ ಕವಿಗಳ ನಾಮೋಲ್ಲೇಖ – ಇವುಗಳೆಲ್ಲಾ ಅಂದಿಗೆ ಸಮೃದ್ಧವಾಗಿ ಬೆಳೆದಿದ್ದ ಕನ್ನಡ ಕಾವ್ಯ ಸಂಪತ್ತನ್ನು ಸೂಚಿಸಲು ಸಾಕಾಗಿವೆ.

ಕನ್ನಡದಲ್ಲಿ ಮೊದಲ ಸಾಹಿತ್ಯಸೃಷ್ಟಿ ಮಾಡಿದವರು ಜೈನ ಕವಿಗಳೇ ಎನ್ನಬಹುದು. ಜನಪ್ರಿಯವಾದ ರಾಮಾಯಣ ಭಾರತದಂತಹ ಕಾವ್ಯ ಕಥಾವಸ್ತುಗಳನ್ನು ಎತ್ತಿಕೊಂಡು ಲೌಕಿಕ ಕಾವ್ಯಗಳನ್ನೂ, ಅದರೊಂದಿಗೆ ತೀರ್ಥಂಕರ ಚರಿತೆಗಳನ್ನಾಧರಿಸಿ ಧಾರ್ಮಿಕ ಕಾವ್ಯಗಳನ್ನೂ ಅವರು ಬರೆದರು. ತಮ್ಮ ಚಂಪೂ ಕಾವ್ಯಗಳಲ್ಲಿ ಗದ್ಯಪದ್ಯಗಳೆರಡನ್ನೂ ಸವ್ಯಸಾಚಿಸಿ ಪ್ರಯೋಗಿಸಿ ಕಾವ್ಯಧವಳಗಿರಿಯ ಉನ್ನತ ಕೀರ್ತಿ ಶಿಖರವನ್ನೇರಿ ನಿಂತರು. ಪಂಪ, ಪೊನ್ನ, ರನ್ನಾದಿ ಜೈನ ಕವಿಗಳಂತೆ, ರುದ್ರಭಟ್ಟ, ಷಡಕ್ಷರಿ – ಇವರೇ ಮುಂತಾದ ಇತರ ಕವಿಗಳೂ ಶ್ರೇಷ್ಠ ಕಾವ್ಯಗಳನ್ನು ರಚಿಸಿ ಕನ್ನಡ ಜನಮನವನ್ನು ರಸ ರೋಮಾಂಚನದಲ್ಲಿ ಅದ್ದಿದರು!

ಕನ್ನಡದ ಉಪನಿಷತ್ತೆಂದು ಪ್ರಶಂಸನೀಯವಾದ ವಚನಸಾಹಿತ್ಯದ ಕೊಡುಗೆ ಆಮೇಲಿನದು. ಅಲ್ಲಮಪ್ರಭು, ಬಸವೇಶ್ವರ, ಅಕ್ಕಮಹಾದೇವಿ ಮುಂತಾದ ಶಿವಶರಣರು ಅಂದಿನ ಸಂಪ್ರದಾಯಪದ್ಧತಿಯಲ್ಲಿರುವ ಡಾಂಭಿಕತೆಯನ್ನು ನಿಷೇಧಿಸಿ, ಸಮಾಜದಲ್ಲಿ ಸಮಾನತೆ ಸೋದರತೆಗಳನ್ನು ಸಾರುವ ಸರಳವೂ ಅರ್ಥ ಗಂಭೀರವೂ ಆದ ವಿಚಾರಗಳನ್ನು ವಚನಸಾಹಿತ್ಯ ರೂಪದಲ್ಲಿ ಹೊರಹೊಮ್ಮಿಸಿ ಪದ್ಯ ಗಂಧಿಯಾದೀ ಕಾವ್ಯ ಪರಿಮಳ ನಾಡಿನಾದ್ಯಂತ ಹರಡುವಂತೆ ಮಾಡಿದರು.

ಸಾಮಾನ್ಯ ಜನತೆಗೂ ಅರ್ಥವಾಗುವ ಶೈಲಿ ಕನ್ನಡದಲ್ಲಿ ಇಂತು ಸಿದ್ಧವಾಗುತ್ತಿದ್ದಂತೆ. ಕನ್ನಡದ್ದೇ ಆದ ಸ್ವತಂತ್ರ ಛಂದೋ ಗತಿಯೊಂದು ಅಂದು ರೂಪಿತವಾಯಿತು. ರಗಳೆಯ ಕವಿಯೆನಿಸಿದ ಹರಿಹರ, ಆತನ ಸೋದರಳಿಯನೂ ಷಟ್ಪದಿ ಪ್ರವರ್ತಕನೂ ಎನಿಸಿದ ರಾಘವಾಂಕ ಇವರು ನವೀನಮಾರ್ಗವೊಂದನ್ನು ಕಂಡುಕೊಂಡರು. ಆರ್ಯಾವೃತ್ತದ ತದ್ಭವರೂಪಿಯಾದ ಕಂದವೃತ್ತವೊಂದೇ ಹಿಂದೆ ಪ್ರಯೋಗದಲ್ಲಿದ್ದು, 'ಖ್ಯಾತ ಕರ್ನಾಟಕ'ವೆನಿಸಿದಾ ವೃತ್ತಗಳ ಮಹಾಪೂರದಿಂದ ಕೊಳೆತುಹೋಗಲು ಸಿದ್ಧವಾಗಿದ್ದ ಕನ್ನಡದ ಕಾವ್ಯಕೃಷಿ ಆಗೊಮ್ಮೆ ಪುನಶ್ಚೇತನಗೊಂಡಿತು. ತ್ರಿಪದಿ, ಸಾಂಗತ್ಯ, ಷಟ್ಪದಿಗಳ ಸತ್ವಪೂರ್ಣವಾದ ಸಾರವನ್ನು ಹೀರಿ ಹುಲುಸಾಗಿ ಬೆಳದು ನಿಂತಿತು. ಕುಮಾರವ್ಯಾಸ, ಲಕ್ಷ್ಮೀಶನಂತಹವರು, ತಮ್ಮ ಅಮರ ಕೃತಿಗಳಾದ ಗದುಗಿನ ಭಾರತ, ಜೈಮಿನಿ ಭಾರತಗಳನ್ನು ರಚಿಸಿ, ಷಟ್ಪದಿಗಳ ಝೇಂಕಾರವನ್ನು ಮೊಳಗಿಸಿದರು. ಚಾಮರಸ ವಿರೂಪಾಕ್ಷ ಪಂಡಿತರೂ ಆ ಹಾದಿಯಲ್ಲಿಯೇ ಮುನ್ನಡೆದು ಪ್ರಸಿದ್ಧಿ ಪಡೆದರು.

ಕನ್ನಡದಲ್ಲಿ ಇಂತು ದೇಶೀಮಾರ್ಗವೊಂದು ರೂಪುಗೊಳ್ಳುತ್ತಿದ್ದ ಕಾಲದಲ್ಲಿಯೇ ದಾಸಸಾಹಿತ್ಯದ ಸೃಷ್ಟಿಯಾಯಿತು. ಪುರಂದರದಾಸ, ಕನಕದಾಸ, ಜಗನ್ನಾಥದಾಸ, ವಿಜಯದಾಸ, ವ್ಯಾಸರಾಯರೇ ಮುಂತಾದವರು ಭಕ್ತಿ ಪ್ರಧಾನವಾದ ಪದ್ಯಗಳನ್ನು

ಬರೆದು ಜನಮನದ ಸಂಸ್ಕೃತಿಯ ಮಟ್ಟವನ್ನು ಮೇಲೆತ್ತಲು ನೆರವಾದರು. ನಿಜಗುಣ ಶಿವಯೋಗಿ, ಮುಪ್ಪಿನ ಷಡಕ್ಷರಿ, ಸರ್ವಭೂಷಣ ಮುಂತಾದವರೂ ಶಿವಗೀತೆಗಳನ್ನು ರಚಿಸಿ ಹಾಡಿದರು. ಜೀವನದ ಕಹಿ ಸಿಹಿಗಳ ನಾನಾ ಅನುಭವಗಳನ್ನು ನೇರಾಗಿ ಮನಮುಟ್ಟುವಂತೆ ಸಹಸ್ರಾರು ತ್ರಿಪದಿಗಳ ಮೂಲಕ ಬರೆದು ಸರ್ವಜ್ಞನು ಕನ್ನಡ ಜನತೆಯ ಅತ್ಯಂತ ಜನಪ್ರಿಯ ಕವಿಯೆನಿಸಿದನು. ಇದೇ ಕಾಲದಲ್ಲಿ ಸಾಂಗತ್ಯಕಾರರೂ ಕನ್ನಡ ಕಾವ್ಯಸತ್ವವನ್ನು ಹೆಚ್ಚಿಸಲು ನೆರವಾದರು. ಶಿಶುಮಾಯಣ, ನಂಜುಂಡ, ರತ್ನಾಕರವರ್ಣಿ, ಹೊನ್ನಮ್ಮ ಮುಂತಾದವರು ಇವರಲ್ಲಿ ಪ್ರಸಿದ್ಧರು. ಸಾಂಗತ್ಯಕಾರರಲ್ಲಿ ಭರತೇಶ ವೈಭವಕರ್ತೃವಾದ ರತ್ನಾಕರವರ್ಣಿಯೇ ಸಾರ್ವಭೌಮ ಕವಿ. ಆತನು ಈ ದಕ್ಷಿಣ ಕನ್ನಡ ಜಿಲ್ಲೆಯವನೆಂಬುದೂ ಹೆಮ್ಮೆಯ ಮಾತಾಗಿದೆ. ಭೋಗ – ಯೋಗಗಳನ್ನು ಸಮನ್ವಯಗೊಳಿಸಿ ಜೀವನದ ಪೂರ್ಣತೆಯ ಮಹಾದರ್ಶನವನ್ನು ಮಾಡಿಸಿದ ಮಹೋನ್ನತ ಕವಿಯೀತನು. ತುಳುನಾಡಿನ ತಗ್ಗು ನೆಲದಿಂದ ಪಶ್ಚಿಮ ಘಟ್ಟದ ತುತ್ತತುದಿಯನ್ನೇರಿ ಕನ್ನಡ ನಾಡಿನ ಸಮಗ್ರತೆಯಲ್ಲಿ ತನ್ನ ಧವಳಕೀರ್ತಿಯನ್ನು ಹಬ್ಬಿಸಿದ ಇಲ್ಲಿನ ಮೊತ್ತಮೊದಲಿಗನಾದ ಮಹಾಕವಿ ರತ್ನಾಕರವರ್ಣಿ!

ಹೊಸಗನ್ನಡ ಸಾಹಿತ್ಯದ ನವಪ್ರಬೋಧನದ ಮುಂಗೋಳಿ ಎನಿಸಿದ ಮುದ್ದಣನು ತುಳುನಾಡಿನ ಕೀರ್ತಿಯನ್ನು ಮುಗಿಲು ಮುಟ್ಟಿಸಿದ ಎರಡನೆಯ ಮಹಾಕವಿ. 'ಕನ್ನಡಂ ಕತ್ತುರಿಯಲ್ತೆ' ಎಂದು ಘಂಟಾ ಘೋಷವಾಗಿ ಸಾರಿ ಕಸ್ತೂರಿಯ ಪರಿಮಳವನ್ನು ಹೊರಗೆಲ್ಲಿಯೂ ಹುಡುಕದಿರಿ, ಇಲ್ಲಿಯೇ ಇದೆ ಎಂದು ತನ್ನ ಕಾವ್ಯ ಕರಂಡಕವನ್ನು ಬಿಚ್ಚಿ ತೋರಿಸಿದ ಅಮರ ಕವಿಯಾತನು. ಬ್ರಿಟಿಷರ ನೊಗದ ಭಾರವನ್ನು ಕಿತ್ತೊಗೆವ ವೀರಾವೇಶವೂ, ಭಿನ್ನ ವಿಚ್ಛಿನ್ನವಾದ ಕನ್ನಡನಾಡು ಏಕೀಕೃತವಾಗಬೇಕೆಂಬ ಹಂಬಲವೂ ಜತೆಗೂಡಿ ಹೊಸಗನ್ನಡದ ಆದಿಯ ಕವಿಗಳು ರಾಷ್ಟ್ರಪ್ರೇಮ, ನಾಡಿನ ಏಕೀಕರಣ, ಇವುಗಳ ಹಿನ್ನೆಲೆಯಲ್ಲಿ, ರಾಜಕೀಯ ಸಮಾಜಿಕ ವಿಚಾರ ಕ್ರಾಂತಿಗಳೂ ಕೂಡಿ, ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಅಭ್ಯಾಸ ಬಲದಿಂದ ನವೀನ ದೃಷ್ಟಿಯುಳ್ಳವರಾಗಿ ಹೊಸಹಾದಿ ಹಿಡಿದು ಮುನ್ನಡೆದರು. ಮೈಸೂರಿನ ಕರ್ನಾಟಕ ಸಂಘಗಳು, ಬೆಂಗಳೂರಿನ ಸಾಹಿತ್ಯ ಪರಿಷತ್ತು, ಧಾರವಾಡದ ವಿದ್ಯಾವರ್ಧಕ ಸಂಘ, ಗೆಳೆಯರ ಗುಂಪುಗಳು, ಮಂಗಳೂರು ಉಡುಪಿಗಳ ಮಿತ್ರಮಂಡಳಿ ಕಿರಿಯರ ಪ್ರಪಂಚಗಳು, ಅಂತೆಯೇ ಹೈದರಾಬಾದು, ಕೊಡಗು ಮುಂತಾದ ಕಡೆಗಳಲ್ಲಿ ಹಲವಾರು ಸಂಘ ಸಂಸ್ಥೆಗಳು ಸ್ಥಾಪಿತವಾಗಿ ಅವುಗಳ ಮೂಲಕವೂ ಜಯ ಕರ್ನಾಟಕ, ಸ್ವಧರ್ಮ, ವಾಗ್ಭೂಷಣ, ಜಯಂತಿ, ಪ್ರಬುದ್ಧಕರ್ನಾಟಕ, ಸುವಾಸಿನಿ, ಶ್ರೀಕೃಷ್ಣ ಸೂಕ್ತಿ, ಸ್ವದೇಶಾಭಿಮಾನಿ, ಕಂಠೀರವ, ರಾಷ್ಟ್ರಬಂಧು, ನವಯುಗ ಮುಂತಾದ ಪತ್ರಿಕೆಗಳ ಮೂಲಕವೂ ನಾಡಿನುದ್ದಗಲದಲ್ಲಿ ಉಂಟಾದ ಅಭೂತಪೂರ್ವಜನಜಾಗೃತಿಯ ಫಲವಾಗಿಯೂ, ಹೊಸಗನ್ನಡ ಸಾಹಿತ್ಯದ ನವೋದಯಕಾಲ ಆರಂಭವಾಯಿತು.

ಪಂಜೆ, ಬಿ. ಎಂ. ಶ್ರೀ, ಶಾಂತಕವಿ, ಗೋವಿಂದ ಪೈ, ಡಿ. ವಿ. ಜಿ. ಮೊದಲಾದ ಆಚಾರ್ಯ ಪುರುಷರು ಹೊಸಕಾಲದ ಕವಿತೆಗೆ ಮಾರ್ಗದರ್ಶಕರಾದರು. ಮುಳಿಯ, ಕಾಮತ್, ಬೇಂದ್ರೆ, ಕಡೆಂಗೋಡ್ಲು, ಕುವೆಂಪು, ಕಾರಂತ, ಗೋಕಾಕ, ಸಾಲಿ, ಬೆಟಗೇರಿ, ತೀ. ನಂ. ಶ್ರೀ.. ವೀ. ಸೀ. ಪು. ತಿ. ನ. ಮುಗಳಿ, ದೇಸಾಯಿ, ರಾಜರತ್ನಂ ಪ್ರಭೃತಿ ಪ್ರತಿಭಾವಂತರು ಹಲವು ಮಂದಿ ತರುಣರಿಗೆ ಸ್ಫೂರ್ತಿಯಿತ್ತು ಮುನ್ನಡೆಸಿದರು.

ತುಳುನಾಡೆಂದು ಖ್ಯಾತವಾದೀ ಜಿಲ್ಲೆಯಲ್ಲಿ ಹಿಂದಿನಿಂದಲೂ ಜಾನಪದ ಜನ ಪ್ರಿಯ ಭಾಷೆಯಾಗಿ ತುಳುವೇ ಪ್ರಭಾವ ಬೀರಿದ್ದರೂ ಗ್ರಂಥಸ್ಥಭಾಷೆ ಕನ್ನಡವೇ ಆಗಿತ್ತು; ಆಗಿದೆ. ಈ ಜಿಲ್ಲೆಯಲ್ಲಿ ತುಳು ಮಾತೃಭಾಷೆಯಾಗಿರುವವರು ಮಾತ್ರವಲ್ಲದೆ, ಕೊಂಕಣಿ, ಮರಾಠಿ, ಮಲೆಯಾಳೀ ಮಾತೃಭಾಷೆಯವರೂ ಕನ್ನಡದಲ್ಲಿಯೇ ಕೃತಿ ರಚನೆ ಮಾಡಿದ್ದಾರೆ; ಮಾಡುತ್ತಿದ್ದಾರೆ. ತುಳುಭಾಷೆಯಲ್ಲಿ ಹಳ್ಳಿಯ ಜನರ ಮುಖೋದ್ಗತವಾಗಿ ಬಂದಿರುವ ಪಾಡ್ದನಗಳು, ಅಲ್ಲಲ್ಲಿ ತುಂಡುಪದಗಳು ತುಳು ಸಾಹಿತ್ಯಮಾಲೆಯ ಕೆಲ ಗ್ರಂಥಗಳು ಅದಕ್ಕಿಂತಲೂ ಹಿಂದೆ ಜರ್ಮನ್ ಮಿಶನರಿಗಳೂ ಅವರ ಅನುಯಾಯಿಗಳೂ ಮಂಗಳೂರು ಬಾಸೆಲ್ ಮಿಶನ್ ಮುದ್ರಣಾಲಯದಲ್ಲಿ ಅಚ್ಚಿಸಿದ ಕೆಲ ಪುಸ್ತಕಗಳು, ತುಳು ಯಕ್ಷಗಾನ ಪ್ರಸಂಗಗಳು, ಈಚೆಗೆ ತುಳು ಕೂಟ ತುಳುಸಿರಿ ಪತ್ರಿಕೆಗಳ ಮೂಲಕ ಪ್ರಚಾರವಾಗುತ್ತಿರುವ ಸಾಹಿತ್ಯ, ಕೆಲ ತುಳು ನಾಟಕಗಳು ಇವನ್ನು ಉಳಿದರೆ ವಿಪುಲ ಸಾಹಿತ್ಯವೇನೂ ಆ ಭಾಷೆಯಲ್ಲಿ ಸೃಷ್ಟಿಯಾಗಿಲ್ಲ. ಪ್ರತಿಭಾಶಾಲಿಗಳಾದ ಅನೇಕ ಮಂದಿ ತುಳುಜನರು ಕನ್ನಡದಲ್ಲಿಯೇ ತಮ್ಮ ಬರವಣಿಗೆಯನ್ನು ಮುಂದುವರಿಸುತ್ತಾ ಬಂದಿರುವವರು. ಹೀಗಾಗಿ ಈ ಜಿಲ್ಲೆಯಲ್ಲಿ ಹಿಂದಿನ ಕಾಲದಿಂದಲೇ ಕನ್ನಡವು ಬರವಣಿಗೆಯ ಮಾಧ್ಯಮವಾಗಿದ್ದುದರಿಂದ ಕನ್ನಡ ಭಾಷೆಯಲ್ಲಿ ಪ್ರಾಚೀನ ಕಾಲದಿಂದಲೇ ಇಲ್ಲಿ ಕಾವ್ಯಸೃಷ್ಟಿಯಾಗಿರಬೇಕೆಂದು ಊಹಿಸಬಹುದಾಗಿದೆ. ಹಾಗಿದ್ದರೂ ಉಪಲಬ್ಧವಾದ ಕನ್ನಡ ಕಾವ್ಯಗಳು ಕ್ರಿ.ಶ. ಹನ್ನೆರಡನೆಯ ಶತಮಾನದಿಂದ ಈಚೆಗಿನವುಗಳೇ ಆಗಿವೆ.

ಉದ್ಭಟ ಕಾವ್ಯವನ್ನು ಬರೆದ ಸೋಮರಸ, ಜ್ಞಾನ ಚಂದ್ರಾಭ್ಯುದಯ ಕರ್ತೃ ಕಲ್ಯಾಣಕೀರ್ತಿ, ಜೀವಂಧರ ಷಟ್ಪದಿ ರಚಯಿತ ಕೋಟೇಶ್ವರ ಕವಿ, ಸಾಳ್ವ ಭಾರತ ರಸ ರತ್ನಾಕರಗಳ ಕರ್ತೃ ಕವಿ ಸಾಳ್ವ, ನಾಗಕುಮಾರ ಚರಿತೆಕಾರ ಬಾಹುಬಲಿ, ಕಾರ್ಕಳ ಗೋಮಟೇಶ್ವರ ಚರಿತೆ ಬರೆದ ಚಂದ್ರಮ ಕವಿ, ಭ್ರಮರ ಗೀತೆ ಮುಂತಾದುವುಗಳನ್ನು ಬರೆದ ವಾದಿರಾಜ ಸ್ವಾಮಿ, ಶಬ್ದಾನು ಶಾಸನ ಕರ್ತೃ ಭಟ್ಟಾಕಳಂಕ, ಪದ್ಮಾವತೀ ಚರಿತೆಗಾರ ಮೂಲಿಕೆ ಪದ್ಮನಾಭ ಕವಿ, ಅಹಿಂಸಾ ಚರಿತೆಯ ಪಾಯಣ್ಣ, ರತ್ನ ಶೇಖರ ಚರಿತೆಯ ಪಟ್ಟಾಭಿರಾಮ, ಪದ್ಮಾವತೀ ಚರಿತೆಯ ಸುರಾಲ ಕವಿ, ತುರಂಗ ಭಾರತದ ಪರಮದೇವ, ಭರತೇಶ ವೈಭವದ ರತ್ನಾಕರವರ್ಣಿ ಇವರುಗಳು ಈ ಜಿಲ್ಲೆಯ ಜ್ಞಾತರಾದ ಪ್ರಾಚೀನ ಕವಿಗಳು. ಇವರಲ್ಲಿ ಹೆಚ್ಚಿನವರು ಷಟ್ಪದಿ ಸಾಂಗತ್ಯ

ಇಂತ್ಹಹ ದೇಶೀಯ ಛಂದಸ್ಸಿನಲ್ಲಿಯೇ ಕಾವ್ಯ ರಚನೆ ಮಾಡಿದ್ದಾರೆ.

ಕಾಡುಮುಳ್ಳುಗಳನ್ನು ತುಳಿಯುತ್ತಾ, ಗದ್ದೆಯ ಕೆಸರಲ್ಲಿ ದುಡಿಯುತ್ತಾ, ತೆಂಗು ಕಂಗುಗಳ, ತಾಳೆ ಬಾಳೆಗಳ ನಡುವೆ ಮನೆಮಾಡಿಕೊಂಡು, ಭೋರ್ಗರೆವ ಕಡಲ ತೆರೆಗಳ ಮೇಲೆ ಕುಣಿ ಕುಣಿಸಿ ದೋಣಿಗಳನ್ನು ತೇಲಿಸುತ್ತಾ ಜೀವನದ ರುದ್ರರಮಣೀಯತೆಗಳನ್ನು ದಿನನಿತ್ಯ ಅನುಭವಿಸುತ್ತಾ ಇರುವ ಈ ಜಿಲ್ಲೆಯ ಜನತೆ – ದಿನದ ದುಡಿತದ ಬಳಲಿಕೆಯನ್ನು ಕಳೆದುಕೊಳ್ಳಲು, ತಮ್ಮೆದೆಯ ನೋವು ನಲಿವುಗಳಿಗೆ ಹೊಸತೊಂದು ಪ್ರಕಟಣೆ ಕೊಡಲು ಆರಿಸಿಕೊಂಡ ಒಂದು ಕಲಾ ಸಾಹಿತ್ಯ ಮಾಧ್ಯಮವೆಂದರೆ ಯಕ್ಷಗಾನ. ತಾಳಮದ್ದಳೆ, ಬಯಲಾಟ ಎಂಬೀ ಉಭಯ ಪ್ರಕಾರಗಳಿಗೂ ಯಕ್ಷಗಾನ ಪ್ರಸಂಗಗಳು ಸಾಹಿತ್ಯವನ್ನು ಒದಗಿಸುತ್ತವೆ. ಈ ಜಿಲ್ಲೆಯಲ್ಲಿ ಈ ಕಾವ್ಯ ಪ್ರಕಾರವು ಕಳೆದ ಹಲವಾರು ಶತಕಗಳಿಂದ ಸಮೃದ್ಧವಾಗಿ ಬೆಳೆದಿದೆ. ಇಂತಹ ಸವಿಯಾದ ಸಾಹಿತ್ಯವನ್ನು ಒದಗಿಸಿದ ಕವಿಗಳಲ್ಲಿ ಕುಂಬಳೆ ಪಾರ್ತಿಸುಬ್ಬ, ಬೆನಕಯ್ಯ ಭಾಗವತ, ಹಟ್ಟಂಗಡಿ ರಾಮ ಭಟ್ಟ, ಮಟ್ಟಿ ವಾಸುದೇವ ಪ್ರಭು, ವಿಷ್ಣು ವಾರಂಪಳ್ಳಿ, ಗೆರಸೊಪ್ಪೆ ಶಾಂತಯ್ಯ, ಬಾಯಾರು ಸಂಕಯ್ಯ ಭಾಗವತ, ಬವ್ರುಳಾಡಿ ಹಿರಿಯಣ್ಣ ಹೆಬ್ಬಾರ, ಕಡಂದಲೆ ರಾಮರಾಯ, ನಂದಳಿಕೆ ಲಕ್ಷ್ಮೀನಾರಾಯಣ, ಜತ್ತಿ ಈಶ್ವರ ಭಟ್ಟ, ಕವಿಭೂಷಣ ವೆಂಕಪ್ಪ ಶೆಟ್ಟಿ, ಶಗ್ರಿತ್ತಾಯ, ಪೊಳ್ಳರೇ ಮೊದಲಾದ ಖ್ಯಾತರಾದ ಹಲವಾರು ಕವಿಗಳು ಯಕ್ಷಗಾನ ಕ್ಷೇತ್ರದಲ್ಲಿ ಉತ್ತಮ ಕೃಷಿಗೆಯ್ಯುತ್ತಿದ್ದು ಜಿಲ್ಲೆಯ ಸಾಹಿತ್ಯದ ಸಂಪತ್ತನ್ನು ಹೆಚ್ಚಿಸುತ್ತಿದ್ದಾರೆ.

ದಕ್ಷಿಣ ಕನ್ನಡ ಜಿಲ್ಲೆಯ ಹೊಸಗನ್ನಡದ ಆದಿಕಾಲದ ಕವಿಗಳನೇಕರು ಷಟ್ಪದಿಗಳಲ್ಲೇ ಹೆಚ್ಚಾಗಿ ಕಾವ್ಯ ರಚನೆ ಮಾಡಿದರು. ಉಳಿದವರು ವೀರ ಚೌಪದಿಯಲ್ಲಿ ಕೃತಿ ರಚಿಸಿದರು. ನಂದಳಿಕೆಯವರ ಶ್ರೀರಾಮ ಪಟ್ಟಾಭಿಷೇಕ, ಮೂಲ್ಕಿ ರಾಮಕೃಷ್ಣಯ್ಯರ ವೆಂಕಟಗಿರಿ ಮಹಾತ್ಮೆ, ಬೋಳಾರ ಬಾಬುರಾಯರ ಭಕ್ತಿ ಮಹಿಮೆ, ಕುಂಬಳೆ ನರಸಿಂಹ ಲಕ್ಷ್ಮಣ ನಾಯಕರ ಸತ್ಯನಾರಾಯಣ ವ್ರತ ಮಹಿಮೆ, ಮುಳಿಯ ಶಂಕರ ಭಟ್ಟರ ತಿಲಕ ಪುರಾಣ, ಪುಂಡೂರು ಲಕ್ಷ್ಮೀನಾರಾಯಣ ಘುಣೆಚತ್ತಾಯರ ಬಾಲಗಂಗಾಧರ ಸ್ತವ, ಕಡೆಂಗೋಡ್ಲು ಶಂಕರ ಭಟ್ಟರ ವಸ್ತ್ರಾಪಹರಣ, ಕಕ್ಕುಜೆ ಐತಪ್ಪ ಯಾನೆ ರಾಮಯ್ಯ ನಾಯ್ಕರ ಜ್ಞಾನಾಮೃತ, ನಾರಾಯಣ ಶಾಸ್ತ್ರೀಗಳ ಗೀತಾ ಭಾಮಿನಿ ಷಟ್ಪದಿ, ಬಡೆಕ್ಕಿಲ ವೆಂಕಟರಮಣ ಭಟ್ಟರ ಕರ್ನಾಟಕ ಪರಿಸ್ಥಿತಿ, ಪೆರಡಾಲ ಕೃಷ್ಣಯ್ಯನವರ ಉದನೇಶ್ವರ ಶತಕ, ನಿ. ರಾ. ಬಲ್ಲಾಳರ ಸುರಸ ಕವಿತಾ ವಿಹಾರ, ಕಡವ ಶಂಭು ಶರ್ಮರ ಗಾಂಧಿ ನಿರ್ವಾಣ ಇವು ಮಾತ್ರವಲ್ಲದೆ ಪಂಜೆ, ಮುಳಿಯ, ಸೇಡಿಯಾಪು, ಗೋವಿಂದ ಪೈ, ನಾರಾಯಣ ಕಿಲ್ಲೆ, ಕೊರಡ್ಕಲ್ ಶ್ರೀನಿವಾಸ ರಾವ್, ಸುರತ್ಕಲ್ ಸುಬ್ಬರಾವ್, ಲಕ್ಷ್ಮಣ ಪೈ, ಮುಚ್ಚಿಮಲೆ, ಹೊನ್ನಯ್ಯ ಶೆಟ್ಟಿ ಮುಂತಾದವರು ಷಟ್ಪದಿಗಳಲ್ಲಿ ಕವಿತಾ ರಚನೆ ಗೈದಿರುವರು.

ಪಾಶ್ಚಾತ್ಯ ಸಾಹಿತ್ಯದ ಪ್ರಭಾವ, ಭಾರತದೇಶ ಸರ್ವತ್ರವ್ಯಾಪಿಸುತ್ತಿದ್ದ ಕಾಲದಲ್ಲಿ ಈ ಜಿಲ್ಲೆಯಲ್ಲಿಯೂ ಅದರಿಂದ ಪ್ರಭಾವಿತರಾಗಿ ಹಲವರು ಕವಿತಾ ರಚನೆಗೆ ತೊಡಗಿದರು. ಕನ್ನಡ ಕಾವ್ಯಲೋಕಕ್ಕೆ ಹೊಸ ಬೆಳಕನ್ನು ಬೀರಿದರು. ಅಂಥವರಲ್ಲಿ ಪಂಜೆ, ಹಟ್ಟಂಗಡಿ, ಗೋವಿಂದ ಪೈ, ಕಡೆಂಗೋಡ್ಲು, ಕಾಮತ್, ಬೆನಗಲ್, ಅನಂತ ರಾವ್, ಉಗ್ರಾಣ, ಸೇಡಿಯಾಪು ಮೊದಲಾದವರು ಪ್ರಸಿದ್ಧರು. ಪ್ರಾಸವೇ ಕವಿತೆಯ ಜೀವವೆಂದು ಬಗೆದು ಬರೆಯುತ್ತಿದ್ದು ಹಳೆಯ ಸಂಪ್ರದಾಯವನ್ನು ಧೈರ್ಯಪೂರ್ವಕ ಮೀರಿ, ಪ್ರಾಸಬಿಟ್ಟು ಬರೆದವರಲ್ಲಿ ಮೊದಲಿಗರು ಗೋವಿಂದ ಪೈಗಳೆಂಬುದನ್ನು ನಾವಿಂದು ಸ್ಮರಿಸಬೇಕಾಗಿದೆ. ರಾಷ್ಟ್ರಭಕ್ತಿ, ಸಾಮಾಜಿಕ ಕ್ರಾಂತಿ, ಶ್ರಮಜೀವಿಗಳ ಸಂಕಷ್ಟ, ಪ್ರಕೃತಿ, ಪ್ರೇಮ ಇಂತಹ ವಸ್ತುಗಳನ್ನೆತ್ತಿಕೊಂಡು ಅಂದು ಹಲವಾರು ಕವಿತೆಗಳು ರಚಿತವಾದುವು. ಭಾವಗೀತೆಗಳೇ ಆ ಕಾಲದ ಬರವಣಿಗೆಗಳಲ್ಲಿ ಹೆಚ್ಚಿನವು, ಕೆಲವು ಖಂಡ ಕಾವ್ಯಗಳೂ ರಚಿತವಾಗಿವೆ. ಗೋವಿಂದ ಪೈ, ಕಡೆಂಗೋಡ್ಲು, ಸೇಡಿಯಾಪು, ಅ. ಗೌ. ಕಿನ್ನಿಗೋಳಿ, ಗುಂಡ್ಮಿ ಇವರು ಖಂಡ ಕಾವ್ಯಗಳನ್ನು ಬರೆದವರಲ್ಲಿ ಪ್ರಮುಖರು. ಕಾರಂತರು ಗೀತನಾಟಕಗಳನ್ನು ಬರೆದು ನವೀನ ಪ್ರಯೋಗ ಮಾಡಿದರು. ಸೊನೆಟಿನ ಮಾದರಿಯ ಚತುರ್ದಶಪದಿಗಳನ್ನು ಕನ್ನಡಕ್ಕೆ ತಂದವರಲ್ಲಿ ಕೃತಾರ್ಥರಾದವರು ಗೋವಿಂದ ಪೈಗಳು. ತಿಮ್ಮಪ್ಪಯ್ಯನವರ ನವನೀತ ರಾಮಾಯಣಂ ಅರ್ಧದಲ್ಲಿಯೇ ನಿಂತು ಹೋದುದೂ ಎಂ. ಎನ್. ಕಾಮತರ ಹಲವಾರು ಉತ್ತಮ ಕವಿತೆಗಳ ಸಂಗ್ರಹ ಇನ್ನೂ ಪ್ರಕಟವಾಗದೆ ಇರುವುದೂ ದೌರ್ಭಾಗ್ಯವೆನ್ನಬೇಕು.

ದಕ್ಷಿಣ ಕನ್ನಡದ ಇಂದಿನ ಕವಿಗಳಲ್ಲಿ ಪಾಂಡೇಶ್ವರ, ಎಸ್. ವೆಂಕಟರಾಜ ಅಡಿಗ, ಶ್ರೀಧರ, ಅಮ್ಮೆಂಬಳ, ಹೊಸಬೆಟ್ಟು, ಅ. ಗೌ., ಪುಟ್ಟಣ್ಣ ಗೌಡ, ಸೋಮಯಾಜಿ, ಪಾ. ವೆಂ. ಆ., ತೆಕ್ಕುಂಜ, ಎಂ. ಆರ್. ಶಾಸ್ತ್ರಿ, ಪಾಲೆಪ್ಪಾಡಿ, ರಾಮಣ್ಣ ಶೆಟ್ಟಿ, ಕಮಲನಾಭ, ಪಿ. ಕೆ. ನಾರಾಯಣ, ಕೇಶವ ಭಟ್ಟ, ಬಡೆಕ್ಕಿಲ, ವೆಂಕಣ್ಣ, ಯು. ವಿ. ನಾಯಕ್, ಕೆ. ಎನ್. ಭಟ್, ಸತ್ಯದರ್ಶಿ, ತಿರುಕ, ಎದುರ್ಕಳ, ಸುಬ್ಬಣ್ಣ ಹೆಗ್ಡೆ, ಮುಡೂರು, ಮೊಗಸಾಲೆ, ಪುಣಿಂಚತ್ತಾಯ, ಬಾಳಿಗ, ಆರ್ಯ, ಅಮೃತ, ಸೊಡಂಕೂರು, ಅಂಬಾತನಯ, ಬನ್ನಂಜೆ, ಕಮಲನಾಭತನಯ, ರಾಮದಾಸ, ರಾಧಾಕೃಷ್ಣ ರಾವ್, ತಿರುಮಲೇಶ, ಕೂರಾಡಿ, ಮಧ್ಯಸ್ಥ, ವಾಮನ ಭಟ್ಟ, ಮಧುರಕಾನನ, ಗಂಗಾಧರ ಭಟ್ಟ, ಅನಂತರಾಮ, ಸೀತಾರಾಮ, ವರ್ಧಮಾನ ಹೆಗ್ಗಡೆ ಕಾಕುಂಜೆ ಭೋಜಶೆಟ್ಟಿ, ಪದ್ಮನಾಭಚಾರ್ಯ, ಸೀತಾರಾಮ ಭಟ್ಟ, ರಸಿಕ, ಮನಃಪ್ರಿಯ, ಭಾಸ್ಕರ ಭಂಡಾರಿ, ಪದ್ಮನಾಭ ಭಟ್ಟ, ಚೊಕ್ಕಾಡಿ, ಅರ್ತಿಕಜೆ, ಕುಮುದಾತನಯ, ಸಂಕಪ್ಪ ರೈ, ಬನಾರಿ, ಹರಿದಾಸ ಭಟ್ಟ, ಮಾರಪ್ಪ ಶೆಟ್ಟಿ, ಮಡೆಯಾಲ, ಉಳುವಾನ, ನವಗಿರಿನಂದ, ವಿಠಲ ಹೆಗ್ಡೆ, ವಿಟ್ಠಲ ಶೆಣೈ, ಪದ್ಮನಾಭ ನಾಯಕ್, ವಿಶ್ವನಾಥ ಶೆಟ್ಟಿ, ಹೊಸಮನಿ, ಪುರುಶೋತ್ತಮ ಕಾರಂತ, ವೆಂಕಟರಾಯಾಚಾರ್ಯ, ಬಾಲಕೃಷ್ಣ, ಕಲ್ಲೂರ, ಶಂಸ,

ಗೋ. ರಾ., ಕೆ. ಎಸ್. ಸುಬ್ರಾಯ ಭಟ್ಟ, ಮೂಡಿತ್ತಾಯ, ವೆಂಕಟಕೃಷ್ಣಯ್ಯ, ಶ್ಯಾಮ ಭಟ್, ಪೊಟ್ಟಿಪ್ಪಲ, ಎಡನಾಡು, ತೊಟ್ಟೆತ್ತೋಡಿ – ಇವರೂ, ಇನ್ನೂ ಕೆಲವರೂ ಕೃತಿರಚನೆ ಮಾಡಿಯೂ ಬಿಡಿ ಕವಿತೆಗಳನ್ನು ಬರೆದೂ ಹೆಸರುಗಳಿಸಿದ್ದಾರೆ.

ಸಮುದ್ರಕ್ಕೆ ಸೇತುವೆ ಕಟ್ಟುವಲ್ಲಿ ಬೆಟ್ಟಗಳನ್ನು ಹೊತ್ತುತಂದು ಹನೂಮಂತರಂತಹ ಬಲಿಷ್ಠರ ಸಹಾಯದೊಂದಿಗೆ ಮಳಲಕಣಗಳನ್ನು ಕೂಡಿಸಿದ ಅಳಿಲಿನ ಸೇವೆಯೂ ದೊಡ್ಡದೇ! ಈ ಕವಿಪಂಕ್ತಿಯಲ್ಲಿ ಅಂತೆ ಎಲ್ಲರೂ ಸೇರಿದ್ದಾರೆ, ಕೆಲವರ ಹೆಸರು ಇಲ್ಲಿ ಕಾಣಿಸದೆ ಇದ್ದರೆ ಪ್ರಮಾದವಶಾತ್ ತಪ್ಪಿ ಹೋಗಿರಬಹುದೆಂದು ವಿನಂತಿಸಿಕೊಳ್ಳುತ್ತೇನೆ. ಇಲ್ಲಿ ಹೆಸರಿಸಿದವರಿಗಿಂತಲೂ ಮಿಗಿಲಾಗಿ ಕವಿತಾ ಪ್ರತಿಭೆಯುಳ್ಳವರು ಅನೇಕರು ಎಲೆಯ ಮರೆಯ ಕಾಯಿಯಂತೆ ಅಗೋಚರವಾಗಿ, ಆದರೂ ಸದಾ ಕಾರ್ಯ ನಿರತರಾಗಿ, ಕನ್ನಡ ಸರಸ್ವತಿಯ ಮೌನ ಆರಾಧಕರಾಗಿ ಸಾರ್ಥಕ ಕವಿ ಜೀವನ ನಡೆಸುತ್ತಿದ್ದಾರೆ. ಅಂತಹವರಿಗೆ ಎಲ್ಲರಿಗೂ ನಮ್ರ ಪ್ರಣಾಮಗಳು.

ಈ ಜಿಲ್ಲೆಯಲ್ಲಿ ಏಕಕಾಲದಲ್ಲಿ ಹಲವು ಭಾಷೆಗಳಲ್ಲಿ ಕವನಿಸುವ ಸಾಮರ್ಥ್ಯ ಗಳಿಸಿದ ಕೆಲವರು ಮಹನೀಯರು ಇದ್ದಾರೆ. ದಾಮೋದರ ಬಾಳಿಗ ಅವರು ಖ್ಯಾತರು. ಕನ್ನಡ, ಕೊಂಕಣಿ, ಇಂಗ್ಲಿಷ್ ಭಾಷೆಗಳಲ್ಲಿ ಇವರು ಕವನಿಸುತ್ತಾರೆ. ಮಾರಪ್ಪ ಶೆಟ್ಟಿ ಕನ್ನಡ ತುಳುಭಾಷೆಗಳಲ್ಲಿ ಅನೇಕ ಸುಂದರ ಕವಿತೆಗಳನ್ನು ರಚಿಸಿದ್ದಾರೆ. ಬಿ.ವಿ. ಬಾಳಿಗ ಕನ್ನಡ, ಕೊಂಕಣಿ ಭಾಷೆಗಳಲ್ಲೂ, ಅಮೃತ ಸೋಮೇಶ್ವರ, ರಸಿಕ ಪುತ್ತಿಗೆ, ಎಂ. ವಿ. ಹೆಗ್ಗಡೆ, ತುಳು ಕನ್ನಡಗಳಲ್ಲೂ ಕವನಿಸುತ್ತಿದ್ದಾರೆ. ಎಸ್. ವೆಂಕಟರಾಜ ಸಂಸ್ಕೃತ ಕನ್ನಡ ಭಾಷೆಗಳಲ್ಲಿ ಉತ್ತಮ ಕವಿತಾ ಗ್ರಂಥಗಳನ್ನು ರಚಿಸಿರುತ್ತಾರೆ. ಗೋವಿಂದ ಪೈ ಇಂಗ್ಲಿಷ್, ಕನ್ನಡ, ಕೊಂಕಣಿ ಭಾಷೆಗಳಲ್ಲೂ, ನಾರಾಯಣ ಕಿಲ್ಲೆ, ಬಡಕಬೈಲ್ ಪರಮೇಶ್ವರಯ್ಯ, ಪೊಳಲಿ ಶಿನಪ್ಪ ಹೆಗ್ಗಡೆ, ಮೋನಪ್ಪ ತಿಂಗಳಾಯ ಇವರು ತುಳು ಕನ್ನಡಗಳಲ್ಲಿಯೂ ಕವಿತಾರಚನೆ ಗೈದಿದ್ದರು ಎಂಬುದನ್ನು ನಾವು ಸ್ಮರಿಸಬೇಕಾಗಿದೆ.

ದಕ್ಷಿಣ ಕನ್ನಡ ಜಿಲ್ಲೆ ಶಿಶುಸಾಹಿತ್ಯಕ್ಕೂ ತನ್ನ ಪಾಲಿನ ಸೇವೆ ಸಲ್ಲಿಸಿದೆ. ಈ ದಿಶೆಯಲ್ಲಿ ಪಂಜೆ ಮೊದಲಿಗರೆನ್ನಬಹುದು. ಸಣ್ಣ ಮಕ್ಕಳಿಗಾಗಿ ಅವರು ಅನೇಕ ಸುಂದರ ಗೀತೆಗಳನ್ನು ಬರೆದು ಮಾರ್ಗದರ್ಶನ ಮಾಡಿದರು. ಕಾರಂತರೂ ಗಣನೀಯ ಕಾರ್ಯ ಸಾಧಿಸಿದ್ದಾರೆ. ಜಿಲ್ಲೆಯ ಹಲವಾರು ಕವಿಗಳು ಹುಲುಸಾಗಿ ಈ ಕೃಷಿಯನ್ನು ಮಾಡಿರುವರು. ಶಾಲೆಗಳಲ್ಲಿ ಅಧ್ಯಾಪಕವೃತ್ತಿಯಲ್ಲಿರುವ, ಕವಿತಾಶಕ್ತಿಯನ್ನು ಪಡೆದ ಹಲವರು ಉಪಾಧ್ಯಾಯರೂ ಅಭಿನಯ ಗೀತೆಗಳ, ಶಿಶುಗೀತೆಗಳ, ಚುಟುಕುಗಳ ಹಲವು ಸಂಗ್ರಹಗಳನ್ನು ಪ್ರಕಟಿಸಿರುವರು. ಶಿಶುಸಾಹಿತ್ಯದ ಪ್ರಕಟಣೆಗಾಗಿಯೇ ಬಾಲಸಾಹಿತ್ಯ ಮಂಡಲ, ಮಕ್ಕಳ ಮಂಟಪ, ನವನಿಧಿ ಪ್ರಕಟಣೆ ಮುಂತಾದ ಸಂಸ್ಥೆಗಳು ಸ್ಥಾಪಿತವಾಗಿ ಅತ್ಯುತ್ತಮ ಸೇವೆ ಸಲ್ಲಿಸಿವೆ.

ಮೊಗ್ಗೆಯಲ್ಲಿಯೇ ಬಾಡಿ, ಕನ್ನಡಕ್ಕೆ ನಷ್ಟವಾದ ಇಲ್ಲಿನ ಕೆಲವರು ಪ್ರತಿಭಾಶಾಲಿ ಕವಿಗಳನ್ನು ಇಂದು ಸ್ಮರಣೆಮಾಡುವುದು ಅಪ್ರಾಸಂಗಿಕವಾಗಲಾರದು. ಅವರಲ್ಲಿ ಮೊದಲಿಗರು ಪೇಜಾವರ ಸದಾಶಿವ ರಾವ್, ಪಾಶ್ಚಾತ್ಯ ದೇಶದಲ್ಲಿ ಈಲಿಯಟ್ ಸಂಪ್ರದಾಯ ಇನ್ನೂ ತೊಡಗುತ್ತಿದ್ದ ಕಾಲದಲ್ಲಿಯೇ 'ನಾಟ್ಯೋತ್ಸವ'ದಂತಹ ನವೀನ ಕವನವೊಂದನ್ನು ಬರೆದು ಪೇಜಾವರರು ಇಟಲಿಯಲ್ಲಿ ಅಸ್ತಂಗತರಾದರು. ಇನ್ನೊಬ್ಬರು, ಕಾಸರಗೋಡಿನ ಕಾರ್ಯಹಳ್ಳ ರಾಮಕೃಷ್ಣ ಶೆಟ್ಟಿ, ಮುದ್ದಣನನ್ನು ನೆನೆದು, 'ನಾಡಾಡಿಯಾಗಿ ಊರೂರೊಳಗೆ ಬೇಡಿದರು ಕವಿಯಾಗಿ ಜನಿಸಬೇಡ' ಎಂದು ಹಾಡಿ, ಅಭಿನವ ಮುದ್ದಣನೆನಿಸಿ ಕ್ಷಯರೋಗಕ್ಕೆ ತುತ್ತಾಗಿ ಅಕಾಲದಲ್ಲಿಯೇ ಸಾವನ್ನಪ್ಪಿದರು. ಬೇರೊಬ್ಬರು, ಎಳೆ ಹರೆಯದಲ್ಲಿಯೇ 'ವಿದಾಯ'ವನ್ನು ಹೇಳಿದ ಯರ್ಮುಂಜ ರಾಮಚಂದ್ರ, ಅಂತೆಯೇ ಮಿತ್ರಮಂಡಳಿಯ ಸ್ಥಾಪಕರಲ್ಲೊಬ್ಬರಾದ ಕಣಂದೂರು ರಾಘವಾಚಾರ್; 'ಅಳಿಲಸೇವೆ' ಕವನಸಂಗ್ರಹದಲ್ಲಿ ಅವರ ಕೆಲವು ಅತ್ಯುತ್ತಮ ಕವಿತೆಗಳನ್ನು ನಾವು ಕಾಣಬಹುದು. ಇವರಂತೆ. 'ಚೆಲುವು' ಎಂಬ ಚೆಲುವಾದ ಕವನಸಂಗ್ರಹ ಬರೆದ ಕೆ. ಆರ್. ಕೃಷ್ಣರಾವ್, ನಿರ್ದಯನಾದ ಕಾಲನು ಇವರೆಲ್ಲರನ್ನು ಎಳೆಹರಯದಲ್ಲಿಯೇ ಒಯ್ಯದಿರುತ್ತಿದ್ದರೆ ಜಿಲ್ಲೆಯ ಕಾವ್ಯ ಸಂಪತ್ತು ಇನ್ನಷ್ಟು ಸಮೃದ್ಧವಾಗುತ್ತಿತ್ತೆಂಬುದರಲ್ಲಿ ಯಾವ ಸಂಶಯವೂ ಇಲ್ಲ. 'ಮನವಿ'ಯನ್ನು ಅರ್ಪಿಸಿದ ಕದ್ರಿ ಶ್ರೀನಿವಾಸ ರಾಯರೂ ಈ ಜಿಲ್ಲೆಯ ಶ್ರೇಷ್ಠ ಕವಿಗಳಲ್ಲಿ ಒಬ್ಬರಾಗಿದ್ದರು.

ಈ ಜಿಲ್ಲೆಯ ಪುರುಷರ ಜತೆಗೆ ಮಹಿಳೆಯರೂ ಕಾವ್ಯರಚನೆಗೆ ಕೈಹಾಕಿದ್ದಾರೆ. ಜೈನಮಹಿಳೆ, ಸುಂದರಮ್ಮ, ಗಿರಿಬಾಲೆ, ಲಕ್ಷ್ಮಿಪಾರೆ, ಲಕ್ಷ್ಮಿಪಾಡಿ, ಜಯಮ್ಮ, ಕುಮಾರಿ ಉಡುಪ, ಕುಮಾರಿ ಸೋಮಯಾಜಿ ಮುಂತಾದವರು ಕವನಗಳನ್ನು ಬರೆದಿದ್ದಾರೆ; ಬರೆಯುತ್ತಿದ್ದಾರೆ. ಕರ್ನಾಟಕದ ಇತರ ಭಾಗಗಳಂತೆ ಕವಯಿತ್ರಿಯರ ಸಂಖ್ಯೆ ಇಲ್ಲಿಯೂ ಕಡಿಮೆಯೇ. ರಾಷ್ಟ್ರದ ರಾಜಕೀಯದ ಆಗು ಹೋಗುಗಳಲ್ಲಿ ಪುರುಷರಿಗೆ ಸರಿದೊರೆಯಾಗಿ ನಿಲ್ಲಬಲ್ಲ ಯೋಗ್ಯತೆಯನ್ನು ಗಳಿಸಿದ ಭಾರತದ ಆಧುನಿಕ ಮಹಿಳೆಯರು ಈ ಕ್ಷೇತ್ರದಲ್ಲಿಯೂ ಪುರುಷರ ಜತೆಗೆ ಸೌಹಾರ್ದಮಯ ಸ್ಪರ್ಧೆಗೆ ನಿಲ್ಲುವುದು ಅಸಂಗತವೇನೂ ಆಗಲಾರದು.

ದಕ್ಷಿಣ ಕನ್ನಡ ಜಿಲ್ಲೆಯ ಹಲವಾರು ಕ್ರಿಶ್ಚಿಯನ್, ಮುಸ್ಲಿಂ ಬಂಧುಗಳೂ ಕವಿತೆಗಳನ್ನು ಬರೆದಿದ್ದಾರೆ; ಕವಿಗಳಾಗಿ ಖ್ಯಾತರಾಗಿದ್ದಾರೆ; ಬಾಸೆಲ್ ಮಿಶನ್ ಸಂಸ್ಥೆಯ ಮೂಲಕ ಅನೇಕ ಕ್ರೈಸ್ತ ಭಕ್ತಪರವಾದ ಕವಿತೆಗಳನ್ನು ಕ್ರಿಶ್ಚಿಯನ್ ಕವಿಗಳು ರಚಿಸಿರುವರು, ಜೋಸೆಫ್ ಪಿಳ್ಳೆ ಎಂಬುವರು ಶ್ರೀ ಕೆ. ಹೈದರ್ ಒಳ್ಳೆಯ ಕವಿಗಳು ಕರೋಡಿಪಾಡಿಯ ಅಬ್ದುಲ್ ರಹಿಮಾನ್ ಎಂಬವರು ಹಲವಾರು ಸುಂದರ ಶಿಶುಗೀತಗಳ ಪುಸ್ತಕಗಳನ್ನು ರಚಿಸಿ ಪ್ರಕಟಿಸಿದುದಲ್ಲದೆ ಒಳ್ಳೆಯ ಭಾವಗೀತಗಳನ್ನೂ ಬರೆದಿರುವರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿರುವ ಶ್ರೀ ಬಿ. ಎಂ. ಇದಿನಬ್ಬರು ಜನಪ್ರಿಯ ಕವಿಗಳೂ

ಗಮಕಿಗಳೂ ಆಗಿರುತ್ತಾರೆ. ಕಾಸರಗೋಡಿನ ಶ್ರೀ ಉಬೈದರು ವಲ್ಲತ್ತೋಳ್ ಮಹಾಕವಿಯ ಕವನಗಳನ್ನೂ ಇಕ್ಬಾಲರ ಕಾವ್ಯವೊಂದನ್ನೂ ಕನ್ನಡಕ್ಕೆ ಪರಿವರ್ತಿಸಿರುವರು.

ಮೈಸೂರು ಮಾನಸಗಂಗೋತ್ರಿಯ ಸಂಸ್ಕೃತಿ ಪ್ರವಾಹವನ್ನು, ಮಂಗಳೂರಿನ ಮಂಗಳ ಗಂಗೋತ್ರಿವರೆಗೂ ಹರಿಯಿಸಿ, ಉಪ್ಪು ಕಡಲನ್ನು ಕಡೆದು ನಮಗೆ ವಚನ ರತ್ನಗಳನ್ನಾಯ್ದಾಯ್ದು ತೆಗೆದಿತ್ತ ಭಗೀರಥ ಸಾಹಸಿಯೆನಿಸಿದ ಕವಿ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಇಂದು ಈ ಜಿಲ್ಲೆಯ ಕವಿಗಳೇ ಆಗಿ, ನಿರಂತರ ಗೆಯ್ಯುತ್ತಿರುವ ಸ್ವಂತ ಕವಿತಾರಚನೆ ಹಾಗೂ ಅದರ ಜತೆಗೆ ಕಿರಿಯ ಕವಿಗಳಿಗೆ ಈಯುತ್ತಿರುವ ಪ್ರೋತ್ಸಾಹ ಇವೆಲ್ಲವೂ ಇಂದು ಈ ಜಿಲ್ಲೆಗೆ ದೊರೆತ ಅಲಭ್ಯ ಲಾಭವಾಗಿ ಇಲ್ಲಿನ ಕಾವ್ಯ ಸೃಷ್ಟಿಯನ್ನು ಮತ್ತಷ್ಟು ಸತ್ವಪೂರ್ಣವಾಗಿ ಮಾಡುತ್ತಿದೆಯೆಂದು ನಾವು ಅಭಿಮಾನ ಪೂರ್ವಕ ಹೇಳಬೇಕಾಗಿದೆ.

ಜಿಲ್ಲೆಯ ಕವಿಗಳ ಮುಂದೆ, ಕಾವ್ಯರಸಿಕರ ಮುಂದೆ, ಈ ಕ್ಷೇತ್ರದಲ್ಲಿ ದುಡಿಯುತ್ತಿರುವ ಒಬ್ಬ ಸಾಮಾನ್ಯ ಕೆಲಸಗಾರನೆಂಬ ನೆಲೆಯಲ್ಲಿ ಒಂದೆರಡು ಸೂಚನೆಗಳನ್ನು ಮಂಡಿಸಲು ಅನುಮತಿ ಯಾಚಿಸುತ್ತೇನೆ.

1. ಕವಿಗಳು ಪ್ರಾಚೀನ ಕನ್ನಡ ಕಾವ್ಯಗಳನ್ನು, ಸಾಧ್ಯವಾದರೆ, ಸಂಸ್ಕೃತ ಕಾವ್ಯಗಳ ಸತ್ವವನ್ನು ಸಹ ಹೀರಿಕೊಂಡು, ಆಧುನಿಕ ಪಾಶ್ಚಾತ್ಯ ಕಾವ್ಯ ಮೀಮಾಂಸೆಯನ್ನು ಅರ್ಥವಿಸಿ, ನಾಡಿನ ಅತ್ಯಾಧುನಿಕ ಕಾವ್ಯ ಧೋರಣೆಯನ್ನು ಗಮನಿಸಿಕೊಂಡು, ಜೀವನದ ಆಳವಾದ ಅಭ್ಯಾಸದೊಂದಿಗೆ ಕಾವ್ಯ ಸೃಷ್ಟಿಗೆ ತೊಡಗುವುದು ಒಳ್ಳೆಯದು.

2. 'ಕವಿಗೆ ಕವಿ ಮುನಿವಂ' ಎಂಬ ಮಾತನ್ನೂ, 'ಕವಿಗೆ ಕವಿ ಮಣಿವಂ' ಎಂಬ ತಿದ್ದುಪಡಿಯನ್ನೂ ಬಿಟ್ಟು, 'ಕವಿಗೆ ಕವಿ ಒಲಿವಂ' ಎಂಬೀ ಮಧ್ಯಮಾರ್ಗವನ್ನು ಅನುಸರಿಸುವುದು ವಿಹಿತವೆನಿಸುತ್ತದೆ. ಕವಿಗಳು ಮಾನವೀಯ ಗುಣಶಾಲಿಗಳಾಗಿ, ಕವಿಗಳೇ ಆಗಿರಬೇಕಲ್ಲದೆ, ದೇವತ್ವದ ಪಟ್ಟಕ್ಕೆ ಏರುವುದೂ, ರಾಕ್ಷಸತ್ವಕ್ಕೆ ಇಳಿಯುವುದೂ ಸಲ್ಲದು.

3. ಜಿಲ್ಲೆಯ ನಗರ ಗ್ರಾಮಗಳಲ್ಲಿ ಆಗಾಗ ಜರಗುತ್ತಿರುವ ಸಾಂಸ್ಕೃತಿಕ ಸಮ್ಮೇಳನಗಳಲ್ಲಿ ಕವಿಗೋಷ್ಠಿಗಳಿಗೂ ಒಂದು ಯೋಗ್ಯಸ್ಥಾನ ದೊರಕುವಂತೆ ಎಲ್ಲರೂ ಸಹಕರಿಸಿ, ಕವಿತೆ ಜನಪ್ರೀತಿಯನ್ನು ಗಳಿಸುವರೆ ಶ್ರಮಿಸುವುದು ವಿಹಿತ. 'ಮಾಲೆಗಾರನ ಪೊಸಬಾಸಿಗಂ ಮುಡಿವ ಭೋಗಿಗಳಿಲ್ಲದೆ. ಬಾಡಿ ಹೋಗದಂತೆ' ಆಗಲೂ ಇದರಿಂದ ಸಹಾಯವೆನಿಸೀತು.

4. ಜಿಲ್ಲೆಯ ಕವಿಗಳು ಪರಸ್ಪರರನ್ನು ಸರಿಯಾಗಿ ಅರಿತುಕೊಂಡು ಸೌಹಾರ್ದವನ್ನು ಹೆಚ್ಚಿಸಿಕೊಳ್ಳಬೇಕು. ಇತರ ಕೆಲವು ಕ್ಷೇತ್ರಗಳಲ್ಲಿ ಸ್ವಾರ್ಥ ಸ್ವಲಾಭಗಳಿಗಾಗಿ ಮಾಡಿಕೊಳ್ಳುವ

ಗುಂಪುಗುಳಿತನದಂತಹ ನೈಚ್ಯ ಕಾರ್ಯಾನುಸರಣೆಗೆ ಕವಿಯಾದವನು ಸರ್ವಥಾ ಇಳಿಯತಕ್ಕುದಲ್ಲ.

5. ವೈಯಕ್ತಿಕ ಕವನ ಸಂಗ್ರಹಗಳು ಇನ್ನಷ್ಟು ಪ್ರಕಟವಾಗಬೇಕು. ಜಿಲ್ಲೆಯ ಅನೇಕ ಮಂದಿ ಉತ್ತಮ ಕವಿಗಳು ಇನ್ನೂ ತಮ್ಮ ಕವನಸಂಗ್ರಹವನ್ನು ಹೊರತಂದಿಲ್ಲ. ಅಂತಹ ಕಾವ್ಯ ಸಂಗ್ರಹಗಳನ್ನು ಪ್ರಕಾಶ ಪಡಿಸುವರೆ ಸಹಕರಿಸುವುದು ಯೋಗ್ಯವಾಗಿದೆ.

6. ಅಲ್ಲಿಲ್ಲಿ ಜಿಲ್ಲೆಯ ಕವಿಗಳ ಸಾಮೂಹಿಕ ಕವನ ಸಂಗ್ರಹ ಈಗಾಗಲೇ ಹಲವಾರು ಹೊರ ಬಂದಿವೆ. ಹಿಂದೆ ಮಿತ್ರ ಮಂಡಳಿ 'ನಮ್ಮ ಕವಿತೆಗಳು' ಎಂಬ ಪ್ರಾತಿನಿಧಿಕ ಸಂಗ್ರಹವೊಂದನ್ನು ಹೊರತಂದಿತು. ಅಂತೆಯೇ, ಅದಕ್ಕಿಂತಲೂ ಉತ್ತಮವೂ ಪ್ರಾತಿನಿಧಿಕವೂ ಆಗಿ ಜಿಲ್ಲೆಯ ಸಮಗ್ರ ಕವಿಗಳ ಒಂದು ಕವಿತಾ ಸಂಗ್ರಹ ಪ್ರಕಾಶವಾಗುವಂತೆ ಒಂದು ಯೋಜನೆಯನ್ನು ರೂಪಿಸುವುದು ಅಗತ್ಯವಾಗಿದೆ.

ಕವಿಯಾದವನು ಲೋಕದ ಸಂಕಟಕ್ಕೆ ಮರುಗಿದಂತೆ, ಸಂತಸದಲ್ಲಿಯೂ ಹಿಗ್ಗಿ ಹಾಡುತ್ತಾನೆ. ಪ್ರಕೃತಿಯ ಸೌಂದರ್ಯವನ್ನು ಕಂಡು ಆತ ಮೈಮರೆಯುವನು ವಿಕೃತಿಯ ವಿರೂಪವನ್ನು ಕಂಡು ಹೇಸುವನು. ಭಕ್ತಿ ಆತನ ಹೃದಯವನ್ನು ಆರ್ದ್ರಗೊಳಿಸುತ್ತದೆ; ಶೃಂಗಾರ ಸುಖವನ್ನುಂಟುಮಾಡುತ್ತದೆ. ಲೋಕದ ಕೊಂಕನ್ನು ಕಂಡು ವಕ್ರೋಕ್ತಿ ಹೊರಡುವುದು. ನೇರನ್ನು ನೋಡಿ ಮನಸ್ಸು ಮೆಚ್ಚುವುದು. ಅನ್ಯಾಯಕ್ಕೆ ಆತನು ಉರಿದೇಳುವನು. ಸಾಹಸಕ್ಕೆ ಆತನಿಂದ ಪ್ರೇರೇಪಣೆ ದೊರಕುವುದು. ಜಗತ್ತಿನ ಶಾಶ್ವತ ತತ್ವ ಸಮೀಕ್ಷೆಯಿಂದ ಆತನ ಚಿತ್ತ ಸ್ಥಿಮಿತಗೊಂಡು ಕವಿ ಶಾಂತನೂ ಆಗದೆ ಇಲ್ಲ. ಇಂತು, ಕವಿಯು ಮನುಷ್ಯ ಸಾಮಾನ್ಯರಲ್ಲಿ ಇರತಕ್ಕ ಸಕಲ ಪ್ರಕೃತಿ ವಿಕೃತಿಗಳನ್ನೂ ಮೈಗೂಡಿಸಿಕೊಂಡು ಮನನ ಮಾಡುವನು. ಜೀವ-ಜೀವನದ ನಿರಂತರ ನಿರೀಕ್ಷಣೆಯಿಂದಾಗಿ, ಅಭ್ಯಾಸ ಮೂಲಕವಾಗಿ ಅನುಭವ ಫಲವಾಗಿ ಉಂಟಾದ ಕಾವು ಆತನಲ್ಲಿ ಕವಿತಾಕಲ್ಪನೆಗೆ ಸುಂದರ ಸ್ವರೂಪವನ್ನು ಕೊಡುತ್ತದೆ. ಹಾಗೆ ಬರೆದ ಕವಿತೆಗಳು ಶ್ರೇಷ್ಠ ಕವಿತೆಗಳೆನಿಸುತ್ತದೆ. ಅಂತಹ ಕವಿತೆಗಳನ್ನು ಬರೆದ ಶ್ರೇಷ್ಠ ಕವಿಗಳು ಅನೇಕರು ಇಲ್ಲಿ ಇದ್ದರು; ಈಗಲೂ ಇದ್ದಾರೆ. ಮುಂದೆಯೂ ಇರುತ್ತಾರೆ. ಎಷ್ಟೇ ಬೇನೆಬೇಸರಿಕೆಗಳು ಬಂದರೂ ಕಷ್ಟಕಾರ್ಪಣ್ಯಗಳು ಒದಗಿದರೂ, ಜೀವನ ಸಹನೀಯವೆನಿಸಬೇಕಾದರೆ, ಸ್ಪೃಹಣೀಯವಾಗಬೇಕಾದರೆ ಇಂತಹ ಕವಿತೆಗಳ ರಸಾಸ್ವಾದವನ್ನು ನಿರಂತರ ಮಾಡುತ್ತಿರಬೇಕು.

ಕಳೆದ ಎರಡು ಮಹಾ ಯುದ್ಧಗಳು ಜಾಗತಿಕ ಜೀವನದ ತತ್ವಾದರ್ಶಗಳಲ್ಲಿ ಮಹತ್ವದ ಮಾರ್ಪಾಟುಗಳನ್ನುಂಟುಮಾಡಿದುವು. ಧ್ಯೇಯಾದರ್ಶಗಳನ್ನು ಬುಡಮೇಲು ಮಾಡಿದ ಹಲವಾರು ರಾಜಕೀಯ ಸಾಮಾಜಿಕ - ಉತ್ಕ್ರಾಂತಿಗಳು ಜನತೆಯ ಮೇಲೆ ಹೆಚ್ಚಿನ ಪ್ರಭಾವ ಬೀರಿದುವು. ವೈಜ್ಞಾನಿಕ ವೈಚಾರಿಕ ವಲಯಗಳಲ್ಲಿ ಈ ತೀವ್ರತರ ಪರಿವರ್ತನೆಗಳ ಪರಿಣಾಮವಾಗಿ ಶತ ಶತಮಾನಗಳಿಂದ ನಾವು

ಇರಿಸಿಕೊಂಡು ಬಂದ ಹಲವಾರು ತತ್ವ ವಿಶ್ವಾಸಗಳು ಬರಿಯ ಭ್ರಮೆಗಳೆಂದೂ ಅಸತ್ಯಗಳೆಂದೂ ತಿಳಿಯುವಷ್ಟು ನಾಗರಿಕತೆ ಮುಂದುವರಿಯಿತು. ಹಳತು ಕೊಳೆತು ಹೋಗುತ್ತಿದೆ. ಹೊಸತು ಬರಲಿ ಎಂಬೀ ಎಚ್ಚರ, ಹಳೆಯ ತಿಳುವಳಿಕೆಗಳಲ್ಲಿ ದುಃಸ್ವಪ್ನಗಳೇ ಹೆಚ್ಚಿನವೆಂಬೀ ಕಾಲಬೋಧ, ಗತಕಾಲದ ಪ್ರೇತ ರಾಜ್ಯದ ಕಂಟಕಿತ ಮಾರ್ಗವನ್ನು ತೊರೆದು, ಭವ್ಯ ಭವಿಷ್ಯತ್ತಿನ ದಿವ್ಯ ಪಥದಲ್ಲಿ ಮಹತ್ಸಾಧನೆಯ ದೇವ ರಥವನ್ನೇರಿ ಮುನ್‌ಸಾಗಬೇಕೆಂಬ ಹುಮ್ಮಸ್ಸು – ಇವುಗಳೆಲ್ಲದರ ಫಲವಾಗಿ ಪ್ರಪಂಚದ ಸಕಲ ಸಾಹಿತ್ಯದಲ್ಲಿ – ಅಂತೆ, ಕನ್ನಡ ಕಾವ್ಯ ಮಾರ್ಗದಲ್ಲೂ ತೀವ್ರ ಕ್ರಾಂತಿ ಉಂಟಾದುದು ಸಹಜವೇ. ಜೀವನವನ್ನು ಪ್ರತಿಬಿಂಬಿಸುವ ಸಾಹಿತ್ಯದಲ್ಲಿ ಇಂತಹ ಕ್ರಾಂತಿಯ ಹೆಜ್ಜೆಗಳ ಗುರುತು ಮುದ್ರಿಸಬೇಕಾದುದು ತೀರಾ ಅನಿವಾರ್ಯ. ಇದೇ ಯುಗ ಧರ್ಮವೂ ಆಗಿದೆ. ಕನ್ನಡ ಕಾವ್ಯದಲ್ಲಿಯೂ ಪ್ರಭಾವ ಬೀರಿದೆ.

ಸಾಹಿತ್ಯದಲ್ಲಿ ಮಾರ್ಪಾಟು ಆಗುವಾಗ ಅಂತರಂಗದ ಆವೇಶದೊಂದಿಗೆ ಬಹಿರಂಗ ರೂಪಿನಲ್ಲಿಯೂ ಬದಲಾವಣೆ ಉಂಟಾಗುವುದು. ಹಿಂದಿನ ವೃತ್ತಗಳಿಂದ, ಚಂಪೂ ಶೈಲಿಯಿಂದ, ವಚನ, ಷಟ್ಪದಿ, ಸಾಂಗತ್ಯ, ತ್ರಿಪದಿ, ರೂಪಗಳ ಪರಿವರ್ತನೆ ಆದಾಗಲೂ ಸಾಹಿತ್ಯದ ಪ್ರಗತಿಯನ್ನು ನಾವು ನೋಡಿದೆವು. ಪಾಶ್ಚಾತ್ಯ ಸಾಹಿತ್ಯ ಸಂಸ್ಕೃತಿಗಳ ಮುದ್ರೆ ಅಚ್ಚೊತ್ತಿದಾಗ ಆದ ಭಾವಗೀತೆ ಸರಳ ರಗಳೆಗಳ ಕಾಲದಲ್ಲೂ ಆ ಪರಿವರ್ತನೆ ಸ್ವಾಗತಾರ್ಹವೇ ಆಯಿತು. ಕನ್ನಡ ಕಾವ್ಯ, ಬಹಿರಂಗ ರೂಪದಲ್ಲಿ ಪರಿವರ್ತನೆಗೊಂಡಾಗಲೂ, ಅದರ ಅಂತಃಸತ್ವವೇ ಅದಕ್ಕೆ ಜನಪ್ರಿಯತೆಯನ್ನು ಒದಗಿಸಿತು ಎಂಬಂಶವನ್ನು ನಾವು ಮರೆಯಬಾರದು. ಜೀವನದಲ್ಲೆಂತು ಅಂತೆ ಸಾಹಿತ್ಯದಲ್ಲೂ ಬಾಹ್ಯಾಡಂಬರಕ್ಕೆ ತಾತ್ಕಾಲಿಕ ಆಕರ್ಷಣೆ ಇದ್ದರೂ, ಅಂತಃಸತ್ವ ಹೆಚ್ಚಿಸಿಕೊಳ್ಳದ ವಿನಾ ಉಳಿಗಾಲವಿಲ್ಲ ಎಂಬ ಅಂಶವನ್ನು ನವೀನಮಾರ್ಗಾನುಯಾಯಿಗಳು ಮನವರಿಕೆ ಮಾಡಿಕೊಂಡಷ್ಟು ಅವರಿಗೂ ಕನ್ನಡ ಕಾವ್ಯ ಲೋಕಕ್ಕೂ ಒಳ್ಳೆಯದು. ಮನವರಿಕೆ ಮಾಡದೇ ಹೋದರೆ ನಿಸ್ಸತ್ವವಾದುದನ್ನು ಕಾಲವೇ ತಳ್ಳಿಹಾಕುವುದು ನಿರ್ವಿವಾದ. ನವಮನ್ವಂತರದ ಜಾಗೃತ ಚೇತನವನ್ನು ಪ್ರತಿಬಿಂಬಿಸುವರೆ ಸಹಸ್ರ ಭುಜಗಳಿಂದ ದುಡಿದು ನಮ್ಮ ಕನ್ನಡ ಕಾವ್ಯ ಕ್ಷೇತ್ರವನ್ನು ಫಲಸಮೃದ್ಧವಾಗಿ ಮಾಡಲು ಇಂದು ನಾವೆಲ್ಲರೂ ಪಣ ತೊಡಬೇಕಾಗಿದೆ. ಇದಕ್ಕೆ ಯುವಶಕ್ತಿ ಉತ್ಸಾಹದಿಂದ ಮುಂದೆ ಬರಬೇಕು; ಹಿರಿಯರು ಅದನ್ನು ಬೆಂಬಲಿಸಬೇಕು. ಎಲ್ಲರೂ ಒಗ್ಗೂಡಿ ಕನ್ನಡದ ತೇರನ್ನು ಮುಂದು ಮುಂದಕ್ಕೆ ದೂಡಿ, ಕನ್ನಡ ಕಾವ್ಯಕ್ಕೆ ವಿಶ್ವ ಸಾಹಿತ್ಯ ಪಂಕ್ತಿಯಲ್ಲಿ ಮನ್ನಣೆಯ ಮಣೆ ಸಿಗುವಂತೆ ಆಗಲಿ. ಇಂತಹ ಪ್ರಬಲವಾದ ಧ್ಯೇಯೋದ್ದೇಶಗಳನ್ನು ಕಣ್ಣ ಮುಂದೆ ಇರಿಸಿಕೊಂಡು ದುಡಿಯುವ ಜಾಗೃತ ಚೈತನ್ಯ, ಆ ಚೈತನ್ಯಕ್ಕೆ ಅನುಕೂಲವಾದ ಪ್ರಚೋದನೆ ಇಂದು ನಮಗೆ ಅತ್ಯಂತ ಅವಶ್ಯವಾಗಿದೆ.

ಹಣ್ಣೆಲೆಗಳು ಉದುರಿ ತಳಿರು ಚಿಗುರಿಡುತ್ತದೆ. ಹೊಸ ಪ್ರವಾಹ ಹಳೆಯ

ನೀರನ್ನು ಕೊಚ್ಚಿಕೊಂಡು ಹೋಗುವುದು. ಹೊಸತು ಬಂದಾಗ ಹಳತು ಹಿಂದೆ ಸರಿದು ನಿಲ್ಲಬೇಕು. ಪ್ರಕೃತಿಯಲ್ಲಿ, ಜೀವನದಲ್ಲಿ ಎಂತು, ಅಂತೆ ಸಾಹಿತ್ಯದಲ್ಲಿಯೂ ಕಾವ್ಯರಚನೆಯಲ್ಲಿಯೂ ಈ ಕ್ರಮ ಅನಾದಿ ಕಾಲದಿಂದಲೂ ನಡೆದು ಬಂದಿದೆ. ಹಿಂದಿನಿಂದಲೂ ಹಳತು ಹೊಸತು ವಾದಗಳ ಘರ್ಷಣೆಯೂ ಆಗಿದೆ. ಅದರಿಂದಾಗಿ ವಿಚಾರಮಂಥನ ನಡೆದು ನವನೀತವೇ ದೊರಕುವುದು. ಕನ್ನಡದಲ್ಲಿಯೂ ಇಂದು ಹೊಸ ಹಾದಿಯೊಂದು ರೂಪಿತವಾಗುತ್ತಿದೆ. ಇಂದು ಹೆದ್ದಾರಿಯಾಗಬೇಕಾದರೆ, ಮಾರ್ಗ ರಚಯಿತರು ಪರಿಶ್ರಮ ಪಡಬೇಕು; ಸಂಯಮ; ಶ್ರದ್ಧಾಶಾಲಿಗಳಾಗಬೇಕು. ಅಂತಹ ಸಾಹಸಿಕರ ಸೈನ್ಯವೇ ಸಿದ್ಧವಾಗಿ ಕನ್ನಡ ಕಾವ್ಯಕ್ಷೇತ್ರದಲ್ಲಿ ಹೊಸ ರಾಜಮಾರ್ಗ ರಚನೆಯಾಗಲಿ. ಈ ಜಿಲ್ಲೆಯ ಧೀಮಂತ ಕವಿತಾಶಕ್ತಿ ಸದಾಕಾಲ ಪ್ರಗತಿ ಮಾರ್ಗದಲ್ಲಿ ಮುನ್ನಡೆಯಲಿ. ಲೋಕಕ್ಕೆ ಮಂಗಳವನ್ನುಂಟುಮಾಡುವರೆ ಕವಿ – ನಿತ್ಯವೂ ಹಾಡುತ್ತಾ ಇರಲಿ.

ಹಾಡು ಕವಿಯೇ ಹಾಡು ಮಂಗಳವ ಹಾಡು !
ಜಗದ ಕಲ್ಯಾಣಕ್ಕೆ,
ಜನದ ಕಲ್ಯಾಣಕ್ಕೆ,
ಜಗ ಜಗದ ಮನದ ಕಲ್ಯಾಣಕ್ಕೆ ಹಾಡು,
ಆ ಹೆಣ್ಣು ಈ ಗಂಡು ರತಿ ಮನ್ಮಥರ ದಂಡು,
ಮುಕ್ಕಣ್ಣಿನುರಿಗೊಂಡು ಸುಟ್ಟರೂ ಸೊಗವುಂಡು,
ಅಂಥ ಹಳೆ ಧಾಟಿಗಳ ಮುಗಿಸಿ ಬಿಡು ಬೇಗ;
ಹೊಸತು ಜಗ ಹೊಸತು ಯುಗ ಅದಕಾಗಿ ರಾಗ,
ಹಾಡು ಕವಿಯೇ ಹಾಡು ಮಂಗಳವ ಹಾಡು;
ಜಗ ಜನದ ಮನದ ಕಲ್ಯಾಣಕ್ಕೆ ಹಾಡು.
ಮರಗಳಶ್ವತ್ಥಗಳು, ಮನುಜರೊ ತ್ರಿವಿಕ್ರಮರು,
ಖಗವೆಲ್ಲ ಗರುಡ ಕುಲ, ಮೃಗ ಸಿಂಹರಾಜ:
ನದಿಯೊ ಭಾಗೀರಥಿಯು, ನಗವೊ ಹೈಮಾಚಲವು
ಬೆಳಕೊ ಸೂರ್ಯ ಪ್ರಭೆಯು – ಪರಿಪೂರ್ಣತೇಜ!
ಹಾಡು ಕವಿಯೇ ಹಾಡು ಪೂರ್ಣತೆಗೆ ಹಾಡು;
ಅದು ಪೂರ್ಣ ಇದು ಪೂರ್ಣ ಪೂರ್ಣವನೆ ಹಾಡು.
ಸೊಲ್ಲು ಒಂದೇ ಸಾಕು ಪ್ರತಿಭೆ ಮಿಂಚಿರಲು,

ಋಷಿರಸನೆಯಲ್ಲಿ ಗಾಯತ್ರಿ ಕುಣಿದಿರಲು;
ಓಂ ಎಂಬ ಅಕ್ಷರವೆ ಬ್ರಹ್ಮವಾಗಿರಲು,
ನಾಲ್ಕು ವೇದಗಳೋದಿ ಬೇರೇನು ಹೇಳು?
ಹಾಡು ಕವಿಯೇ ಹಾಡು ಋಷಿಯಂತೆ ಹಾಡು!
ಮಾತು ಜ್ಯೋತಿರ್ಲಿಂಗವೆನೆ ಹಿಗ್ಗಿ ಹಾಡು!!

●

ಯಕ್ಷಗಾನ : ಆದಿಮಾನವನ ಕಲ್ಪನೆಗಳ ಮೂರ್ತಸ್ವರೂಪ

ಜೀವಿತದ ಉದ್ಯೋಗಾರ್ಥ ಹುಟ್ಟೂರಿನಿಂದ ಬಹುದೂರದ ಮುಂಬಯಿಗೆ ಬಂದು ನೆಲೆಸಿ ಬದುಕಿನ ಹೋರಾಟದಲ್ಲಿ ನಿರಂತರ ವ್ಯಾಪೃತರಾಗಿರುವುದರ ಮಧ್ಯೆ ತಮ್ಮ ತಾಯ್ನುಡಿಯ ಅಭಿಮಾನವನ್ನೂ ತಾಯ್ನಾಡಿನ ಕಲೆಯ ಸೊಬಗನ್ನೂ ಆ ಮೂಲಕ ಜೀವನಸೌಂದರ್ಯದ ಸಮಾರಾಧನೆಯನ್ನೂ ಮುಂಬಯಿಯಂತಹ ಈ ಮಹಾನಗರದಲ್ಲಿ ಎಚ್ಚರದಿಂದ ಉಳಿಸಿ, ಬೆಳೆಸಿಕೊಂಡು ಬರುತ್ತಿರುವ ಕನ್ನಡನಾಡಿನ ಅತ್ಯಂತ ಜನಪ್ರಿಯ ಕಲಾಮಾಧ್ಯಮವಾದ ಯಕ್ಷಗಾನದ ವೈಭವವನ್ನು ಇಲ್ಲಿಯೂ ಮೆರೆಸುತ್ತಿರುವ; ಇಷ್ಟರಲ್ಲಿಯೇ ಎರಡು ಯಶಸ್ವೀ ಸಮ್ಮೇಳನಗಳನ್ನು ಜರಗಿಸಿ ಸಫಲತೆ ಪಡೆದಿರುವ ಮತ್ತು ಈಗ ಮೂರನೆಯ ಯಕ್ಷಗಾನ ಸಮ್ಮೇಳನವನ್ನು ಉತ್ಸಾಹಪೂರ್ಣವಾಗಿ ಸಂಘಟಿಸಿರುವ ಸಮಸ್ತರನ್ನೂ ಯಕ್ಷಗಾನದ ಪ್ರಥಮ ಸ್ಮರಣೀಯ ಅಧಿದೇವತೆಯಾದ ಮದವೂರ ವಿಘ್ನೇಶನ ನಾಮಸ್ಮರಣೆ ಮಾಡುತ್ತ ಕೊಂಡಾಡುತ್ತೇನೆ. ನಿರ್ವಿಘ್ನವಾಗಿ ನಮ್ಮೆಲ್ಲರ ಎಲ್ಲ ನಡವಳಿಕೆಗಳನ್ನೂ ಕೃತಾರ್ಥತೆಯ ಕಡೆಗೆ ಮುನ್ನಡೆಸುತ್ತಿರಲಿ ಎಂದೂ ಪ್ರಾರ್ಥಿಸುತ್ತೇನೆ.

ಹಿಂದಿನ ಎರಡು ಸಮ್ಮೇಳನಗಳ ಅಧ್ಯಕ್ಷಪೀಠಗಳನ್ನು ಅಲಂಕರಿಸಿದ ಯಕ್ಷಗಾನದ ಕಲಾಪರಿಣತರ ಯೋಗ್ಯತೆಯೊಂದಿಗೆ ಹೋಲಿಸಿದಲ್ಲಿ ಈ ಕ್ಷೇತ್ರದಲ್ಲಿನ ನನ್ನ ಕುಬ್ಜತೆಯನ್ನು ಸರಿಯಾಗಿ ತಿಳಿದುಕೊಳ್ಳಬಲ್ಲೆ. ಇಂತಹ ಒಂದು ಅಧಿಕೃತ ಸ್ಥಾನದಲ್ಲಿ ಕುಳಿತಿರಲು ಒಪ್ಪಿಕೊಂಡ ಬಗ್ಗೆ ನಾನು ಸಂಪೂರ್ಣ ಅರ್ಹನೆಂದು ವಿಜೃಂಭಿಸಿಕೊಳ್ಳಲಾರೆನಾದರೂ ನನ್ನನ್ನು ಈ ಪೀಠಕ್ಕೆ ಏರಿಸಿದ ನಿಮ್ಮೆಲ್ಲರ – ಮುಖ್ಯವಾಗಿ ಸ್ವಾಗತ ಸಮಿತಿಯವರ – ಸ್ನೇಹದ ಉದಾರತೆಯ ಭಾರದಿಂದ ವಿನಮ್ರನಾಗಿ ಯಥಾಮತಿ, ಯಥಾಶಕ್ತಿ ಈ ಹಿರಿದಾದ ಹೊಣೆಯನ್ನು ನಿರ್ವಹಿಸಲು ಕರ್ತವ್ಯಬದ್ಧನಾಗಿದ್ದೇನೆ. ಸಾಹಿತ್ಯಶಾರದೆಯ ಗರ್ಭಗೃಹದ ಒಳಗೆ ವೈದಿಕರು ಹಲವರು ಮಂತ್ರಶ್ಲೋಕಗಳನ್ನು ಮೊಳಗಿಸುತ್ತಿದ್ದಾಗ ಗುಡಿಯ ಹೊರಗೆ ದೂರದಲ್ಲಿ ಕೈಮುಗಿಯುತ್ತ,

---

1987 ಅಕ್ಟೋಬರ 2, 3 ಮತ್ತು 4ರಂದು ಬೊಂಬಾಯಿಯಲ್ಲಿ ಜರಗಿದ ತೃತೀಯ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷಭಾಷಣ.

ಬಾಷ್ಪ ಸುರಿಸುತ್ತ ಬಹುದಿನಗಳಿಂದ ನಿಂತುಕೊಂಡಿದ್ದ ಈ ಯಃಕಶ್ಚಿತನನ್ನೂ ನೀವು ಗುರುತಿಸಿದಿರಿ ಎಂಬ ಬಗ್ಗೆ ನಾನು ಧನ್ಯನೆಂದು ಭಾವಿಸಿಕೊಳ್ಳುತ್ತೇನೆ.

ಪ್ರಕೃತಿಯ ಪ್ರಚಂಡವಾದ ಶಕ್ತಿಗೆ ಆದಿಮಾನವನು ಬೆರಗಾದನು. ಸಿಡಿಲು ಮಿಂಚುಗಳ ಆರ್ಭಟಕ್ಕೆ ಬೆದರಿದನು. ಮಳೆಗಾಗಿ ಪ್ರಾರ್ಥಿಸಿದನು. ಬೆಂಕಿಯ ಸುಡುವಿಕೆಗೆ ವಿಸ್ಮಯಗೊಂಡನು. ಬಿರುಗಾಳಿಗೆ ಭಯಭೀತನಾದನು. ಹಾಗಾಗಿಯೇ ತನ್ನ ರಕ್ಷಣೆಗಾಗಿ, ತನ್ನ ಪೋಷಣೆಗಾಗಿ ತನ್ನ ದುಃಖ – ಸಂತೋಷಗಳಿಗೆ ಅಭಿವ್ಯಕ್ತಿ ನೀಡಲೆಂದು, ಇಂದ್ರನನ್ನು, ಅಗ್ನಿಯನ್ನು, ವರುಣಪೂಷಣರನ್ನು ಎಲ್ಲರನ್ನೂ ಪ್ರಾರ್ಥಿಸಿದನು. ವೈದಿಕಮಂತ್ರಗಳಲ್ಲಿ ಈ ಪ್ರಾರ್ಥನೆಯನ್ನು ನಾವು ಕಾಣುತ್ತೇವೆ. ಇಂದ್ರಾಗ್ನಿ ವರುಣಪೂಷಣರೂ ದೇವತೆಗಳಾದರು. ಅವರಿಗೆ ಪೂಜೆ ಮಾಡುತ್ತಿರಬೇಕು. ಆ ಬಗ್ಗೆ ತನ್ನ ಕಲ್ಪನೆಯನ್ನು ಉದ್ದೀಪಿಸಿ ಅವರ ವಿಗ್ರಹಗಳ ಸೃಷ್ಟಿ ಮಾಡಬೇಕಾಯಿತು. ಮನುಷ್ಯ ತನ್ನದೇ ಭವ್ಯತೆಯನ್ನು ಆ ವಿಗ್ರಹಗಳಿಗೆ ನೀಡಿ ಆರಾಧಿಸಿದನು.

ಆದಿಮಾನವನ ಇಂತಹ ಒಂದು ಭವ್ಯವಾದ ಕಲ್ಪನೆಯ ಪ್ರತಿಬಿಂಬವನ್ನು ನಾವು ನಮ್ಮ ಯಕ್ಷಗಾನದ ವೇಷಭೂಷಣಗಳಲ್ಲಿ ಕಾಣುತ್ತೇವೆ. ಜಗಜಗಿಸುವ ಸುಂದರ ಮನುಷ್ಯಾಕಾರದ ವೇಷಗಳು, ರೌದ್ರಾಕಾರಗಳು, ಗಂಡುಕುಣಿತಗಳು, ಆರ್ಭಟೆಗಳು, ಚೆಂಡೆ ಮದ್ದಳೆಗಳ ಹೊಡೆತಗಳು, ಇವೆಲ್ಲವೂ ಆದಿಮಾನವನ ಭಾವನಾಮಯ ಕಲ್ಪನೆಗಳ ಮೂರ್ತಸ್ವರೂಪಗಳಾಗಿವೆ. ಯಕ್ಷಗಾನವು ಎಷ್ಟು ಪ್ರಾಚೀನ ಎಂಬ ಕುರಿತು ಸಂಶೋಧಕರು ಅಭಿಪ್ರಾಯ ಹೇಳಿದ್ದಾರೆ. ಏನಿದ್ದರೂ ಯಕ್ಷಗಾನದ ವೇಷಭೂಷಣಗಳನ್ನು ಕಂಡಾಗ ಈ ಕಲೆ ಪ್ರಾಚೀನವೆಂದು; ಅರ್ವಾಚೀನ ಖಂಡಿತ ಅಲ್ಲ ಎಂದು ಅನಿಸುತ್ತದೆ. ಆರ್ಯದ್ರಾವಿಡ ಸಂಸ್ಕೃತಿಗಳ ಘರ್ಷಣೆಯೊಂದಿಗೆ ಅದರ ಮುಂದಿನ ಮಜಲಾದ ಆ ಉಭಯ ಸಂಸ್ಕೃತಿಗಳ ಸಾಮರಸ್ಯವನ್ನೂ ನಾವಿಲ್ಲಿ ಕಾಣುತ್ತೇವೆ. ದೇವತೆಗಳು, ದಾನವರು, ಕಪಿಗಳು, ಕಿರಾತರು, ಸೂರ್ಯಚಂದ್ರವಂಶಗಳ ರಾಜರು, ಇವರಿಗೆ ಸಂಬಂಧಿಸಿದ ಕಥಾನಕಗಳು, ಆ ಪಾತ್ರಗಳಿಗೆ ಉಚಿತವಾದ ವೇಷಭೂಷಣಗಳು ಇವೆಲ್ಲವೂ ತುಂಬ ಪ್ರಾಚೀನತೆಯ ಕಲ್ಪನೆಯನ್ನು ನಮಗೆ ಉಂಟುಮಾಡುತ್ತವೆ. ವೈದಿಕಕಾಲದ ಋಷಿಗಳಲ್ಲಿ ಮಂತ್ರಗಳಲ್ಲಿ ಯಾವ ಶಕ್ತಿಗಳನ್ನು ಆಹ್ವಾನಿಸಿದರೋ, ಮುಂದೆ ಸ್ಮೃತಿಗಳಲ್ಲಿ ಏನನ್ನು ತಿಳಿಸಿದರೋ, ಪುರಾಣಗಳಲ್ಲಿ ಯಾವುದನ್ನು ವಿವರಿಸಿದರೋ, ಇವೆಲ್ಲವುಗಳ ಸುಸ್ಪಷ್ಟವಾದ ಸ್ಪರ್ಶವನ್ನು ನಾವು ಯಕ್ಷಗಾನದ ವೇಷಭೂಷಣ ನರ್ತನಾದಿಗಳಲ್ಲಿ ಇಂದಿಗೂ ಕಾಣುತ್ತೇವೆ. ಆದ್ದರಿಂದಲೇ ನನ್ನ ಅಭಿಪ್ರಾಯದಂತೆ ಈ ಕಲೆ ತುಂಬ ಪ್ರಾಚೀನವಾದುದು ಎಂದೇ ತೋರುತ್ತದೆ.

ಪ್ರಕೃತಿಯ ಪ್ರಕೋಪಗಳಿಗೆ ಬೆರಗಾಗಿ ಮನುಷ್ಯ ಈ ಸೃಷ್ಟಿಯ ರಹಸ್ಯವನ್ನು ಅರ್ಥಮಾಡಿಕೊಳ್ಳುವ ಕುತೂಹಲದಿಂದ ಭೂತಪ್ರೇತಾದಿಗಳ ಪವಾಡಗಳ ಕಲ್ಪನೆಯನ್ನು ಮಾಡಿಕೊಂಡುದು ತುಂಬಾ ಪ್ರಾಚೀನ ಸಂಗತಿ. ಭಾರತ ದೇಶದಿಂದ ಹೋದ

ಬೌದ್ಧಧರ್ಮ ಮತ್ತೆ ನೆಲೆನಿಂತ ಜಪಾನಿನಲ್ಲಿ ಅಂದಿನಿಂದ ಇಂದಿನ ವರೆಗೆ ಜನಪ್ರಿಯವಾಗಿರುವ 'ನೋ' ನಾಟಕಗಳ ಕುರಿತು ಹಲವರು ತಿಳಿದಿರಬಹುದು. ಆ ನಾಟಕಗಳಲ್ಲಿ ಭೂತಪ್ರೇತಾದಿಗಳ ಕಲ್ಪನೆಯೇ ಹೆಚ್ಚು. ಅದರ ಮೂಲಕ ಧರ್ಮ ಪ್ರಚಾರ, ನೀತಿಬೋಧೆ, ಮನೋರಂಜನೆ ನಡೆಯುತ್ತದೆ. ಬಹಳ ಪ್ರಾಚೀನ ಕಾಲದಿಂದ 'ನೋ' ನಾಟಕಗಳು ಹೇಗೆ ಪ್ರದರ್ಶಿತವಾಗುತ್ತಿದ್ದವೋ ಅದೇ ರೀತಿಯಲ್ಲಿ ಅವು ಇಂದಿಗೂ ಅಲ್ಲಿ ಜನಪ್ರಿಯವಾಗಿವೆ – ನಮ್ಮಲ್ಲಿಯ ಯಕ್ಷಗಾನದಂತೆ. ಇಲ್ಲಿಯೂ ಯಕ್ಷಗಾನದಲ್ಲಿ ಹಿಂದಿನದೇ ವೇಷಗಳು ಅಂಥವೇ ಕಥೆಗಳು, ಅವುಗಳ ಮೂಲಕ ಧರ್ಮ, ನೀತಿಪ್ರಚಾರ, ಮನೋರಂಜನೆ ಆಗುತ್ತ ಬಂದಿದೆ. ಸಾರಾಂಶವೆಂದರೆ, ಮನುಷ್ಯ ಪ್ರಕೃತಿ, ಪ್ರಕೋಪಾದಿಗಳಿಗೆ ಭಯವಿಹ್ವಲನಾಗಿ ಕಲ್ಪಿಸಿಕೊಂಡ ಅಮಾನುಷ ಶಕ್ತಿಯ ಕುರಿತಾದ ಭಾವನೆಗಳೊಂದಿಗೆ ಪವಾಡವಿರುವ ಕಥೆಗಳಿಂದ, ಹಿಂದಿನದೇ ವೇಷಭೂಷಣಾದಿಗಳಿಂದ ಮನೋರಂಜನೆಯ ಪದ್ಧತಿಯನ್ನು ದೃಶ್ಯರೂಪದಲ್ಲಿ ಅದೇ ಪ್ರಾಚೀನ ಕಾಲದಿಂದಲೇ ತೊಡಗಿದ್ದನೆಂದೂ ಇದು ಏಷ್ಯಾಖಂಡ ಸರ್ವತ್ರ ಒಂದು ಉತ್ತಮ ಕಲಾಸಾಹಿತ್ಯ ಮಾಧ್ಯಮವಾಗಿ ಪ್ರಚಾರದಲ್ಲಿ ಇದೆ ಎಂದೂ ತಿಳಿದುಕೊಳ್ಳಬಹುದು. ನಮ್ಮ ತುಳುನಾಡಿನ ಭೂತಾರಾಧನೆ ಕೂಡ ಇಂತಹದೇ ಕಲ್ಪನೆ ಮನೋರಂಜನೆಗಳ ಒಂದಂಗವಾಗಿದೆ. ಭೂತಾರಾಧನೆಯಲ್ಲಿ ಯಾವುವೇ ಹಿಂದಿನ ಪವಾಡಕಥೆ, ಪ್ರಾಚೀನ ಕಾಲದ ವೇಷಭೂಷಣ, ಮುಖದ ಬಣ್ಣಗಾರಿಕೆ, ತೆಂಗಿನ ಮಡಲಿನ ತಿರಿಯ ಉಡುಗೆ, ಡೋಲಿನ ಬಡಿತ, ಪಾಡ್ದನದ ರಾಗಾಲಾಪ ಇವೆಲ್ಲ ಸೇರಿ ಒಂದು ಧಾರ್ಮಿಕ ಕ್ರಿಯೆಯೂ ಅದರೊಂದಿಗೆ ನೀತಿಪ್ರಚಾರವೂ ಸಾಕಷ್ಟು ಮನೋರಂಜನೆಯೂ ಜರಗುವುದನ್ನು ನಾವು ತಿಳಿದುಕೊಳ್ಳಬಹುದು.

ಸಂಶೋಧಕರು ಕೆಲವರು ಕೇವಲ ಐನೂರು ವರ್ಷಗಳ ಈಚೆಗೆ ಯಕ್ಷಗಾನ ಪ್ರಾದುರ್ಭಾವವೆನ್ನುವುದು ಬಹುಶಃ ಯಕ್ಷಗಾನದ ಪ್ರಸಂಗಗಳ ಸಾಹಿತ್ಯ ರಚನೆಯನ್ನು ಆಧರಿಸಿ ಇರಬೇಕು. ಯಕ್ಷಗಾನ ಪ್ರಸಂಗಗಳ ಭಾಷೆಯನ್ನು ಗಮನಿಸಿದರೆ ಅವುಗಳ ರಚನೆ ಐನೂರು ವರ್ಷಕ್ಕಿಂತ ಹಿಂದೆ ಇರಲಾರದೆಂದೇ ತೋರುತ್ತದೆ. ಆದರೆ ಯಕ್ಷಗಾನದ ಪ್ರಸಂಗಸಾಹಿತ್ಯಕ್ಕಿಂತ ಮೊದಲೇ ಈ ಕಲೆ ವೇಷಭೂಷಣಗಳ ರೀತಿಯಲ್ಲಿ, ನರ್ತನಾದಿಗಳಲ್ಲಿ ಪ್ರಕಟವಾಗುತ್ತಿರಬೇಕು. ಇಂದಿಗೂ ಪ್ರಚುರವೂ, ಪ್ರಸಿದ್ಧವೂ ಆಗಿರುವ ಭರತನಾಟ್ಯ. ಕಥಕ್ಕಳಿ ಮುಂತಾದವುಗಳಲ್ಲಿ ಕಂಡುಬರುವ ವೇಷಭೂಷಣ, ನರ್ತನ ಮುದ್ರೆಗಳೇ ಈ ಅಭಿಪ್ರಾಯಕ್ಕೆ ಇನ್ನಷ್ಟು ಸಾಕ್ಷಿಗಳಾಗಿವೆ. ಪುರಾಣ ಕಥೆಗಳ ರಚನೆಯ ನಂತರ ಅದರಲ್ಲೂ ಕನ್ನಡದ ತೊರವೆ ರಾಮಾಯಣ, ಕುಮಾರವ್ಯಾಸ ಭಾರತಗಳೇ ಮೊದಲಾದ ಜನಪ್ರಿಯ ಗ್ರಂಥಗಳ ರಚನೆಯ ನಂತರ ಯಕ್ಷಗಾನ ಪ್ರಸಂಗಗಳ ಸಾಹಿತ್ಯದ ಸೃಷ್ಟಿಯಾದುದೆಂದು ಹೇಳಬಹುದಾದರೂ ಈ ಕಲೆ ಪ್ರಸಂಗಸಾಹಿತ್ಯವಿರಹಿತವಾಗಿ ಕೇವಲ ವೇಷಭೂಷಣ ನರ್ತನಗಳಿಂದ ಬಹು

ಪ್ರಾಚೀನಕಾಲದಿಂದಲೇ ಇಂತಹ ಒಂದು ಕಲಾರೂಪ ಮೂಡಿ ಬಂದಿರಬೇಕು. ಆದ ಕಾರಣವೇ ಜನತೆಯ ಹೃದಯದಲ್ಲಿ ಇಷ್ಟೊಂದು ರೂಢಮೂಲವಾಗಿ, ಪರಂಪರಾಗತವಾಗಿ ಯಕ್ಷಗಾನ ನೆಲೆ ನಿಲ್ಲಲು ಸಾಧ್ಯವಾಯಿತೆಂದು ತಿಳಿಯಬಹುದು. ಈ ಕುರಿತು ಸಂಶೋಧಕರು ಇನ್ನಷ್ಟು ಆಳವಾಗಿ ಅಭ್ಯಸಿಸಬೇಕಾಗಿದೆ.

ಈ ಸಂದರ್ಭದಲ್ಲಿ ಕಥಕ್ಕಳಿಗಿಂತ ನಮ್ಮ ಯಕ್ಷಗಾನ ಪ್ರಾಚೀನ ಎಂಬ ವಿಷಯವನ್ನು ಇಲ್ಲಿ ಪುನರುಚ್ಚರಿಸಬಯಸುತ್ತೇನೆ. ಕುಂಬಳೆಯ ಪಾರ್ತಿಸುಬ್ಬ ಕವಿ ರಾಮನಾಟ್ಟ ಕಥಕ್ಕಳಿರಚನೆಯಿಂದ ಸ್ಫೂರ್ತಿಪಡೆದು ಪ್ರಸಂಗರಚನೆ ಮಾಡಿದನೆಂದು ವಿದ್ವಾಂಸರೊಬ್ಬರು ವಾದಿಸಿದ್ದಾರೆ. ಸುಮಾರು ಮೂವತ್ತು ವರ್ಷಗಳ ಹಿಂದೆ ನಾನೀ ಕುರಿತು ಒಮ್ಮೆ ಬರೆದಿದ್ದೆ. ಕಾಸರಗೋಡು ಕೇರಳ ರಾಜ್ಯಕ್ಕೆ ಸೇರಿದ ನಂತರ ಆ ಕಡೆಯ ವಿದ್ವಾಂಸರೊಬ್ಬರು ಸಹಾಯಕ ವಿದ್ಯಾಧಿಕಾರಿಗಳಾಗಿ ಕಾಸರಗೋಡಿಗೆ ಬಂದರು. ಶ್ರೀಯುತರ ಹೆಸರು ಕೃಷ್ಣನ್ ನಂಬಿಯಾರ್ ಎಂದು. ಅವರು ಇಲ್ಲಿನ ಭಾಷೆಯನ್ನು ಮುಖ್ಯವಾಗಿ ಯಕ್ಷಗಾನದ ಕುರಿತು ತಿಳಿದುಕೊಳ್ಳಲು ಪ್ರಯತ್ನಿಸಿದರು. ಅವರದೇ ಹೇಳಿಕೆಯಂತೆ ರಾಮನಾಟ್ಟ ಕರ್ತೃ ಕೊಟ್ಟಾರಕ ಮಹಾರಾಜನು ಬಾಲ್ಯದಲ್ಲಿ ಮೂಕನಾಗಿದ್ದ. ಆತನ ಹಿರಿಯರು ಅವನನ್ನು ಕರೆದುಕೊಂಡು, ಈ ಕಡೆಗೆ ಕೊಲ್ಲೂರು ಕ್ಷೇತ್ರಕ್ಕೆ ಹೋಗುತ್ತಿದ್ದಾಗ ಕುಂಬಳೆಯ ದೇವಸ್ಥಾನದಲ್ಲಿ ಉಳಕೊಂಡ ಸಂದರ್ಭ. ಅಲ್ಲಿನ ಕೆರೆಯಲ್ಲಿ ಆ ಮೂಕ ಬಾಲಕ ಸ್ನಾನಕ್ಕೆ ಇಳಿದಾಗ, ಈಜಲಾಗದೆ ಮುಳುಗುತ್ತಿರುವಲ್ಲಿ ಭಯಭೀತನಾದ ಆತನ ಬಾಯಿಯಿಂದ ಏನೋ ಶಬ್ದ ಹೊರಬಂತು. ಅದೇ ಆತನ ಜೀವನದ ಪರಿವರ್ತನೆಯ ಸಂಧಿಕಾಲವಾಗಿ, ಆತನನ್ನು ಗೋಪಾಲಕೃಷ್ಣ ದೇವಾಲಯದ ಪರಿಚರ್ಯೆಯಲ್ಲಿದ್ದ ಪಾರ್ತಿಸುಬ್ಬ ಕವಿಯ ಆಶ್ರಯದಲ್ಲಿ ವಿದ್ಯಾಭ್ಯಾಸ ಮಾಡಲು ನಿಲ್ಲಿಸಿದರು. ಅಲ್ಲಿ ಆತ ವಿದ್ಯಾಪರಿಣತನಾದ. ಪಾರ್ತಿಸುಬ್ಬ ಕವಿ ಬರೆದ ರಾಮಾಯಣ ಪ್ರಸಂಗಗಳ ಮಾದರಿಯಲ್ಲಿ ಆತನೂ ಕಥಕ್ಕಳಿ ಪ್ರಸಂಗಗಳನ್ನು ಮಲೆಯಾಳದಲ್ಲಿ ಬರೆದ. "ಆರಿದು ಬರುವುದು ವಿಪಿನೇ....." ಎಂಬಿತ್ಯಾದಿ ಆತನ ಕೃತಿಯಲ್ಲಿ ಬರುವ ಮಾತುಗಳೂ ಅವನ ಕನ್ನಡದ ತಿಳಿವಿಗೆ ಸಾಕ್ಷಿಗಳಾಗಿವೆ.

ಈ ಸಂಗತಿಯನ್ನು ಹೇಳಿದವರು ಕನ್ನಡಿಗರಲ್ಲ – ಮಲೆಯಾಳಿಗಳು. ಕನ್ನಡಿಗರ ಬಗ್ಗೆ ದುರಭಿಪ್ರಾಯವೂ ಮಲೆಯಾಳಿಗಳ ಬಗ್ಗೆ ದುರಭಿಮಾನವೂ ಇಲ್ಲದ ಒಬ್ಬ ಮಲೆಯಾಳೀ ಸಾಹಿತ್ಯ ಕಲಾವಿದ ಅಧಿಕಾರಿಗಳು. ಆ ವಿಷಯ ಹೇಗೇ ಇರಲಿ. ಕನ್ನಡ ಸಾಹಿತ್ಯದ ಪ್ರಾಚೀನತೆ ಕ್ರಿಸ್ತಪೂರ್ವದ ವರೆಗೆ ಚಾಚಿದೆ. ಎಂಟು ಒಂಬತ್ತನೆಯ ಶತಮಾನದಲ್ಲಿ ಕನ್ನಡದಲ್ಲಿ ಲಕ್ಷಣಗ್ರಂಥಗಳೇ ರಚಿತವಾಗಿವೆ. ಲಕ್ಷ್ಯಗ್ರಂಥಗಳ ನಂತರವೇ ಲಕ್ಷಣಗ್ರಂಥಗಳು ಬರುವುದು ಸಹಜ. ಅಷ್ಟು ಪ್ರಾಚೀನವಾದ ಮಾರ್ಗಸಾಹಿತ್ಯವುಳ್ಳ ಕನ್ನಡದ ದೇಸೀಸಾಹಿತ್ಯವೆನಿಸಿದ ಯಕ್ಷಗಾನ ಕೇವಲ ಹನ್ನೆರಡು ಹದಿಮೂರನೆಯ ಶತಮಾನಕ್ಕಿಂತ ಈಚೆಗೆ ಬೆಳೆದು ಬಂದ ಮಲೆಯಾಳದಿಂದ ಪ್ರಸಂಗಗಳನ್ನು

ಭಾಷಾಂತರಿಸಿತು ಎಂಬ ವಾದ ಸಮಂಜಸವೆನಿಸುವುದಿಲ್ಲ. ನೆರೆಕರೆಯ ಭಾಷೆಗಳಿಂದ ಇತರ ಸಾಹಿತ್ಯಪ್ರಕಾರಗಳಲ್ಲಿ ಕೊಳುಕೊಡುವಿಗೆ ಆಚೀಚೆಗೆ ಆಗುವುದು ಸಹಜವಾದಂತೆ ಕೆಲವೊಂದು ಕೊಳ್ಕೊಡುಗೆ ಮಲೆಯಾಳದಿಂದ ಕನ್ನಡಕ್ಕೂ, ಕನ್ನಡದಿಂದ ಮಲೆಯಾಳಕ್ಕೂ ಬರಬಹುದು. ಆದರೆ ಇಂತಹ ಒಂದು ಪ್ರಮುಖ ಕಲಾಸಾಹಿತ್ಯ ಪ್ರಕಾರವೊಂದನ್ನು ಕಥಕ್ಕಳಿಯಿಂದ ಪಾರ್ತಿಸುಬ್ಬ ಪಡೆದನೆಂಬ ಮಾತಿನ ಕುರಿತು ಇನ್ನೂ ನನಗೆ ಸಮಾಧಾನವಾಗಲೊಲ್ಲದು.

ಯಕ್ಷಗಾನದ ಪ್ರಾದುರ್ಭಾವ ದೇವಾಲಯಗಳಿಗೆ ಸಂಬಂಧಿಸಿ ಆದಂತೆ ಕಂಡು ಬರುವುದು. ದೇವಾಲಯಗಳ ಮೂಲಕ ಮನುಷ್ಯನಿಗೆ ಯಾವ ನೀತಿಬೋಧೆ, ಧರ್ಮಪ್ರಚಾರ, ಮನಃಶಾಂತಿ ದೊರಕುವುದೆಂದು ಕಲ್ಪನೆಯಿದೆಯೋ ಅದಕ್ಕೆ ಪೂರಕವಾಗಿಯೇ ಯಕ್ಷಗಾನವೂ ಪ್ರಚಾರವಾಯಿತೆಂದು ನಾವು ಅದರಿಂದ ಅರ್ಥಮಾಡಬಹುದು. ಹಿಂದಿನ ಕಾಲದಿಂದ ಇಂದಿನ ಕಾಲದ ವರೆಗೂ ಯಕ್ಷಗಾನ ಮೇಳಗಳ ಹೆಸರುಗಳು ದೇವಾಲಯಗಳಿಗೆ ಅಂಟಿಕೊಂಡೇ ಇವೆ. ಹರಕೆಯ ಆಟಗಳಾಗಿ ಬಯಲಾಟಗಳು ಇಂದಿಗೂ ನಡೆಯುತ್ತಾ ಬರುತ್ತವೆ. "ದೇವರ ಭಯವೇ ಜ್ಞಾನದ ಆರಂಭ" ಎಂಬ ಹಿರಿಯರ ಮಾತಿದೆ. ಮನುಷ್ಯ ಸಹಜ ಪ್ರವೃತ್ತಿಯಲ್ಲಿ ಪಶುಸ್ವಭಾವವೇ ಹೆಚ್ಚು. ಆ ಸ್ವಭಾವದ ಪರಿಣಾಮವೆಂದರೆ ಕೋಪ, ಬೀಭತ್ಸ, ವೀರ, ಆಕ್ರಮಣ, ಪರಪೀಡೆ ಇತ್ಯಾದಿಗಳು. ಯಕ್ಷಗಾನ ಆಟಗಳಲ್ಲಿಯೂ ಹೋರಾಟ, ಆಕ್ರಮಣ, ಆರ್ಭಟೆಗಳು ತುಂಬಾ. ಹೀಗೆ ಮನುಷ್ಯನ ಪ್ರಾಕೃತಿಕ ಗುಣವಾದ ಪಶುತ್ವದಲ್ಲಿ ಅದುಮಿಟ್ಟ ಭಾವನೆಗಳನ್ನು ಈ ಕಲೆಯ ಮೂಲಕ ಕಾಳಗವಾಗಿಯೂ, ಕಲ್ಯಾಣವಾಗಿಯೂ ಪ್ರದರ್ಶಿಸಿ ಅದರ ಫಲಿತಾಂಶವಾಗಿ ಆಗುವ ನೀತಿಬೋಧೆಯನ್ನು ಕೊನೆಗೆ ತಿಳಿಸುವ ಕಥೆ, ಸಾಹಿತ್ಯ ಇಲ್ಲಿ ಕಂಡು ಬರುತ್ತದೆ. ಶೂರ್ಪನಖಿಯಂತೆ ಇರಬಾರದು, ಸೀತೆಯ ಹಾಗಿರಬೇಕು, ರಾವಣನಂತೆ ವರ್ತಿಸುವುದಲ್ಲ, ಶ್ರೀರಾಮನಂತೆ ನಡೆಯಬೇಕು. ಎಂಬೀ ಮಥಿತಾರ್ಥವೇ, ಆ ಕ್ರೌರ್ಯ, ಪರಪೀಡೆ, ಕೋಪ ತಾಪಗಳ ಪ್ರದರ್ಶನದಿಂದ ನಮಗೆ ಸಿಗುವ ನೀತಿಬೋಧೆ.

ಯಕ್ಷಗಾನದಲ್ಲಿಯೂ ದೃಶ್ಯ, ಶ್ರವ್ಯ ಎಂಬೀ ಪ್ರಕಾರಗಳು ಇಂದು ತುಂಬಾ ಜನಪ್ರಿಯವಾಗಿವೆ. ದೃಶ್ಯ ಯಕ್ಷಗಾನ ಬಯಲಾಟ. ಶ್ರವ್ಯ ತಾಳಮದ್ದಳೆ, ದೃಶ್ಯ ಶ್ರವ್ಯಗಳ ಸರಿಯಾದ ವ್ಯತ್ಯಾಸವನ್ನು ತಿಳಿದುಕೊಂಡು ಈ ಉಭಯಪ್ರಕಾರಗಳು ಬೆಳವಣಿಗೆಯಾಗಿವೆ. ಅವೆರಡರಲ್ಲಿ ಯಾವ ಪ್ರಕಾರವೂ ಇನ್ನೊಂದು ಪ್ರಕಾರಕ್ಕಿಂತ ಕೀಳಾಗಲಿ ಮೇಲಾಗಲಿ ಆಗಿರಲಿಲ್ಲ. ಉಭಯವೂ ಏಕಪ್ರಕಾರ ಒಂದು ಇನ್ನೊಂದಕ್ಕೆ ಸರಿದೊರೆಯೆನಿಸಿದೆ. ಕೆಲವು ಕಲಾವಿದರು ಬಯಲಾಟದಲ್ಲಿ ಮಿಂಚುತ್ತಾರೆ. ಕೆಲವರು ತಾಳಮದ್ದಳೆಗಳಲ್ಲಿ ಮೆರೆಯುತ್ತಾರೆ. ಮೂಲತಃ ಇವೆರಡು ರೀತಿಗಳಿಗಿರುವ ಭಿನ್ನತೆಯನ್ನು ಸರಿಯಾಗಿ ತಿಳಿದುಕೊಂಡು ಕಲಾವಿದರು ವರ್ತಿಸಬೇಕು.

ಬಯಲಾಟದಲ್ಲಿ ಮಾತುಗಾರಿಕೆ ಮುಖ್ಯವಲ್ಲ; ವೇಷಭೂಷಣ, ನರ್ತನ, ಅಭಿನಯ, ಹಾಡುಗಾರಿಕೆ, ಚೆಂಡೆಮದ್ದಳೆಗಳ ವಾದನ ಇವೆಲ್ಲವುಗಳೇ ಪ್ರಧಾನ. ಅವುಗಳಿಂದಾಗಿ ಕಥೆಯ ಸೌಧ ಕಟ್ಟಲು ಅನುಕೂಲವಾಗುತ್ತದೆ. ರಾತ್ರಿ ಹೊತ್ತು ದೀವಟಿಗೆಯ ಬೆಳಕು, ಜಗಿಜಗಿಸುವ ಕಿರೀಟಗಳು, ನಾನಾ ವಿಶೇಷ ವೇಷಭೂಷಣಗಳು, ನರ್ತನ, ಗಾನ, ಇವುಗಳಿಂದಲೇ ಪ್ರೇಕ್ಷಕರು ತಲ್ಲೀನರಾಗಿ ಕಥೆಯ ಪ್ರವಾಹದಲ್ಲಿ ತೇಲುವಂತೆ ಆಗುತ್ತದೆ. ಮಾತು ಎಷ್ಟು ಕಡಿಮೆ ಆಯಿತೋ ಅಷ್ಟು ಒಳ್ಳೆಯದು. ಸುಖ, ದುಃಖ, ಕೋಪ, ಆಕ್ರಮಣ ಇತ್ಯಾದಿಗಳು ಹಾಡುವಿಕೆಯಿಂದ, ತಾಳಗಳಿಂದ, ನರ್ತನಾಭಿನಯಗಳಿಂದ, ವೇಷಭೂಷಣಗಳಿಂದ ವ್ಯಕ್ತವಾಗುತ್ತವೆ. ಕಥೆಯ ಘಟನೆಗಳಿಗೆ ಕೇವಲ ಕೊಂಡಿಯಾಗಿ ಕೆಲವು ಮಾತುಗಳಿದ್ದರೆ ಸಾಕು. ಕೆಲವೊಮ್ಮೆ ಕೇವಲ ಒಂದು ಹುಂಕಾರಮಾತ್ರದಿಂದಲೇ ಅರ್ಥವ್ಯಕ್ತವಾಗುವುದು ಸಾಧ್ಯವಿದೆ. ಬಯಲಾಟಗಳಲ್ಲಿ ಪ್ರೇಕ್ಷಕರಾಗಿ ಬರುವುದು ಪಂಡಿತರಿಗಿಂತ ಪಾಮರರೇ ಹೆಚ್ಚು. ಅವರಿಗೆ ಆಲಂಕಾರಿಕವಾದ ಭಾಷೆ ಅರ್ಥವೂ ಆಗದು. ಅವಶ್ಯವೂ ಇರದು. ದೃಶ್ಯರೂಪವಾದ ಬಯಲಾಟವನ್ನು ಮಾತುಗಾರಿಕೆಯ ವಾಗ್ವಾದದ ಕುರುಕ್ಷೇತ್ರ ಮಾಡಿದಲ್ಲಿ ಅದರ ಸದುದ್ದೇಶವನ್ನೇ ವಿಫಲಗೊಳಿಸುವಂತಾಗುತ್ತದೆ. ಇಂದಿನ ಬಯಲಾಟದ ಕಲಾವಿದರು ಈ ಪ್ರಾಮುಖ್ಯ ವಿಚಾರವನ್ನು ಸರಿಯಾಗಿ ಗಮನದಲ್ಲಿರಿಸಿಕೊಂಡಲ್ಲಿ ಕಲೆಗೆ ಹೆಚ್ಚಿನ ಜನಪ್ರಿಯತೆಯನ್ನು ಉಂಟುಮಾಡಲು ನೆರವಾಗಬೇಕೆಂದು ಪ್ರಾರ್ಥನೆ.

ತಾಳಮದ್ದಳೆಯ ಶ್ರವ್ಯರೂಪವೂ ತುಂಬಾ ಮಹತ್ತ್ವದ್ದು. ಅಲ್ಲಿ ಯಾವುದೇ ವೇಷಭೂಷಣವಿಲ್ಲದೆ ಅರ್ಥಗಾರಿಗಳು ತಮ್ಮ ನಿತ್ಯದ ಉಡುಪಿನಲ್ಲಿ ಇರುತ್ತಾರೆ. ಮುಂಡಾಸು ಕಟ್ಟಿರಬಹುದು. ತಲೆ ಬಿಟ್ಟಿರಬಹುದು, ಅಂಗಿ ಹಾಕಬಹುದು, ಕೇವಲ ಬನಿಯನ್ ಮಾತ್ರದಲ್ಲಿಯೂ ಇರಬಹುದು, ಸ್ತ್ರೀ ಪಾತ್ರಧಾರಿಗೂ ಮೀಸೆ ಇರಬಹುದು. ಆದರೆ ತಾಳಮದ್ದಳೆಯ ವಾತಾವರಣದಿಂದ ಕಥೆಯಲ್ಲಿನ ಜೀವಂತ ಪಾತ್ರಗಳು ನಮ್ಮ ಕಣ್ಣ ಮುಂದೆ ಬಂದು ನಿಂತಂತಹ ವಾತಾವರಣ ಸೃಷ್ಟಿ ಆಗುತ್ತದೆ. ಇಂತಾಗಲು ಅರ್ಥದಾರಿ ಕಲಾವಿದನಿಗೆ ಅತ್ಯಂತ ಸೂಕ್ಷ್ಮ ಕಲಾಪ್ರಜ್ಞೆ ಇರಬೇಕು ಕೇವಲ ಶೂನ್ಯದಲ್ಲಿಯೇ ಮಹತ್ತನ್ನು ಸೃಷ್ಟಿಸಿ ಅದರ ಮೂಲಕ ಇಡೀ ಶ್ರೋತೃಗಳನ್ನು ತನ್ನೊಂದಿಗೆ ತನ್ಮಯತೆಯಲ್ಲಿ ತಾಳಮದ್ದಳೆಯಲ್ಲಿ ಮಾತುಗಾರಿಕೆಯೇ ಭಂಡವಾಳ. ಬಯಲಾಟದಲ್ಲಿ ವೇಷದ ಆರ್ಭಟೆಯಲ್ಲಿ ಚಿತ್ರಿತವಾಗುವ ರಾಕ್ಷಸನ ರೂಪು ತಾಳಮದ್ದಳೆಯಲ್ಲಿ ಕುಳಿತಲ್ಲಿಯೇ ಚಿತ್ರಿತವಾಗುತ್ತದೆ. ದುಶ್ಯಾಸನನ ಕರುಳು ಬಗೆಯುವ ರೌದ್ರ ಭೀಮನ ದೃಶ್ಯವೂ ಶ್ರವ್ಯವಾಗಿಯೇ ಗೋಚರಿಸುತ್ತದೆ – ಎನ್ನುವಾಗ ತಾಳಮದ್ದಳೆಯ ಅರ್ಥಧಾರಿಗಳ ಕಲಾನೈಪುಣ್ಯ ಅಸಾಮಾನ್ಯವಾದುದೆಂದು ತಿಳಿಯದಿರದು.

ತಾಳಮದ್ದಳೆಯ ಈ ಶ್ರವ್ಯಪ್ರಕಾರದಲ್ಲಿ ಕಂಡುಬರುವ ಇಷ್ಟು ಮಹತ್ತಾದ

ಕಲಾನೈಪುಣ್ಯವೂ ಕೆಲವೊಮ್ಮೆ ರಸಾಭಾವವಾಗುವ ಸಂದರ್ಭ ಬರುತ್ತದೆ. ಮಾತಿನ ಚಾಪಲ್ಯ ಹೆಚ್ಚಿ ವಾಗ್ವಾದದ ನಿರಸತೆ ಉಂಟಾಗುತ್ತಿರುವುದನ್ನು ಕೆಲವೊಮ್ಮೆ ನಾವು ನೋಡುತ್ತೇವೆ. ಹಾಡು ನಿಂತ ಮೇಲೆ ಆ ಹಾಡಿನ ಗಮಕದಿಂದಲೇ ಸೃಷ್ಟಿಯಾದ ಕಥೆಯ ವಾತಾವರಣ ಅದಕ್ಕೆ ಇನ್ನಷ್ಟು ಪ್ರೇರಣೆ ದೊರಕುವಂತೆ ರಸಪೂರ್ಣವಾಗಿ ಅರ್ಥಧಾರಿ ಹಾಡಿನ ಸಂದರ್ಭ, ಸನ್ನಿವೇಶಗಳನ್ನು ಮಾತಿನಲ್ಲಿ ರಮ್ಯವಾಗಿ ನಿರೂಪಿಸುತ್ತಾನೆ. ಈ ನಿರೂಪಣೆಗೆ ಸಂಭಾಷಿಸುವ ಶೈಲಿ ಸಹಕಾರಿ, ನಾಟಕದಂತೆ ತಾಳಮದ್ದಳೆಯಲ್ಲಿ ಇಷ್ಟೇ ಸಂಭಾಷಣೆ ಎಂಬ ಬಾಯಿಪಾಠ ಇಲ್ಲದಿರುವುದರಿಂದ ಕೆಲವೊಮ್ಮೆ ವಾಗ್ವಾದ ಬೆಳೆಯಬಹುದು. ಕಥೆಯನ್ನು ಬಿಟ್ಟು ವಾಗ್ವಾದಕ್ಕೆ ಹೋಗದೆ ಮುಂದೆ ಭಾಗವತರು ಎತ್ತಿ ಹಾಡಬೇಕಾದ ಪದ್ಯಕ್ಕೆ ಬಂದು ನಿಲ್ಲುವಂತೆ ಎಚ್ಚರವಹಿಸಿಕೊಂಡರೆ ವಾಗ್ವಾದವಾದರೂ ಸಹ್ಯ ಹೊರತು ಆ ಮೇರೆಯನ್ನು ಮೀರಿದಲ್ಲಿ ತುಂಬಾ ಕಷ್ಟವಾಗುವುದು.

ಅರ್ಥಧಾರಿಗಳು ಮಾತನ್ನು ಬೆಳೆಸಿಕೊಂಡು ಹೋಗುವಾಗ ಕೆಲವೊಮ್ಮೆ ಪ್ರಕೃತದ ರಾಜಕೀಯ, ಸಾಮಾಜಿಕ ವಿಚಾರಗಳೂ ಅವರ ಮಾತುಕತೆಯಲ್ಲಿ ನುಸುಳಿಕೊಳ್ಳುವುದು ಸಹಜವಾದರೂ ಅದೇ ಅತಿಯಾಗುವುದನ್ನು ತಡೆಗಟ್ಟಲೇಬೇಕು. ರಾವಣನ ಬದಲು ಹಿಟ್ಲರನದೇ ಚಿತ್ರ ಕಣ್ಣಮುಂದೆ ಕಟ್ಟಬಾರದು. ಧರ್ಮಪುತ್ರನ ಬದಲು ಗಾಂಧೀಜಿ ನಮಗೆ ಕಾಣುವುದು ಸರಿಯಲ್ಲ. ಏಕೆಂದರೆ ಮುಖ್ಯವಾಗಿ ಕಥೆಯ ಚೌಕಟ್ಟಿನೊಳಗೆ ಪಾತ್ರಸೃಷ್ಟಿಮಾಡಿ ಅದರ ಗುಣಸ್ವಭಾವಗಳನ್ನು ಉದ್ಘಾಟಿಸಿ ನೀತಿಬೋಧೆ ಮಾಡುವುದು ಕಲಾವಿದರ ಕರ್ತವ್ಯ ಹೊರತು, ರಾಜಕೀಯ, ಸಾಮಾಜಿಕ ವಿಚಾರದ ಪ್ರಚಾರ ಅಲ್ಲಿ ಪ್ರಧಾನವಲ್ಲ. ಪೌರಾಣಿಕ, ಐತಿಹಾಸಿಕ ಕಥೆಗಳ ನಿರೂಪಣೆಯಲ್ಲಿ ಈ ಚಾಪಲ್ಯ ಸರ್ವಥಾ ಸಲ್ಲದು.

ಕರಾವಳಿಯುದ್ದಕ್ಕೂ ಯಕ್ಷಗಾನ ಕಲೆ ಬಹಳ ಜನಪ್ರಿಯವಾಗಿ ರೂಢ ಮೂಲವಾಗಿರಲು ಮುಖ್ಯ ಕಾರಣವೆಂದರೆ ಇಲ್ಲಿನ ಪ್ರಾಕೃತಿಕ ಹಿನ್ನೆಲೆ ಎನ್ನಬಹುದು. ಉನ್ನತವಾದ ಪಶ್ಚಿಮಾದ್ರಿ ಬೆಂಗಡೆ, ಭೋರ್ಗರೆವ ಕಡಲ ಗಂಭೀರನಾದ ಮುಂಗಡೆ, ಮಧ್ಯೆ ಹಸಿರು ಹಚ್ಚನೆಯ ಸಸ್ಯಶಾಲಿ ಭೂಮಿ. ಫಲಬಾರದಿಂದ ತಲೆದೂಗುವ ಕಂಗು – ತೆಂಗುಗಳು, ತಾಳೆ–ಬಾಳೆಗಳು, ಕಲಕಲನಿನಾದದ ನದಿಗಳು – ಇಂತಹ ಸನ್ನುವೇಶದಲ್ಲಿ ಮರ್ತ್ಯಲೋಕಕ್ಕೆ ಸ್ವರ್ಗದ ಸನ್ನಿಧಿಯನ್ನು ತರಿಸುವ ಕಥೆ, ವೇಷಭೂಷಣ, ಮಾತುಗಾರಿಕೆ, ನಟನೆ ಇತ್ಯಾದಿಗಳು ಇವೆಲ್ಲವನ್ನೂ ಅನಿಮಿಷನೇತ್ರರಾಗಿ ನೋಡುತ್ತ ಆನಂದಿಸುವ ಮುಗ್ಧ ಜನ, ಹೆಚ್ಚಿನವರು ಹಳ್ಳಿಯ ರೈತರು. ಇಡೀ ದಿನ ಬೆವರು ಸುರಿಸಿ ದುಡಿದ ದುಡಿಮೆಯ ತಮ್ಮ ಎಲ್ಲ ಆಯಾಸವನ್ನು ಪರಿಹರಿಸುವರೆ ಈ ಕಲ್ಪನೆಯ ಮಾಯಾಸೃಷ್ಟಿಯ ಅಪೂರ್ವದರ್ಶನ ಈ ಯಕ್ಷಲೋಕ ವಿಹಾರ. ಇಂತಹ ಒಂದು ಪರಿಕರ ಮತ್ತು ಪರಿಸರ ಕರಾವಳಿಯ ಯಕ್ಷಗಾನ ಕಲೆಯ ಸುಂದರ

ಸೃಷ್ಟಿಗೆ ತುಂಬ ಪ್ರಚೋದಕ. ಆದ್ದರಿಂದಲೇ ಇಂದು ತುಂಬ ಆಡಂಬರದ ವಿವಿಧ ಪರದೆಗಳ, ದಕ್ಷಿಣಾದಿ ಉತ್ತರಾದಿ ಸಂಗೀತ ಸಮ್ಮಿಶ್ರಣದ ವೈಭವೋಪೇತವಾದ ನಾಟಕ ಸಿನೆಮಾಗಳು ಧಾರಾಳ ಬಂದಿದ್ದರೂ ಯಕ್ಷಗಾನ ಕಲೆ ಬಯಲಾಟ ಮತ್ತು ತಾಳಮದ್ದಳೆ ಕರಾವಳಿಯ ಕನ್ನಡ ನೆಲದಲ್ಲಿ ಇನ್ನಷ್ಟು ಸಮೃದ್ಧವಾಗಿ ಬೆಳೆಯುತ್ತಿದೆ ಎಂಬುದು ಸಂತೋಷಕರ. ನಾಟಕ ಸಿನೆಮಾಗಳಿಗಾದರೋ ನುರಿತ ನಿರ್ದೇಶಕರಿರಲೇಬೇಕು. ನೈಸರ್ಗಿಕ ಪರಿಕರಗಳನ್ನೊದಗಿಸುವ ಪರದೆ, ದೃಶ್ಯಾವಳಿಗಳು ಧಾರಾಳ ಅಗತ್ಯ. ಅದರೆ ಈ ನೈಸರ್ಗಿಕ ಕಲಾರಾಧನೆಗೆ ತೆರೆ ನರ್ತನವೊಂದನ್ನುಳಿದರೆ ಪರದೆಯೇ ಇಲ್ಲ. ಭಾಗವತನ ಹಾಡುಗಾರಿಕೆ, ಚೆಂಡೆ – ಮದ್ದಳೆಗಳ ವಾದನ ಹೊರತು ನಿರ್ದೇಶನವಿಲ್ಲ. ಆದರೂ ಈ ಕಲೆಯು ಸಂಜೆಯಿಂದ ಮುಂಜಾನೆಯ ವರೆಗೆ ಇಡೀ ರಾತ್ರಿ ಜನರ ಮನಸ್ಸಿನಲ್ಲಿ ಮೋಹಕ ಬಲೆಯನ್ನು ಬೀಸಿ ಅವರನ್ನು ಸೆರೆಹಿಡಿದು ನಿಲ್ಲಿಸುತ್ತದೆ.

ಯಕ್ಷಗಾನದ ಈ ಪ್ರಭಾವವೇ ಇರಬೇಕು ಕರಾವಳಿಯ ಕನ್ನಡ ನೆಲದಲ್ಲಿ ಹೊಡೆದಾಟ, ಜಗಳಗಳು, ಕೊಲೆಪಾತಕಗಳು ಕಡಿಮೆ. ಹೆಚ್ಚಿನವರು ವಿದ್ಯಾವಂತರಲ್ಲದಿದ್ದರೂ, ಕೇವಲ ನಿರಕ್ಷರಕುಕ್ಷಿಗಳು ಕೂಡ ಯಾವುದು ಒಳ್ಳೆಯದು ಯಾವುದು ಕೆಟ್ಟದು ಎಂದು ಅರಿತುಕೊಳ್ಳಬಲ್ಲರು. ಪುರಾಣಕಥೆಗಳನ್ನು ಯಕ್ಷಗಾನ ಕಲೆಯ ಮಾಧ್ಯಮದ ಮೂಲಕ ಬಯಲಾಟ ತಾಳಮದ್ದಳೆಗಳಲ್ಲಿ ತಲ್ಲೀನರಾಗಿ ನೋಡಿ ಅದರಲ್ಲಿನ ನೀತಿಯನ್ನು ಗ್ರಹಿಸಿಕೊಂಡು ಸಂಸ್ಕೃತಿ ಎನ್ನುವುದು ಕೇವಲ ಅಕ್ಷರಾಭ್ಯಾಸದಿಂದ ಬರತಕ್ಕದಲ್ಲ, ಅದು ಹೃದಯಕ್ಕೆ ಪಾಕ. ಅಂತಹ ಸಹೃದಯತೆಯ ರಸಪಾಕವನ್ನು ಕರಾವಳಿಯುದ್ಧಕ್ಕೂ ಯಕ್ಷಗಾನ ಒದಗಿಸುತ್ತದೆ ಎನ್ನುವುದು ನಾಡಿನ ಪುಣ್ಯ. ಇಲ್ಲಿನ ಜನ "ಕುರಿತೋದದೆಯುಂ ಕಾವ್ಯಪ್ರಯೋಗಪರಿಣತಮತಿಗಳ್" ಆಗಿರಲು ಯಕ್ಷಗಾನವೇ ಮೂಲ ಕಾರಣ.

ಯಕ್ಷಗಾನದಲ್ಲಿ ಭಾಗವತ ಮುಖ್ಯಸ್ಥ. ಭಾಗವತ ಸಕಲ ಕಲಾಕೋವಿದನಿರಬೇಕು, ಹಾಡುಗಾರಿಕೆಯ ಜತೆಯಲ್ಲಿ ಸಾಹಿತ್ಯಪ್ರಜ್ಞೆ, ಕಥಾಜ್ಞಾನ, ತಾಳಗಳ ತಿಳುವಳಿಕೆ, ನರ್ತನದ ರೀತಿ ಎಲ್ಲವೂ ಆತನು ಅರಿತಿರಬೇಕು. ಆದ್ದರಿಂದಲೇ ಭಾಗವತನ ಸ್ಥಾನ ಹಿರಿದು. ಆತನಿಗೆ ನಮಸ್ಕಾರ ಮಾಡಿ ವೇಷಧಾರಿ ರಂಗಪ್ರವೇಶ ಮಾಡತಕ್ಕದ್ದು. ಆತನ ಹಾಡಿನ ತಾಳದ ಗತಿಯೇ ರಂಗಸಜ್ಜಿಕೆಯ ಸಕಲ ಸಾಧನ ಕೂಡ, ವೇಷಧಾರಿಯ ಸ್ವಗತ ಸಂಭಾಷಣೆ ಭಾಗವತರೊಡನೆ. ರಂಗಸ್ಥಳದ ಮಧ್ಯಸ್ಥನೂ ಭಾಗವತನೇ. ಚೆಂಡೆ – ಮದ್ದಳೆಯವರೋ, ಶ್ರುತಿಯವರೋ, ಪಾತ್ರ ಪ್ರವೇಶವೋ, ಎಲ್ಲವೂ ಆತನ ಎಡ ಬಲ ಸುತ್ತಮುತ್ತ. ಸಮಾಜದಲ್ಲಿ, ಸಭೆಯಲ್ಲಿ ಗುರಿಕಾರನಂತೆ ಎದ್ದು ತೋರುವ ಠೀವಿ ಆತನದು. ಹಿಂದಿನ ಮತ್ತು ಇಂದಿನ ಎಲ್ಲಾ ಹೆಸರಾಂತ ಭಾಗವತರು ಈ ಹಿರಿದಾದ ಸ್ಥಾನ ಗೌರವವನ್ನು ಉಳಿಸಿಕೊಂಡೇ ಬಂದಿದ್ದಾರೆ. ಈ ಪರಂಪರೆ

ಮುಂದೆಯೂ ನಡೆಯುತ್ತಿರಬೇಕು. ಯಾವುದೇ ನಾಗರಿಕ ಸಮಾಜ ತಮ್ಮ ಮುಂದಾಳು ಒಬ್ಬನನ್ನು – ಅವನು ಶಾಸಕನಿರಬಹುದು, ಮಂತ್ರಿ ಇರಬಹುದು, ಮಠಾಧಿಪತಿ ಇರಬಹುದು – ಒಪ್ಪಿಕೊಂಡು ಶಿಸ್ತಿನಿಂದ ವ್ಯವಸ್ಥೆಯಿಂದ ನಡೆದುಕೊಳ್ಳುವಂತೆ, ಯಕ್ಷಗಾನ ಕ್ಷೇತ್ರದಲ್ಲಿ ಭಾಗವತನ ಅಧಿಕಾರಕ್ಕೆ ಎಲ್ಲವೂ ಒಳಗಾಗಿರಬೇಕು. ಹಾಗಾಗಿ ಆ ಸ್ಥಾನ ಅತ್ಯಂತ ಹಿರಿದಾದುದು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನಾಡಿನ ಹಿರಿಯ ಭಾಗವತರೂ, ನಮ್ಮ ಊರಿನವರೂ ಆದ ಬಲಿಪ ನಾರಾಯಣ ಭಾಗವತರ ಕುರಿತು ಸಂಸ್ಮರಣೆ ಮಾಡಿ ಅಂದು ಒಂದು ಕವನ ಕಟ್ಟಿದೆ.

"ಸ್ವರ್ಗಮರ್ತ್ಯಗಳ ನಡುವೆ ನೆಲಸಿಹುದು – ಯಕ್ಷಗಂಧರ್ವಲೋಕ
ದಿವ್ಯನವ್ಯತೆಯ ಶಿವದ ಸುಂದರದ ಶ್ರೇಯಪ್ರೇಯಸಿನ ಪಾಕ
ಭೂಮಿಯೆತ್ತರದಿ ಬಾನಬಿತ್ತರದಿ ಬಾನಬಿತ್ತರದಿ ಎಲ್ಲಿಯಿಲ್ಲವಾತಂಕ
ಅವರು ಕಿಂಪುರುಷರವರು ಕಿನ್ನರರು ಗಾನಲಹರಿ ನಿಶ್ಯಂಕ

ಜೀವಭಾವ ನರ್ತಿಸಿತು ರೂಪರಸ ಮಿಂಚುತಿರಲು ಮುದವೇರಿ
ಪೃಥ್ವಿಶ್ಯಾಮಲೆಯ ಮೈಗೆ ರೋಮಾಂಚ ಚೆಂಡೆಮದ್ದಳೆಯ ಮೀರಿ
ಮೇಘನಿರ್ಘೋಷ ಶ್ರುತಿಯ ಜೋಡಿಸಿತು ಕಡಲು ಗರ್ಜನೆಯ ತೋರಿ
ಅಟ್ಟಹಾಸ ಮುಗಿಲಟ್ಟವೇರಿತು ದೇವದಾನವರು ಸೇರಿ

ತೆಂಗುಕಂಗುಗಳು ತಾಳೆಬಾಳೆಗಳು ಗೊನೆಯು ತೊನೆಯು ತೂಗುತಿರೆ
ತೆರೆಯ ಕುಣಿತದಲಿ ಹರಿವ ಮಣಿತದಲಿ ನದಿಯು ನಾಟ್ಯವಾಡುತಿರೆ
ಪಕ್ಷಿಕೂಜನದ ವಾದ್ಯವಾದನದ ತಾಳಹಿಮ್ಮೇಳ ಸೇರೆ
ಬಂತು ಆವೇಶ! ನೋಡು ಈ ವೇಷ! ಸುತ್ತು ಸಂತೋಷ ಸೂರೆ

ಸೃಷ್ಟಿ ರೂಪಕದ ಸೂತ್ರಪಾತ್ರಗಳ ಜೋಡಿಸುವನು ಭಗವಂತ
ಅದರ ಪ್ರತಿಬಿಂಬ ಬಿದ್ದ ಬಯಲಾಟ ಆಡಿಸುವನು ಭಾಗವತ
ತಾನು ಮೈಮರೆತು ಜಗವ ಮೈಮರೆಸಿ ಕುಣಿಸುತಿದ್ದ ಜೋರಾಗಿ
ಹಿಗ್ಗಿ ಹಾಡಿದನೊ ಹಾಡಿ ಹಿಗ್ಗಿದನೊ – ಗಾನಗಂಧರ್ವಯೋಗಿ
ನಾಡಿನುದ್ದಗಲ ಹಾಡುತಿದ್ದನು – ಹಗಲುಕತ್ತಲೆಯ ಕೂಡಿ
ಹಿಡಿದ ಜಾಗಟೆಯ ಬಡಿದ ತಾಳಕೆ ಚೆಂಡೆಮದ್ದಳೆಯು ಜೋಡಿ

ಹತ್ತು ಶಿರಗಳನು ಹೊತ್ತು ದೈತ್ಯನೂ ಸತ್ತ ಧರ್ಮವನು ದೂಡಿ
ಧರ್ಮಕಲ್ತೆ ಜಯ ಮಹಾಭಾರತದ ಕುರುಕ್ಷೇತ್ರ ರಣ ನೋಡಿ

ಇಂದು ಕಲ್ಯಾಣ ನಾಳೆ ಕಾಳಗವು ಈ ಪ್ರಸಂಗಗಳೆ ಮರಳಿ
ಅದನೆ ಎಚ್ಚರಿಸಿ ನಾಡನೆಚ್ಚರಿಸಿ ಬಾಳಿಗರ್ಥವನು ಹೇಳಿ
ಜೀವಚೈತನ್ಯ ಚಿಮ್ಮಿ ಹೊಮ್ಮಿಸಿದೆ ಧಿಮ್ಮಿಧೀಂಕಿಟಂ ನೃತ್ಯ
ಬಿಂಬವೆಂತೊ ಪ್ರತಿಬಿಂಬವಂತೆಯೇ ನೀನೆ ಭಾಗವತ ಸತ್ಯ"

ಭಾಗವತ ಎಂಬ ಪದ ಭಗವಂತನಿಗೆ ಸಂಬಂಧಿಸಿದ್ದು ಎಂಬ ಅರ್ಥದಲ್ಲಿ ಬಂದಿದೆ. ಆತನು ಭಗವದ್ಭಕ್ತನೂ ಆಗಿರಬೇಕು. ತನ್ನ ಗುಣ ಗೌರವಗಳನ್ನು ಹೆಚ್ಚಿಸಿಕೊಂಡಲ್ಲಿ ಇತರರಿಂದ ವಿಧೇಯತೆಯನ್ನು ಸಹಜವಾಗಿ ಪಡೆಯಬಹುದು. ಶ್ರೇಷ್ಠನಾದ ಅಧ್ಯಾಪಕನು ಮಾತ್ರ ಶಿಷ್ಯವರ್ಗದ ಪ್ರೀತಿಗೆ ಪಾತ್ರನಾಗುತ್ತಾನೆ. ಪ್ರಸಿದ್ಧರಾದ ಎಲ್ಲ ಭಾಗವತರೂ ಸಕಲಗುಣಸಂಪನ್ನರಿದ್ದರು. ಪ್ರತಿಯೊಬ್ಬರಿಗೂ ಯಕ್ಷಗಾನದ ಸರ್ವಾಂಗ ಪರಿಣತಿ ಇತ್ತು. ನೂರಾರು ಪ್ರಸಂಗಗಳು ಕಂಠಪಾಠ ಬರುತ್ತಿದ್ದುವು. ಆದರೆ ಇಂದು ತೋರುವ ಶೋಚನೀಯ ಸ್ಥಿತಿಯೊಂದು ಎಂದರೆ ಪುಸ್ತಕಗಳನ್ನು ನೋಡಿ ಹಾಡುವುದು. ಒಂದು ಶ್ರುತಿಯಲ್ಲಿ, ಒಂದು ಗಮಕದಲ್ಲಿ, ಒಂದು ಸ್ಫೂರ್ತಿಯಲ್ಲಿ, ಒಂದು ರಸಾವೇಶದಲ್ಲಿ ಭಾಗವತ ಹಾಡಬೇಕಿದ್ದರೆ ಸಹಜವಾಗಿ ಆತನಿಗೆ ಪ್ರಸಂಗದ ಪದ್ಯಗಳು ಮುಖಪಾಠ ಬರಲೇಬೇಕು. ಇಲ್ಲವಾದರೆ ಅವೆಲ್ಲಕ್ಕೂ ಸ್ವಲ್ಪ ಸ್ವಲ್ಪ ಭಂಗ ಬಂದು ಒಟ್ಟಿನಲ್ಲಿ ಹಾಡುಗಾರಿಕೆಯ ಗಾಂಭೀರ್ಯ, ಗತ್ತು ಕೆಟ್ಟು ಹೋಗದೆ ಇರದು. ವೇಷಧಾರಿಗಳನ್ನು ಚೆಂಡೆ ಮದ್ದಳೆಯನ್ನು, ಪ್ರೇಕ್ಷಕರನ್ನು, ಸಭೆ – ಸಮಸ್ತರನ್ನೂ ತನ್ನ ಹಾಡುಗಾರಿಕೆಯಿಂದ ತೇಲಿಸಿಕೊಂಡು ಹೋಗಬೇಕಾಗಿದ್ದರೆ ಭಾಗವತನಿಗೆ ಪ್ರಸಂಗಗಳ ಬಾಯಿಪಾಠ ಅತೀ ಅವಶ್ಯವೆನ್ನದೆ ನಿರ್ವಾಹವಿಲ್ಲ.

ಕರ್ನಾಟಕವೂ, ಮಹಾರಾಷ್ಟ್ರವೂ ಎಷ್ಟೇ ಭಾಷಾರಾಜ್ಯಗಳು ಆಗಿದ್ದರೂ ಮೂಲತಃ ಭಾರತರಾಷ್ಟ್ರ ಒಂದೇ ಆಗಿರುವಂತೆ, ಧಾರವಾಡದ, ಮೈಸೂರಿನ, ಉತ್ತರಕನ್ನಡ, ದಕ್ಷಿಣಕನ್ನಡಗಳ ಮಾತುಗಳು ಎಲ್ಲ ಧಾಟಿ, ಸ್ವರಭಾರ ಹೆಚ್ಚು ಕಡಿಮೆಯಿದ್ದರೂ ಕನ್ನಡ ಮಾತುಗಳೆಲ್ಲವೂ ಒಂದೇ ಕನ್ನಡ ಭಾಷೆಯೇ ಆಗಿರುವಂತೆ ಇಂದು ಕೆಲವರು ತೆಂಕುತಿಟ್ಟು, ಬಡಗುತಿಟ್ಟು, ಉತ್ತರಕನ್ನಡತಿಟ್ಟು ಎಂದು ಮೊದಲಾಗಿ ಹೇಳುತ್ತಿರುವ, ತಮ್ಮ ತಮ್ಮದೇ ಶ್ರೇಷ್ಠವೆಂದೂ ವಾದಿಸುತ್ತಿರುವ ಈ ಎಲ್ಲ ಯಕ್ಷಗಾನ ರೀತಿಗಳೂ ಮೂಲತಃ ಒಂದೇ ಎಂಬುದನ್ನು ನಾವು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು. ವಾತಾವರಣದ ಹಲಕೆಲವು ಪ್ರಭಾವಗಳ ದೆಸೆಯಿಂದ ಭಾಷೆ, ಕಲೆಗಳ ಪ್ರಾಕಾರಗಳಲ್ಲಿ ಉಂಟಾಗುವ ಅಲ್ಪ ಸ್ವಲ್ಪ ಭೇದಗಳನ್ನು ಬೃಹದ್ರೂಪ ಮಾಡಿ ಹೊಗಳುವುದಾಗಲಿ,

ತೆಗಳುವುದಾಗಲಿ ಸರ್ವಥಾ ಸಲ್ಲದು. ಸಂಸ್ಕೃತದಲ್ಲಿಯೂ ವೈದರ್ಭೀ, ಗೌಡೀ ರೀತಿ ಎಂಬೀ ತೆರನ ಭಾಷಾ ಭೇದವನ್ನು ಲಾಕ್ಷಣಿಕರು ಗುರುತಿಸಿದ್ದಾರೆ. ಕನ್ನಡದ ಪ್ರಾಚೀನ ಗ್ರಂಥವಾದ 'ಕವಿರಾಜಮಾರ್ಗ'ದಲ್ಲಿ ದಕ್ಷಿಣೋತ್ತರ ಮಾರ್ಗಗಳ ಭೇದ ತಿಳಿಸಿದೆ. ಸಂಗೀತದಲ್ಲಿಯೂ ದಕ್ಷಿಣಾದಿ, ಉತ್ತರಾದಿ ಧಾಟಿಗಳಿವೆ. ಹೀಗಿದ್ದರೂ ಮೂಲತಃ ಹೇಗೆ ಸಂಸ್ಕೃತ ಭಾಷೆ ಒಂದೇ ಆಗಿದೆಯೋ ಹಾಗೆ ಯಕ್ಷಗಾನವೂ ಈ ಸಣ್ಣ ಪುಟ್ಟ ಭೇದವನ್ನು ಒಳಗೊಂಡಿದ್ದರೂ ಒಂದೇ ಎಂಬ ನೆಲೆಗೆ ನಾವೆಲ್ಲರೂ ಬರಬೇಕಾಗಿದೆ. ಯಕ್ಷಗಾನ ಕಲೆಯನ್ನು, ಕಲಾವಿದರನ್ನು ಗೌರವಿಸುವಲ್ಲಿ ಅರ್ಹತೆ ಇದ್ದರೂ ಅವಗಣಿಸಲು ಈ ತಿಟ್ಟುಗಳ ಸಂಕುಚಿತಮತಿಯೇ ಕಾರಣವೆಂದು ದೂರು ಕೇಳಿ ಬರುವುದು ಯಕ್ಷಗಾನದ ಆರೋಗ್ಯಕರ ಬೆಳವಣಿಗೆಗೆ ಬಾಧಕವಾಗುವುದು.

ಬಯಲಾಟದಲ್ಲಿ ಸ್ತ್ರೀ ಪುರುಷ ಪಾತ್ರಧಾರಿಗಳನ್ನು 'ವೇಷಧಾರಿಗಳು' ಎಂದು ಹೇಳುವಂತೆ, ತಾಳಮದ್ದಳೆಯಲ್ಲಿ ಅರ್ಥ ಹೇಳುವವರನ್ನು ಅರ್ಥಧಾರಿಗಳು ಎಂದೇ ಕರೆಯುತ್ತಾರೆ. ಮೇಲಿಂದ ಮೇಲೆ ನೋಡುವಾಗ ಅರ್ಥಧಾರಿ ಎನ್ನುವ ಪದ ಅಷ್ಟು ಸಮಂಜಸವೆಂಬಂತೆ ಭಾಸವಾಗುವುದಿಲ್ಲ. ರಾವಣನದ್ದೋ, ರಾಮನದ್ದೋ. ಸೀತೆಯದ್ದೋ, ತಾಟಕಿಯದ್ದೋ ವೇಷ ಧರಿಸುವುದು ಸರಿಯೆ. ಆದರೆ ತಾಳಮದ್ದಳೆಯಲ್ಲಿ ಆಯಾಯ ಪಾತ್ರಗಳನ್ನು ತಮ್ಮಲ್ಲಿ ಆವಾಹಿಸಿಕೊಂಡು ಪ್ರಸಂಗದ ಹಾಡುಗಳಿಗೆ ಅರ್ಥ ಹೇಳುವುದು ಮಾತ್ರ ಎಂಬುದರಿಂದ ಅರ್ಥವಾದಿಗಳು ಎನ್ನಬಹುದೋ ಎಂಬ ಆಕಾಂಕ್ಷೆ ಹುಟ್ಟುತ್ತದೆ. ಆದರೆ ಅರ್ಥಧಾರಿ ಎಂಬ ಪದವೇ ತುಂಬಾ ಅರ್ಥವುಳ್ಳದ್ದೂ ಸಮಂಜಸವೂ ಎಂದು ತೋರುತ್ತದೆ. ತಾಳಮದ್ದಳೆಯಲ್ಲಿ ಆಯಾಯ ಪಾತ್ರವಹಿಸಿ ಅರ್ಥ ಹೇಳುವವನು ಸ್ವತಃ ಆಯಾಯ ಪಾತ್ರವನ್ನು ಧರಿಸಿ ಮಾತನಾಡುವವನಂತೆ ಪಾತ್ರಗಳಲ್ಲಿ ತನ್ಮಯತೆ ಹೊಂದಬೇಕು. ಬಯಲಾಟದಲ್ಲಿ ವೇಷಧಾರಿ ಹೇಗೆ ನಮ್ಮ ಕಣ್ಣಮುಂದೆ ಪುರಾಣಕಾಲದ ಅಥವಾ ಐತಿಹಾಸಿಕ ಕಾಲದ ಪಾತ್ರಗಳ ಯಥಾವತ್ ಚಿತ್ರವನ್ನು ತೋರಿಸುತ್ತಾನೋ, ಅಂತೆಯೇ ತಾಳಮದ್ದಳೆಯಲ್ಲಿ ಅರ್ಥ ಹೇಳುವವನೂ ಆಯಾಯ ಪಾತ್ರ ಧರಿಸಿದವನೆಂಬ ಪೂರ್ಣವಾದ ಪ್ರಜ್ಞೆಯಿಂದ ಕಲೆಯನ್ನು ನಿರೂಪಿಸುತ್ತಾನೆ. ಇಷ್ಟು ಗಂಭೀರವಾದ, ಧ್ವನಿಪೂರ್ಣವಾದ ಕಲಾವಂತಿಕೆಗೆ ಸಹಾಯಕವಾದ ತುಂಬಿದ ಅರ್ಥವನ್ನು ಅರ್ಥಧಾರಿ ಎಂಬ ಪದವು ಕೊಡುತ್ತದೆ. ತಾಳಮದ್ದಳೆಯ ಅರ್ಥಧಾರಿಗಳು ಸಂಪೂರ್ಣವಾಗಿ ಎಚ್ಚರವಿಟ್ಟು ಈ ಪದದ ಗಾಂಭೀರ್ಯವನ್ನು ಪಾಲಿಸಿಕೊಂಡು ಬರಬೇಕು.

ಆಟದಲ್ಲಾಗಲಿ, ತಾಳಮದ್ದಳೆಯಲ್ಲಾಗಲಿ ಪ್ರಸಂಗಗಳ ಹಾಡುಗಳಿಗೆ ಪಾತ್ರ ವರ್ಗ ಅರ್ಥ ಹೇಳುವಾಗ, ಆ ಕುರಿತು ಸಂಭಾಷಿಸುವಾಗ, ವಾದ–ವಿವಾದ ನಡೆಸುವಾಗ ಆ ಪ್ರಸಂಗಕರ್ತೃ ಯಾವ ಮೂಲಕಥೆಯಿಂದ ವಸ್ತುವನ್ನು ಆಯ್ದುಕೊಂಡಿದ್ದಾನೋ ಆ ಕಥೆಗೆ ಅನುಗುಣವಾದ ಮಾತುಗಾರಿಕೆ ಇರಬೇಕಾದುದು ಅವಶ್ಯ. ನಮ್ಮಲ್ಲಿ

ಪ್ರಚಾರದಲ್ಲಿರುವ ಹೆಚ್ಚಿನ ಪ್ರಸಂಗಗಳು ಬಹುಭಾಗ ತೊರವೆ ರಾಮಾಯಣ ಆಧರಿಸಿ ಬರೆದವುಗಳು. ಜೈನರಾಮಾಯಣದಲ್ಲಿ ರಾವಣನನ್ನು ಕೊಲ್ಲುವುದು ಶ್ರೀರಾಮನಲ್ಲ. ಲಕ್ಷ್ಮಣ. ಆಜನ್ಮ ಬ್ರಹ್ಮಚಾರಿ ಎಂದು ಭಾರತೀಯ ಪುರಾಣಗಳಲ್ಲಿ ಪ್ರಥಿತನಾದ ನಾರದನನ್ನು ಸೀತಾಸ್ವಯಂವರದಲ್ಲಿ ಓರ್ವ ವಿವಾಹೇಚ್ಛು ಎಂದು ಜೈನ ರಾಮಾಯಣ ಚಿತ್ರಿಸಿದೆ. ಹಾಗಾಗಿ ಹಲವು ರಾಮಾಯಣಗಳನ್ನು ಬಲ್ಲ ವಿದ್ವಾಂಸರಾದ ಅರ್ಥಧಾರಿಗಳು ಆಯಾಯ ಪ್ರಸಂಗಗಳಿಗೆ ಮೂಲಾಧಾರವಾದ ಕೃತಿಗೆ ತಮ್ಮ ಅರ್ಥಗಾರಿಕೆಯನ್ನು ಸೀಮಿತಗೊಳಿಸದೆ ಒಂದು ಪುರಾಣದಿಂದ ಇನ್ನೊಂದು ಪುರಾಣಕ್ಕೆ ಶಾಖೋಲ್ಲಂಘನ ಮಾಡುವುದು ಸರ್ವಥಾ ಕೂಡದು. ಹಾಗೆ ಪಾಂಡಿತ್ಯ ಪ್ರದರ್ಶನ ಮಾಡುವುದರಿಂದ ಔಚಿತ್ಯ ಭಂಗವಾಗುತ್ತದೆ ಎಂಬ ಯಥಾರ್ಥತೆಯನ್ನು ವಿದ್ವಾಂಸರಾದ ಅರ್ಥಧಾರಿಗಳು ತಿಳಿದುಕೊಳ್ಳುತ್ತಾರೆಂದು ನಾನು ನಂಬುತ್ತೇನೆ. ದೊಡ್ಡ ವಿದ್ವಾಂಸನೂ ತರ್ಕಶಾಸ್ತ್ರಪಟುವೂ ಆದ ರಾವಣ ಅರ್ಥಧಾರಿ ತನ್ನ ವಾಗ್ವೈಖರಿಯಿಂದ ಆತನಿಗಿಂತ ಕಡಿಮೆ ವಾಚಾಳಿಯಾದ ಶ್ರೀರಾಮ ಪಾತ್ರಧಾರಿಯಲ್ಲಿ ಸೋಲದೆ ಚಿರಂಜೀವಿಯಾಗುವ ಆಭಾಸವೂ ಬರಬಹುದು. ಇಂತಹ ವಿಷಯವನ್ನು ನಾನು ಅರ್ಥಧಾರಿಗಳ ಅಯೋಗ್ಯತೆಯೆಂದು ಸರ್ವಥಾ ಹೇಳುವುದಿಲ್ಲವಾದರೂ ಯೋಗ್ಯತೆಯ ಅತಿವೃದ್ಧಿಯಿಂದ ಕಲೆಯ ಬೆಳೆ ನಶಿಸದಂತೆ ಎಚ್ಚರವಹಿಸಬೇಕೆಂದು ಮಾತ್ರ ವಿನಂತಿಸುತ್ತೇನೆ.

ಇಂದಿನೀ ಸಮಾರಂಭ ಯಕ್ಷಗಾನ ಸಾಹಿತ್ಯಸಮ್ಮೇಳನ; ಸಾಹಿತ್ಯವನ್ನು ಮಾರ್ಗಸಾಹಿತ್ಯ. ದೇಸೀಸಾಹಿತ್ಯ ಎಂದು ಎರಡು ವಿಭಾಗ ಮಾಡಬಹುದು. ಯಕ್ಷಗಾನವು ದೇಸೀಸಾಹಿತ್ಯ ವರ್ಗಕ್ಕೆ ಸೇರಿದ್ದು. ದಾಸಸಾಹಿತ್ಯ, ಶರಣವಚನ, ಯಕ್ಷಗಾನ ಇವು ಸಮೀಪ ಸಮೀಪದವು. ಇವು ಮೂರೂ ಭಕ್ತಿಪಂಥದ ಪ್ರಕಾರಗಳಾಗಿ ಪ್ರಚುರವಾಗಿವೆ. ಯಕ್ಷಗಾನದಲ್ಲಿ ಭಕ್ತಿಪ್ರಚಾರದ ಜತೆಯಲ್ಲಿ ಉತ್ತಮ ಮನೋರಂಜನೆಯೂ ಒದಗುವುದರಿಂದ ಈ ದೇಸೀಪ್ರಕಾರವು ಜನಸಾಮಾನ್ಯರಲ್ಲಿ ಹೆಚ್ಚು ಜನಪ್ರಿಯವಾಗಿ ಪ್ರಚಾರವಾಯಿತು. ಯಕ್ಷಗಾನಸಾಹಿತ್ಯವನ್ನು ಜನಪದವೆಂದು ಹೇಳುವುದು ಅಷ್ಟೇನೂ ಸಮಂಜಸವಾಗಲಾರದು. ಯಕ್ಷಗಾನಪ್ರಸಂಗಗಳ ಭಾಷೆ ಜಾನಪದವಲ್ಲ, ಮಾರ್ಗಸಾಹಿತ್ಯಕ್ಕೆ ತೀರಾ ಹತ್ತಿರದ್ದು. ಯಕ್ಷಗಾನದ ಪರಮಶ್ರೇಷ್ಠ ಕವಿಯೆನಿಸಿದ ಪಾರ್ತಿಸುಬ್ಬನ ಕೃತಿಗಳಲ್ಲಿ ಕಾಣುವ ಉತ್ತಮ ಸಾಹಿತ್ಯಿಕಮೌಲ್ಯ ಪ್ರಶಂಸಾರ್ಹ.

ಮಹಾಕವಿಯಾದ ನಾಗಚಂದ್ರನು ತನ್ನ ರಾಮಚಂದ್ರಚರಿತಪುರಾಣದಲ್ಲಿ ಸೀತಾವಿರಹತಪ್ತನಾದ ಶ್ರೀರಾಮನ ವ್ಯಥೆಯನ್ನು ಇಂತು ವರ್ಣಿಸುತ್ತಾನೆ :

ಕಳಹಂಸಾಲಸಯಾನೆಯಂ ಮೃಗಮ್ಮದಾಮೋದಾಸ್ಯನಿಶ್ವಾಸೆಯಂ

ತಳಿರೇ ತಾವರೆಯೇ ಮದಾಳಿ ಕುಳಮೇ ಕರ್ನೈಯ್ದಿಲೇ ಮತ್ತ ಕೋ
ಕಿಳಮೇ ಕಂಡಿರೆ ಪಲ್ಲವಾಧರೆಯನಂಭೋಜಾಸ್ಯೆಯಂ ಭೃಂಗ ಕುಂ
ತಳೆಯಂ ಕೈರವನೇತ್ರೆಯಂ ಪಿಕರವಪ್ರಖ್ಯಾತೆಯಂ ಸೀತೆಯಂ

ಇದೇ ಸಂದರ್ಭದಲ್ಲಿ ಪಾರ್ತಿಸುಬ್ಬ ಕವಿಯ ಪಂಚವಟಿ ಪ್ರಸಂಗದಲ್ಲಿನ ವರ್ಣನೆಯ ಸಾಹಿತ್ಯಾಂಶವನ್ನು ಗಮನಿಸಿರಿ :

ವಚನ :

ಪರ್ಣಶಾಲೆಯಲಿ ಸತಿ ಇಲ್ಲದಿರಲು, ಹಗಲುಕತ್ತಲೆಯಾಯ್ತು ಸಿಡಿಲೆರಗಿದಂತೆ ನಾಲಗೆ ಸೆಳೆದುದೆದೆಮೀರಿ ಲಕ್ಷ್ಮಣಂ ನಡುಗಿ ಕೈಮುಗಿದು ನಿಂದಿರೆ, ಸೀತೆ ಏನಾದಳೋ ಎಂದು ತಮ್ಮಗೆ ಅಬ್ಜಾಕ್ಷ ನುಡಿದ

ಪೊಡವಿಗಿಡ ಮರಕಲ್ಲು ನೋಡಿದರೆ ಅರಸಿನದ । ಪುಡಿಗೆದರಿದಂತಿಹುದು ತಮ್ಮಾ ॥

ಒಡಲೊಳುಂ ಹರಿಹರಿದು ಚೈತನ್ಯ ಬರಬಂತು । ನಡುಗುತಿದೆ ಕೈಕಾಲು ತಮ್ಮಾ॥

ನುಡಿವೆನೆಂದರೆ ಗಂಟಲೆಡೆಯ ಕೈಯಿಂದವುಕಿ । ಹಿಡಿದೆತ್ತಿದಂತಿಹುದು ತಮ್ಮಾ॥

ಮಡದಿ ಜಾನಕಿರತನುವಿಲ್ಲದೀ ಮೈಯೋದು । ಬಿದುದಾರವಾಯ್ತಲ್ಲೊ ತಮ್ಮಾ॥

ತಂದೆ ತಾಯ್ಗಳನುಳಿದು ಬಂಧುಬಳಗವ ಬಿಟ್ಟು । ಸಂದರಿಯದೊಂದಾಗಿ ತಮ್ಮಾ॥

ಎಂದಿಗಾದರು ಎನ್ನ ಪಾದವೇ ಗತಿಯೆಂದು । ಬಂದು ಸೇರಿದಳಲ್ಲೊ ತಮ್ಮಾ॥

ಏಳು ಜನ್ಮಾಂತರಕು ತಪವಗೈದರು ಇಂಥ । ಬಾಲೆ ಕೈಸೇರುವಳೆ ತಮ್ಮಾ ॥

ಪೇಳಲೇಂ ಸತಿಯ ಬಾಳಿಂತಾಗೆ ರಾಘವನ । ಬಾಳೆ ಹಾಳಾಯ್ತಲ್ಲೊ ತಮ್ಮಾ॥

ಪಾರ್ತಿಸುಬ್ಬನ ಮೇಲಿನ ಮಾತುಗಳಲ್ಲಿ ವ್ಯಕ್ತವಾಗುವ ಶ್ರೀರಾಮನ ಸತೀವಿರಹದ ದುಃಖ ನಾಗಚಂದ್ರನ ಕಾವ್ಯದಲ್ಲಿ ಕಾಣುವ ಶ್ರೀರಾಮನ ಆ ವಿರಹ ಭ್ರಮೆಗಿಂತ ತುಂಬಾ ನೈಜವೂ, ಹೃದಯಸ್ಪರ್ಶಿಯೂ ಆಗಿದೆ. "ಸತಿಯಿಲ್ಲದಿರಲು ಹಗಲುಕತ್ತಲೆಯಾಯ್ತು – ಸಿಡಿಲೆರಗಿದಂತೆ ನಾಲಗೆ ಸೆಳೆದುದು" ಎಂಬೀ ವಚನವೇ ಅತ್ಯುತ್ತಮ ಕವಿತೆಯಾಗಿದೆ. "ಮಡದಿ ಜಾನಕಿರತುನವಿಲ್ಲದೆ ಈ ಮೈಯೊಂದು ಬಿಡುದಾರ ವಾಯ್ತು" ಎಂಬಲ್ಲಿ ಸೀತಾದೇವಿ ಎಂತಹ ಸ್ತ್ರೀರತ್ನವಾಗಿದ್ದಳು, ರತ್ನ ಕಳಚಿಹೋದ ನಂತರ ಉಳಿಯುವುದು ಕೇವಲ ಬರಿಯ ಹಗ್ಗ, ಹಾಗಾಗಿ ತನ್ನ ಜೀವಿತವಿನ್ನು ಮುಂದೆ ವ್ಯರ್ಥ, ಬೆಲೆಯಿಲ್ಲದ್ದು ಎಂಬ ಧ್ವನಿ, ರತ್ನ ಮತ್ತು ಬಿಡುದಾರ ಎಂಬೀ ಮಾತುಗಳಿಂದ ವ್ಯಕ್ತವಾಗುತ್ತದೆ. "ಏಳು ಜನ್ಮಾಂತರಕು ತಪವಗೈದರು ಇಂಥ ಬಾಲೆ

ಕೈ ಸೇರುವಳೆ" ಎಂಬೀ ರೀತಿಯ ಪದ್ಯಪಂಕ್ತಿ ಪ್ರೇಮದ ಅತ್ಯುನ್ನತಿಯನ್ನು ವ್ಯಕ್ತಗೊಳಿಸುವ ಉತ್ಕೃಷ್ಟ ಸಾಹಿತ್ಯಾಂಶವುಳ್ಳದ್ದಾಗಿದೆ.

ಇದೇ ರೀತಿಯ ಉತ್ತಮ ಸಾಹಿತ್ಯಾಂಶವುಳ್ಳ ಪದ್ಯಪಂಕ್ತಿಗಳನ್ನು ನಂದಳಿಕೆಯವರ ರತ್ನಾವತೀಕಲ್ಯಾಣ ಹಾಗೂ ಕುಮಾರವಿಜಯ ಪ್ರಸಂಗಗಳಿಂದಲೂ, ಮೂಲ್ಕಿ ರಾಮಕೃಷ್ಣ ಕವಿಯ ಕೃಷ್ಣಾರ್ಜುನ ಕಾಳಗದಿಂದಲೂ, ದೇವೀದಾಸ ಕವಿಯ ಗಿರಿಜಾಕಲ್ಯಾಣ ಹಾಗೂ ಅಭಿಮನ್ಯು ಕಾಳಗದಿಂದಲೂ, ಮೂಲ್ಕಿ ವಾಸುದೇವ ಪ್ರಭುಗಳ ಬಿಲ್ಲಹಬ್ಬದಿಂದಲೂ, ಆಧುನಿಕರಾದ ಬಲಿಪ ನಾರಾಯಣ ಭಾಗವತರ, ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರ, ಅಮೃತ ಸೋಮೇಶ್ವರರೇ ಮೊದಲಾದವರ ಯಕ್ಷಗಾನಪ್ರಸಂಗಗಳಿಂದಲೂ ಎತ್ತಿ ತೋರಿಸಬಹುದು. ಒಟ್ಟಿನಲ್ಲಿ ಯಕ್ಷಗಾನವು ಒಂದು ಉತ್ತಮ ದೇಸೀಸಾಹಿತ್ಯ ಪ್ರಕಾರವಾಗಿದ್ದು ಅದರಲ್ಲಿ ಕಾವ್ಯಾಂಶ ಧಾರಾಳ ತುಂಬಿಕೊಂಡಿದೆಯಲ್ಲದೆ ಅದು ತೀರಾ ಗ್ರಾಮ್ಯ ಜಾನಪದವೆನ್ನಲು ಸಾಧ್ಯವೇ ಇಲ್ಲ. ಕನ್ನಡ ಸಾಹಿತ್ಯಪ್ರಕಾರದಲ್ಲಿ ಯಕ್ಷಗಾನಸಾಹಿತ್ಯಕ್ಕೆ ಒಂದು ಪ್ರತ್ಯೇಕವೂ, ವಿಶಿಷ್ಟವೂ, ಪ್ರಶಸ್ತವೂ ಆದ ಸ್ಥಾನವಿದೆ.

ಯಕ್ಷಗಾನಕ್ಕೆ ಅದರದ್ದೇ ಆದ ಕೆಲವೊಂದು ವೈಶಿಷ್ಟ್ಯಗಳಿವೆ. ಹಾಡುಗಾರಿಕೆಯ ಹಿನ್ನೆಲೆಯಲ್ಲಿ, ಚೆಂಡೆಮದ್ದಳೆಗಳ ಮೇಳದಲ್ಲಿ, ವೇಷಭೂಷಣಗಳಲ್ಲಿ, ಅಭಿನಯ ನರ್ತನಗಳಲ್ಲಿ ದೃಶ್ಯ ಪ್ರಕಾರಗಳಾದ ನಾಟಕ, ಸಿನೆಮಾಗಳಿಗಿಂತ, ಶ್ರವ್ಯಪ್ರಕಾರಗಳಾದ ಕಾವ್ಯ ಪುರಾಣಗಳಿಗಿಂತ ತೀರಾ ಭಿನ್ನವಾದರೂ ಹೆಚ್ಚು ಜನತೆಯ ಹತ್ತಿರಕ್ಕೆ ತಲಪುವ ಮಾಧ್ಯಮವಾಗಿರುವ ಕಲಾಪ್ರಕಾರವಾಗಿದೆ. ಇದಕ್ಕೇ ಒಂದು ಲಕ್ಷಣ ಗ್ರಂಥ ಕೂಡ ನಿರ್ಮಾಣವಾಗಿರುವುದನ್ನು ನೀವು ಗಮನಿಸಬೇಕು. ಅದೇ ಸಭಾಲಕ್ಷಣವೆನ್ನುವುದು. ಮಾರ್ಗ ಸಾಹಿತ್ಯ ಪ್ರಕಾರಗಳಿಗೆ ಬೇರೆ ಬೇರೆ ಲಾಕ್ಷಣಿಕ ಗ್ರಂಥಗಳಿರುವಂತೆ ಯಕ್ಷಗಾನಕ್ಕೂ ಸಭಾಲಕ್ಷಣವಿದೆ. ಅದರ ಇತಿಮಿತಿಯಲ್ಲಿ ಬಯಲಾಟವಾಗಲಿ, ತಾಳಮದ್ದಳೆಯಾಗಲಿ ನಡೆಯಬೇಕು. ಹಿಂದಿನಿಂದಲೂ ಬಯಲಾಟದ ವೇಷಧಾರಿಗಳಿಗೆ, ಭಾಗವತರಿಗೆ, ಚೆಂಡೆಮದ್ದಳೆ ವಾದಕರಿಗೆ ತರಬೇತಿ ಸಿಗುತ್ತಿತ್ತು. ಶ್ರೀಮಂತ ಕಲಾಭಿಮಾನಿಗಳು ತಿಂಗಳುಗಟ್ಟಲೆ, ಇಡೀ ವರ್ಷ ಕೂಡ ಉಚಿತ ಊಟ ವಸತಿ ನೀಡಿ ತರಬೇತಿ ಕೊಡಿಸುತ್ತಿದ್ದರು. ಮಧ್ಯೆ ಕೆಲಕಾಲ ಅಂತಹ ತರಬೇತಿಗಳು ಲೋಪವಾಗಿ ಕಲೆಯ ಬೆಳವಣಿಗೆ ಯಥಾಯೋಗ್ಯವಾಗಿ ಮುಂದುವರಿಯುವುದಿಲ್ಲವೆಂದು ಮನಗಂಡ ಕಲಾಭಿಮಾನಿಗಳು ಅಲ್ಲಲ್ಲಿ ಯಕ್ಷಗಾನ ತರಬೇತಿ ಕೇಂದ್ರಗಳನ್ನು ತೆರೆದು ಯೋಗ್ಯ ರೀತಿಯಿಂದ ನಡೆಸುತ್ತಿರುವುದು ಶುಭಚಿಹ್ನೆ.

ಯಕ್ಷಗಾನದಿಂದ ಪ್ರಭಾವಿತರಾದ ಶ್ರೇಷ್ಠ ಸಾಹಿತ್ಯಕಾರರು ನಮ್ಮಲ್ಲಿ ಅನೇಕರಿದ್ದಾರೆ. ದಕ್ಷಿಣ, ಉತ್ತರಕನ್ನಡ ಜಿಲ್ಲೆಗಳಲ್ಲೂ ಯಕ್ಷಗಾನದ ಮುದ್ರೆ ಬೀಳದ ಸಾಹಿತ್ಯಜ್ಞರು

ಯಾರೂ ಇರಲಾರರು. ಮುದ್ದಣ, ಪಂಜೆ, ಗೋವಿಂದ ಪೈ, ತಿಮ್ಮಪ್ಪಯ್ಯ, ಕಾರಂತ ಇಂತಹ ಸಾಹಿತ್ಯ ದಿಗ್ಗಜಗಳೇ ಯಕ್ಷಗಾನದಿಂದ ಪ್ರಭಾವಿತರು. ಸಾಂಗತ್ಯದಂತಹ ದೇಶೀಯ ಧಾಟಿಯಲ್ಲಿ ಭರತೇಶವೈಭವ ಮಹಾಕಾವ್ಯವನ್ನು ರಚಿಸಿದ ರತ್ನಾಕರವರ್ಣಿ "ಅಯ್ಯಯ್ಯ ಎಂಚ ಪೊರ್ಲುಂಡೆಂದು ತುಳುವರು ಮೈಯುಬ್ಬಿ ಕೇಳಬೇಕಣ್ಣ" ಎಂಬ ಮಾತಿನ ಮೋಡಿಯಲ್ಲಿ, ಅದರ ಧ್ವನಿಯಲ್ಲಿ ಯಕ್ಷಗಾನದ ಪ್ರತಿಭೆ ಮಿಂಚುತ್ತದೆ. ಮುದ್ದಣ ಮಹಾಕವಿಯಂತೂ ಕುಮಾರವಿಜಯ ರತ್ನಾವತೀಕಲ್ಯಾಣದಂತಹ ಅನುಪಮ ಯಕ್ಷಗಾನ ಕೃತಿಯನ್ನೇ ರಚಿಸಿದ್ದಾನೆ. ಪಾರ್ತಿಸುಬ್ಬನನ್ನು ಮಹಾಕವಿಯ ಸ್ಥಾನಕ್ಕೇರಿಸಿದ ಕೀರ್ತಿ ಮುಳಿಯ ತಿಮ್ಮಪ್ಪಯ್ಯನವರದು. ಸಾಗರೋಲ್ಲಂಘನ ಮಾಡಿಸಿ ಯಕ್ಷಗಾನ ಕಲೆಗೆ ಅಂತರಾಷ್ಟ್ರೀಯ ವ್ಯಾಪ್ತಿಯ ಖ್ಯಾತಿ ತಂದವರು ಶಿವರಾಮ ಕಾರಂತರು. ಕುಕ್ಕಿಲ ಕೃಷ್ಣ ಭಟ್ಟರು ಸಂಶೋಧನಾತ್ಮಕ ಲೇಖನ ಬರೆದು ಯಕ್ಷಗಾನದ ಮಹತ್ತ್ವವನ್ನು ಎತ್ತಿ ಹಿಡಿದಿದ್ದಾರೆ. ಇಂದಿಗೂ ಅಮೃತ ಸೋಮೇಶ್ವರರರಂತಹ ವಿದ್ವಾಂಸರು ತುಳು ಕನ್ನಡ ಭಾಷೆಗಳಲ್ಲಿ ಉತ್ತಮ ಪ್ರಸಂಗಗಳನ್ನು ರಚಿಸಿ ಯಶಸ್ವಿಗಳಾಗಿದ್ದಾರೆ. ಹೀಗೆ ಸಾಹಿತ್ಯಕ್ಷೇತ್ರದಲ್ಲಿ, ಸಾಹಿತ್ಯಕಾರರ ಸಂಗದಲ್ಲಿ ಯಕ್ಷಗಾನ ಜಯಭೇರಿ ಹೊಡೆದಿದೆ ಎಂಬುದರಿಂದ ಈ ಯಕ್ಷಗಾನ ಸಾಹಿತ್ಯ ಸಮ್ಮೇಳನ ಸಮರ್ಥನೀಯ. ಇಂತಹ ಭದ್ರವಾದ ಬುನಾದಿಯಲ್ಲಿ ಯಕ್ಷಗಾನ ಸೌಹಿತ್ಯಸೌಧ ಭವ್ಯವಾಗಿ ಮೇಲೇರಲಿ ಎಂದು ಆಶಿಸುತ್ತೇನೆ.

ಜೀವಂತಿಕೆಯ ಲಕ್ಷಣವುಳ್ಳ ಯಾವುದೇ ಸಾಹಿತ್ಯ, ಕಲೆ ಕೇವಲ ನಿಂತ ನೀರು ಆಗದೆ, ನಿರಂತರ ವಾಹಿನಿಯಾಗಿ ಹರಿಯುತ್ತಿರಬೇಕು. ಈ ದೃಷ್ಟಿಯಲ್ಲಿ ಯಕ್ಷಗಾನದ ಪರಂಪರೆ ಮತ್ತು ಸುಧಾರಣೆ ಈ ವಿಷಯಗಳನ್ನು ನಾವು ಪರ್ಯಾಲೋಚಿಸಬೇಕಾಗಿದೆ. ಯಕ್ಷಗಾನವು ಇಷ್ಟು ದೀರ್ಘಕಾಲದ ವರೆಗೆ ಜನಜೀವನದಲ್ಲಿ ಹಾಸುಹೊಕ್ಕಾಗಿ ಬೆರೆತುಕೊಂಡಿರುವರೆ, ಅದರಲ್ಲಿನ ಯಾವ ಯಾವ ಜೀವಂತಶಕ್ತಿಗಳು, ಸ್ವಂತಿಕೆಗಳು, ಮೂಲಕಾರಣಗಳೋ ಅಂತಹ ಪರಂಪರಾ ಪದ್ಧತಿಗಳಾವುವನ್ನೂ ಬಿಡದೆ, ಬದಲಾದ ವಾತಾವರಣಕ್ಕೆ, ಸಮಾಜರೀತಿಗೆ ಅನುಗುಣವಾದ ಕೆಲವೊಂದು ಸುಧಾರಣೆಗಳನ್ನು ತುಂಬಾ ಬುದ್ಧಿವಂತಿಕೆಯಿಂದ ಮಾಡಬೇಕು. ಮೂಲ ಸ್ವರೂಪಕ್ಕೆ ಧಕ್ಕೆಯಾಗದ ಬದಲಾವಣೆಗಳು ಸ್ವಾಗತಾರ್ಹ. ಹಿಂದಿನ ಕಾಲದಲ್ಲಿ ಬಯಲಾಟಗಳು ಪ್ರವೇಶಧನವಿಲ್ಲದೆ ಎಲ್ಲರಿಗೂ ಉಚಿತವಾಗಿ ನೋಡಲು ಅನುಕೂಲವಾಗುವಂತೆ ಕೆಲವೇ ಶ್ರೀಮಂತರಿಂದ ಏರ್ಪಾಟುಗಳಾಗುತ್ತಿದ್ದರೆ, ಇಂದಿನ ವ್ಯತ್ಯಸ್ತ ಸಮಾಜಸ್ಥಿತಿಗೆ ಅನುಕೂಲವಾಗಿ ಡೇರೆಯಲ್ಲಿ ಆಟಗಳಾಗುವುದು, ಟಿಕೇಟುಗಳ ಮೂಲಕ ಪ್ರವೇಶ ನೀಡುವುದು ತೀರಾ ಸಮರ್ಥನೀಯ. ಹಿಂದೆ ಆಟ ಜರಗುತ್ತಿದ್ದರೆ ಇಂದು ವಿದ್ಯುದ್ದೀಪದ ನೆರವನ್ನು ಪಡೆಯುವುದು ಸಹಜ. ಆದರೆ ರಂಗಸ್ಥಳದ ಒಳಗೆ ವಿದ್ಯುದ್ದೀಪದ ಬೆಳಕು ಧಾರಾಳ ಬೀಳುವುದರ ಬದಲು ಅಲ್ಲಿ ನೆರಳು ಬೆಳಕುಗಳ ವ್ಯವಸ್ಥೆ ಹೆಚ್ಚಿನ ಮಟ್ಟಿಗೆ ಹಿಂದಿನ

ದೊಂದಿ ಎಣ್ಣೆ ದೀಪದ ಆ ಹಿನ್ನೆಲೆಯಂತೆಯೇ ಇರುವ ಹಾಗೆ ಒಂದು ವ್ಯವಸ್ಥೆ ಮಾಡಬೇಕೆಂದು ನನಗೆ ಅನ್ನಿಸುತ್ತದೆ. ಹಿಂದಿನ ರಂಗಸ್ಥಳವು ದೊಂದಿ ದೀವಟಿಗೆಯ ಆ ಬೆಳಕಿನ ವ್ಯವಸ್ಥೆಯಲ್ಲಿ ಆಟದ ವೇಷಗಳಿಗೆ ತೋರಿಬರುತ್ತಿದ್ದ ಅಲಂಕಾರ ವೈಭವಗಳು ಇಂದಿನ ರಂಗಸ್ಥಳದ ಟ್ಯೂಬ್ ಬೆಳಕಿನಲ್ಲಿ ತೋರುವುದಿಲ್ಲವೆಂಬುದರಿಂದ ವಿದ್ಯುದ್ದೀಪದ ಮೂಲಕವಾದರೂ ಈ ನೆರಳು ಬೆಳಕುಗಳ ವ್ಯವಸ್ಥೆ ಸಮಂಜಸ ರೀತಿಯಲ್ಲಿ ಮಾಡುವುದು ಹಿತ.

ಕಲೆಯ ಬಗ್ಗೆ, ಯಕ್ಷಗಾನದ ಬಗ್ಗೆ ಹಿಂದೆಯೂ ಅತೀವ ಜನಪ್ರಿಯತೆ ಇತ್ತು. ಆದರೆ ಕಲಾವಿದರ ಕುರಿತು, ಮೇಳದವರ ಕುರಿತು ಹಿಂದಿನ ಕಾಲದಲ್ಲಿ ಇಂದಿನಷ್ಟು ಸಾಮಾಜಿಕ ಗೌರವ ಇರಲಿಲ್ಲ. ಇಂದು ಸಮಾಜದ ಯಾವನೇ ರಾಜಕೀಯ, ಸಾಮಾಜಿಕ ಧುರೀಣನಿಗೆ ಕಡಿಮೆಯಿಲ್ಲದ ಗೌರವ ಹಾಗೂ ಸ್ಥಾನಮಾನಗಳು ಯಕ್ಷಗಾನ ಕಲಾವಿದರಿಗೂ ಲಭಿಸುತ್ತಿರುವುದು ಶುಭಲಕ್ಷಣ. ವ್ಯಕ್ತಿ ವ್ಯಕ್ತಿಯೂ ಉನ್ನತಿ ಹೊಂದುವರೆ ಕಲೆಯಿಂದಲೂ ಸಹಾಯಕವಾಗಿ ಇಡೀ ಸಮಾಜವೇ ಅತ್ಯುನ್ನತಿಯನ್ನೇರುವಂತಾಗಲಿ.

ತುಳುಭಾಷೆಯಲ್ಲಿ ಇಂದು ಯಕ್ಷಗಾನರಚನೆ ಹಾಗೂ ಬಯಲಾಟಗಳು ಜರಗುತ್ತಿರುವ ಕುರಿತು ತೌಳವ ಗ್ರಂಥಗಳನ್ನು ಎಂದರೆ ಕೋಟಿ-ಚೆನ್ನಯ ಮೊದಲಾದ ತುಳುನಾಡಿನ ಶೂರರ, ಸತೀಮಣಿಗಳ ಕಥೆಗಳನ್ನು ಆಧರಿಸಿ ಪ್ರಸಂಗರಚನೆ ಮಾಡಿ ಆಟವಾಡುವುದರ ಕುರಿತು ವಿವಾದಗಳನ್ನು ನಾವು ಕೇಳುತ್ತೇವೆ. ಹಿಂದಿನವರು ಕೂಡ ಪೌರಾಣಿಕ ಕಥೆಗಳ ಹಿನ್ನೆಲೆ ಮಾತ್ರ ಕೊಟ್ಟು ಕಥೆಯ ಹಂದರವನ್ನು ಸ್ವಕಪೋಲ ಕಲ್ಪಿತವಾಗಿ ಬೆಳೆಸಿ ಪ್ರಸಂಗ ರಚಿಸಿದ್ದುಂಟು. ಅವು ಜನಪ್ರಿಯವಾದುದೂ ಇದೆ. ಕವಿ ನಿರಂಕುಶನು ಎಂಬ ಮಾತು ಸಾರ್ವಕಾಲೀನ ಸತ್ಯ. ಶಕುಂತಲಾ – ದುಷ್ಯಂತರ ಕಥೆಯನ್ನು ಆಧರಿಸಿ ಮಹಾಕವಿ ಕಾಳಿದಾಸನು ನಾಟಕ ಬರೆದಾಗ, ಮೂಲದ ಪದ್ಮ ಪುರಾಣ ಹಾಗೂ ಮಹಾಭಾರತದ ಕಥೆಗೆ ಮಾರ್ಪಾಡುಗಳನ್ನು ಮಾಡಿ ಬರೆದನು. ಅದರಿಂದ ಶಕುಂತಲಾ – ದುಷ್ಯಂತರ ಪಾತ್ರಗಳಿಗೆ ಹೆಚ್ಚಿನ ಮೆರುಗನ್ನೂ ನೀಡಿದನು. ಹೀಗಾಗಿ ಕಥೆ ಪೌರಾಣಿಕವೇ ಇರಬೇಕು ಎಂಬುದರಿಂದ ಯಕ್ಷಗಾನ ಕಲೆಯ ಅಭಿವೃದ್ಧಿಗೆ ಕಥೆ ಪೂರಕವಾಗಿರಬೇಕೆಂದು ನಿರ್ಣಯಕ್ಕೆ ಬರುವುದು ವಿಹಿತವಾದುದು.

ಇಂದು ತುಳು ಯಕ್ಷಗಾನ ಬಯಲಾಟಗಳು ಜನಪ್ರಿಯವಾಗುತ್ತಿವೆ ಎಂಬ ಸತ್ಯವನ್ನು ನಾವು ಮರೆಯಬಾರದು. ತುಳು ಭಾಷೆಯಲ್ಲಿಯೂ ಯಕ್ಷಗಾನವನ್ನು ಪ್ರಯೋಗಿಸಿ ತುಳುನಾಡಿನಲ್ಲಿಯೂ ಇನ್ನಷ್ಟು ಆ ಕಲೆಯನ್ನು ಬೆಳೆಸುವುದರಲ್ಲಿ ಆ ಕಲೆಯದ್ದೇ ಅಭಿವೃದ್ಧಿ ಎಂಬ ಸತ್ಯವನ್ನು ಮನಗಾಣಬೇಕು. ಕನ್ನಡ ಬಯಲಾಟಕ್ಕಿಂತ ತುಳು ಆಟಗಳಿಗೆ ಹೆಚ್ಚು ಜನ ಸೇರುತ್ತಾರೆ. ಎಂಬುದು ವ್ಯಾವಹಾರಿಕ ಸತ್ಯ. ಇದಕ್ಕೆ ತುಳು ಭಾಷೆ ದಕ್ಷಿಣಕನ್ನಡ ಜಿಲ್ಲೆಯ ಪರಿಸರದಲ್ಲಿ ಬೀರಿದ ಪ್ರಭಾವವೇ ಕಾರಣ. "of all the Dravidian Language Tulu is the finest" ಎಂದು ಬರೆದವನು ತುಳು

ಮಾತೃಭಾಷೆಯವನಲ್ಲ, ಭಾರತೀಯನೇ ಅಲ್ಲ, ಜರ್ಮನ್ ದೇಶದಿಂದ ಇಲ್ಲಿಗೆ ಬಂದು ಸಕಲ ದ್ರಾವಿಡ ಭಾಷೆಗಳನ್ನೂ ಆಳವಾಗಿ ಅಭ್ಯಾಸ ಮಾಡಿದ ಭಾಷಾ ಶಾಸ್ತ್ರಜ್ಞ ರೆವರೆಂಡ್ ಕಾಲ್ಡ್‌ವೆಲ್ ಎಂಬವನು. ಆತನ Comparative Phylology of Dravidian Languages ಎಂಬ ಅಧಿಕಾರಿಕ ಗ್ರಂಥದಲ್ಲಿ ಮೇಲಿನ ಮಾತು ಬರುತ್ತದೆ. ತುಳು ಭಾಷೆ ಮಹಾಪ್ರಾಣಾಕ್ಷರ ವಿರಹಿತವಾಗಿ ಸಹಜ ಸೌಷ್ಠವದಿಂದ ಜನತೆಯ ಹೃದಯದಲ್ಲಿ ಚಿರಸ್ಥಾಯಿ. "ಸಗರ್ವಂ ಸರ್ವಕರ್ಣಾಟಾಃ ಠಂಕಾರೋತ್ತರಪಾಠಿನಃ" ಇದು ಕನ್ನಡಿಗರ ಹೆಮ್ಮೆ. "ಅಂಭಃ ಕುಂಭೀನಕುಂಭೀನಸ ಮಕರಮಹಾಕೂರ್ಮಕೀರ್ಣೋರ್ಮಿಮಾಲಾ ಜೃಂಭದ್ದಂಭೋಳಿಹಸ್ತಾಹತ" ಇದು ಕನ್ನಡ ಕಾವ್ಯದ ವೈಭವದ ಶೈಲಿ. ದಕ್ಷಿಣಕನ್ನಡದಲ್ಲಿ ಕನ್ನಡಿಗರ ಮತ ಪಡೆಯಲು ತುಳು ಭಾಷೆಯಲ್ಲಿ ಪ್ರಚಾರಭಾಷಣ ಮಾಡಬೇಕು. ಇಷ್ಟು ಸ್ಪಷ್ಟವಾದ ಸತ್ಯವನ್ನು ಅರ್ಥಮಾಡಿಕೊಂಡಲ್ಲಿ ತುಳು ಭಾಷೆಯಲ್ಲಿ ಯಕ್ಷಗಾನವನ್ನು ತಂದು ಜನಪ್ರಿಯಗೊಳಿಸುವುದರಿಂದ ಯಕ್ಷಗಾನಕ್ಕೆ ಅನನ್ಯ ಕೊಡುಗೆ ಎಂಬ ವಿಷಯ ತಿಳಿದುಕೊಳ್ಳಬಹುದಾಗಿದೆ.

ದಶರೂಪಕಗಳು ಸಂಸ್ಕೃತ ಭಾಷೆಯದ್ದೇ ಕೊಡುಗೆಯಾದರೂ ನಾಟಕ, ಪ್ರಕರಣ ಇತ್ಯಾದಿ ರೂಪಕಪ್ರಕಾರಗಳನ್ನು ಸಂಸ್ಕೃತ ಭಾಷೆಗಳಲ್ಲೂ ದಶರೂಪಕ, ನಾಟಕ, ಪ್ರಕರಣಾದಿಗಳು ಪ್ರಚಾರಕ್ಕೆ ಬಂದುವು. ಜನಪ್ರಿಯವೂ ಆದುವು. ಅದರಿಂದ ಕಲೆಯ ಪ್ರಚಾರ ಜನಮನವನ್ನು ಮುಟ್ಟುವಂತೆ ಆಯಿತು. ಹಾಗಾಗಿ ಯಕ್ಷಗಾನ ಕಲೆಯ ಬೆಳವಣಿಗೆಯ ದೃಷ್ಟಿಯಲ್ಲಿಯೂ ತುಳುಭಾಷೆಯಲ್ಲಿ ಯಕ್ಷಗಾನ ಪ್ರದರ್ಶನ ಮಾಡುವಾಗ ಪ್ರಸಂಗಕರ್ತೃಗಳೂ ಒಳ್ಳೆಯ ತುಳು ಭಾಷೆಯನ್ನೇ ಉಪಯೋಗಿಸಬೇಕೆಂಬ ವಿಷಯಕ್ಕೂ ಪಾತ್ರಧಾರಿಗಳು ಸಂಭಾಷಿಸುವಾಗ ಗ್ರಾಮ್ಯ ಮಟ್ಟಕ್ಕೆ, ಆಶ್ಲೀಲಕ್ಕೆ ಇಳಿಯಬಾರದೆಂಬ ವಿಚಾರಕ್ಕೆ ಸಂಪೂರ್ಣ ಬದ್ಧರಾಗಿರಲೇಬೇಕು. ಈ ಸೂತ್ರ ತುಳು ಭಾಷೆಯ ಪ್ರಸಂಗಕರ್ತೃಗಳಿಗೆ ಮಾತ್ರವಲ್ಲ, ತುಳುಭಾಷಾಪಾತ್ರಧಾರಿಗಳಿಗೆ ಮಾತ್ರವಲ್ಲ ಕನ್ನಡದವರಿಗೂ ಸಮಾನವಾಗಿ ಅನ್ವಯಿಸುತ್ತದೆ. ಜನರ ಮನಸ್ಸನ್ನು ತಟ್ಟಿ ಅವರ ಮಟ್ಟವನ್ನು ಮೇಲೆತ್ತುವುದೇ ಕಲೆಯ ಗುರಿಯಾಗಿರಬೇಕಲ್ಲದೆ, ಕಲೆಯಿಂದ ಜನತೆಯ ನಡತೆಯ ಮಟ್ಟದ ಅವನತಿ ಸರ್ವಥಾ ಆಗಕೂಡದು. ಅದು ಯಾವುದೇ ಭಾಷೆಯಲ್ಲಾಗಲಿ, ಕಲೆಗೆ ಮಾಡಿದ ಅಪಚಾರವೇ ಆಗುತ್ತದೆ.

ಯಕ್ಷಗಾನ ಕಲೆ ಬಹಳಷ್ಟು ವಿಜೃಂಭಿಸಲು ಕಾರಣ ಪಂಡಿತ ಪಾಮರರೆನ್ನದೆ ಎಲ್ಲರೂ ಈ ಕಲಾಭಿವೃದ್ಧಿಗಾಗಿ ದುಡಿದುದು. ಸಮಾಜದಲ್ಲಿ, ಸಾಹಿತ್ಯದಲ್ಲಿ ಉನ್ನತ ಸ್ಥಾನವನ್ನೇರಿದ ಮಹನೀಯರು ಹಲವರು ಯಕ್ಷಗಾನ ಕಲೆಯ ಉದ್ಧಾರದ ನೇತೃತ್ವವಹಿಸಿದ್ದಾರೆ. ಬಯಲಾಟದಲ್ಲೂ, ತಾಳಮದ್ದಳೆಯಲ್ಲೂ ಸ್ವತಃ ಪಾತ್ರಧಾರಿಗಳಾಗಿ. ಅರ್ಥಧಾರಿಗಳಾಗಿ ಒಂದು ಮಾದರಿಯನ್ನು ತೋರಿಸಿದ್ದಾರೆ. ಘಟ್ಟದ ಮೇಲೆಯೂ

ಯಕ್ಷಗಾನ ಪ್ರಚಾರದಲ್ಲಿದೆ. ಅದನ್ನು ಮೂಡಲಪಾಯವೆಂದು ಕರೆಯುತ್ತಾರೆ. ತೊಗಲು ಬೊಂಬೆಯಾಟ, ಬೊಂಬೆಯಾಟಗಳು ಆಕಡೆ ಪ್ರಚಾರದಲ್ಲಿವೆ. ಬಳ್ಳಾರಿಯಂತಹ ಕಡೆಗಳಲ್ಲಿ ತಾಳಮದ್ದಳೆಯ ಪ್ರಚಾರವೂ ಇದ್ದುದ್ದು ಕಂಡುಬರುತ್ತದೆ. ಕರಿಭಂಟನ ಕಾಳಗದಂತಹ ಐತಿಹಾಸಿಕ ಕಥೆಯನ್ನು ಆಧರಿಸಿ ಘಟ್ಟದ ಮೇಲೆ ಯಕ್ಷಗಾನ ಪ್ರಸಂಗ ನಿರ್ಮಾಣವಾಗಿ ಜನಪ್ರಿಯವೆನಿಸಿದೆ. ಆದರೆ ಪ್ರತಿಷ್ಠಿತ ವಿದ್ಯಾವಂತ ವರ್ಗ ಆ ಕಡೆಗಳಲ್ಲಿ ಕರಾವಳಿಯಷ್ಟು ಯಕ್ಷಗಾನ ಕಲೆಯ ಕ್ಷೇತ್ರವನ್ನು ಪ್ರವೇಶಿಸಲಿಲ್ಲ. ಹಾಗಾಗಿ ಯಕ್ಷಗಾನ ಕಲೆಯ ಇಂದಿನೀ ಸಮೃದ್ಧವಾದ ಬೆಳವಣಿಗೆಗೆ ಕರಾವಳಿ ಕರ್ನಾಟಕದ ಕೊಡುಗೆ ಹೆಚ್ಚಿನದ್ದಾದರೂ ಇದರ ವ್ಯಾಪ್ತಿ ಅಖಿಲ ಕರ್ನಾಟಕದ್ದೆಂಬುದನ್ನು ನಾವು ಮರೆಯಕೂಡದು.

ಡಿಲ್ಲಿಯ ಕೇಂದ್ರ ಅಕಾಡಮಿ ಯಕ್ಷಗಾನಕ್ಕೆ ಭರತನಾಟ್ಯ, ಕಥಕ್ಕಳಿ, ಮಣಿಪುರಿ, ಕೂಚಿಪ್ಪುಡಿ ಇತ್ಯಾದಿ ಭಾರತದ ಬೇರೆ ಬೇರೆ ನಾಟ್ಯಪದ್ಧತಿಗಳ ಜತೆಯಲ್ಲಿ ಸಮಾನ ಸ್ಥಾನ ನೀಡಿದೆ. ಕರ್ನಾಟಕ ರಾಜ್ಯಸರಕಾರವೂ ಜಾನಪದ ಕಲೆಯ ಜತೆಗೆ ಯಕ್ಷಗಾನವನ್ನು ಸೇರಿಸಿ ಅಕಾಡಮಿಯನ್ನು ನಿರ್ಮಿಸಿ ಪ್ರೋತ್ಸಾಹ ನೀಡುತ್ತಿರುವುದು ಅಭಿನಂದನೀಯ. ಆದರೆ ಕರ್ನಾಟಕದ ಇತರ ಯಾವುದೇ ಜಾನಪದ ಕಲೆಗಳ ಮಟ್ಟವನ್ನೂ ಮೀರಿ ತನ್ನದೇ ಒಂದು ವಿಶಿಷ್ಟ ಸ್ಥಾನಮಾನವನ್ನು ಪಡೆದ, ಪಂಡಿತ ಪಾಮರರೆನ್ನದೆ ಸಕಲ ಕಲಾಭಿಮಾನಿಗಳ ಪ್ರೀತಿಗೆ ಪಾತ್ರವಾದ ಒಂದು ಉನ್ನತ ಕಲಾಪ್ರಕಾರವಾದ ಯಕ್ಷಗಾನಕ್ಕೆ ಇತರ ಜಾನಪದ ಕಲೆಗಳಿಗಿಂತ ವಿಶಿಷ್ಟ ಸ್ಥಾನವನ್ನು ನೀಡಿ ಕರ್ನಾಟಕ ರಾಜ್ಯ ಪ್ರತ್ಯೇಕ ಅಕಾಡಮಿಯೊಂದನ್ನು ನಿರ್ಮಿಸಿ ಅದರ ಸರ್ವಾಂಗ ಸಂಪುಷ್ಟ ಅಭಿವೃದ್ಧಿಗೆ ನೆರವಾಗುವುದು ತೀರಾ ಅವಶ್ಯಕವೆಂದು ನಾನೀ ಸಂದರ್ಭದಲ್ಲಿ ಸೂಚಿಸ ಬಯಸುತ್ತೇನೆ.

ಇಂದು ಈ ಸಮ್ಮೇಳನದಲ್ಲಿ ಯಕ್ಷಗಾನದ ಹಿರಿಯ ಕಲಾವಿದರಲ್ಲೊಬ್ಬರಾದ ಶ್ರೀ ಪಡ್ರೆ ಚಂದು ಇವರನ್ನು ಅಭಿನಂದಿಸಿ ಸನ್ಮಾನಿಸುವ ಹಾಗೂ ಮುಂಬಯಿಯ ಹಿರಿಯ ಯಕ್ಷಗಾನ ಮಂಡಳಿಗಳಾದ "ಶ್ರೀ ನಾರಾಯಣಗುರು ಸ್ವಾಮಿ ಯಕ್ಷಗಾನ ಮಂಡಳಿ" ಮತ್ತು "ಜನಪ್ರಿಯ ಯಕ್ಷಗಾನ ಮಂಡಳಿ" ಈ ಉಭಯ ಸಂಸ್ಥೆಗಳಿಗೂ ಗೌರವ ಅರ್ಪಿಸುವ ಕಾರ್ಯಕ್ರಮ ಇಟ್ಟುಕೊಂಡಿರುವುದು ಪ್ರಶಂಸನೀಯ. ಕಲೆಗಾಗಿ, ಕಲಾಭಿವೃದ್ಧಿಗಾಗಿ, ವೈಯುಕ್ತಿಕವಾಗಿಯೂ, ಸಾಮೂಹಿಕವಾಗಿಯೂ ದುಡಿದ ಇಂತಹ ಮಹನೀಯರನ್ನು, ಸಂಘಗಳನ್ನು ಗೌರವಿಸುವುದು ಅತ್ಯಂತ ಅವಶ್ಯ. ಎಷ್ಟೋ ವರ್ಷಗಳಿಂದ ನಿರಂತರ ಶ್ರಮ, ಸಾಧನೆ ಮಾಡಿದವರನ್ನು ಇಂದು ಸಮಾಜ ಒಮ್ಮೆ ಗುರುತಿಸಿತ್ತೆನ್ನುವಾಗ ಆ ಮಹನೀಯರಿಗೂ, ಸಂಸ್ಥೆಗಳಿಗೂ ಧನ್ಯತೆಯ ಸಂತೇಪ್ತಿಯಾಗುತ್ತದೆ. ಈ ತೆರನ ಪ್ರೋತ್ಸಾಹ ನೀಡುವುದರಿಂದ ಇನ್ನು ಮುಂದೆಯೂ ಪ್ರತಿಭಾವಂತರು ಈ ಕ್ಷೇತ್ರದಲ್ಲಿ ತಮ್ಮ ಪಾಲಿನ ಉತ್ತಮ ಕೊಡುಗೆಯನ್ನು ನೀಡಲು

ಮುಂದೆ ಬರಬಹುದು. ಈ ಸಮ್ಮೇಳನದ ಸಂಘಟಕರನ್ನು ಈ ಉತ್ತಮ ಕಾರ್ಯಕ್ಕಾಗಿ ಅಭಿನಂದಿಸುತ್ತೇನೆ.

ಎಷ್ಟೋ ವರ್ಷಗಳಿಂದ ಮುಂಬೈಯಲ್ಲಿ ನೆಲೆಸಿ ಇಲ್ಲಿ ಯಕ್ಷಗಾನ ಕಲೆಗೆ ದುಡಿದು ಅದನ್ನು ಜೀವಂತವಾಗಿ ಇರಿಸಿದ ಮಹನೀಯರು ಹಲವರಿದ್ದಾರೆ. ಅವರು ಕಟ್ಟಿದ ಯಕ್ಷಗಾನ ಸಂಸ್ಥೆಗಳೂ ಹಲವಿವೆ. ಆ ಮಹನೀಯರೂ ಆ ಸಂಸ್ಥೆಗಳೂ ಮಾಡುತ್ತಾ ಬಂದ ಕಲಾರಾಧನೆಯ ಕಾರ್ಯಮಹತ್ವದಲ್ಲಿದ್ದು, ಅದರಂತೆ ಈ ಸಮಾರಂಭವನ್ನು ಜರಗಿಸಲು ಇಲ್ಲಿನ ಸಂಘ ಸಂಸ್ಥೆಗಳ ನೆರವಿನಿಂದ ಮುಂದಾದ ಪದವೀಧರ ಯಕ್ಷಗಾನ ಸಮಿತಿ. ಎಡೆಬಿಡದೆ ಹೊರನಾಡಿನಲ್ಲಿ ಇಂತು ಮೂರು ಸಮ್ಮೇಳನಗಳನ್ನು ಜರಗಿಸಿದ್ದು ಐತಿಹಾಸಿಕ ಮಹತ್ವದ ವಿಷಯವಾಗಿದೆ. ಈ ಸಾಹಸದ ಕಾರ್ಯದಲ್ಲಿ ಪ್ರವೃತ್ತರಾದ ಸರ್ವರನ್ನೂ, ಈ ಕಲಾರಾಧನೆಗೆ ನೆರವು ನೀಡಿದ ಎಲ್ಲಾ ಮಹನೀಯರನ್ನೂ ನಾನು ಮನಃಪೂರ್ವಕ ಮತ್ತೊಮ್ಮೆ ಅಭಿನಂದಿಸುತ್ತಾ ಪ್ರಕೃತ ವಿರಮಿಸಲು ತಮ್ಮ ಅನುಮತಿ ಯಾಚಿಸುತ್ತೇನೆ.

*　　　*　　　*

ಸಮಾರೋಪ ಭಾಷಣ

ಈ ಮೂರು ದಿನಗಳಲ್ಲಿ ಹಲವಾರು ಗೋಷ್ಠಿಗಳ ಮೂಲಕ ವಿಚಾರ, ವಿಮರ್ಶೆ ನಡೆಸಿ, ಹಲವು ಕಲಾಪ್ರದರ್ಶನಗಳ ಮೂಲಕ ರಸಿಕ ಪ್ರೇಕ್ಷಕರ ಮನತಣಿಸಿ ಈ ತೃತೀಯ ಯಕ್ಷಗಾನ ಸಮ್ಮೇಳನ ಉದ್ದೇಶಿತ ಸಿದ್ಧಿಯನ್ನು ಪಡೆದು ಸಫಲತೆಯ ಕಡೆಗೆ ಸಾಗಿದೆ ಎಂದು ಹೇಳಲು ತುಂಬಾ ಸಂತೋಷಪಡುತ್ತೇನೆ. ಬಿಡುವಿಲ್ಲದ ಮುಂಬೈಯಂತಹ ನಗರದಲ್ಲಿ ನೆಲೆಸಿರುವ, ಬೇರೆ ಬೇರೆ ಉದ್ಯೋಗ ಕೈಗೊಂಡಿರುವ ಜನ ಇಷ್ಟೊಂದು ಸಂಖ್ಯೆಯಿಂದ ಬಂದು, ಶ್ರದ್ಧಾಪೂರ್ವಕ ಭಾಗವಹಿಸಿ, ಈ ಸಮ್ಮೇಳನವನ್ನು ಯಶಸ್ವಿಯಾಗಿ ಮಾಡಿದ ಬಗ್ಗೆ ಅಭಿನಂದನೆಗಳು.

ಮನುಷ್ಯನನ್ನು ಸಂಸ್ಕೃತಿ ಸಂಪನ್ನನನ್ನಾಗಿ ಮಾಡುವ ಇಂತಹ ಉತ್ತಮ ಸಮಾರಂಭಗಳು ಆಗಾಗ ಜರಗುತ್ತಲೇ ಇರಬೇಕು. ಶರೀರದ ಬೆಳವಣಿಗೆಗೂ ಆರೋಗ್ಯಕ್ಕೂ ಆಗಾಗ ಆಹಾರ ಅತ್ಯವಶ್ಯವಿರುವಂತೆ, ಆತನ ಬೌದ್ಧಿಕ, ಮಾನಸಿಕ ಆರೋಗ್ಯ ಹಾಗೂ ಅಭಿವೃದ್ಧಿಗಳಿಗೆ ಇಂತಹ ಸಾಹಿತ್ಯಿಕ, ಕಲಾತ್ಮಕ ಸಭೆ ಸಮಾರಂಭಗಳು ತೀರಾ ಅಗತ್ಯ. ನಮ್ಮ ಶರೀರದ ಒಂದೇ ಅಂಗ ಬೆಳೆದು ಇತರ ಅಂಗಗಳು ಊನವಾಗಿದ್ದರೆ ಹೇಗೆ ಊನತೆ ಕಂಡುಬರುವುದೋ ಹಾಗೆ ನಮಗೆ ಶಾರೀರಿಕ ಆರೋಗ್ಯ ಸಂಪತ್ತಿನಂತೆ ಬೌದ್ಧಿಕ, ಮಾನಸಿಕ ಆರೋಗ್ಯ ಸಂಪತ್ತೂ ಅವಶ್ಯವೆ. ಈ ಘನವಾದ ಉದ್ದೇಶದಿಂದಲೇ ನಮ್ಮ ಹಿರಿಯರು ಯಕ್ಷಗಾನ ಬಯಲಾಟ, ತಾಳಮದ್ದಳೆ

ಇತ್ಯಾದಿ ಕಲಾಪ್ರಕಾರಗಳಲ್ಲಿಯೂ ಆಸಕ್ತರಾಗಿ ತಮ್ಮ ಬಾಳುವೆಯನ್ನು ಬೆಳಗಿಸಿಕೊಂಡರು.

ಬೊಂಬಾಯಿಯಲ್ಲಿ ಕನ್ನಡಿಗರ ಹಲವಾರು ಸಂಘ ಸಂಸ್ಥೆಗಳೂ ಇವೆ. ಅವೆಲ್ಲವೂ ಶಕ್ತಿ ಮೀರಿ ಸಮಾಜ ಸೇವೆಯನ್ನು ಮಾಡುತ್ತ ಬರುತ್ತಿವೆ. ಮನೆ ಮನೆಯೂ ಕ್ಷೇಮದಿಂದಿದ್ದರೆ ಅಂತಹ ಮನೆಯವರಿಂದಲೇ ರೂಪಿತವಾದ ಇಡೀ ಗ್ರಾಮ, ಇಡೀ ರಾಷ್ಟ್ರ, ಇಡೀ ಜನಾಂಗವೇ ಸುಕ್ಷೇಮವಾಗುವುದು. ಹಾಗಾಗಿ ಒಳ್ಳೆಯ ಕೆಲಸ ನಮ್ಮಿಂದ, ನಮ್ಮ ಮನೆಯಿಂದಲೇ ಪ್ರಾರಂಭವಾಗಬೇಕು. ಬೊಂಬಾಯಿಯಲ್ಲಿ ನೆಲೆಸಿರುವ ಬೇರೆ ಬೇರೆ ಸಂಘಸಂಸ್ಥೆಗಳನ್ನು ಕಟ್ಟಿಕೊಂಡ ಕನ್ನಡಿಗರೆಲ್ಲರೂ ತಮ್ಮ ಸೀಮಿತ ಸಮಾಜದ ಏಳಿಗೆಗಾಗಿ ನಡೆಸುತ್ತಿರುವ ಎಲ್ಲ ಕಾರ್ಯಕ್ರಮಗಳೂ ಈ ದೃಷ್ಟಿಯಲ್ಲಿ ಇಡೀ ರಾಷ್ಟ್ರದ ಅಭಿವೃದ್ಧಿಕಾರ್ಯದ ಅಂಗವೇ ಆಗಿವೆ. ಅಂಥವರೆಲ್ಲರೂ ಇಡೀ ವರ್ಷದಲ್ಲಿ ಕೆಲವು ಸಲವಾದರೂ ಒಟ್ಟು ಸೇರಿ ಸಮಸ್ತ ಕನ್ನಡಿಗರ ಒಗ್ಗಟ್ಟಿನ ಕೆಲಸಗಳನ್ನು ಕೈಗೆತ್ತಿಕೊಳ್ಳಬೇಕು. ಆ ಬಗ್ಗೆ ಈಗಾಗಲೇ ಸ್ಥಾಪಿತವಾಗಿರುವ ಬೇರೆ ಬೇರೆ ಸಂಸ್ಥೆಗಳನ್ನು ಕಟ್ಟಿಕೊಂಡಿದ್ದರೂ ಸಾಮೂಹಿಕವಾಗಿ ಕನ್ನಡಿಗರೆಲ್ಲರೂ ಒಗ್ಗಟ್ಟಿನಿಂದ ಇರುವುದು ರಾಜಕೀಯ ದೃಷ್ಟಿಯಿಂದಲೂ ಇಲ್ಲಿನ ಕನ್ನಡಿಗರ ಶಕ್ತಿಯನ್ನು ಹೆಚ್ಚಿಸುವುದೆಂಬುದು ನಿರ್ವಿವಾದ. ಮಾಡತಕ್ಕ ಕೆಲಸಗಳು ತುಂಬಾ ಗಂಭೀರವೂ, ಶಕ್ತಿಪೂರ್ಣವೂ ಆಗಿ ಬೊಂಬಾಯಿಯಲ್ಲಿರುವ ಸಕಲ ಭಾಷಾಬಾಂಧವರ ಗಮನವನ್ನೂ ಸೆಳೆಯ ಬಲ್ಲುದೆಂಬುದನ್ನು ನಾವು ತಿಳಿದುಕೊಳ್ಳಬೇಕು.

ಹೀಗೆ ಒಗ್ಗಟ್ಟಿನಿಂದ ಕೆಲಸ ಮಾಡುವ ಸಂದರ್ಭದಲ್ಲಿ ಕನ್ನಡಿಗರು ಇಲ್ಲಿನ ಬಹುಭಾಷಾಸಂಖ್ಯಾತರನ್ನು ಹಾಗೂ ತಮ್ಮಂತೆ ಇರುವ ಅಲ್ಪಸಂಖ್ಯಾತರನ್ನೂ ಒಲಿಸಿಕೊಳ್ಳುವ ಸೌಹಾರ್ದವನ್ನು ಉಳಿಸಿಕೊಳ್ಳತಕ್ಕದ್ದು. ನಮ್ಮ ತಾಯಿ ಬಡವಳೋ, ಮುದುಕಿಯೋ ಎಂಥವಳೇ ಇರಲಿ ಅವಳು ನಮಗೆ ಲೋಕದ ಬೆಳಕನ್ನು ತೋರಿಸಿದ ಜನನಿ ಎಂದು ಆಕೆಯನ್ನು ನಾವು ಗೌರವಿಸುವಂತೆ ಪ್ರತಿಯೊಬ್ಬರಿಗೂ ಜನ್ಮವಿತ್ತ ಎಲ್ಲಾ ತಾಯಂದಿರೂ ಅವರವರಿಗೆ ದೊಡ್ಡವರೇ ಎಂಬ ತಿಳುವಳಿಕೆ ಇರುವುದು ಸಮಾಜಕ್ಕೆ ಕ್ಷೇಮವಾಗಿದೆ. ಮುಖ್ಯವಾಗಿ ಇಲ್ಲಿನ ಕನ್ನಡಿಗರು ಸಾಮಾಜಿಕವಾಗಿಯೂ, ಸಾಹಿತ್ಯಿಕವಾಗಿಯೂ, ಕಲಾತ್ಮಕವಾಗಿಯೂ ಸಂಘಟಿತರಾಗುವಾಗ ಇಲ್ಲಿನ ಬಹುಸಂಖ್ಯಾತರಾದ ಮರಾಠಿ ಮಾತನಾಡುವ, ಗುಜರಾಥಿ ಮಾತನಾಡುವ ಅಂತೇ ಹಿಂದೀ, ಉರ್ದು ಮಾತನಾಡುವ ಎಲ್ಲಾ ಜನರ ಸಹಕಾರವನ್ನು ಪಡೆದುಕೊಂಡು ತಮ್ಮ ಎಲ್ಲಾ ಕಾರ್ಯಕ್ರಮಗಳನ್ನು ರೂಪಿಸಿಕೊಳ್ಳುವುದು ಅತ್ಯಂತ ಯೋಗ್ಯವಾಗಿದೆ. ಕನ್ನಡಿಗರ ಹಿತಕ್ಕೂ ರಾಷ್ಟ್ರದ ಹಿತಕ್ಕೂ ಇದೇ ಸರಿಯಾದ ಸಾಧಕವಾದ ರೀತಿಯಾಗಿದೆ.

ಯಕ್ಷಗಾನ ಕನ್ನಡ ಭಾಷೆಯ ಕೊಡುಗೆ. ಆದರೆ ಇಂದು ಆ ಕಲೆ ಪ್ರಾಂತೀಯ ಸೀಮೆಯನ್ನು ದಾಟಿ ರಾಷ್ಟ್ರೀಯ ಮಟ್ಟಕ್ಕೆ ಏರಿದೆ; ಅಂತಾರಾಷ್ಟ್ರೀಯ ಮಾನ್ಯತೆ

ಪಡೆದಿದೆ. ಜೀವಂತವಾದ ಸಾಹಿತ್ಯ ಹಾಗೂ ಕಲೆ ಹೀಗೆ ಒಂದು ಸೀಮಿತ ಪರಿಧಿಯನ್ನು ದಾಟಿ ಸೀಮೋಲ್ಲಂಘನ ಮಾಡುವುದು ಅದರ ಜೀವಂತಿಕೆಯ ಶಕ್ತಿಯ ಮತ್ತೊಂದು ಲಕ್ಷಣವಾಗಿದೆ. ಇದು ದೆಹಲಿಯಲ್ಲಿ ಮೆರೆದಿದೆ; ರಶ್ಯಾ ಅಮೇರಿಕಾ, ಇಟಲಿ ಹೀಗೆ ವಿದೇಶಗಳಲ್ಲೂ ಜಯಭೇರಿ ಬಾರಿಸಿದೆ. ಹಾಗಾಗಿ ಯಕ್ಷಗಾನ ಕೇವಲ ಕನ್ನಡನುಡಿಗೇ ಸೀಮಿತವಾದ ಕಲೆ ಎಂಬಂತಿರದೆ ಇಂದು ರಾಷ್ಟ್ರದ ಸಂಸ್ಕೃತಿಯ ಪ್ರತೀಕವಾಗಿ ಹೆಸರು ಪಡೆದಿರುವುದು ನಮಗೆಲ್ಲಾ ಅಭಿಮಾನವನ್ನುಂಟುಮಾಡುವ ವಿಷಯ. ಹಾಗಾಗಿ ಯಕ್ಷಗಾನವು ತನ್ನ ಮೂಲ ಕಲಾಸ್ವರೂಪಕ್ಕೆ ಚ್ಯುತಿ ತಾರದೆ, ರಾಷ್ಟ್ರದ ಎಲ್ಲಾ ಭಾಷೆಗಳಲ್ಲೂ ಬರಬೇಕು. ಮರಾಠಿಯಲ್ಲೂ, ಹಿಂದಿಯಲ್ಲೂ, ಗುಜರಾಥಿಯಲ್ಲೂ ಬರಬೇಕು. ಭಾಷಾಸೀಮೆಯನ್ನು ದಾಟಿ ಯಕ್ಷಗಾನ ಬೆಳೆಯುವುದು ಇಂದು ಅವಶ್ಯಕವಾಗಿದೆ.

ಈ ದೃಷ್ಟಿಯಲ್ಲಿ ನೋಡುವಾಗ ಯಕ್ಷಗಾನ ದಕ್ಷಿಣಕನ್ನಡವೆಂದು ಪ್ರಸಿದ್ಧವಾದ ತುಳುನಾಡಿನಲ್ಲಿ ತುಳು ಭಾಷೆಯಲ್ಲಿ ಜನಪ್ರಿಯವಾಗಿರುವುದರ ಬಗ್ಗೆ ನಾವು ಹೆಮ್ಮೆ ಪಡಬೇಕು. ತುಳುಭಾಷೆಯಲ್ಲಿ ಯಕ್ಷಗಾನ ಕೃತಿರಚನೆಯಾಗುವ ಕುರಿತು ಪಾತ್ರಧಾರಿಗಳು, ಅರ್ಥಧಾರಿಗಳು ತುಳು ಭಾಷೆಯಲ್ಲಿ ಸಂಭಾಷಣೆ ಮಾಡುವುದರ ಕುರಿತು ಅನವಶ್ಯಕ ಟೀಕೆ ಸರ್ವಥಾ ಸಲ್ಲದು. ಅಲ್ಲಿನ ಜನಸಾಮಾನ್ಯರಿಗೆ ಯಕ್ಷಗಾನ ಕೃತಿರಚನೆಯಾಗುವ ಕುರಿತು ಪಾತ್ರಧಾರಿಗಳು, ಅರ್ಥಧಾರಿಗಳು ತುಳು ಭಾಷೆಯಲ್ಲಿ ಸಂಭಾಷಣೆ ಮಾಡುವುದರ ಕುರಿತು ಅನವಶ್ಯಕ ಟೀಕೆ ಸರ್ವಥಾ ಸಲ್ಲದು. ಅಲ್ಲಿನ ಜನಸಾಮಾನ್ಯರಿಗೆ ಯಕ್ಷಗಾನ ಕಲೆ ಹಾಗೂ ಸಾಹಿತ್ಯದ ಸವಿಯನ್ನು ಅನುಭವಿಸಲು ಕನ್ನಡ ಭಾಷಾಮಾಧ್ಯಮಕ್ಕಿಂತ ಹೆಚ್ಚು ಇಂದು ತುಳು ಭಾಷೆ ಸಹಾಯವಾಗಿದೆ ಎಂಬ ಸತ್ಯಾಂಶವನ್ನು ನಾವು ಅರ್ಥಮಾಡಿಕೊಳ್ಳಬೇಕು. ಮುಖ್ಯ ವಿಷಯವೆಂದರೆ ಯಕ್ಷಗಾನದ ಮೂಲಸ್ವರೂಪಕ್ಕೆ ಯಾವುದೇ ರೀತಿಯಲ್ಲಿ ಭಂಗ ಬರಬಾರದು. ಆ ಕಲೆಯ, ಆ ಸಾಹಿತ್ಯದ ಉತ್ತಮ ಸ್ವರೂಪವನ್ನು ಇನ್ನಷ್ಟು ಉತ್ತಮವಾಗುವಂತೆ ಜನಪ್ರಿಯಗೊಳಿಸುವುದರ ಮೂಲಕ ಇನ್ನಷ್ಟು ಪ್ರಯೋಜನಕಾರಿಯಾಗುವಂತೆ ನೋಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ನನ್ನ ಅಭಿಪ್ರಾಯದಲ್ಲಿ ಕರಾವಳಿಯಲ್ಲಿ ಸರ್ವತ್ರವ್ಯಾಪಕವಾಗಿ ಇರುವ ಕೊಂಕಣಿ ಭಾಷೆಯಲ್ಲೂ ಯಕ್ಷಗಾನ ಪ್ರಚಾರವಾಗುವುದು ಆ ಕಲೆಯ ಅಭಿವೃದ್ಧಿಯ ದೃಷ್ಟಿಯಿಂದ ಅವಶ್ಯ. ಅಂತಹ ಪ್ರಯತ್ನಗಳನ್ನು ನಾವು ಸದಾ ಸ್ವಾಗತಿಸಬೇಕಾಗಿದೆ.

ಈ ಸಮಾರಂಭದಲ್ಲಿ ಮೂರು ಗ್ರಂಥಗಳನ್ನು ನೀವು ಪ್ರಕಟಿಸಿದ್ದೀರಿ. ಇದು ಅಭಿನಂದನಾರ್ಹವಾದ ಕೆಲಸ. 'ಋಗ್ವೇದೀಯ ಸಂಧ್ಯಾವಂದನವಿಧಿಃ' ಎಂಬ ಗ್ರಂಥದಲ್ಲಿ "ಊರ್ಧ್ವಬಾಹುರ್ವಿರೌಮ್ಯೇಷ ನ ಚ ಕಶ್ಚಿತ್ ಶೃಣೋತಿ ಮೇಧರ್ಮಾದರ್ಥಶ್ಚಕಾಮಶ್ಚ ಸ ಧರ್ಮಃ ಕಿಂ ನ ಸೇವ್ಯತೇ" ಈ ವ್ಯಾಸಮಹರ್ಷಿ ಸೂಕ್ತಿ ಸೇರಿದೆ. ಪ್ರಪಂಚದಲ್ಲಿಯೇ ಬೃಹತ್ ಕಾವ್ಯವೆನಿಸಿದ 'ಜಯ'ವೆಂಬ ಮಹಾಭಾರತಗ್ರಂಥವನ್ನು ಬರೆದ ವ್ಯಾಸರ್ಷಿ,

ತಾನು ಎರಡೂ ಕೈಗಳನ್ನು ಮೇಲೆತ್ತಿ ಕೂಗುತ್ತಿದ್ದರೂ ಯಾರೂ ನನ್ನ ಮಾತು ಕೇಳುವುದಿಲ್ಲ. ಧರ್ಮದಿಂದಲೇ ಅರ್ಥವೂ ಕಾಮವೂ. ಅದನ್ನು ಯಾರೂ ತೀಳಿಯುವುದಿಲ್ಲವಲ್ಲಾ ಎಂದು ಸಾರುತ್ತಾರೆ. ಯಕ್ಷಗಾನದ ಪುರಾಣಪ್ರಸಂಗಗಳಲ್ಲಿ ವ್ಯಾಸರ್ಷಿಗಳ ಅದೇ ಧರ್ಮದ ಜಯ ನಮಗೆ ಅರಿವಾಗುತ್ತದೆ. ಯಕ್ಷಗಾನದ ಮೂಲಕ ನಮ್ಮ ಜನರು ಧರ್ಮನೀತಿಯನ್ನು ಅರಿತುಕೊಳ್ಳಲು ಸುಲಭವಾಯಿತು ಅಂತ ಇಲ್ಲಿ ಅಗರಿ ಭಾಗವತರ ಹನ್ನೆರಡು ಪ್ರಸಂಗಗಳನ್ನೂ ಉತ್ತಮ ರೀತಿಯಿಂದ ಸಂಪಾದಿಸಿ ಪ್ರಕಟಿಸಿದ್ದು ಯಕ್ಷಗಾನ ಸಾಹಿತ್ಯಕ್ಕೆ ಒಳ್ಳೆಯ ಕೊಡುಗೆಯಾಗಿದೆ. ಈ ಸಮ್ಮೇಳನದ ನೆನಪಿಗಾಗಿ ಪ್ರಕಟಿಸಿದ ಸ್ಮರಣಸಂಚಿಕೆಯೂ ಸಂದರ್ಭೋಚಿತವಾಗಿರುವುದು. ಮುಂಬಯಿಯಲ್ಲಿ ಹತ್ತಾರು ಯಕ್ಷಗಾನ ಮಂಡಳಿಗಳು ಉತ್ತಮ ಕಾರ್ಯಗಳನ್ನು ಮಾಡುತ್ತವೆ; ಅವುಗಳಲ್ಲಿ ಹಿರಿದಾದ ಕಲಾಮಂಡಳಿಗಳನ್ನು ಗೌರವಿಸಿದ್ದು ಕೂಡ ಯಥಾ ಯೋಗ್ಯವಾಗಿರುವುದು.

ಪ್ರಸಂಗಸಾಹಿತ್ಯದ ಬಗ್ಗೆ ಯಕ್ಷಗಾನಕವಿ ಕೃತಿಗಳ ಕುರಿತು ಯಕ್ಷಗಾನ ರಂಗಭೂಮಿಯ ವಿಚಾರದಲ್ಲಿ ಹಾಗೂ ಯಕ್ಷಗಾನ ಹಾಡುಗಾರಿಕೆಯ ವಿಷಯವಾಗಿ ಹೀಗೆ ನಾಲ್ಕು ಅಧಿವೇಶನಗಳು ನಡೆದಿವೆ. ಈ ಕಲೆಯ ನುರಿತ ವಿದ್ವಾಂಸರು ಇದರಲ್ಲಿ ಭಾಗವಹಿಸಿ ಆ ಎಲ್ಲಾ ವಿಷಯಗಳನ್ನು ಸಮರ್ಥವಾಗಿ ಮಂಡಿಸಿದ್ದಾರೆ. ಇಂತಹ ಅಭ್ಯಾಸಪೂರ್ಣವಾದ ಅಧಿವೇಶನಗಳು ಈ ತೆರನ ಸಮ್ಮೇಳನಗಳಿಗೆ ನಿಜವಾಗಿಯೂ ಕಳೆಯೇರಿಸುತ್ತವೆ. ಈ ಅಧಿವೇಶನಗಳಲ್ಲಿ ಭಾಗವಹಿಸಿದ ಸಮಸ್ತ ಕಲಾವಿದರಿಗೂ ಸಾಹಿತಿಗಳಿಗೂ ಅಭಿನಂದನೆಗಳು ಸಲ್ಲಬೇಕು.

●

ಪಂಪನ ಪೆಂಪು*

ಒಂದು ನುಡಿಯ, ಒಂದು ನಾಡಿನ ಉತ್ಕರ್ಷ, ಆ ನುಡಿಯನ್ನಾಡುವ ಆ ನಾಡಿನಲ್ಲಿ ವಾಸಿಸುವ ಜನತೆಯ ಉತ್ಕರ್ಷೆಯನ್ನು ಹೊಂದಿಕೊಂಡಿದೆ. ಯಾವಲ್ಲಿನ ಜನತೆ ಪ್ರಬುದ್ಧವೂ ಶಕ್ತಿಶಾಲಿಯೂ ಆಗಿದೆಯೋ ಆ ನಾಡು, ಅವರ ನುಡಿ ಮಹತ್ವವನ್ನು ಪಡೆಯುತ್ತದೆ. ಪ್ರಪಂಚದ ಎಲ್ಲಾ ಕಡೆಗೂ ಸಮಾನವಾಗಿ ಈ ಸೂತ್ರ ಅನ್ವಯಿಸುತ್ತದೆ. ಸಂಸ್ಕೃತ ಭಾಷೆಯ ಉತ್ಕರ್ಷದ ಕಾಲವನ್ನು, ಆಂಗ್ಲ ಭಾಷೆಯ ಮಹತ್ವದ ಕೃತಿಗಳ ಸಂದರ್ಭವನ್ನು ನಾವು ಗಮನಿಸಿದರೂ ಈ ವಿಷಯ ಮನದಟ್ಟಾಗುತ್ತದೆ. ವಿಕ್ರಮಾಂಕ ದೊರೆಯ ಕಾಲದಲ್ಲಿ ಕಾಳಿದಾಸನೇ ಮೊದಲಾದ 'ನವರತ್ನ'ಗಳೂ, 'ವಿಕ್ಟೋರಿಯನ್ ಏಜ್'ನಲ್ಲಿ ಶೇಕ್ಸ್‌ಪಿಯರ್ ಪ್ರಭೃತಿ ಕವಿ ಶ್ರೇಷ್ಠರೂ ಜೀವಿಸಿದ್ದುದು ಮೇಲಿನ ಮಾತಿಗೆ ಸಾಕ್ಷಿಗಳಾಗುತ್ತಾರೆ. ದೇಶ ಸಮೃದ್ಧವಾದಾಗ. ಆ ದೇಶದ ಸಾಹಿತ್ಯ, ಸಂಸ್ಕೃತಿ, ಸಂಗೀತಾದಿ ಸಮಸ್ತ ಕಲೆಗಳೂ ವಿಕಾಸವಾಗುತ್ತದೆ. ಕವಿಗಳು ಮಹಕಾವ್ಯಗಳನ್ನು ರಚಿಸುತ್ತಾರೆ. ಧೀರರು ವೀರಾವೇಶದಿಂದ ಹೋರಾಡಿ ದೇಶಕ್ಕೆ ವಿಜಯವನ್ನು ಸಾಧಿಸುತ್ತಾರೆ. ಕೆಲವೊಮ್ಮೆ ಕವಿಗಳು ಕಲಿಗಳೂ ಆಗಿ ನಾಡುನುಡಿಗಳ ಹಿರಿಮೆಯನ್ನು ಮುಗಿಲು ಮುಟ್ಟಿಸುತ್ತಾರೆ. ಇಂತಹ ಒಂದು ಅಪೂರ್ವ ಸಂದರ್ಭ ಕನ್ನಡ ನಾಡಿನ ಕನ್ನಡ ಸಾಹಿತ್ಯದ ಚರಿತ್ರೆಯಲ್ಲಿ ನಡೆದಿದೆ ಎಂಬುದು ಅಭಿಮಾನಪಡತಕ್ಕ ಸಂಗತಿಯಾಗಿದೆ.

'ಕವಿತೆ ನೆಗಟ್ಟೆಯಂ ನಿಱಿಸೆ, ಜೋಳದ ಪಾಟಿ' ನಿಜಾಧಿನಾಥನಾ
ಹವದೊಳರಾತಿ ನಾಯಕರ ಪಟ್ಟನೆ ಪಾಱಿಸೆ, ಸಂದ ಪೆಂಪು, ಭೂ
ಭುವನದೊಳಾಗಳುಂ ಬೆಳಗೆ, ಮಿಕ್ಕಭಿಮಾನದ ಮಾತು ಕೀರ್ತಿಯಂ
ವಿವರಿಸೆ, ಸಂದನೇಂ ಕಲಿಯೊ ಸತ್ಕವಿಯೋ ಕವಿತಾಗುಣಾರ್ಣವಂ.'

(ವಿಕ್ರಮಾರ್ಜುನವಿಜಯ. ೧೪-೫೦)

ಮೇಲಿನ ಪದ್ಯ ಪಂಪ ಮಹಾಕವಿಯದು. ಕವಿತೆ ಆತನ ಕೀರ್ತಿಯನ್ನು ಹೆಚ್ಚಿಸಿತು. 'ಕಾವ್ಯಂ ಯಶಸೇ' ಎಂಬ ಪ್ರಸಿದ್ಧವಾದ ಸೂಕ್ತಿಯಂತೆ, ತನಗೆ ಮಾತ್ರವಲ್ಲ ತಾನು ಆಡುವ ಭಾಷೆಗೂ, ತಾನು ಜನಿಸಿದ ದೇಶಕ್ಕೂ ಯಶಸ್ಸು ಬರುವಂತಹ

ಅತ್ಯುತ್ತಮ ಕೃತಿಗಳನ್ನು ಆದಿಪುರಾಣ ಮತ್ತು ವಿಕ್ರಮಾರ್ಜುನವಿಜಯವೆಂಬ ಮಹಾಕಾವ್ಯಗಳನ್ನು ಆತನು ರಚಿಸಿ ಹೆಸರಾಂತನು. ಆದರೆ ಜತೆಯಲ್ಲಿ ತನಗೆ ಆಶ್ರಯವಿತ್ತ ಯಾವ ರಾಜನು – ಅರಿಕೇಸರಿ – ತನ್ನನ್ನು 'ಪ್ರೀತಿಯಿಂದ ಅಶನವಸನಗಳನ್ನಿತ್ತು ಸಲಹಿದನೋ ಆತನ "ಜೋಳದಪಾಟಿ"ಯನ್ನು, ಎಂದರೆ ಅನ್ನದ ಋಣವನ್ನು ತೀರಿಸಲು, ತನ್ನ ಸ್ವಾಮಿಯ ಸಲುವಾಗಿ ಆತನ ಶತ್ರುಗಳೊಡನೆ ಹೋರಾಡಿ ಅವರನ್ನು ಗೆದ್ದು ಪಡೆದ ಹಿರಿಮೆಯೂ ಪಂಪನದ್ದು. ಈ ಉಭಯ ಹಿರಿಮೆಗಳು ಲೋಕವನ್ನು ಬೆಳಗುವಂತೆ ಮಾಡಿದುವು; ಅಭಿಮಾನವನ್ನು ಉಕ್ಕೇರಿಸಿತು; ಕೀರ್ತಿಯನ್ನು ಎಕ್ಕೆಡೆಗೂ ಹಬ್ಬಿಸಿತು. ಹಾಗಾಗಿ ಮಹಾಕವಿ ಪಂಪನು ಎಂತಹ ಕಲಿಯೋ ಎಂತಹ ಸತ್ಕವಿಯೋ ಎಂದು ಜನ ಆತನನ್ನು ಕೊಂಡಾಡಿದರು.

ಈ ಪೆಂಪು ಕನ್ನಡದ ಆದಿಕವಿಯೆನಿಸಿದ ಪಂಪನದು. ನಿಜವಾಗಿಯೂ ಇದು ಕನ್ನಡಿಗರೆಲ್ಲರೂ ಅಭಿಮಾನ ಪಡತಕ್ಕ ಹಿರಿಮೆಯೆಂದು ಎಲ್ಲರೂ ತಲೆದೂಗಲೇಬೇಕು. ಆ ಅಭಿಮಾನದ ಮಾತನ್ನು ಇನ್ನಷ್ಟು ಕಿವಿಗೊಟ್ಟು ಆಲಿಸಿರಿ.

ಪಂಪಂ ಧಾತ್ರೀವಳಯ ನಿ–
ಳಿಂಪಂ, ಚತುರಂಗ ಬಳಭಯಂಕರಣಂ, ನಿ–
ಷ್ಕಂಪಂ, ಲಲಿತಾಲಂಕರ–
ಣಂ, ಪಂಚಶರೈಕರೂಪನಪಗತಪಾಪಂ!

(ವಿ. ವಿ, ೧೪–೪೯)

ಪಂಪನು ಕವಿಯೆಂದು ನಾವು ಬಲ್ಲೆವು. ಚತುರಂಗ ಬಲಕ್ಕೂ ಆತ ಭಯಂಕರನೂ ಹೌದು. ಆತನನ್ನು ಕಂಪನಗೊಳಿಸುವುದು, ಅಲುಗಾಡಿಸುವುದು ಯಾರಿಂದಲೂ ಸಾಧ್ಯವಾಗದು; ಆತನ ಧೀರತ್ವದ ನಿಲುಮೆ ಅಷ್ಟು ದೃಢ. ಕಲಿಯೋ, ಕವಿಯೋ ಆದವನು ಸೌಂದರ್ಯಶಾಲಿ ಆಗಿರಬೇಕೆಂದೇನೂಯಿಲ್ಲವಷ್ಟೆ; ಕಲಿ ಸಹಜವಾಗಿ ಒರಟ; ಕಾವ್ಯದ ಆಕರ್ಷಣೆಯೊಂದನ್ನು ಬಿಟ್ಟರೆ ಕವಿಯೂ ಸಮಾಜದಲ್ಲಿ ಬೆರೆಯುವುದು ಕಡಿಮೆ; ಏಕೆಂದರೆ ಆತನು ಸದಾ ಏಕಾಂತ ಜೀವಿ. ಆದರೆ ಪಂಪನು ಅವೆಲ್ಲವನ್ನೂ ಮೀರಿನಿಂತವನು. ಆತನು ಧಾತ್ರಿಗಿಳಿದು ಬಂದ ದೇವತೆ; ಮನೋಹರವಾದ ಅಲಂಕಾರವುಳ್ಳವನು; ಮನ್ಮಥ ಸದೃಶರೂಪನು; ಇಂತಹ ಸೌಂದರ್ಯಶಾಲಿ, ಆಭರಣಾಲಂಕಾರಭೂಷಿತನಿದ್ದರೂ ಪಾಪರಹಿತನು; ಪುಣ್ಯಾತ್ಮನು. ರೂಪಸೌಂದರ್ಯಗಳು ಪಾಪದಕಡೆಗೆ ಸೆಳೆತಗೊಳ್ಳುವುದು ವಿಶೇಷವಲ್ಲ. ಆದರೆ ಪಂಪ ಸಂಯಮಿ. ಆದ್ದರಿಂದ ಪಾಪರಹಿತ, ಶಕುಂತಳೆಯ ರೂಪವನ್ನು ವರ್ಣಿಸುತ್ತಾ ದುಷ್ಯಂತನು, ಆಕೆ ಅನಾಘ್ರಾತವಾದ ಪುಷ್ಪ, ಕರರುಹಗಳಿಂದ ಕೀಳದ ಕಿಸಲಯ, ಪೋಣಿಸದ ರತ್ನ, ಅನಾಸ್ವಾದಿತವಾದ ಮಧು – ಎಂದೆಲ್ಲಾ ಹೇಳಿ, ಕೊನೆಗೆ

'ಅಖಂಡವಾದ ಪುಣ್ಯದ ಫಲ' ಎಂದು ಹೇಳುತ್ತಾನೆ. ಆದ್ದರಿಂದಲೇ ಆಕೆಯ ರೂಪ ಪಾಪರಹಿತವಾದುದು ಎಂದು ಪ್ರಶಂಸಿಸುತ್ತಾನೆ. ಧಾತ್ರಿಗಿಳಿದ ದೇವತೆ, ಅಲಂಕಾರಭೂಷಿತ, ಕಾಮರೂಪ ಎಂಬಿತ್ಯಾದಿ ಸೌಂದರ್ಯವರ್ಣನೆ ಮಾಡಿ ಕೊನೆಗೆ ಪಾವರಹಿತನೆಂದು ಪಂಪನ ಕುರಿತು ಹೇಳಿದ ಮಾತು, ಕಾಳಿದಾಸ ಮಹಾಕವಿ ಶಾಕುಂತಲ ನಾಟಕದಲ್ಲಿ ದುಷ್ಯಂತನ ಮುಖದಿಂದ ಮಾಡಿದ ಶಕುಂತಲೆಯ ರೂಪದ ಅಖಂಡವಾದ ಪುಣ್ಯ ಎಂಬೀ ವರ್ಣನೆಯ ನೆನಪು ಹುಟ್ಟಿಸುತ್ತದೆ.

ವಿಕ್ರಮಾರ್ಜುನವಿಜಯದ ಮೇಲಿನ ಉಲ್ಲೇಖಕ್ಕೆ ಪೂರಕವಾಗಿ, ಆತನ ಆದಿಪುರಾಣದಲ್ಲಿಯೂ ಕವಿಯ ಸೌಂದರ್ಯವರ್ಣನೆ, ವ್ಯಕ್ತಿತ್ವಗಳ ನಿರೂಪಣೆ ಚಲೋದಾಗಿದೆ. ಕದಳೀಗರ್ಭಶ್ಯಾಮನು, ಮೃದುಕುಟಿಲ ಶಿರೋರುಹನು, ಸರೋರುಹವದನನು, ಮೃದು ಮಧ್ಯಮನನು, ಹಿತಮಿತಮೃದುವಚನನು, ಲಲಿತ ಸುಂದರವೇಷನು – ಮಾತ್ರವಲ್ಲ ದುಂದುಭಿ ಗಭೀರನಿನದನು – ಎಂಬೀ ಈ ಮಾತುಗಳು ಪಂಪ ಮಹಾಕವಿಯ ಅನುಪಮ ರೂಪ ವ್ಯಕ್ತಿತ್ವಗಳ ನಿರೂಪಣೆಗಳಾಗಿವೆ. ಇಷ್ಟಿದ್ದರೂ ಪಂಪನು 'ಅಪಗತಪಾಪ'ನು ಎಂಬುದು ಆತನ ಪೆಂಪು. ಕಲಿಯೂ ಸತ್ಕವಿಯೂ ಆಗಿ ಆತನಿಂದ ಕನ್ನಡ ನಾಡು ನುಡಿಗಳಿಗೆ ಕಂಪು ಪಸರಿಸಿತು.

ಪಂಪನು ಸುಂದರನೂ ಶೂರನೂ, ಗಭೀರನೂ ಆಗಿದ್ದನು. ಆತನಿಗೆ ಕನ್ನಡದಲ್ಲಿ ಚಿರಸ್ಥಾಯಿಯಾಗಿ ಹೆಸರು ನೆಲೆನಿಂತಿದ್ದು ಕವಿತ್ವದಿಂದಲೇ ಎಂಬುದು ಶಾಶ್ವತ ಸತ್ಯ. ಸ್ವಾಮಿಯ ಜೋಳದಪಾಟಿಯ ಸಲುವಾಗಿ ಅರಾತಿಗಳನ್ನು ನಿಗ್ರಹಿಸಿದ್ದಾನೆ. ಆ ಪರಾಕ್ರಮ ಕೇವಲ ಆ ಕಾಲಕ್ಕೆ ಸೀಮಿತ; ಇಂದಿಗೆ ಅದು ಉಳಿದಿಲ್ಲ. ಇಂದು ಉಳಿದದ್ದು ಆತನ ಕಾವ್ಯರಚನಾಯೋಗ್ಯತೆ ಮಾತ್ರ. ಪಂಪನ ಕವಿತಾ ಸಾಮರ್ಥ್ಯವನ್ನು, ಆತನ ಜೀವಿತ ಕಾಲದಲ್ಲಿಯೇ ನಾಡು ಮನಗಂಡಿತ್ತು. ಆ ಸಲುವಾಗಿ ಆತನಿಗೆ ಹಲವು ಪ್ರಶಸ್ತಿಗಳೂ ಸಂದಿದ್ದುವು.

'ವಿದಿತಂ, ಪ್ರಾತೀತಿಕಂ, ಕೋಮಲಮತಿಸುಭಗಂ, ಸುಂದರಂ, ಸೂಕ್ತಿಗರ್ಭಂ
ಮೃದುಸಂದರ್ಭಂ, ವಿಚಾರಕ್ಷಮಮುಚಿತಪದಂ, ಶ್ರವ್ಯಮವ್ಯಾಕುಲಂವ್ಯಾ
ಪ್ತದಿಗಂತಂ ಕಾವ್ಯವೆಂದು'
ಸುಕವಿ ಜನರು ನಿಚ್ಚಂ ಮೆಚ್ಚಲು
ಪಂಪನು 'ಸುಕವಿಜನ ಮಾನಸೋತ್ತಂಸಹಂಸ' ಎಂಬ ಪ್ರಶಸ್ತಿ ಪಡೆದನು.
'ಇದು ನಿಚ್ಚಂ ಪೊಸತರ್ಣವಂಬೊಲತಿಗಂಭೀರಂ ಕವಿತ್ವಂ ಜಗ –
ಕ್ಕದಱಿಂದಂ'

ಈತನು 'ಕವಿತಾಗುಣಾರ್ಣವ'ನೆಂದು ಪೆಸರ್ವಡೆದನು. ಸಂಸಾರದೊಳ್ ಸಾರಮಿಪ್ಪುದು ತಾಂ ಧರ್ಮಮದಂನಿಮಿರ್ಚುವುದು' ಪಂಪನಿಗೆ 'ಸಂಸಾರ ಸಾರೋದಯ'

ಎಂಬ ಹೆಸರುಬಂತು.

'ಅತಿಸುಭಗೆಗೆ, ಸಂದ ಸರ
ಸ್ವತಿ ಗೀತನಲಲಿತವಾಗ್ವಿಳಾಸಮೆದಲಲಂ
ಕೃತಿಯವೊಲೆಸೆದಪುದು, ಜಗತ್
ಪ್ರತೀತನೀತನೆ........'

ಎಂಬುದರಿಂದ ಕವಿ ಪಂಪನು 'ಸರಸ್ವತೀಮಣಿಹಾರ'ನೆನಿಸಿದನು. ಆದಿ ಪುರಾಣವನ್ನು ಬರೆದುದರಿಂದ ಪಂಪನು ಪುರಾಣಕವಿಯೆಂದೂ ಪ್ರಸಿದ್ಧನಾದನು.

ಇಷ್ಟು ತುಂಬಾ ಪ್ರಶಸ್ತಿಗಳಿದ್ದರೂ, ಆದಿಕವಿ ಪಂಪ ಎಂಬ ಮುನ್ನಡೆಯ ಬಿರುದೇ ಹೆಚ್ಚು ಪ್ರಚಾರವಾಗಿದೆ. ಈ ಬಿರುದನ್ನು ಅತ್ಯಂತ ರೋಚಕವಾದ ರೀತಿಯಲ್ಲಿ ವರ್ಣಿಸಿ ಪ್ರಚುರಪಡಿಸಿದವನು ಮಧುರ ಕವಿ:

'ಆದಿಕವಿ ಪಂಪನೆಂದನು
ವಾದಿಸಿ, ವಾದಿಸಿ, ವಿರೋಧಿ ವಿಪರೀತತೆಯಿಂ
ದೋದೆ ವಿಲೋಮದೆಪೆಸರಂ
ಮೇದಿನಿಯೊಳಗವನ ಪೆಸರೆ ಪೆಸರ್ವಡೆದೆಸೆಗುಂ'

ಎಂಬೀ ಮಧುರಕವಿಯ ಮಾತು ಚಮತ್ಕಾರವುಳ್ಳದ್ದಾಗಿದೆ. ಪಂಪನು ಆದಿಕವಿಯೆಂದು ಹೇಳುವ ಮಾತಿಗೆ ವಾದವಿವಾದಮಾಡಿ, ಆತನ ವಿರೋಧಿಗಳು, ಹೆಸರನ್ನು ವಿಪರೀತವಾಗಿ ಎಂದರೆ ಹಿಂದೆ ಮುಂದೆ ಮಾಡಿ, ಓದಿದರೂ ಆತನು ಪಂಪನೇ ಆದನು ಎಂಬೀ ಮಾತಿನಿಂದ ಪಂಪನ ನಿಷ್ಕಂಪತೆಯನ್ನು ತಿಳಿಸುತ್ತಾನೆ.

ಆದಿಕವಿ ಎಂಬ ಪದದ ಅರ್ಥ ಪ್ರಾರಂಭದ ಕವಿಯೆಂದು. ಈತನಿಗಿಂತ ಮೊದಲು ಕವಿಗಳು ಇರಲಿಲ್ಲವೆಂದು ಮೇಲಿಂದ ಮೇಲೆ ಅರ್ಥವಾಗುತ್ತದೆ. ಪಂಪನಿಗಿಂತ ಮೊದಲು ಕನ್ನಡದಲ್ಲಿ ಕವಿತೆ ಬರೆದವರು ಹಲವರಿದ್ದರೂ – ಕನ್ನಡ ಸಾಹಿತ್ಯದ ಮೊದಲಿನ ಮಹತ್ವದ ಕವಿಯೆಂಬರ್ಥದಲ್ಲಿ ಈ ಆದಿಕವಿ ಬಿರುದು ಪಂಪನಿಗೆ ಸಂದಿದೆ. ಪಂಪನಿಗಿಂತಲೂ ಹಿಂದಿನವನಾದ ಕವಿರಾಜಮಾರ್ಗಕಾರನು, ತನ್ನ ಗ್ರಂಥದಲ್ಲಿ ಉದ್ಧರಿಸಿದ ಕೆಲವು ಉದಾಹರಣೆಗಳಿಂದ, ಆತನಿಗಿಂತಲೂ ಹಿಂದೆಯೇ ಕನ್ನಡದಲ್ಲಿ ಕಾವ್ಯರಚನೆಯಾಗಿದೆ ಎಂಬುದು ಸುಸ್ಪಷ್ಟ, ಮಾತ್ರವಲ್ಲ, ಲಕ್ಷ್ಯಗ್ರಂಥಗಳು ಆಗದೆ ಲಕ್ಷಣ ಗ್ರಂಥಗಳ ಆವಶ್ಯಕತೆಯೇ ಇರುವುದಿಲ್ಲ. ಕವಿರಾಜಮಾರ್ಗ ಒಂದು ಲಕ್ಷಣಗ್ರಂಥ. ಕಾವ್ಯ ಹೇಗಿರಬೇಕು, ಅಲಂಕಾರಗಳು, ದೋಷಗಳು, ಗುಣಗಳು, ದಕ್ಷಿಣೋತ್ತರ ಮಾರ್ಗಗಳು ಇತ್ಯಾದಿ ಕಾವ್ಯಮಾರ್ಗದ ಹಲವು ರೀತಿನೀತಿಗಳನ್ನು ಅದರಲ್ಲಿ ಹೇಳಿರುವ ಕಾರಣ, ತತ್ಪೂರ್ವಕಾಲದಲ್ಲಿಯೇ ಕಾವ್ಯರಚನೆ ಧಾರಾಳ ಆಗಿರಲೇಬೇಕು. ಆಗಿದ್ದರೂ ಪಂಪನ ಕಾವ್ಯದಂತಹ ಮಹತ್ವದ ಕೃತಿ ಬಾರದೆ ಇರುವ ಕಾರಣ, ಪಂಪನೇ ಅಂತಹ ಸಮರ್ಥ

ಕೃತಿರಚನೆ ಆದಿಕವಿಯೆಂದು ಖ್ಯಾತಿ. ಪಡೆದನು. ಇದೇ ವಿವರಣೆ ಸಂಸ್ಕೃತದ ಆದಿಕವಿಯೆನಿಸಿದ ವಾಲ್ಮೀಕಿಗೂ ಸಲ್ಲುತ್ತದೆ.

ಆತ್ಮಪ್ರಜ್ಞೆ ಧಾರಾಳ ಇರುವ ಪಂಪನೇ ಈ ಮಾತನ್ನು ಹೇಳಿದ್ದಾನೆ.

'ಮದಿದಜಸಂ, ತೊದಟ್ಟಿ ಚಳಮೊಂದಿದಳಂಕೃತಿ, ಕೈತ ದೇಸಿಯೆಂ
ಬುದನೆನೆ, ವಸ್ತು ವಿದ್ಯೆಯೆನೆ, ಕಬ್ಬಮೆ ಮುನ್ನಮವಂತಿವಲ್ಲದ
ಲ್ಲದೆ ಪೆಱವಿಲ್ಲ ಕಬ್ಬಮೆನೆ, ಮುನ್ನಿನ ಕಬ್ಬ ಮನೆಲ್ಲಮಿಕ್ಕಿ ಮೆ
ಟ್ಟಿದುವು ಸಮಸ್ತ ಭಾರತಮುಮಾದಿಪುರಾಣ ಮಹಾಪ್ರಬಂಧಮುಂ'

(ವಿ. ವಿ. ೧೪-೫೯)

ಹಿಂದಿನ ಕಾವ್ಯಗಳಲ್ಲಿ ವಿಶೇಷವೇನೂ ಇಲ್ಲದಿರುವ ಕಾರಣ, ತನ್ನ ಈ ವಿಶಿಷ್ಟ ಕಾವ್ಯಗಳಾದ ಸಮಸ್ತಭಾರತವೂ ಆದಿ ಪುರಾಣವೂ ಹಿಂದಿನಕಾವ್ಯಗಳನ್ನೆಲ್ಲಾ ಕೆಳಗೆ ಇಕ್ಕಿ ಮೆಟ್ಟಿ ಮೇಲೆ ನಿಂತುವು ಎಂದು, ಪಂಪನು ತನ್ನ ಕಾವ್ಯದ ಹಿರಿಮೆಯನ್ನು ಆತ್ಮವಿಶ್ವಾಸದಿಂದ ಹೇಳಿಕೊಂಡಿರುವುದು ಸರಿಯಾಗಿದೆ. ಆದಿಕವಿಯೆಂಬ ಬಿರುದಿನ ಮುದ್ರೆ ಪಂಪನಿಗೆ ಶತಮಾನಗಳಿಂದ ಸಂದು ಇಂದಿಗೂ ಸ್ಥಿರವಾಗಿದೆ.

ಪಂಪನನ್ನು ಬಹುವಾಗಿ ಮೆಚ್ಚಿಕೊಂಡ ಹಿರಿಯ ಕವಿಗಳಲ್ಲಿ ರನ್ನನು ಅಗ್ರಗಣ್ಯನು.

'ಸುಭಗ ಕವಿ ಪಂಪನಿಂ, ವಾಗ್ವಿಭವೋನ್ನತಿನೆಗಟ್ಟಿದು'

'ಕವಿಗಳವರಿರ್ವರೇ ಪುಣ್ಯವಂತರಿರ್ವರೆ ಕೃತಾರ್ಥರಿರ್ವರೆಸುಭಗರ್,
ಕವಿತಾಗುಣಾರ್ಣವಂ ಮೇಣ್ ಕವಿರತ್ನಂ.'

ಇಷ್ಟೊಂದು ಮೆಚ್ಚುಗೆ ರನ್ನನಿಗಿರಲು ಕಾರಣವೂ ಇದೆ. ಇಬ್ಬರೂ ಲೌಕಿಕ ಧಾರ್ಮಿಕವೆಂಬೀ ಉಭಯರೀತಿಯ ಕಾವ್ಯಗಳನ್ನು ಬರೆದು ಪ್ರಸಿದ್ಧಿ ಪಡೆದವರು. ಪಂಪನು ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿ ವಿಕ್ರಮಾರ್ಜುನ ವಿಜಯವನ್ನು ಬರೆದಂತೆ, ರನ್ನನು ಇಱಿವಬೆಡಂಗನ ಪರಾಕ್ರಮವನ್ನು ಭೀಮನಿಗೆ ಹೋಲಿಸಿ ಸಾಹಸಭೀಮವಿಜಯವನ್ನು ಬರೆದನು. ಅಷ್ಟು ಮಾತ್ರವಲ್ಲ, ರನ್ನನ ಸಾಹಸಭೀಮವಿಜಯ ಕಾವ್ಯಕ್ಕೆ ಪಂಪನು ವಿಕ್ರಮಾರ್ಜುನವಿಜಯದ ಹದಿಮೂರನೆಯ ಆಶ್ವಾಸದ ಗದಾಯುದ್ಧದ ಕಥೆಯೇ ಮೂಲವಾಗಿದೆ. ವರ್ಣನೆಗಳೂ ಕೆಲವು ಪದ್ಯಗಳೂ ಪಂಪನ ವರ್ಣನೆ ಪದ್ಯಗಳ ಪ್ರತಿಬಿಂಬಗಳಂತೆಯೇ ಇವೆ. ಕನ್ನಡ ಸಾಹಿತ್ಯದಲ್ಲಿ ರನ್ನ ಕವಿಯ ಸ್ಥಾನವೂ ಅತ್ಯಂತ ಶ್ರೇಷ್ಠವಾದುದಾದರೂ, ಆತನು ಪಂಪನಿಂದ ಪಡೆದ ಸ್ಫೂರ್ತಿಯನ್ನು ಕೃತಜ್ಞತಾಪೂರ್ವಕ ಸ್ಮರಿಸಿಕೊಂಡಿದ್ದಾನೆ. ಅದರಿಂದ ರನ್ನ ಮಹಾಕವಿ ಘನತೆಗೆ ಯಾವುದೇ ತೆರನ ಕೊರತೆ ಸಲ್ಲತಕ್ಕುದಲ್ಲ.

ಹಿಂದೆ ಹೇಳಿದಂತೆ, ಪಂಪನು ಲೌಕಿಕಕಾವ್ಯ ವಿಕ್ರಮಾರ್ಜುನವಿಜಯವನ್ನೂ

ಆಗಮಕಾವ್ಯ ಆದಿ ಪುರಾಣವನ್ನೂ ಬರೆದು ಪ್ರಖ್ಯಾತನಾದನು. ಇವೆರಡರಲ್ಲಿ ಆದಿ ಪುರಾಣವು ಆತನ ಮೊದಲಕೃತಿ. ಅಪ್ರತಿಮಯೋಧನೂ, ಅಸಾಮಾನ್ಯ ಕವಿಯೂ ಆಗಿದ್ದ ಪಂಪನನ್ನು ಅರಿಕೇಸರಿ ತನ್ನ ಬಳಿಗೆ ಕರೆಸಿ ಆಶ್ರಯವಿತ್ತನು. ಆದಿ ಪುರಾಣವನ್ನು ಬರೆದ ಪಂಪನಿಂದ ವಿಕ್ರಮಾರ್ಜುನವಿಜಯವನ್ನು ಬರೆಸಲು ಪ್ರೋತ್ಸಾಹವಿತ್ತನು. ಈ ಉಭಯ ಗ್ರಂಥಗಳನ್ನು, ಈ ಎರಡು ಮಹಾಕಾವ್ಯಗಳೆರಡನ್ನೂ ಎಷ್ಟೊಂದು ಶೀಘ್ರಗತಿಯಲ್ಲಿ ಪಂಪನು ರಚಿಸಿದನೆಂಬುದನ್ನು ತಿಳಿದಾಗ ನಮಗೆ ಆತನ ಕಾವ್ಯಶಕ್ತಿಯ ಕುರಿತು ಅಭಿಮಾನ ಉಕ್ಕೇರುವುದು.

'ಬೆಳಗುವೆನಿಲ್ಲಿ ಲೌಕಿಕಮನಲ್ಲಿ ಜಿನಾಗಮಮಂ, ಸಮಸ್ತಭೂ-
ತಳಕೆ ಸಮಸ್ತ ಭಾರತಮುಮಾದಿಪುರಾಣಮುಮೆಂದು ಮೆಯ್ಯಸುಂ-
ಗೊಳುತಿರೆ, ಪೂಣ್ದು, ಪೂಣ್ದತೆಱದೊಂದಱಿದಿಂಗಳೊಳೊಂದು ಮೂಱುತಿಂ
ಗಳೊಳೆ ಸಮಾಪ್ತಿಯಾದುದೆನೆ, ಬಣ್ಣಿಸಿದಂ ಕವಿತಾಗುಣಾರ್ಣವಂ'

(ವಿ. ವಿ. 14-60)

ಕಾವ್ಯರೂಪದಲ್ಲಿ ಲೌಕಿಕವನ್ನೂ ಆಗಮವನ್ನೂ ಬೆಳಗುತ್ತೇನೆಂದು ಪ್ರತಿಜ್ಞಾಪೂರ್ವಕ ಶ್ರದ್ಧಾನ್ವಿತನಾಗಿ, ಒಂದನ್ನು ಆರು ತಿಂಗಳಲ್ಲೂ ಇನ್ನೊಂದನ್ನು ಮೂರು ತಿಂಗಳಲ್ಲೂ ಬರೆದು ಮುಗಿಸಿದೆನೆಂದು ಪಂಪನೇ ಹೇಳಿಕೊಂಡಿದ್ದಾನೆ. ಮೊದಲನೆಯಕೃತಿ ಆದಿಪುರಾಣ ಆರು ತಿಂಗಳಲ್ಲೂ ಎರಡನೆಯದಾದ ವಿಕ್ರಮಾರ್ಜುನವಿಜಯ ಮೂರು ತಿಂಗಳಲ್ಲೂ ರಚಿತವಾಯಿತೆಂದು ತಿಳಿದಾಗ, ಇಂತಹ ಮಾಹಾಕೃತಿಗಳು ಇಷ್ಟೊಂದು ಅಲ್ಪಾವಧಿಯಲ್ಲಿ ರಚಿತವಾಗಬೇಕಾದರೆ ಕವಿಯ ಪ್ರತಿಭಾಶಕ್ತಿ ಎಷ್ಟು ಹಿರಿದಾದುದು ತೀಕ್ಷ್ಣವಾದುದೆಂದು, ನಾವು ಚಕಿತರಾಗುತ್ತೇವೆ.

ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಇವೆರಡೂ ಚಂಪೂ ಕಾವ್ಯಗಳು. ಚಂಪೂ ಎಂದರೆ ಗದ್ಯಪದ್ಯಮಿಶ್ರಿತ ಕಾವ್ಯ. ಲಾಕ್ಷಣಿಕರ ಅಭಿಪ್ರಾಯದಂತೆ ಪದ್ಯವೂ, ಗದ್ಯವೂ, ಪದ್ಯಗದ್ಯಮಿಶ್ರಿತ ಚಂಪೂ ಕೂಡ ಕಾವ್ಯಪ್ರಕಾರಗಳೇ ಆಗಿವೆ. ಕನ್ನಡ ಭಾಷೆಯ ಪ್ರಾಚೀನ ಕಾವ್ಯಗಳಲ್ಲಿ ಪ್ರಾಚೀನದವುಗಳು ಹೆಚ್ಚಾಗಿ ಚಂಪೂ ಕಾವ್ಯಗಳೇ, ಸಂಸ್ಕೃತದಲ್ಲಿ ಚಂಪೂ ಕಾವ್ಯಗಳು ಕೆಲವು ಮಾತ್ರ. ಚಂಪೂ ರಾಮಾಯಣ, ಚಂಪೂ ಭಾರತ ಇಂಥವೇ ಕೆಲವು. ಸಂಸ್ಕೃತ ಭಾಷೆಯ ಮಹಾಕಾವ್ಯಗಳು ಹೆಚ್ಚಿನವು ಪದ್ಯಕಾವ್ಯ ಪ್ರಕಾರಗಳಾಗಿವೆ. ಕನ್ನಡದ ಚಂಪೂ ಕಾವ್ಯಗಳ ಗದ್ಯಗಳನ್ನು ವಚನಗಳೆಂದು ಹೇಳುತ್ತಾರೆ. ಈ ವಚನಗಳನ್ನು ವಾಚನಮಾಡುವ ಕ್ರಮ ಕೂಡಾ ತೀರಾ ಗದ್ಯಗಳಂತೆ ಅಲ್ಲ; ಸ್ವಲ್ಪ ಪ್ರತ್ಯೇಕ ಧಾಟಿಯಲ್ಲಿ; ಪದ್ಯಗಂಧಿ ಎಂಬ ರೀತಿಯಲ್ಲಿ. ಹಾಗಾಗಿಯೇ ಹನ್ನೆರಡನೆಯ ಶತಮಾನದ ಶರಣ ಸಾಹಿತ್ಯದ ವಚನಗಳನ್ನು ಸಂಗೀತಕ್ಕೆ ಅಳವಡಿಸಿ ಹಾಡಲು ಇಂದು ತೊಡಗಿದ್ದಾರೆ. ಏಕೆಂದರೆ ಅವು ಪದ್ಯಗಂಧಿಗಳಾಗಿವೆ. ಇಂತಹ ಒಂದು

ವಿಶಿಷ್ಟವಾದ ಪದ್ಯ ಹಾಗೂ ವಚನಗಳಿಂದ ಕೂಡಿದ ಚಂಪೂಕಾವ್ಯ ಶೈಲಿಯಲ್ಲಿ ಪಂಪಮಹಾಕವಿಯ ಕಾವ್ಯಗಳು ಪ್ರಸಿದ್ಧವಾಗಿವೆ.

ಪ್ರಾಚೀನ ಕನ್ನಡ ಕವಿಗಳಲ್ಲಿ ಎಲ್ಲರೂ ಈ ಸಂಸ್ಕೃತ ಭಾಷಾ ಪ್ರವೀಣರೇ ಇದ್ದರು. ಪಂಪನೂ ಅದಕ್ಕೆ ಹೊರತಾದವನಲ್ಲ. ಜೈನಾಗಮದಲ್ಲಿ, ಸಂಸ್ಕೃತ ಪ್ರಾಕೃತ ಭಾಷೆಗಳಲ್ಲಿ ಪ್ರಸಿದ್ಧವಾದ ಆದಿನಾಥಚರಿತ್ರೆಯನ್ನು ಅವಲಂಬಿಸಿಯೇ ಪಂಪನು ಆದಿಪುರಾಣವನ್ನು ಬರೆದನು. ಜಿನಸೇನಾಚಾರ್ಯರ ಪೂರ್ವ ಪುರಾಣವನ್ನು ಅನುಸರಿಸಿ ಬರೆದನೆಂದು ಖಚಿತವಾಗಿದೆ. ಅಂತೆಯೇ ವಿಕ್ರಮಾರ್ಜುನವಿಜಯವನ್ನು ವ್ಯಾಸಮುನಿ ರಚಿತ ಮಹಾಭಾರತ ಸಂಸ್ಕೃತ ಗ್ರಂಥವನ್ನು ಅವಲಂಬಿಸಿ ಬರೆರಿರುವನು. "ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ....."

ಎಂಬೀ ಆತನದೇ ಮಾತಿನಿಂದ ವ್ಯಾಸ ಮಹಾಭಾರತವನ್ನು ಆದ್ಯಂತ ಅಭ್ಯಸಿಸಿ ಪಂಪಭಾರತ ರಚಿತವಾಗಿದೆಯೆಂಬುದು ಸುಸ್ಪಷ್ಟ.

ಸಂಸ್ಕೃತದಲ್ಲಿ ವ್ಯಾಸರಚಿತ ಮಹಾಭಾರತ ಬಹಳ ದೊಡ್ಡ ಗ್ರಂಥ. ಕಥೆ ಆಖ್ಯಾನ, ಉಪಾಖ್ಯಾನಗಳಿಂದ ಕೂಡಿ ಅದು ವಿಸ್ತಾರವಾಗಿ ಬೆಳೆದಿದೆ. ಅಷ್ಟನ್ನೂ ಬೇರೆ ಭಾಷೆಗಳಿಗೆ ತರುವುದೂ ಕಷ್ಟ; ತಂದವರೂ ಇಲ್ಲವೆನಬೇಕು. ಅಂತಹ ಕೊರತೆಯನ್ನು ಪಂಪನು ಆದಷ್ಟು ನಿವಾರಿಸಿ ವ್ಯಾಸಭಾರತಕ್ಕೆ ನ್ಯಾಯ ಸಲ್ಲಿಸಿರುವುದಾಗಿ ಹೇಳಿಕೊಂಡಿದ್ದಾನೆ:

'ಕತೆ ಪಿರಿದಾದೊಡಂ, ಕತೆಯ ಮೆಯ್ಗಿಡಲೀಯದೆ, ಮುಂ ಸಮಸ್ತ ಭಾ
ರತಮನಪೂರ್ವಮಾಗೆ ಸಲೆಪೇಟ್ದ ಕವೀಶ್ವರರಿಲ್ಲ ವರ್ಣಕಂ
ಕತೆಯೊಳೊಡಂಬಡಂ ಪಡೆಯೆ ಪೇಳ್ವೊಡೆ ಪಂಪನೆ ಪೇಟ್ಗುಮೆಂದು ಪಂ
ಡಿತರೆ ತಗುಳ್ದು ಬಿಚ್ಚಟಿಸೆ ಪೇಟಲೊಡರ್ಚಿದನೀ ಪ್ರಬಂಧಮುಂ'

ಹೀಗೆ ಹಿರಿದಾದ ಮಹಾಭಾರತ ಕಥೆಯ ಮೂಲ ಕಥಾವಸ್ತು ಕೆಡದೆ ಸಮಸ್ತ ಭಾರತವನ್ನು ಹೇಳಿದ ಹೆಮ್ಮೆ ಪಂಪನದು.

ಜೈನ ರಾಮಾಯಣದಂತೆ ಜೈನ ಭಾರತವೂ ವಾಲ್ಮೀಕಿ ರಾಮಾಯಣಕ್ಕಿಂತ ಹಾಗೂ ವ್ಯಾಸಭಾರತಕ್ಕಿಂತ ಪ್ರತ್ಯೇಕವಾದುದು; ಕೆಲವು ಸಮಾನತೆಯಿದ್ದರೆ ಹೆಚ್ಚಿನ ಭೇದ ವ್ಯತ್ಯಾಸಗಳಿವೆ. ವಾಲ್ಮೀಕಿ ರಾಮಾಯಣದಲ್ಲಿ ಶ್ರೀರಾಮನು ರಾವಣನನ್ನು ಕೊಲ್ಲುವುದಾದರೆ ಜೈನರಾಮಾಯಣದಲ್ಲಿ ಲಕ್ಷ್ಮಣನು ಕೊಲ್ಲುತ್ತಾನೆ. ಅಂತಹ ವ್ಯಾಖ್ಯಾನ ಜೈನ ಭಾರತಕ್ಕೂ ಇದೆ. ಸಂಸ್ಕೃತ ಪ್ರಾಕೃತಗಳಲ್ಲಾಗಲಿ, ಕನ್ನಡದಲ್ಲಾಗಲಿ ಭಾರತವನ್ನು ರಚಿಸಿದ ಜೈನ ಕವಿಗಳು ಅವರದೇ ಆದ ಜೈನಭಾರತ ಸಂಪ್ರದಾಯವನ್ನು ಅನುಸರಿಸಿದ್ದಾರೆ. ಆದರೆ ಪಂಪನು, ವ್ಯಾಸಮುನೀಂದ್ರರುಂದ್ರ

ವಚನಾಮೃತವಾರ್ಧಿಯನ್ನು ಈಸಿ ವ್ಯಾಸಭಾರತವನ್ನು ಅವಲಂಬಿಸಿದ್ದು ಒಂದು ವೈಶಿಷ್ಟ್ಯವೆನ್ನಬೇಕು. ಹಾಗಾಗಿ ಕತೆಯ ಮೈಯ್ಗಿಡದೆ ಓದಿ ಬರೆದೆನೆಂಬ ಪೆರ್ಮೆಗೆ ಪಂಪನು ಸರಿಯಾಗಿ ಅರ್ಹನಾಗುತ್ತಾನೆ. ಭಾರತದಂತೆ ಜಿನಾಗಮವನ್ನು ಬೆಳಗುವ ಬಗ್ಗೆ ಬರೆದ ಆದಿ ಪುರಾಣ ಕೂಡ ಸಂಸ್ಕೃತದ 'ಪೂರ್ವಪುರಾಣ'ದ ಸಂಗ್ರಹವಾಗಿದೆ. 'ಪೂರ್ವ ಪುರಾಣ'ದಲ್ಲಿ ವಿಸ್ತೃತವಾಗಿ ಬಂದಿರುವ ಜೈನಧರ್ಮ ಪ್ರಕ್ರಿಯೆಯನ್ನು, ಜನ್ಮಾಂತರ ವಿಚಾರಗಳನ್ನು ಆದಿ ಪುರಾಣದಲ್ಲಿ ಚಲೋದಾಗಿ ಸಂಗ್ರಹಿಸಿಕೊಟ್ಟಿದ್ದಾನೆ. ಈ ಉಭಯ ಕಾವ್ಯಗಳನ್ನು ಅಷ್ಟು ಸಮಂಜಸವಾದ ಶೈಲಿಯಲ್ಲಿ ರಚಿಸಿದ್ದರಿಂದಲೇ ಮತ್ತಿನ ಕವಿಗಳು "ಪಂಪನಿಂಪು" (ಜನ್ನ) 'ಪಂಪನ ಪೆಂಪು' (ಕಮಲಭವ) "ಪಂಪನೋಜೆ" (ಗುಣವರ್ಮ) 'ಪಂಪನಗುಣ' (ಮಲ್ಲಿಕಾರ್ಜುನ) 'ಹಂಪನ ಸುಮಾರ್ಗ' (ಕೇಶಿರಾಜ) 'ಅದ್ಭುತವಚೋ ನಿಷ್ಕಂಪನಂ ಪಂಪನಂ' (ಚೌಡರಸ) ಪಂಪನನುಣ್ಬುವೆತ್ತನುಡಿ' (ಪಾರ್ಶ್ವಪಂಡಿತ) 'ಪಂಪನ ಗೀರ್ಗುಂಫದ ಪೆಂಪು' (ದುರ್ಗಸಿಂಹ) 'ರಸಿಕಾಗ್ರಣಿ ಹಂಸದೇವ' (ಆಚಣ್ಣ) 'ಪಂಪನೊಂದಸದೃಶಮಪ್ಪಪೂರ್ವರಸ' (ನಯಸೇನ) 'ಗುರುಹಂಸದೇವ' (ನಾಗವರ್ಮ) 'ಸುಕವಿಪಂಪ' (ನಾಗಚಂದ್ರ) ~ ಎಂದೆಲ್ಲಾ ಮುಕ್ತಕಂಠದಿಂದ ಹೊಗಳಿದ್ದಲ್ಲದೆ, ಈ ಪ್ರಶಂಸಾ ಸೌಧಕ್ಕೆ ಕಳಶವಿಟ್ಟಂತೆ, ನಾಗರಾಜಕವಿ,

'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿ ಪಂಪನಾವಗಂ
ವಸುಧೆಗೆ ಚಕ್ರಿಯಂತಮರಭೂಮಿಗೆ ವಾಸವನಂತೆ, ಸಂತತಂ
ರಸಕುರಗೇಂದ್ರನಂತೆ, ಗಗನಕ್ಕೆ ರವಿಯಂತೆ, ಧಾತ್ರಿಯೊಳ್
ಜಸವಡೆದಿರ್ದದೀಗಳೆಮಗೀಗೆ ವಚೋವಿಳಾಸಮಂ'

ಎಂದು ಕೊಂಡಿದ್ದಾನೆ.

ಆದಿಪುರಾಣ ಮೂಲತಃ ಧಾರ್ಮಿಕ ಕೃತಿಯಾದರೂ ಕಾವ್ಯ ಗುಣಭರಿತವಾಗಿದೆ.

'ಮೃದುಪದಗತಿಯಿಂ, ರಸಭಾ –
ವದಪೆರ್ಚಿಂ, ಪುಣ್ಯವನಿತೆಯೊಲ್ ಕೃತಿಸೌಂದ–
ರ್ಯದ ಚಾತುರ್ಯದ ಕಣಿಯೆನೆ
ವಿದಗ್ಧಬುಧಜನದ ಮನಮನಲೆಯಲೆವೇಡಾ'

ಕೃತಿಯನ್ನು ಪುಣ್ಯವನಿತೆಗೆ ಹೋಲಿಸುವಲ್ಲಿ, ಕವಿಯ ಧಾರ್ಮಿಕ ಬುದ್ಧಿಯ ಜತೆಗೆ ಕಾವ್ಯರಸದ ಸಿದ್ಧಿಯೂ ಗೋಚರವಾಗುವುದು. ಇಂತಹ ಧಾರ್ಮಿಕ ಗ್ರಂಥ ಬರೆವಲ್ಲಿಯೂ ಕವಿ ರಸಿಕತೆಯ ಹೊನಲನ್ನು ಇಂತು ಹರಿಸುತ್ತಾನೆ.

"ಕವಿತಾ ರಹಸ್ಯಮಂ ಸ

ತ್ಕವಿಯಱಿಗುಮನೇಕ ಮೂಕನೇಡಂ ಜಡನೆಂ

ಬವನಟಿಗುಮೆವಿಟನಟಿಗುಂ

ಕುವಿಟಂ ಸ್ತ್ರೀರತ ರಹಸ್ಯದೊಳಗಟಿದಪನೇ"

'ಅತಿಚತುರಕವಿಕದಂಬಕ ವಿಷಯಂ' ಆದ ಕಾವ್ಯರತ್ನಂ, 'ಮರುಳೆ ಶುಷ್ಕ ಮೈಯಾಕರಣಂಗಂ, ಶುಷ್ಕ ತಾರ್ಕಿಕಂಗಂ ಬೆಳ್ಳಕ್ಕರಿಗಂಗಂ ವಿಷಯಮೆ' ಎಂದು ಪಂಡಿತಂಮನ್ಯರಾದವರನ್ನು ಹೀಗಳೆಯುತ್ತಾನೆ. ಇಷ್ಟೊಂದು ಕಾವ್ಯರಸಕ್ಕೆ ಆತ ಮನಸೋತು ಮಹಾಕಾವ್ಯವನ್ನು ಬರೆಯುತ್ತಿರುವಾಗ, ತನ್ನ ಧಾರ್ಮಿಕ ಭಾವನೆಯ ಶ್ರದ್ಧೆಯನ್ನು ಬಿಟ್ಟುಕೊಡುವುದಿಲ್ಲ.

'ಕವಿತೆಯೊಳಾಸೆಗೆಯ್ವ ಫಲಮಾವುದೊ ಪೂಜೆ ನೆಗಟ್ತೆ ಲಾಭಮೆಂ-
ಬಿವೆ ವಲಮಿಂದ್ರಪೂಜೆ ಭುವನಸ್ತುತಮಪ್ಪ ನೆಗಟ್ತೆ ಮುಕ್ತಿಸಂ-
ಭವಿಸುವ ಲಾಬಮೆಂಬಿವೆ ಜಿನೇಂದ್ರ ಗುಣಸ್ತುತಿಯಿಂದ ತಾಮೆ ಸಾ-
ರವೆ ಪೆಱರೀವುದೇಂ ಪಱಱ ಮಾಡುವುದೇಂ ಪೆಱಱಿಂದಮಪ್ಪುದೇಂ'

ಮಮ್ಮಟನು ಕಾವ್ಯದಿಂದ ಈ ಕೆಳಗಿನ ಫಲಗಳನ್ನು ಆಶಿಸುತ್ತಾನೆ :

ಕಾವ್ಯಂ ಯಶಸೇರ್ಥಕೃತೇ ವ್ಯವಹಾರವಿದೇ ಶಿವೇತರಕ್ಷತಯೇ ।
ಸದ್ಯಃ ಪರನಿರ್ವೃತಯೇ ಕಾಂತಾಸಂಮಿತತಯೋಪದೇಶಯುಜೇ ॥

(ಕಾವ್ಯಪ್ರಕಾಶ)

ಆದರೆ ಪಂಪನು ಅವನ್ನು ಆಶಿಸದೆ, ಅವೆಲ್ಲವೂ ಲೌಕಿಕಸುಖಸಾಧನೆಗಳೆಂದೂ ತಾನು ಜಿನೇಂದ್ರ ಗುಣಸ್ತುತಿಯಿಂದ ಇಂದ್ರಪೂಜೆ, ಭುವನನೇಕೊಂಡಾಡುವ ನೆಗಟ್ತೆ, ಮತ್ತೆ ಮುಕ್ತಿ ಇವೇ ಹೆಚ್ಚಿನದಾಗಿರುವುದರಿಂದ ಅವನ್ನು ಪಡೆಯಲು ಆದಿನಾಥನ ಚರಿತ್ರೆಯನ್ನು ಪುರಾಣವಾಗಿ ಬರೆದಿದ್ದೇನೆ ಎಂದು ಕೃತಿಯ ಸಾರ್ಥಕತೆಯನ್ನು ಸಾರುತ್ತಾನೆ. ಅಷ್ಟು ಮಾತ್ರವಲ್ಲ, ತಾನು ಕೊಂಡಾಡುವ ವಾಗ್ದೇವತೆ ಸರಸ್ವತಿ ಪರಮ ಜಿನೇಂದ್ರವಾಣಿ ಎಂದು ಸಾರುತ್ತಾನೆ :

ಪರಮಜಿನೇಂದ್ರವಾಣಿಯೆ ಸರಸ್ವತಿ ಬೇಱಿದು ಪೆಣ್ಣು ರೂಪಮಂ
ಧರಿಯಿಸಿ ನಿಂದುದಲ್ತದುವೆ ಭಾವಿಸಿಯೋದುವ ಕೇಳ್ವ ಪೂಜಿಪಾ
ದರಿಸುವ ಭವ್ಯಕೋಟಿಗೆ ನಿರಂತರ ಸೌಖ್ಯಮನೀವುದಾನದ
ರ್ಕೆರೆದಪೆನಾ ಸರಸ್ವತಿಯೆ ಮಾಟ್ಕೆಮಗಿಲ್ಲಿಯೆ ವಾಗ್ವಿಳಾಸಮಂ

ಎಂದು ಹೀಗೆ ಸಾರುತ್ತಾ, ಆದಿಪುರಾಣ ಕಾವ್ಯದ ಮೂಲಕ ತಾನು ಜಗತ್ತಿಗೆ ಸಾರುವ ಜಿನೇಂದ್ರವಾಣಿಯ ಪರಮಸಿದ್ಧಿಯಾದ ಭವ್ಯಕೋಟಿಯ ನಿರಂತರ

ಸೌಖ್ಯವನ್ನು ಹಾರೈಸುತ್ತಾನೆ. ಈ ಮಾತು ಕವಿಯನ್ನೂ ಆತನ ಕಾವ್ಯವನ್ನೋದುವ ವಾಚಕರನ್ನೂ ಲೌಕಿಕತೆಯಿಂದ ಅಲೌಕಿಕತೆಯ ಎತ್ತರಕ್ಕೆ ಏರಿಸುತ್ತದೆ.

ಆದಿಪುರಾಣದಲ್ಲಿ ಇಪ್ಪತ್ತನಾಲ್ಕು ತೀರ್ಥಂಕರರಲ್ಲಿ ಮೊದಲನೆಯವನಾದ ವೃಷಭನಾಥ, ಆದಿತೀರ್ಥ ಪ್ರವರ್ತಕನಾದ ಶ್ರೇಯಾಂಸ, ಪ್ರಥಮ ಚಕ್ರವರ್ತಿ ಭರತ, ಪ್ರಥಮ ಕಾಮದೇವ ಬಾಹುಬಲಿ, ಪ್ರಥಮ ಗಣಧರ ವೃಷಭಸೇನ ಮತ್ತು ಆದಿತೀರ್ಥಂಕರನ ಐದು ಜನ ಮಕ್ಕಳು – ಇಷ್ಟು ಜೀವಗಳ ಜನ್ಮಾಂತರ ಕಥೆಗಳಿವೆ. ಇವರೆಲ್ಲರೂ ಹಲವು ಜನ್ಮಗಳಿಂದ ಒಟ್ಟಿಗೆ ಸುಖ ದುಃಖಗಳನ್ನು ಅನುಭವಿಸುತ್ತಾ ಕೊನೆಗೆ ಎಲ್ಲರೂ ಜತೆಯಾಗಿ ಮುಕ್ತರಾಗುತ್ತಾರೆ. ಈ ಜೀವಗಳ ಕಥೆಗಳನ್ನು ತಿಳಿಸುವಾಗ ಪೂರಕವಾಗಿ ಅಲ್ಲಲ್ಲಿ ಬೇರೆ ಜೀವರ ಕಥೆಗಳೂ ಬರುತ್ತವೆ. ಕೆಲವು ಸಾಧುಗಳ, ಕೇವಲಿಗಳ ಕಥೆಗಳೂ ಇವೆ. ಇವೆಲ್ಲವುಗಳಿಗೂ ತಲೆಮಣಿಯಾಗಿ ಆದಿಪುರಾಣದಲ್ಲಿ ವರ್ಣಿತವಾಗಿರುವುದು ಆದಿತೀರ್ಥಂಕರ ಚರಿತ್ರೆ.

ಆದಿತೀರ್ಥಂಕರನ ಜೀವ ಭೋಗಾಸಕ್ತವಾಗಿತ್ತು. ಕ್ರಮಶಃ ಭೋಗಾಸಕ್ತಿ ಕಳೆದು ಧರ್ಮಾವಲಂಬಿಯಾಗಿ ಸಂಸಾರವನ್ನು ದಾಟಿತು; ಇತರರಿಗೂ ಧರ್ಮಬೋಧೆ ಮಾಡಿ ಅವರನ್ನೂ ಮುಕ್ತರನ್ನಾಗಿಸಿತು. ಜೀವಗಳಲ್ಲಿ ಇಷ್ಟು ಬದಲಾವಣೆ ಆಗಬೇಕಾಗಿದ್ದರೆ ಎಷ್ಟೋ ಕಾಲ ದಾಟುತ್ತದೆ. ಈ ಜೀವಿಗಳ ಕಥೆಗಳಲ್ಲಿ ಭೋಗಯೋಗಗಳೆರಡೂ ಅತ್ಯುನ್ನತಿಯಲ್ಲಿ ಮಿಳಿತವಾಗುತ್ತವೆ. ಜೀವನದ ಸಕಲ ಭೋಗಗಳನ್ನು ಬೇಕಾದಷ್ಟು ಅನುಭವಿಸಿದ ಮೇಲೆ ಯಾವುದೋ ಒಂದು ನಿಮಿತ್ತದಿಂದ ಒಮ್ಮೆಲೇ ವೈರಾಗ್ಯ ಬರುತ್ತದೆ. ಸಂಸಾರದಲ್ಲಿ ನಿಮಗ್ನರಾದವರನ್ನು ಉದ್ಧರಿಸುವುದು ಧರ್ಮವೊಂದೇ ಎಂದೂ, ದಯೆ, ದಾನ, ತಪಸ್ಸುಗಳಿಂದ ಧರ್ಮಮಾರ್ಗದಲ್ಲಿ ನಡೆಯಬೇಕೆಂದೂ ಜೀವ ಬಯಸುತ್ತದೆ. ತಲೆಗೂದಲಲ್ಲಿ ನೆರೆ ಕಂಡಾಗ ವೈರಾಗ್ಯ ಬರಬಹುದು. ಮುಡಿದ ಹೂ ಬಾಡಿದ್ದನ್ನು ನೋಡಿದರೂ ಸಂಸಾರ ಹೇಯವೆನಿಸಬಹುದು. ಹೀಗೆ ವೈರಾಗ್ಯ ಪಡೆದು, ಸಂಸಾರವನ್ನು ದಾಟಿ ಕೈವಲ್ಯ ಹೊಂದಿ ಮುಕ್ತರಾದವರನ್ನು ಜಿನರೆನ್ನುವರು. ಜಿನ ಎನ್ನುವ ಪದಕ್ಕೆ ಗೆದ್ದವನು ಎಂದು ಅರ್ಥ. ಲೋಕದ ಭವಾವಳಿಯಿಂದ ಮುಕ್ತನಾಗಿ ಸಂಸಾರವನ್ನು ದಾಟಿ ಕೈವಲ್ಯ ಜೈನನೆನಿಸುತ್ತಾನೆ. ಬೇರೆ ಬೇರೆ ಜನ್ಮಗಳಲ್ಲಿ ಬಂದು ಶುದ್ಧಿಗೊಂಡ ಜೀವ ಭರತವರ್ಷದಲ್ಲಿ ಆದಿತೀರ್ಥಂಕರನಾಗಿ ಜನಿಸಿ ಲೋಕಕ್ಕೆ ಧರ್ಮವನ್ನು ಉಪದೇಶಿಸುತ್ತಾನೆ. ಈತನಿಗೆ ಭರತ, ಬಾಹುಬಲಿ, ಬ್ರಾಹ್ಮಿ, ಸುಂದರಿ ಎಂಬ ನೂರು ಮಕ್ಕಳು ಇದ್ದರು. ಕಾಲಕ್ರಮದಲ್ಲಿ ವೈರಾಗ್ಯ ಹೊಂದಿ ತಪಸ್ಸು ಮಾಡಿ ವೃಷಭಾಚಲದಲ್ಲಿ ಮುಕ್ತನಾಗುತ್ತಾನೆ.

ಆದಿಪುರಾಣದಲ್ಲಿ ಆದಿತೀರ್ಥಂಕರನ ಧರ್ಮದಿಗ್ವಿಜಯ, ಭರತಚಕ್ರವರ್ತಿಯ ದಿಗ್ವಿಜಯಗಳು ಅರ್ಥಪೂರ್ಣವಾಗಿವೆ. ತೀರ್ಥಂಕರನ ದಿಗ್ವಿಜಯದಲ್ಲಿ ದಯೆಯೇ ಧ್ವಜ, ಧರ್ಮವೇ ವಿಜಯಚಕ್ರ, ಭಕ್ತಿಯುಳ್ಳವರಿಗೆ ಪ್ರಾಪ್ತವಾಗುವ ಫಲ ಮುಕ್ತಿ.

ಆದರೆ ಭರತ ಚಕ್ರವರ್ತಿ ಕಠೋರವಾದ ಚಕ್ರರತ್ನವನ್ನು ಮುಂದೆ ಮಾಡಿ ಷಟ್ಖಂಡ ಭೂಮಂಡಲಗಳನ್ನು ಗೆದ್ದು ಕಪ್ಪಕಾಣಿಕೆಗಳನ್ನು ಸೆಳೆದುಕೊಳ್ಳುವನು. ಆತನ ಗರ್ವ ಮೇರೆ ಮೀರಿತ್ತು. ರಾಜಧಾನಿ ಅಯೋಧ್ಯೆಗೆ ಮರಳಿದಾಗ ಆತನ ಚಕ್ರವು ಪುರಪ್ರವೇಶ ಮಾಡದೆ ಬಾಗಿಲಲ್ಲೇ ನಿಂತಿತು. ದೇಶದೇಶಗಳನ್ನು ಗೆದ್ದರೂ ಬಾಹುಬಲಿ ಮೊದಲಾದ ತಮ್ಮಂದಿರು ತನಗೆ ವಶವರ್ತಿಗಳಾಗದಿರುವಾಗ ತಾನು ದಿಗ್ವಿಜಯ ಮಾಡಿ ಫಲವಿಲ್ಲವೆಂದು ಭರತನು ಅವರೊಡನೆ ಹೋರಾಟಕ್ಕೆ ನಿಂತನು. ಬಾಹುಬಲಿ ಮೊದಲಾದ ತಮ್ಮಂದಿರು ತನಗೆ ವಶವರ್ತಿಗಲಾಗದಿರುವಾಗ ತಾನು ದಿಗ್ವಿಜಯ ಮಾಡಿ ಫಲವಿಲ್ಲವೆಂದು ಭರತನು ಅವರೊಡನೆ ಹೋರಾಟಕ್ಕೆ ನಿಂತನು. ಬಾಹುಬಲಿ ಮಲೆತು ನಿಂತನು, ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧಗಳಾದುವು. ಬಾಹುಬಲಿ ಒಮ್ಮೆ ಭರತನನ್ನು ಹಿಡಿದು ಮೇಲೆತ್ತಿದರೂ ಅಣ್ಣನೆಂದು ಗ್ರಹಿಸಿ ನೆಲಕಪ್ಪಳಿಸದೆ ಗೌರವದಿಂದ ಕೆಳಗಿಳಿಸಿದನು. ಅವಮಾನದಿಂದ ಕ್ರುದ್ಧನಾದ ಭರತನು ಬಾಹುಬಲಿಗೆ ಚಕ್ರರತ್ನವನ್ನು ಪ್ರಯೋಗಿಸಿದನು. ಅದೂ ಸಲ್ಲದ ಕೆಲಸ ಮಾಡಿದನೆಂದು ಭರತನನ್ನು ನಿಂದಿಸಿದರು. ಭರತನು ತಲೆಬಾಗಿದನು. ಅಣ್ಣನಿಗೆ ಅವಿಧೇಯನಾದೆನಲ್ಲಾ ಎಂದು ಬಾಹುಬಲಿಗೂ ಪಶ್ಚಾತ್ತಾಪವಾಯಿತು. 'ಸೋದರರೊಳ್ ಸೋದರರಂ ಕಾದಿಸುವ' ಈ ರಾಜ್ಯ ತನಗೆ ಬೇಡವೆಂದು ರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ ತಪಸ್ಸಿಗೆ ಹೊರಟನು.

ಆದಿಪುರಾಣದ ಈ ಸಂದರ್ಭ ಅತ್ಯಂತ ಹೃದಯಸ್ಪರ್ಶಿಯಾಗಿ, ಕವಿಯ ಮಾತು ಅತ್ಯಂತ ರಸಾತ್ಮಕ ಕಾವ್ಯವಾಗಿ ಮಹೋನ್ನತಿಗೆ ಮುಟ್ಟುತ್ತದೆ. ಬಾಹುಬಲಿ ಹೇಳುತ್ತಾನೆ :

"ಚಕ್ರೇಶ ಸಿಗ್ಗನುಟಿ' ಮುಳಿಸಂ ನೀ
ನೆಂದಿಂಗಂ ಬಿಸುಡೀತ
ಮ್ಮಂದಿರೊಳಿಂತಿಂತು ಕಟ್ಟುವರ್ಪುಧು ಪೆಂಪೆ?"

"ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಲಮೀ ಭಟಖಡ್ಗ ಮಂಡಲೋ
ತ್ಪಲವನ ವಿಭ್ರಮ ಭ್ರಮರಿಪ್ಪ ಮನೋಹರಿ ರಾಜ್ಯಲಕ್ಷ್ಮಿಭೂ
ವಲಯಮನಯ್ಯನಿತ್ತುದುಮನಾಂ ನಿನಗಿತ್ತೆನಿದೇವುದಣ್ಣ ನೀನ್
ಒಲಿದ ಲತಾಂಗಿಗಂ ಧರೆಮಾಟಿಸಿದಂದು ನೆಗಟ್ತಮಾಸದೇ"

ಈ ಧೀರೋಕ್ತಿಯನ್ನು ಕೇಳಿದ ಭರತನು ನಿಂತಲ್ಲಿಯೇ ಕುಸಿದುಹೋದನು.

"ಮನದೊಳ್ ಮನ್ ಪುದಿದಿರ್ದ ಕೋಪಮನಿತುಂ ತೂಳ್ದಾಗಳೆತ್ತೆತ್ತಗೆ
ಯ್ದೆನಿದು ತಮ್ಮ ನೋಳೆಂಬುದೊಂದುಪಶಮಂ ಕೈಗಣ್ಮೆ ನೀನೊರ್ಬನ್ನೆ

ಮನುವಂಶಕ್ಕೆ ಲಲಾಮನಪ್ಪನುಜನ್ನೆ ಬೇಡಮ್ಮ ನೀನುಂ ತಪೋ
ವನಮಂ ಸಾರ್ವುದುಮಾನದಾರ್ಗೆ ಮೆಟೆ'ವೆಂ ಮತ್ರಾಜ್ಯ ಸಾಮ್ರಾಜ್ಯಮಂ"
"ನಿಜಪಾದಾಂಬುರುಹಕ್ಕೆ ಪಾದ್ಯವಿಧಿಯಂ ನೇತ್ರಾಂಬುವಿಂ ಮಾಡುವ
ಗ್ರಜನತ್ಯುನ್ನತಮಪ್ಪ ಮಸ್ತಕದ ಮೇಗೋರಂತೆ ಪಾಯ್ವಾತ್ಮ ಬಾ
ಷ್ಪಜಳೌಘಂಗಳಿನಂದು ಬಾಹುಬಲಿ ತನ್ನಿಂದಂ ನಿಧೀಶಂಗೆ ವಂ
ಶಜ ರಾಜ್ಯಾಭಿಷವೋತ್ಸವಂ ನೆಗಟ್ದೆಂಬಾಶಂಕೆಯಂ ಮಾಡಿದಂ"

"ಭಟ ಖಡ್ಗ ಮಂಡಲೋತ್ಪಲವನ ವಿಭ್ರಮ ಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ" ಎಂಬ ಮಾತಿನಲ್ಲಿ ಎಂಥಹ ಕ್ರೂರವಾದ ರೀತಿಯಿಂದ ಪಡೆದ ಎಷ್ಟು ಅಸ್ಥಿರವಾದ ರಾಜ್ಯದ ಸುಖಕ್ಕೆ ಸೋತು ಹೋರಾಟಕ್ಕೆ ನಾವು ತೊಡಗಿದೆವು ಎಂಬ ನೀತಿ ಧ್ವನಿತವಾಗುವುದರೊಂದಿಗೆ, ಈ ಲೋಕದ ಸಮಸ್ತ ಸುಖಭೋಗಗಳೂ ಅಣ್ಣನಾದ ನಿನಗೇ ಇರಲಿ ಎಂಬ ತ್ಯಾಗದ ಪರಮೋನ್ನತ ಭಾವನೆ ಇದೆ. ಈ ಮನೋಹರಿಯಾದ ರಾಜ್ಯಲಕ್ಷ್ಮಿಯನ್ನು ನೀನು ಒಲಿದಿದ್ದಿ; ಹಾಗಿರುವಾಗ ನಿನ್ನ ತಮ್ಮನಾದ ನಾನು ಮತ್ತೆ ಆಕೆಯನ್ನು ಆಶಿಸುವ ಪಾಪ ಮಾಡಲಾರೆ ಎಂಬ ಧರ್ಮ ಭೀರುತ್ವವೂ ಧ್ವನಿತವಾಗಿದೆ. ಚಕ್ರರತ್ನವನ್ನು ನಿರ್ವೀರ್ಯಗೊಳಿಸಿದ, ತನ್ನನ್ನು ಭುಜಬಲ ಪರಾಕ್ರಮಗಳಿಂದ ಸಂಪೂರ್ಣ ಸೋಲಿಸಿದ, ತಮ್ಮನ ಈ ಧೈರ್ಯದ ತ್ಯಾಗದ ವಿನಯದ ಧರ್ಮದ ಪ್ರೇಮದ ಈ ಮಾತಿಗೆ ಕಠಿಣ ಮನಸ್ಸಿನ ಭರತನ ಹೃದಯ ಕರಗಿ ನೀರಾಗಿ ಹೋಯಿತು. ಆದ್ದರಿಂದಲೇ ಆತ ಹೇಳುತ್ತಾನೆ – "ನೀನೊಬ್ಬನ್ನೆ ಮನುವಂಶಕ್ಕೆ ಲಲಾಮನ್ನೆ" ಎಂದು! ಇಂತಹ ಶ್ರೇಷ್ಠನಾದ ತಮ್ಮನನ್ನು ತಪೋವನಕ್ಕೆ ಕಳುಹಿಸಿ ತಾನು ಈ ಸಾಮ್ರಾಜ್ಯವನ್ನು ಯಾರಿಗೆ ಮೆರೆಸಲಿ? ಎಂದು ಹೇಳುತ್ತಾ ಬಾಹುಬಲಿಯ ಪಾದಗಳನ್ನು ತನ್ನ ಕಣ್ಣೀರಿಂದ ತೊಳೆಯುವಂತೆ ತಲೆಬಾಗಿದನು. ಅಷ್ಟರಲ್ಲಿ ಭರತನ ಮಸ್ತಕಕ್ಕೆ ತನ್ನ ಬಾಷ್ಪವಾರಿಯಿಂದ ತನ್ನ ವಂಶಜನಿಗೆ ರಾಜ್ಯೋತ್ಸವದ ಅಭಿಷೇಕ ಮಾಡಿದ್ದನು! ದೇವತೆಗಳೂ ರೋಮಾಂಚನಗೊಳ್ಳುವ ದೃಶ್ಯವಿದು.

ಬಾಹುಬಲಿಯು ವೈರಾಗ್ಯನಿಧಿಯಾದ ತಪಸ್ಸಿಗೆ ನಡೆದ ಮೇಲೆ ಭರತನು ಧರ್ಮನೀತಿಗಳಿಂದ ರಾಜ್ಯವಾಳಿದನು. ಹಲಗಾಲದ ಅನಂತರ ತನ್ನ ಕೆನ್ನೆಯಲ್ಲಿ ನರೆಗೂದಲನ್ನು ಕಂಡು ವೈರಾಗ್ಯಪರನಾಗಿ ರಾಜ್ಯವನ್ನು ತ್ಯಜಿಸಿ, ಧ್ಯಾನಪರವಶನಾಗಿ ಧೀಕ್ಷೆಗೊಂಡನು. ಹೀಗೆ ಅವನಿಗೆ ಜ್ಞಾನೋದಯವಾಯಿತು. ಭರತನ ಅನಂತರ ವೃಷಭಸೇನ ಗಣಧರರೂ ಪುರುತನಯರೂ ಮೋಕ್ಷ ಹೊಂದಿದರು.

ಸುಮಾರು ಹತ್ತು ಸಾವಿರ ಶ್ಲೋಕಗಳನ್ನೊಳಗೊಂಡ ಪೂರ್ವ ಪುರಾಣವನ್ನು ಇಂತು ಕಥೆಯ ಮೆಯ್ಗಿಡಲೀಯದೆ ಪಂಪನು ಸುಮಾರು ಸಾವಿರದ ಆರ್ನೂರು ಪದ್ಯಗಳಲ್ಲಿ ಅಡಕಮಾಡಿ ಒಂದು ಅಮೂಲ್ಯ ಕಾವ್ಯವಾಗಿ ಕನ್ನಡಿಗರಿಗೆ ನೀಡಿದ್ದಾನೆ.

ಜೈನಕವಿಗಳು ಜೈನಭಾರತದ ಧಾಟಿಯಲ್ಲಿಯೇ ಭಾರತವನ್ನು ಹೇಳುವ ಮತೀಯ ಸಂಪ್ರದಾಯವನ್ನು ಬಿಟ್ಟು, ಪಂಪನು ವ್ಯಾಸ ಭಾರತವನ್ನೇ ಹೆಚ್ಚಾಗಿ ಆಧರಿಸಿ ಪಂಪ ಭಾರತವನ್ನು ಬರೆದುದು ಆತನ ಧಾರ್ಮಿಕ ದೃಷ್ಟಿಯ ಹಿರಿಮೆಗೆ ಸಾಕ್ಷಿಯಾಗಿದೆ. ವ್ಯಾಸಭಾರತವು ಐದನೆಯ ವೇದವೆಂದೇ ಪ್ರಖ್ಯಾತವಾಗಿದೆ ಎಂದು ದೃಢವಾಗಿ ನಂಬಿದವರಿದ್ದಾರೆ. ಅಂಥವರ ವಿಶ್ವಾಸಕ್ಕೆ ಮತೀಯ ಭಾವನೆಯಿಂದ ನೋವನ್ನುಂಟುಮಾಡಬಾರದೆಂದು ಪಂಪನು ಭಾವಿಸಿದ್ದರೆ, ಅದನ್ನು ಪ್ರಶಂಸನೀಯವೆನ್ನಬೇಕು.

'ಗುಣಾರ್ಣವ ಭೂಭುಜನಂ ಕಿರೀಟಿಯೊಳ್ ತಗುಳ್ಚಿ ಪೋಲಿಪೊಡೆನ್ನಗಟ್ಟಿಯಾದುದು' ಎಂದು ಹೇಳಿಕೊಂಡದ್ದು ಮಾತ್ರವಲ್ಲ, ಕಾವ್ಯಾರಂಭದಲ್ಲಿ ಅರಿಕೇಸರಿಯ ವಂಶಾವಳಿಯ ವರ್ಣನೆಯನ್ನೂ, ಆರಂಭದ ದೇವತಾಸ್ತುತಿ ಪದ್ಯದಲ್ಲಿಯೇ ಅರಿಕೇಸರಿಯ ಬಿರುದುಗಳನ್ನೂ ಸೇರಿಸಿದ್ದಾನೆ. ಅರ್ಜುನನ ಪ್ರಸ್ತಾಪ ಬರುವ ಸಂದರ್ಭ ಕ್ವಚಿತ್ತಾದರೂ ಅಲ್ಲೆಲ್ಲ ಅರಿಕೇಸರಿಯ ಹೆಸರು ಸೂಚಿತವಾಗುವುದರಿಂದ 'ಮೊಸರಿನಲ್ಲಿ ಕಲ್ಲು ದೊರೆತಂತೆ' ನಮಗೆ ತೋರುತ್ತದೆ. ಆದರೆ ಕ್ವಚಿತ್ತಾದ ಆ ಕಲ್ಲುಗಳನ್ನು ಹೆಕ್ಕಿಕೊಂಡರೆ, ಉಳಿದದ್ದು ಮೊಸರಿನ ಗಟ್ಟಿಯೇ ಆಗಿದೆ ಎನ್ನುವುದು ಸೂಕ್ತವಾಗಿದೆ. ಅಂಬಿಕೆ ಅಂಬಾಲಿಕೆಯರು ವ್ಯಾಸ ಮುನೀಂದ್ರನ ದಿವ್ಯ ದೃಷ್ಟಿ ಮಂತ್ರದಿಂದಲೇ ಗರ್ಭಧರಿಸಿದರೆನ್ನುವ, ಅರ್ಜುನನೊಡನೆ ಮಾತ್ರ ದ್ರೌಪದಿಯ ವಿವಾಹವಾಯಿತೆನ್ನುವ, ದ್ರೋಣನು ದ್ರುಪದನನ್ನು ಎಡಗಾಲಿನಿಂದ ಒದೆದನೆನ್ನುವ – ಇಂತಹ ಕೆಲವು ಯುಕ್ತಿಯುಕ್ತವೆನಬಹುದಾದ ಬದಲಾವಣೆಗಳನ್ನು ಬಿಟ್ಟರೆ ಪಂಪನು 'ವ್ಯಾಸಮುನೀಂದ್ರ ರುಂದ್ರ ವಚಾನಾಮೃತವಾರ್ಧಿಯನ್ನು ಈಸಿ ಬರೆದುದು ಖಚಿತವಾಗಿದೆ.

ಮೃಗಯಾ ನಿಮಿತ್ತ ಅಲೆದಾಡಿದ ಶಂತನು ರಾಜನು ಯೋಜನಗಂಧಿಯನ್ನು ಕಂಡು, ಆ ಮೃಗಶಾಬಾಕ್ಷಿಯ ಕಂಪು ತಟ್ಟಿ ಮಧುಪನಂತೆ ಸೋತು ಆಕೆಯ ಕೈ ಹಿಡಿದು

"...... ನೀಂ ಬಾ ಪೋಪಮೆಂದಂಗೆ ಮೆ

ಲ್ಲಗೆ ತತ್ಕನ್ಯಕೆ ನಾಣ್ಚಿ ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ!"

ಎನ್ನುತ್ತಾಳೆ. ಊರಿಗೆ ಅರಸನಾದವನೆ ಕೈ ಹಿಡಿಯಲು ಆಶಿಸಿ ಬಂದರೂ, ದಾಶಪುತ್ರಿ ತಂದೆಯ ಸಮ್ಮತಿ ಪಡೆಯಿರಿ ಎಂದು ನಾಣ್ಚಿ ಹೇಳುವುದು ಆಕೆಯ ಕನ್ಯಾ ಸಹಜ ಪದ್ಧತಿಗೆ ಸಹಜವಾಗಿದೆ. ಯೋಜನಗಂಧಿಯನ್ನು ತಂದೆ ಶಂತನುವಿಗೆ ವಿವಾಹ ಮಾಡಿಸುವಲ್ಲಿ ಗಾಂಗೇಯನು ಆಜೀವ ಬ್ರಹ್ಮಚಾರೀವ್ರತ ಕೈಕೊಂಡು ಆಕೆಯಲ್ಲಿ ಜನಿಸಿದ ಪುತ್ರರಿಗೇ ಪಟ್ಟ ಕಟ್ಟುವ ಭರವಸೆ ನೀಡಿದಂತೆ, ಮುಂದೆ ಶಂತನುವೂ, ಅವನ ಪುತ್ರನಾದ ಚಿತ್ರಾಂಗದನೂ ಮರಣ ಹೊಂದಿದಾಗ, ವಿಚಿತ್ರ ವೀರ್ಯನನ್ನು

ಪಟ್ಟದಲ್ಲಿ ಭದ್ರಗೊಳಿಸಿ, ಆತನಿಗೆ ಕಾಶೀರಾಜಪುತ್ರಿಯರಾದ ಅಂಬೆ, ಅಂಬಿಕೆ, ಅಂಬಾಲಿಕೆಯರನ್ನು ಸ್ವಯಂವರ ಮಂಟಪದಲ್ಲಿ ಗೆದ್ದು ತಂದು ಮದುವೆ ಮಾಡಿಸುವಾಗ, ಅಂಬೆ ಭೀಷ್ಮನೊಡನೆ ಸ್ವಯಂವರದಲ್ಲಿ ರಾಜರನ್ನು ಸೋಲಿಸಿ ಗೆದ್ದು ತಂದ ನೀನೇ ಮದುವೆಯಾಗೆಂದು ಹೇಳಿದಳು. ಅದಕ್ಕೆ ಭೀಷ್ಮನು :

ಅತ್ತ ಸುರೇಶ್ವರಾವಸಥಮಿತ್ತ ಮಹೀಳ ಮುತ್ತ ಪನ್ನಗೋ
ದಾತ್ತ ಸಮಸ್ತಲೋಕ ಮಱದಂತಿರೆ ಪೂಣ್ದೆ ನಗಾಗದಂಗಜೋ
ತ್ಪತ್ತಿ ಸುಖಕ್ಕೆ ಸೋಲಲಱಗುಂ ಪುರುಷವ್ರತಮೀಗಳಬ್ಬೆಯೆಂ
ದತ್ತಿಗೆಯೆಂಬ ಮಾತನೆನಗೇನೆನಲಕ್ಕುಮೊ ಪಂಕಜಾನನೇ

(ವಿ. ವಿ. ೧-೩೫)

ಎಂದು ತನ್ನ ಬ್ರಹ್ಮಚಾರೀವ್ರತದ ಕುರಿತು ತಿಳಿಸುವನು. ಆಗ ಆಕೆ ತಾನು ಮುನ್ನ ಒಲಿದ ಸಾಳ್ವ ರಾಜನಲ್ಲಿಗೆ ಕಳುಹೆನ್ನಲು, ಅಲ್ಲಿಗೆ ಕಳುಹಿಸಿದಾಗ ಸಾಳ್ವನು ಹೇಳುವ ಮಾತು :

ಬಂಡಣದೊಳೆನ್ನ ನೋಡಿಸಿ
ಕೊಂಡೊಯ್ದಂ ನಿನ್ನನಾ ಸರಿತ್ಸುತಂ ನಾನುಂ
ಪೆಂಡತಿಯೆನಾದೆನಱಿಂ
ಪೆಂಡಿರ್ ಪೆಂಡಿರೊಳದೆಂತು ಬೆರಸುವರಬಲೇ

(ವಿ. ವಿ. ೧-೩೬)

ಸ್ವಯಂವರ ಮಂಟಪದಲ್ಲಿ ಪೌರುಷ ತೋರಿಸಲಾರದೆ ಭೀಷ್ಮನೊಡನೆ ಸೆಣಸಿ ಸೋತ ನಾನು ಹೆಂಡತಿಯೇ ಆದೆನು, ಹೆಂಡಿರು ಹೆಂಡಿರೊಡನೆ ವಿವಾಹವಾಗುತ್ತಾರೆಯೇ? ಎಂಬೀ ಮಾತು ಯುಕ್ತಿಯುಕ್ತವಾಗಿ ತೋರುತ್ತದೆ.

ವಿಚಿತ್ರವೀರ್ಯನೂ ಕೆಲಕಾಲ ರಾಜ್ಯವಾಳಿ ರಾಜಕ್ಷಯದಿಂದ ಮಕ್ಕಳಿಲ್ಲದೆ ಮೃತನಾಗಲು, ಸತ್ಯವತಿಯು ಶೋಕಾಕ್ರಾಂತಳಾಗಿ ಭೀಷ್ಮನೊಡನೆ ನೀನೇ ರಾಜ್ಯಭಾರವಹಿಸೆಂದಾಗ – "ನಾನುಮೆರಡಂ ನುಡಿದೊಡೆ ಹರಿಹರ ಹಿರಣ್ಯಗರ್ಭರ್ ನಗರೇ"

"ಬಿಸುಡೆ ಮದೀಯ ಪುರುಷವ್ರತವೊಂದುಮನೀಗಳಂಬಿಕೇ"

"ಗಾಂಗೇಯನುಂ ಪ್ರತಿಜ್ಞಾ
ಗಾಂಗೇಯನುಮೋರ್ಮೆ ನುಡಿದುದಂ ತಪ್ಪುವರೇ"

ಎಂಬ ಪ್ರತಿಜ್ಞಾವಾಕ್ಯಗಳಲ್ಲಿ ಭೀಷ್ಮನ ಅತ್ಯುನ್ನತ ವ್ಯಕ್ತಿತ್ವವನ್ನು ಪಂಪನು

ಬಿಂಬಿಸಿದ್ದಾನೆ.

ಮುನಿಶಾಪಗ್ರಸ್ತನಾದ ಪಾಂಡು ರಾಜ್ಯಭೋಗದಾಸೆ ತೊರೆದು ವನವಾಸಿಯಾದನು. ಒಂದು ವಸಂತಕಾಲದಲ್ಲಿ 'ಸೊರ್ಕಿದಂಗಜ ಮತಂಗಜದಂತೆ ಬರ್ಪ ಮಾದ್ರಿ'ಯನ್ನು ಕಂಡು–

ಸೊಗಯಿಸೆ ತೊಟ್ಟ ಪೂದುಡುಗೆ ಮೆಲ್ಲೆರ್ದೆಯೊಳ್ ತಡಮಾಡದೆ ಗಾಡಿ ದಿ
ಟ್ಟಿಗೆಳೊಳನಂಗರಾಗದಸಮಣ್ಣು ವಿನಂ ನಡೆ ನೋಡಿ ನೋಡಿ ತೊ
ಟ್ಟಿಗೆ ಕೊಳೆ ಮೇಲೆಪಾಯ್ದು ವಳನಪ್ಪಿದನಾ ವಿಭು ತನ್ನ ಶಾಪಮಂ
ಬಗೆಯದೆ ಮಿಟಿಸ್ತಿ ದೇವತೆಯನಟ್ಟಿಱಿಳುರ್ಕೆಯಿನಪ್ಪುವಂತೆವೋಲ್

(೧–೧೮)

ಶಾಪ ಫಲಿಸಿತು. 'ವಿಷವಲ್ಲಿಯನಪ್ಪಿದಂತೆ ತಳ್ತ ನಲ್ಲಳ ಮೃದು ಮೃಣಾಳ ಕೋಮಳ ಬಾಹುಪಾಶಂಗಳೇ' ಯಮಪಾಶಗಳಾಯಿತು. ಇಲ್ಲಿ ಪಾಂಡುರಾಜನ ಶಾಪಹತ ಮರಣದ ಚಿತ್ರಣ ದಾರುಣವಾಗಿದೆ.

ಬಿಗಿದಮರ್ದಿರ್ದ ತೋಳ್ ಸಡಿಲೆ ಜೋಲೆ ಮೊಗಂ ಮೊಗದಿಂದಮೊಯ್ಯಗೊ
ಯ್ಯಗೆ ನಗೆಗಣ್ಗಳಾಲಿ ಮಗುಳ್ದಂತಿರೆ ಮುಚ್ಚಿರೆ ಸುಯ್ಯಡಂಗೆ ಮೆ
ಲ್ಲಗೆ ಮಱಸೊಂದಿದಂದದೊಳ್ ಜೋಲ್ದ ನಿಜೇಶನನಾ ಲತಾಂಗಿ ತೊ
ಟ್ಟಗೆ ಕೊಳೆ ನೋಡಿ ಕೆಟ್ಟೆನಿನಿಯಂ ಮಱಸೊಂದಿದನೋ ಬಟಿಲ್ದನೋ ।

(೨–೧೮)

ಎಂದು ಮಾದ್ರಿ ದುಃಖಾಕ್ರಾಂತಳಾಗುತ್ತಾಳೆ. ಮುಂದಿನ ದೃಶ್ಯ ಕರುಳು ಕತ್ತರಿಸುವಂತಿದೆ. ಕುಂತಿ ಪತಿಯೊಡನೆ ಚಿತೆಯನ್ನೇರಲು ಸಿದ್ಧಳಾಗುತ್ತಾಳೆ. ಆಗ ಮಾದ್ರಿ ಆಕೆಯನ್ನು ತಡೆದು ತನ್ನ ಮಕ್ಕಳನ್ನು ಅಕ್ಕನ ಕಯ್ಯಲ್ಲಿರಿಸಿ ಹೀಗೆ ಹೇಳುತ್ತಾಳೆ:

ಎನಗಿಂದಿನೊಂದು ಸೂಱುಮ
ನಿನಿಯಂ ದಯೆಗೆಯ್ದುನೆನ್ನ ಸೀೞಿಂ ನಿನಗಾ
ನೆನಿತಾದೊಡೆಮೀವೆನೆ ಮ
ತ್ತನಯರ್ ಕೆಯ್ಯೆಡೆ ಪಲುಂಬದಿರ್ ಪೆಱ ಪೆಱವಂ ॥

(೨–೨೬)

ಇಂದು ತನಗೆ ಸುಖವಿತ್ತ ಪತಿಯ ಜೊತೆ ಚಿತೆಯೇರುವ ಸುಖವನ್ನು ತಾನು ನಿನಗೆ ಕೊಡಲಾರೆನೆಂಬೀ ಮಾದ್ರಿಯ ಮಾತು ಮರ್ಮಭೇದಕವಾಗಿದೆ.

ಇಂತಹ ಹೃದಯಸ್ಪರ್ಶಿ ಘಟನೆಗಳು ಅಲ್ಲಲ್ಲಿ ಪಂಪಭಾರತದಲ್ಲಿ ರಸಿಕರನ್ನು

ತಲೆದೂಗಿಸುತ್ತವೆ. ಹದಿನಾಲ್ಕು ಆಶ್ವಾಸಗಳಲ್ಲಿ ಲಂಬಿತವಾದ ಮಹಾಭಾರತದ ಕಥೆಯಲ್ಲಿ ಇಂಥ ಮಾರ್ಮಿಕ ಸನ್ನಿವೇಶಗಳು ಹೇರಳವಾಗಿವೆ. ಸ್ಥಾಲೀಪುಲಾಕ ನ್ಯಾಯದಂತೆ ಕೆಲವನ್ನು ಮಾತ್ರ ದಿಕ್ಸೂಚಿಯಾಗಿ ಇಲ್ಲಿ ತಿಳಿಸಲಾಗಿದೆ.

ಅರ್ಜುನನು ಮಹಾಪರಾಕ್ರಮಿಯೆಂದು ಚಿತ್ರಿಸಿ ಆತನನ್ನೂ ಅರಿಕೇಸರಿಯನ್ನೂ ಹೋಲಿಸುವುದು ಪಂಪನ ಒಂದು ಮಹತ್ತ್ವವಾದ ಸಾಧನೆಯಾಗಿದೆ. ಆ ನಿಟ್ಟಿನಲ್ಲಿ ಸಂದರ್ಭ ಸಿಕ್ಕಿದಾಗಲೆಲ್ಲ ವೈಭವೀಕರಿಸಿ ಬಣ್ಣಿಸುತ್ತಾನೆ. ಅರ್ಜುನನು ದ್ರೋಣಾಚಾರ್ಯರಲ್ಲಿ ಬಿಲ್ಲುವಿದ್ಯೆ ಕಲಿಯುವಾಗ, ದ್ರೌಪದೀ ಸ್ವಯಂವರದಲ್ಲಿ ಸುಭದ್ರಾವಿವಾಹ ಕಾಲದಲ್ಲಿ, ಖಾಂಡವವನ ದಹನದಲ್ಲಿ, ರಾಜಸೂಯಯಾಗ ದಿಗ್ವಿಜಯ ಸಂದರ್ಭದಲ್ಲಿ, ಚಿತ್ರಾಂಗದನಿಂದ ದುರ್ಯೋಧನನ ಸೆರೆಬಿಡಿಸುವಲ್ಲಿ, ಕಿರಾತಾರ್ಜುನೀಯದಲ್ಲಿ, ಗೋಗ್ರಹಣದಲ್ಲಿ, ಮುಂದೆ ಕುರುಕ್ಷೇತ್ರದ ಕದನಕಾಲದಲ್ಲಿ ಹೀಗೆ ಅರ್ಜುನನದೇ ವೈಭವೋಪೇತ ಚರಿತ್ರೆ ಇದೆ. ಇವೆಲ್ಲ ವ್ಯಾಸಭಾರತದಲ್ಲಿ ಇದ್ದದ್ದೇ; ಆದರೆ ಇಲ್ಲಿ ಹೆಚ್ಚು ಉಜ್ವಲವಾಗಿವೆ. ನಾರದನ ಉಪದೇಶದಂತೆ ಪಾಂಡುವಿಗೆ ಸದ್ಗತಿ ಪ್ರಾಪ್ತವಾಗಲು ಪಾಂಡವರು ರಾಜಸೂಯ ಯಾಗ ಕೈಕೊಂಡರು. ಆದರೆ ಪಂಪನ ಉದಾತ್ತವೀರನಾದ ಅರ್ಜುನನು ಅದಕ್ಕಿಂತ ಮೊದಲೇ, ಪಾಂಡವರೂ ಕೌರವರೂ ಹಿರಿಯರ ಉಪದೇಶದಂತೆ ಬೇರೆ ಬೇರೆಯಾಗಿ, ಪಾಂಡವರು ಇಂದ್ರಪ್ರಸ್ಥದಲ್ಲಿ ನೆಲಸಿದ್ದಾಗ ದಿಗ್ವಿಜಯವನ್ನು ಕೈಕೊಂಡು ನಾಗಲೋಕಕ್ಕೂ ಹೋದನು. ಈ ಸಂದರ್ಭದಲ್ಲಿಯೇ ಪಂಪನು ಅರ್ಜುನನನ್ನು ಗೋಕರ್ಣಕ್ಕೂ ಬನವಾಸೆಗೂ ಕರೆತರುತ್ತಾನೆ. ಬಹುಶಃ ಪಂಪನ ಹುಟ್ಟೂರಿನ ಪ್ರೀತಿ ಅರ್ಜುನನನ್ನು ಕನ್ನಡನಾಡಿಗೆ, ಅದರಲ್ಲೂ ಬನವಾಸೆಗೆ ಕರೆತರುವಂತೆ ಮಾಡಿರಬೇಕೆಂದು ತಿಳಿಯಬಹುದು. ಹುಟ್ಟೂರಿನ ಕುರಿತು ಪ್ರೇಮವನ್ನು ಅಭಿವ್ಯಕ್ತಿಸುವ ಪಂಪ ಮಹಾಕವಿಯ ಈ ಪದ್ಯಗಳು ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗಿ ಉಳಿಯುವಂಥವು; ಕನ್ನಡಿಗರೆಲ್ಲರೂ ಹೃದಯ ತುಂಬಿ ಹಾಡತಕ್ಕವುಗಳು.

ಸೊಗಯಿಸಿ ಬಂದ ಮಾಮರನೆ ತಳ್ತೆಲೆವಳ್ಳಿಯೆ ಪೂತ ಜಾತಿ ಸಂ ।
ಪಗೆಯೆ ಕುಕಿಲ್ವ ಕೋಗಿಲೆಯೆ ಪಾಡುವ ತುಂಬಿಯೆ ನಲ್ಲರೊಳ್ಮೊಗಂ ॥
ನಗೆ ಮೊಗದೊಳ್ ಪಳಂಚಲೆಯ ಕೊಡುವ ನಲ್ಲರೆ ನೋಟ್ಟೋಡಾವ ಬೆ
ಟ್ಟುಗಳೊಳಮಾವ ನಂದನ ವನಂಗಳೊಳಂ ಬನವಾಸಿ ದೇಶದೊಳ್ ॥
ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ ।
ಳ್ಗಾಗರವಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ ॥
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮಱಿದುಂಬಿಯಾಗಿ ಮೇಣ್।
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್ ॥

ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ವ ಗೇ ।
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ ॥
ಪಂ ಗೆಡಗೊಂಡೊಡಂ ಮಧು ಮಹೋತ್ಸವಮಾದೊಡಮೇನನೆಂಬೆನಾ ।
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ ॥
ಅಮರ್ದಂ ಮುಕ್ಕುಳಿಪಂತುಟಪ್ಪ ಸುಸಿಲೊಂದಿಂಪುಂ ತಗುಳ್ದೊಂದು ಗೇ ।
ಯಮುಮಾದಕ್ಕರ ಗೊಟ್ಟಿಯುಂ ಚದುರರೊಳ್ವಾತುಂ ಕುಳಿರ್ ಕೋಟ್ಟಿಜೋ॥
ಪಮುಮೇವೇಟ್ಟುದನುಳ್ಳ ಮೆಯ್ಸುಕಮುಮಿಂತೆನ್ನ ಕರಂ ನೋಡಿ ನಾ ।
ಡೆ ಮನಂಗೊಂಡಿರೆ ತೆಂಕನಾಡ ಮ ಱಿಯಲ್ಕಿನ್ನೇಂ ಮನಂ ಬರ್ಕುಮೇ ॥

(೪-೨೮-೩೧)

ಎಂದು ಅರ್ಜುನನು ತೆಂಕನಾಡಿನ ಸೊಗಸು, ಸೊಬಗು, ಸೌಂದರ್ಯಗಳಿಗೆ ಅತಿಯಾಗಿ ಮೆಚ್ಚಿದನೆಂದು ಪಂಪನು ತಿಳಿಸುತ್ತಾನೆ. ಬನವಾಸಿಯಲ್ಲಿ ಯಾವ ಬೆಟ್ಟಗಳನ್ನಾಗಲಿ, ಯಾವ ನಂದನವನಗಳನ್ನಾಗಲಿ ನೋಡಿದರೂ, ಅಲ್ಲಿ ನಮಗೆ ಸೊಗಸಾಗಿ ಬೆಳೆದ ಮಾವಿನಮರ, ಚಿಗುರಿದ ಎಲೆಬಳ್ಳಿ, ಹೂಬಿಟ್ಟ ಸಂಪಗೆ, ಹಾಡುವ ಕೋಗಿಲೆ, ನಲ್ಲರೊಡನೆ ಮಂದಹಾಸ ಬೀರಿ ಬೆರೆವ ಪ್ರಣಯಿಗಳು – ಈ ಸುಂದರ ದೃಶ್ಯಗಳು ಕಣ್ಣಿಗೆ ಸದಾ ಕಟ್ಟುತ್ತವೆ. ತ್ಯಾಗಿಗಳೂ, ಭೋಗಿಗಳೂ, ವಿದ್ವಾಂಸರೂ, ಪ್ರತಿಷ್ಠಿತರೂ ಆಗಿ ನಾಡಿನಲ್ಲಿ ಜನಿಸಬೇಕೆಂದು ಜನರು ಆಶಿಸುತ್ತಾರೆ. ಅಂಥವರಾಗಿ ಹುಟ್ಟಲು ಆಗದಿದ್ದರೆ ಮರಿತುಂಬಿಯಾಗಿ ಅಥವಾ ಕೋಗಿಲೆಯಾಗಿ ಹುಟ್ಟಿ ಆ ನಂದನವನದಲ್ಲಿ ಹಾಡುವ ಭಾಗ್ಯ ದೊರೆತರೂ ಸಾಕೆಂದು ಹಾರೈಸುತ್ತಾರೆ. ಆದ್ದರಿಂದಲೇ ಮಲಯ ಮಾರುತವೋ ಒಳ್ಳೆಯ ಮಾತೋ, ಸುಶ್ರಾವ್ಯವಾದ ಸಂಗೀತವೋ, ಅರಳಿದ ಮಲ್ಲಿಗೆಯೋ, ಅನುರಾಗದ ಸಂತೋಷವೋ, ವಸಂತೋತ್ಸವವೋ – ಇಂತಹ ಅಲ್ಲಿನ ಅತ್ಯಾಕರ್ಷಕವಾದ ನೈಸರ್ಗಿಕ ಸೌಂದರ್ಯ ಸುಖಗಳು ಯಾವ ಅಂಕುಶದ ಒತ್ತಡವನ್ನೂ ಮೀರಿ, ತನ್ನ ಮನಸ್ಸನ್ನು ಸೆಳೆಯುತ್ತವೆ ಎಂದು ಕವಿಯು ಅರ್ಜುನನಿಂದ ಹೇಳಿಸಿದ್ದಾನೆ. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ" ಎಂಬ ಆರ್ಷೇಯೋಕ್ತಿಗೆ ಇಲ್ಲಿ ಇನ್ನಷ್ಟು ಚೆಲುವಾದ ವಿವರಣೆ ನೀಡಲಾಗಿದೆ. ಅಮೃತವನ್ನು ಮುಕ್ಕಳಿಸುವಂತಹ ರತಿಸುಖ, ಒದಗಿಬಂದ ಸಂಗೀತ, ವಿದ್ವದ್ಗೋಷ್ಠಿ, ಚತುರರ ಒಳ್ಳೆಯ ಮಾತು, ಶೀತಲವಾತಸ್ಪರ್ಶ – ಇಂತಹ ಎಲ್ಲ ಆನಂದದಾಯಕ ಪ್ರಕೃತಿಯೂ ಇಲ್ಲಿರುವ ಕಾರಣ ಈ ತೆಂಕನಾಡನ್ನು ಎಂದೆಂದೂ ಮರೆಯುವುದು ಸಾಧ್ಯವೇ ಇಲ್ಲ ಎಂದು ಪಂಪನು ಅರ್ಜುನನ ಮುಖದಿಂದ ಕನ್ನಡನಾಡನ್ನು – ತನ್ನ ಹುಟ್ಟೂರನ್ನು – ಅನನ್ಯ ಭಕ್ತಿ ಪ್ರೀತಿಗಳಿಂದ ವರ್ಣಿಸುತ್ತಾನೆ.

ವ್ಯಾಸನಂತೆ ಪಂಪನೂ ಯುದಿಷ್ಠಿರನನ್ನು ಮೃದುಹೃದಯಿಯಾಗಿಯೇ ಚಿತ್ರಿಸುತ್ತಾನೆ. ಕರ್ಣನ ಹೊಡೆತದಿಂದ ಯುಧಿಷ್ಠರನು ನೋವನ್ನು ಅನುಭವಿಸುವನು.

ಇನ್ನುಂ ಕರ್ಣನ ರೂಪೆದ
ಲೆನ್ನರ್ದೆಯೊಳಮೆನ್ನ ಕಣ್ಣೊಳಂ ಸುೞದಪುದಾಂ
ತೆನ್ನೆಚ್ಚ ಶರಮುಮಂಗೆ
ಲ್ದೆನ್ನುಮನಂಜಿಸಿದನೆಂದೊಡಿನ್ನೇನೆಂಬೆಂ ॥

(೧೩ – ೧೩೬)

ಅನಿಮಿತ್ತವಾಗಿ ಕರ್ಣನ ಮೇಲೆ ಯುಧಿಷ್ಠರನಿಗೆ ಈ ಮೋಹ ಉಂಟಾಗುತ್ತದೆ.

ಕರ್ಣನೂ ಕುಂತೀಪುತ್ರನೆಂಬ ಪ್ರಾಕೃತಿಕ ಕಾರಣವನ್ನೂ ಯುಧಿಷ್ಠಿರನ ಒಳತೋಟಿಗೆ ಕವಿ ಅಪ್ರತ್ಯಕ್ಷ ಆಧಾರ ನೀಡುವಂತಿದೆ. ಆದ್ದರಿಂದಲೇ ಆತನು –

ಎಮ್ಮೊಗ್ಗೆ ಕರ್ಣನಿಂತೀ
ನಿಮ್ಮಂದಿಗರೞಿಯೆ ಸಾವನೇ ಸುಖಮಿರಿಮಿ ।
ನ್ನಮ್ಮ ಸುಯೋಧನನೊಳ್ ಪಗೆ
ಯಮ್ಮೞಿದಾನುಂ ತಪೋನಿಯೋಗದೊಳಿರ್ಪೆಂ ॥

(೧೨–೧೩೦)

ಯುಧಿಷ್ಠರನಿಗೆ ಕರ್ಣನ ಮೇಲೆ ಮೂಡಿದ ಈ ಅನಿಮಿತ್ತ ಮೋಹದಲ್ಲಿ ಆತನ ಅಹಿಂಸಾ ನೀತಿಯೂ ಸ್ಪಷ್ಟವಾಗುತ್ತದೆ. ಯುಧಿಷ್ಠಿರನು ತನ್ನ ಸರ್ವಸ್ವವನ್ನೂ ತ್ಯಾಗಮಾಡಿ ತಪೋವನಕ್ಕೆ ಹೋಗುವೆನೆಂದು ಹೇಳುವ ಮಾತಿನಲ್ಲಿ ಇದು ವ್ಯಕ್ತವಾಗುತ್ತದೆ. ತಮ್ಮಂದಿರು ಆತನನ್ನು ಹೋಗಲು ಬಿಡಲಿಲ್ಲ. ಧರ್ಮಜನ ವ್ಯಕ್ತಿತ್ವ ನಿರ್ಮಲ ಚಿತ್ತದ ಸಾಕಾರರೂಪವಾಗಿದೆ.

ಭೀಮನೋ ತದ್ವಿರುದ್ಧ ! 'ಶಠಂ ಪ್ರತಿಶಾಠ್ಯಂ' ಎಂಬೀ ನಿಷ್ಠುರತತ್ವ ಆತನದು.

"ಚಲದಿಂ ಕೃಷ್ಣೆಯ ಕೇಶಮಂ ಪಿಡಿದ ನಿನ್ನಿಂದಾದಟೞ್ ನಿನ್ನುರ
ಸ್ಥಲಮಂ ಪೋರದೆ ಪೋಪುದಲ್ತೆನಗೆ......."

ಎಂದು ದುಶ್ಶಾಸನನನ್ನು ಮೂದಲಿಸಿ, ಗದೆಗೊಂಡವನ ವರೂಥಮನೆ ತಿಣ್ಣಮಿಟ್ಟು ಅವನನುರುಳ್ಚಿದನು; ಮತ್ತೆ ಬಳೆನುರ್ಗುತ್ತಿರೆ ಗಂಟಲನ್ನು ಮೆಟ್ಟಿದನು. ದ್ರೌಪದಿಗೆ ದೂತರನ್ನು ಅಟ್ಟಿ ಬರಿಸಿದನು. ಆಕೆ –

ಉಸಿರೊತ್ತಿಂ ತಿದಿಯಂತಿರೊತ್ತಿದ ಬಸಿಱ್ ಪೋತಂದ ಕಣ್ ಬಿಟ್ಟ ಬಾಯ್।
ಮಸಕಂಗುಂದಿದ ಮೆಯ್ಬಲಂ ಬಡಿವ ಕಾಲ್ ಭೂಭಾಗದೊಳ್ ತಂದುತಾ॥

ಡಿಸುತಂ ಕೋಟಲೆಗೊಳ್ವ ರತ್ನ ಮುಕುಟದ್ಯೋತೋತ್ತಮಾಂಗಂ ವಿರಾ ।
ಜಿಸುವನ್ನಂ ಪೊಡಿಯೊಳ್ ಪೊರಳ್ವ ಪಗೆಯಂ ಕಣ್ಣಾರ್ವಿನಂ ನೋಡಿದಳ್॥

ವೃಕೋದರನು ಆಕೆಯನ್ನು ಬಳಿಯಲ್ಲಿ ಕುಳ್ಳಿರಿಸಿ, ಸುರಗಿಯೊಳುರಮಂ ಬಿಕ್ಕನೆ ಬಿರಿಯಿೞಿದು ಮೊಗೆ ಮೊಗೆದು ನೆತ್ತರಂ ದ್ರುಪದಜೆಯ ನೆತ್ತಿಯೊಳೆೞೆದೆೞೆದು ಬೞಿಕೞಿಯೆ ಪೊಸೆದು ಜಡೆಗೊಂಡು ಉದ್ವೃತ್ತ ಕುಚಯುಗೆಯ ಕೇಶಮಂ ಎತ್ತಂಪಸರಿಸಿದನು.

ಪಸರಿಸಿ ಪಂದಲೆಯಂ ಮೆ ।
ಟ್ಟಿಸಿ ವೈರಿಯ ಪಲ್ಲ ಪಣಿಗೆಯಂ ಬಾರ್ಚಿ ಪೋದ ॥
ಟಿಸ್ದೊಸಗೆಯಿವನ ಕರುಳ್ಗಳೆ ।
ಪೊಸವಾಸಿಗಮಾಗೆ ಕೃಷ್ಣೆಯಂ ಮುಡಿಯಿಸಿದಂ ॥

ಆಮೇಲೆ ಕೃಷ್ಣೆಯ ಮುಖವನ್ನು ನೋಡಿ ಸಂತೃಪ್ತಿಯಿಂದ ಮುಗುಳ್ನಕ್ಕನು.

ಇದಱೊಳ್ ಶ್ವೇತಾತಪತ್ರಸ್ಥಗಿತದಶದಿಶಾಮಂಡಲಂ ರಾಜಚಕ್ರಂ ।
ಮದಿಟಕ್ಕಾಡಿತ್ತಡಂಗಿತ್ತಿದರೊಳ್ ಕುರುರಾಜಾನ್ವಯಂ ಮತ್ಪ್ರತಾಪ ॥
ಕ್ಕಿದಱಿಂದಂ ನೋಡಗುರ್ವುರ್ವಿದುದಿದುವೆ ಮಹಾಭಾರತಕ್ಕಾದಿಯಾಯ್ತು
ಬ್ಜದಳಾಕ್ಷೀ ಪೇೞ ಸಾಮಾನ್ಯಮೆ ಬಗೆಯ ಭವತ್ಕೇಶಪಾಶಪ್ರಪಂಚಂ ॥

(೧೨-೧೫೬)

ಎಂದು ನುಡಿದು ಪ್ರತಿಜ್ಞೆ ನೆರವೇರಿಸಿದ ಅನಂತರ, ದ್ರೌಪದಿಯನ್ನು ಬೀಡಿಗೆ ಕಳಿಹಿಸಿ, ರಾಕ್ಷಸಕ್ರೀಡೆಯಾಡಲು ಬಯಸಿ ಹಿಡಿಂಬೆಯನ್ನು ಬರಿಸಿ -

"ಒಸರ್ವ ಬಿಸು ನೆತ್ತರಂ ರ
ಕ್ಕಸನಂದದೆ ಕುಡಿದು ಕುಡಿದು ಕಂಡಂಗಳನ ।
ರ್ವಿಸೆ ಮೆಲ್ದು ಮೆಲ್ದು ಕರ್ಬಿನ
ರಸಕ್ಕಮಿನಿಸಿಂಪುಗಾಣೆನೆಂದನಿಲಸುತಂ ॥

ಸವಿ ಸವಿದು ಬಿಕ್ಕ ಬಿಕ್ಕನೆ
ಸವಿ ನೋಡೆನ್ನಾಣೆಯೆಂದು ರಕ್ಕಸಿಗಮದಂ ।
ಸವಿದೊಱಿ ನೆತ್ತರೆಲ್ಲಂ
ತವೆಮುಳಿಸಿಂದವನ ಕರುಳ ಪಿಣಿಲಂ ನೋಣೆದಂ ॥"

ಇದು ಭಯಾನಕ ಭೀಭತ್ಸ ಚಿತ್ರ ! ಕೌರವರ ಶತಾನ್ಯಾಯಕ್ಕೆ ಪ್ರತೀಕಾರವಾಗಿಯೂ, ಗಂಡುಗಲಿ ಭೀಮನ ರೌದ್ರತೆಗೆ ಯೋಗ್ಯವಾಗಿಯೂ ಸರಿದೂಗುವಂಥಾದ್ದು. ರಾಜಕೀಯದಲ್ಲಿ ಅಹಿಂಸೆಯಿಲ್ಲ. ಕಣ್ಣಿಗೆ ಕಣ್ಣು, ಹಲ್ಲಿಗೆ ಹಲ್ಲು, ಶಠಂ ಪ್ರತಿ ಶಾಠ್ಯಂ ಎಂಬ ನೀತಿ ಅಂದಿನದು. ಗೆದ್ದ ವೈರಿಯನ್ನು ರಥದ ಹಿಂಬದಿಗೆ ಹೆಡೆಮುರಿ ಕಟ್ಟಿ ನೇತಾಡಿಸಿ ಇಡೀ ನಗರದಲ್ಲಿ ಸೆಳೆದೊಯ್ದು ಕೊಲ್ಲುವ ಚಿತ್ರಹಿಂಸೆಯ ಕ್ರಮ ಅಂದು ಬಳಕೆಯಲ್ಲಿತ್ತು. ಆದ್ದರಿಂದಲೇ ಪಂಪನು ಹೀಗೆ ತೀರ್ಮಾನಿಸುತ್ತಾನೆ :

"ಭಿಮಸೇನನವೋಲ್ ಪೂಣ್ದಿದನೆಯ್ದೆ ಪೂಣ್ದ ಪಗೆಯಂ ಕೊಂಡಾಡದಂ ಗಂಡನೇ?" ಎಂದು!

ಪಂಪ ಮಹಾಕವಿಯು ಮಹಾಭಾರತದ ಕೆಲವು ಪ್ರಮುಖ ಪಾತ್ರಗಳ ಚಿತ್ರಣವನ್ನು ಸ್ಪಷ್ಟರೇಖೆಯಿಂದ ಚಿತ್ರಿಸಿದ್ದಾನೆ. ಈ ಚಿತ್ರಣಕ್ಕೆ ಬೇಕಾದ ಮೂಲ ಸಾಮಾಗ್ರಿ ವ್ಯಾಸನಿಂದಲೇ ಆದರೂ, ಪಂಪನ ರೇಖಾವಿನ್ಯಾಸ ಕಲೆಗಾರಿಕೆಗಳು ನಮ್ಮ ಮೆಚ್ಚುಗೆಗೆ ಪಾತ್ರವಾಗುತ್ತವೆ; ನಮ್ಮ ಕಣ್ಣಮುಂದೆ ಕಟ್ಟುತ್ತವೆ. ಒಂದೊಂದು ಪಾತ್ರದ ವೈಶಿಷ್ಟ್ಯ ಒಂದೊಂದು. ಆದ್ದರಿಂದಲೇ ಓದುಗರಿಗೆ – ಕಾವ್ಯರಸಿಕರಿಗೆ ಅವು ಹೆಚ್ಚು ಮೆಚ್ಚುಗೆಯಾಗುತ್ತವೆ. ಆ ಪಾತ್ರಗಳನ್ನೂ ಅವುಗಳ ಪ್ರತ್ಯೇಕ ಪ್ರತ್ಯೇಕ ವಿಶಿಷ್ಟ ಗುಣ ಸ್ವಭಾವಗಳನ್ನೂ ಸೂತ್ರರೂಪವಾಗಿ ಸುಂದರ ಶೈಲಿಯಲ್ಲಿ ಪಂಪನೇ ಹೀಗೆ ಪಟ್ಟಿಮಾಡಿ ಕೊಟ್ಟಿರುತ್ತಾನೆ:

ಚಲದೊಳ್ ದುರ್ಯೋಧನಂ ನನ್ನಿಯೊಳಿನ ತನಯಂ ಗಂಡಿನೊಳ್ ಭೀಮಸೇನಂ।
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ ಸಿಂಧೂದ್ಭವಂ ಚಾಪ ವಿದ್ಯಾ ॥
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್
ನಿ ।
ರ್ಮಲ ಚಿತ್ತಂ ಧರ್ಮಪುತ್ರಂ ಮಿಗಿಲಿವರ್ಗಳಿನೀ ಭಾರತಂ ಲೋಕಪೂಜ್ಯಂ ॥
(೧೪–೬೪)

ಲೋಕಪೂಜ್ಯವಾದ ಮಹಾಭಾರತದ ಈ ಕಾವ್ಯಕಥೆಯನ್ನು ಕನ್ನಡದ ಆದಿ ಕವಿಯೆಂದೇ ಖ್ಯಾತನಾದ ಪಂಪ ಮಹಾಕವಿ ಇಂತು ಕನ್ನಡಿಗರಿಗೆ ನೀಡಿದ್ದಾನೆ. "ಮನುಷ ಜಾತಿ ತಾನೊಂದೆ ವಲಂ" ಎಂಬ ವಿಶಾಲಮನೋಭಾವದ ಸಂದೇಶವನ್ನು ಕನ್ನಡನುಡಿಯಲ್ಲಿ ಸಾರಿದ ಪಂಪನು ಪ್ರಪಂಚದ ಮಹಾಕವಿಗಳ ಸಾಲಿನಲ್ಲಿ ಮೆರೆಯತಕ್ಕ ಯೋಗ್ಯತೆಯುಳ್ಳವನೆಂಬುದು ನಮ್ಮ ಹೆಮ್ಮೆಯಾಗಿದೆ.

●

“ನೆನೆಯದಿರಣ್ಣ ಭಾರತದೊಳಿಂಪೆರರಾರುಮಂ”

ಹಗಲು ಕತ್ತಲೆಗಳಂತೆ, ಪ್ರಪಂಚದಲ್ಲಿ ಜನಿಸಿದ ಯಾರನ್ನೂ ಸುಖದುಃಖಗಳು, ಒಳಿತು ಕೆಡುಕುಗಳು, ಲಾಭನಷ್ಟಗಳು, ಬೆಂಬತ್ತಿ ಬರದೆಯಿಲ್ಲ. ಕೆಲವು ಸಂದರ್ಭದಲ್ಲಿ ಕೆಲವರಿಗೆ ಅವುಗಳ ಸ್ಪರ್ಶದ ಪ್ರಮಾಣ ಹೆಚ್ಚು ಕಡಿಮೆಯಿರಬಹುದು. ಹೇಗಿದ್ದರೂ ಬದುಕಿನಲ್ಲಿ ಅಂತಹ ಏರಿಳಿತ ಇದ್ದೇ ಇದೆ. ಹಾಗಾಗಿಯೇ ಮನುಷ್ಯ, ಸುಖ ಬಂದಾಗ ಹಿಗ್ಗದೆ, ದುಃಖ ಆವರಿಸಿದಾಗ ಕುಗ್ಗದೆ ಸಮಚಿತ್ತವನ್ನು ಕಾಪಾಡಿಕೊಂಡಿರಬೇಕೆಂದು ಬಲ್ಲವರು ಹೇಳಿದ್ದಾರೆ. ಇದು ಎಲ್ಲರಿಗೂ ಸಾಧ್ಯವಾಗುವುದಿಲ್ಲ; ಹಾಗಾಗಿಯೇ ಹಲವರು ಬದುಕನ್ನು ದುರ್ಭರಮಾಡಿಕೊಳ್ಳುತ್ತಾರೆ. ಧೀರರು ಮಾತ್ರ ಸಮಚಿತ್ತರಾಗಿ ನಡೆದು ಬಾಳುವೆಯಲ್ಲಿ ಬೆಳಕನ್ನು ಕಾಣುತ್ತಾರೆ; ಇತರರಿಗೆ ಮಾರ್ಗದರ್ಶಕರಾಗುತ್ತಾರೆ. ಪ್ರಾಚೀನ ಪುರಾಣಗಳ ಕಾಲದಿಂದಲೂ ಮೇಲೆ ಹೇಳಿದ ಇಬ್ಬಗೆಯ ಜೀವನ ನಡೆಸಿದವರನ್ನು ನಾವು ಕಾಣುತ್ತೇವೆ. ಸುಖಕ್ಕೆ ಸೋತು ಶೋಷಣೆಯಲ್ಲಿ ತೊಡಗಿ ಸಮಾಜದಿಂದ ದೂರದೂರವಾಗಿ ಕೊನೆಗೆ ನೆಲಕ್ಕೆ ಅಪ್ಪಳಿಸಿಹೋದವರೂ ಇದ್ದಾರೆ. ಬೆವರು ಕಣ್ಣೀರು ನೆತ್ತರು ಸುರಿಸಿ ಬದುಕಿನಲ್ಲಿ ಹೋರಾಡಿ ಬಾಳುವೆಯ ಯಜ್ಞಕುಂಡದಲ್ಲಿ ಬೆಂದು ಕೀಳುಕಳೆದ ಬಂಗಾರದಂತೆ, ಅಕ್ಕಸಾಲಿಗನ ಮುಟ್ಟಿಯ ಪೆಟ್ಟಿನಿಂದ ಮತ್ತೂ ಮತ್ತೂ ಪ್ರಕಾಶ ಬೀರುವ ಕೆಲವೊಂದು ಜೀವಜ್ಯೋತಿಗಳನ್ನು ಕಾಣುತ್ತೇವೆ.

ಮನಸ್ಸಿನಲ್ಲಿ ಮರುಕ ತುಂಬಿದರೂ, ಅಭಿಮಾನ ಉಕ್ಕೇರುವುದು ಎರಡನೆಯ ರೀತಿಯಲ್ಲಿ ಜೀವಿತ ಮಾಡಿದವರ ಬಗ್ಗೆ; ಇತಿಹಾಸ ಪುರಾಣಗಳೂ ಅಂಥವರ ಕುರಿತು ಕೆಲವೆಡೆ ಉಜ್ವಲ ಪಂಕ್ತಿಯಲ್ಲಿ ಉಲ್ಲೇಖಿಸಿವೆ.

---

* ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೀಡಿದ ಭಾಷಣ.

ಮಹಾಭಾರತದಲ್ಲಿ ಕರ್ಣನ ಜೀವಿತ ಸಮಗ್ರವಾಗಿ ಈ ತೆರನಾದುದು. ವ್ಯಾಸರ್ಷಿಯಿಂದ ಮೊದಲ್ಗೊಂಡು ಭಾರತಕಥೆಯನ್ನು ಬರೆದವರೆಲ್ಲರೂ ಕರ್ಣನಜೀವನ ದುರಂತತೆಯನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸಿದವರೆ. ಅಂತಹ ಚಿತ್ರಮಾಲೆಯಲ್ಲಿ ಕನ್ನಡದ ಆದಿ ಕವಿಯಾದ ಪಂಪನು ರೇಖಿಸಿದ ಕರ್ಣನ ಚಿತ್ರ ಉತ್ತಮೋತ್ತಮವೆನಬಹುದು. ಭಾರತ ಕಥೆಯ ನಾಯಕನನ್ನಾಗಿ ಯುಧಿಷ್ಠಿರನನ್ನೋ, ಭೀಮನನ್ನೋ, ಅರ್ಜುನನನ್ನೋ – ಇವರೆಲ್ಲರಿಗೂ ಸೂತ್ರಧಾರಿಯಾಗಿ ಕುಣಿಸುವ ಶ್ರೀಕೃಷ್ಣನನ್ನೋ ಹೀಗೆ ಹಲವರು ಹಲಬಗೆಯಲ್ಲಿ ಹೇಳಿದ್ದಾರೆ. ಸ್ವತಃ ಪಂಪನೇ ತನ್ನ ಪಂಪಭಾರತವೆಂದು ಪ್ರಸಿದ್ಧವಾದ 'ವಿಕ್ರಮಾರ್ಜುನ ವಿಜಯ' ಮಹಾಕಾವ್ಯಕ್ಕೆ ಆಶ್ರಯದಾತನಾದ ಅರಿಕೇಸರಿಗೆ ಹೋಲಿಸಿದ ಅರ್ಜುನನನ್ನು ನಾಯಕನನ್ನಾಗಿ ಮಾಡಿದ್ದಾನೆ. ಅರ್ಜುನನನ್ನೇ ನಾಯಕನಾಗಿ ಮಾಡಿದ 'ವಿಕ್ರಮಾರ್ಜುನ ವಿಜಯ'ದಲ್ಲಿ ಪಂಪನು ಕರ್ಣನಿಗೆ ನೀಡಿದ ಪರಮೋಚ್ಚ ಪ್ರಶಸ್ತಿ ಪತ್ರ ಇದು:

"ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ, ಕರ್ಣನೊಳಾರ್ದೊರೆ ಕರ್ಣನೇಱು ಕ-
ರ್ಣನ ಕಡು ನನ್ನಿ, ಕರ್ಣನಳವಂಕದ ಕರ್ಣನಚಾಗವೆಂದು ಕ-
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ"

ಶ್ರೀ ಮಹಾಭಾರತವನ್ನು ಅಮೂಲಾಗ್ರ ಓದಿದಾಗ ಕಣ್ಣಮುಂದೆ ತೆರೆಯ ಮೇಲೆ ಒಂದೊಂದೇ ಪಾತ್ರಗಳು ಬಂದು ಕುಣಿಯುತ್ತವೆ. ಕುಣಿದು ಹೋಗುತ್ತವೆ. ಎಲ್ಲರನ್ನೂ ಬೊಂಬೆಗಳಂತೆ ಕುಣಿಸುವ ಶ್ರೀಕೃಷ್ಣ, ಸತ್ಯಶೀಲನಾದ ಧರ್ಮಜ, ಛಲವಾದಿಯಾದ ದುರ್ಯೋಧನ, ಗಂಡುದನಿಯ ಗದಾಧಾರಿ ಭೀಮ, ಎರಡು ಕೈಗಳಿಂದಲೂ ಬಾಣ ಪ್ರಯೋಗಿಸುವ – ಸವ್ಯಸಾಚಿ ಗಾಂಡೀವಿ, ಭೀಷ್ಮಪ್ರತಿಜ್ಞೆಯ ಗಾಂಗೇಯ, ರುದ್ರಾವತಾರೀ ಅಶ್ವತ್ಥಾಮ, ಆಚಾರ್ಯನಾದ ದ್ರೋಣ – ವೀರ ಅಭಿಮನ್ಯು – ಅಗ್ನಿಕನ್ಯೆ ಪಾಂಚಾಲಿ, ಕಾಮುಕ ಕೀಚಕ, ಹೇಡಿ ಉತ್ತರ ಕುಮಾರ ಎಂತೆಂಥಹ ವ್ಯಕ್ತಿಗಳು, ಎಂತೆಂಥಹ ಪಾತ್ರಗಳು ರಂಗಸ್ಥಳದಲ್ಲಿ ಕುಣಿದು ಕಣ್ಮರೆಯಾಗುವರು. ಮತ್ತೆ ಅವರ ನೆನಪು ಮರುಕಳಿಸದು. ಆದರೆ ಎಂದೆಂದೂ ಮರೆಯದ, ಮರೆತು ಬಿಡಲಾಗದ ವ್ಯಕ್ತಿ – ಪಾತ್ರ ಕರ್ಣನದು. ಆತನಿಗೆ ಸಮಾನರು ಯಾರು? ಅವನ ಸತ್ಯ, ಸಾಮರ್ಥ್ಯ, ತ್ಯಾಗ ಇವೆಲ್ಲವೂ ಅಸಮಾನ; ಕರ್ಣನಿಂದಲೇ ಭಾರತವು ಕರ್ಣರಸಾಯನವಾಗಿದೆ, ಆದ್ದರಿಂದಲೇ ಭಾರತದ ಕಥೆಯಲ್ಲಿ ಮಿಕ್ಕ ಯಾರನ್ನೂ ನೆನೆಯಬೇಕಾಗಿಲ್ಲ; ಒಂದೇ ಮನಸ್ಸಿನಿಂದ ಕರ್ಣನೊಬ್ಬನನ್ನೇ ನೆನಪಿಟ್ಟುಕೋ – ಎಂದು ಪಂಪನು ವಾಚಕಲೋಕಕ್ಕೆ ಆದೇಶವೀಯುತ್ತಾನೆ. ಕರ್ಣನ ಯೋಗ್ಯತೆಯನ್ನು ಮೆಚ್ಚಿ ಇಂತಹ ಪರಮೋಚ್ಚ ಪ್ರಶಸ್ತಿಯನ್ನು ನೀಡುತ್ತಾನೆ.

ಮಹಾಕವಿಯಾದ ಪಂಪನು ಇಂತಹ ಮೆಚ್ಚುಗೆಯ ಮಾತನ್ನು ಹೇಳಬೇಕಾದರೆ ಕರ್ಣನ ಅರ್ಹತೆಯೇನು? ಎನ್ನುವುದನ್ನು ನಾವು ಪರಿಭಾವಿಸಬೇಕು. ಕವಿಯೇ ಪಟ್ಟಿ ಮಾಡಿಕೊಟ್ಟಂತೆ, ಕರ್ಣನ ಸತ್ಯ, ತ್ಯಾಗ, ಸಾಮರ್ಥ್ಯ ಇವುಗಳ ಉನ್ನತಿ ಮಾತ್ರವೇ ಅಲ್ಲ; ಆತನ ಸಮಗ್ರ ಜೀವನದ ದುರಂತ ದೃಶ್ಯ, ರಾಜಪುತ್ರಿಯ ಪುತ್ರನಾಗಿಯೂ ಬೆಸ್ತರಾಕೆಯಾದ ರಾಧೆಯ ಮಗನಾಗಿ ಬಳೆದದ್ದು, ಕುಲಜನಾಗಿದ್ದರೂ, ಕೌಂತೇಯನೂ, ಸೂರ್ಯಪುತ್ರನೂ ಆದರೂ, ಕುಲಹೀನನಾಗಿ ಬದುಕಿದ್ದು, ಹೆತ್ತ ತಾಯಿಯೇ ಕರೆದರೂ, ಪರಮಾತ್ಮನಾದ ಶ್ರೀಕೃಷ್ಣನೇ ಹಸ್ತಿನಾಪುರದ ಒಡೆತನ ಮಾಡೆಂದರೂ, ಉಪ್ಪನ್ನವಿತ್ತ ಸ್ವಾಮಿ ಕೌರವನಿಗಾಗಿ ಹೋರಾಡಿ ಮಡಿದದ್ದು ಈ ದುರಂತತೆ, ಈ ನಿಷ್ಠೆ, ಈ ಅರ್ಹತೆಗಳೆಲ್ಲವೂ ಕರ್ಣನನ್ನು ಮರೆಯಲಾರದಂತೆ ಮಾಡಿವೆ.

ಅವಿವಾಹಿತೆಯಾಗಿದ್ದ ಕುಂತಿ ಮುಗ್ಧಳಾಗಿ ದುರ್ವಾಸ ಮಂತ್ರವನ್ನು ಪರೀಕ್ಷಿಸಲು ಸೂರ್ಯನನ್ನು ಜಪಿಸುತ್ತಾಳೆ. ಸೂರ್ಯನು ಪ್ರತ್ಯಕ್ಷನಾಗುತ್ತಾನೆ. ಕೊಡಗೂಸುತನದ ಭಯದಿಂದ ಕುಂತಿ ಬೆವರಿದಳು. ಆಕೆಯ ಬೆವರ ನೀರು ಗಂಗೆಯ ಹೊನಲನ್ನು ಹೆಚ್ಚಿಸಿತು. ಸೂರ್ಯನನ್ನು ಮರಳಿ ಹೋಗೆಂದರೆ, ಋಷಿಮಂತ್ರದ ಶಕ್ತಿಯಂತೆ ಆಕೆಗೆ ಸೂರ್ಯ ಸದೃಶನಾದ ಮಗನು ಮಣಿಕುಂಡಲಧಾರಿಯಾಗಿ ಸಹಜಕವಚದೊಂದಿಗೆ ಜನಿಸಿದನು. ಕುಂತಿ ನಡನಡುಗಿ ನಿಧಿಯನ್ನು ಬಿಸಾಡುವಂತೆ ಗಂಗೆಗೆ ಆ ಶಿಶುವನ್ನು ಎಸೆದರೆ, ಗಂಗಾಮಾತೆ ಮುಳುಗಲು ಬಿಡದೆ ತನ್ನ ತೆರೆಕೈಗಳಿಂದ ತೀರಕ್ಕೆ ತರಲು, ದಡದಲ್ಲಿದ್ದ ಸೂತನೆಂಬವನು ನಿಧಿಕಂಡವನಂತೆ ಬೊದಿಲ್ಲನೆ ನೀರಿಗೆ ಹಾರಿ ಮಗುವನ್ನೆತ್ತಿ ತಂದು ತನ್ನ ಹೆಂಡತಿ ರಾಧೆಯ ವಶಕ್ಕೆ ಒಪ್ಪಿಸಿದನು. ಆಕೆ ಅತ್ಯಂತ ಮಮತೆಯಿಂದ ಸಾಕಿದಳು.

ಹೀಗೆ, ಕರ್ಣನ ಜೀವನದ ದುರಂತತೆ ಆತನ ಹುಟ್ಟಿನಿಂದಲೇ ಪ್ರಾರಂಭವಾಗುತ್ತದೆ. ಮುಂದೆ ಅದೇ ದುರ್ವಾಸ ಮಂತ್ರ ಶಕ್ತಿಯಿಂದ ಜನಿಸಿದ ಪಾಂಡವರು ರಾಜಕುಮಾರರಾಗಿ ಮೆರೆದರು; ಅವರಿಗೆಲ್ಲರಿಗೂ ಹಿರಿಯಣ್ಣನಾಗಿ ಹುಟ್ಟಿದ ಕರ್ಣನು ಅಜ್ಞಾತ ಕುಲಗೋತ್ರನಾಗಿ ಬದುಕಿದನು. ಇದೆಂತಹ ವಿಪರ್ಯಾಸ! ಯಾರಿಂದಲೂ ಅವನಿಗೆ ಬದುಕು ಬೇಡವಾಯಿತು. ಆ ಜೀವ ಕುರುಕ್ಷೇತ್ರದ ಯಜ್ಞಕುಂಡದಲ್ಲಿ ಆಹುತಿಯಾಗಿ ಉರಿದುಹೋಯಿತು.

ಬೆಸ್ತರ ಮನೆಯಲ್ಲಿ ಬಳೆದರೂ ಕರ್ಣನ ಸಹಜಪ್ರವೃತ್ತಿಯನ್ನು ಹತ್ತಿಕ್ಕಲು ಸಾಧ್ಯವಾಗಲಿಲ್ಲ. ಆತನು ಯೌವನಕ್ಕೆ ಕಾಲಿಟ್ಟಾಗ ಶಸ್ತ್ರಶಾಸ್ತ್ರಗಳೆರಡರಲ್ಲೂ ಪಾರಂಗತನಾದನು.

'ಪೊಡೆದುದುಬಿಲ್ಲಜೇವೊಡೆಯ ಮೀಱುವ ವೈರಿನರೇಂದ್ರರಂಸಿಡಿ
ಲ್ವೊಡೆದವೊಲಟ್ಟಿ, ಮುಟ್ಟಿ, ಕಡಿದಿಕ್ಕಿದುದಾದೆಡೆರಂನಿರಂತರಂ
ಕಡಿಕಡಿದಿತ್ತಮೊನ್ನೆ ಬುಧ ಮಾಗಧ ವಂದಿ ಜನಕ್ಕೆ ಕೊಟ್ಟಕೋ

ಡೆಡರದೆ ಬೇಡಿಮೋಡಿಮಿದುಜಾಗದ ಬೀರರ ಮಾತುಕರ್ಣನಾ'

ವೈರಿಗಳನ್ನು ತನ್ನ ಶೌರ್ಯದಿಂದ ಅಟ್ಟಿಮುಟ್ಟಿ ಕಡಿದಿಕ್ಕಿದನು. ತನ್ನನ್ನು ಸೇವಿಸಿದವರಿಗೆ ಹೊನ್ನನ್ನು ಧಾರಾಳ ಇತ್ತನು. ಈ ಶೌರ್ಯದ ಈ ತ್ಯಾಗದ ಸುದ್ದಿ ಸ್ವರ್ಗ ಲೋಕಕ್ಕೂ ಮುಟ್ಟಿತು; ಅಷ್ಟು ಜನಜನಿತವಾಯಿತು. ಇಂತಹ ಶೌರಶಾಲಿಯಾದವನನ್ನು ಹೀಗೆ ಬಳೆಯಬಿಟ್ಟರೆ, ಮುಂದೆ ತನ್ನ ಅಂಶಸಂಭೂತನಾದ ಅರ್ಜುನನಿಗೆ ಈತನಿಂದ ಅಪಾಯವೆಂದು ತಿಳಿದು ದೇವೇಂದ್ರನು ಕರ್ಣನ ತ್ಯಾಗ ಸದ್ಬುದ್ಧಿಯ ದುರುಪಯೋಗ ಪಡೆದುಕೊಳ್ಳಲು ವಟುವಿನ ರೂಪದಿಂದ ಕರ್ಣನಲ್ಲಿಗೆ ಬಂದನು. ಬೇಡಿದರೆ ಬಲದ ಬದಿಯನ್ನೂ ಕೊಡುವ ಮಹಾದಾನಿಯೆನಿಸಿದ ಕರ್ಣನೊಡನೆ ಹುಟ್ಟಿನಿಂದಲೇ ಆತನಿಗೆ ತೊಟ್ಟು ಬಂದ ಕವಚವನ್ನು ಕೇಳಿದನು. ಈ ಘಟನೆ ಕರ್ಣನ ಬದುಕಿನ ಬೇರಿಗೆ ಎಸೆದ ಬಿಸಿನೀರು! ಆತನ ಜೀವಿತದ ಎರಡನೆಯ ಆಘಾತ. ಇಷ್ಟಾದರೂ ಆತನು –

"ಎಂದುಂ ಪೋಗೆಂದನೆ, ಮಾ–

ಣೆಂದನೆ, ಪೆರತೊಂದನೀವೆನೆಂದನೆ, ನೊಂದ :

ಎಂದನೆ, ಸೆರಗಿಲ್ಲದೆ ಪಿಡಿ

ಯೆಂದನಿದೇಂ ಕಲಿಯೊ ಚಾಗಿಯೋ ರವಿತನಯಂ"

ಹುಟ್ಟಿನಿಂದಲೇ ತನ್ನ ಮೈಗಂಟಿ ಬಂದಿದ್ದ ಕವಚವನ್ನು ಕಿತ್ತು ಕೊಡುವಾಗ ನೆತ್ತರು ಚಿರಿಚಿರಿ ಚಿಮ್ಮಿದರೂ, ನೋವಿಂದ ಅಹ! ಎನಲಿಲ್ಲ; ಅದನ್ನು ಬಿಟ್ಟು ಬೇರೇನಾದರೂ ಕೇಳು ಎನಲಿಲ್ಲ; ಹೋಗು, ಕೊಡಲಾರೆ ಎನಲಿಲ್ಲ; ಇಗೋ ತೆಗೆದುಕೋ ಎಂದು ಮೆಯ್ಯಿಂದ ಚರ್ಮ ಸುಲಿವಂತೆ ಕವಚವನ್ನು ಹರಿಹರಿದು ನೀಡಿದನು. ಇಂಥವನನ್ನು ನೆನೆಯದೆ ಇನ್ನು ಯಾರನ್ನು ನೆನೆಯಬೇಕು? ಅನ್ಯಾಯವನ್ನೇ ಬಗೆದು ಬಂದ ಇಂದ್ರನು ಕರ್ಣನ ತ್ಯಾಗಕ್ಕೂ ಕಲಿತನಕ್ಕೂ ಮೆಚ್ಚಿ ಶಕ್ತ್ಯಾಯುಧವನ್ನು ಕರುಣಿಸಿದನು; ಕರ್ಣನಿಗೆ ಮುಂದೆ ಅದೂ ಉಪಯೋಗಕ್ಕೆ ಒದಗಲಿಲ್ಲ ಎನ್ನುವುದು ಒಂದು ದುರಂತವೇ ಸರಿ.

ಈ ಘಟನೆಯಿಂದ ಕರ್ಣನ ಹೃದಯದಲ್ಲಿ ತುಮುಲ ಎದ್ದಿರಬೇಕು. ಜನ್ಮ ಸಹಜವಾಗಿ ಚರ್ಮಕ್ಕೆ ಅಂಟಿ ಬಂದ ಕವಚವನ್ನು ನೆತ್ತರು ಚೆಲ್ಲುತ್ತಿರಲು. ಕೇಳಿದವನಿಗೆ ಕೊಟ್ಟುದು, ಹಾಗೆ ದಾನ ಪಡೆದವನೇ ಶಕ್ತ್ಯಾಯುಧವನ್ನು ಕರುಣಿಸಿದುದು– ಇದೆಲ್ಲಾ ತನ್ನ ಕೆಡುಕಿಗೆ? ಒಳಿತಿಗೆ? ಯಾಕೆ ಹೀಗೆ ಮಾಡುತ್ತಾರೆ? ತನ್ನ ಕುರಿತು ಈ ತೆರನ ದೃಷ್ಟಿ ಏಕೆ? ಈ ಮನದ ನೋವು ಆತನನ್ನು ಬಾಧಿಸಿರಬೇಕು; ಆದರೂ ಕೈಕಟ್ಟಿ ಕೂರುವ ಸ್ವಭಾವ ಆತನದ್ದಲ್ಲ. ತಾನು ಏನನ್ನಾದರೂ ಸಾಧಿಸಬೇಕು; ಆ ಕಾಲಧರ್ಮಕ್ಕೆ, ತನ್ನ ಪರಿಸರದ ಪ್ರಭಾವಕ್ಕೆ ಅನುಗುಣವಾಗಿ ಆತ ಶಸ್ತ್ರಾಸ್ತ್ರ ವಿದ್ಯೆ ಕಲಿಯಲು ಹಟತೊಟ್ಟಂತೆ

ತೋರುತ್ತದೆ. ಆದರೆ ಕಲಿಸುವವರಾರು? ರುದ್ರಶಿಷ್ಯನಾದ ಪರಶುರಾಮನೇ ಯೋಗ್ಯ. ಆದರೆ ಆತ ಕಲಿಸಬಲ್ಲನೆ? ಆತನೋ ಪರಮಬ್ರಾಹ್ಮಣ. ಬ್ರಾಹ್ಮಣರಲ್ಲದವರಿಗೆ ಕಲಿಸುತ್ತಾನೋ? ತಾನು ಬೆಸ್ತರಲ್ಲಿ ಬಳೆದವನು. ಲೋಕದ ಕಣ್ಣಿಗೆ ಸೂತ ಪುತ್ರನೇ. ನಿಜವಾದ ತನ್ನ ಹುಟ್ಟು ತನಗೂ ಅರಿಯದು. ಸಾಕಿದ ತಾಯ್ತಂದೆಯರೂ ಅರಿಯರು. ಶಸ್ತ್ರಾಸ್ತ್ರಗಳ ಅಭ್ಯಾಸದ ಕುರಿತು ವಿರೋಚಿತ ವೃತ್ತಿಯ ವಿಷಯ ತನಗಿರುವ ಸಹಜ ಕುತೂಹಲದಿಂದ ತನ್ನ ಜನನ ಕ್ಷತ್ರೀಯ ಮೂಲವೇ ಇದ್ದರೂ ಇರಬಹುದೇನೊ? ಹಾಗಾದರೆ ಕ್ಷತ್ರಿಯ ದ್ವೇಷಿಯಾದ ಪರಶುರಾಮ ತನಗೆ ಬಿಲ್ಲುವಿದ್ಯೆ ಕಲಿಸಲಾರ; ಹಾಗೆಂದು ಅಂತಹ ಸಮರ್ಥ ಗುರುವಿನ ಸನ್ನಿಧಿಯಲ್ಲಿಯೇ ಕಲಿತು ಕೃತಾರ್ಥನಾಗಬೇಕು.

ಎದೆಯ ಈ ಉಮ್ಮಳಕ್ಕೆ ಕರ್ಣ ಒಂದು ತಾತ್ಕಾಲಿಕ ಪರಿಹಾರ ಕಂಡುಕೊಂಡನು. ವಟುವೇಷಧಾರಿಯಾಗಿ ಪರಶುರಾಮನಲ್ಲಿ ವಿದ್ಯಾಭ್ಯಾಸ ಪಡೆದನು. ಆಚಾರ್ಯನ ಪ್ರಿಯಶಿಷ್ಯನಾದನು. ಶಿಷ್ಯನ ತೊಡೆಯಲ್ಲಿ ತಲೆಯಿಟ್ಟು ಗುರು ನಿದ್ದೆಹೋದ ಸಂದರ್ಭ ಮತ್ತೆ ದೇವೇಂದ್ರನ ಕುಹಕ ನಡೆಯಿತು! ಇಂದ್ರನು ಅಟ್ಟಿದ ವಜ್ರಕೀಟಗಳು ಕರ್ಣನ ಎರಡೂ ತೊಡೆಗಳನ್ನು ಉಳಿಯನ್ನು ಊರಿ ಕೊಡಲಿಯಲ್ಲಿ ಬಡಿದಂತೆ ಕೊರೆದು ತೊಡೆಯ ಚರ್ಮವನ್ನು ಇಬ್ಭಾಗ ಮಾಡಿದವು. ಅಪರಿಮಿತವಾದ ನೋವು ತನಗೆ ಆಗುತ್ತಿದ್ದರೂ, ಗುರುವಿಗೆ ನಿದ್ರಾಭಂಗವಾಗಬಾರದೆಂದು ತೊಡೆಯನ್ನೂ ಶರೀರವನ್ನೂ ಕಿಂಚಿತ್ತೂ ಅಲುಗಾಡಿಸದೆ ಕರ್ಣ ಸಹಿಸಿಕೊಂಡನು. ಆದರೆ ಗಾಯದಿಂದ ಧಾರಾಕಾರವಾಗಿ ಹರಿದ ನೆತ್ತರು ಗುರುವಿನ ಜಡೆಯನ್ನು ಒದ್ದೆಯಾಗಿಸಲು ಸಿಟ್ಟಿನಿಂದ ಎದ್ದು, ತೊಡೆಯಿಂದ ಗಾಯಗೊಂಡು ಇಷ್ಟೊಂದು ನೆತ್ತರು ಒಸರುತ್ತಿದ್ದರೂ ಸಹಿಸಿಕೊಂಡಿರಬೇಕಾದರೆ ಈತನು ಸರ್ವತಾ ಬ್ರಾಹ್ಮಣನಲ್ಲ, ಕ್ಷತ್ರಿಯನೇ ಇರಬೇಕೆಂದು ದೃಢಗೊಂಡು, ತಾನು ಇದು ತನಕ ಕಲಿಸಿದ ಬ್ರಹ್ಮಾಸ್ತ್ರ ದಿವ್ಯಾಸ್ತ್ರಗಳೆಲ್ಲವೂ ಈತನಿಗೆ ಕೊನೆಯ ಕಾಲದಲ್ಲಿ ಪ್ರಯೋಜನಕ್ಕೆ ಬರದಿರಲೆಂದು ಗುರು ಶಾಪವಿತ್ತನು.

ವಿಪ್ರವೇಷ ಹಾಕಿ, ಕ್ಷತ್ರಿಯ ದ್ವೇಷಿಯಾದ ಪರಶುರಾಮನಲ್ಲಿ ತಾನು ವಿದ್ಯೆ ಪಡೆಯಲು ಹೋಗುವಲ್ಲಿ ಯಾವ ಸಂಶಯಪಟ್ಟಿದ್ದನೋ, ಆ ಶಂಕೆ – ತಾನು ಕ್ಷತ್ರಿಯ ಮೂಲದವನಿರಬೇಕೆಂಬ ಶಂಕೆ–ಸತ್ಯವಾದುದಕ್ಕೆ ಕರ್ಣನಿಗೆ ಮನಸ್ಸಿನಲ್ಲಿ ಒಂದಿಷ್ಟು ಸಮಾಧಾನ ಆಗಿದ್ದಿರಲೂಬಹುದು. ಆದರೆ ಶಸ್ತ್ರಾಸ್ತ್ರಗಳ ಅಭ್ಯಾಸದ ನೈಪುಣ್ಯ ಸಾಧಿಸುವ ಯಾವ ಘನವಾದ ಮಹೋದ್ದೇಶದಿಂದ ಸಾಧಿಸಿದ ತನ್ನ ಶ್ರಮ ವ್ಯರ್ಥವಾಯಿತೆಂಬ ಚಿಂತೆ ಆತನನ್ನು ಆವರಿಸದೆ ಇರಲಿಲ್ಲ. ಮತ್ತೆ ಸೂತನ ಮನೆಯಲ್ಲಿಯೇ ತನ್ನ ಕಾಯಕ ಮುಂದುವರಿಸಿದನು.

ಕೌರವರಿಗೂ ಪಾಂಡವರಿಗೂ ಶಸ್ತ್ರಾಸ್ತ್ರ ವಿದ್ಯಾಭ್ಯಾಸ ನೀಡಲು

ದ್ರೋಣಾಚಾರ್ಯರು ನಿಯುಕ್ತರಾದರು. ಆಚಾರ್ಯರ ಪರಿಣತಿಯನ್ನು ಕೇಳಿ ಊರು ಪರವೂರುಗಳಿಂದ ಬಹುಮಂದಿ ಶಿಷ್ಯರು ಆಗಮಿಸಿದರು. ಕರ್ಣನೂ ಅವರಲ್ಲಿಗೆ ಬಂದು ವ್ಯಾಸಂಗಗೈದನು. ಅರ್ಜುನನಿಗೆ ಬಿಲ್ ವಿದ್ಯೆಯಲ್ಲಿ ಒದಗಿದ ನೈಪುಣ್ಯವನ್ನರಿತು, ದ್ರೋಣಾಚಾರ್ಯರು, ತನಗೆ ಹಿಂದೆ ಅವಮಾನ ಮಾಡಿದ ದ್ರುಪದನನ್ನು ಹೆಡೆಮುರಿಕಟ್ಟಿ ತಂದು ತನ್ನ ಪ್ರತಿಜ್ಞೆ ಈಡೇರಿಸುವಂತೆ ಆತನೊಡನೆ ತಿಳಿಸಿದರು. ಅರ್ಜುನನು ಅಸಾಧಾರಣ ಬಿಲ್‌ವಿದ್ಯಾ ವಿಷಕ್ಷಣತೆಯನ್ನೂ ಪ್ರದರ್ಶಿಸಿದನು. ಕರ್ಣಾರ್ಜುನರೊಳಗೆ ಸಹಜವಾಗಿ ಮತ್ಸರ ಉದ್ಭವಿಸಿತು. ಇಬ್ಬರೂ ಮಲೆತು ನಿಂತರು. ಆಗ ದ್ರೋಣಕೃಪರು ಕರ್ಣನೊಡನೆ ನಿನ್ನ ತಾಯ್ತಂದೆಯರ ಸ್ಥಿತಿ ಅರಿಯದೆ ಅರ್ಜುನನೊಡನೆ ಮಲೆತೆಯಾ ಎಂದು ಹೀನೈಸಿದರು. ಕರ್ಣನ ಜೀವನದಲ್ಲಿ ಈ ಘಟನೆ ಇನ್ನೊಂದು ಆಘಾತವನ್ನುಂಟು ಮಾಡಿತು. ವಿದ್ಯಾಭ್ಯಾಸ ಮಾಡಿಸುವ ಗುರುಗಳು ಶ್ರೀಮಂತ ಶಿಷ್ಯರನ್ನು ಅಟ್ಟಕ್ಕೇರಿಸಿ, ಬಡವರನ್ನು, ಕೀಳು ತರಗತಿಯವರನ್ನು ಕೆಳಕ್ಕೆ ತಳ್ಳುವಂತೆ ಎಲ್ಲರ ಮುಂದೆ ಮಾತನಾಡುವುದರಿಂದ ಸಮಾಜ ಕಲುಷಿತವಾಗುವುದೆಂಬುದಕ್ಕೆ ಈ ಸಂಗತಿ ಒಂದು ಉತ್ತಮ ನಿದರ್ಶನ.

ಹೀಗೆ ಸಮಾಜದ ಮುಂದೆ ತಾನು ಅವಹೇಳನಕ್ಕೆ ಗುರಿಯಾದಾಗ ತನ್ನ ಕುರಿತು ಸಹಾನುಭೂತಿ ತೋರಿಸಿದವನು ದುರ್ಯೋಧನನೆಂಬುದು ಕರ್ಣನಿಗೆ ಮಿಗಿಲಾದ ಋಣ. ದ್ರೋಣಕೃಪರ ಆ ಅವಹೇಳನದ ನುಡಿಗೆ ಪ್ರತ್ಯುತ್ತರ ಕೊಡಲೊಲ್ಲದೆ 'ಪಂದೆಯಂ ಪಾವಡರ್ದಂತೆ' ಮೌನವಾಗಿದ್ದ ಕರ್ಣನನ್ನು ನೋಡಿ ದುರ್ಯೋಧನನು ಆಚಾರ್ಯರಿಬ್ಬರಿಗೂ ಇಂತೆನ್ನುವನು :

'ಕುಲಮೆಂಬುದುಂಟೆ ಬೀರಮೆ
ಕುಲಮಲ್ಲದೆ ಕುಲಮನಿಂತು ಪಿಕ್ಕದಿರಿ ನೀ
ಮೊಲಿದೆಲ್ಲಿ ಪುಟ್ಟಿಬಳೆದಿರೊ
ಕುಲಮಿರ್ದುದೆ ಕೊಡದೊಳಂಶರಸ್ತಂಬದೊಳಂ'

ದ್ರೋಣಕೃಪರು ಜನಿಸಿದ್ದು ಕೊಡದಲ್ಲಿ ಮತ್ತು ಶರಸ್ತಂಬದಲ್ಲಿ. ಅವೆರಡರಲ್ಲಿ ಏನು ಕುಲೀನತೆಯಿದೆ? ಕುಲವೆನ್ನುವುದೇಯಿಲ್ಲ; ಪರಾಕ್ರಮವೇ ಕುಲ. ಕುಲಕುಲವೆಂದು ಬಿಡಿಸಿ ಬಿಡಿಸಿ ವರ್ಣಿಸಬೇಡಿ; ಕೊಡದ ಕುಲ ಯಾವುದು? ಗರಿಕೆಯ ಕಟ್ಟಿಯ ಕುಲ ಯಾವುದು? ಎಂದು ನೇರಾಗಿ ಪ್ರಶ್ನಿಸಿ ದುರ್ಯೋಧನನು ಕರ್ಣನ ಪಕ್ಷ ವಹಿಸುತ್ತಾನೆ. ಮಾತ್ರವಲ್ಲ, ಆತನನ್ನೂ ಕುಲವಂತನಾಗಿ ಮಾಡುತ್ತೇನೆಂದು, ಕರ್ಣನ ಕೈಹಿಡಿದು ಒಡಗೊಂಡು ಹೋಗಿ ಕನಕಪೀಠದ ಮೇಲೆ ಕುಳ್ಳಿರಿಸಿ ಕನಕಕಳಶದಲ್ಲಿ ತುಂಬಿದ ಹಲವು ಪುಣ್ಯತೀರ್ಥೋದಕಗಳನ್ನು ವೇದಪಾರಂಗತರಿಂದ ಅಭಿಷೇಕಗೆಯ್ಸಿ–

'ಮಂಗಳವಱಗಳ್ ಶುಭವಚ

ನಂಗಳ್ಚಮರೀರುಹಂಗಳಾ ಶ್ವೇತಚ್ಛ-

ತ್ರಂಗಳಮರ್ದೆಸೆಯೆ, ಕರ್ಣಂ-

ಗಂಗಮಹೀತಳ ವಿಭೂತಿಯಂ ನೆಯಿಱಿತ್ತಂ'

ಮಾತ್ರವಲ್ಲ, ಮಹಾದಾನಿಯಾದ ಕರ್ಣನ ನಿತ್ಯದಾನಕ್ಕೆಂದು ಹದಿನೆಂಟು ಕೋಟಿ ನಾಣ್ಯಗಳನ್ನೂ ಇತ್ತು, ಆತನೊಡನೆ ಪೊಡುಮಡುವೆನೆಂಬ, ಜೀಯೆಂಬ, ದಯಗೈ ಎಂಬ, ಹಸಾದ ಎಂಬೀ ದೀನತೆಯ ಮಾತು ನಮ್ಮೊಳಗೆ ಬೇಡ, ನಾವಿನ್ನು ಮುಂದೆ ಸಮಾನರು; ನನಗೆ ನೀನು ಗೆಳೆಯನು ಎಂದು ಹೇಳಿ, ಆತನನ್ನು ಕರೆದುಕೊಂಡು ಹೋಗಿ ಗಾಂಧಾರೀ ಧೃತರಾಷ್ಟ್ರರಿಗೂ ಪೊಡವಡಿಸಿದನು. ತಾನು ಸೂರ್ಯಾಂಶಸಂಭೂತನಾದ ಕೌಂತೇಯನೆಂದೂ, ತಾನು ಒಪ್ಪಿದರೆ, ಹಸ್ತಿನಾವತಿಯ ಸಿಂಹಾಸನವನ್ನು ಏರಿ ಎಡಬಲದಲ್ಲಿ ಕೌರವರೂ ಪಾಂಡವರೂ ಓಲೈಸುವಂತೆ ಮಾಡಬಹುದೆಂದೂ ಕರ್ಣನಿಗೆ ಕೃಷ್ಣನು ಆಮಿಷವೊಡ್ಡಿದರೂ, ಕೊನೆಯುವರೆಗೂ ದುರ್ಯೋಧನನ ಪಕ್ಕದಲ್ಲಿಯೇ ನಿಂತು ಹೋರಾಡಿ ಮಡಿದ ಕರ್ಣನ ತ್ಯಾಗಕ್ಕೆ ಈ ಅನಿಮಿತ್ತ ಸ್ನೇಹಸಂಬಂಧವೇ ಮುಖ್ಯ ಕಾರಣವೆಂದು ನಾವು ಅರ್ಥಮಾಡಿಕೊಳ್ಳಬಹುದು. ಕರ್ಣನ ಹೃದಯ, ಕೃತಜ್ಞತೆಯ ಸಖ್ಯದ ಪೀಯೂಷರಸಭರಿತವಲ್ಲದೆ ಸರ್ವಥಾ ಕೃತಜ್ಞತೆಯ ಗರಳಕುಂಭವಲ್ಲ! ಇಂತಹ ನಡತೆ ಆತನನ್ನು ಸದಾ ನೆನಪಿಸಿಕೊಳ್ಳಬೇಕಾದ ಉತ್ಕೃಷ್ಟ ಗುಣವಿಶೇಷವಾಗಿದೆ.

ಲಾಕ್ಷಾಗೃಹದಾಹ, ವಿಷಮವಿಷಾನ್ನ, ರಾಜ್ಯಲೋಭ, ಅಕ್ಷದ್ಯೂತ ಇತ್ಯಾದಿಗಳು ಕೌರವ ಪಾಂಡವರೊಳಗೆ ಮಸೆದು, ಪಾಂಡವರಿಗೆ ವನವಾಸಾದಿ ಸಂಕಷ್ಟಗಳು ಸಂಭವಿಸಿ ಮರಳಿ ಪಾಂಡವರು ರಾಜ್ಯಕ್ಕೆ ಬಂದಾಗ ಶ್ರೀಕೃಷ್ಣನು ಸಂಧಿಗೆ ಬಂದನು; ಅರ್ಧರಾಜ್ಯಕ್ಕೆ ಹಕ್ಕುದಾರರಾದ ಪಾಂಡವರಿಗೆ ಸಿಗತಕ್ಕ ಏನಾದರೂ ಪಾಲು ಕೇಳಲು. ಸಂಧಾನ ವಿಫಲವಾಯಿತು, ಸಮರವೇ ಸಿದ್ಧವಾಯಿತು. ಶ್ರೀಕೃಷ್ಣನು ಕೌರವನ ಛಲವನ್ನು ಬಲ್ಲನು. ಆದರೆ ಕೌರವಪಾಳೆಯದಲ್ಲಿ ಎಷ್ಟು ಮಂದಿ ಪಾಂಡವರ ಪಕ್ಷಪಾತಿಗಳಿರುವರೆಂದೂ ಆತನಿಗೆ ತಿಳಿಯಬೇಕಾಗಿತ್ತು; ಅದು ಸರಿಯಾಗಿ ತಿಳಿಯಿತು. ದ್ರೋಣ, ಕೃಪ, ಶಲ್ಯ, ಭೀಷ್ಮ ಇವರೆಲ್ಲರೂ ಪಾಂಡವ ಪಕ್ಷಪಾತಿಗಳೇ. ಗುರುಸುತನಾದ ಅಶ್ವತ್ಥಾಮನ ಕೈಹಿಡಿದು ಶ್ರೀಕೃಷ್ಣನು ಅರಮನೆಯಿಂದ ಹೊರಟು ಬಂದನು. ಅವನ ಒಲವೂ ಪಾಂಡವರ ಕಡೆಗೇ ಎಂದು ಕೃಷ್ಣನಿಗೆ ಭಾವನೆ ಬಂದಿದೆ. ಇನ್ನು ಉಳಿದದ್ದು ಮಹಾವೀರನಾದ ಕರ್ಣ. ಆತನನ್ನು ತನ್ನ ಕಡೆಗೆ ಸೆಳೆಯಬೇಕು; ಶ್ರೀಕೃಷ್ಣನು ಆ ತಂತ್ರ ಹೂಡಿದನು. ಆತನಿಗೆ ಜನ್ಮ ರಹಸ್ಯವನ್ನು ತಿಳಿಯ ಹೇಳುವುದು; ಪಾಂಡವರ ಕಡೆ ಬರುವಂತೆ ಕೇಳುವುದು; ಬರದೆ ಇದ್ದರೂ, ಪಾಂಡವರು ತಮ್ಮಂದಿರು ಎಂಬ ಸಹಾನುಭೂತಿ ಉಂಟಾಗಲಿ – ಇದು ಶ್ರೀಕೃಷ್ಣನ ಭೇದೋಪಾಯ.

ತಾನು ಕ್ಷತ್ರಿಯನಿರಬಹುದೇ ಎಂಬ ಒಳಗೊಳಗಿನ ಕುದಿತ ಕರ್ಣನಲ್ಲಿಯೂ

ಒಡಮೂಡಿದ ಹಾಗೆ ತೋರುತ್ತದೆ. ಪರಶುರಾಮರಲ್ಲಿಗೆ ಚಾಪವಿದ್ಯಾರ್ಥಿಯಾಗಿ ಹೋಗಲು ಆತನು ವಟುವೇಷ ಹಾಕಿ ಹೋದಾಗಲೇ; ಪರಶುರಾಮನ ಶಾಪ ಆತನಿಗೆ ತನ್ನ ಸಂದೇಹವನ್ನು ಖಚಿತಗೊಳಿಸಿರಬಹುದು, ಆದರೆ ತಂದೆ ತಾಯಿ ಯಾರು ಎನ್ನುವುದು ಇನ್ನೂ ತಿಳಿಯದು. ಇದನ್ನೂ ತಿಳಿಸಿ ಪಾಂಡವರ ಕುರಿತು ಆತನ ಮನಸ್ಸು ಮಿದುವಾಗುವಂತೆ ಮಾಡಬೇಕು ಎಂದು ಶ್ರೀಕೃಷ್ಣನ ಕುಟಿಲನೀತಿ, ದುರ್ಯೋಧನನಿಗೆ ಕರ್ಣನ ಹುಟ್ಟು ತಿಳಿದಿತ್ತು ಎನ್ನುವ ಒಂದು ಪ್ರಸಂಗ ಪಂಪ ಭಾರತದಲ್ಲಿ ಉಲ್ಲೇಖವಾಗಿದೆ. ಕರ್ಣದುರ್ಯೋಧನರು ಒಮ್ಮೆ ಗಂಗಾನದೀ ತೀರದಲ್ಲಿ ಬೇಟೆಯಾಡುತ್ತಿದ್ದಾಗ ಸಮೀಪದ ಸತ್ಯಂತಪರೆಂಬ ಮುನಿಗಳ ಆಶ್ರಮಕ್ಕೆ ಹೋಗಲು ಅವರು ತನಗಿಂತ ಮೊದಲು ಕರ್ಣನಿಗೆ ಆಸನವನ್ನು ನೀಡಿದ ಕಾರಣವನ್ನು ದಿವ್ಯಜ್ಞಾನಿಯಾದ ಋಷಿಮುಖದಿಂದಲೇ ತಿಳಿದು, ಆತನು ಮೀಂಗುಲಿಗನಲ್ಲ, ಕೌಂತೇಯನೆಂಬುದನ್ನು ದುರ್ಯೋಧನನು ಅರಿತಿದ್ದನೆಂದು ಕಥೆಯಿದೆ. ಕರ್ಣಜನ್ಮ ವೃತ್ತಾಂತ ದುರ್ಯೋಧನನಿಗೆ ಗೊತ್ತಿದ್ದರೂ ಆತನು ಬಹಿರಂಗಪಡಿಸದಿರಲು ಕಾರಣವನ್ನು ನಾವು ಸಹಜವಾಗಿ ಊಹಿಸಬಹುದು. ತನ್ನ ಪರವಾಗಿರುವ, ಮಹಾವೀರನೊಬ್ಬನನ್ನು ತನ್ನ ಶತ್ರುಗಳ ಇದಿರಾಗಿ ಉಪಯೋಗಿಸುವ ಉದ್ದೇಶ ದುರ್ಯೋಧನನದು. ಇದು ಯೋಧತಂತ್ರವೇ ಹೊರತು, ಇದರಲ್ಲಿ ಸ್ವಾರ್ಥವೇ ಇತ್ತೋ ಎನ್ನುವುದು ಸಂದೇಹಾಸ್ಪದ. ಏಕೆಂದರೆ ಕರ್ಣಾವಸಾನ ಕಾಲದಲ್ಲಿ ದುರ್ಯೋಧನನು ದುಃಖಿಸಿ ಹೇಳಿದ ಮಾತುಗಳು ದುರ್ಯೋಧನನು ಕೇವಲ ಸ್ವಾರ್ಥಿ ಎನ್ನುವುದಕ್ಕೆ ಸಾಕ್ಷಿಯಲ್ಲ.

"ನೀನೂ ಅಗಲಿದೆಯಾ, ಇನ್ನು ನನಗೆ ಯಾರಿದ್ದಾರೆ? ನಿನ್ನ ಬೆನ್ನ ಹಿಂದೆಯೇ ನಾನೂ ಬರುತ್ತೇನೆ. ಏಕೆಂದರೆ ಒಡಲೆರಡು ಜೀವವೊಂದೇ ಎಂದು ನಾವು ಬಾಳಿದವರು. ನೀನು ಹೋದ ನಂತರ ನಾನು ಬದುಕುವೆನು? ನೀನು ಸೋದರನೆಂದು ಧರ್ಮಜನಿಗೆ ತಿಳಿದಿರಲಿಲ್ಲ. ಬಹುಶಃ ಆತನಿಗೆ ತಿಳಿದಿದ್ದರೆ ಯುದ್ಧವನ್ನು ತೊಡಗದೆ, ನಿನಗೇ ಆತನು ರಾಜ್ಯವನ್ನು ಬಿಟ್ಟು ಬಿಡುತ್ತಿದ್ದನೇನೊ! ನನಗೆ ವಿಷಯ ತಿಳಿದೂ ನಿನ್ನನ್ನು ಅರಸನನ್ನಾಗಿ ಮಾಡಲಿಲ್ಲ; ನನ್ನ ಕಾರ್ಯಕ್ಕಾಗಿ ಮಾತ್ರ ನಿನ್ನನ್ನು ಪ್ರೀತಿಸಿದಂತಾಯಿತು. ನಿನ್ನನ್ನು ನಾನೇ ಕೊಂದೆನು; ಕೌಂತೇಯರು ಕೊಲ್ಲಲಿಲ್ಲ" ಇದು ದುರ್ಯೋಧನನ ಶೋಕ ರೋದನ. ಕೊನೆಗೆ ಆತನು ತನ್ನ ಉದ್ದೇಶವನ್ನು ಇಂತು ಹೇಳುತ್ತಾನೆ.

"ಉವಧಿ ತರಂಗತಾಟಿತದರಾತಳಮಂ ನಿನಗಿತ್ತು ನಿನ್ನ ಕೊ
ಟ್ಟುದನೆ ಪಸಾದಮೆಂದು ಪೊಡವಟ್ಟು ಮನೋಮುದದಿಂದೆ ಕೊಂಡು ಬಾ
ಳ್ವುದುವೆಬಯಕ್ಕೆ......

ದುರ್ಯೋಧನನ ಈ ಬಯಕೆ ಮರ್ಮಭೇದಕವಾಗಿದೆ. ಕರ್ಣನಿಗೆ ಅಂಗರಾಜ್ಯದ ಪಟ್ಟಕಟ್ಟಿದಾಗ, ಇನ್ನು ಮುಂದೆ ಜೀಯಾ ಹಸಾದವೆನ್ನದೆ ನಾವಿಬ್ಬರೂ

ಗೆಳೆಯರಂತಿರಬೇಕೆಂದು ದುರ್ಯೋಧನನು ಕರ್ಣನಿಗೆ ಹೇಳಿದ ಮಾತಿನಲ್ಲಿಯೂ ಈ ಧ್ವನಿ ಮೂಡುತ್ತದೆ. ಅಂತೂ ಕರ್ಣ ದುರ್ಯೋಧನರ ಪ್ರೇಮ ಅವ್ಯಾಜವೆನ್ನುವುದು ಸಾಧಾರವಾಗಿದೆ.

ಕರ್ಣನ ಈ ಜನ್ಮವೃತ್ತಾಂತ ಶ್ರೀಕೃಷ್ಣ ಪರಮಾತ್ಮನಿಗೆ ತಿಳಿದೇ ಇದೆಯಾಗಿ ಆತನು ಭೇದೋಪಾಯವನ್ನು ಮಂತ್ರಿಸಿದನು. ಕೌರವನ ಪಕ್ಷದ ಗುರುಗಳು ಹಿರಿಯರು ಹಲವರು ಪಾಂಡವ ಪಕ್ಷಪಾತಿಗಳಾದರೂ, ಮಹಾವೀರನಾದ ಕರ್ಣನಿರುವಾಗ ಗೆಲವು ಸಾಧ್ಯವಾಗದು. ಹಾಗಾಗಿ ನಿನ್ನ ಚೊಚ್ಚಲ ಮಗನಾದಾತನನ್ನು ನೀನು ಕಂಡು ಕಾರ್ಯಸಿದ್ಧಿ ಮಾಡು. ನಾನೂ ನನಗೆ ತಿಳಿದ ತಂತ್ರ ಹೂಡುತ್ತೇನೆಂದು ಕುಂತಿಯೊಡನೆ ಹೇಳಿ, ಶ್ರೀಕೃಷ್ಣನು, ಸಂಧಾನ ಮುರಿದು ಹಸ್ತಿನಾವತಿಯಿಂದ ಮರಳುವಾಗಲೇ ಕರ್ಣನ ಮನೆಯ ಮುಂದೆ ರಥ ನಿಲ್ಲಿಸಿ ಆತನನ್ನು ತನ್ನ ತೇರಲ್ಲಿ ಕೂರಿಸಿ, ಸ್ವಲ್ಪ ದೂರದ ವರೆಗೆ ಕಳುಹಿಸಿಕೊಡಲು ಬಾ ಎಂದು ಹೇಳಿ ಕರೆದುಕೊಂಡು ಹೋಗುತ್ತಾನೆ. ಮುಂದೆ ಒಂದೆಡೆಯಲ್ಲಿ ನಿಂತು ಈ ಮಾತುಕತೆ ಆಗುತ್ತದೆ:

'ಭೇದಿಸಲೆಂದೆದಲ್ ನುಡಿದರೆನ್ನದಿರೊಯ್ಯನೆ ಕೇಳಕರ್ಣ, ನಿ-
ನ್ನಾದಿಯೊಳಬ್ಬೆ ಕೊಂತಿ, ನಿನಗಮ್ಮನಹರ್ಪತಿ, ಪಾಂಡುನಂದನರ್
ಸೋದರರರೆಯ್ದೆಮಯ್ದುನನೆನೀಂ ಪೆಱತೇಂಪಡೆಮಾತೊ ನಿನ್ನದೀ
ಮೇದಿನಿಪಟ್ಟಮುಂನಿನತೆ ನೀನಿರೆ ಮತ್ತೆ ಪೆಱರ್ ನರೇಂದ್ರರೇ?
'ಗಂಗೆಗೆ ಕೆಯ್ಯೆಡೆಯಂದು
ತ್ತುಂಗಸ್ತನಿ ಕೊಟ್ಟುಪೋಗೆ ಸೂತಂಕಂಡಾ-
ತ್ಮಾಂಗನೆಗೆ ರಾಧೆಗಿತ್ತು ಮ
ನಂಗೊಳೆರಾಧೇಯನೆನಿಸಿ ಸೂತಜನಾದ್ಯೆ
'ನಿನ್ನುತ್ಪತ್ತಿಯನಿಂತೆಂ
ದೆನ್ನರುಮಣಮಱ'ಯರಱ'ವೆನಾಂ ಸಹದೇವಂ
ಪನ್ನ ಗಕೇತುದಿನೇಶಂ
ನಿನ್ನಂಬಿಕೆ ಕುಂತಿಯಂತಿವರ್‌ನೆಱ'ಬಲ್ಲರ್'

ದಿವ್ಯಜ್ಞಾನಿಯಾದ ಸಹದೇವನಿಗೆ ತಿಳಿದಿದ್ದರೂ, ಆತನಿಗೆ ತಿಳಿದ ರಹಸ್ಯ ಇತರರಿಗೆ ತಿಳಿಸಿದಲ್ಲಿ ಅವನ ಮರಣವಾಗುವ ಶಾಪವಿರುವುದರಿಂದ ಹೇಳಲಾರದವನಾಗಿದ್ದನು. ದುರ್ಯೋಧನನಿಗೆ ಸತ್ಯಂತಪರು ಸತ್ಯವನ್ನು ತಿಳಿಸಿದ್ದರೂ ಆತನನ್ನು ಪಾಂಡವರ ವಿರುದ್ಧ ಉಪಯೋಗಿಸಿಕೊಳ್ಳುವ ಸಲುವಾಗಿ ನಿಜಸಂಗತಿಯನ್ನು ತಿಳಿಸಿರಲಿಲ್ಲ. ನಾನೀಗ ತಿಳಿದ ವಿಷಯ ಹೇಳಿದೆ; ಬೇಕಾದರೆ ತಾಯಿಯಿಂದ ತಿಳಿದುಕೋ ಎಂದು

ಸೂಚಿಸುವಂತೆ ಶ್ರೀಕೃಷ್ಣನು ಜನ್ಮರಹಸ್ಯವನ್ನು ಮೊತ್ತ ಮೊದಲಾಗಿ ಕರ್ಣನಿಗೆ ಅರುಹುತ್ತಾನೆ.

'ಎನೆಯೆನೆ ಬಾಷ್ಪವಾರಿ ಪುಳಕಂಬೆರಸೊರ್ಮೆಪೊಣ್ಮೆ ಮುನ್ನನೀ
ಮೆನಗಿದನೇಕೆ ಪೇೞೆರೊ, ನೆಗೞ್ತೆ ಪೊಗೞ್ತೆಯನಾಂಪಿನಂ ಸುಯೋ
ಧನನೆನಗೊಳ್ಳಿಕೆಯ್ದುಕೃತಮಂ ಪೆಱಗಿಕ್ಕಿ ನೆಗಳ್ತೆಮಾಸೆ ನ
ಣ್ಪಿನ ನೆವದಿಂದೆ ಪಾಂಡವರನಾನೊಳವೊಕ್ಕೊಡೆ ನೀಮೆಪೇಸಿರೆ?'

ಮುನ್ನ ನೀವೆಸಗಿದನೇಕೆ ಪೇಳಿರೊ – ಎಂಬ ಮಾತು ಶ್ರೀಕೃಷ್ಣನನ್ನೂ ಚುಚ್ಚುವಂತಿದೆ. ದುರ್ಯೋಧನನು ನನಗೆ ಎಲ್ಲಾ ಒಳ್ಳೆಯದನ್ನು ಮಾಡಿದ ಮೇಲೆ ಈಗ ನೀವು ನನ್ನ ಜನ್ಮವೃತ್ತಾಂತ ಹೇಳುವುದು ನನ್ನನ್ನು ಒಳ್ಳೆಯವನನ್ನಾಗಿ ಮಾಡಲು ಸರ್ವಥಾ ಅಲ್ಲ; ಮೊದಲೇ ತಿಳಿಸಿದ್ದರೆ, ನಾನೂ ಪಾಂಡವರೂ ಜತೆಯಾಗಿ ಇರಬಹುದಾಗಿತ್ತು; ಬಹುಶಃ ಅದು ನಿಮಗೂ ಬೇಡವಾಗಿರಬೇಕೆಂಬ ಧ್ವನಿ ಈ ಮಾತಿನಲ್ಲಿದೆ. ಆದರೆ ಈಗ ನಾನು ದುರ್ಯೋಧನನಿಗೆ ಕೃತಜ್ಞನಾದರೆ ನನ್ನ ಕುರಿತು ನೀವು ಕೂಡ ಅಸಹ್ಯಗೊಳ್ಳಲಿಕ್ಕಿಲ್ಲವೆ? ಎಂದು ಕರ್ಣನು ನೊಂದು ನುಡಿದನು.

"ನೆತ್ತಮನಾಡಿ ಭಾನುಮತಿ ಸೋಲ್ತೊಡೆ, ಸೋಲಮನೀವುದೆಂದು ಕಾ
ಡುತ್ತಿರೆ, ಲಂಬಣಂಪಱೆಯೆ, ಮುತ್ತಿನ ಕೇಡನೆ ನೋಡಿಬ
ಳ್ಕುತ್ತಿರೆಯೇವಮಿಲ್ಲದಿವನಾವುದೋ ತಪ್ಪದೆ ಪೇಱಮೆಂಬ ಭೂ
ಪೋತ್ತಮನು ಬಿಸುಟ್ಟಿರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೆ?"

ಅಂತಃಪುರದಲ್ಲಿ ಭಾನುಮತಿಯೊಡನೆ ದುರ್ಯೋಧನನು ನೆತ್ತವನ್ನಾಡುತ್ತಿದ್ದನು. ಕರ್ಣನೂ ಜತೆಯಲ್ಲಿದ್ದು ನೋಡುತ್ತಿದ್ದನು. ಭಾನುಮತಿ ಸೋತು, ಸೋಲವನ್ನು ಕೊಡಬೇಕೆಂದು ದುರ್ಯೋಧನನು ಕಾಡಿದನು. ಆ ಕಾಟದಲ್ಲಿ ಆಕೆಯ ಮುತ್ತಿನಲಂಬಣ ಹರಿದುಹೋಯಿತು. ಮುತ್ತು ಹರಿದುಹೋದುದನ್ನು ನೋಡಿ ನೋಡಿ ಆಕೆ ಬಾಗುತ್ತಿದ್ದಳು; ತನಗೆ ಬರಬೇಕಾದ ಮುತ್ತನ್ನು ಆಯುತ್ತೇನೆ ಎಂದು ಕರ್ಣನೊಡನೆ ದುರ್ಯೋಧನನು ಕೇಳುತ್ತಾನೆ– ಇಂತಹ ಆತ್ಮೀಯತೆಯ ಗೆಳೆಯನನ್ನು ನಾನು ತೊಲಗಿಹೋಗಲೇ ಎಂದು ಕರ್ಣನು ತಿಳಿಸುತ್ತಾನೆ. ಮತ್ತೆ ಚಿಂತಾಕ್ರಾಂತನಾಗಿ ಹೇಳುತ್ತಾನೆ :

ಕುರುಪತಿಗಿಲ್ಲ ದೈವಬಲಮಾಜಿಗೆ ಮೇಲ್ಮಲೆಗೆಯ್ವರಾಗಳುಂ
ಗುರು ಗುರುಪುತ್ರ ಸಿಂಧುಸುತರಾಳ್ವನುಮೆನ್ನನೆ ನಚ್ಚಿಪೆರ್ಚಿಮುಂ
ಪೊರೆದನಿದರ್ಕೆ ಕಾದುವರುಮೆನ್ನಯ ಸೋದರರೆಂತು ನೋಡಿಕೊ
ಕ್ಕರಿಸದೆ ಕೊಲ್ವೆನೆನ್ನೊಡಲನಾಂತವಿಪೆಂ ರಣರಂಗಭೂಮಿಯೊಳ್

'ಅಱ'ದೆಂ ಸೋದರರೆಂದು ಪಾಂಡವರ ನಿನ್ನೆಂತೆನ್ನ ರಂಕೊಲ್ವೆನ
ಟಱ'ಓಳೆನ್ನ ಪೊರೆದೆಯ್ದೆ ನಂಬಿದ ನೃಪಂಗೆಂತಾಜಿಯೊಳ್‌ತಪ್ಪುವೆಂ
ತಱಸಂದುದ್ಧ ತವ್ವೆರಿಭೂಪಬಲದೊಡ್ಡಳ್ಳಾಡೆಲೆಕ್ಕಕ್ಕೆ ತ
ಳ್ತಿಱ'ದೆನ್ನಾಳ್ದನಿನಾನೆ ಮುಂಚೆ ನಿರಿಪೆಂಕೆಯ್ಕೊಂಡು ಕಟ್ಟಾಯಮಂ'

ಕರ್ಣನು, ತಾನು ಕೌಂತೇಯನೆಂದಾಗಲಿ, ಸೂರ್ಯಸುತನೆಂದಾಗಲಿ, ಕ್ಷತ್ರಿಯನೆಂದಾಗಲಿ, ಹಸ್ತಿನಾವತಿಯ ಸಾರ್ವಭೌಮತ್ವವನ್ನು ಪಡೆವೆನೆಂದಾಗಲಿ ಹಿಗ್ಗಲಿಲ್ಲ. ತನ್ನ ಜೀವದ ಗೆಳೆಯನಾದ ಕುರುಪತಿಗೆ ದೈವಬಲವಿಲ್ಲವಲ್ಲಾ ಎಂದು ಮರುಗಿದನು. ಸೋದರರೆಂದು ತಿಳಿದ ಮೇಲೆ ಪಾಂಡವರನ್ನು ಕೊಲ್ಲಲಾರೆ; ನನ್ನನ್ನು ಸಾಕಿ ಸಲಹಿದ ದುರ್ಯೋಧನನಿಗೂ ಎರಡು ಬಗೆಯಲಾರೆ, ಯುದ್ಧರಂಗದಲ್ಲಿ ಹೋರಾಡಿ. ತನ್ನ ಒಡೆಯನಾದ ಕೌರವನಿಗಿಂತ ಮೊದಲೇ ತಾನು ದೇಹವನ್ನರ್ಪಿಸುತ್ತೇನೆಂದು ನಿಶ್ಚೆಯಿಸಿದನು.

ಶ್ರೀಕೃಷ್ಣನು ಭೇದೋಪಾಯವೇನೋ ಫಲಿಸಿತು. ಆದರೆ ಈ ಮಹತ್ವದ ಘಟನೆ ಕೂಡ ಕರ್ಣನನ್ನು ಸದಾ ನೆನೆವಂತೆ ಮಾಡಿದೆ! ಸ್ವತಃ ದೇವಾಂಶಸಂಭೂತನಾದ ಯುಗ ಪುರುಷ ಶ್ರೀಕೃಷ್ಣನೇ ಬಂದು ನಿನಗೆ ಹಸ್ತಿನಾವತಿಯ ಸಾಮ್ರಾಜ್ಯ ಕೊಡಿಸುತ್ತೇನೆ; ನೀನೇ ಕೌರವ ಪಾಂಡವರಿಗೆಲ್ಲ ಹಿರಿಯನು ಎಂದಾಗ ತನ್ನ ಸ್ಥಾನಮಾನಗಳ ಕುರಿತು ಕಿಂಚಿತ್ತೂ ಆಶಿಸದೆ ತನಗೆ ಅನ್ನವಿತ್ತ, ಧಾರಾಳ ಸ್ನೇಹಸುಧೆಯೆರೆದ ದುರ್ಯೋಧನನ ಕುರಿತೇ ಚಿಂತಿಸಬೇಕಾಗಿದ್ದರೆ ಕರ್ಣನ ದೃಢಚಿತ್ತ ಎಂತಹುದು!

ಕುಲಹೀನನೆಂದು ಲೋಕವೇ ಅವಮಾನಗೊಳಿಸುತ್ತಾ ಬಂದ ಕರ್ಣನಿಗೆ ಬಹುಶಃ ಶ್ರೀಕೃಷ್ಣನ ಕೃತಿಯ ಜನ್ಮಕಥೆ ಅಂತರಂಗದಲ್ಲಿ ತುಂಬಾ ಅಪ್ಯಾಯಮಾನವಾಗಿರಬೇಕು. ಅದೇ ಆಂತರಿಕ ಆನಂದದಿಂದ ಒಂದು ಸುದಿನದ ಸೂರ್ಯೋದಯ ಕಾಲದಲ್ಲಿ ಮಾತೆ ಮಂದಾಕಿನಿಯಲ್ಲಿ ಮಜ್ಜನಗೆಯ್ಯಲೆಂದು ಬಂದು, ದುರ್ಯೋಧನನು ತನಗೆ ನೀಡಿದ ಹದಿನೆಂಟು ಕೋಟಿ ನಾಣೆಯಗಳನ್ನು ಒಂದುಕೂಡಿಸಿ ಸತ್ಪಾತ್ರದಾನ ಮಾಡಿದನು. ಆತನ ಜೀವನದ ಅತ್ಯಂತ ಆನಂದದ ಹಾಗೂ ಅತ್ಯಂತ ಸಂಕಟದ ದಿನದ ಮುಹೂರ್ತ ಹತ್ತಿರಬಂದಂತೆ ಅನಿಸಿರಬೇಕು. ಜಗನ್ಮಂಗಳ ಗಂಗಾವಾರಿಯಲ್ಲಿ ಅಘಮರ್ಷಣಪೂರ್ವಕ ಮಿಂದು ಕನಕಪಾತ್ರದಲ್ಲಿ ತುಂಬಿದ ಕನಕಕಮಲಗಳಿಂದ ಆದಿತ್ಯನಿಗೆ ಅರ್ಘ್ಯ ಎತ್ತಿ ಸೂರ್ಯಮಂತ್ರವನ್ನು ಜಪಿಸಿ ತ್ರಿಪ್ರದಕ್ಷಿಣೆಗೆಯ್ಯುವಾಗ–

"ಮಂಗಳಲಕ್ಷಣೆಯನಂದು ಭೋಂಕನೆ ಕಂಡಂ
ಗಂಗಾಂಗನೆಯಂ ಕಾಣ್ಬವೊ

ಲಂಗನೃಪಂ ಮುಂದೆ ನಿಂದ ಕೊಂತಿಯನಾಗಳ್"

ಹಿಂದಿನ ದಿನ ಶ್ರೀಕೃಷ್ಣನೇ ತನ್ನ ಜನನಿಯ ಪರಿಚಯ ಹೇಳಿದ್ದರಿಂದ, ಜೀವನದಲ್ಲಿ ಅದೇ ಪ್ರಥಮ ಸಲ, ತನಗೆ ಲೋಕದ ಬೆಳಕನ್ನು ಕಾಣಿಸಿದ ಜನನಿ ಕುಂತಿಯನ್ನು ಕಂಡಾಗ ಕರ್ಣನಿಗೆ ಆದ ಆನಂದ ಅಪರಿಮಿತವಿರಬೇಕು.

ಸಾಷ್ಟಾಂಗವೆರಗಿದ ನಂದನನನ್ನು ಕುಂತಿ ಅಪ್ಪಿಕೊಂಡಳು; ಹರಸಿದಳು. ಆಕೆಯ ಮೈ ಪುಲಕಗೊಂಡಿತು. ಎದೆಹಾಲು ಹರಿದುಬಂತು; ಕಣ್ಣೀರು ಉಕ್ಕಿಬಂತು. ಪುತ್ರಸ್ನೇಹದ ರಸ, ಹಾಲಿನಧಾರೆ, ಕಣ್ಣೀರ ಹರಿವು ಇವೆಲ್ಲವೂ ಹೊನಲಾಗಿ ಹರಿಯಿತು. ಅದೇ ಮುಹೂರ್ತದಲ್ಲಿ ಗಂಗಾದೇವಿ ದಿವ್ಯಮೂರ್ತಿಯಾಗಿ ಪ್ರತ್ಯಕ್ಷ ಬಂದು–

'ಒಪ್ಪಿಸಿದೆಂಕೆಯ್ಯೆಡೆಯಂ

ದೊಪ್ಪಿಸಿದಾ ನಿನ್ನಮಗನನೀಗಳೆನಿನಗೆಂ

ದಪ್ಪೈಸಿ ಗಂಗೆ–'

ಹೋದಾಗ ಈ ಘಟನೆಗೆ ಪೂರಕವಾಗಿ ಸ್ವತಃ ಸೂರ್ಯದೇವನು ನಿಜಬಿಂಬದಿಂದ ಹೊರಟು ಕರ್ಣನ ಮುಂದೆ ಪ್ರತ್ಯಕ್ಷನಾಗಿ ಬಂದು ನಿಂತನು. ತಾಯಿತಂದೆಯರ ಈ ಉಭಯ ಸಾನ್ನಿಧ್ಯವೂ ಕರ್ಣನಿಗೆ ಜನ್ಮಸಾಫಲ್ಯವನ್ನು ನೀಡಿರಬೇಕು. ಕರ್ಣನು ಸೂರ್ಯದೇವನ ಅಡಿಗೆರಗಲು ಆತನನ್ನು ಅಕ್ಕರೆಯಿಂದ ಹರಸಿ ಮನಮರುಗಿ – ಹಿಂದೆ ನೀನು–

'.....ಮರುಳ್ಳಗನೆ, ಹರಿಗೆ ಕವಚವನ್ನಿತ್ತೈ

ಆದರೆ ಇಂದು ಮತ್ತೆ–

ನಿನ್ನಂಬಿಕೆ.... ಕುಂತಿ ಹರಿಯ ಮತದಿಂ ಕಾಯ

ಲ್ಕೊಡರಸಿ ಬಂದಳ್ ಸುತರಂ,

ಕುಡದಿರ್ ಪುರಿಗಣೆಯನೆನಿತು ಲಲ್ಲೈಸಿದೊಡಂ'

–ಎಂದು ಬುದ್ಧಿ ಹೇಳಿ ಅಂತರ್ಧಾನನಾದನು.

ಈ ಸಂದರ್ಭದ ಕರ್ಣನ ಎದೆಯ ತುಮುಲವನ್ನು ನಾವು ಗ್ರಹಿಸುವುದೇ ಸಾಧ್ಯವಿಲ್ಲ. ಯಾವುದೋ ಅಭೂತಪೂರ್ವ ಆನಂದೋದ್ವೇಗಗಳ ತೀವ್ರತೆಯನ್ನು ಅನುಭವಿಸುತ್ತಿದ್ದರೂ ಬುದ್ಧಿಯ ಸ್ಥಿಮಿತತೆಯನ್ನು ಕಳೆದುಕೊಳ್ಳದೆ ಆತನು ಅವಿಚಲಿತನಾಗಿಯೇ ಇದ್ದನು; ತಂದೆಯಾದ ಸೂರ್ಯದೇವನು ಆಕಾಶಕ್ಕೇರಿದನು. ಆದರೆ ತನ್ನ ಕಣ್ಣ ಮುಂದೆ ಪುಣ್ಯವೇ ಸಾಕಾರಪಡೆದಂತೆ ತಾಯಿ ನಿಂತಿದ್ದಾಳೆ. ಅವಳಿಗೆ ಭಕ್ತಿ ಗೌರವಗಳ ಕಾಣ್ಕೆ ನೀಡಬೇಕು; ಅದು ಪುತ್ರನ ಋಣ. ಹಾಗಾಗಿ ಕುಂತಿಗೆ–

'ಕಯ್ಮುಗಿದಿಂತೆಂದಂ...........

"ಅಬ್ಬೆ ಏಂ ವಂದಿರ್ಪುದು ಎನಗೆ ಸಯ್ಪುಬರ್ಪಂತೀಗಳ್"

ಚಲಮುಂ ಚಾಗಮುಮಳವುಂ

ಕಲಿತನಮುಂಕುಲಮುಮೀಗಳೆನ್ನಯ ಮೆಯ್ಯೊಳ್

ನೆಲಸಿದುವು ನಿಮ್ಮ ಕರುಣಾ

ಬಲದಿಂ ನೀವೆನ್ನನಿಂದು ಮಗನೆಂದುದಱಿಂ'

ಕರ್ಣನಲ್ಲಿ ಎಷ್ಟೊಂದು ಆನಂದೋದ್ವೇಗಗಳ ತುಮುಲವುಂಟಾದರೂ ಆತನು ದೃಢಚಿತ್ತನು. ಕುಂತಿಗೇನೋ ತಳಮಳ. ಅವಿವಾಹಿತೆಯಾಗಿ ಪುತ್ರನನ್ನು ಹೆತ್ತಳು. ಜನಿಸಿದ ಶಿಶುವನ್ನು ನಿರುಪಾಲು ಮಾಡಿದಳು. ಆತನು ಎಲ್ಲಿಯೋ ಹೇಗೋ ಬದುಕಿ ಈ ಸ್ಥಿತಿಗೆ ಬಂದಿದ್ದರೆ, ಸ್ವಸಾಮರ್ಥ್ಯದಿಂದಲೆ ಶಕ್ತಿವಂತನಾಗಿದ್ದರೆ, ಈಗ ಅದೇ ತ್ಯಕ್ತಪುತ್ರನನ್ನು ಮತ್ತೂ ತ್ಯಜಿಸಿ ತನ್ನ ಇತರ ಪುತ್ರರನ್ನು ಉಳಿಸುವ ಅಳಿಯಾಸೆ ಆಕೆಯದು. ಕರ್ಣನಿಗೆ ಈ ಸೂಚನೆ ಬಂದಿದೆ. ಸ್ವತಃ ಸೂರ್ಯನೇ ಬಂದು ಹೇಳಿದ್ದಾನೆ. ಹಾಗಾಗಿ ಏನು ಕೇಳಬೇಕೋ ಕುಂತಿಗೆ ನಾಲಿಗೆ ಬರದು. ಮತ್ತೆ ಕರ್ಣನೇ ತಿಳಿಸುತ್ತಾನೆ. ಈ ಒಡಲನ್ನೂ ಪ್ರಾಣವನ್ನೂ ತಾಯಿಯೂ ತಂದೆಯೂ ನನಗಿತ್ತರು. ಇವು ಅವರವು; ನಾನಿದನ್ನು ಅವರಿಗೇ ಮೀಸಲಿತ್ತೆನು; ನಾನು ಯಾವ ಸೇವೆ ಮಾಡಬೇಕೋ ಹೇಳಿರಿ ಎಂದನು. ಕುಂತಿ ಹೇಳುತ್ತಾಳೆ: 'ಮಗನೇ, ನೀನು ಅರಸನಾಗು, ನಿನ್ನ ಸೋದರರು ನಿನ್ನನ್ನು ನಂಬಿ ನಡೆಯುವರು. ನೀನು ರಾಜನಾಗಿದ್ದರೆ ಅವರು ದುರ್ಯೋಧನನ ಪ್ರೀತಿಗೂ ಪಾತ್ರರಾಗುವರು. ಇದಕ್ಕೆ ಒಡಂಬಡು' ಎಂದಳು. ಕರ್ಣನೆನ್ನುವನು:

ಭಯಮುಂ ಲೋಭಮುವೆಂಬ ತಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ ಪಾ

ಳಿಯ ನೊಕ್ಕಾಳ್ದನಗೆಯ್ದ ಸತ್ಕ್ರಿಯಮುಮಂ ಪಿಂತಿಕ್ಕಿ ಜೋಳಕ್ಕೆ ತ

ಪ್ಪಿಯುಮಿಂ ಬಾಳ್ವುದೆ, ಪುಣ್ದಿನಿಲ್ಲದಿಕೆಯಿಂಬಾಟ್ವಂತು, ವಿಖ್ಯಾತಕೀ

ರ್ತಿಯವೋಲೀಯೊಡಲಬ್ಬೆ ಪೇಳಿಮೆನಗೇಂಕಲ್ಪಾಂತರಸ್ಥಾಯಿಯೆ?

'ಮೀಂಗುಲಿಗನೆನಾಗಿಯುಮಣ

ಮಾಂ ಗುಣಮನೆ ಬಿಸುಟೆನಿಲ್ಲ, ನಿಮಗಂ ಮಗನಾ

ದಂಗೆನಗೆ ಬಿಸುಡಲಕ್ಕುಮೆ

ನೀಂಗಳಪಂಬಲನೆ ಬಿಸುಡಿಮೆನ್ನೆನ್ನೆಡೆಯೊಳ್'

ಇಲ್ಲಿ, ಮೀಂಗುಲಿಗನಾಗಿ ಶೀಲವನ್ನು ಬಿಡದ ತಾನು, ಈಗ ನಿಮ್ಮ ಮಗನೆಂದು ತಿಳಿದ ಮೇಲೆ ಗುಣವನ್ನು ಬಿಟ್ಟುಬಿಡುವುದೇ ಎನ್ನುವ ಮಾತಿನಲ್ಲಿ ಉತ್ತಮ ಕುಲಜರೆಂದು

ಹೇಳಿಕೊಂಡು ಕುಟಿಲೋಪಾಯಗಳನ್ನು ಮಾಡಿ ಕಾರ್ಯಸಾಧಿಸುವ ಕುಹಕಿ ಜನರ ಕುರಿತಾದ ಸ್ಪಷ್ಟ ವಿಡಂಬನೆಯನ್ನು ನಾವು ಗುರುತಿಸಬಹುದಾಗಿದೆ. ಹೇಗೂ ಕುಂತಿಗೆ ಈ ಮಾತು ತೀರಾ ನಿರಾಸೆಯನ್ನು ಉಂಟುಮಾಡಿತು, ಕರ್ಣನು ದುರ್ಯೋಧನನ ಪಕ್ಷದಲ್ಲೇ ಉಳಿದರೆ, ತನ್ನ ಉಳಿದ ಮಕ್ಕಳು ಬದುಕುವ ಆಸೆಯಿಲ್ಲ; ಚಂದ್ರವಂಶವೇ ನಾಶವಾಗುವುದಲ್ಲಾ ಎಂದು ಆಕೆ ಶೋಕಾಗ್ನಿಯಿಂದ ಬೆಂದಳು. ತಾಯಿಯ ಈ ಸಂಕಟ ಕರ್ಣನಿಗೆ ಅರಿವಾಯಿತು. ಆಕೆ ಬಂದ ಉದ್ದೇಶ ನೆರವೇರುವಂತೆ ಕರ್ಣನು ನೇರಾಗಿ ಹೇಳುತ್ತಾನೆ :

'ಪಿಡಿಯೆಂ ಪುರಿಗಣೆಯುಂ, ನೆರ
ನೆಡೆಗೊಂಡೊಡಮುೞಿದ ನಿನ್ನ ಮಕ್ಕಳನಿನ್ನೇ
ರ್ದೊಡಮೞಿಯೆಂ, ಪೆರ್ಜಸಮನೆ
ಪಿಡಿದೆನ್ನ ನೆರಣದೊಳೞಿವೆ ನಿರದಡಿಯೆತ್ತಿಂ'

ಕುಂತಿ ಬಂದ ಉದ್ದೇಶ ಕರ್ಣನಿಗೆ ತಿಳಿದಿತ್ತು; ಸಾಲದ್ದಕ್ಕೆ ಸೂರ್ಯನೇ ಹೇಳಿದ್ದಾನೆ. ಅವರೂ ತಾಯಿಯ ಋಣವೆಂದು ಯುದ್ಧದಲ್ಲಿ ಪಾಂಡವರನ್ನು ನೋಯಿಸಲಾರೆನೆಂದೂ ತನ್ನನ್ನೇ ಆತ್ಮಾಹುತಿ ಮಾಡಿಕೊಳ್ಳುತ್ತೇನೆಂದೂ ಆದರೂ ತನ್ನ ಶೀಲವನ್ನು ಬಿಡಲಾರೆನೆಂದೂ ತಿಳಿಸಿ, ತಾಯಿಯೊಡನೆ, ಮತ್ತೆ ಅಲ್ಲಿ ನಿಲ್ಲದೆ ಹೊರಟುಹೋಗಲು ಹೇಳುತ್ತಾನೆ. 'ಇರದಡಿಯೆತ್ತಿಂ' ಎಂಬ ಮಾತಿನಿಂದ ಪಂಪನು ಕುಂತಿಯ ವ್ಯಕ್ತಿತ್ವವನ್ನು ಕೀಳ್ಮಟ್ಟಕ್ಕೆ ಇಳಿಸಿ, ಕರ್ಣನ ವ್ಯಕ್ತಿತ್ವದ ಉನ್ನತಿಕೆಯನ್ನು ಧ್ವನಿಸಿದ್ದಾನೆ. ಹೆತ್ತ ಮಗುವನ್ನು ಕಯ್ಯಾರೆ ನೀರಿಗೆಸೆದು ಸಾಯಿಸಬೇಕೆಂದರೂ, ಆ ಮಗು ಹೇಗೋ ಬದುಕಿ ಉಳಿದು ಧೀರನೂ ಗುಣವಂತನೂ ಆಗಿ ಬಾಳುವೆ ಮಾಡುತ್ತಿದ್ದಾನೆ. ಅಲ್ಲಿಯೂ ಆತನನ್ನು ಹೆತ್ತ ಏಕಮಾತ್ರ ಯೋಗ್ಯತೆಯ ಲಾಭ ಪಡೆದು ಆತನನ್ನು ಬಲಿಗೊಟ್ಟು ಇತರ ಮಕ್ಕಳನ್ನು ರಕ್ಷಿಸುವ ಕುಂತಿ ಒಂದುಕಡೆ; ಜನಿಸಿದ ಕೂಡಲೇ ನಿರ್ಲಕ್ಷಿಸಿದ ಒಬ್ಬಾಕೆ, ತಾನು ಹೇಗೆ ಹೇಗೋ ಜೀವನದಲ್ಲಿ ನೂರಾರು ಅವಮಾನಗಳನ್ನೆಲ್ಲಾ ಸಹಿಸಿ ಸ್ವಸಾಮರ್ಥ್ಯದಿಂದ ವೀರನೆಂದೂ ಗುಣಶಾಲಿಯೆಂದೂ ಹೆಸರಾಂತ ಕರ್ಣನು, ಅಂತಹ ತಾಯಿಯ ಮಾತಿಗೆ ತನ್ನನ್ನೇ ಆತ್ಮಾಹುತಿ ಮಾಡಿಕೊಳ್ಳುವ ಆ ಮಹಾಮಹಿಮವಾದ ಭರವಸೆ ನೀಡುವ ಓರ್ವ ಮಗ ಕರ್ಣನು ಇನ್ನೊಂದು ಕಡೆ. ಇವೆರಡನ್ನೂ ಹೋಲಿಸಿದಾಗ ಕುಂತಿಯ ಚಿತ್ರ ಮಸಕಾಗಿ ಹೋಗುತ್ತದೆ ಕರ್ಣಚಿತ್ರ ಸುಂದರವಾಗಿ ಭವ್ಯವಾಗಿ ಸದಾ ಸ್ಮರಣೀಯವಾಗುತ್ತದೆ.

ಮಹಾಭಾರತದ ಯುದ್ಧ ಸನ್ನದ್ಧವಾಯಿತು. ದುರ್ಯೋಧನನು ಭೀಷ್ಮನಿಗೆ ಸೇನಾಪತಿತ್ವದ ಪಟ್ಟ ಕಟ್ಟಿದನು. ಕರ್ಣನಿಗೆ ಕಳವಳ. ದುರ್ಯೋಧನನ ಪಕ್ಷ ನಿಂತು ಕಾದಿ ಮುಡಿಯುವುದೇ ಕರ್ಣನ ಧ್ಯೇಯ; 'ಎನ್ನಾಳ್ದನಿನಾನೆ ಮುಂಜೆನಿರಿಪೆಂಕೆಯ್ಕೊಂಡ

ಕಟ್ಟಾಯಮಮಂ' ಎಂದು ಆತ ನಿರ್ಧಾರ ಮಾಡಿದ್ದಾನೆ. ತನ್ನನ್ನೇ ಮೊದಲು ಸೇನಾಪತಿ ಮಾಡದಲ್ಲಿ ತನ್ನ ಕರ್ತವ್ಯವನ್ನು ಶೀಘ್ರ ನೆರವೇರಿಸಿ ಮುಗಿಸಬೇಕೆಂಬ ಆತುರವೊಂದು ಕಡೆ; ಎಷ್ಟಾದರೂ ಭೀಷ್ಮರು ಪಾಂಡವರನ್ನು ಬಾಲ್ಯಕಾಲದಿಂದಲೇ ಎತ್ತಿ ಸಾಕಿದವರು; ಅವರ ಮೇಲೆ ತುಂಬಾ ಮಮತೆಯುಳ್ಳವರು; ಇವರೂ ಪಾಂಡವರನ್ನು ಕೊಲ್ಲಲಾರರು; ಪಾಂಡವರೂ ಇವರನ್ನು ನೋಯಿಸಲಾರರು; ಅದರ ಮೇಲೆ ಅವರು ಮುದುಕರು; ಹೀಗಾಗಿ ಸಭೆಯಲ್ಲಿ ಕರ್ಣನೇ ಭೀಷ್ಮರ ಸೇನಾಪತಿತ್ವಕ್ಕೆ ಆಕ್ಷೇಪವೆತ್ತುತ್ತಾನೆ. ಮಾತ್ರವಲ್ಲ ತನ್ನ ಉಮೇದ್ವಾರಿಕೆಯನ್ನು ವ್ಯಕ್ತಪಡಿಸುತ್ತಾನೆ. ಪಾಂಡವರೊಡನೆ ಪ್ರಬಲವಾಗಿ ಹೋರಾಡಬೇಕು; ತನ್ನ ಶೌರ್ಯ ಮೆರೆಯಬೇಕು; ಕೊನೆಗೆ ತಾನು ಕುಂತಿಗಿತ್ತ ಭಾಷೆಯಂತೆ ಯುದ್ಧರಂಗದಲ್ಲಿ ಮಡಿಯಬೇಕು; ಹೀಗೆ ಉತ್ಸಾಹಿತನಾಗಿ ಕರ್ಣನು ಮಾತೆತ್ತಿದರೆ, ಭೀಷ್ಮನನ್ನು ಹೀನೈಸುವ ರೀತಿಯಿಂದ ದ್ರೋಣನಿಗೆ ಸಿಟ್ಟುಬಂತು. 'ನಾಲಗೆ ಕುಲವನ್ನು ಹೇಳಿತು' ಎಂದು ದ್ರೋಣನು ಮೂದಲಿಸಿದನು. ತನ್ನ ಕುಲ ಯಾವುದು ಎಂದು ಕರ್ಣನಿಗೀಗ ಸೂರ್ಯಸಾಕ್ಷಿಯಾಗಿ ತಿಳಿದಿದೆ. ಅದನ್ನು ಬಹಿರಂಗ ಪಡಿಸಿ ತನ್ನ ಯೋಗ್ಯತೆ ಸ್ಥಾಪಿಸಲು ಆತನಿಗೆ ಮನಸ್ಸಿಲ್ಲ; ಸಂದರ್ಭವೂ ಸರಿಯೆನಿಸುವುದಿಲ್ಲ. ಉತ್ತಮ ಕುಲದಲ್ಲಿ ಜನಿಸಿದವರೆಂಬ ಈ ಹಾರುವರ ಹಾರಿಕೆಯ ಮಾತಿಗೆ ಕರ್ಣನು ಕೊಟ್ಟ ಉತ್ತರ ಯಾರನ್ನಾದರೂ ತಲೆದೂಗಿಸಬೇಕು.:

ಕುಲಮನೆ ಮುನ್ನ ಮುಗ್ಗಡಿಪಿರೇಂ ಗಳ ನಿಮ್ಮ ಕುಲಂಗಳಾಂತು ಮಾ
ರ್ಮಲೆವರನಟ್ಟಿತಿಂಬುವೆ? ಕುಲಂ ಕುಲಮಲ್ತು, ಚಲಂಕುಲಂ, ಗುಣಂ
ಕುಲಮಭಿಮಾನಮೊದೆಕುಲಮಣ್ಮುಕುಲಂ ಬಗೆವಾಳೀಕಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟುಮಡುಗುಂ

ಹಿಂದೊಮ್ಮೆ ಯುದ್ಧಪರೀಕ್ಷೆಯ ರಂಗಸ್ಥಳದಲ್ಲಿ ಇದೇ ದ್ರೋಣನು ಕರ್ಣನ ಕುಲವನ್ನೆತ್ತಿ ಮೂದಲಿಸಿದ್ದನು. ಆಗ 'ಕರ್ಣ ಪಂದೆಯಂ ಪಾವಡರ್ದಂತೆ' ಮೌನವಾಗಿದ್ದನು.

ತಾನು ಉಚ್ಚಕುಲದವನಲ್ಲವೆಂದೇ ಆಗ ಆತನ ತಿಳುವಳಿಕೆಯಿರಬಹುದು; ಆದರೆ ಇಂದು ಹಾಗಲ್ಲ; ತಾನು ವೀರಕ್ಷತ್ರಿಯನೆಂದು ಗೊತ್ತಿದೆ. ಅದಕ್ಕೆ ತಕ್ಕ ಧೈರ್ಯಮಾಡಿ ದ್ರೋಣನನ್ನು ಪ್ರತಿಭಟಿಸುತ್ತಾನೆ :

'ಗಂಗಾಸುತಂಪೃಥಾಸುತ
ರಂಗೆಲ್ದೊಡೆ ತಪಕೆಪೋಪೆನವರ್ಗಳಕೆಯ್ಯೊಳ್
ಗಾಂಗೇಯನಟಿ'ದೊಡಹಿತರ
ನಾಂಗೆಲೆತಟ್ಟಿ'ಟಿ'ವೆನನ್ನೆಗಂಬಿಲ್ವಿಡಿಯಂ'

ಎಂದು ಪ್ರತಿಜ್ಞೆ ಮಾಡುತ್ತಾನೆ. ಗಂಗಾಸುತನು ಪ್ರಥಾಸುತರನ್ನು ಗೆಲ್ಲಲೇ ಇಲ್ಲ;

ಹಾಗಾಗಿ ಕರ್ಣನು ತಪಸ್ಸಿಗೆ ಹೋಗಬೇಕಾದ ಪ್ರಮೇಯ ಬರಲಿಲ್ಲ. ಶರಶಯ್ಯೆಯಲ್ಲಿ ಮಲಗಿದ ಭೀಷ್ಮನು ಕೆಲಕಾಲ ಬದುಕಿದ್ದರೂ ಅಳಿದಂತೆಯೇ ಅಲ್ಲದೆ ಆತನಿಂದ ಯುದ್ಧಕ್ಕೆ ಏನೂ ಪ್ರಯೋಜನವಾಗಲಿಲ್ಲ. ಹಾಗಾಗಿ ಮುಂದೆ ಕರ್ಣನು ಬಿಲ್ವಿಡಿದನು. ಒಂದು ರೀತಿಯಲ್ಲಿ ಕರ್ಣನ ಭವಿಷ್ಯ ನಿಜವೇ ಆಯಿತು.

ಭೀಷ್ಮನು ಯುದ್ಧರಂಗದಲ್ಲಿ ಶಯನಮಾಡಿದ ಮೇಲೆ ದುರ್ಯೋಧನನು ದ್ರೋಣ, ಕೃಪ, ಕರ್ಣ, ಅಶ್ವತ್ಥಾಮ, ಶಲ್ಯ, ಶಕುನಿ ಮೊದಲಾದವರನ್ನು ಮಂತ್ರಾಲೋಚನೆಗೆ ಬರಿಸಿ, ಇನ್ನು ಮುಂದೆ ನಮ್ಮ ಸೇನೆಯನ್ನು ಮುನ್ನಡೆಸುವವರು ಯಾರಿದ್ದಾರೆ. ಇದ್ದರೆ ಕರ್ಣನೇ; ನಾವೆಲ್ಲರೂ ಕೂಡಿ ಒಮ್ಮತದಿಂದ ಆತನಿಗೇ ವೀರಪಟ್ಟವನ್ನು ಕಟ್ಟುವ ಎಂದು ಹೇಳಿದನು. ಆ ಸಂದರ್ಭದಲ್ಲಿ ದುರ್ಯೋದನನ ಮಾತಿಗೆ ಯಾರೂ ಇದಿರಾಡುವ ಪ್ರಸಂಗವಿರಲಿಲ್ಲ. ಹಿಂದೊಮ್ಮೆ ಕರ್ಣನನ್ನು ಹೀನೈಸಿದ ದ್ರೋಣರು ಮತ್ತೆ ಅಂತಹ ಮಾತು ಹೇಳಲು ಉತ್ಸುಕರಾಗಲೂ ಇಲ್ಲ. ಆದರೆ ಉದಾರ ಹೃದಯನೂ ನಿರ್ಮತ್ಸರನೂ ಆದ ಕರ್ಣನೇ ಎದ್ದುನಿಂತು ದ್ರೋಣರಿಗೇ ಸೇನಾಪತಿ ಪಟ್ಟಕಟ್ಟಬೇಕೆಂದು ಹೇಳಿದನು. ತನ್ನನ್ನು ಎರಡು ಸಲ ಎಲ್ಲರ ಮುಂದೆಯೂ ಕುಲವನ್ನೆತ್ತಿ ಹೀನೈಸಿದವರೆಂಬ ಸಂಕುಚಿತ ಬುದ್ಧಿಯನ್ನು ತೋರ್ಪಡಿಸದೆ ವಿಶಾಲಮತಿಯಾಗಿ ಮಾತನಾಡಿದನು.

"ಸುರಸಿಂಧೂದ್ಭವನಿಂಬಳಿಕ್ಕೆಪೆರರಾರ್ ಸೇನಾಧಿಪತ್ಯಕ್ಕೆ ತ
ಕ್ಕರೆಲೋಕೈಕ ಧನುರ್ಧರಂ ಕಳಶಜಂ ತಕ್ಕಂ.............."

ಎಂದು ಸಮ್ಮತಿಯಿತ್ತನು. ಸ್ವತಃ ದುರ್ಯೋಧನನು ತನಗೊಪ್ಪಿಸಲಾಶಿಸಿದ ಮನ್ನಣೆಯ ಮಣೆಯನ್ನು ತನ್ನ ಹೀನೈಸಿ ಮಾತನಾಡಿದವರಾದರೂ, ಅವರ ಬಿಲ್ ವಿದ್ಯೆಯ ವಿಚಕ್ಷಣೆಯನ್ನು ಬಲ್ಲಾತನು ದ್ರೋಣರಿಗೇ ಗೌರವ ಸಮರ್ಪಿಸಿದನೆನ್ನುವಾಗ ಕರ್ಣನ ಹೃದಯೋದಾರತೆ ಸ್ಪಷ್ಟವಾಗುತ್ತದೆ ಈ ಸಂದರ್ಭವೂ ಕರ್ಣನ ಹಿರಿಮೆಯನ್ನು ಹೆಚ್ಚಿಸುವಂತಿದೆ. ಮೀಂಗುಲಿಗನೆಂದು ಆಗಾಗ ಅವಹೇಳನಕ್ಕೆ ದ್ರೋಣಾದಿಗಳಿಂದ ಗುರಿಯಾದ ಒಬ್ಬ ದಲಿತನಿಂದ ಬ್ರಾಹ್ಮಣನೆಂದು ಹಿಗ್ಗುವ ದ್ರೋಣನ ಕುರಿತು ಈ ಮಾತು ಬಂದೀತೆಂದು ಯಾರೂ ಭಾವಿಸಿರಲಾರರು. ಇದೂ ಕರ್ಣನನ್ನು ಮರೆಯಲಾರದ ವ್ಯಕ್ತಿಯಾಗಿ ಮಾಡಿದೆ. ಕರ್ಣನು ಹೀಗೆ ತನಗೆ ಸಂದ ಗೌರವವನ್ನು ಗುರುವಿಗರ್ಪಿಸಿ ಗುರುಕಾಣಿಕೆಯನ್ನೂ ಸಲ್ಲಿಸಿದನು.

ದ್ರೋಣಾಚಾರ್ಯನು ತನ್ನ ಬಿಲ್‌ಬಲ್ಮೆಗೆ ತಕ್ಕಂತೆ ಘನಘೋರ ಯುದ್ಧ ಮಾಡಿದನು. ಯುದ್ಧಕಾಲದಲ್ಲಿ ಅಶ್ವತ್ಥಾಮಾ ಎಂಬ ಹೆಸರಿನ ಆನೆಯೊಂದು ಸತ್ತುಬಿದ್ದಿತು. 'ಅಶ್ವತ್ಥಾಮಾಹತಃ' ಧರ್ಮಜನು ಉದ್ಗರಿಸಿದನು. ಸತ್ಯವಂತನಾದ ಯುದೀಷ್ಠಿರನ ಬಾಯಿಂದ ಬಂದ ಮಾತು, ತನ್ನ ಮಗನೇ ಸತ್ತಿರಬಹುದೆಂದು ಖಚಿತವಾಗಿ ದ್ರೋಣನು

ಬಿಲ್ಲನ್ನು ಎಸೆದು ಅಸುತೊರೆದನು. ನಿಮಿತ್ತಮಾತ್ರಕ್ಕೆ ಕೊನೆಗಳಿಗೆಯಲ್ಲಿ ಗುರುವಿನ ತಲೆಗೂದಲನ್ನು ಹಿಡಿದೆಳೆದು ಧೃಷ್ಟದ್ಯುಮ್ನನು ದ್ರೋಣನ ಶರೀರವನ್ನು ಕಡಿದು ಹಾಕಿದನು. ಪಿತೃಕರಣದಿಂದ ರೋಷಾವೇಶಗೊಂಡ ಅಶ್ವತ್ಥಾಮನು ವಾದಿಸಿದರೂ ದುರ್ಯೋಧನನು ತಾನು ಹಿಂದೆಯೇ ನಿಶ್ಚಯಿಸಿದಂತೆ ಶಲ್ಯಶಕುನಿಕೃಪಕೃತವರ್ಮಾದಿಗಳ ಸಲಹೆಯಂತೆ ಕರ್ಣನಿಗೇ ಪಟ್ಟಕಟ್ಟುವನು. ಕೃಪನೇ ಇಂತು ಅನುಮೋದಿಸುತ್ತಾನೆ:

'ನೆಗಟ್ದಿ ಕಲಿತನದಚಾಗದ
ಬಗೆತನ್ನೊಳ್ ನೆಗಟ್ತ್ವೆತ್ತುನೆಗಟ್ದಿರೆ ಸಂದಂ
ಗಗಣಿತ ಗುಣಂಗೆ ಕರ್ಣಂ ಬೀರವಟ್ಟವಸರಸಾ'

ದುರ್ಯೋಧನನು ಕರ್ಣನೊಡನೆ ಕೇಳಿಕೊಂಡನು:

'.................................
ಈಯೆಡೆಗೆ ಪೇೞ್ಪೆಱರಾರ್ದೊರೆ ವೀರವಟ್ಟಮಂ
ತಡೆಯದೆ ಕಟ್ಟಿವೈರಿಗಳ ಪಟ್ಟನೆ ಪಾಱಿಸಿ ಕಾವುದೆನ್ನಬೆ
ಳ್ಗೊಡೆಯುಮನೆನ್ನಪಟ್ಟಮುಮನೆನ್ನುಮನಂಗಮಹೀತಳಾಧಿಪಾ'

ಇಷ್ಟೊಂದು ಹೊಗಳಿದ ಭರವಸೆಗೊಂಡಮಾತನ್ನು ಕೇಳಿ ಕರ್ಣನು ಉಬ್ಬಲಿಲ್ಲ; ವಿನಯದಿಂದಲೇ 'ನಿನ್ನಾಳ್ಗಳೊಳಾನಾರದೊರೆಯೆನಗೆ ಕಾರುಣ್ಯಂಗೆಯ್ವೆ' ಎಂದು ಹೇಳಿ ಒಪ್ಪಿಸಿಕೊಂಡನು.

ಮೊರೆಯೆ ಪಟಹಗಳ್ಭೋರೆಂದೋರಂತೆ ಮಂಗಳಗೀತಿಗಳ್,
ನೆರೆಯೆ ಗಣಿಕಾನೀಕಂ, ಬಂದಾಡೆ, ಪುಣ್ಯಜಲಂಗಳಿಂ
ತರಿಸಿಮಿಸಿಸುತ್ತಾಗಳ್ ತಾಂತನ್ನಕೆಯ್ಯೊಳೆ ಕಟ್ಟಿದಂ
ಕುರುಪರಿವೃಢಂ ಕರ್ಣಂಗಾವೀರವಟ್ಟದಪಟ್ಟಮಂ'

ಕರ್ಣನು ಸೇನಾಪತಿ ಪಟ್ಟವೇರಿದನು; ಬೇಡಿದವರ್ಗೆಲ್ಲ ಬೇಕೆಂಬಷ್ಟು ದಾನವಿತ್ತನು. ದರ್ಭಾಸ್ತರಣದಲ್ಲಿ ರಾತ್ರಿಯನ್ನು ಕಳೆದನು. ಬೆಳಕು ಹರಿವಾಗಲೇ ನಿತ್ಯಕರ್ಮ ಮುಗಿಸಿ ಏಕಾಕಿಯಾಗಿ ರಣಭೂಮಿಗೆ ನಡೆದನು. ಶರಶಯನದಲ್ಲಿ ಮಲಗಿರುವ ಭೀಷ್ಮಪಿತಾಮಹನಿಗೆ ತ್ರಿಪ್ರದಕ್ಷಿಣೆ ಬಂದು ಆತನ ಪಾದಪದ್ಮಗಳನ್ನು ತಲೆಯ ಮೇಲಿಟ್ಟುಕೊಂಡು

'ಆಮ್ಮಾತಱಯದೆ ಮುಳಿದುಂ
ನಿಮ್ಮಡಿಯಂನೋಯೆ ನುಡಿದೆನುಱದೇಳಿಸಲೇ
ನೆಮ್ಮಳವೆಮಱವುದಾಮನ

ದುಮ್ಮಚ್ಚಮಜ್ಜನಿಮ್ಮನೆರೆಯಲೆಬಂದೆಂ!

ಕರ್ಣನು, ಈ ಹಿಂದೆಯೇ, ತನಗೊಪ್ಪಿಸಿದ ಸೇನಾಪತಿತ್ವವನ್ನು, ತಾನೇ ಗುರುವಿಗಿತ್ತು, ಆತನಿಗೆ ಇದಿರಾಡಿದ ಅವಿಧೇಯತೆಯೆನಬಹುದಾದ ಮನಃಕಷಾಯವನ್ನು ನಿರ್ಮಲಗೊಳಿಸಿದ್ದನು. ಹಾಗೆಯೇ ಭೀಷ್ಮರ ಸೇನಾಪತಿತ್ವ ಕಾಲದಲ್ಲಿ ತಾನು ಕೌರವಹಿತದ ದೃಷ್ಟಿಯಲ್ಲಿ ಮಾಡಿದ ಸೂಚನೆ ಕೂಡ ಪಿತಾಮಹರ ಮನಸ್ಸಿಗೆ ನೋವುಂಟು ಮಾಡಿದ್ದರೆ ಅದನ್ನು ಪರಿಹರಿಸಿ ಆಶೀರ್ವಾದ ಪಡೆಯಲು ಹೀಗೆ ಬಂದಿದ್ದನೆಂಬುದು ಸ್ಪಷ್ಟ. ಆ ವಿನಯ ವಿಧೇಯತೆಗೆ ಭೀಷ್ಮನೂ ತಲೆದೂಗಿದನು. 'ನೀನೆಮಗೆ ಕುಂತಿಯಗಾಂಧಾರಿಯ ಮಕ್ಕಳ ಲೆಕ್ಕದ ಮೊಮ್ಮನೈ' ಎಂದು ಬಾಯ್ಬಿಟ್ಟು ಹೇಳಿ ಶಲ್ಯನನ್ನು ಸಾರಥಿ ಮಾಡಿ ಕಾದು ಎಂದು ಹರಸಿಬೀಳ್ಕೊಡುವನು. ಹಯೋಪಾಯ ಕುಶಲನಾದ ಶಲ್ಯನನ್ನು ದುರ್ಯೋಧನನು ಕರ್ಣಸಾರಥಿಯಾಗಿ ಒಪ್ಪಿಸಿದನು; 'ಎನ್ನೆಂದ ಒಂದೋಜೆಯೊಳೆಸಗದೊಡಾಂಸ್ಯಂದನದಿಂದಿಳಿದುಪೋಪೆಂ' ಎಂಬ ಶರ್ತದಲ್ಲಿ ಶಲ್ಯನೂ ಸಮ್ಮತಿಸಿದನು.

ಒಂದು ಕಡೆ ಅರ್ಜುನನಿಗೆ ಕೃಷ್ಣನ ಸಾರಥ್ಯ; ಇನ್ನೊಂದೆಡೆ ಹಯಶಿಕ್ಷಾಚತುರ ಶಲ್ಯ ಕರ್ಣನ ಸಾರಥಿ. ಅಂದು 'ಅಂಬಿನ ಮಳೆಗಾಲವಾಯ್ತು' ಕುರುಭೂಮಿ.

'ಪೆತ್ತಳ್ ಕೊಂತಿಯೆ ಮಕ್ಕ
ಳ್ವೆತ್ತರೊಳೆಂಬವರೆ, ಕೊಂತಿಮಾದೇವಿಗಮೊಂ
ದುತ್ತರಮಾದಳ್ ಕರ್ಣಂ
ಬೆತ್ತಕ್ಕನೆ, ಎಂದುಪೊಗಳ್ದುವೆರಡುಂಪಡೆಗಳ್'

'ಮಹಾಪ್ರಳಯಭೈರವ ಕ್ಷುಭಿತಪುಷ್ಕ ವರ್ತಮಾ
ಮಹೋಗ್ರ, ರಿಪುಭೂಭುಜಶ್ರವಂಭೈರವಾಡಂಬರಂ
ಗುಹಾಗಹನಗಹ್ವ ರೋದರವಶೀರ್ಣಮಾದಂದದೇಂ
ಮುಹುಃಪ್ರಕಟಮಾದುದಾರವಿತನೂಭವಜ್ಯಾರವಂ'

ಇಂತು 'ಮೂರು ಲೋಕಮುಂ ಕರ್ಣಾರ್ಜುನನರ ಯುದ್ಧಮಂ ನೋಡಲ್ ನೆರೆದಿದ್ದಿತು. ಇನ್ನೊಂದೆಡೆ ಭೀಮಸೇನನು ದುರ್ಯೋಧನ ದುಶ್ಶಾಸನರನ್ನುಳಿದು ಕೌರವರೆಲ್ಲರನ್ನೂ ಜೀರಿಗೆಯೊಕ್ಕಲ್ಮಾಡಿ ಮತ್ತೆ ದುಶ್ಶಾಸನನನ್ನೂ ಗದೆಗೊಂಡವನಿಯೊಳುರುಳ್ಚಿ, ಆತನ ಗಂಟಲನ್ನು ಮೆಟ್ಟಿ ಅವುಂಕಿ ಕೊಲ್ಲುವಾಗ ದುರ್ಯೋಧನಾದಿಗಳೆಲ್ಲರೂ ಮಿಳ್ಮಿಳನೆ ನೋಡುತ್ತಿದ್ದರು. ದುಶ್ಶಾಸನನ ರತ್ನಮಕುಟದ್ಯೋತೋತ್ತಮಾಂಗವು ಪುಡಿಯೊಳ್ ಹೊರಳಿತು. ದ್ರೌಪದಿಯನ್ನು ಭೀಮನು ಅಲ್ಲಿಗೆ ಬರಮಾಡಿಸಿ ದುಶ್ಶಾಸನನ ಎದೆಯನ್ನು ಬಗೆದು ಹರಿದ ನೆತ್ತರನ್ನು

ಕಯ್ಯಿಂದ ಮೊಗೆ ಮೊಗೆದು ಆಕೆಯ ಬಿಚ್ಚಿದ ಮುಡಿಯನ್ನು ಬಾಚಿ, ಕಟ್ಟಿಸಿ, ಆತನ ಕರುಳುಗಳನ್ನು ಮುಡಿಯಿರಿಸಿದನು. ಅಷ್ಟೂ ಸಾಲದೆ ಹಿಡಿಂಬೆಯನ್ನೂ ಬರಮಾಡಿ ಆಕೆಯೊಡನೆ ಆತನ ಬಿಸುನೆತ್ತರನ್ನೂ ಕುಡಿ ಕುಡಿದು ರಾಕ್ಷಸಕ್ರೀಡೆಯಾಡಿದನು.

'ಕೌರವನಾಯಕನೂರುಭಂಗಮೊಂದಲ್ಲದುದೆಲ್ಲಮಂ ನೆರಪಿದಂ' ಎಂದು ನುಡಿದು ಗಜರಿ ಗರ್ಜಿಸಿ, ಕಾಲದಂಡಮಂಪೋಲ್ವ ತನ್ನಗದಾದಂಡಮಂಕೊಂಡು ತಿರಿಪಿ ಬೀಸುತ್ತುಂ ಬರ್ಪ ಭೀಮಸೇನನನ್ನು ಕರ್ಣನ ಮಗ ವೃಷಸೇನನು ಮಾರಾಂತನು. ವೃಷಸೇನನನ್ನು 'ಪವನಸುತಂ ಗೆಲ್ಲಂ' ಎಂದು ಅರ್ಜುನನು ಇದಿರಾಗಿ, ಯುದ್ಧದಲ್ಲಿ ಕರ್ಣಸುತನೂ ಮಡಿದನು. ತನ್ನ ಒಡೆಯನ ಒಡಲಿಡುವ ಮೊದಲು ತಾನು ಕಾದಿ ಮಡಿಯಬೇಕು ಎಂಬುದು ಕರ್ಣನ ಸಂಕಲ್ಪ. ದುರ್ಯೋಧನನನ್ನುಳಿದು ಮಿಕ್ಕವರೆಲ್ಲಾ ತನ್ನ ಕಣ್ಣಿದಿರಲ್ಲಿಯೇ ಧೂಳಿದೂಸರವಾದರು. ಆತನಿಗೂ ದುರವಸ್ಥೆ ಸನ್ನಿಹಿತವಾದಂತೆ ತೋರುತ್ತದೆ. ತನ್ನ ನಂತರ ಸಾಯಬೇಕಾದ ಮಗ ವೃಷಸೇನ ತನ್ನ ಕಣ್ಣ ಮುಂದೆಯೇ ಸತ್ತುಹೋದನು; ತಾನಿನ್ನೂ ಸಾಯಲಿಲ್ಲ; ಸ್ವಾಮಿಕಾರ್ಯಕ್ಕಾಗಿ ಮಡಿದರೂ ಚೆನ್ನಾಗಿತ್ತು; ಈ ಅಳಲು ಕರ್ಣನ ಹೃದಯದಲ್ಲಿ ಧಿಗಿಲ್ಲೆಂದು ಹೊತ್ತಿತು!

'ಮಗನಟಿಲೊಂದು ಭೂಪತಿಯ ತಮ್ಮ ನೊಳಾದಟಿಲೊಂದು, ನೊಂದು ಬಿ
ನ್ನಗೆಮೊಗದಿಂದೆ ಕುಂದಿಫಣೀಕೇತನನಿರ್ದಟಿಲೊಂದು, ತನ್ನನಾ
ವಗೆಯುರಿಯಟ್ಟಿವೋಲಳುರೆ ತನ್ನನೆಗಟ್ತಿಗೆಮುಯ್ವನಾಂತು ಮುಂ
ಮೊಗಳಿಸಿ ಬಟ್ದುದಂ ನೆನೆದು ಕರ್ಣನಸುಂಗೊಳೆ ಬಂದು ತಾಗಿದಂ'

ಕರ್ಣನೇನೋ ಹೋರಾಡುತ್ತಿದ್ದನು; ಆದರೆ ಹಿಂದಿನ ಹುಮ್ಮಸ್ಸು ಇಲ್ಲ. ಹೇಗಿರಬೇಕು? ಪಾಂಡವರು ಸೋದರರೆಂದು ತಿಳಿದಿದೆ. ತಾಯಿ ಕುಂತಿಗೆ ಪಾಂಡವರನ್ನು ನೋಯಿಸೆನೆಂದು ಭಾಷೆಯಿತ್ತೂ ಆಗಿದೆ. ಭೀಷ್ಮದ್ರೋಣರಂಥವರೇ ಯುದ್ಧದಲ್ಲಿ ಮಲಗಿದರು. ದುರ್ಯೋಧನನನ್ನುಳಿದು ಕೌರವರೆಲ್ಲರೂ ಹತರಾದರು. ಮಗ ವೃಷಸೇಣನೂ ಸತ್ತ. ವೀರಮರಣವೊಂದೇ ತನ್ನ ಗುರಿ. ಹಾಗಾಗಿ ಕರ್ಣನಲ್ಲಿ ಹುಮ್ಮಸ್ಸು ಇಲ್ಲ; ಇದನ್ನು ಕಂಡು ಅರ್ಜುನ ಮೂದಲಿಸಿದನು. ಅದಕ್ಕೆ ಕರ್ಣನ ಉತ್ತರ ತುಂಬಾ ಮೆಚ್ಚತಕ್ಕದ್ದು.

'ಒಡಲುಂಪ್ರಾಣಮುಮೆಂಬಿವು
ಕಿಡಿಲಾದುವು ಜಸಮದೊಂದೆ ಕಿಡದದನಾಂಬ
ಲ್ವಿಡಿವಿಡಿದು ನೆಗಟ್ದೆನು'

ಎನ್ನುತ್ತಾನೆ. ತನಗೆ ಕೆಡುವ ಒಡಲು ಪ್ರಾಣಗಳ ಮೇಲೆ ಆಸೆಯಿಲ್ಲ; ಶಾಶ್ವತವಾದ ಯಶಸ್ಸೊಂದೇ ತಾನು ಬಯಸುವುದು. ಅದಕ್ಕಾಗಿ ಈ ಹೋರಾಟವೆಂದು ತನ್ನ ಪ್ರಕೃತದ ನಿಲುವನ್ನು ಸಮರ್ಥಿಸುತ್ತಾನೆ. ಕರ್ಣಾರ್ಜುನರ ಯುದ್ಧ ಭೀಕರವಾಯಿತು.

ಆಗ ಶಲ್ಯನು ಈ ಬಾಣಗಳಿಂದೇನು ಫಲ? ದಿವ್ಯಾಸ್ತ್ರಗಳನ್ನು ತೊಡು ಎಂದಾಗ 'ಪುರಿಗಣೆಯಂ ಪಿಡಿಯೆಂ' ಎಂದು ತಾನು ಕುಂತಿಗಿತ್ತ ಭಾಷೆಯ ನೆನಪಾಯಿತು. ಹಾಗಾಗಿ ಶಲ್ಯನ ಮಾತಿಗೆ ಸಮ್ಮತಿಸದೆ ಪುರಿಗಣೆಯ ಬತ್ತಳಿಕೆಗೆ ಕೈಚಾಚದೆ ರೌದ್ರಶರದ ಬತ್ತಳಿಕೆಗೆ ಕೈಯಿಕ್ಕಿದರೆ, ಅದರಿಂದ ಸರ್ಪಾಸ್ತ್ರವೊಂದು ಸಿಡಿದು ಕರ್ಣನ ಕೈಸೇರಿತು. ಅದನ್ನು ಕರ್ಣನು ಕೈಯಲ್ಲಿ ತಿರುಗಿಸಿ ಗುರಿ ನೋಡಿದಾಗ, ಸುರರ್ ಮೊರೆಯಿಟ್ಟರ್! ಅದು ತನಕ ನಡನಡನಡುಗಿ ನಿಂತಿದ್ದ ಸುಯೋಧನನ ರಾಜಶ್ರೀಯೂ ಸಡಿಲಿಸಿದ ತೋಳನಾಗೊಮ್ಮೆ ಬಿಗಿಮಾಡಿಕೊಂಡಳು. ಕರ್ಣನು ಆ ಬಾಣವನ್ನು ಆಕರ್ಣಾಂತ ಸೆಳೆದನು. ಅಷ್ಟರಲ್ಲಿ ಶಲ್ಯನು ಬಾಣದ ನೋಟವನ್ನು ಎದೆಗೆ ಗುರಿಯಿಡದೆ ತಲೆಗೆ ಏಕೆ ಗುರಿಯಿಡುತ್ತಿಯೇ? ಎಂದು ತಡೆದನು. ಬಾಣ ಹಾರಿಹೋಗುವಾಗ ಗಾಳಿಗೆ ತೇಲಿ ತಲೆಯಮೇಲೆ ಹಾಯ್ದರೆ ವ್ಯರ್ಥವಾಗುವುದು. ಎದೆಗೆ ಗುರಿಯಿಟ್ಟರೆ ತೇಲಿದರೂ ತಲೆಗೆ ತಾಗೀತು ಎಂಬುದು ಶಲ್ಯನ ಸೂಚನೆಯಾಗಿತ್ತು; ಅದು ಸರಿಯೇ ಇತ್ತು.

ಮನಸ್ಸಿನಲ್ಲಿಯೇ ಕರ್ಣನಿಂತು ಬಗೆದನು:

'ಎನಿತುಂಶಲ್ಯನ ಪೇಟ್ದಪಾಂಗೆ ತೊದಳಿಲ್ಲಿಂತಾದೊಡಾಶಕ್ರ ಪು

ತ್ರನನಾಂ ಕೊಂದೊಡೆ ಧರ್ಮ ಪುತ್ರನಟಿಗುಂ ತಾಯೆಂದೆಮುಂಕೊಂತಿಬಂ

ದಿನಿಸಂ ಪ್ರಾರ್ಥಿಸಿಪೋದಳೆನ್ನನದನಾಂ ಪೂಣ್ದಿರ್ದೆ ನಿರ್ದಾಗಳೊ

ಳ್ಪಿನಪೆರ್ಮಾತಿನ ನನ್ನಿದೊಳೊಡಂಬಟ್ಟಿರ್ಪುದಂ ಮಾಟ್ಪೆನೇ'

ಶಲ್ಯ ಹೇಳಿದ ಮಾತು ಶತ್ರು ಹನನಕ್ಕೆ ಸಮರ್ಥನೀಯವೇ. ಆದರೆ ನಾನು ಅರ್ಜುನನನ್ನು ಕೊಂದರೆ ಧರ್ಮಪುತ್ರನೂ ಸಾಯುವನು, ತಾಯಿಯಾಗಿ ಕುಂತಿ ನನ್ನೊಡನೆ ಬೇಡಿಕೊಂಡ ಮಾತಿಗೆ ವ್ಯತಿರಿಕ್ತವಾಗಿ ನಡೆದರೆ ನನ್ನ ಸತ್ಯ ಹಾಳಾಗುವುದು ಎಂದು ಚಿಂತಿಸುತ್ತಾ, ಶಲ್ಯನನ್ನು ತಾತ್ಕಾಲಿಕವಾಗಿ ಸಮಾಧಾನಗೊಳಿಸಿ ಸರ್ಪಾಸ್ತ್ರವನ್ನು ಬಿಟ್ಟನು. ಕೃಷ್ಣನು ಬರಸಿಡಿಲಂತೆ ಬರುವ ಬಾಣದ ಆಘಾತದಿಂದ ಅರ್ಜುನನನ್ನು ರಕ್ಷಿಸಲು ರಥವನ್ನು ತಗ್ಗಿಸಿದಾಗ ಕಿರೀಟಿಯ ಕಿರೀಟವನ್ನು ಕೊರೆದು ಬಾಣ ಹಾರಿಹೋಯಿತು. ಅರ್ಜುನನ ಪ್ರಾಣ ಉಳಿಯಿತು! ಅಸ್ತ್ರರೂಪದಲ್ಲಿದ್ದ ಆ ಹಗೆಯ ಹಾವು ಬಂದು ಕರ್ಣನೊಡನೆ ಅರ್ಜುನನಿಗೆ ಮರಳಿ ತನ್ನನ್ನು ಬಿಡು ಎಂದರೆ, ಕರ್ಣನು ನಿನ್ನಂತಹ ನೀಚಮನಸ್ಸಿನವನಿಂದ ನಾನು ನನ್ನ ವೈರಿಯನ್ನು ಇದಿರಿಸಲಾರೆನೆಂದು ಧಿಕ್ಕರಿಸಿದನು. ತನ್ನ ಮಾತನ್ನು ಕೇಳದೆ ಇದ್ದುದರಿಂದ ಶಲ್ಯನೂ ರಥದಿಂದಿಳಿದು ಹೊರಟುಹೋದನು.

ಇಂತಹ ದುರ್ಭರದ ಪ್ರಸಂಗವೊಂದು ಕರ್ಣನೇ ಮೈಮೇಲೆ ಆಹ್ವಾನಿಸಿಕೊಂಡಂತೆ ಆಗಿತ್ತು. ಉಪಾಯವಿಲ್ಲದೆ ತನ್ನ ರಥವನ್ನು ತಾನೇ ನಡೆಸಿ ಮುನ್ನಡೆದನು. ಅಷ್ಟರಲ್ಲಿ ಭೂದೇವಿಯೂ ಆತನ ರಥವನ್ನು ಹಿಡಿದು ನುಂಗಿದಳು. ಕರ್ಣನು ಕೆಸರಲ್ಲಿ ಕುಸಿದ

ಗಾಲಿಯನ್ನು ಎತ್ತುತ್ತಿದ್ದನು. ಈಗ ಕೃಷ್ಣನ ಕುಟಿಲ ರಾಜನೀತಿಯ ಮಂತ್ರೋಪದೇಶ ಅರ್ಜುನನಿಗಾಯಿತು. ಕರ್ಣನನ್ನು ಇಂತಹ ಸ್ಥಿತಿಯಲ್ಲಿಯೇ ಹೊಡೆಯದಿದ್ದರೆ ಮುಂದೆ ನೀನು ಗೆಲ್ಲಲಾರೆ; ಹೊಡೆ ಎಂದು ಕೃಷ್ಣನು ಹೇಳಿದರೆ–

'ಬಱೀವಂ ಸಾರಥಿಯಿಲ್ಲಮೆಯ್ಗೆಮಱ'ಯುಂತಾಗನಿಲ್ಲದೆಂತೀಗಳ

ನಿಜ'ವೆಂ ನೋಡಿರೆ ಮತ್ತ ಮೊಂದಿನಿಸಲುಂ ಕೆಯ್ಯೇಳದೇಕೆಂದು ಮಾ

ನಜ'ಯೆಂ ಕೂರ್ಮೆಯೆ ಮಿಕ್ಕು ಬಂದಪುಸಿದರ್ಕೇಗೆಯ್ವೆನೇನೆಂಬೆನಾಂ

ಮಱ'ದೆಂ ಮುನ್ನಿನದೊಂದು ವೈರಮನಿದಿಂತೇಕಾರಣಂಭೂಧರಾ'

ಕರ್ಣನ ಕುರಿತಾದ ಈ ಅನುಕಂಪ ಸಹಜವಾಗಿ ಅರ್ಜುನನ ನೆತ್ತರ ಗುಣವೇ; ಆದರೆ ಅದು ರಾಜಕೀಯವಲ್ಲ; ಕುರುಕ್ಷೇತ್ರ ಯುದ್ಧದ ಆರಂಭದಲ್ಲಿಯೇ ಅರ್ಜುನನಿಗೆ ಒಮ್ಮೆ ಈ ಮೋಹದ ಬಗೆಯ ಮುಸುಕಿದೆ. ಅದನ್ನು ಕಿತ್ತೊಗೆಯಲು ಶ್ರೀಕೃಷ್ಣನು ಗೀತೋಪದೇಶವನ್ನೇ ಮಾಡಿದ್ದಾನೆ. ಈಗ ಅಷ್ಟು ದೀರ್ಘವ್ಯಾಖ್ಯಾನಕ್ಕೆ ಸಮಯವಿಲ್ಲ; ನಿನ್ನ ಅಭಿಮನ್ಯುವನ್ನು ಹಠಮಾಡಿ ಕೊಂದ, ನಿನ್ನ ಅಗ್ರಜನನ್ನು ನೋಯಿಸಿದ ಈತನಲ್ಲಿ ಮರುಕವೇ? ಹೊಡೆಯೆಂದನು. ಅಷ್ಟರಲ್ಲಿಯೇ ಮಣ್ಣಿನಲ್ಲಿ ಹೂತ ತೇರನ್ನು ಮೇಲೆತ್ತಿ ಕರ್ಣನೂ ಸಿದ್ಧನಾಗಿದ್ದನು. ಆಗ ಅಸ್ತಮಾನ ಸಮಯವೂ ಆಗಿತ್ತು;

"ಬೆಳಗುವ ಸೊಡರ್ಗಳ ಬೆಳಗ

ಗ್ಗಳಿಸುವವೋಲ್ ಪೋಪ ಪೊಟ್ಟಱ'ೂಳ್ ತೇಜಪಂ

ಜ್ವಳಿಸೆತಟಿತಟಿ'ಸೆ ತೊಳ ತೊಳ

ತೊಳಗಿದನಸ್ತಮಯ ಸಮಯದೊಳ್ ದಿನಪಸುತಂ"

ಕಂತುವ ಹೊತ್ತಿಗೆ ಒಮ್ಮೆಗೇ ಸೂರ್ಯನ ಮನಸ್ಸು ಪ್ರಜ್ವಲಿಸುವಂತೆ, ಕೊನೆಯ ಕಾಲದಲ್ಲಿ ಕರ್ಣನು ಅತಿಶಯ ಪರಾಕ್ರಮದಿಂದ ಬಿಟ್ಟ ಬಾಣದಿಂದ ಶ್ರೀಕೃಷ್ಣನೂ ಗಾಸಿಕೊಂಡನು. ಅಷ್ಟರಲ್ಲಿ ಪರಿಸ್ಥಿತಿ ಕೈಮೀರಿತೆಂದು ಅರ್ಜುನನು, ತನಗೆ ಗಿರಿಜೆಯು ಕೊಟ್ಟ ಅಂಜಲಿಕಾಸ್ತ್ರವನ್ನು ಆಕರ್ಣಾಂತಂ ಸೆಳೆದು ಕರ್ಣಾಂತಂ ಮಾಡಲ್ ಬಗೆ ದೆಚ್ಚನು. ಅದರಿಂದಾಗಿ

'ಕೆನ್ನೆತ್ತರಿಂದುಜ್ಜಳಿಸುತ್ತಿರ್ಪನ್ನೆಗಂ ಬಿಟ್ಟು ದುಭರದೆಸಿಡಿಲ್ದತ್ತಕರ್ಣೋತ್ತಮಾಂಗಂ'

'ಚಾಗದ ನನ್ನಿಯ ಕಲಿತನ

ದಾಗರ ಮೆನೆಸೆಗಟ್ಟ ಕರ್ಣನೊಡಲಿಂದೆಂತುಂ

ಪೋಗಲ್ಕಱ'ಯದೆ ಸಿರಿಕರ

ಮಾಗಳ್ ಕರಿ ಕರ್ಣ ತಾಳ ಸಂಚಳೆಯಾದಳ್

"ಕುಡುಮಿಂಚಿನಸಿಡಿಲಿರುಳಿಯೊ

ಲೊಡಂನಡಂಪಡೆಯೆ ಕರ್ಣನೊಳಡಲಿಂದಾಗಳ್
ನಡೆನೋಡೆ ನೋಡೆ ದಿನಪನೊ
ಳೊಡಗೂಡಿದುದೊಂದು ಮೂರ್ತಿತೇಜೋರೂಪಂ

"ಪಿಡಿದನೆಪುರಿಗಣೆಯನೆರ
ಟ್ನುಡಿದನೆ ಬಳ್ಕಿದನೆತಾನೆತನ್ನನೆಚಲಮಂ
ಪಿಡಿದರಿದನೆಂದುದೇವರ
ಪಡೆಗಡಣದೆಪೂಗಟ್ಟು ದಿನತನೂಜನ ಗಂಡಂ"

ಹೀಗೆ ಕರ್ಣನು ಚಾಗದ, ಕಲಿತನದ, ನನ್ನಿಯ ಆಗರವಾಗಿ ಖ್ಯಾತನಾದನು. ಆತನ ಆತ್ಮತೇಜಸ್ಸು ಸೂರ್ಯನಲ್ಲಿ ಕೊನೆಗೆ ಅಂತರ್ಲೀನವಾಯಿತು. ತಾಯಿಗೆ ಕೊಟ್ಟ ಮಾತಿನಂತೆ ಹುರಿಗಣೆಯನ್ನು ಹಿಡಿಯಲಿಲ್ಲ. ಎರಡು ಮಾತು ಹೇಳಲಿಲ್ಲ. ಅಧೀರನಾಗಲಿಲ್ಲ; ಕೊನೆವರೆಗೂ ತನ್ನ ಚಲವನ್ನು ಹಿಡಿದೇ ಅಭಿಮಾನದಿಂದ ವೀರಮರಣ ಪಡೆದನು. ಹೀಗೆಂದು ಲೋಕವೇ ಕರ್ಣನನ್ನು ಸ್ತುತಿಸಿತು.

ತಾನು ತೀರಾ ನಿರಪರಾಧಿಯಾಗಿದ್ದು ಇತರರು ಮಾಡಿದ ತಪ್ಪಿಗೆ, ಜೀವನದುದ್ದಕ್ಕೂ ಶಿಕ್ಷೆಗೆ ಗುರಿಯಾಗಿ ಬೆಂದು ಹೋದ ಮಹಾಜೀವ ಕರ್ಣನದು. ಅವಿವಾಹಿತೆಯಾಗಿ ಮಗುವನ್ನು ಹೆತ್ತದ್ದು ತಪ್ಪಾಗಿದ್ದರೆ ಆ ತಪ್ಪು ಕುಂತಿಯದು; ಸರ್ವಥಾ ಕರ್ಣನದಲ್ಲ. ಅಂತಹ ಕುಂತಿ, ಜೀವಿತದಲ್ಲಿ ಪಾಂಡವರೈವರ ಮಹಾಮಾತೆಯಾಗಿ ಹಸ್ತಿನಾವತಿಯ ದೊರೆ ಪಾಂಡುವಿನ ಮಹಾರಾಣಿಯಾಗಿ, ಲೋಕದ ದೃಷ್ಟಿಯಲ್ಲಿ ದೊಡ್ಡವಳಾಗಿಯೇ ಬಾಳಿದಳು. ಬದುಕಿದಷ್ಟು ಕಾಲ ಸತ್ಯವಂತನೇ ಆಗಿ, ಮಹಾ ದಾನಿಯಾಗಿ, ಮಹಾತ್ಯಾಗಿಯಾಗಿ, ಸಖಿನಸ್ನೇಹದ ಸಲುವಾಗಿ ಆತ್ಮಾಹುತಿಯನ್ನು ಮಾಡಲು ನಿರ್ಧರಿಸಿದ ಮಹಾಚೇತನವಾಗಿ, ಅಸಾಧಾರಣ ಧೀರನಾಗಿ, ಅದ್ಭುತ ಪರಾಕ್ರಮಿಯಾಗಿ ಶಸ್ತ್ರಶಾಸ್ತ್ರನಿಪುಣನಾಗಿ ಇದ್ದರೂ ಕರ್ಣನಂತಹವನು ಬದುಕುವುದು ಲೋಕಕ್ಕೇ ಆದರ್ಶಕರವಾಗಿದ್ದರೂ ಅಂತಹವನು ಬದುಕುವುದು ಯಾರಿಗೂ ಬೇಕಾಗಿರಲಿಲ್ಲವೆಂಬುದು ಒಂದು ವೈಚಿತ್ರ್ಯವಾಗಿದೆ. ಹೆತ್ತ ತಾಯಿಯೇ, ಜನಿಸಿದ ದಿನದಂದೇ ಆತನನ್ನು ಗಂಗಾನದಿಯ ಪ್ರವಾಹಕ್ಕೆ ಎಸೆದಳು. ಶತಯಾಗ ಮಾಡಿದ ಪುಣ್ಯಫಲದಿಂದ ಸ್ವರ್ಗಪದವಿ ಪಡೆದ ಇಂದ್ರನೇ, ಕರ್ಣನು ಬದುಕಬಾರದೆಂದು ನಿರಪರಾಧಿಯಾದಾತನು ಸಾಯುವ ಸಲುವಾಗಿ ಆತನ ಚರ್ಮಕಂಟಿದ್ದ ವಜ್ರಕವಚವನ್ನು ಕೇಳಿ ಕಿತ್ತುಕೊಂಡನು. ದ್ರೋಣಾಚಾರ್ಯನಂತಹ ಉತ್ತಮ ಕುಲಜನೂ, ವಿದ್ಯಾಪಾರಂಗತನೂ, ಸ್ವತಃ ಗುರುವೂ ಆದವನೇ ಎಲ್ಲರ ಮುಂದೆ ಕರ್ಣನನ್ನು ಕುಲಹೀನನೆಂದು ಹೀಗಳೆದನು. ಹೊಳೆಯ ಹೊನಲಿಗೆ ಬಿಸಾಡಿದರೂ ಸಾಯದೆ

ಹೇಗೋ ಬದುಕಿ ಬಂದ ತನ್ನ ಮಗನನ್ನು ಅದೇ ತಾಯಿ ಮತ್ತೊಮ್ಮೆಯೂ ಬಂದು ತನ್ನ ಇತರ ಮಕ್ಕಳು ಬದುಕಬೇಕೆಂಬ ಪಕ್ಷಪಾತದ ಸ್ವಾರ್ಥದಿಂದ ಕರ್ಣನನ್ನು ನಿಶಸ್ತ್ರನನ್ನಾಗಿಸಿ ಸಾಯಿಸಲು ಸಿದ್ಧಳಾದಳು. ಇಷ್ಟೇ ಏಕೆ? ಸ್ವತಃ ಪರಮಾತ್ಮನೆಂದು ಪ್ರಸಿದ್ಧಿ ಪಡೆದ ಶ್ರೀ ಕೃಷ್ಣನಿಗೇ ಕರ್ಣನು ಬದುಕಿ ಉಳಿಯುವುದು ಬೇಕಾಗಿರಲಿಲ್ಲ. ಆತನೂ ಭೇದೋಪಾಯ ಹೂಡಿ ಕರ್ಣನು ನಿರ್ವೀರ್ಯನಾಗುವಂತೆ ಹೂಟ ಹೂಡಿ ವಿಜಯಿಯಾದನು. ಹೀಗೆ ಕರ್ಣನು ಬದುಕುವುದು ಇಡೀ ಲೋಕಕ್ಕೇ ಬೇಕಾಗಿರಲಿಲ್ಲ; ಅದು ಆತನ ಯಾವ ಅಪರಾಧಕ್ಕೂ ಅಲ್ಲ; ಅಪರಾಧ ಮಾಡಿದ್ದರೆ ಹೆತ್ತ ತಾಯಿಯಿಂದ ತೊಡಗಿ ಹೊತ್ತ ಭೂಮಿವರೆಗೆ – ದೇವೇಂದ್ರ ಶ್ರೀಕೃಷ್ಣ ಪರಮಾತ್ಮರ ವರೆಗೆ ಅವರೆಲ್ಲರೂ ಅತ್ಯಂತ ಸಂಭಾವಿತರೇ. ಕರ್ಣನ ಜೀವ ಮಾತ್ರ ಆತನು ತೀರಾ ನಿರಪರಾಧಿಯಾಗಿದ್ದರೂ – ಲೋಕದ ಇತರರ ಅಪರಾಧದ ಅಗ್ನಿಯಲ್ಲಿ ಬೆಂದು ಹೋಯಿತು.

ದಲಿತ ಜೀವನದ ಈ ದುರಂತ ವ್ಯಾಸಭಾರತದಲ್ಲಿಯೂ ಬಂದಿದೆ. ಆದರೆ ಪಂಪ ಮಹಾಕವಿ ಇದನ್ನು ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾನೆ, ಕುಲಹೀನನೆಂಬ ಮಾತು ಬಂದಾಗ, ಕರ್ಣನ ಪಕ್ಷವಹಿಸಿ ಪಂಪ ಪ್ರತಿಭಟನೆ ಮಾಡುತ್ತಾನೆ. ಅತ್ಯಂತ ಶಕ್ತಿಯುತವಾದ ಮಾತುಗಳಿಂದ; ಅಂದಿನ ಆ ಕಾಲದ ಪಂಪನ ಆ ಪ್ರತಿಭಟನೆಯ ಗಂಡು ದನಿ ಇಂದಿಗೂ ಪ್ರಸ್ತುತವೆನಿಸಿ, ಎಲ್ಲರ ಕಿವಿಗಳಲ್ಲೂ ಅನುರಣಿತವಾಗುತ್ತದೆ. ಎಲ್ಲರ ಹೃದಯವನ್ನು ಹೊಕ್ಕು ಅನುಕಂಪೆಯ ಅಲೆಗಳನ್ನು ಎಬ್ಬಿಸುತ್ತದೆ. ಆದ್ದರಿಂದಲೇ ಮಹಾಕವಿಯಾದ ಪಂಪನು, ಬದುಕಿದಷ್ಟು ಕಾಲ ವಿರುದ್ಧವಾತಾರಣದಲ್ಲೂ, ದಿವ್ಯ ಮಾನವತೆಯ ಅತ್ಯಂತ ಉತ್ಕೃಷ್ಟ ಗುಣಗಳನ್ನೆಲ್ಲಾ ಅಳವಡಿಸಿಕೊಂಡು ಬಾಳಿದ ಕರ್ಣನ ಸಮಾಧಿಯ ಮೇಲೆ ಈ ಶಾಶ್ವತ ಶಾಸನವೊಂದನ್ನು ಉಲ್ಲೇಖಿಸಿದನು.

'ನೆನೆಯದಿರಣ್ಣ ಭಾರತದೊಳಿಂಪೆಱರಾರುಮನೊಂದೆ ಚಿತ್ತದಿಂ
ನೆನೆವೊಡೆಕರ್ಣನಂನೆನೆಯ ಕರ್ಣನೊಳಾರ್ ದೊರೆ ಕರ್ಣನೇಱುಕ
ರ್ಣನಕಡುನನ್ನಿ ಕರ್ಣನಳವಂಕದರ್ಕಣನ ಚಾಗಮೆಂದುಕ
ರ್ಣನ ಪಡೆವಾತಿನೊಳ್ಪುದಿದುಕರ್ಣರಸಾಯನಮಲ್ತೆ ಭಾರತಂ'

ಮುದ್ದಣ – ಮನೋರಮೆ

ಜೀವಸೃಷ್ಟಿಯ ಮೂಲ ಶೃಂಗಾರ, ಪ್ರೇಮ. ಪ್ರೇಮಶೃಂಗಾರಗಳನ್ನು ಉಳಿದು ಪ್ರಪಂಚದ ಸೃಷ್ಟಿಯ ಮುನ್ನಡೆ ಸಾಧ್ಯವಾಗದು. ಶೃಂಗಾರವೊಂದೇ ರಸ, ಮಿಕ್ಕೆಲ್ಲ ರಸಗಳೂ ಅದರಿಂದಲೇ ಉದ್ಭವಿಸಿದುವು ಎಂದು ಹೇಳಿದ ರಸಶಾಸ್ತ್ರಜ್ಞರಿದ್ದಾರೆ. ತಾಯಿ ಮಕ್ಕಳಲ್ಲಿನ ಪ್ರೇಮ ವಾತ್ಸಲ್ಯವಾಗುತ್ತದೆ; ಭಕ್ತಿಯಾಗುತ್ತದೆ; ಗುರುಶಿಷ್ಯರಲ್ಲೂ ಹಾಗೆಯೇ. ದುಃಖಿತರ ಮೇಲೆ ನಮಗಾಗುವ ಪ್ರೀತಿ ಕರುಣೆಯೆನಿಸುತ್ತದೆ. ಸಾಹಸ ಕಾರ್ಯಕ್ಕೆ ನಮ್ಮಲ್ಲಿ ಉಂಟಾಗುವ ಉತ್ಸಾಹ ಮೂಲವಾದ ಪ್ರೀತಿ ವೀರವಾಗುತ್ತದೆ. ಹೀಗೆ ಶೃಂಗಾರದ, ಪ್ರೇಮದ, ಪ್ರೀತಿಯ ಪ್ರವಾಹವೇ ಜೀವಿಗಳ ಹೃದಯಗಳಲ್ಲಿ ಹರಿದು ನಾನಾ ಭಾವನೆಗಳನ್ನು ಉಂಟುಮಾಡಿ ಹಲವು ಪ್ರೇರಣೆಗಳನ್ನು ನೀಡಿ ಸೃಷ್ಟಿ ಸಾಧನೆ ಮುನ್ನಡೆದಿದೆ.

ಇಂತಹ ಪ್ರೇಮಶೃಂಗಾರಗಳನ್ನು ಬ್ರಹ್ಮಾನಂದಕರವೆಂದೂ ಅದಕ್ಕೆ ದೈವಿಕತೆಯ ರೂಪವಿದೆಯೆಂದೂ ಹೇಳಿದ ಆಧ್ಯಾತ್ಮವಾದಿಗಳೂ ಇದ್ದಾರೆ. ಜಯದೇವ ಕವಿಯ ಪ್ರಸಿದ್ಧವಾದ 'ಗೀತಗೋವಿಂದ'ದ ರಾಧಾಕೃಷ್ಣರ ಪ್ರೇಮ ಶೃಂಗಾರಗಳು ಭಕ್ತರು ಮತ್ತು ದೇವರ ಅನ್ಯೋನ್ಯತೆಯೆಂದೇ ಹೇಳಲಾಗಿದೆ. ಈ ಸಂದರ್ಭದಲ್ಲಿ ಪ್ರಕೃತಿ ಪುರುಷ ಮಿಲನದಿಂದ ಲೋಕ ನಿರ್ಮಾಣವಾಯಿತೆಂಬ ಆಧ್ಯಾತ್ಮಿಕವಾದವನ್ನು ನಾವು ನೆನಪಿಸಿಕೊಳ್ಳಬೇಕು. ಕ್ರಿಶ್ಚಿಯನ್ ಹಾಗೂ ಇತರ ಪುರಾಣಗಳಲ್ಲೂ ಬರುವ ಈವ್ ಮತ್ತು ಏಡಂ ಕಲ್ಪನೆಯೂ ಇದೇ ಆಗಿದೆ. ಉಮರ್ ಖಯ್ಯಂ ಪ್ರಸಿದ್ಧ ಕಾವ್ಯದಲ್ಲಿನ ಶೃಂಗಾರಪ್ರೇಮಗಳು, ಪ್ರಣಯಗೀತಗಳು ಭಕ್ತಿಭರಿತವೆಂದೇ ವ್ಯಾಖ್ಯಾನಿಸಲ್ಪಟ್ಟಿದೆ. ಒಟ್ಟಿನಲ್ಲಿ ಸಭ್ಯರೆಂದು ಹೇಳಿಕೊಳ್ಳುವ ಕೆಲವರು ಪ್ರೇಮ ಶೃಂಗಾರಗಳನ್ನು ಅಸಭ್ಯವೆಂದು ದೋಷದೃಷ್ಟಿಯಲ್ಲಿ ನೋಡುವ ನೋಟ ಸರಿಯುಲ್ಲವೆಂದೂ, ಅದು ಉದಾತ್ತವಾದ ಜೀವಭಾವವೆಂದೂ ನಾವು ತಿಳಿದುಕೊಳ್ಳಬೇಕು.

'ಶ್ರೀರಾಮಾಶ್ವಮೇಧ'ವನ್ನು ಬರೆದ ನಂದಳಿಕೆ ಲಕ್ಷ್ಮೀನಾರಾಯಣ ಕವಿ ನಿಜಜೀವನದಲ್ಲಿ ದಟ್ಟದಾರಿದ್ರ್ಯದಿಂದ ಪಡಬಾರದ ಬನ್ನಕ್ಕೆ ಒಳಗಾದವನು. ಬಹುಶಃ

ಆತನ ಬಡತನವೇ ನಿಮಿತ್ತವಾಗಿ, ಬಡವನ ಕೃತಿಗೆ ಜನತೆ ಬೆಲೆಕೊಡಲಾರದೆಂದು, ಹೆಸರು ಮರೆಸಿಯೇ ಗ್ರಂಥಗಳನ್ನು ಬರೆದು ಪ್ರಚುರಪಡಿಸಿರಬೇಕು. ಬರವಣಿಗೆಯಿಂದ ಬರಬಹುದಾದ ಯಾವುದೇ ಆರ್ಥಿಕ ಲಾಭವೂ ಸಿಗದೆ, ತನ್ನ ಉದ್ಯೋಗದಲ್ಲಿ, ಕುಸ್ತಿಮಾಸ್ತರಿಕೆಯಲ್ಲಿನ ನಿಕೃಷ್ಟವಾದ ಸಂಬಳದಲ್ಲಿ ಜೀವನ ನಿರ್ವಹಣೆ ಕಷ್ಟಕರವಾಗಿ ಮುಂದೆ ಭೀಕರ ಕ್ಷಯರೋಗಕ್ಕೆ ಬಲಿಯಾಗಿ ಅಕಾಲಮೃತ್ಯುವಿಗೆ ತುತ್ತಾದನೆಂದೂ ನಾವು ಅರ್ಥಮಾಡಿಕೊಳ್ಳಬಹುದು. ಆದರೆ ಆತ ತನ್ನ ಅಮರ ಕೃತಿಯಾದ 'ಶ್ರೀರಾಮಾಶ್ವಮೇಧ'ದಲ್ಲಿ ಸೃಷ್ಟಿಸಿದ ಅಮರಪಾತ್ರಗಳಾದ ಮುದ್ದಣ ಮನೋರಮೆಯರು. ಅವರ ಸರಸ ಸಂಭಾಷಣೆ, ಅವರ ಸಹೃದಯತೆ ಇವೆಲ್ಲವೂ ಕಾವ್ಯಕಲ್ಪನಾ ಲೋಕದಲ್ಲಿ ಪರಮೋನ್ನತಿಯನ್ನು ತಲಪುತ್ತವೆ. ಕನ್ನಡ ಸಾಹಿತ್ಯದಲ್ಲಿ ಶಾಶ್ವತ ಜಾಜ್ವಲ್ಯಮಾನವಾದ ಉಭಯಶಿಲ್ಪಮೂರ್ತಿಗಳಾಗಿ ಮೆರೆಯುತ್ತವೆ.

"ಕಾಡುಂ ನಾಡುಂ ಮನೋಜ್ಞಮಾಗೆ ಸಂಪ್ರಾಪ್ತಮಾದ ವರ್ಷಾಕಾಲದೊಳ್ ಒಂದು ದೆವಸಂ ಬೈಗುಂಪೊೞ್ತೆನೊಳೆಂದಿನಂತಿರೆ ಓಲಗಂ ಸರಿಯೆ, ಕಬ್ಬಿಗರಬಲ್ಲಹಂ ಮುದ್ದಣಂ ಅರಮನೆಯಿಂ ಪೊಱಮಟ್ಟು ನೆರೆವೀದಿವಿಡಿದು ಪೊರೆವೀಡಿಂಗೆಯ್ತರ್ಪುದುಂ ಆತನ ಮಡದಿ ಮನೋರಮೆ ದೂರದೆ ಕಂಡೆೞ್ದಿದಿರ್ವಂದು ಕಾಲ್ಗೆ ನೀರಂ ನೀಡಿ ಮತ್ತಂ ಕಯ್ವಿಡಿದು ಒಳಚೌಕಿಗೊಯ್ದು ಮಣೆಯಿತ್ತು ಕುಳ್ಳಿರಿಸಿ ಒಡನೆಯೆ ತನುವಣ್ಣಂ ತಿನಲಿತ್ತು ಕೆನೆವಾಲಂ ಕುಡಿವೊಡಿತ್ತು ಉಪಚರಿಸುತಿರ್ದಳ್. ಈ ಉಪಚಾರದಿನಾತನ ಪಸಿವುಂಬಟಲ್ಕೆಯುಂ ಮುಡಿಯೆ ಕೆಳದಿ ನಱುದಂಬುಲವಂ ಸವಿಯಲ್ಕೆಂದು ಮಡಿದೀಯುತಲಿರೆ ಇಂತು ಸುಖಸಲ್ಲಾಪಂಗೊಳುತಿರ್ದರ್"

ಇಲ್ಲಿ ಕವಿ ತನ್ನ ನಿಜಜೀವನದ ದಾರಿದ್ರ್ಯರೇಖೆಯನ್ನು ದಾಟಿ ಶ್ರೀಮಂತಿಕೆಯ ಎಂದರೆ ಹೃದಯ ಶ್ರೀಮಂತಿಕೆಯ ಎತ್ತರಕ್ಕೇರಿದ್ದಾನೆ. ಆತನು ಸಣ್ಣವನಲ್ಲ; ಕಬ್ಬಿಗರ ಬಲ್ಲಹನು. ಆತನಿರುವ ಮನೆ ಒಂದುವರೆ ರೂಪಾಯಿ ತಿಂಗಳಿಗೆ ಬಾಡಿಗೆ ಕೊಡುವ ಸಣ್ಣ ಕುಟೀರವಲ್ಲ; ಅರಮನೆ. ಆತನ ಮಡದಿಯೇ ಮನೋರಮೆ. ಕಾಲಿಗೆ ನೀರಿತ್ತು ಕೈಹಿಡಿದು ಒಳಗೆ ಕರೆದುಕೊಂಡು ಹೋಗಿ ಮಣೆಯಲ್ಲಿ ಕುಳ್ಳಿರಿಸಿ, ರುಚಿಕರವಾದ ಹಣ್ಣುಗಳನ್ನೂ, ಕೆನೆ ಹಾಲನ್ನೂ ನೀಡಿ ಉಪಚರಿಸುತ್ತಾಳೆ. ಪ್ರೇಮ ಶೃಂಗಾರಗಳ ನೈಸರ್ಗಿಕ ಶಕ್ತಿ ಸಂಪತ್ತಿನಿಂದ ಹೃದಯ ಶ್ರೀಮಂತಿಕೆ ಗಳಿಸಿದ ಈ ಕಾವ್ಯಕಲ್ಪನೆಯ ರಸಿಕ ದಂಪತಿಗಳು, ಅದೇ ಎತ್ತರದಲ್ಲಿ ಕೊನೆವರೆಗೂ ನಿಂತು ನಮ್ಮ ಆರಾಧ್ಯಮೂರ್ತಿಗಳಾಗುತ್ತಾರೆ; ಒಂದು ಭವ್ಯವೂ ನವ್ಯವೂ ಆದ ಸಂಸಾರಸೃಷ್ಟಿಯ ವಿಹಾರದಲ್ಲಿ ವಾಚಕಲೋಕವನ್ನು ತೇಲಾಡಿಸುತ್ತಾರೆ.

ಈ ದಂಪತಿಗಳು ಮೌನಿಗಳಲ್ಲ; ಸರಸಸಂಭಾಷಣಾ ಚತುರರು. ಹಾಗಾಗಿಯೇ

ಸುಖ ಸಲ್ಲಾಪಕ್ಕೆ ಪ್ರಾರಂಭವಾಗುತ್ತದೆ. ಹಗಲೂ ಇರುಳೂ ಸುರಿಯುವ ಹೆಚ್ಚಿನ ಮಳೆಯ ಜಿನುಗಿನಿಂದ ಮನಸ್ಸು ಬೇಸತ್ತಿದೆ. ಆದ್ದರಿಂದ ಏನಾದರೊಂದು ಒಳ್ಳೆಯ ಕತೆ ಹೇಳೆಂದು ಮನೋರಮೆ ಮೃದುಮಾತಿನಿಂದ ಕೇಳುತ್ತಾಳೆ. ಮುದ್ದಣನ ಪ್ರೇಮಪಕ್ಷಿ ಗರಿಗೆದರಿತು. ಮನೋರಮೆ ಉತ್ತೇಜನಗೊಳ್ಳಬೇಕು; ಅದಕ್ಕಾಗಿಯೇ ಆತನ ಮೊದಲ ಸಂಭೋದನೆ "ಪ್ರಾಣೇಶ್ವರಿ" ಎಂದು. ಕವಿಯ ಪ್ರಾಣಕ್ಕೆ ಆಕೆ ಒಡತಿ. ಈಗಾಗಲೇ ನೋಡಿದ್ದೇವೆ ಬಳಲಿಬಂದಾತನ ಕೈಕಾಲ್ಗಳಿಗೆ ನೀರಿತ್ತು ಕೈಹಿಡಿದು ಒಳ ಕರೆದುಕೊಂಡು ಹೋಗಿ, ಸವಿಹಣ್ಣು, ಕೆನೆವಾಲು ನೀಡಿ, ಮತ್ತೆ ಎಲೆ ಮಡಚಿಕೊಟ್ಟು ಆಯಾಸ ಪರಿಹರಿಸಿದಳು. ಅವಳು ಪೂರ್ಣಾರ್ಥದಲ್ಲಿ ಆತನ ಪ್ರಾಣೇಶ್ವರಿಯೇ. ತನ್ನ ಜೀವನ ಒಡತಿಗೆ ಒಳ್ಳೆಯ ಕತೆಯನ್ನೇ ಹೇಳಬೇಕು. ಎಂತಹ ಕಥೆ ಆಗಬೇಕೆಂದು ಅವನೊಡನೆಯೇ ಕೇಳುತ್ತಾನೆ. "ಉಱದೊಡಂ ಅಱದೊಡಂ ಬಟ್ಟೆ ದೋರಿಪರಸಭರಿತಂಚರಿತಂ" – ಎಂಬೀ ಸೂಚನೆಯಿಂದ, ಈ ದಂಪತಿಗಳ ಪ್ರೇಮ ಶೃಂಗಾರಗಳ ಮಾತುಕತೆಯ ಚರಮಗುರಿ ಕೇವಲ ಲೌಕಿಕ ಸುಖಸಂತೋಷವಲ್ಲ, ಅಲೌಕಿಕಾನಂದವೆಂದು ವ್ಯಕ್ತವಾಗುತ್ತದೆ. ಇಷ್ಟು ಸಾಲದ್ದಕ್ಕೆ ಆಕೆಯೇ ಹೇಳುತ್ತಾಳೆ. "ರಾಮಾಯಣದೊಳೇನಾನುಮೊಂದು" ಕಥೆಯೆಂದು. ಕೊನೆಗೆ ಶ್ರೀರಾಮಾಶ್ವಮೇಧದ ಕಥೆ ಹೇಳುವುದೆಂದೂ ನಿಶ್ಚಯವಾಯಿತು. ಮಡದಿಯೊಡನೆ ತುಂಬಾ ಕಾಲ ಈ ಸಂಭಾಷಣೆ ಆತನಿಗೂ ಬೇಕಾಗಿದೆ. ಕತೆ ಬೇಗ ಮುಗಿಯದು, 'ಬಲ್ಗತೆಕಣಾ' ಎನ್ನುವನು. ಆಕೆಗೂ ಅದೇ ಬೇಕಾಗಿತ್ತು; ಆತನೊಡನೆ ಸರಸಸಂಭಾಷಣೆ. ಒಂದೊಂದು ದಿವಸ ಇಷ್ಟಿಷ್ಟು ಹೇಳು ಎನ್ನುವಳು.

ಕತೆ ಹೇಳಲು ಒಪ್ಪಿಗೆಯಾಯಿತು. ಕಥೆಯ ವಸ್ತು ನಿಶ್ಚಯವಾಯಿತು. ಈ ಕಥೆಯನ್ನು ಯಾವ ಧಾಟಿಯಲ್ಲಿ ಹೇಳಬೇಕೆಂದು ಮುದ್ದಣ ಮನೋರಮೆಯೊಡನೆಯೇ ಕೇಳುತ್ತಾನೆ. ಈ ಪ್ರಶ್ನೆಗೆ ಆಕೆಯ ಉತ್ತರ, ಮುದ್ದಣ ಕವಿಯು ಕಾವ್ಯಲೋಕಕ್ಕೆ ನೀಡಿದ ಒಂದು ಶಾಶ್ವತ ಸಿದ್ಧಾಂತ. "ಪದ್ಯಂ ವಧ್ಯಂ, ಗದ್ಯಂ ಹೃದ್ಯಂ. ಹೃದ್ಯಮಪ್ಪ ಗದ್ಯದೊಳೆ ಪೇೞ್ವುದು" ಈ ಮಾತನ್ನು ತನ್ನ ಕಲ್ಪನೆಯ ಪಾತ್ರವಾದ ಮನೋರಮೆಯ ಮುಖದಿಂದ ಕವಿಯೇ ಹೇಳಿದ್ದಾನೆ. ಶ್ರೀ ರಾಮಾಶ್ವಮೇಧದ ಗದ್ಯದೃಷ್ಟಿ, ಅಭೂತಪೂರ್ವವಾದ ಹೃದ್ಯವಾದ ಧಾಟಿಯಾಗಿ ಮುಂದೆ ಜನಪ್ರಿಯವೂ ಆಯಿತು.

'ಹೆಂಡತಿಯನ್ನು 'ಪ್ರಾಣೇಶ್ವರಿ' ಎಂದು ಸಂಬೋಧಿಸಿದ್ದರಿಂದಲೇ ಆಕೆ ಹಿಗ್ಗಿಹೋಗಿದ್ದಾಳೆ. ಉಬ್ಬಿದ ಆಕೆಯಿಂದ ತನಗೆ ಮೆಚ್ಚುಗೆಯಾಗುವ ಬಹುಮಾನವನ್ನು ಪಡೆಯಬೇಕು. ಹಾಗಾಗಿ ಹೇಳುತ್ತಾನೆ:

'ಇಂತಪ್ಪ ನಲ್ಗತೆಯಂ ಬಿತ್ತರಿಸಿದೊಡೆ ಅರಮನೆಯೊಳ್ ರನ್ನಗಡಗಮಂ ಪೊನ್ನ ಕಂಠಿಕೆಯಂ ಮೆಚ್ಚನೀವರ್; ನೀನೀವಿದೇಂ?'

'ಪೆಱತೇಂ, ಎನ್ನನೆ ನಾನೀವೆಂ'

"ಬಲ್ಗಡಸುಗಾರ್ತಿಯ್ಯೆಸೆ! ಅಱಿಯಾ ಮುನ್ನಮೆ ನಿನ್ನ ತಾಯ್ತಂದೆವಿರ್ ನಗಿತ್ತರೆಂಬುದಂ?"

'ಪೋಕೆ! ಇದೇತರ ನುಡಿ; ಪುರಾಣಮನೋದಿದಿಂ ಬಟಿಯಲ್ತೆ ದಕ್ಷಿಣೆಯ ನೀವುದು? ಅರಮನೆಯವರುಂ ಕಬ್ಬಮಂ ಕಂಡಲ್ತೆ ಕಚ್ಚಟಿಯನಿತ್ತರ್? ಆನುಂ ಕತೆಯುಂ ಕೇಳ್ದು ಸೊಗಸಾಗೆ ಬಲ್ಲಂತೆ ಸಮ್ಮಾನಿಸುವೆಂ'.

ಮನೋರಮೆ ಏನು ಕೊಡಬಲ್ಲಳು? ತನ್ನನ್ನೇ ತಾನು ಕೊಡಬಲ್ಲಳು. ಆದರೆ ಆ ಕೆಲಸ ಹಿಂದೆಯೇ ಆಗಿದೆಯೆನ್ನುತ್ತಾನೆ ಆತ. ಬಹುಶಃ ರುಚಿರುಚಿಯಾದ ತಿಂಡಿ ತಿನಸುಗಳ ಆಸೆ ಇರಬೇಕು. ಅದನ್ನು ಮಾಡಿಕೊಡಲು ಅವಳು ಸಿದ್ಧಳೇ. ಆದರೆ ಅವನ ಮನಸ್ಸಿನ ಇಂಗಿತ ಏನು ಎನ್ನುವುದು ಕತೆ ಹೇಳಿ ಮುಗಿದಾಗ ಮಾತ್ರ ಆಕೆಗೆ ತಿಳಿಯಬಹುದು. ವಾಚಕರಿಗೂ ಅದುವರೆಗೆ ಅರಿಯಲೊಲ್ಲದು. ಹೀಗೆ ಮುದ್ದಣ ಪಡೆದ ಈ ಮೆಚ್ಚು ಅತೀವ ರಮ್ಯರೋಮಾಂಚಕ. ಮುದ್ದಣ ಕತೆಹೇಳಲು ಪ್ರಾರಂಭಿಸುತ್ತಾನೆ. ಪ್ರಾಚೀನ ಕನ್ನಡ ಕವಿಗಳ ವಚನ ಧಾಟಿಯಲ್ಲಿ; ಸಂಸ್ಕೃತಭೂಯಿಷ್ಠ ಶೈಲಿಯುಲ್ಲಿ "ಸ್ವಸ್ತಿ ಶ್ರೀಮತ್ಸುರಾಸುರೇಂದ್ರ ನರೇಂದ್ರಮುನೀಂದ್ರ ಫಣೀಂದ್ರಮಣಿಮಕುಟತಟಘಟಿತ...." ಶೈಲಿ ಆಕೆಗೆ ಹಿಡಿಸಲೊಲ್ಲದು. 'ಸಕ್ಕದದೊಂದು ಚೆಲ್ವು' ಎಂದಾತ ಹೇಳಿದರೆ, "ನೀರಿಟಿಯದ ಗಂಟಲೊಳ್ ಕಡುಬಂ ತುರುಕಿದಂತಾಯ್ತು... ತಿರುಳ್ಗನ್ನಡದ ಬೆಳ್ನುಡಿಯೊಳೆ ಪುರುಳೊಂದೆ ಪೇಟ್ಟುದು: ಕನ್ನಡಂ ಕತ್ತುರಿಯಲ್ತೆ" ಎನ್ನುವಳು. ಕನ್ನಡವು ಕಸ್ತೂರಿ ಎಂಬೀ ಪ್ರಸಿದ್ಧ ವಾಕ್ಯವು ಮುದ್ದಣನ ಕೊಡುಗೆ. ಮುದ್ದಣನು ಆರಿಸಿಕೊಂಡ ಶೈಲಿ ಸಂಸ್ಕೃತಭೂಯಿಷ್ಠವಲ್ಲವಾದರೂ ಸಂಸ್ಕೃತರಹಿತವಾದುದಲ್ಲ. "ಸಕ್ಕದವೊಂದೆರನ್ನವಣಿಯಂ ಪೊನ್ನಿಂ ಬಿಗಿದಂತೆಸೆಗುಂ; ಅದಱಿಂ ಕರ್ಮಣಿಸರದೊಳ್ ಚೆಂಬವಳಮಂ ಕೋದಂತಿರೆ, ರಸಮೊಸರೆ, ಲಕ್ಕಣಂ ಮಿಕ್ಕರೆ, ಎಡೆಯೆಡೆಯೊಳ್ ಸಕ್ಕದದ ನಲ್ನುಡಿಮೆಱಿಯೆ ತಿರುಳ್ಗನ್ನಡದೊಳ್ ಕತೆಯನುಸಿರ್ವೆಂ" ಎಂದು ಕವಿ ತನ್ನ ಕಾವ್ಯ ರಚನೆಯ ಲಕ್ಷಣವನ್ನು ತಿಳಿಸುತ್ತಾನೆ. ಇಂತಹ ಒಂದು ಶೈಲಿ ಮುದ್ದಣನದೇ ಶೈಲಿ. ಇದು ಅತ್ಯಂತ ಮೋಹಕ, ಆಕರ್ಷಕ ಹಾಗೂ ಸುಂದರವಾದ ಶೈಲಿಯೂ ಆಗಿದೆ.

ಮಾತುಕತೆಯ ಮಧ್ಯೆ ಕವಿ ಮನೋರಮೆಯನ್ನು 'ರಮಣಿ' ಎಂದು ಒಮ್ಮೆ ಸಂಬೋಧಿಸಿದ್ದಾನೆ. ಮುದ್ದಣನ ಮನಸ್ಸನ್ನು ರಮಿಸುವವಳೆಂಬುದರಿಂದಲೇ ಆಕೆ ಮನೋರಮೆಯಾದಳು. ಕತೆ ತೊಡಗಿತು; 'ಕೇಳೆಲೆ ಬಾಲೆ! ಬಾಲೇಂದುಫಾಲೆ'! ಕವಿಗೇ ಆಗ ಮೂಹತ್ತು ವರ್ಷ ಮೀರಿರಲಿಲ್ಲ; ಸುಮಾರು ಇಪ್ಪತ್ತೈದರ ಹತ್ತಿರ. ಆತನ ಮಡದಿ ಮುಗ್ಧಬಾಲೆ; ಷೋಡಶಿ ಇರಬೇಕು. ಹಾಗಾಗಿಯೇ ಅವಳ ಫಾಲೆ

ಬಾಲೇಂದುವಿನಂತೆ ಸೊಗಸಾಗಿ ಆತನ ದಿಟ್ಟಿಗೆ ಕಟ್ಟಿದೆ. ರಾಮರಾಜ್ಯವನ್ನು ಕವಿ "ಸತ್ಯಲೋಕವಲ್ಲದೊಡು ಸರಸ್ವತೀವಲಾಸಂ... ಭೋಗಿಗಳ್ ಕುಡಿಲಗಾಮಿಗಳಲ್ತು" ಎಂಬೀ ರೀತಿಯಲ್ಲಿ ಶ್ಲೇಷವಿರೋಧಾಭಾಸಾಲಂಕಾರಯುಕ್ತವಾಗಿ ವರ್ಣಿಸಿದಾಗ, ಮನೋರಮೆಗೆ ಆ ಪದಗಳ ಅರ್ಥ ತಿಳಿದುಕೊಳ್ಳಲು ತುಸು ವಿಳಂಬವಾಯಿತೋ ಏನೋ. ಹಾಗಾಗಿ ವರ್ಣನೆ ನಿಲ್ಲಿಸಿ, 'ಮನೋಹರೆ! ಮನೋರಮೆ' ಎಂದು ಸಂಬೋಧಿಸಿ ಆಕೆಯ ಗಮನ ಸೆಳೆಯುತ್ತಾನೆ. ಆ ಬಗೆಗೇ, ಅಲ್ಲಲ್ಲಿ 'ನೋಡ; ಇದೆ; ಇದೆಕೊಳ್! ಎಂಬೀ ಪದಗಳು ಬರುತ್ತವೆ; ಕತೆಯ ವರ್ಣನೆಯ ಕಡೆಗೆ ಗಮನ ಹರಿಸಲು. ಕತೆ ಹೇಳುತ್ತಾ, ಕವಿ ತನ್ನ ಮಡದಿಯೊಡನೆ ಕತೆನಡೆವ ಸ್ಥಳಗಳಲ್ಲಿ ಸಂಚಾರ ಮಾಡುವಂತೆ ಸಂಬೋಧನೆ ಬರುತ್ತದೆ; 'ನಡೆಪೋಪಂ; ಓ! ಇದೆ' ಈ ರೀತಿಯಾಗಿ. ಕತೆಗಾರನಾದ ಕವಿ ಆಗಾಗ ನೋಡು, ಇದೋ, ಪೋಗುವ – ಇತ್ಯಾದಿ ಹೇಳುತ್ತಾ ಇರುವಾಗ ಮನೋರಮೆ ಪ್ರಶ್ನಿಸುತ್ತಾಳೆ. ಇದೇನು ನೋಡು, ನೋಡೆಂದು ಹೊಳೆಯನ್ನೋ ಬೆಳೆಯನ್ನೋ ಏನನ್ನು ವರ್ಣಿಸುತ್ತೀ ಎನ್ನುವಾಗ ಈ ಮಾತು, ಶ್ರೀರಾಮಚಂದ್ರನು ರಾಜ್ಯವಾಳುತ್ತಿದ್ದಾಗ ಶಿಷ್ಯರೊಡನೆ ಅಯೋಧ್ಯೆಗೆ ಆಗಮಿಸಿದ ಆಗಸ್ತ್ಯನು ಅವರಿಗೆ ವರ್ಣಿಸಿ ಹೇಳಿದ್ದೆಂದು ತಿಳಿಸಿ 'ಅದನೆ ಕಂಡುಗಮಂ ಬಳ್ಳದೊಳಳೇದೆನ್ನೆಸೆ" ಎಂದು, ಅಂತಹ ಶ್ರೇಷ್ಠವಾದ ಅಯೋಧ್ಯೆ, ಅದನ್ನಾಳಿದ ಶ್ರೇಷ್ಠನಾದ ರಾಮಚಂದ್ರ, ಅದನ್ನು ನೋಡಿ ಶಿಷ್ಯರಿಗೆ ವಿವರಿಸಿದ ಋಷಿಶ್ರೇಷ್ಠ ಅಗಸ್ತ್ಯ ಇವರೆಲ್ಲರ ಔನತ್ಯವನ್ನು ಒಂದೇ ಮಾತಿನಲ್ಲಿ ಕವಿ ತಿಳಿಸುವನು. ಈ ಮಧ್ಯೆ ಮನೋರಮೆ, 'ರಮಣ'! ಎಂದರೆ, ಮುದ್ದಣ "ಎನ್ನರಸಿ ಎನ್ನುತ್ತಾನೆ. 'ರಮಣ' ಎಂದರೆ 'ಎನ್ನೊಡೆಯ' ಎನ್ನುವಳು. ದ್ವಿತೀಯಾಶ್ವಾಸದ ಕೊನೆಗೆ ಆತನ ಸಂಬೋಧನೆ ಕವಿಗೆ ಪ್ರಿಯವಾದ 'ಪ್ರಿಯೆ' ಎಂಬುದೇ.

ರಸಿಕದಂಪತಿಗಳಾದ ಈ ಮುದ್ದಣ ಮನೋರಮೆಯರು, ಅತ್ಯಂತ ಸ್ವಾರಸ್ಯಕರ ಹಾಗೂ ಕಥೆಯ ಬೆಳವಣಿಗೆಗೆ ಉಪಯುಕ್ತವೆನಿಸಿದ ಸಂಭಾಷಣೆಗಳನ್ನು ಅಲ್ಲಲ್ಲಿ ನಡೆಸುತ್ತಾ ಕಥೆಯ ತಿರುಳನ್ನು ಆಸ್ವಾದಿಸಲು ವಾಚಕರಿಗೆ ಸಹಾಯಕರಾಗುತ್ತಾರೆ. ಕಥೆಯಲ್ಲಿ ಬರುವ ಪಾತ್ರಗಳ ವಿವಿಧ ಮನೋವಿಕಾರಗಳಿಗೆ, ಸುಖದುಃಖಗಳಿಗೆ ಸ್ಪಂದಿಸುತ್ತಾ ಒಮ್ಮೆ ಸಂತೋಷವನ್ನು, ಮತ್ತೊಮ್ಮೆ ಅನುಕಂಪೆಯನ್ನು, ಇನ್ನೊಮ್ಮೆ ತುಂಬು ಕಂಬನಿಯನ್ನೂ ಮಿಡಿಸಿ ಕಥೆಯ ಹೊನಲಲ್ಲಿ ವಾಚಕ ತೇಲಿ ಹೋಗುವಂತೆ ಮಾಡುತ್ತಾರೆ.

ನಾಲ್ಕನೆಯ ಆಶ್ವಾಸದ ಮೊದಲ ಮಾತು 'ಪೆಣ್ಮಣಿ' ಎಂಬ ಸಂಬೋಧನೆ, ಆ ಆಶ್ವಾಸದಲ್ಲಿ, ವಸಂತಕಾಲವನ್ನು ವರ್ಣಿಸಿ, ಆ ವಸಂತಸಮಯದ ಸುಮುಹೂರ್ತದಲ್ಲಿ ಶ್ರೀರಾಮನು ಸೀತೆಯ ಬಂಗಾರದ ಪ್ರತಿಮೆಯಿಟ್ಟು ಅಗಸ್ತ್ಯಋಷಿಯಿಂದ ಉಪದಿಷ್ಟವಾದ ಅಶ್ವಮೇಧವ್ರತವನ್ನು ಪ್ರಾರಂಭಿಸಿದನೆಂದು ಕತೆಹೇಳಲು ಮುದ್ದಣ ತೊಡಗಿದನು.

ಶ್ರೀರಾಮನು ಅಶ್ವಮೇಧಯಾಗವನ್ನು ಪ್ರಾರಂಭಿಸುವಾಗ ಸೀತೆಯನ್ನು ಕಾಡಿಗೆ ಕಳುಹಿಸಿದ್ದನು ಎಂದು ಪ್ರಸ್ತುತ ಕತೆಯಲ್ಲಿ ಹೇಳಬೇಕಾಗಿತ್ತು. ಹಾಗೆ ಹೊನ್ನ ಸೀತೆಯ ಮಾತು ಬಂದಾಗ, ಒಮ್ಮೆಲೇ ದಿಗಿಲುಗೊಂಡ ಮನೋರಮೆ, ಸೀತೆ ಏನಾದಳೆಂದು ಕೇಳುವಳು. ಅಲ್ಲಿ ಸೀತಾವನವಾಸದ ವಿಳಂಬಿತ ಕಥೆ ಬರುತ್ತದೆ. ಗೂಡಿನ ಹಕ್ಕಿ ಮರಿಗಳಿಗೆ ತಿನಿಸು ತಂದು ನೀಡುವುದನ್ನು ನೋಡಿ ಸೀತೆ ತನಗೆ ಮಕ್ಕಳನ್ನು ಪಡೆದು ಲಾಲಿಸಿ ಪಾಲಿಸುವ ಭಾಗ್ಯವಿಲ್ಲವಲ್ಲಾ ಎಂದು ಮರುಗಿ ಚಿಂತಾಕ್ರಾಂತಳಾದುದು, ಆಕೆಯ ಚಿಂತೆಯ ಸುದ್ದಿ ಕೇಳಿ ಶ್ರೀರಾಮನು ಅಂತಃಪುರಕ್ಕೆ ಬಂದು ಸಂತೈಸಿದ್ದು, ಮತ್ತೆ 'ಕೆಲವಾನುಂ ದಿನಂಗಳ್ ಕಳಿಯೆ ಸೀತೆಗೆ ನೀರ್‌ನಿಂದುದು, ಬಸಿರಿಯಾದುದು,' ಈ ವಿವರಗಳು ಸಂಬೋಧನೆಗೆ ಸರಿಯಾಗಿಯೇ ಎಂಬಂತೆ ಸ್ತ್ರೀತ್ವದ ಶ್ರೇಷ್ಠತೆಯನ್ನು, ಸಾರ್ಥಕತೆಯನ್ನು ತಿಳಿಸುವ ಆಕೆಯ ದೋಹದ ವಿಚಾರ ವಿವರವಾಗಿ ಬಂದುದನ್ನು ನಾವು ಗಮನಿಸಿ, ಆ ಸಂಬೋಧನೆಯ ಅರ್ಥವಂತಿಕೆಯನ್ನು ಗುರುತಿಸಬಹುದಾಗಿದೆ.

ಪಂಚಮಾಶ್ವಾಸದ ಪ್ರಾರಂಭದ ಸಂಭೋದನೆ 'ಪ್ರಾಣನಾಯಿಕೆ' ಎಂಬುದು, ಮುದ್ದಣ್ಣನಿಗೆ ಮನೋರಮೆ 'ಪ್ರಾಣನಾಯಿಕೆ' ಎಂಬಿಷ್ಟೇ ಅದರರ್ಥವಲ್ಲ. ಗರ್ಭದಲ್ಲಿ ಕುಲದ ಕುಡಿಯನ್ನು ಹೊತ್ತು ನಲಿವ ಸೀತಾದೇವಿಯೂ ಶ್ರೀರಾಮನಿಗೆ 'ಪ್ರಾಣನಾಯಿಕೆ'. ಆಕೆಗೆ ಋಷಿಪತ್ನಿಯರನ್ನು ಕಂಡು ಅವರೊಡನೆ ಸುಖಸಲ್ಲಾಪ ಮಾಡಬೇಕೆಂಬ ಬಯಕೆ; ಶ್ರೀರಾಮನೂ ಅದಕ್ಕೆ ಸಮ್ಮತಿಸಿ ಲಕ್ಷ್ಮಣನಂಕೂಡಿ ಪೋಗುವುದೆಂದು ಒಪ್ಪಿಗೆ ನೀಡಿದನು. ಸೀತಾದೇವಿಯ ಈ ಬಯಕೆಯೇ, ಶ್ರೀರಾಮನ ಈ ಒಪ್ಪಿಗೆಯೇ ಒಂದು ದುರಂತ ಪ್ರಕರಣವಾಗಿ, "ಅಗಲ್ದಮಡದಿಯಂ ರಘುಜನಂತಿರೆ ಕೆಂಡಾಳೆಂ ನಾಳೆಂ" ಎಂಬ ಅಗಸನ ಮಾತನ್ನು ಬೇಹುಗಾರರಿಂದ ಕೇಳಿದ ಶ್ರೀರಾಮನು ಅಪವಾದಭೀತನಾಗಿ, ತಮ್ಮನೊಡನೆ ಸೀತೆ ಪಾವನೆಯೆಂದು, ಪುಣ್ಯ ಶ್ಲೋಕೆಯೆಂದು ಗೊತ್ತಿದ್ದರೂ 'ಪೆರೆಗೆ ಕರೆಯೆಂತಂತೆಮ್ಮೀಬಟಿ'ಗೆ ಪಟಿ'ಯೊದವಿತ್ತು, ಈ ಜಾನಕಿಯ ದೂಸರೆನಾಕೆಯಂ ಕಾನನಕ್ಕುಯ್ದು ತೊರೆದುಬಾರಾ' ಎಂದನು. ತಪೋವನಕ್ಕೆ ಹೋಗಬೇಕೆಂಬ, ಋಷಿಪತ್ನಿಗಳೊಂದಿಗೆ ಸುಖಸಲ್ಲಾಪ ಮಾಡಬೇಕೆಂಬ ಸೀತಾದೇವಿಯ ಬಯಕೆಯೇ ಆಕೆಗೆ ಮುಳುವಾಗಿ ಲಕ್ಷ್ಮಣನು ಸೀತಾಮಾತೆಯನ್ನು ಕಾಡಿಗೊಯ್ದು ಬಿಡಲು ಸಿದ್ಧನಾದನು. ಈ ಘಟನೆಯ ಪರಿಣಾಮ ಎಂತಹ ಸ್ತ್ರೀಹೃದಯದಲ್ಲೂ ಪುರುಷರ ಕುರಿತು ರೋಷ ಬರಿಸುವಂತಹುದು. ನಿರಪರಾಧಿನಿ ಎಂದು ತಿಳಿದೂ ಶ್ರೀರಾಮ ಸೀತಾದೇವಿಯನ್ನು ಕಾಡಿಗೆ ಕಳುಹಿಸುವನು. ಮನೋರಮೆಯ ಮನಸ್ಸಿನಲ್ಲೂ ತನ್ನ ಪುರುಷನೇ ಆದ ಮುದ್ದಣ್ಣನ ಕುರಿತೂ ಇಂತಹ ಸಂಶಯ ಬರಬಾರದೆಂದೋ ಏನೋ ಕವಿ ಇಲ್ಲಿ ಮಾಡುವ ಸಂಬೋಧನೆ 'ಎನ್ನರನ್ನಗಯ್ಪಿಡಿ' ಎಂದು. ಮುದ್ದಣನು ಕೈಹಿಡಿದದ್ದು ಸ್ತ್ರೀರತ್ನವನ್ನು, ಇಲ್ಲಿ ಆ ಪದಗಳ ಬಳಕೆಯನ್ನು ಸರಿಯಾಗಿ ಗಮನಿಸಿ ಅರ್ಥಮಾಡಿಕೊಳ್ಳಬೇಕು. ಕಾಡಿನಲ್ಲಿ

ಅಣ್ಣನ "ಕಟ್ಟಾಣತಿಯನೊರೆದು ಲಕ್ಷ್ಮಣಂ ಭೂಮಿಜೆಯನುಟಿಸಿಪೋದಂ" ಎಂದು ಪಂಚಮಾಶ್ವಾಸ ಕೊನೆಗೊಳ್ಳುತ್ತದೆ.

ಈ ಸಂದರ್ಭದಲ್ಲಿ ಸ್ತ್ರೀಸಹಜವಾಗಿ ಮನೋರಮೆ ಮರುಕದ ಮುದ್ದೆಯಾಗುತ್ತಾಳೆ. ಷಷ್ಠಾಶ್ವಾಸ ಆಕೆಯ ಕಂಬನಿಗರೆತದಿಂದ ಮೊದಲಾಗುತ್ತದೆ.

"ಆಃ! ಎನ್ನೊಡೆಯ! ನೀನುಮೆಂತು ಕಲ್ಮನನಾದೆಯ್ ಒರ್ತಡವೆಯೆ ದೇವಿಯಂ ಕಾರಡವಿಯೊಳುಟಿದು ಲಕ್ಷ್ಮಣಂಪೋದನೆಂಬೊಡೆ, ಮಯ್ದುನಂಗಮೆಂತು ಮನಮಾದುದೊ! ಮೇಣೆಂತು ದೇವಿಯಾರ್ಗೆ ಕಾವಲಿರದೆ ಪೋದನೊ! ತೊಱೆದು ಪೋಪನ್ನಂ ಸೀತೆಯೆಂತು ಮಱುಗಿದಳೊ! ಅಕ್ಕಟಾ! ಪೆಣ್ಗಳೊಂದು ಬಾಟಿಬಾಟಿಯೆ?"

ಮನೋರಮೆಯ ಈ ಮಾತು, ಕಥೆಯ ಈ ಕರುಣಾಮಯ ಸಂದರ್ಭ. ಕತೆಗಾರ ಮುದ್ದಣ್ಣನಿಗೂ ಗದ್ಗದವೊದಗಿಸಿದೆ, ಸುರಿವಶ್ರುಜಲವನ್ನು ಕಿರುವೆರಲಿನಿಂದ ಮಿಡಿದು 'ಪ್ರಾಣೇಶ್ವರೀ' ಎಂದು ಸಂಬೋಧಿಸುತ್ತಾ ಮೇಲುಗತೆಯನ್ನು ಹೇಳುತ್ತಾನೆ. ಆ ಕತೆ ಕರುಣೆಯ ಕಡಲನ್ನೇ ನಮ್ಮ ಮುಂದೆ ತೆರೆದಿಡುತ್ತದೆ. ಸೀತೆಗಾದ ಈ ಅನ್ಯಾಯ, ಪುರುಷ ಜಾತಿಯಿಂ ಸ್ತ್ರೀ ಕುಲಕ್ಕೇ ಒದಗಿದ ಅನ್ಯಾಯ. ಎಲ್ಲಿ ಮನೋರಮೆ ತನ್ನ ಕುರಿತೂ ಎರಡೆಣಿಸುವಳೋ ಎಂಬ ಶಂಕೆ ಮುದ್ದಣನಿಗೆ ಬಲವಾಗಿ ಬಂದಂತೆ ತೋರುತ್ತದೆ. 'ಮೋಹನಾಂಗೀ' 'ಸುಂದರೀ' ಎಂದು ಎಡೆಎಡೆ ಕರೆಯುತ್ತಾನೆ. ಆಕೆಯ ಮೋಹನ ರೂಪಕ್ಕೆ ತಾನು ಮೆಚ್ಚಿದವನೆಂದೂ ತನ್ನಿಂದ ಅಂತಹ ಅನ್ಯಾಯವಾಗದೆಂದೂ ಅದರ ಧ್ವನಿ ಇದ್ದರೂ ಇರಬಹುದು. ಈ ಕರುಣೆಯ ಕತೆಯನ್ನು ಒಮ್ಮೆಗೇ ನಿಲ್ಲಿಸಿ ಮುಂದಣ ಕತೆಗೆ ತೊಡಗುತ್ತಾನೆ ಮುದ್ದಣ :

'ಅತ್ತ ಅಯೋಧ್ಯಾನಗರಿಯೊಳ್‌ಜನ್ನಗುದುರೆಯಂ....'

'ಸುಡುಸುಡು ನಿನ್ನ ಜನ್ನಗುದುರೆಯಂ! ಆ ಕತೆಗೀಗಳೆ ಪೊಳ್ತೆ? ಆಃ ! ಸೀತೆ ಏನಾದಳಂತಿರ್ದಳೆಂದು ಪೇಳಯ್!'

ಹೀಗೆ ಸೀತಾಮಾತೆಯ ನಿಲುಗಡೆ ಮನೋರಮೆಗೆ ತಿಳಿಯಬೇಕು. ಮುದ್ದಣ್ಣ ವಿವರವಾಗಿ ತಿಳಿಸಿ ಇಂತು ಕೊನೆಗೊಳಿಸುತ್ತಾನೆ:

"ಇಂತೊಪ್ಪುವಾಶ್ರಮವಂ ಕಂಡು ಸಂತಸಮಾಗೆ ವಾಲ್ಮೀಕಿವೆರಸು ಸೀತೆ ಸಂಜೆಯೊಳ್ ಸಂಧ್ಯಾದೇವಿಯಂತಿರೆ ಮುನಿದೋಱಿದೆಲೆವನೆಯಂ ಆಶ್ರಮವಾಸಿಗಳ್ ಪೊಗಟಿ ದೇವರ್ಕಳ್ ಕೊಂಡಾಡೆ ಬಂದು ಪ್ರವೇಶಿಸಿ ಮುನಿಯ ಪಾಲನೆಯೊಳ್ ಸೊಗದಿನಿರ್ದಳ್"

ಆಶ್ರಮದಲ್ಲಿ ಸೊಗದಿ ಇರ್ದ ಸೀತೆಯ ವಿಷಯವನ್ನು ತಿಳಿಸಿದ ನಂತರ, ಮನೋರಮೆ ತಣ್ಣಗಾಗಿರಬಹುದೆಂದೂ, ಸಮಾಧಾನಗೊಳ್ಳಬೇಕೆಂದೂ ಬಯಸಿ, ಮುದ್ದಣ ಸಂಬೋಧಿಸುತ್ತಾನೆ: 'ಎನ್ನ ಕೊಂಡಾಟದ ಜೀವನ ಲಕ್ಷ್ಮಿಯೇ!' ಎಂದು.

'ಇಂತು ಭೂಜಾತೆ....ಪುಣ್ಯಾಶ್ರಮದೊಳಿರ್ಪಿನಂ ಇತ್ತಲ್‌ಸಾಕೇತನಗರದೊಳ್ ಸೀತಾರಾಮಂ'...... ಎನ್ನುವಾಗ ಆರದ ಮನೋರಮೆಯ ಕೋಪದ ಕಿಡಿ ಮತ್ತೆ ಉರಿಯತೊಡಗುತ್ತದೆ.

"ನಲ್ಲ! ಏಮಾತೋ! ಸೀತೆಯನುೞಿದೇತಱ ಸೀತಾರಾಮಂ! ಪೋ! ಮಾಣ್! ಅವಂಗಿನ್ನೆತ್ತಣ ಸೀತೆ? ಅಪ್ಪೊಡಿನ್ನಾ ಕಲ್ಲೆರ್ದೆಯಂ ರಾಮನೊ ಭೀಮನೊ ಏನ್?" ಎಂದು ಸಿಡಿಮಿಡಿಗೊಳ್ಳುವಳು.

"ಎನ್ನ ಕಯ್ಗಳಸಮೆ! ಇಂತುಮೆಂಬರೆ? ಶ್ರೀರಾಮಂ ಕಲ್ಲೆರ್ದೆಯನೆ? ಆಃ ಬೞಿಕ್ಕಮಾತನಪ್ರಳಾಪಮಂ ನೀಂ ಕೇಳ್ದುದಿಲ್ಲ."

'ಏಂ ತಾನೆ ತಲೆವೊಯ್ದುಂ ಮರುಗಿದನೆ?'

'ರಾಮಂ ತಲೆವೊಯ್ದನೆ? ತಾಂ ಯಶೋಧನನಪ್ಪಿನಂ ಲೋಕಾಪವಾದ ಭೀತಿಗಡವಿಗಟ್ಟಿದನಲ್ಲದೆ ಅರಸಿಯೊಳೇಂ ಪಗೆಯೆ?

"ಪಗೆಯೇಂ, ನಗೆಯೇಂ! ಬಡವೆಯೊರ್ವಳ್ ಕಾಡಿಂಗಾದಳ್ಳೆಸೆ" "ಏಂ ತನಗೆ ಪೆಱರ್ ಪೆಂಡಿರಿಲ್ಲೆಂದೆಯೆ?"

ಇದು ಪರಿಹಾಸ್ಯದ ಸಂದರ್ಭವಲ್ಲ. ಶ್ರೀರಾಮನು ಬಹಳವಾಗಿ ಶೋಕಿಸಿದನು ಎಂದು ಮುದ್ದಣನು ಆತನು ದುಃಖದ ರೀತಿಯನ್ನು ವಿವರವಾಗಿ ವರ್ಣಿಸಿದನು. ಶ್ರೀರಾಮನ ದುಃಖವನ್ನು ಎಳೆಎಳೆಯಾಗಿ ಇಲ್ಲಿ ಬಿಡಿಸಿ ಬಿಡಿಸಿ ವರ್ಣಿಸಿದ್ದರಿಂದ ಮನೋರಮೆಗೂ ತುಸು ಸಾಂತ್ವನ ಆಗಿರಬೇಕು!

ಅಷ್ಟಮಾಶ್ವಾಸದ ಆರಂಭದಲ್ಲಿ ಮುದ್ದಣನು ಮನೋರಮೆಯ ಸಿರಿಮುಡಿಗೆ ಇಂತು ಸಂಬೋಧನೆಯ ಹೂಮಾಲೆಯನ್ನು ಸೂಡುತ್ತಾನೆ:

"ಓ ಎನ್ನ ನಿಚ್ಚನಿಡುಗುಂಕುವದ ಬಿಂಕದ ಮೆಚ್ಚುಗಾರ್ತಿ! ಓ! ಎನ್ನ ಇಚ್ಚೆಗಾರನ ಬೆಚ್ಚಪಚ್ಚೆಯ ಕಯ್ಗನ್ನಡಿ! ಓ! ಎನ್ನ ಎಚ್ಚಮಯ್ಗಣ್ಣ ಪೆಣ್ಣೆ! ಓ! ಎನ್ನ ಮೀಂಮಚ್ಚಲಚ್ಚಣದ ಸಿರಿಗಯ್ಯೆ! ಓ! ಎನ್ನ ಮೂಗೋಂಕುಮೂಗೆರೆಯ ಗುಜ್ಜು ಗೊರಲ ತರಳೆ! ಕೇಳ್"

ಇಷ್ಟೊಂದು ಸಂಬೋಧನಾ ಪದಪುಂಜಗಳ ಸ್ವಾರಸ್ಯವೇನು? ಸೀತಾರಾಮರು ಅಗಲಿಕೆಯ ನೋವಿಂದ ನರಳುತ್ತಿರಬಹುದು. ಆದರೆ ನಾವು ಹಾಗಾಗದೆ, ಒಂದಾಗಿ ಸಂದಾಗಿ ಇಲ್ಲಿ ಸುಖಸಂಕಥಾ ವಿನೋದದಲ್ಲಿ ಕಾಲ ಕಳೆಯುತ್ತಿರೋಣ ಎಂಬೀ ಭಾವನೆಯೇ ಈ ಹಲ ಸಂಬೋಧನೆಗಳ ಭಾವಾರ್ಥವೆನ್ನಬಹುದು. ರಾಮನಲ್ಲಿ ಆಕ್ರೋಶಗೊಂಡಾಕೆ ತನ್ನ ಮೇಲೂ ಹರಿಹಾಯಬಾರದೆಂಬ ಸ್ವರಕ್ಷಣೆಯ ಸೂತ್ರವೂ ಇರಬಹುದು.

ಸೀತಾವನವಾಸದ ವರ್ಣನೆಯ ಸಂದರ್ಭದಲ್ಲಿ ಮನೋರಮೆ ಪುರುಷ

ಸಮಾಜದಿಂದ ಶೋಷಿತವಾದ ಸಮಾಜದ ಪ್ರತಿನಿಧಿಯಾದ ಬಂಡುಗಾರ್ತಿ. ಶ್ರೀರಾಮನು ದೇವರ ಅವತಾರ ಎಂಬುದನ್ನೂ ಮರೆತು ಶೋಷಿಸುವ ಪುರುಷ ವರ್ಗದ ಪ್ರತಿನಿಧಿಯೆಂಬಂತಿರುವ ಆತನ ವಿರುದ್ಧ ಸಿಡಿದೇಳುತ್ತಾಳೆ. ಏಕಪತ್ನೀವ್ರತಸ್ಥನೆನ್ನುವುದನ್ನೂ ಮರೆತು, ಏನು ಆತನಿಗೆ ಬೇರೆ ಹೆಂಡಿರಿಲ್ಲವೆಂದೇ ಎಂದು ಕೇಳುವಷ್ಟು ಕ್ರುದ್ಧಳಾಗುತ್ತಾಳೆ. ಮುದ್ದಣನೋ ಆಗ ತೀರಾ ಶಾಂತ. ಆಕೆಯನ್ನು ಸಮಾಧಾನ ಪಡಿಸುವುದು ಆತನ ಕರ್ತವ್ಯ. ಸೀತಾದೇವಿಯ ದುಃಖವನ್ನು ನೆನೆದು ಅಶ್ರುಜಲಧಾರಾಕಾರ ಸುರಿಯುತ್ತದೆ. ಲೋಕಾಪವಾದ ಭೀತಿಯಿಂದ ಮಾತ್ರ ಶ್ರೀರಾಮ ಕಾಡಿನಲ್ಲಿ ಸೀತಾದೇವಿಯನ್ನು ಬಿಟ್ಟುಬರುವಂತೆ ಕಟ್ಟಾಜ್ಞೆ ಮಾಡಿದ ಎಂಬ ಧರ್ಮ ದೀಕ್ಷೆಯನ್ನು ಮನೋರಮೆಗೆ ಮನದಟ್ಟು ಮಾಡಲು ಬಹಳ ಪ್ರಯತ್ನಿಸುತ್ತಾನೆ. ಈ ಪ್ರಯತ್ನ ಭಾಗಶಃ ಫಲಿಸಿದೆ; ಆಕೆ ಮುಂಗತೆಯನ್ನು ಆಲಿಸಲು ಆತುರಗೊಂಡಿದ್ದಾಳೆ. ಶ್ರೀರಾಮನು ಸೀತಾದೇವಿಯನ್ನು ಪುನಃ ಅಯೋಧ್ಯೆಗೆ ಕರೆಸುವ ಸಂದರ್ಭದ ಸಮಾಧಾನಕರ ಕಥಾಸಂಭವವನ್ನು ಆದಷ್ಟು ಶೀಘ್ರ ಕೇಳುವ ಕುತೂಹಲ ಅವಳಲ್ಲಿ ಬಂದಿರಲೂಬಹುದು. ಪ್ರಸನ್ನಳಾದಾಕೆಯನ್ನು 'ಎನ್ನರಸಿ' ಎಂದು ಕರೆದು ಮುದಗೊಳಿಸುತ್ತಾನೆ.

ನವಮಾಶ್ವಾಸದಲ್ಲಿ ಸುಮತಿಯ ಮುಖದಿಂದ ಅಶ್ವವನ್ನು ಹಿಂಬಾಲಿಸಿ ಹೋದ ಶತ್ರುಘ್ನನಿಗೆ ಅಶ್ವಿನೀದೇವತೆಗಳಿಗೆ ಸುರಪಂಕ್ತಿಯಲ್ಲಿ ಎಡೆಮಾಡಿ ಹವಿರ್ಭಾಗ ಸಲ್ಲಿಸಿದ ಚ್ಯವನಋಷಿಯ ಕಥೆಯ ವಿವರ ಕೇಳುತ್ತೇವೆ. ಆ ಕತೆಯಲ್ಲಿನ ಋಷಿಯ ಪ್ರಭಾವ, ದೇವೇಂದ್ರನ ಗರ್ವಹರಣ ಇತ್ಯಾದಿಗಳನ್ನು ಕೇಳಿ ಮನೋರಮೆಗೆ ಮೆಚ್ಚುಗೆ ಆಗಿರಬೇಕು. ಆದ್ದರಿಂದಲೇ ಅಲ್ಲಿನ ಸಂಭಾಷಣೆ "ಮೆಚ್ಚುಗಾರ್ತಿ" ಎಂದು!

ಕತೆ ಮುಂದುವರಿದಂತೆ, ಮುದ್ದಣನ ಸಂಬೋಧನೆಯ ಪದಪಂಕ್ತಿಗಳೂ ಹೆಚ್ಚಾಗುತ್ತಿವೆ.

'ಎನ್ನ ನಿಚ್ಚದ ಪೂಜೆಯ ಕಟ್ಟುಚ್ಚಿನ ಪ್ರಾಣಲಿಂಗಮೆ' 'ಎನ್ನ ಕೈಮೆರ್ಚಿನ ಗೆಡೆಯಾಟದ ಮುತ್ತಿನ ಸೆಂಡೆ', 'ಎನ್ನ ಚೆನ್ನ ಪೊನ್ನರಸಿ' ಇತ್ಯಾದಿಯಾಗಿ. ಕವಿ ಮುದ್ದಣನು ಸಹಜವಾಗಿ ನದಿ, ಬೆಟ್ಟ, ಋತು, ಇಂತಹುಗಳ ವರ್ಣನೆಯನ್ನೇ ಹೆಚ್ಚಾಗಿ ಮಾಡುತ್ತಾನೆ. ಹಾಗೆ, ಅಶ್ವಮೇಧದ ಕುದುರೆ 'ಪಯೋಷ್ಣೀನದಿಯಂ ದಾಂಟಿ ಬಲ್ದೂರಂ ನಡೆನಡೆದು ಪೋಗೆ ಪೆರ್ವೆಟ್ಟಂ ಮುಂ.....' ಎಂದಾಗ, ಶತ್ರುಘ್ನನ ಕುದುರೆಯನ್ನು ಯಾರೂ ಕಟ್ಟಿ ಕಾದಲಿಲ್ಲವೆ? ಆ ವಿವರ ಹೇಳಲಿಲ್ಲವೇಕೆ? ಎಂದು ಮನೋರಮೆ ಕೇಳುತ್ತಾಳೆ. ಶತ್ರುಘ್ನನನ್ನು ಮಹಾಪರಾಕ್ರಮಿ ಎನ್ನಬೇಕು ಕವಿಗೆ. ಬಹುಶಃ ಯುದ್ಧವರ್ಣನೆಗೆ ಹೆಚ್ಚು ಆಸಕ್ತಿಯೂ ಇಲ್ಲದಿರಬಹುದು. ಹಾಗಾಗಿ ದಿನಪನನ್ನು ಹೇಡಿ ಏನು ಕಟ್ಟುತ್ತಾನೆ. ಎಲ್ಲರೂ ಕಪ್ಪಕಾಣಿಕೆಯಿತ್ತು ಮರೆಹೊಕ್ಕರೆಂದು ಸೂಕ್ಷ್ಮವಾಗಿ ತಿಳಿಸುವನು.

ಏಕಾದಶಾಶ್ವಾಸದ ಮೊದಲ ಮಾತು "ಎನ್ನ ಸಿಂಗರದ ಸಿರಿಯೇ" ಎಂದು. ಯಾರನ್ನು ಮೆಚ್ಚಿಸಲು ಹೆಣ್ಣು ಸಿಂಗರಿಸುತ್ತಾಳೋ ಆತ ಮೆಚ್ಚಿದರೆ ಆಕೆ ಸಿಂಗರಿಸಿದ್ದಕ್ಕೆ ಸಾರ್ಥಕ. ಮನೋರಮೆಗೂ ಈ ಕರೆ ಅತೀವ ಹಿತಕರವೇ ಆಗಿರಬಹುದು. 'ಕಾಮಕಲ್ಪವಲ್ಲರೀ' ಇನ್ನೊಂದು ಮಾತು. ಕಲ್ಪವೃಕ್ಷ ನಮಗೆ ಬೇಕಾದ್ದನ್ನು ಕೊಡುತ್ತದೆ. ಮನೋರಮೆ ಮುದ್ದಣನಿಗೂ ಬೇಕುಬೇಕಾದ ರುಚಿರುಚಿಕರವಾದ ತಿಂಡಿತಿನಿಸು ಒದಗಿಸುತ್ತಾಳೆ. ಹಾಗಾಗಿ ಆಕೆ 'ನಸೆಗಾತಿ' ಎಂದರೆ ಸಲುಗೆಯವಳೂ ಆಗಿದ್ದಾಳೆ. ಇಷ್ಟೊಂದು ಸಂಭಾಷಣೆ ನಡೆಸಬೇಕಾದರೆ ಆಕೆ ಮುದ್ದಣನಲ್ಲಿ, ಮುದ್ದಣ ಆಕೆಯಲ್ಲಿ ಸಲುಗೆಯಿಂದ ಇರಲೇಬೇಕಷ್ಟೆ.

ಒಮ್ಮೆಲೇ ಮುದ್ದಣ್ಣನು 'ದೇವಿ' ಎನ್ನುವನು. ದೇವಿ ಎನ್ನುವುದು ಬಲು ದೊಡ್ಡ ಬಿರುದು. ಆಕೆಗೂ ಗಾಬರಿ; ಯಾವ ದೇವಿ? ಎನ್ನುವಳು. ನೀನೇ ದೇವಿಯೆಂದು ಆಕೆಯನ್ನು ಬೆರಗುಗೊಳಿಸುತ್ತಾನೆ. ತಮಾಷೆ ಮಾಡಬೇಕೆಂದು ಇಬ್ಬರಿಗೂ ಮನಸ್ಸಾಗಿದೆ. ತಾನು ಯಾವ ದೇವಿ ಎಂದು ಕೇಳಿದಳು; ನೀನು ರತಿದೇವಿ ಎನ್ನುತ್ತಾನೆ. ಹಾಗಾದರೆ ನೀನು ಕಾಮದೇವನೆಂದು ಆತನಿಗೆ ಬಿರುದು ನೀಡುವಳು. ಈಗ ಮನೋರಮೆಯ ಸಂಬೋಧನೆಯ ಸರದಿ 'ಎಲೆ ಮದನ ಮೋಹನರಾಜ! ನೀನು ಪೇೞ್ದ ರತಿಯಂ ಬಣ್ಣಿಸಿ ಪೊಗಳ್' ಎಂದು ಹೇಳುತ್ತಾಳೆ. ಗಂಡ ಹೊಗಳುವುದನ್ನು ಕೇಳಲು ಯಾವ ಹೆಂಡತಿಗೆ ತಾನೆ ಆಸೆ ಇರಲಾರದು? ಮುದ್ದಣ ತೊಡಗಿದನೇ :

"ಅಸಿಯೊಡಲ ಪೂಗಣ್ಣಪೆಣ್, ಸಸಿಮೊಗದ ಕಿಸುವಾಯ ಪುಸಿನಡುವಿನರಸಿ;
ಪಿಡಿನಡೆಯ ಬಿಡುಜಡೆಯ ನೀರೆ...."

"ಒಡಲು ಅಸಿದೇಂ? ಮೊಗದೊಳೇತ... ಸಸಿ? ಕಣ್ಣೊಳೇತರ ಪೂ? ನಡುವಿ
ನೊಳೇಂ ಪುಸಿ?
ಜಡೆಯಂ ಬಿದಿರ್ಚಲ್ಕೇಂ ದೆವ್ವಮಾಳ್ಪುದೆ? ಪೋ! ನೀಂಕಾಮದೇವನಲ್ತು,
ಭೀಮಂ"

ಹೊಗಳಿಕೆ, ಮನೋರಮೆಗೆ ಮೆಚ್ಚುಗೆ ಆಗಿರಬೇಕು; ಹಾಗಾಗಿ ಮತ್ತೂ ಆತನನ್ನು ಕೆಣಕುವಾಸೆ. ಆಕೆಯನ್ನು ಹೊಗಳಲು ವಾಕ್‌ಸಿದ್ಧಿ ಪಡೆಯಲೆಂದು ಸರಸ್ವತಿಯನ್ನು ಪ್ರಾರ್ಥಿಸತೊಡಗಿ ಮಾಕಾಳಿಯ ಮೈಬಣ್ಣಕ್ಕೆ - ಎನ್ನುವಾಗ. ಆತನನ್ನು ತಡೆದಳು. ಗಣಪತಿಸ್ತುತಿ ಮಾಡದೆ ಇದ್ದ ಕಾರಣ ಇಂತಹ ವಿಘ್ನವೊದಗುತ್ತದೆಂದು, ಯಾವ ಎಡರು ತೊಡರು ಬರದಂತೆ ಗಣಪತಿಯನ್ನು ವರ್ಣಿಸುವನು. ಗಣಪತಿಗೆ ತಿಂಡಿಯಲ್ಲಿ ಆಸೆಯಷ್ಟೆ. ಆದ್ದರಿಂದ ತನಗೆ ಆಕೆ ಕೊಡುವ ಚಕ್ಕುಲಿಗಾರಿಗೆ ಹುರಿಗಡಲೆ, ಕಬ್ಬು ತೆಂಗಿನಕ್ಕಾಗಳಲ್ಲಿ ಆತನಿಗೂ ಪಾಲು ಕೊಡಲು ಒಪ್ಪುತ್ತಾನೆ. ಹೀಗೆ ಮನೋರಮೆ ತನಗೆ ನೀಡಬೇಕಾದ ತಿಂಡಿಗಳ ಪಟ್ಟಿ ಮಾಡುವವನು. ಅದನ್ನು ಕೇಳಿ ನಿನ್ನ ಒಂದು

ಹಲ್ಲಿನ ದೇವರು (ಏಕದಂತ) ಎಷ್ಟು ತಿಂದಾನು? ಎನ್ನುವಳು. ದೇವರು ತಿನ್ನುವುದುಂಟೆ? ತಿನ್ನುವ ದೇವರಿಗೆ ನಾವು ಕೊಡುತ್ತೇವೆಯೆ? ಹಾಗಾದರೆ ಇಷ್ಟೆಲ್ಲಾ ತಿಂಡಿಗಳು ಯಾರಿಗೆ? ಎಂದಾಕೆ ಕೇಳುತ್ತಾಳೆ. ಚಕ್ಕುಲಿಗಾರಿಗೆ ಕಾಮದೇವನಿಗೆ, ಅವಲಕ್ಕಿ ಹುರಿಗಡಲೆ ಮುದ್ದಣನಿಗೆ, ಕಬ್ಬು ಕಬ್ಬಿಗನಿಗೆ, ತೆಂಗಿನ ಕಾಯಿ ನನಗೆ – ಎಂದು ಹಾಸ್ಯ ಮಾಡುವನು. ಹಾಗಾದರೆ ಮನೋರಮೆಗೇನು ಎಂದಾಕೆ ಕೇಳಿದರೆ ಕಬ್ಬಿನ ಸಿಗುರೂ, ಮುಗ್ಗಿದಗಾರಿಗೆ ಹುಡಿಯೂ ಆಕೆಗೆಂದು ನಗೆಯಾಡುವನು.

ಇದೊಂದು ಸುಂದರ ರಸಹಾಸ್ಯದ ತುಣುಕು. ನವರಸಗಳಲ್ಲಿ ಹಾಸ್ಯಕ್ಕೂ ಸ್ಥಾನವಿದೆಯಷ್ಟೆ. ಈ ಹಾಸ್ಯ ಅತಿಪ್ರಸಂಗವಾಯಿತೋ ಎಂದು ಕವಿಯ ಶಂಕೆ. ಹಾಸ್ಯಬೇಕು; ಮಿತಿಮೀರಿದರೆ ಅಪಹಾಸ್ಯ ತಾನೆ? ಆದ್ದರಿಂದ, ಕಾವ್ಯ ರಸಿಕರು ಇಂತಹ ವಿಷಯಗಳಲ್ಲಿ, ಟೀಕೆ ಮಾಡಬಹುದು ಎಂದು ಗ್ರಹಿಸಿ ಆತನೇ ಹೇಳಿಕೊಳ್ಳುತ್ತಾನೆ :

'ಅತಿಪ್ರಸಂಗಂ ಸಾಲ್ಗುಂ, ಇಂತು ವ್ಯರ್ಥಾಳಾಪದಿಂ ಪೊೞ್ತಂಕಳೆವೆಮ್ಮಂ ಲೋಗರ್ ಪೞಿಯರೆ? ಪೋಮಾಣ್, ರಾಮಕಥೆಯನಿನ್ನೊರೆವೆಂ' ಎಂದು ಮುಂದುವರಿಸುತ್ತಾನೆ. ಮುಂದೆ ಯುದ್ಧದ ವರ್ಣನೆ ಬರುತ್ತದೆ. ಬಹುಶಃ ಈ ವರ್ಣನೆ ಕವಿಗೂ ಅಷ್ಟೊಂದು ಹಿತವಿಲ್ಲ; ಕಾವ್ಯದಲ್ಲಿ ಯುದ್ಧವರ್ಣನೆ ಅಗತ್ಯವಿದ್ದಷ್ಟು ಬೇಕು. ಒಮ್ಮೆ ಮುದ್ದಣ 'ಕಾಂತೆ' ಎಂದು ಕರೆದನು. ಬಹುಶಃ ಸಂಗ್ರಾಮವರ್ಣನೆಗೆ ಆಕೆ ಸರಿಯಾಗಿ ಕಿವಿಗೊಡಲಿಲ್ಲವೇನೋ; ಕೂಡಲೇ ಕರೆಯುವನು :

'ಸಕಲಗುಣ ಸಂಪನ್ನೆ ಏಕಗುಣಹೀನೆ' ಎಂದು. ತನ್ನಲಿರುವ ಏಕಗುಣ ಹೀನತೆ ಏನೆಂದು ಮನೋರಮೆಗೆ ತಿಳಿವ ಕುತೂಹಲ!

ಒಳ್ಳೆಯ ಕತೆ ಹೇಳುವಾಗ ಕತ್ತೆಗಳಂತೆ ನಿದ್ದೆಯಿಂದ ತೂಕಡಿಸುವ ಈಯೊಂದು ಗುಣಹೀನತೆ ಎಂದು ಕಟಕಿಯಾಡಿದ. ಮನೋರಮೆ ನಿಜವಾಗಿಯೂ ತೂಕಡಿಸಿರಬೇಕು. ಅದಕ್ಕೇ ವಿಡಂಬನೆ ಮಾಡಿದ್ದು; ಆಕೆ ಕೇಳುತ್ತಾ : 'ತೂಕಡಿಸದೆ ಏನು ಮಾಡಲಿ? ಗುದ್ದಾಟದ ಈ ರಗಳೆಯ ದೀರ್ಘಕತೆ ಯಾರಿಗೆ ಬೇಕು? – ಎಂದು. ಮನೋರಮೆಗೆ ವೀರರಸದಿಂದ ಹಿತವಿಲ್ಲವೇ ಎಂದು ಆತನ ಪ್ರಶ್ನೆ; ಯಾವ ರಸವಾದರೂ ಆದೀತು, ಚೆಲುವಾದ ಸೊಗಸಾದ ಕತೆ ಹೇಳು ಎಂದಳು. ಕತೆ ಮತ್ತೆ ಮುಂದುವರಿಯಿತು.

ಆಮೇಲೆ ದ್ವಾದಶಾಶ್ವಾಸದ ಪ್ರಾರಂಭ :

"ಅತ್ತೆಯ ಮಗಳೆ, ಮುತ್ತಿನಸೆಂಡೆ" – ಈ ಮೆಚ್ಚುಗೆಯ ಮಾತು ಆಕೆಗೂ ಉಲ್ಲಾಸ ನೀಡಿರಬಹುದು. ಆದರೂ ತನ್ನನ್ನು ಹೊಗಳಿದ್ದು ಸರಿಯೆನ್ನುವುದು ಹೇಗೆ? ಕಪಟ ಮುನಿಸು ತೋರಿಸಿ, ಸುಮ್ಮಗೆ ಈ ರೀತಿ ಹೊಗಳಿ ಹೊಗಳಿ ಕರೆಕರೆ ಮಾಡಬೇಡ, ಕತೆ ಮುಂದುವರಿಸು; ತಲೆ ನೋವಾಗುತ್ತದೆ – ಎನ್ನುವಳು. ಆತ ಮುಂದುವರಿಸಿದನು.

ಕತೆ ಮುಂದುವರಿಯುತ್ತಿದ್ದಂತೆ, ಮನೋರಮೆಯ ಮನಸೆಳೆವ ಹೊಸ ಹೊಸ ಸಂಬೋಧನೆಗಳನ್ನು ಮುದ್ದಣ ಹೊಸೆಯುತ್ತಾನೆ. 'ಎನ್ನಬಿತ್ತರದ ಚಿತ್ತರದ ಬೊಂಬೆ! ರಂಬೆ! ಎನ್ನುವನು. ಬೊಂಬೆಯನ್ನು ನಮಗೆ ಬೇಕಾದ ಸುಂದರಾಕಾರದಲ್ಲಿ ರೂಪಿಸಬಹುದು. ಸಹಜವಾದ ಹುಟ್ಟಿನಲ್ಲಿ ಆದ ರೂಪವನ್ನು ನಮಗೆ ಬೇಕಾದಂತೆ ಮಾಡಲು ಆಗದು. ಹಾಗೆ ರೂಪಿಸಿದ ಚಿತ್ರವೋ ಸ್ವರ್ಗಲೋಕದ ಅಪ್ಸರೆ ರಂಬೆಯಂತೆ ಆಗಲೂಬಹುದು. ಮನೋರಮೆ ಮುದ್ದಣನ ಕಣ್ಣಿನ ಈ ಲೋಕದ ಸ್ತ್ರೀ ಸೃಷ್ಟಿಯಲ್ಲ ದೇವಲೋಕದ ಅಪ್ಸರೆ, ರಂಬೆ! 'ಎನ್ನ ಮೋಹದ ಗಿಳಿಯೆ' ಮುತ್ತಿನ ಆತನ ಕರೆ, ನಾವು ಪ್ರೀತಿಯಿಂದ ಸಾಕಿದ ಗಿಳಿ ನಮ್ಮ ಕೈಯಲ್ಲಿ ಕುಣಿಯುತ್ತದೆ. ನಾವು ಹೇಳಿದಂತೆ ಹೇಳುತ್ತದೆ; ಮೋಹಕವಾಗಿರುತ್ತದೆ. ಮುದ್ದಣನಿಗೆ ಮನೋರಮೆಯೂ ಅಂತೆಯೇ.

ಕತೆ ಸಾಗುತ್ತದೆ. ಯಜ್ಞಾಶ್ವ ಅರಣ್ಯಮುನಿಯ ಆಶ್ರಮಕ್ಕೆ ಬಂತು. ಅದರ ಹಿಂದೆ ಶತ್ರುಘ್ನ ಮತ್ತು ಬಲಸಮೂಹ. ಅವರಿಗೆಲ್ಲಾ ಋಷಿ ಸರ್ವಾತಿಥ್ಯ ಮಾಡಿ ಸತ್ಕರಿಸಿದನು. ಕಾಡಿನ ಜೋಗಿಯೊಬ್ಬನು ಈ ಬೃಹತ್‌ಸೇನೆಗೆ ಆತಿಥ್ಯ ಮಾಡಿದನೆಂದಾಗ ಆಕೆಗೆ ಪರಮಾಶ್ಚರ್ಯ!

'ಆತಿಥ್ಯಮೆಂದೊಡೇಂ ಬಱಿದೆ ಬಾಯುಪಚಾರಮೆ?'

'ಅಲ್ತಲ್ತು, ಬಾಯುಪಚಾರಮಲ್ತು. ಬಂದರ್ಗೆ, ಕೈಗೆಕಾಲ್ಗೆ ನೀರಿತ್ತು ಕುಳ್ಳಿರಿಸಿ, ಸವಿಗೂಳನಿಕ್ಕಿ ಪೂವಿಂ ಸಿಂಗರಿಸಿ ಬಾವನ್ನದಿಂ ಸೊಗಸುಗೆಯ್ದು ಒಡನಿರ್ದು ನುಡಿದು ನಡೆದು ಮನ್ನಿಪುದು'

"ಎನಗಿದಚ್ಚರಿ. ಎಂತುಟಾರ್ತಂ?"

"ಏಂ ಮುನಿಗಳೊಂದು ಜಪದ ತಪದ ಮಂತ್ರದ ಬಲ್ಮೆಯೇಂ ಕಿಱಿದೆ."

"ಆವುದೊ ಮಂತ್ರಂ."

"ಆವುದೇಂ? ಏಕಾಕ್ಷರಿ, ದ್ವ್ಯಕ್ಷರಿ, ತ್ರ್ಯಕ್ಷರಿ, ಚತುರಕ್ಷರಿ, ಪಂಚಾಕ್ಷರಿ, ಷಡಕ್ಷರಿ, ಮುಂತಪ್ಪ ಪ್ರಸಿದ್ಧ ಮಂತ್ರಗಳೊಳವಲ್ತೆ!"

"ಅಂದತಿರ್ಕೆ, ನಿನ್ನನ್ನರಪ್ಪ ಕಬ್ಬಿಗರ್ ಮನೆವಾೞ್ತೆಯೊಳಿನಿಸೊಂದು ಗೊಡವೆಗೊಳ್ಳದೆ ಕೆಮ್ಮ ಕೆಮ್ಮನೆ ಪಾೞ್ಗತೆಂಱು ಕಬ್ಬದೊಳೇಪೋೞ್ತುಂಬೆಮೆಗೊಂಡಿರ್ಪರಲೇ, ಅವರ್ಗೇಂ ಬಟ್ಟೆಯೊ? ಉಣಲೇಂ, ತಿನಲೇಂ? ಅಂತಿರೊಂದು ಜಪಮುಂ ಪಿರಿಯು ತಪಸಿಗಳತ್ತಣಿಂ ಉಪದೇಶಂಗೊಂಡೊಡಾಗದೆ?"

"ಏಂ, ಎಮ್ಮವರೊಂದಿರವಿಗೆ ನಗುವಾ? ತಾನೆ ಬಯುಸಿದೊಡೆಮೆಯುನಾಗಳೆತಂದೀವ ಮಂತ್ರದ ಜಪದೊಂದು ನೆರಂ

ತಮ್ಮೊಳೊಂದಿರದೊಡಲ್ತೆ ಕಾಡಜೋಗಿಗಳತ್ತಣಿನುಪದೇಶಂ. ತಮ್ಮೊಂದೆ ನುಡಿಯ ಬಲ್ಪಿಂ ಮೂಜಗಮುಮನಱಿಯಿಸುವ ಉಱಿಯಿಸುವ ಪೊಗಟ್ವೆತೆಗಟ್ವೆ ಕೇಳ್ವೆ ಆಳ್ವೆ ತಾಳ್ವೆ ತೂಳ್ವೆ ಪೊಟ್ವೆ ಪೇಟ್ವೆ ಬಾಟ್ವೆ ಸಿಂಗರದ ಬಣ್ಣಗಬ್ಬಿಗರೆಮ್ಮ ತೆಱನನಿನ್ನುಂ ನೀನಱಿಯಯ್"

ಇದನ್ನು ಕೇಳಿ ಮನೋರಮೆಗೆ ಬೆರಗಾಗುತ್ತದೆ; ತಮ್ಮ ಬಡತನವೆಲ್ಲಾ ನೀಗಲಾಡಿಸುವ ಮಂತ್ರ ಆತನಿಗೆ ಸಿದ್ಧಿಸಿದೆಯೆಂಬ ಸುದ್ದಿ ನಿಜವಾಗಿಯೂ ಸಂತೋಷದ್ದೆ.

"ಎನ್ನೆ.ಱಿಯ! ಅದಾವೊದೋ ಮಂತ್ರಮೆನ್ನೊಳುಸಿರ!"

"ಚಿಃ! ಪೆಣ್ಗಳ್ಗೆ ಮಂತ್ರೋಪದೇಶಂ ಸಲ್ವುದೆ"

"ಆನಱಿಯೆನೆ? ನೀನಾಗಳೆಂದ ಮಂತ್ರಂಗಳೊಳಾವುದದಱ ಪೆಸರೇನೆಂದು ಕೇಳ್ದೆಂ"

"ಆಗಳೆಂದ ಮುನಿಗಳ ಮಂತ್ರಂಗಳೊಳಲ್ತು; ಎಮ್ಮ ಮಂತ್ರಂಗಳ ಬಗೆ ಬೇಱೆ, ಕಿರಿದಲ್ತು ಬಲ್ಪಿರಿದು, ಒಂದಕ್ಕಮರಮಲ್ತು ಎರಡಲ್ತು ಮೂಱಲ್ತು ನಾಲ್ಕೈದಲ್ತು ಆಱುಮಲ್ತು ಏಟಕ್ಕರದ ಬೀಜಮಂತ್ರಂ. ಸಪ್ತಾಕ್ಷರೀಮಂತ್ರಮೆಂದು ಪೆಸರ್"

"ಅಂತು ಪೆಸರನಲ್ತು, ಮೂಲಮನೆ ಎನ್ನೊಳಾಡಿತೋಱ".

'ಅಬ್ಬಾ! ಪೆಣ್ಣೆಂಗಡಸುಗಾರ್ತಿಯೊ! ಆಗಳ್ ಪೆಸರೇನೆಂದಳ್, ಈಗಳ್ ಮೂಲಮಂ ಕೇಳ್ವಳ್; ಮೂಱುಱಿಯಜನ್ನದಾರದಾಣೆ! ಉತ್ತರಿಗೆಯಾಣೆ! ಆಗದಾಗದು. ಕೇಳ್ವುದರ್ಕೆ ಪೇಟ್ವುದರ್ಕೆ ನಿಮಗಧಿಕಾರಮಿರದು. ಕಣ್ಗೆಕಾಲ್ಗೆಕೇಡು! ನಾಂಪೇೞಲಾಗದು, ನೀಂ ಕೇಳಲುಮಾಗದು, ಮುಂತಣ ಕತೆಯಂ ಕೇಳ್.....'

"ತೆಗೆ ತೆಗೆ ನಿನ್ನ ಮುಂಗತೆಯಂ, ವಿತೆಯಂ. ಕೊರಳಾಣೆ, ಉಂಗುರದಾಣೆ, ಪೇಟ್ದಿಲ್ಲದೆ ಬಿಡೆಂ"

'ಚಿಃ! ಏಂ ಚಲಮೊ ಚಪಳೆಗೆ! ಎಳವೆಂಡಿರ ಕಯ್ಯೊಳಿರ್ಪ ಕಬ್ಬಿಗರ ಬಾೞ್ಕೆಯೆ ದೂಷ್ಯಂ, ಎಲೆ ಪೆಣ್ಣೆ! ನೀನಾರೊಳಮೆಂದಿಂಗಮುಸಿರಲ್ಬಾರದು, ಜೋಕೆ!'

'ಎಂದುಎಂತುಂಉಸಿರೆಂ ಅಡೆಂ'

"ಅಂತಾದೊಡಿಂತಿದು; ಕೇಳ್ 'ಭ...ವ...ತಿ...ಭಿ..ಕ್ಷಾಂ...ದೇ...ಹಿ' ಇದುವೆ ಕಬ್ಬಿಗರ್ಗೆ ಸಿದ್ಧಿಸಿದ ಸಪ್ತಾಕ್ಷರೀ ಮಂತ್ರಂ. ಆರೋಳಾನುಮುಸಿರದಿರ್"

ಮುದ್ದಣನದು ಕಟ್ಟುಹಾಸ್ಯ. ಈ ಹಾಸ್ಯದ ಹಿನ್ನೆಲೆಯಲ್ಲಿ ಆ ದಂಪತಿಗಳ ನಿಜಜೀವನದ ದಾರಿದ್ರ್ಯದ ಸಂಕಟದ ನೋವಿದೆ. ಆದರೆ ಇಲ್ಲಿ ಕ್ಷಣಕ್ಷಣಕ್ಕೂ ಕುತೂಹಲ

ಕೆರಳಿಸಿ ಮುದ್ದಣ ಮನೋರಮೆಗೆ ಹೇಳಿದ ರೀತಿ ಅಸಾಮಾನ್ಯ!

ಎಲ್ಲಾ ಆಶ್ವಾಸಗಳ ಆರಂಭದಲ್ಲೂ ಮನೋರಮೆಯ ಸಂಬೋಧನೆ ಇದ್ದೇ ಇರುವ ಹಾಗೆ ಚತುರ್ದಶಾಶ್ವಾಸದ ಮೊದಲಿಗೆ "ಬೆಳತಿಗೆಗಣ್ಣ ಪೆಣ್ಣೆ! ನನೆಯಂಬನ ಕೊಂಬಿನನಾಡೆ! ನಾಡೆ ನಿಕ್ಕುಳಿಸಿದ ಕೈಯ ಮೈಯನರಿಗಂಪಿನ ಸೊಂಪಿನ ಚೆಲ್ಲಗಾರ್ತಿ"- ಇಷ್ಟುದ್ದದ ಕರೆಹ. ಕಮಲನೇತ್ರೆ ಕಮನೀಯಗಾತ್ರೆ, ಎಲೆಸೊಬಗೆ – ಹೀಗೂ ಕರೆಯುತ್ತಾನೆ. ಕವಿಯ ಹೆಂಡತಿಯ ನಿಜನಾಮಧ್ಯೇಯ ಕಮಲೆಯೆಂಬುದು ಇಲ್ಲಿ ಸೂಚ್ಯವಾಗಿದೆ.

ಕತೆ ಕೊನೆಗೊಳ್ಳುತ್ತಾ ಬಂದತೆ, ಮನೋರಮೆಯನ್ನು ಆತ ವರ್ಣನೆ ಮಾಡುವುದು ಹೆಚ್ಚು ಹೆಚ್ಚುತ್ತಾ ಹೋಗುತ್ತದೆ. ಎಂದರೆ ಪತ್ನಿಯ ಕುರಿತು ತನ್ನ ಮನಸ್ಸಿನಲ್ಲಿರುವ ಸದ್ಭಾವನೆಗಳನ್ನು ಆದಷ್ಟು ಸ್ಪಷ್ಟವಾಗಿ ತಿಳಿಸಿಬಿಡಬೇಕೆಂಬ ರಸಿಕ ಪತಿಯ ಕುತೂಹಲ; ದಿವಸಹೋದಂತೆ ರಸಿಕತೆ ಕಡಿಮೆಯಾಗಿದೆ ಎಂದು ಆಕೆ ತಿಳಿಯಬಾರದು ಎಂಬೀ ಭರವಸೆ ಕೂಡ ಇರಬೇಕು; ಏಕೆಂದರೆ, ಸಹಜವಾಗಿ ಅತಿ ಪರಿಚಯದಿಂದ ಅವಜ್ಞತೆ ಬರುತ್ತಿದೆಯಂತೆ. ಆದರೆ ಮುದ್ದಣನಿಗೆ ಮನೋರಮೆಯಲ್ಲಿ ಅವಜ್ಞತೆ ಇಲ್ಲವೇ ಇಲ್ಲ. ಪಂಚದಶಾಶ್ವಾಸದ ಮೊದಲಿನ ವರ್ಣನೆ ಕೇಳಿ:

"ಎಲೆಲೆ ಕಾಮಿನಿ! ಕಾಮಕಳಾನಿಧಾನ! ಕಾಮಮದಾಂಧಗಂಧಸಿಂಧುರ ಬಂಧುರಯಾನೆ! ಕಾಮಕಾಳೋರಗಕೇಶ...."

"ಎನ್ನ ರನ್ನ! ಇಂದು ಇನಿತಿಂತೇಂ ಚೆಲ್ವಿನೊಂದು ಬಿತ್ತರದ ಭಂಗಿಯ ಬಣ್ಣನೆ ಮಿಣ್ಣನೆ ನಿನ್ನ ನಚ್ಚು ಮೆಚ್ಚಿನ ಕಾಮನೊಂದು ಜಾನಮೊಳೆಬೆರೆತುದು?"

ಇಂತಹ ಹೊಸ ವರ್ಣನೆಗೆ ಕಾಮನ ಮಹೋತ್ಸವ ಸಮೀಪಿಸಿದ್ದು ಕಾರಣವೆನ್ನುವನು. ಬೇಡವೆಂದಾದರೂ ಆ ಕಾರಣ ಕಾಮನ ಹೆಸರು ಬಂತೆಂದೂ ಹೇಳುವನು. ಮನೋರಮೆ ನಾಳೆಯೇ ಕಾಮನಹಬ್ಬವೆನ್ನುವಳು. ಆ ಮುದ್ದಣನಿಗೆ ನೆನಪಾಯಿತು, ಸರಿ, ನಾಳೆಗೆ ಹೊರಣಗಡುಬೋ, ಸೆಂಡಿಗೆಯೋ, ಹೊಗಳಿಕೆಯೋ ಒಳ್ಳೆಯ ಔತಣದೂಟಕ್ಕೆ ಏನೇನಿದೆ ಎನ್ನುವನು. ಮುದ್ದಣನ ತಿನ್ನುವಾಸೆಯನ್ನು ಪರಿಹಾಸ್ಯ ಮಾಡಿ, ಆತನನ್ನು ಆಕೆ ಭೀಮನಿಗೆ ಹೋಲಿಸುವಳು. ಕಾಮನ ವ್ರತವನ್ನು ಗಂಡಹೆಂಡಿರಿಬ್ಬರೂ ಸ್ನಾನಮಾಡಿ ಮಡಿಯುಟ್ಟು ಇಡೀ ದಿನ ಉಪವಾಸವಿದ್ದು ಆವರಿಸಬೇಕೆನ್ನುವಳು. ಹಾಗೆ ಮಾಡಿದರೆ ಆತ ಎಂದೆಂದಿಗೂ ನಮ್ಮನ್ನಗಲದೆ ಇರುತ್ತಾನೆ ಎಂದಾಗ, ಮುದ್ದಣನಿಗೆ ಹಿರಿಹಿಗ್ಗು. ಕೂಡಲೇ ನಕ್ಕು ಮನೋರಮೆ ಹೇಳುವಳು; ಆದರೆ ಆ ದಿನ ಬೆಳಗಿಂದ ಸಂಜೆ ವರೆಗೆ ಉಪವಾಸವಿರಲೇ ಬೇಕೆಂದು. ಅದನ್ನು ಕೇಳಿ ಕನಸಿನಲ್ಲಿಯೇ ಮಂಡಿಗೆ ತಿನ್ನುತ್ತಿದ್ದ ಮುದ್ದಣನಿಗೆ ಗಾಬರಿ. 'ಅಡಕತ್ತರಿಯಲ್ಲಿ ಸಿಕ್ಕಿದಂತೆ; ಕಲ್ಲಿನಲ್ಲಿ ನಾಟಿದ ರಾಮನ ಯಜ್ಞಾಶ್ವದಂತೆ' ಎನ್ನುವನು. ಯಜ್ಞಾಶ್ವದ

ಕಾಲು ಹೇಮಕೂಟದ ಕಲ್ಲನ್ನು ನಾಟಿದ ಕಥೆ ಮತ್ತೆ ಮುಂದುವರಿಯಿತು. ಮುದ್ದಣನಿಗೆ ಕಾಮದೇವನ ನೆನಪು, ನೋಂಪಿಯ ಔತಣದೂಟ, ಮಂಡಿಗೆ, ಸೆಂಡಿಗೆ, ಹೋಳಿಗೆ ತುಪ್ಪದ ನೆನಪು ಬಂದಿದೆ. ಮನೋರಮೆಗೆ ಕಾಳು ಕೀಲಿಸದ ಯಜ್ಞದ ಕತೆ ಕೇಳುವ ಕತೂಹಲವುಂಟಾಗಿದೆ ಹೀಗೆ ಅಲ್ಲಲ್ಲಿ ಕತೆಗೆ ಪೂರಕವಾಗಿಯೇ ಅವರ ಜೀವನದ ಅಭಿರುಚಿಯ ಸರಸ ಸಂಭಾಷಣೆ ಸಾಗುತ್ತದೆ.

'ಎಲೆಗೆ ರಾಮಾಭಿರಾಮೆ! ಸುಗ್ರೀವೆ! ನೀಲಕುಂತಳೆ! ಕುಮುದನಯನೆ! ಪದ್ಮಗಂಧಿ, ಕೇಸರಮಧ್ಯೆ! ಅಂಗದವಿರಾಜಿತೆ!' – ಹೀಗೆ ಷೋಡಶಾಶ್ವಾಸದಲ್ಲಿ ಮನೋರಮಾ ವರ್ಣನೆ ತೊಡಗುತ್ತದೆ. ಯಜ್ಞಾಶ್ವ ಒಂದು ಆಶ್ರಮ ಪ್ರವೇಶಿಸಿದಾಗ ಮುನಿಗುವರರಿಬ್ಬರು ಕಟ್ಟಿ ಹಾಕಿದರೆಂದು ಕತೆ ಸಾಗುತ್ತದೆ. ಈ ಸಂದರ್ಭದಲ್ಲಿ ಸೀತಾದೇವಿಯ ಮಕ್ಕಳಿರಬೇಕೆಂದೇ ಆಕೆಯ ಊಹೆ. ಸೀತೆಯನ್ನು ಕಾಡಿನಲ್ಲಿ ಬಿಟ್ಟು ಬಾಳಿದ ಶ್ರೀರಾಮನಿಗೆ ಹಾಗೆಯೇ ಆಗಬೇಕೆಂದು ಮನೋರಮೆಯ ಮನಸ್ಸಿನಲ್ಲಿಯೂ ಬಂದಿರಬೇಕು. ಹಾಗಾಗಿ ಆಕೆ, ಆ ಸಂದರ್ಭದ ವಿವರವನ್ನು, 'ಕೇಳ್ದೊಂದು ತವಕದಿಂ ಎನಸುಂ ಸರಿಸಕ್ಕೆಯ್ದಂದು ನಲ್ಮೆಮಿಗೆ ನಲ್ಲನಗಲ್ಲಮನಲುಗಿ ತಳ್ತಮರ್ದಪ್ಪಿ, 'ಎನ್ನಚೆನ್ನರಸ! ಆಶ್ರಮದ ತರಳರ್ಗೆ ಈ ಬಗೆಯ ಜನ್ನಗುದುರೆಯಂ ಕಟ್ಟಿ ಕಾದುವ ಒಂದು ಬಲ್ಪುಂ ಕೂರ್ಪುಂ ನೇರ್ಪಟ್ಟುದೆಂತು? ಪೇಟು' ಎಂದಳು ಮುದ್ದಣ ಹೇಳುತ್ತಾನೆ! 'ಕತೆ ಹೇಳಿ ಸಾಕಾಯಿತು, ಮುಗಿಸುತ್ತೇನೆ. ನೀನೂ ಉಡುಗೊರೆ ಕೊಡುವಂತೆ ಕಾಣಿಸುವುದಿಲ್ಲ.' ಎಂದನು. ಅದಕ್ಕೆ ಮನೋರಮೆ, 'ಉಡುಗೊರೆಯೆಂಬುದು ಕಾಡಿಬೇಡಿ ಪಡೆಯುವುದಲ್ಲ, ಮನಸ್ಸು ಒಲಿದು ಕೊಡಬೇಕು' –ಎಂದಳು. ಮತ್ತೆ ಮುನಿಯ ಆಶ್ರಮದಲ್ಲಿ ಸೀತೆ ಲವಕುಶರನ್ನು ಪಡೆದ ಕತೆ ಮುಂದುವರಿಯಿತು. ಲವಕುಶರ ಜನನವಾಗಿ ಅವರು ಸಂತೋಷದಿಂದ ಬಳೆಯುತ್ತಿದ್ದರು ಎಂದು ಹೇಳುವಾಗ, ಮನೋರಮೆಗೆ ಎಲ್ಲಿಲ್ಲದ ಉತ್ಸಾಹ. ನೀನು ಮೊದಲೇ ನನಗೆ ಯಜ್ಞಾಶ್ವವನ್ನು ಕಟ್ಟಿದ ಬಾಲಕರಾರೆಂದು ಏಕೆ ಹೇಳಲಿಲ್ಲ; ಸೀತೆಯ ಮಕ್ಕಳು ಕಟ್ಟಿದರೆಂದು ಹೇಳಿದ್ದರೆ ಏನಾಗುತ್ತಿತ್ತು; ಆಯ್ತಾಯ್ತು, ಮುಂದಿನ ಕತೆ ಹೇಳೆಂದಳು. ಇಲ್ಲಿ ಮನೋರಮೆಗೆ ಸ್ತ್ರೀ ಸಹಜವಾಗಿ, ಕಾಡನ್ನು ಬಿಟ್ಟು ಹೋದ ಒಬ್ಬಳು ಹೆಂಗುಸು ಇಬ್ಬರು ಸುಪುತ್ರರನ್ನು ಪಡೆದು ಅವಳಿಗಾದ ಅನ್ಯಾಯವನ್ನು ಪ್ರತಿಭಟಿಸಲು ಒದಗಿದೀ ಸುಸಂದರ್ಭ ರೋಮಾಂಚನವನ್ನುಂಟುಮಾಡಿರಬೇಕು. ಹೀಗೆ ಬೆರಗುಗೊಂಡ ಮನೋರಮೆಯನ್ನು ಮುದ್ದಣ ವರ್ಣಿಸುತ್ತಾನೆ; 'ಎನ್ನಕಣ್ಣೆ, ಪೆಣ್ಣೇ' ಎಂದು ಮನೋರಮೆಯನ್ನು ಪೆಣ್ಣಾಗಿ ಕಣ್ಣಾಗಿ ಮುದ್ದಣ ನೋಡುತ್ತಾನೆ. ಆಕೆಯಲ್ಲಿ ಚಿಮ್ಮಿದ ಉತ್ಸಾಹ; ಸೀತೆಯ ಮಕ್ಕಳು ತೋರಿಸಿದ ಶೌರ್ಯ, ಆಕೆಯನ್ನೂ ದಿಗಿಲುಗೊಳಿಸಿರಬೇಕು. ಆಗ ಮುದ್ದಣ....

"ಏನೆಲಗೆ! ಕಡೆಗೆ ಹುಂಗುಟ್ಟದೆ ಗುರುಗುಮ್ಮನಿರ್ಪಯ್?" ಎಂದನು.

'ಮಕ್ಕಳ ಸೆರಗಿಲ್ಲದ ಸಾಹಸಕ್ಕೆ ಬೆಱಗುವಟ್ಟು ಇನ್ನಿಪೊೞ್ತಿಂ ಕೆಮ್ಮನಿರ್ದಂ' ಎನ್ನುವಳಾಕೆ ಮನೋರಮೆಗೆ ಉತ್ಸಾಹ ಹೆಚ್ಚಲೆಂದು ಮುದ್ದಣ ವರ್ಣಿಸುತ್ತಾನೆ : ಲವಕುಶರ ಸಾಹಸವನ್ನು ಶೌರ್ಯ ಧೈರ್ಯವನ್ನು ಕಂಡು 'ಬಾನೊಳ್‌ಬರ್ದಿಲವೆಂಡಿರು ಕಂಡು ಬೆರಗುಗೊಂಡು ಬೆಂಡಾದರ್' ಎಂದು.

ಯಜ್ಞಾಶ್ವವನ್ನು ಕಟ್ಟಿದವರು ತನ್ನ ಮಕ್ಕಳಾದ ಲವಕುಶರೆಂದು ಶ್ರೀರಾಮನಿಗೆ ತಿಳಿಯುತ್ತದೆ. ಆತ ಸಂತೋಷಗೊಂಡ, ದೇವತೆಗಳು ಹೂಮಳೆಗರೆದರು; ಲವಕುಶರು ರಾಮನಡಿಗೆರಗಿದರು. ಅವರಿಂದ ವಾಲ್ಮೀಕಿ ಮುನಿ ರಾಮಾಯಣವನ್ನು ಹಾಡಿಸಿದ, ಎಲ್ಲರೂ ಸಂತಸಪಟ್ಟರು. ಮೂರ್ಛೆಹೋದವರ ಮೇಲೆ ಮುನಿ ಕುಡಿಕೆಯ ಮೀರನ್ನು ಪ್ರೋಕ್ಷಿಸಿದ. ಎಲ್ಲರೂ ಎಚ್ಚರಗೊಂಡರು. ಪುರಕ್ಕೆ ಬಿಜಯಂಗೈದರು ಎಂದು ಮುದ್ದಣ ಕತೆ ಮುಗಿಸುತ್ತಾನೆ.

ಮನೋರಮೆಯ ಮನಸ್ಸೆಲ್ಲವೂ ಸೀತಾದೇವಿಯ ಸ್ಥಿತಿಯ ಕುರಿತೇ ಕೇಂದ್ರೀಕೃತ. ರಾಮನು ಆಕೆ ದೋಷಿಯೆಂದು ಅಲ್ಲೇ ಬಿಟ್ಟು ಹೋದನೆ? ಅಥವಾ ಜತೆಯಲ್ಲಿ ಅರಮನೆಗೊಯ್ದನೆ? ಈ ದಿಗಿಲು ಆಕೆಗೆ :

'ಏಂ ಸೀತೆಯನಿನ್ನುಂ ಕೊಡಿ ಪೋಗನೆ? ಉೞಿದೆ ಪೋದನೆ ರಾಮಂ? ಎನ್ನುವಳು

'ಓ ಇನ್ನು ಮುೞಿವನೆ ಸತಿಯಂ? ಈ ಪೊೞ್ತಿಂ ತನ್ನರಸಿಯ ಉಱುಗಿಲ್ಲದ ನಡೆಗೆ ದೇವರ್ಕಳಂ ಸಾಕ್ಷಿಗೊಟ್ಟು, ಆಗಳೆ ತನ್ನ ಅನ್ನಯಮಂ ಮನ್ನಿಸೆಂದು ನನ್ನಿವೇಟ್ಟು ಸಂತಮಿಟ್ಟು ಸುದತಿ ಸೀತೆಯಂ ಪೊನ್ನ ಸಿಬಿಗೆಯೊಳೇಱಿಸಿ ದೇವರ್ಕಳ್‌ಪೊಗೞೆ ತಾನುಂ ತನ್ನವರುಂ ಆಶ್ರಮದ ಮುನಿಗಳುವೊಂದುಗೂಡಿ ಪೋದ...."

ಈ ಮಾತಿನಿಂದ ಮನೋರಮೆಯ ಮನಸ್ಸಿನ ಕಳವಳ ಶಾಂತವಾಯಿತು; ಹೆಂಗುಸಿನ ಕಷ್ಟಪರಿಹಾರವಾಯಿತಲ್ಲಾ ಎಂದು. ಆಗ ಆಕೆಯ ಮುಖದಿಂದ, ಗಂಡುಸಿನ ಸಾವಿರ ತಪ್ಪುಗಳ ಅತ್ಯಂತ ಪವಿತ್ರವಾದ ಕ್ಷಮಾಶೀಲ ಮಾತು ಹೊರ ಹೊಮ್ಮುತ್ತದೆ.

"ಓ! ರಾಮನೊಳ್ಳಿದನಕ್ಕೆ! ರಾಮಂಸೊಗಂಬಾೞ್ಗೆ! ರಾಮಂಗೆ ಗೆಲವಕ್ಕೆ! ರಾಮನಂ ಕೊಂಡಾಡುಗೆ! ರಾಮನ ಜಸಂ ಪೆರ್ಚಿಪರಿಗೆ! ರಾಮನೊಳ್ ನನ್ನಿಸನ್ನಿದಮಾಗಿರ್ಕೆ"!

ಮುದ್ದಣ ಕತೆ ಕೊನೆಗೊಳಿಸುತ್ತಾ, 'ಎನ್ನ ಪಟ್ಟದ ರಾಣಿ! ಇನ್ನೆತ್ತಂ ನಿರಾಮಯಂ, ನಿರಾಕುಳಂ, ಸುಭಿಕ್ಷಂ, ಶಾಂತಿ' ಎನ್ನುವನು.

ಎಷ್ಟು ಚೆನ್ನಾಗಿ ನಲ್ಲ ಕತೆ ಹೇಳಿದ. ಎಷ್ಟು ಆಸಕ್ತಿಯಿಂದ ತಾನು ಕೇಳಿದೆ. ನಿರ್ದೋಷಿಯಾದ ಸೀತಾದೇವಿ ಕಾಡಿನಲ್ಲಿ ಕಷ್ಟಪಟ್ಟರೂ, ಕೊನೆಗೆ ಹೇಗೆ ಸುಖ ಪಡೆದಳು. ದುರಂತವಾಗಿ ತೊಡಗಿದ್ದು ಹೇಗೆ ಪರಮಸುಖಾಂತವಾಯಿತು – ಇಂತಹ ಕತೆ ಇನ್ನೂ ಕೇಳಬೇಕಾಗಿತ್ತು ಎಂದಾಗಿದೆ ಆ ನಲ್ಲೆಗೆ.

'ಅಂತಪ್ಪೊಡೆ ನೀ ಪೇಟ್ದಕತೆ ಮುಗಿಯೆವಂದುದು' ಎನ್ನುತ್ತಾಳೆ. ಮನೋರಮೆಗೆ ಕತೆ ಅತ್ಯಂತ ಮೆಚ್ಚುಗೆಯಾಗಿವೆ ಎಂದು ಮುದ್ದಣನಿಗೆ ತಿಳಿದಿದೆ, ಆದರೆ ಆ ಮಾತನ್ನು ಅವಳ ಬಾಯಿಂದಲೇ ಕೇಳಬೇಕು :

'ಉಂ, ಎಂತೆಂತೋ ರಗಳೆಯ ಪಾಳ್ಗತೆ ಕಡೆಗಂಡುದು'

'ಚಿ! ಶ್ರೀರಾಮ ಪುಣ್ಯಚರಿತಮಂ ಪಾಳ್ಗತೆಯೆಂದು ಇಳಿಕೈದು ತೆಗಳ್ವ?'

ಶ್ರೀರಾಮ ಪುಣ್ಯಕತೆಯೆಂಬುದರ ಕತೆ ಚೆನ್ನಾಗಿದೆ ಎಂದು ಆಕೆಯ ಮೆಚ್ಚುಗೆಯೆ? ಅಥವಾ ತನ್ನ ಕತೆಗಾರಿಕೆಗೆ ಆಕೆಯ ಮೆಚ್ಚುಗೆಯೇ? ಮುದ್ದಣನಿಗೆ ಸ್ಪಷ್ಟವಾಗಿ ತಿಳಿಯಬೇಕೀಗ.

'ಶ್ರೀರಾಮಚರಿತಮನಿೞಸಿ ಕುೞಸಿ ನುಡಿದೆನಿಲ್ಲಂ, ಪುರುಳಿಲ್ಲದ ಸಲ್ಲದ ಮೊಲ್ಲದ ಎನ್ನ ಬಱವಣ್ಣನೆಯ ಬೇಸಱಕೆಯ ಪಾಟ್ಗಬ್ಬಮಂ ಪೊಳ್ಳೆಂದು ನುಡಿದೆಂ'

'ನವರಸದ ತನಿರಸಮೊಱವ ಬಣ್ಣಗಬ್ಬಮಂ ಪೊಳ್ಳೆಂದು ನಿನಗಮೇಂ ನಿದಹಂಕೃತಿಯೊ ನಿನ್ನಾ ಜಾಣ್ಮೆಯೊಳ್?'

ಮುದ್ದಣನಿಗೆ ಸರಿಯಾದ ಸ್ಪಷ್ಟೀಕರಣಬೇಕು.

'ಏನೆಮ್ಮ ಕಬ್ಬಂ ನಿನಗೆ ಮೆಚ್ಚುಗೆಯಾಯ್ತೆ?'

'ಎನಗೊರ್ವಳ್ಗೆಂದೊಡೇಂ, ನಾಡೊಳೆಲ್ಲರ್ಗಂ, ನಿನ್ನ ಪೆಸರೆಂತಂತು ಕಬ್ಬಮುಂ ಮುದ್ದು ಮುದ್ದಾಯ್ತು ಜಗಕೆ. ಈವಗೆಯ ನುಡಿಗಬ್ಬಂ ಮುಂತಿಲ್ಲ, ಪಿಂತಿಲ್ಲ. ಬಲ್ಸೊಗಸು ನೀನೆಂದ ಕತೆ'.

ಮಮತೆಯ ಮಡದಿಯ ಈ ಮೆಚ್ಚುನುಡಿ ಮುದ್ದಣನಿಗೆ ನಿಜವಾಗಿಯೂ ಸಂತೋಷವನ್ನೇ ಉಂಟುಮಾಡಿರಬೇಕು. ಅದರ ಜತೆಗೆ ಆಕೆಯಿಂದ ಆ ಮೆಚ್ಚುಗೆಯ ಉಡುಗೋರೆಯ ಲಾಭ ಪಡೆವ ಆಸೆಯೂ ಅವನಲ್ಲಿ ಗರಿಗೆದರಿದೆ.

'ಅಂತಪ್ಪೊಡೆ ತಾರೆಲೆ ನೀನೆಂದ ಮೆಚ್ಚಿ ನಡುಗೊರೆಯಂ' ಎಂದು ಕೇಳಿಯೇ ಬಿಡುತ್ತಾನೆ.

ಮನೋರಮೆ ಸಿಕ್ಕಿಬಿದ್ದಳು. ಹೇಗೂ ಕೊಟ್ಟ ಮಾತಿಗೆ ತಪ್ಪುವುದು ಆಗದು. ನಲ್ಲನೂ ತಪ್ಪಿಸಿ ಹೋಗಲು ಬಿಡಲಾರೆ. ಕತೆಗೆ ಮಂಗಳ ಹಾಡು – ಆ ಬಳಿಕವವಷ್ಟೇ ಮೆಚ್ಚುಗಿಚ್ಚು ಎಂದಳು

ಕತೆ ಕೊನೆಗೊಂಡಿತು; ಮಂಗಳಂ, ಶುಭಂ, ಭದ್ರಂ, ಕಲ್ಯಾಣಂ ಎನ್ನುವಾಗ, ಮನೋರಮೆ ಎದ್ದು ನಿಂತಳು. ಮುದ್ದಣ, ಆಕೆಯನ್ನು ಕೈಹಿಡಿದು ನಿಲ್ಲಿಸಿ ಕೇಳುತ್ತಾನೆ:

'ಬಲ್ಸೆಡಕುಗಾರ್ತಿ ಕಣಾ! ಮುದ್ದಣನುಮಂ ಟಕ್ಕಿಪ ಪೆಂಡಿರೊಳರೆ? ಕೊಂಕು ನುಡಿಯೊಂದು ನೆವದಿಂ ಬಿಂಕದಿಂದೊರ್ಡಾಯ್ತೆ? ಮೆಚ್ಚನಿತ್ತಲ್ಲದೆ ಪೋಪೊಡೇಂ

ಬಿಡುವೆನೇ?'

"ಉಡುಗೊರೆ'ಯ ಕಾಟಕ್ಕಿನ್ನೆತ್ತವೋಪೆಂ! ನೀನೇನಂ ಬೇಡುವಯ್?" ಮುದ್ದಣನಿಗೆ ಆಗ ಮುಸಿಮುನಿಸು. ಹೇಳುತ್ತಾನೆ :

'ಬೇಡುವೊಡೇಂ ತಿರಿಕನೆ? ಮನೆಗೆ ಬಂದೆನೆ? ಮೆಚ್ಚಿತ್ತೊಡದನೆ ಕಯ್ಕೊಳ್ವೆಂ'

"ಆನೆಂತುಂ ಪರಾಧೀನೆ ಮೇಣೆನಗೊಡಮೆ ಯಾವುದು? ಏನನೀವೆನೆಂತೀವೆಂ?"

'ಏನೋ, ಎಂತೋ? ಆಂ ಮೆಚ್ಚುವಂತುಂ ಕತೆಯ ಪೊರುಳ್ಗೋವಂತುಂ ನಾಲ್ವರ್ ತಲೆದೂಗುವಂತುಂ ಉಡುಗೊರೆ'ಗೆಯ್ದೊಡಾಯ್ತು'

ಈಗ ಮನೋರಮೆಗೆ ಸರಿಯಾಗಿ ಅರ್ಥವಾಗಿದೆ. ನಲ್ಲನು ಮೆಚ್ಚಬೇಕು. ಇಷ್ಟು ಸುಂದರವಾದ ರಸಭರಿತವಾದ ಕಾವ್ಯವನ್ನು ತನಗೆ ಹೇಳಿದ ರಮಣನಿಗೆ ರಮಣಿ ಏನನ್ನು ಕೊಡಬಹುದೋ ಅದನ್ನು ಮೆಚ್ಚನೀಯುತ್ತಾಳೆ.

'ಅಂತಪ್ಪೊಡಿಂತಿದು!' – ಎಂದು ರಸಿಕವಾಚಕರ ಊಹೆಗೆ ನಿಲುಕುವ ಅಮರ ಪ್ರೇಮದ ಸಂಕೇತವಾದ ಉಡುಗೊರೆ ಮುದ್ದಣನಿಗೆ ಮನೋರಮೆಯಿಂದ ಸಿಗುತ್ತದೆ. ಜೀವನದ ದಟ್ಟವಾದ ದಾರಿದ್ರ್ಯದಲ್ಲೂ ಸರಸ ದಾಂಪತ್ಯದ ಶ್ರೀಮಂತ ಪ್ರೇಮದ ಇಂತಹ ಅಮೂಲ್ಯವಾದ ಉಡುಗೋರೆಗಿಂತ ಹೆಚ್ಚಿನದು ಏನು ಬೇಕಾಗಿದೆ ಮುದ್ದಣನಿಗೆ?

ಮುದ್ದಣ – ಮನೋರಮೆ ಎಂಬೀ ರಸಿಕ ದಂಪತಿಯ ಚಿತ್ರ, ಕನ್ನಡ ಸಾಹಿತ್ಯದ ಅಮರ ಪಾತ್ರ ಇಂತು ಸೃಷ್ಟಿಯಾಗಿದೆ. ಕನ್ನಡ ಸಾಹಿತ್ಯ ಇರುವವರೆಗೆ ಈ ಸೃಷ್ಟಿ ಶಾಶ್ವತವಾಗಿ ನೆಲೆ ನಿಲ್ಲುತ್ತದೆ. ಜೀವನದಲ್ಲಿನ ಸುಖ ಸಂತೋಷಗಳನ್ನು, ದುಃಖ ಸಂಕಟಗಳನ್ನು, ಹಾಸ್ಯ ವ್ಯಂಗ್ಯೋಕ್ತಿಗಳ ವಿವಿಧ ವಿನೋದಗಳನ್ನೂ ಧಾರಾಳ ಅನುಭವಿಸಿ ಅದರ ಮೇಲೆ ಬಾಳಿಗೆ ಭರವಸೆಯನ್ನು ನೀಡುವ ಈ ದಂಪತಿಗಳ ಚಿತ್ರ ಮರೆಯಲಾರದ್ದು. ಮರೆಯಬಾರದ್ದು.

ಬದುಕಿನಲ್ಲಿ ಕಷ್ಟಕಾರ್ಪಣ್ಯಗಳನ್ನು ಅನುಭವಿಸಿದವರು ಅದನ್ನು ಮರೆಮಾಡಲು ಸುಖವನ್ನೇ ಚಿಂತಿಸುತ್ತಾರೆನ್ನುವ ಮಾತಿದೆ. ಅದರಂತೆ ಬಾಳಿನಲ್ಲಿ ಶೃಂಗಾರ ಸುಖವನ್ನು ಪಡೆಯಲಾರದ ಜೀವಿಗಳು, ಶೃಂಗಾರ ಸುಖದ ಕುರಿತು ಸದಾ ಚಿಂತಿಸುತ್ತಾ ಅದನ್ನೇ ಹೇಳುತ್ತಾರೆ. ಶೃಂಗಾರ ರಸವನ್ನು ಅದ್ಭುತವಾಗಿ ವರ್ಣಿಸಿದ ಕಾಳಿದಾಸನು ಶೃಂಗಾರವನ್ನು ಅನುಭವಿಸಿದವನೇ ಆಗಲಾರನೆಂಬ ಮಾತಿದೆ. ಏಕೆಂದರೆ ಆ ಸುಖವನ್ನು ಅನುಭವಿಸಿದ ನಂತರ ಆ ಕುರಿತು ಒದಗಿದ ತೃಪ್ತಿಯೇ ಸಾಕಾಗಿ ಮತ್ತೆ ಏನನ್ನೂ ಹೇಳಬೇಕಾದ ಪ್ರಮೇಯ ಇರುವುದಿಲ್ಲ. ಈ ಬಗೆಯ ಚಿಂತನೆಯನ್ನು ಮಾಡಿದಲ್ಲಿ, ಲಕ್ಷ್ಮೀನಾರಾಯಣ ಕವಿ ತನ್ನ ದಟ್ಟ ದಾರಿದ್ರ್ಯದ ಜೀವಿತದಲ್ಲಿ ಯಾವುದೇ ಸುಖ ವಿಲಾಸವನ್ನು ಪಡೆಯದೆ, ಅದನ್ನೇ ಚಿಂತಿಸಿ ತನ್ನ ಕೃತಿಯಲ್ಲಿ ಇಂತಹ ಪಾತ್ರ

ಸೃಷ್ಟಿಮಾಡಿ, ಅದರಿಂದ ಆತ್ಮಸಮಾಧಾನಪಟ್ಟುಕೊಂಡನೆಂದು ಹೇಳಿದರೂ ಅನೌಚಿತ್ಯವಾಗಲಾರದು. ಹೇಗಿದ್ದರೂ ಕಾಲಕೂಟಗರಳವನ್ನು ನುಂಗಿ ವಿಷಕಂಠನಾದ ಶಿವನು ಲೋಕಕ್ಕೆ ಒಳ್ಳೆಯದನ್ನೇ ದಯಪಾಲಿಸಿದಂತೆ, ಲಕ್ಷ್ಮೀ ನಾರಾಯಣ ಕವಿ ದಟ್ಟ ದಾರಿದ್ರ್ಯದ ಜೀವನ ಮಾಡಿ, ಪತ್ತು ರೂಪಾಯಿ ಸಂಬಳದ ಉದ್ಯೋಗ ಕೈಗೊಂಡು, ದುಡಿಯುತ್ತಾ ದುಡಿಯುತ್ತಾ ಬರೆಯುತ್ತಾ ಬರೆಯುತ್ತಾ ಕ್ಷಯರೋಗಕ್ಕೆ ತುತ್ತಾಗಿ ಸಾವನ್ನಪ್ಪಿದರೂ, ಆತನ ಈ ಮುದ್ದಣ ಮನೋರಮೆಯರ ರಸಿಕ ದಾಂಪತ್ಯ ಪಾತ್ರ ಸೃಷ್ಟಿ ಚಿರಸ್ಮರಣೀಯವೆನ್ನುವುದು ನಿರ್ವಿವಾದ.

●

ಸಂಸ್ಕೃತಿಯ ಹೆಗ್ಗುರುತುಗಳು

೧

ಪ್ರಪಂಚದಲ್ಲಿ ಜನಿಸಿದ ಪ್ರತಿಯೊಂದು ಜೀವಿಗೂ ಪ್ರಕೃತಿ ಸಹಜವಾಗಿ ಕೆಲವೊಂದು ಸ್ವಭಾವಗುಣ ವಿಶೇಷಗಳು ಬಂದೆ ಬರುತ್ತವೆ. ಆಹಾರ, ನಿದ್ರೆ, ಕೋಪ, ಪ್ರೀತಿ, ಹೆದರಿಕೆ ಇಂತಹ ಸ್ವಭಾವಗುಣಗಳು ಎಲ್ಲ ಜೀವಿಗಳಿಗೂ ಸಮಾನ. ತಾಯಿ ತಾನು ಹೆತ್ತ ಶಿಶುವನ್ನು, ತನ್ನ ತೆಕ್ಕೆಗೆ ತೆಗೆದುಕೊಂಡು, ಪ್ರೀತಿಯಿಂದ ಆ ಶಿಶುವಿಗೆ ತನ್ನೆದೆಯ ಹಾಲೂಡಿಸಿ ಮತ್ತು ಲಾಲನೆಪಾಲನೆ ಮಾಡುವುದು, ಆ ಶಿಶು ತನಗೆ ಅಮೃತೋಪಮವಾದ ಸ್ತನ್ಯವನ್ನಿತ್ತು, ಮುದ್ದಿಸಿ ಲಾಲಿಸಿ ಪಾಲಿಸಿದ ತಾಯಿಯನ್ನು ಪ್ರೀತಿಸಿ ಆಶ್ರಯಿಸುತ್ತಿರುವುದು – ಇಂತು ನಿಸರ್ಗ ನಿಯಮಕ್ಕೆ ಅನುಗುಣವಾದ ಅನ್ಯೋನ್ಯ ವಾತ್ಸಲ್ಯ, ಪ್ರೀತಿಮಯವಾದ ನಡತೆಗಳನ್ನು ಮಾನವಜೀವಿಯಲ್ಲಿರುವಂತೆ ಸಕಲ ಪ್ರಾಣಿ ಸಮುದಾಯದಲ್ಲಿಯೂ ಕಾಣುತ್ತೇವೆ. ತನ್ನನ್ನು ಸಾಕಿದ ಮನುಷ್ಯ ವರ್ಗಕ್ಕೆ ತನ್ನಿಂದ ಆಗುವ ನೆರವನ್ನು ನೀಡುವ ಸುಸ್ವಭಾವವೂ ಹೆಚ್ಚಿನ ಪ್ರಾಣಿಸಮುದಾಯದಲ್ಲಿಯೂ ಕಂಡು ಬರುತ್ತದೆ. ಆಡು, ದನಗಳು ಹಾಲು ನೀಡುತ್ತವೆ. ಎತ್ತು, ಕೋಣಗಳು ಗದ್ದೆ ಉಳುವಲ್ಲಿ ಹೆಗಲು ಕೊಡುತ್ತವೆ. ಒಂಟೆ, ಕುದುರೆಗಳು ಒಡೆಯನನ್ನು ಹೊತ್ತುಕೊಂಡು ಸವಾರಿ ಹೋಗುತ್ತವೆ. ಕತ್ತೆ ಭಾರ ಹೊರುತ್ತದೆ. ನಾಯಿ ಸದಾ ಸ್ವಾಮಿ ಭಕ್ತಿಯುಳ್ಳದ್ದಾಗಿದೆ. ಗಿಳಿ ಮಾತನಾಡುತ್ತದೆ; ಕೋಳಿ ಎಚ್ಚರಿಸುತ್ತದೆ. ಇಂತು ಹಲವಾರು ನಿಸರ್ಗಜನ್ಯ ಸ್ವಭಾವ ವಿಶೇಷಗಳನ್ನು ನಾವು ಮನುಷ್ಯ ಮನುಷ್ಯೇತರ ಜೀವ ಜಂತುಗಳಲ್ಲಿಯೂ ಕಾಣುತ್ತೇವೆ. ಹೀಗೆ ಕಂಡುಬರುವ ಸಹಜ ಸ್ವಭಾವಗುಣಗಳೇ ವಿಶ್ವವಿಶಾಲತೆಯ ಉತ್ತಮ ನಡತೆಗೆ –ಸಂಸ್ಕೃತಿಗೆ ಮೂಲಧಾತುವೆಂದು ತಿಳಿದುಕೊಳ್ಳಬಹುದಾಗಿದೆ.

ಇಂತಹ ಒಳ್ಳೆಯ ನಡತೆಯ ಸ್ವಭಾವಗುಣಗಳು ಪರಿಷ್ಕಾರ–ಸಂಸ್ಕಾರಗೊಂಡು, ಪ್ರಾಣಿಸಮುದಾಯದಲ್ಲಿ ಹೆಚ್ಚು ವಿವೇಕಶಾಲಿಯೆನಿಸಿದ ಮನುಷ್ಯನ ಜೀವನವನ್ನು ಇನ್ನಷ್ಟು ವಿಶಾಲತೆಯಲ್ಲಿ ವಿಕಾಸಗೊಳಿಸಲು ಸಹಾಯಕವಾಗಿ ಶೋಭಿತವಾಗಿದೆ. ಪ್ರಾಣಿಗಳು ಹೆತ್ತ ತಾಯಿಯ ಮೊಲೆಯೂಡಿ ಬೆಳೆದ ದಿನಗಳಲ್ಲಿ ತೋರಿಸಿದ

ಆತ್ಮೀಯತೆಯ ಅನ್ಯೋನ್ಯತೆಯನ್ನು ಮುಂದೆ ಬೆಳೆದಂತೆ ಮರೆತು ಸ್ವಚ್ಛಂದವಾಗಿರುವಂತೆ ಮನುಷ್ಯ ಮರೆಯುವುದಿಲ್ಲ. ತಾಯಿಯಂತೆ ತಂದೆಯನ್ನೂ, ಮಾತಾಮಹಪಿತಾಮಹರನ್ನೂ, ಸೋದರಿ ಸೋದರರನ್ನೂ ಕುಟುಂಬವನ್ನೂ – ಹೀಗೆ ಮಾನವಕುಲದ ಪ್ರೀತಿ ವಿಸ್ತಾರಗೊಳ್ಳುತ್ತಾ, ಸಮಾಜ, ಗ್ರಾಮ, ದೇಶ, ಲೋಕ – ಈ ವಿಶಾಲ ವಿಪುಲ ಕ್ಷೇತ್ರಗಳನ್ನೆಲ್ಲಾ ಆವರಿಸಿ ಬೆಳಗುವುದು ಮನುಷ್ಯ ಸಂಸ್ಕೃತಿಯ ಹಿರಿಮೆಯ ಲಕ್ಷಣವಾಗಿದೆ. ಹೆತ್ತ ಜನನಿಯ ಹಾಗೂ ಸಲಹಿದ ಪ್ರೀತಿಸಿದ ಸಕಲ ಕೌಟುಂಬಿಕರ ಉಪಕಾರಕ್ಕೆ ಮನುಷ್ಯ ಋಣಿ ಆಗಿರುವಂತೆ, ಮಾತೃಗರ್ಭದಿಂದ ಇಳಿದ ನಿಮಿಷದಿಂದಲೇ ತನಗೆ ಆಶ್ರಯವಿತ್ತ ಲೋಕದ ಬೆಳಕನ್ನು ತೋರಿಸಿದ, ಮುಂದೆ ಬದುಕಿ ಬಾಳಲು ಬೇಕಾದ ಅನ್ನಾಹಾರಗಳೆಲ್ಲವನ್ನೂ ಒದಗಿಸಿದ ಪಾವನ ಪುಣ್ಯಭೂಮಿಗೂ – ಜನ್ಮಭೂಮಿಗೂ–ಮನುಷ್ಯ ಕೃತಜ್ಞನಾಗಿರುವನು.

ಮನುಷ್ಯನ ಈ ಉತ್ತಮ ನಡತೆಯ – ಶ್ರೇಷ್ಠ ಸಂಸ್ಕಾರದ ಸುಂದರ ಚಿತ್ರ ಆದಿಕವಿ ವಾಲ್ಮೀಕಿಯ ರಾಮಾಯಣದಲ್ಲಿ ಹೃದಯಸ್ಪರ್ಶಿಯಾಗಿ ಚಿತ್ರಿತವಾಗಿದೆ. ಪಿತೃವಾಕ್ಯಪರಿಪಾಲನೆಗಾಗಿ ಶ್ರೀರಾಮ ಹದಿನಾಲ್ಕು ವರ್ಷ ವನವಾಸದ ಸಂಕಷ್ಟವನ್ನು ಅನುಭವಿಸಿದ; ಆ ಅವಧಿಯಲ್ಲಿಯೇ ದುಷ್ಟ ರಾವಣನಿಂದ ಪತ್ನಿ ಸೀತಾದೇವಿ ಅಪಹೃತಳಾಗಿ ನಿಮಿತ್ತ ಆದ ನೋವು ಅಪಾರ. ಕಪಿಸೇನೆಯನ್ನು ಕೂಡಿಸಿ ಕಡಲಿಗೆ ಸೇತುವೆ ಕಟ್ಟಿ, ಲಂಕಾರಾಜ್ಯವನ್ನು ಪ್ರವೇಶಿಸಿ, ಕ್ರೂರ ರಾಕ್ಷಸರ ಸೇನಾಸಮೂಹಸಮೇತ ರಾವಣಕುಂಭಕರ್ಣಾದಿಗಳನ್ನು ವಧಿಸಿ ಸೀತಾದೇವಿಯನ್ನು ಮರಳಿ ಪಡೆಯುವಲ್ಲಿ ಯಶಸ್ವಿಯಾದ; ಆಗ ಹದಿನಾಲ್ಕು ವರ್ಷದ ಅವಧಿಯೂ ಮುಗಿದಿತ್ತು : ಮುಂದೆ ಅಯೋಧ್ಯೆಗೆ ಹಿಂತೆರಳಬೇಕು. ಆ ಸಿದ್ಧತೆಯಲ್ಲಿದ್ದಾಗ; ಕಳೆದ ಹದಿನಾಲ್ಕು ವರ್ಷಗಳ ವನವಾಸಾವಧಿಯಲ್ಲಿಯೂ, ಸೋದರನ ಸಕಲ ಸಂಕಷ್ಟಹೋರಾಟಗಳಲ್ಲಿ ಸಂಪೂರ್ಣ ಸಹಭಾಗಿಯಾಗಿ ಸೇವೆಸಲ್ಲಿಸಿದ ಲಕ್ಷ್ಮಣ ಹೇಳುತ್ತಾನೆ. "ಅಣ್ಣಾ, ಈಗ ನಮ್ಮ ತಂದೆಯೂ ಗತಿಸಿ ಸ್ವರ್ಗಸ್ಥನಾಗಿರುವ, ಮತ್ಸರಗ್ರಸ್ತೆಯಾದ ಆ ಕೈಕೇಯಿ ಇನ್ನೂ ಬದುಕಿ ಉಳಿದಿರುವ ಆ ಅಯೋಧ್ಯೆಗೆ ನಾವು ಏಕೆ ಹೋಗಬೇಕು? ಈ ಲಂಕಾರಾಜ್ಯದಲ್ಲಿಯೇ ಇರುವುದು ಒಳ್ಳೆಯದಲ್ಲವೆ?" –ಆಗ, ಶ್ರೀರಾಮನು ಲಕ್ಷ್ಮಣನಿಗೆ ಹೇಳುತ್ತಾನೆ;

'ಅಪಿ ಸ್ವರ್ಣಮಯೀ ಲಂಕಾ ನ ಮೇ ಲಕ್ಷ್ಮಣ ರೋಚತೇ ।
ಜನನೀಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ॥

"ತಮ್ಮ ಲಕ್ಷ್ಮಣಾ, ಈ ಲಂಕೆ. ಬಂಗಾರದಿಂದಲೇ ಮುಚ್ಚಿಕೊಂಡಿರುವಷ್ಟು ಸಂಪತ್ಸಮೃದ್ಧವಾಗಿದ್ದರೂ, ನನಗೆ ಇಲ್ಲಿರುವುದರಿಂದ ಸರ್ವಥಾ ಹಿತವಿಲ್ಲ. ನನ್ನನ್ನು ಹೆತ್ತ ತಾಯಿ ಕೌಸಲ್ಯೆ ಅಯೋಧ್ಯೆಯಲ್ಲಿ ನನಗಾಗಿ ಕಾಯುತ್ತಿದ್ದಾಳೆ. (ನಿನ್ನನ್ನು ಹೆತ್ತ ತಾಯಿ ಸುಮಿತ್ರೆಯೂ ನಿನ್ನನ್ನು ಅಲ್ಲಿ ಕಾಯುತ್ತಿರುವಳು ಎಂಬುದೂ ಈ ಮಾತಿನ

ಧ್ವನಿ). ಅಷ್ಟು ಮಾತ್ರವಲ್ಲ, ನನ್ನನ್ನು ಹೆತ್ತ ನೆಲ, ಜನ್ಮಭೂಮಿಯೂ ಅಲ್ಲಿಯೇ ಇದೆ. ನನಗೆ ಜನನಿ ಮತ್ತು ಜನ್ಮಭೂಮಿ ಸ್ವರ್ಗಕ್ಕಿಂತಲೂ ಮಿಗಿಲಾದುದು." ಹೀಗೆ ಲಕ್ಷ್ಮಣನನ್ನು ಸಮಾಧಾನಪಡಿಸಿ, ಸೀತಾಸಮೇತನಾಗಿ, ಶ್ರೀರಾಮನು ಅಯೋಧ್ಯೆಗೆ ಬರುತ್ತಾನೆ. ಪತ್ನೀಸೋದರ ಸಮೇತನಾಗಿ ಅಯೋಧ್ಯೆಗೆ ಆಗಮಿಸುವ ಶ್ರೀರಾಮನ ಬರವನ್ನು ತಿಳಿದ ನಗರವಾಸಿಗಳ ವಿಶೇಷತಃ ತಾಯಂದಿರಾದ ಕೌಸಲ್ಯಾಸುಮಿತ್ರೆಯರ ಪರಮಾನಂದವನ್ನು ಹೃದಯಸ್ಪರ್ಶಿಯಾದ ಕಾವ್ಯವಾಣಿಯಲ್ಲಿ ಕವಿಗಳು ವರ್ಣಿಸಿದ್ದಾರೆ. ನಂದಳಿಕೆ ಲಕ್ಷ್ಮಿನಾರಾಯಣ ಕವಿಯ 'ಶ್ರೀರಾಮಪಟ್ಟಾಭಿಷೇಕ' ಕಾವ್ಯದಲ್ಲಿ ಈ ಪ್ರಸಂಗ ಅತ್ಯಂತ ಭವ್ಯವಾಗಿ ವರ್ಣಿತವಾಗಿರುವುದು. ಈ ಸದ್ಭಾವನೆ, ಮಾನವ ಜೀವನದ ಅತ್ಯುತ್ತಮ ಸಂಸ್ಕೃತಿಯಾಗಿದೆ.

ಮನುಷ್ಯಜೀವನದಲ್ಲಿ ತಾಯಿ ಮತ್ತು ತಾಯ್ನೆಲ ಈ ಉಭಯ ವಿಷಯಗಳ ಕುರಿತು ಇಂತು ಎತ್ತಿತೋರುವ ಈ ನಡತೆಗೆ, ಸಂಸ್ಕೃತಿಗೆ, ನಿಸರ್ಗದ ಸಹಜತೆಯೇ ಸರಿಯಾದ ಸಾಕ್ಷಿಯಾಗಿದೆ. ತಾಯಿ ಯಾರು ಎಂಬುದನ್ನು ಪ್ರಕೃತಿಯೇ ತಿಳಿಸುತ್ತದೆ. ತನ್ನ ಪುಣ್ಯ ಗರ್ಭದಲ್ಲಿ ನವಮಾಸ ಧರಿಸಿ, ಆ ಅವಧಿಯಲ್ಲಿ ತನ್ನದೆಯ ರಕ್ತವನ್ನೇ ಅಮೃತವಾಗಿರಿಸಿ ಗರ್ಭಸ್ಥ ಶಿಶುಪಿಂಡಕ್ಕೆ ಊಡಿಸಿ, ಒಂದು ಸುದಿನದಲ್ಲಿ ತಾಯಿ ಮಗುವಿಗೆ ಈ ಪ್ರಪಂಚದ ಬೆಳಕನ್ನು ತೋರಿಸುವಳು. ಎದೆಹಾಲನ್ನಿತ್ತು ಮುದ್ದಿಸಿ ಬೆಳೆಸುವಳು. ಮಿಂದು ಮೈಗೆ, ಶುಭ್ರವಸನಕ್ಕೆ, ಶಿಶುವಿನ ಮಲಮೂತ್ರಾದಿಗಳಿಂದ ಆಗುವ ಕಶ್ಮಲಗಳೆಲ್ಲವನ್ನೂ ವಾತ್ಸಲ್ಯದಿಂದ ಮರೆತು ಸುಖಪಡುವಳು. ಮುದ್ದಿಸಿ, ಮೀಯಿಸಿ, ಉಣಿಸಿ ಬೆಳೆಸುವಳು. ಇದರಿಂದೆಲ್ಲ ಮಗುವಿಗೆ ತಾಯಿಯ ಮೇಲೆ ಅಪಾರ ಪ್ರೀತಿ ನೆಲೆನಿಲ್ಲುತ್ತದೆ; ಇದು ಅತೀವ ಆತ್ಮೀಯವೂ ನಿಸರ್ಗಸಹಜವೂ ಆದ ಒಂದು ಉತ್ತಮ ಗುಣ. ಹಾಗಾಗಿಯೇ ಜನನಿ ಸ್ವರ್ಗಕ್ಕಿಂತಲೂ ಹೆಚ್ಚಿನವಳು. ಮುಂದೆ, ತಂದೆ ಯಾರು? ಯಾರು ಅಕ್ಕ ತಂಗಿಯರು, ಅಣ್ಣತಮ್ಮಂದಿರು? ಇತ್ಯಾದಿ ಕುಟುಂಬದ ಪರಿಚಯ ಪ್ರೀತಿ ಉಂಟಾಗಿ ಆತ ಕುಟುಂಬ ಪ್ರೇಮಿಯಾಗುತ್ತಾನೆ; ಮತ್ತೆ ಸಮಾಜಪ್ರೇಮಿಯೂ, ದೇಶ ಪ್ರೇಮಿಯೂ ಎನಿಸಿ ಆತನ ಸಂಸ್ಕಾರದ ವರ್ತುಲ ವಿಸ್ತರಿಸುತ್ತದೆ.

ಪ್ರತಿಯೊಂದು ಜೀವಿಗೂ ತಾಯಿಯದೇ ಪ್ರಥಮ ಹಾಗೂ ನೈಸರ್ಗಿಕ ಸಹಜ ಪರಿಚಯ ಪ್ರೀತಿ ಎಂಬ ಈ ಕಾರಣದಿಂದಲೇ, ಪ್ರಪಂಚದ ಮಾನವಜನಾಂಗದಲ್ಲಿ ಮಾತೃಮೂಲ ಪದ್ಧತಿಯ ಕುಟುಂಬ ವ್ಯವಸ್ಥೆಯೇ ಪ್ರಥಮವಾಗಿ ನೆಲೆನಿಂತಿತ್ತು ಎಂದು ಮಾನವೇತಿಹಾಸಸಂಶೋಧಕರು ಅಭಿಪ್ರಾಯಪಡುತ್ತಾರೆ. ಹೆಣ್ಣು ಬಸಿರಾಗಿ ಮನೆಯಲ್ಲಿಯೇ ವಾಸಮಾಡಿಕೊಂಡಿರಬೇಕಾದ ಪರಿಸ್ಥಿತಿ ಅನಿವಾರ್ಯ. ಗಂಡುಸಿಗೆ ಅಂತಹ ಅನಿವಾರ್ಯತೆ ಇಲ್ಲ. ಆತ ಜೀವನ ನಿರ್ವಹಣೆಗಾಗಿಯೋ, ಕುಟುಂಬಸಂರಕ್ಷಣೆಗಾಗಿಯೋ, ಉದ್ಯೋಗಾರ್ಥಿಯಾಗಿ ದೇಶಸಂಚಾರಕ್ಕೆ

ಹೊರಡಬೇಕಾಗುತ್ತದೆ; ಯೋಧನಾದರೆ ಸೈನ್ಯದಲ್ಲಿ ಇರಬೇಕು. ದೇಶ ಸಂಚಾರಿಯಾದವನು, ಯುದ್ಧಕ್ಕೆ ಹೋದವನು ಯಾವಾಗ ಮರಳಿ ಬರುತ್ತಾನೋ ಯಾರಿಗೂ ನಿಶ್ಚಿತವಿಲ್ಲ. ಇಲ್ಲಿ, ಮನೆಯಲ್ಲಿ ಗರ್ಭಿಣಿಯಾದ ಹೆಣ್ಣು, ಮಗುವನ್ನು ಹೆತ್ತು ಸಾಕುತ್ತಾಳೆ. ಹಾಗಾಗಿ, ಕುಟುಂಬ, ಮನೆ ಎಂದರೆ ಮಗುವಿಗೆ ತಾಯಿಯೇ ಆದಳು; ತಂದೆಯ ಪರಿಚಯ ಅಪೂರ್ವ. ಈ ನಿಸರ್ಗಸಹಜ ಪರಿಸ್ಥಿತಿಯ ಕೌಟುಂಬಿಕ ಜೀವನದ ಹಿನ್ನೆಲೆಯೇ ಮಾತೃಪ್ರಧಾನ ಕುಟುಂಬ ಪದ್ಧತಿಗೆ ಮೂಲವಾಗಿದೆ. ಇದು ಸಹಜವೂ ಸ್ವಾಭಾವಿಕವೂ ಆದುದು. 'ಗೃಹಣೀ ಗೃಹಮುಚ್ಯತೇ' ಎಂಬ ಮಾತೂ ಇದನ್ನೇ ಸಮರ್ಥಿಸುತ್ತದೆ.

'ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ'

ಎಂಬ ಶ್ರೀಮತ್ ಶಂಕರಾಚಾರ್ಯರ ವಾಣಿಯೂ ಮಾತೃಸ್ಥಾನದ ಮಹತ್ವವನ್ನು ಸಾರಿ ಹೇಳುತ್ತದೆ. ತಾಯಿಯ ಆಶೀರ್ವಾದ ಪಡೆದು ಬಾಲಸನ್ಯಾಸಿಯಾಗಿ ಹೋದವರು, ದೇಶಸಂಚಾರ ಮಾಡುತ್ತಾ, ಕನ್ಯಾಕುಮಾರಿಯಿಂದ ಹಿಮಾಲಯದ ತನಕ ಆಶ್ರಮಗಳಲ್ಲಿ ಮತಸಿದ್ಧಾಂತಗಳನ್ನು ಅಭ್ಯಸಿಸಿ, ಅದ್ವೈತಮತಸ್ಥಾಪಕರಾಗಿ ಪ್ರಸಿದ್ಧರಾದ ಆ ಕಾಲದಲ್ಲಿ ಕಾಲಡಿಯಲ್ಲಿ ತನ್ನ ತಾಯಿ ಅಸ್ವಸ್ಥಳಾಗಿರುವಳೆಂದು ತಿಳಿದು ಅಲ್ಲಿಗೆ ಬಂದು, ಆಕೆ ಮೃತಪಟ್ಟಾಗ, ಸನ್ಯಾಸಿಯಾದರೂ, ತಾನೇ ಮಾತೃಶವಸಂಸ್ಕಾರಗಳನ್ನು ನೆರವೇರಿಸಿದ, ಅಪೂರ್ವ ಸಾಧನೆಗೈದ ಶ್ರೀ ಶಂಕರಾಚಾರ್ಯರು, 'ತಾಯಿಯಾದವಳು ಎಂದೆಂದೂ ದೊಡ್ಡವಳು'-ಎಂಬ ಸ್ತೋತ್ರವನ್ನು ರಚಿಸಿ ಪ್ರಸಿದ್ಧರಾಗಿದ್ದಾರೆ, ಕೆಟ್ಟವನಾದ ಮಗನು ಹುಟ್ಟಲೂ ಬಹುದು; ಆದರೆ ತಾಯಿ ಎಂದೆಂದೂ ಕೆಟ್ಟವಳಿರಲಾರಳು-ಎಂಬ ಅವರ ಮಾತೃಪ್ರಶಂಸೆ ಮನನೀಯವಾದುದು.

ವೇದಕಾಲದಲ್ಲಿಯೂ ಮಾತೃಸ್ಥಾನಕ್ಕೆ ಪ್ರಥಮ ಮಹತ್ವ ನೀಡಲಾಗಿದೆ. ಯಜ್ಞೋಪವೀತಧಾರಣೆ ಮಾಡಿದ ವಟುವಿಗೆ ಗುರು ಹೇಳುವ ನೀತಿಮಂತ್ರ ಪಾಠದಲ್ಲಿ ಮೊದಲನೆಯ ಮಂತ್ರ-'ಮಾತೃದೇವೋ ಭವ' ಎಂಬುದು; ಎರಡನೆಯದು 'ಪಿತೃದೇವೋ ಭವ'; ಮೂರನೆಯದು 'ಆಚಾರ್ಯ ದೇವೋ ಭವ'; ನಾಲ್ಕನೆಯದು 'ಅತಿಥಿದೇವೋ ಭವ' ಎಂದೂ ಆಗಿದೆ. ಬ್ರಹ್ಮೋಪದೇಶ ಪಡೆದು ದ್ವಿಜನಾದವನು ಮೊದಲು ತಿಳಿದುಕೊಳ್ಳಬೇಕಾದುದು 'ತಾಯಿಯೇ ದೇವರು' ಎಂದು. ಜೀವಿಯ ಜನ್ಮಕ್ಕೆ ತಂದೆಯೂ ಕಾರಣನೆಂಬುದರಿಂದ, ತಂದೆಯನ್ನೂ ದೇವರು ಎಂದು ಆಮೇಲೆ ತಿಳಿದುಕೊಳ್ಳತಕ್ಕದ್ದಿದೆ. ಜನ್ಮವಿತ್ತ ತಾಯಿತಂದೆಯರ ನಂತರ, ತನಗೆ ಒಳ್ಳೆಯ ಶಿಕ್ಷಣ ನೀಡಿ ವಿದ್ಯಾವಂತನನ್ನಾಗಿ ಮಾಡಿದ ಆಚಾರ್ಯನನ್ನು, ದೇವರು ಎಂದು ಭಾವಿಸಬೇಕೆಂದು ಮಂತ್ರ ಸಾರುತ್ತದೆ. ಆಮೇಲೆ ಸಾಮಾಜಿಕ ಕರ್ತವ್ಯವನ್ನೂ ಮಂತ್ರ ತಿಳಿಸುತ್ತದೆ. ಮನೆಗೆ ತಿಥಿ-ವಾರ ತಿಳಿಸದೆ ಯಾರಾದರೂ ಬರಬಹುದು; ಹಾಗೆ ಬಂದ ಅತಿಥಿಗಳು - ಎಂದರೆ, ನಾವು ಅವರನ್ನು ಆಮಂತ್ರಿಸದೇ ಇದ್ದರೂ

ಬರೋಣವನ್ನು ಅವರು ಬರುವ ತಿಥಿ-ವಾರ ನಮಗೆ ಮುಂಚಿತವಾಗಿ ತಿಳಿಸದೇ ಇದ್ದರೂ- ಆ ಅತಿಥಿಗಳೂ ನಮಗೆ ದೇವ ಸಮಾನರಾಗಿ ಗೌರವಾರ್ಹರು ಎಂಬ ನೀತಿ ಇದೆ. ತಿಥಿ-ವಾರ ತಿಳಿಸದೆ ಬಂದವರನ್ನೂ ದೇವರೆಂದು ತಿಳಿದು ಸತ್ಕರಿಸಬೇಕೆನ್ನುವಾಗ, ನಾವು ಆಮಂತ್ರಿಸಿ ಅಥವಾ ಅವರು ಬರುವ ದಿನ ವಾರ ತಿಳಿಸಿ ಬಂದಿದ್ದರೆ ಅದಕ್ಕಿಂತಲೂ ವಿಶೇಷವಾಗಿ ಉಪಚರಿಸಬೇಕೆಂಬ ಧ್ವನಿ ಮೂಡುತ್ತದೆ. ಇವೆಲ್ಲವೂ ನಮ್ಮ ಪ್ರಾಚೀನ ಕಾಲದ ಉತ್ತಮ ನಡವಳಿಕೆ -ಸಂಸ್ಕೃತಿಗಳಾಗಿವೆ. ಇಂತಹ ನಮ್ಮ ಪ್ರಾಚೀನ ಕಾಲದ ಒಳ್ಳೆಯ ಹಿನ್ನೆಲೆಯನ್ನು, ಸಂಸ್ಕೃತಿಯನ್ನು ಅಭಿಮಾನದಿಂದ ಗುರುತಿಸಿಕೊಳ್ಳತಕ್ಕದ್ದಿದೆ.

೨

ವಯಸ್ಸು ಅನುಭವಗಳಲ್ಲಿ ತಮಗಿಂತ ಕಿರಿಯರಾದವರನ್ನು ಹಿರಿಯರು ತಮ್ಮ ನಡತೆ, ಆಚರಣೆ, ಉಪದೇಶಗಳಿಂದ ಒಳ್ಳೆಯ ಸ್ಥಿತಿಗೆ ತರಲು ಪ್ರಯತ್ನಿಸುವುದು, ಉಪದೇಶಿಸುವುದು ಅವರ ಕರ್ತವ್ಯವೇ. ಇದು ಸಮಾಜದ ನಿರಂತರವಾದ ಒಂದು ಸದಾಚಾರ ಸತ್ಸಂಪ್ರದಾಯ. ಈ ದೃಷ್ಟಿಯಲ್ಲಿಯೇ, ನಾವು ನಮ್ಮ ಪ್ರಾಚೀನರು ನಮಗೆ ನೀಡಿದ ಉಪದೇಶವನ್ನು ಜೀರ್ಣಿಸಿ ಪರಿಪಾಲಿಸಿಕೊಂಡು, ಮುಂದಿನ ಸಂತತಿಯು ಯೋಗ್ಯ ನಾಗರೀಕರಾಗುವಂತೆ ನಾವು ಪ್ರಯತ್ನಿಸಬೇಕು. ಇಂತಹ ಸದಾಚಾರದ ಸಂಪ್ರದಾಯಕ್ಕೆ ನಮಗೆ ಬೆಳಕು ತೋರಿಸುವ ಗ್ರಂಥಗಳು ಬೇಕಾದಷ್ಟಿವೆ. ವೇದ, ಉಪನಿಷತ್ತು, ಸಂಹಿತೆ, ಶ್ರುತಿ, ಸ್ಮೃತಿ, ಇತಿಹಾಸ, ಪುರಾಣ, ಕಾವ್ಯ, ಜ್ಯೋತಿಷ, ವೈದ್ಯಶಾಸ್ತ್ರ, ಗಣಿತ ಈ ಎಲ್ಲಾ ವಿಭಾಗಗಳಲ್ಲಿಯೂ ಸಾಕಷ್ಟು ಉದ್ಗ್ರಂಥಗಳಿವೆ. ಬಹುಶಃ ಪ್ರಪಂಚದ ಇತರ ಯಾವುದೇ ಭಾಗಗಳ ಜನಾಂಗಕ್ಕೆ ಲಭ್ಯವಾಗದ ಈ ಮಹತ್ತಾದ ಜ್ಞಾನಭಂಡಾರ ಭಾರತೀಯರಿಗಿದೆ ಎಂಬುದು ಅಭಿಮಾನಕರ. ಆದುದರಿಂದ ನಮ್ಮ ಮುಂದಿನ ಸನ್ಮಾರ್ಗದ ನಡತೆಗೆ, ಸಂಸ್ಕೃತಿಗೆ ಬೆಳಕು ಬಿದ್ದೀತು ಎಂಬ ನಿಶ್ಚಿತವಾದ ವಿಶ್ವಾಸ ಇದೆ.

ದೌಭಾಗ್ಯವೆಂದರೆ, ಇಂದು ನಾವು ಈ ಜ್ಞಾನ-ತತ್ವಗಳ ನಿಧಿಯನ್ನು ಗುರುತಿಸಿಕೊಳ್ಳಲು ಅಶಕ್ತರಾಗಿದ್ದೇವೆ. ಇದಕ್ಕೆ ಮುಖ್ಯ ಕಾರಣ, ಹಲವಾರು ಶತಮಾನಗಳಿಂದ ನಮಗೆ ಅಭ್ಯಾಸವಾದ ದಾಸ್ಯಬುದ್ಧಿ; ಅದರಿಂದಾಗಿ ನಮ್ಮಲ್ಲಿ ಮೂಡಿಬಂದ ಸ್ವಾರ್ಥ ಸಂಕುಚಿತ ದೃಷ್ಟಿ. ಜಾತಿಯಲ್ಲಿ ಶ್ರೇಷ್ಠರಾದವರು ಮಾತ್ರ ವೇದಾದಿಗಳನ್ನು ಓದಲರ್ಹರು; ಇತರರು ಓದಿದರೆ 'ಶಾಂತ ಪಾಪಂ' ಎಂದು ಕಣ್ಣು ಕಿವಿ ಮುಚ್ಚಿಕೊಂಡವರೇ ಅದನ್ನು ಸರಿಯಾಗಿ ಅಭ್ಯಸಿಸದೆ, ಇತರರು ಅಭ್ಯಸಿಸಕೂಡದೆಂದು ನಿಷೇಧಿಸಿ, ಬುದ್ಧಿಗೆ ದಾಸ್ಯಜನ್ಯ ಸ್ವಾರ್ಥದ ಕಳಂಕ ಲೇಪ ಹಚ್ಚಿ ಕುಳಿತರು. ಹೀಗಿದ್ದರೂ, ಒಮ್ಮೊಮ್ಮೆ ದ್ವೈತ, ಅದ್ವೈತ, ವಿಶಿಷ್ಟಾದ್ವೈತಮತಸ್ಥಾಪಕರಾದ

ಆಚಾರ್ಯತ್ರಯರ ಬೋಧನೆಯಿಂದಲೋ, ಸ್ವಾಮಿ ವಿವೇಕಾನಂದ, ಅರವಿಂದಮಹರ್ಷಿ ಇಂತಹ ಮಹಾಪುರುಷರ ಉಪದೇಶ ಸೂಕ್ತಿಗಳಿಂದಲೋ ವಿದೇಶೀ ಸಂಶೋಧಕ ವಿದ್ವಾಂಸರಾದ ಮೇಕ್ಸ್ ಮುಲ್ಲರ್, ಮೆಕ್‌ಡೊನಾಲ್ಡ್ ಪ್ರಭೃತಿ ಮಹನೀಯರ ಗ್ರಂಥಗಳಿಂದಲೋ – ಮೂಲ ವೈದಿಕ–ಸಂಸ್ಕೃತ ಭಾಷೆ ತಿಳಿಯದೆ ಕಲಿಯದೆ ಇದ್ದರೂ ಆಂಗ್ಲ ಭಾಷೆಯ ಮೂಲಕವೋ ಪ್ರಾಚೀನ ಸಂಸ್ಕೃತಿಯ ಗಂಧದ ಆನಂದವನ್ನು ಅನುಭವಿಸುತ್ತೇವೆ. ಈ ಪರಿಮಳ ಎಲ್ಲಿಂದ ಬರುತ್ತದೆ ಎಂದು ಹಲವರಿಗೆ ತಿಳಿಯದು. ನಮ್ಮ ಈ ಸ್ಥಿತಿಯನ್ನು ರಾಷ್ಟ್ರಕವಿ ಗೋವಿಂದ ಪೈಗಳ ಈ ಕವನಪಂಕ್ತಿ ಸರಿಯಾಗಿ ತಿಳಿಸುತ್ತದೆ.

"ತನ್ನ ಮರೆಯ ಕಂಪನರಿಯದದನೆ ಹೊರಗೆ ಹುಡುಕುವ
ಮೃಗದ ಸೇಡು ನಮ್ಮ ಪಾಡು...."

ಕಸ್ತೂರಿಮೃಗಕ್ಕೇ ಆಗಾಗ ಕಸ್ತೂರಿಯ ಪರಿಮಳ ಬರುತ್ತದೆ. ಆ ಪರಿಮಳ ಎಲ್ಲಿಂದ ಎಂದು, ಅದನ್ನು ಹೊರಗಡೆಯಲ್ಲಿ ಹುಡುಕುವ ಭ್ರಮೆಯಿಂದ ಮೃಗ ಸುತ್ತು ಸುತ್ತು ಬರುತ್ತದೆ. ಆದರೆ ಹಿಂಬದಿಯಿಂದಲೇ ಹೊರಡುವ ಕಸ್ತೂರಿಯಿಂದ ಬರುವ ಆ ಪರಿಮಳದ ಪರಿಚಯ ಮೃಗ, ಎಷ್ಟೊಂದು ಪರಿಭ್ರಮಿಸಿ ತಿರುತಿರುಗುತ್ತಿದ್ದರೂ ಅದಕ್ಕೆ ಕಾಣಿಸುವುದೇ ಇಲ್ಲ–ಇಂತಿದೆ ನಮ್ಮ ಅವಸ್ಥೆ ಕೂಡ. ಪರಮೋಚ್ಚವಾದ ಸಂಸ್ಕೃತಿ ನಮ್ಮಲ್ಲಿದೆಯೆಂದು ಒಮ್ಮೊಮ್ಮೆ ನಮಗೆ ಭಾಸವಾದರೂ ಅದನ್ನು ಸರಿಯಾಗಿ ಆಳವಾಗಿ ತಿಳಿದುಕೊಳ್ಳುವ ಅರ್ಹತೆ ಇಂದಿಲ್ಲವಾಗಿದೆ. ಆ ಬಗ್ಗೆ ಬೇಕಾದ ಯಾವ ಅನುಕೂಲವೂ ದೊರಕದಿರುವುದು ದೌರ್ಭಾಗ್ಯವೆನ್ನಬೇಕು. ಅಂತಹ ಅತ್ಯುತ್ತಮ ತತ್ವಾದರ್ಶಗಳ ತಿಳುವಳಿಕೆಗೆ ಬೇಕಾದ ಶಿಕ್ಷಣ ಪದ್ಧತಿಯನ್ನು ಜಾರಿಗೊಳಿಸುವ ಸಮೃದ್ಧಿ ರಾಷ್ಟ್ರದ ನೇತಾರರೆಂಬವರಿಗೆ ಬರಲಿ ಎಂದು ಪ್ರಾರ್ಥಿಸತಕ್ಕದ್ದಿದೆ. ಭಾರತೀಯ ಪ್ರಾಚೀನ ತತ್ವಸಿದ್ಧಾಂತಗಳ ಅಭ್ಯಾಸವೂ ಶಿಕ್ಷಣಕ್ಷೇತ್ರದಲ್ಲಿ ವಿದ್ಯಾರ್ಥಿಗಳಿಗೆ ದೊರಕಿದಲ್ಲಿ ಅವರಿಗೆ ಜ್ಞಾನದ ನಿಧಿಯನ್ನೇ ಕೊಟ್ಟಂತಾದೀತು. ಸಂಸ್ಕೃತಿಯ ಬೆಳಕಿನ ಸನ್ಮಾರ್ಗದಲ್ಲಿ ಭಾರತ ಜನತೆ ಮುನ್ನಡೆಯಲು ಅದರಿಂದ ಸಹಾಯವಾದೀತು.

ಬ್ರಹ್ಮನ ಚತುರ್ಮುಖಗಳಿಂದ ಚತುರ್ವೇದಗಳು ಉದ್ಭವಿಸಿದುವು–ಅವು ಅಪೌರುಷೇಯವಾದುವು–ಎಂಬ ಅಲೌಕಿಕ ಭಾವನಾತ್ಮಕ ಚಿಂತನೆ, ಹೇಗೇ ಇರಲಿ – ಬ್ರಹ್ಮಜ್ಞಾನಿಗಳಾದ ನಿರ್ಮಲಮನಸ್ಸಿನ ಋಷಿವರ್ಯರು, ನಿಸರ್ಗದ ರುದ್ರರಮಣೀಯತೆಗೆ ಪ್ರತಿಕ್ರಿಯೆಗೊಂಡು ವೇದಮಂತ್ರಾದಿಗಳನ್ನು ಉದ್ಗರಿಸಿದರೆಂಬುದು ಇಂದು ವಿಚಾರಶೀಲರ ಅಭಿಪ್ರಾಯ. ಆ ಅಭಿಪ್ರಾಯಕ್ಕೆ ಸಾಕಷ್ಟು ಸಾಕ್ಷಿಗಳನ್ನೂ ನಾವು ಕಾಣುತ್ತೇವೆ. ಮಳೆ, ಬೆಂಕಿ, ಗಾಳಿ, ನೀರು, ಸೂರ್ಯ, ಚಂದ್ರ, ನಕ್ಷತ್ರ, ಖಗೋಳ ಇವುಗಳ ನಿರೀಕ್ಷೆಯಲ್ಲಿ ಆ ಬ್ರಹ್ಮರ್ಷಿಗಳ ನಿರ್ಮಲ ಹೃದಯದಲ್ಲಿ ಉಂಟಾದ ಭಾವನ ಲಹರಿಯಲ್ಲಿಯೇ ವೇದಮಂತ್ರಗಳಾದುವೆಂಬುದಕ್ಕೆ ಸಾಕಷ್ಟು

ಆಧಾರಗಳನ್ನು ಕಾಣುತ್ತೇವೆ. 'ಮರುದ್ಭಿರಗ್ನೇ ಆಗಹಿ'-ಎಂಬ ಈ ಪಲ್ಲವಿಯಿಂದ, ಋಗ್ವೇದದಲ್ಲಿ ಕೆಲವೊಂದು ಸೂಕ್ತಗಳಿವೆ:*

ಅಗ್ನಿ ಬಾ, ಮರುತುಗಳ ಜತೆಗೆ ಬಾ !
ಈ ಸುಂದರಾಧ್ವರಕೆ ಸಂಭ್ರಮೋಲ್ಲಸದಿ ಬಾ,
ಸೋಮರಸಪೀಯೂಷಪಾನಕಿದೊ ಪಾರಿ ಬಾ,
ಬಾ, ನಿನ್ನೊಳೆನ್ನ ಕರುಳಿನ ಕರೆಯು ಕರುಣಿ ಬಾ,
ಅಗ್ನಿ ಬಾ ಮರುತುಗಳ ಜತೆಗೆ ಬಾ.

ಮೇಘನಿರ್ಘೋಷದಿಂದುಗ್ರರು ಸಮಗ್ರರುಂ,
ಸರ್ವಬಲಗರ್ವಿತರ ದರ್ಪನಿರ್ಮೂಲರುಂ,
ಆದ ಆ ಮರುತುಗಳ ನಾದದಿಂ ಮೋದದಿಂ
ಅಗ್ನಿ ಬಾ ಮರುತುಗಳ ಜತೆಗೆ ಬಾ,

ರಮಣೀಯ ರಶ್ಮಿಯಿಂ ಗಗನದಲಿ ಕಂಗೊಳಿಸಿ,
ಬಲದಿಂ ಮಹಾ ಸಮುದ್ರವ ದುರ್ಬಲಂಗೊಳಿಸಿ,
ಸಾಗರೋತ್ತರ ಕಿರಣ ಬೀರಿ ಬೀಗುವರೊಡನೆ
ಅಗ್ನಿ ಬಾ ಮರುತುಗಳ ಜತೆಗೆ ಬಾ,

ಎರೆವೆನಿದೊಸೋಮರಸ, ಪ್ರಥಮ ಪಾನಕೆ ನಿನಗೆ,
ಹೇ ಅಗ್ನೇ, ಕುಡಿ ನೀನೆ, ಈ ಮಧುರ ಮಧುವೆನ್ನೆ,
ಬಾ, ನಿನ್ನೊಳೆನ್ನ ಕರುಳಿನ ಕರೆಯು ಕರುಣೆ ಬಾ,
ಅಗ್ನಿ ಬಾ ಮರುತುಗಳ ಜತೆಗೆ ಬಾ,

-ಇದು ಒಂದು ಉದಾಹರಣೆ. ಇಂಥವೇ ಹಲವಿದೆ; ಇದರಲ್ಲಿ ಮೇಘನಿರ್ಘೋಷ, ಮರುತ, ಗಗನ, ಮಹಾಸಮುದ್ರ, ಕಿರಣ, ಸೋಮರಸ, ಮಧುರ ಮಧು - ಇಂತಹ ನಿಸರ್ಗದ ಸೌಂದರ್ಯ, ವೈಭವ, ಗಾಂಭೀರ್ಯ, ರಸಿಕತೆಗಳೇ ಮುಖ್ಯ ವಿಷಯಗಳಾಗಿವೆ. ಆಧುನಿಕ ಕಾಲದ ಸಂಸ್ಕೃತಿಪ್ರೇಮಿಗಳಿಗೂ ಪ್ರಿಯವಾಧ ವಿಚಾರಗಳೇ ತುಂಬಿಕೊಂಡಿವೆ.

ಜನ್ಮತಃ ಕ್ಷತ್ರಿಯನಾಗಿದ್ದ ವಿಶ್ವಾಮಿತ್ರನು-

'ಧಿಕ್‌ಬಲಂ ಕ್ಷತ್ರಿಯಬಲಂ, ಬ್ರಹ್ಮತೇಜೋ ಬಲಂ ಬಲಮ್,

ಎಂಬೀ ನಿರ್ಧಾರಕ್ಕೆ ಬಂದು, ಜೀವಿತದಲ್ಲಿ ಮಹಾತ್ಸಾಧನೆ ಮಾಡಿ, ಪ್ರತಿಸ್ಪರ್ಧಿಯಾದ ವಸಿಷ್ಠನಿಂದಲೇ ಬ್ರಹ್ಮಶ್ರಿ ಪದವಿ ಪಡೆದ, ಮಹಾಬ್ರಾಹ್ಮಣನೆನಿಸಿದ. ಆತನು ರಚಿಸಿದ ಗಾಯತ್ರೀಮಹಾಮಂತ್ರವೇ ಪ್ರತಿದಿನ ಸೂರ್ಯೋದಯ ಕಾಲದಲ್ಲಿ, ಸೂರ್ಯನಿಗೆ ಅರ್ಘ್ಯವನ್ನು ಅರ್ಪಿಸುವಾಗ ಹೇಳುವ ಮಂತ್ರವಾಗಿದೆ.

'ಓಂ ತತ್ಸವಿತುರ್ವರೇಣ್ಯಂ

ಭರ್ಗೋ ದೇವಸ್ಯ ಧೀಮಹಿ

ಧಿಯೋ ಯೋ ನಃ ಪ್ರಚೋದಯಾತ್....'

ಈ ಮಂತ್ರದಲ್ಲಿ, ರಾತ್ರಿ ಇಡೀ ನಿದ್ರಾಪರವಶನಾಗಿದ್ದ ಕತ್ತಲೆಯ ಕರಾಳಗರ್ಭದಲ್ಲಿ ಅಡಗಿದ್ದ ಮಾನವ ಜೀವಕ್ಕೆ, ಪ್ರಥಮ ಸೂರ್ಯಕಿರಣದ ಹೊಂಬೆಳಕು ಪ್ರತ್ಯಕ್ಷವಾದಾಗ, ಆಗುವ ಅಮಿತಾನಂದವೇ ಅಮೃತವಾಗಿದೆ. ರಾತ್ರಿಕಾಲದ ಈ ಕಗ್ಗತ್ತಲೆಯಲ್ಲಿ ಬುದ್ಧಿ ಜಡವಾಗಿತ್ತು. ಎಲೈ ಸೂರ್ಯನೇ, ಬುದ್ಧಿಯನ್ನು ಬೆಳಗಿಸು–ಎಂಬೀ ಪ್ರಾರ್ಥನೆ ಇಲ್ಲಿದೆ. ಇದು ಕೂಡಾ ಅತ್ಯಂತ ಭಾವನಾಮಯವಾದ ಆರ್ದ್ರಹೃದಯದ ಸುಂದರ ಕವನವೇ ಆಗಿದೆ.

'ನಾನೃಷಿಃ ಕುರುತೇ ಕಾವ್ಯಮ್'

ಎನ್ನುವ ಸೂಕ್ತಿಯನ್ನು ನಾವಿಲ್ಲಿ ಸ್ಮರಿಸಿಕೊಳ್ಳಬಹುದು, ಕವಿ ಋಷಿಯಂತೆ ಪಾರದರ್ಶಿ, ಭವಿಷ್ಯತ್ತನ್ನು ಕವಿ ಕಾಣಬಲ್ಲನು, ಹೇಳಬಲ್ಲನು. ಈ ಅರ್ಹತೆ, ಮಂತ್ರದ್ರಷ್ಟಾರರಾದ ಪ್ರಾಚೀನ ಬ್ರಹ್ಮರ್ಷಿಗಳಿಗೂ ಅನ್ವಯಿಸುವ ಗುಣವಿಶೇಷ. ಅವರ ವಾಣಿಯಲ್ಲಿ ಎಂತಹ, ಉದಾತ್ತ ಜೀವನದ ಸಂಸ್ಕಾರ ರೂಪುಗೊಂಡಿದೆ ಎಂಬುದಕ್ಕೆ ಈ ಶಾಂತಿಮಂತ್ರ ಒಂದು ಉದಾಹರಣೆ :

ಓಂ ಸಹನಾವವತು, ಸಹನೌ ಭುನಕ್ತು

ಸಹವೀರ್ಯಂ ಕರವಾವಹೈ

ತೇಜಸ್ವಿನಾವಧೀತಮಸ್ತು

ಮಾ ವಿದ್ವಿಷಾವಹೈ.

ಓಂ ಶಾಂತಿಃ ಶಾಂತಿಃ ಶಾಂತಿಃ

"ನಮ್ಮನ್ನು ಜತೆಯಲ್ಲಿ ಕಾಪಾಡಲಿ; ನಾವು ಜತೆಯಲ್ಲಿ ಉಣ್ಣುವಂತಾಗಲಿ; ನಾವು ಜತೆಯಲ್ಲಿಯೇ ದುಡಿಯುತ್ತಿರೋಣ; ನಮ್ಮ ಅಭ್ಯಾಸ ಆಚಾರಗಳು ತೇಜಸ್ವಿಯಾಗಿ ಇರಲಿ. ಎಂದೆಂದು ದ್ವೇಷಿಸದೆ ಪ್ರೀತಿಯಿಂದ ನಾವು ಜೀವಿಸೋಣ." ಹೀಗೆ ಅನ್ಯೋನ್ಯ ಸಹಕಾರದಿಂದಜೀವಿಸಬೇಕು. ಆತ್ಮಜ್ಞಾನವನ್ನು ಎಲ್ಲರೂ ಪಡೆಯಬೇಕು. ಅದನ್ನು

ಪಡೆಯಲು ಬೇಕಾದ ಸಾಹಸಕರ್ಮಗಳನ್ನು ಮಾಡಬೇಕು, ಪ್ರಯತ್ನಪೂರ್ವಕ ದುಡಿದು ಪ್ರಗತಿ ಹೊಂದಬೇಕು. ಉತ್ತಮ ರೀತಿಯ ಜೀವನ ನಡೆಸುವರೇ ಮಾನಸಿಕ ಸ್ಥಿತಿಯನ್ನೂ ನಡತೆಯನ್ನೂ ನೇರ್ಪಡಿಸಿಕೊಂಡಿರಬೇಕು–ಎಂಬೀ ನೀತಿ ಈ ಸಂಸ್ಕೃತಿ ಜೀವನದ ಉದಾತ್ತತೆಗೆ ಸಹಾಯಕ–ಇಂತಹ ಪವಿತ್ರ ಮಂತ್ರಗಳಲ್ಲಿ ಯಾವನಿಗಾದರೂ ಉಚ್ಚ – ನೀಚತೆಯ ಕಳಂಕ ಕಾಣುತ್ತದೆಯೇ? ಹೀಗೆ, ಐಕ್ಯದಿಂದಲೂ ಸೌಹಾರ್ದದಿಂದಲೂ, ಸಹಕಾರದಿಂದಲೂ, ಬಾಳನ್ನು ಬೆಳಗಿಸಬಲ್ಲೆವಾದರೆ, ಜೀವನದಲ್ಲಿ, ಸಮಾಜದಲ್ಲಿ ರಾಷ್ಟ್ರದಲ್ಲಿ, ವಿಶ್ವದಲ್ಲೇ ಶಾಂತಿ ನೆಲೆಸುವುದು ಎಂಬುದನ್ನು ಬೋಧಿಸುವ ಶಾಂತಿ ಪಾಠವನ್ನು ಮೂರು ಸಲ ಉಚ್ಚರಿಸುವುದು ಕೂಡಾ ಮಹತ್ತಾದ ಸಂಸ್ಕೃತಿಯ ದ್ಯೋತಕ. ಇಂತಹ ಅಮೂಲ್ಯವಾದ ಜ್ಞಾನ ನಿಧಿಯ ಭಂಡಾರಕ್ಕೆ ಇಂದು ಭದ್ರವಾದ ಬೀಗ ಜಡಿದು ಬಿಟ್ಟಿದ್ದೇವೆ. ಆ ನಿಧಿಯನ್ನು ಮರಳಿ ಪಡೆಯಲು, ಆ ಸಂಸ್ಕೃತಿಯ ಹೊಂಬೆಳಕನ್ನು ಕಾಣಲು ಲೋಕ ಚಕ್ಷು ನಮ್ಮ ಕಣ್ಣುಗಳನ್ನು ತೆರೆಯಿಸಬೇಕೆಂದು ಪುನಃ ಪ್ರಾರ್ಥನೆ ಮಾಡುತ್ತಿರಬೇಕು. ಮನಃಪೂರ್ವಕವಾದ ಈ ಪ್ರಾರ್ಥನೆಯೊಂದಿಗೆ ಭಾರತೀಯ ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕ್ಷೇತ್ರಗಳ ಆಳವಾದ ಕೂಲಂಕಷವಾದ ಅಭ್ಯಾಸವನ್ನೂ, ಅನುಸರಣೆಯನ್ನೂ ಮಾಡುವುದು ನಮ್ಮ ಕರ್ತವ್ಯ.

೩

ಹಿಂದೆ ಇಲ್ಲದಿರುವುದು, ಇಂದು ಆಗಿರುವ, ನಮ್ಮ ಸಾಂಸ್ಕೃತಿಕ ಅಧಃಪತನಕ್ಕೆ ಮುಖ್ಯ ಕಾರಣ, ಸುಮಾರು ಐದುನೂರು ವರುಷಗಳ ತನಕದ ವಿದೇಶಿಯರಾದ ಮೊಗಲ್ ಹಾಗೂ ಬ್ರಿಟಿಷ್ ಅಧಿಪತ್ಯದ ಆ ಧೀರ್ಘಾವಧಿಯಲ್ಲಿ ಭಾರತೀಯ ಜನಮನದಲ್ಲಿ ಅಂಟಿಕೊಂಡು ಇರುವ ದಾಸ್ಯಪಂಕದ ಲೇಪ. ಅಂಗ ವಂಗ ಕಳಿಂಗಾದಿ ಐವತ್ತಾರು ರಾಜ್ಯಗಳನ್ನು ಸೂರ್ಯಚಂದ್ರ ವಂಶವೇ ಮೊದಲಾದ ರಾಜ ವಂಶಗಳು ಇಲ್ಲಿ ಆಳುತ್ತಿದ್ದರೂ, ಆ ಬೇರೆ ಬೇರೆ ರಾಜವಂಶಗಳ ರಾಜ್ಯಭಾರ, ಇಂದಿನ ಪ್ರಾಂತಪುನರ್ವಿಂಗಡನೆಯಂತಹ ಆಡಳಿತ ಸೌಕರ್ಯದಂತೆ ಇತ್ತಲ್ಲದೆ ಅನ್ಯಥಾ ಆಗಿರಲಿಲ್ಲ.

'ಶೈಶವೇಭ್ಯಸ್ತ ವಿದ್ಯಾನಾಂ, ಯೌವನೇ ವಿಷಯೈರ್ಜನಾಂ
ವಾರ್ಧಕೇ ಮುನಿವೃತ್ತಿನಾಂ ಯೋಗೇನಾಂತೇ ತನುತ್ಯಜಾಂ
ತ್ಯಾಗಾಯ ಸಂಭೃತಾರ್ಥಾನಾಂ, ಸತ್ಯಾಯ ಮಿತಭಾಷಿನಾಂ.....'

–ಇಂತಹ ರಾಜವಂಶೀಯರಿಗೆ ವಸಿಷ್ಠ ವಿಶ್ವಾಮಿತ್ರರಂತಹ ಉಪದೇಶಕರಿದ್ದರು. 'ರಾಮರಾಜ್ಯ'ದಂತಹ ಸರ್ವಸ್ವತಂತ್ರ ಸುಖೀ ಗ್ರಾಮಸ್ವರಾಜ್ಯದ ನಿರ್ಮಾಣ ಅಂದು ಆಗಿತ್ತೆಂದು ಹೆಮ್ಮೆಪಡಬಹುದು. ಆದರೆ ಅದೆಲ್ಲವೂ ಭಾರತ ವಿದೇಶಿಯರ ದಾಸ್ಯದಲ್ಲಿ

ಅದ್ದಿದಾಗ ನಿರ್ನಾಮಗೊಂಡಂತಾಯಿತು. ಭಾರತದ ಆರ್ಥಿಕ ಸಂಪತ್ತಿನ ಸೂರೆಯೊಂದಿಗೆ, ಬಲಾತ್ಕಾರ, ಅಧಿಕಾರ, ಆಸೆ ಆಮಿಷಗಳಿಂದ ಭಾರತೀಯರ ಬೌದ್ಧಿಕ ಸಂಪತ್ತನ್ನೂ – ಸಂಸ್ಕೃತಿಯನ್ನೂ ಸುಲಿಗೆ ಮಾಡಿದರು. ವೈದಿಕಕಾಲದಿಂದಲೂ ಎಂತಹ ನೀತಿನಡತೆಗಳು ನಾಡಿನಾದ್ಯಂತ ಇರುತ್ತಿದ್ದವೋ ಅವೆಲ್ಲವೂ ಕ್ರಮಶಃ ಖಿಲವಾಗುತ್ತಾ ಬಂದವು.

ಭಾರತ ಹಳ್ಳಿಗಳ ರಾಷ್ಟ್ರ; ಹಳ್ಳಿಗಳು ಪ್ರಕೃತಿ ಸಹಜವಾಗಿ ಸುಂದರ, 'ವಂದೇ ಮಾತರಂ' ಎಂಬ ರಾಷ್ಟ್ರಗೀತೆ ನಮ್ಮ ಹಳ್ಳಿಗಳ ಸೌಂದರ್ಯವನ್ನು – ಜೀವನಸಂಪತ್ತನ್ನೂ ತಿಳಿಸುತ್ತದೆ:

'ಸುಜಲಾಂ ಸುಫಲಾಂ, ಮಲಯಜ ಶೀತಲಾಂ

ಸಸ್ಯಶ್ಯಾಮಲಾಂ – ಮಾತರಂ'

ಎಂಬೀ ರಾಷ್ಟ್ರಪ್ರೇಮದ ಮೆಚ್ಚುಗೆಯ ಪದಗಳ ಸರಿಯಾದ ಅರ್ಥ ತಿಳಿಯುವುದು ಹಳ್ಳಿಗಳ ಜೀವನದಿಂದ. ಇಂತಹ ಪ್ರಕೃತಿ ಸೌಂದರ್ಯದ, ಸುಖಸಂಪತ್ತಿನ ಗ್ರಾಮಗ್ರಾಮಗಳಲ್ಲಿ ಕುಟುಂಬಕುಟುಂಬವಾಗಿ ಜೀವಿಸುತ್ತಿದ್ದ ಪ್ರತಿಯೊಂದು ಸಮಾಜದವರೂ, ಗ್ರಾಮದ ಆವಶ್ಯಕತೆಯನ್ನು ಪೂರೈಸುವ ಬೇರೆ ಬೇರೆ ವೃತ್ತಿಯನ್ನು ಅವಲಂಬಿಸಿ ಅನ್ಯೋನ್ಯ ಸಹಕಾರದಿಂದ ಬಾಳುತ್ತಿದ್ದರು. ಪ್ರತಿಯೊಂದು ಸಮಾಜದವರನ್ನೂ ವ್ಯವಸ್ಥಿತ ಜೀವನ ನಡೆಸುವಂತೆ ನೀತಿ ಹೇಳುವ ಸಮಾಜದ ಗುರಿಕಾರರು ಪ್ರತಿಗ್ರಾಮದಲ್ಲಿಯೂ ಇದ್ದರು. ಈ ರೀತಿಯ ಗ್ರಾಮ ಜೀವನ ಮತ್ತೆ ರಾಜ್ಯದ ಅರಸರ ಆಡಳಿತ–ಅಂಗ–ವಂಗ–ಕಳಿಂಗಾದಿ ರಾಜ್ಯಗಳಲ್ಲಿನ ಪ್ರಭುತ್ವದಿಂದಲೂ ಸಮಸ್ತ ರಾಷ್ಟ್ರದಲ್ಲಿಯೂ ಒಂದು ವ್ಯವಸ್ಥೆಯಾಗಿ ಸರಿಯಾದ ರೀತಿಯಲ್ಲಿ ನಡೆಸುತ್ತಿತ್ತು. ಇವೆಲ್ಲವೂ ವಿದೇಶಿಯರ ಪ್ರಭುತ್ವದಲ್ಲಿ ಕ್ರಮಶಃ ಖಿಲವಾಗಿ, ಅವರು ಸಮಸ್ತ ಭಾರತವನ್ನು ತಮ್ಮ ಭದ್ರಮುಷ್ಠಿಯಲ್ಲಿ ಬಿಗಿಯಾಗಿ ಹಿಡಿದುಕೊಂಡರು. ಪ್ರತಿಯೊಬ್ಬರೂ ಈ ವಿದೇಶಿ ಸಾರ್ವಭೌಮತ್ವಕ್ಕೆ ತಲೆವಾಗಿ, ಚಕ್ರವರ್ತಿಗಳ ಚಾಕರಿಗೆ ಕೈಯೊಡ್ಡಿ ನಿಲ್ಲುವಂತಾಯಿತು. ಹೀಗೆ ನಮ್ಮ ಮೂಲ ಸಂಸ್ಕೃತಿಗೆ ಧಕ್ಕೆ ಬಂದೊದಗಿತು.

ಜನನಿಯಂತೆ ಜನ್ಮಭೂಮಿಯನ್ನೂ ಗೌರವಿಸುವ ನಮ್ಮ ಸಂಸ್ಕಾರ, ಗ್ರಾಮೀಣ ಮೂಲದಿಂದಲೇ ಉದಿಸಿರಬೇಕು; ಹುಟ್ಟಿದ ಮನೆ, ಅಲ್ಲಿ ಹಿರಿಯರು ಕಿರಿಯರು, ಜೀವಿಸುವ ಸಮಾಜ, ಹಳ್ಳಿ, ಊರು, ರಾಜ್ಯ, ರಾಷ್ಟ್ರ ಈ ರೀತಿ ಜನ್ಮಭೂಮಿಯ ಅಭಿಮಾನ–ಅದೇ ದೇಶಾಭಿಮಾನ–ಅದು ವಿಸ್ತಾರಗೊಳ್ಳುತ್ತಾ ಕೊನೆಗೆ ವಿಶ್ವವ್ಯಾಪಿಯಾಗಬೇಕಾಗಿದೆ. ಸ್ವಂತವೆಂಬುದು ಅನಂತತೆಯನ್ನು ಪೂರ್ಣತೆಯಿಂದ ಲೀನವಾಗುವ ಮಹೋನ್ನತ ಸಂಸ್ಕಾರ ಇದಾಗಿದೆ. ಮಾನವೀಯತೆಯ ವಿಶ್ವವ್ಯಾಪಿತ್ವವನ್ನು ಹಾರೈಸುವವನು ಅದರ ಭದ್ರವಾದ ಬುನಾದಿಯನ್ನು, ತನ್ನ ಕುಟುಂಬದವರನ್ನು,

ಊರವರನ್ನು, ದೇಶಿಯರನ್ನು ಪ್ರೀತಿಸುವುದರಲ್ಲಿ ನೆಲೆಗೊಳಿಸುತ್ತಾ ಮೇಲೇರಬೇಕಾಗಿದೆ. ತನ್ನ ಪುತ್ರೀಪುತ್ರರನ್ನು ಪ್ರೀತಿಸುವುದರಲ್ಲಿ ನೆಲೆಗೊಳಿಸುತ್ತಾ ಮೇಲೇರಬೇಕಾಗಿದೆ. ತನ್ನ ಪತ್ನೀಪುತ್ರರನ್ನು ಪ್ರೀತಿಸುವುದು ಮನುಷ್ಯರಿಗೆ ಮಾತ್ರವಲ್ಲ ಪ್ರತಿ ಪ್ರಾಣಿವರ್ಗಕ್ಕೂ ಇರುವ ನಿಸರ್ಗ ಸಹಜ ಸ್ವಭಾವ. ತನ್ನ ಅಕ್ಕ ತಂಗಿಯರು ಅವರ ಮಕ್ಕಳು, ತನ್ನ ಅಣ್ಣತಮ್ಮಂದಿರು ಅವರ ಮಕ್ಕಳು, ತನ್ನ ಕುಟುಂಬಕ್ಕೆ ಹತ್ತಿರ ಬಂಧುಗಳಾದ ಅತ್ತೆಮಾವ, ಅತ್ತಿಗೆಭಾವ, ಮಾತಾಮಹಪಿತಾಮಹ ಇಂತು ಕುಟುಂಬದ, ಸಮೀಪದ ಭಗಿನೀಬಂಧುಗಳನ್ನು ಎಲ್ಲರನ್ನೂ ಪತ್ನೀಪುತ್ರರಂತೆ ಆತ್ಮೀಯವಾಗಿ ಪ್ರೀತಿಸುವ ದೃಷ್ಟಿ ಮಾನವನ ಸಂಸ್ಕಾರವಿಶೇಷವಾಗಿದೆ. ತಾನು ತನ್ನ ಭಗಿನೀಬಂಧುಗಳನ್ನು, ತಾಯಿತಂದೆಯರನ್ನು, ತನ್ನ ಸಮಾಜವನ್ನು, ರಾಜ್ಯವನ್ನು ಪ್ರೀತಿಸುವಂತೆ ಇತರರೂ ಅವರವರ ಸಂಬಂಧಗಳನ್ನು, ಅವರವರ ಸಮಾಜ ಗ್ರಾಮ ದೇಶವನ್ನು ಪ್ರೀತಿಸುವುದು ನ್ಯಾಯವೆಂಬ ಈ ಉದಾರ ದೃಷ್ಟಿಯು ಮನುಷ್ಯನನ್ನು ಸಂಸ್ಕೃತಿಕನನ್ನಾಗಿ ಮಾಡುತ್ತದೆ.

'ಕೊಟ್ಟಹೆಣ್ಣು ಕುಲದಿಂದ ಹೊರಗೆ' ಎಂಬ ಕೆಟ್ಟ ಮಾತೊಂದು ಕೇಳಿಬರುತ್ತದೆ. ಈ ಮಾತು ಯಾವುದೇ ಸಮಾಜಕ್ಕಾದರೂ ಕಳಂಕಪ್ರಾಯ. ಹಿಂದೆ ಹೇಳಿದ ಮಾತೃಪ್ರಧಾನ ಕುಟುಂಬ ಪದ್ಧತಿಯಲ್ಲಿ, ಕೊಟ್ಟ ಹೆಣ್ಣುಕೂಡ ಅವಳ ತಾಯಿಯದೇ ಕುಟುಂಬ ಕುಲದವಳು; ಅವಳ ಮಗಳೂ ಮೊಮ್ಮಗಳೂ ಅದೇ ವಂಶದ ಕುಡಿಗಳು. ಮನೆಯ ಸ್ಥಿರಚರ ಆಸ್ತಿ ಬದುಕು ಎಲ್ಲವೂ ಹೆಣ್ಣಿನದೇ; ಗಂಡುಸು, ಆಸ್ತಿ ಬದುಕಿನ ಅಧಿಕಾರ ಮಾಡಬಹುದು; ಗೌರವದಿಂದ ಬಾಳಬಹುದು, ಆದರೆ ಆಸ್ತಿಯ ಕ್ರಯವಿಕ್ರಯದಲ್ಲಿ ಆತನು ಕೈಹಾಕಕೂಡದು; ಅವನ ಹೆಂಡತಿ ಮಕ್ಕಳಿಗೆ, ಹೆಂಡತಿ ಮಕ್ಕಳ ತಾಯಿಕುಟುಂಬದಲ್ಲಿ ಆಸ್ತಿ ಕುಟುಂಬದ ಪೂರ್ಣಹಕ್ಕು ಇದೆ. ಬಡವರನ್ನು ಶೋಷಿಸಿ ಶ್ರೀಮಂತಿಕೆಯನ್ನು ಹೆಚ್ಚಿಸಿಕೊಂಡಂತೆ, ವಿದ್ಯೆ ಕಲಿಯದವರನ್ನು ವಿದ್ಯಾವಂತರೆಂಬುವರು ಸುಲಿಗೆ ಗೈಯ್ಯುವಂತೆ, ಅಬಲೆಯರೆಂದು ಸ್ತ್ರೀಯರನ್ನು ಸಬಲರೆಂದು ಗಂಡಸರು ಕೀಳುಗೈದು ಸ್ವಾರ್ಥ, ಸ್ವಪ್ರತಿಷ್ಠೆ ಸ್ವಂತ ಲಾಭಗಳನ್ನು ಮುಂದೆ ಸಾಧಿಸಿಕೊಂಡದ್ದು ಕಂಡುಬರುತ್ತಿದೆ. ಇಂದು 'ಹಿಂದೂ ಕೋಡ್' ಕಾನೂನು ಬಂದ ಮೇಲೆ ಮಾತೃಪ್ರಧಾನ ಪದ್ಧತಿ ಮಾಯವಾಗಿ, ಮಗಳಿಗೆ ತಂದೆಯ ಸೊತ್ತಿನಲ್ಲಿ ಒಂದಂಶದ ಹಕ್ಕು ಬರುವುದಿದ್ದರೂ, ಆ ಹಕ್ಕನ್ನು ಮಗಳ ಮದುವೆಯ ಸಂದರ್ಭದಲ್ಲಿ ದಾಖಲೆ ಮೂಲಕ ಕಿತ್ತುಕೊಂಡು ಸ್ತ್ರೀಸಮಾಜಕ್ಕೆ ಅನ್ಯಾಯ ಮಾಡುತ್ತಿರುವುದು ಅಲ್ಲಲ್ಲಿ ಕಂಡುಬರುತ್ತದೆ. ಇವೆಲ್ಲವೂ ಹೋಗಿ, ಕೌಟುಂಬಿಕ ಜೀವನದಲ್ಲಿ ಸ್ತ್ರೀ ಸಮಾಜದ ಹಕ್ಕಿಗೆ ಯಾವುದೇ ಚ್ಯುತಿಬಾರದಂತೆ ನೋಡಿಕೊಳ್ಳುವುದು ಉತ್ತಮಿಕೆಯಾಗಿದೆ; ಸಂಸ್ಕೃತಿಯೂ ಎನಿಸಿದೆ.

ದೇಶ ಸರ್ವತ್ರ, ಹಿಂದೆ ಅವಿಭಕ್ತ ಕುಟುಂಬ ಪದ್ಧತಿ ನೆಲೆಯೂರಿದ್ದನ್ನು ಕಾಣಬಹುದಿತ್ತು. ರೂಪ ಆಕೃತಿ ಬಣ್ಣ ಹೀಗೆ ಹೊರಗಿನ ಲಕ್ಷಣಗಳಲ್ಲಿ ಅಂತೆಯೇ

ಯೋಚನೆ, ಸಹನೆ, ಕೋಪ ಇತ್ಯಾದಿ ಆಂತರಿಕ ಭಾವನೆಗಳಲ್ಲೂ ಸೋದರಿ ಸೋದರರೊಳಗೂ ಅಲ್ಪ ಸ್ವಲ್ಪ ಭಿನ್ನತೆ ಕಂಡುಬರುವುದಿದ್ದರೂ, ಅಂತಹ ಸಣ್ಣ ವ್ಯತ್ಯಾಸ ರುಚಿಗಳನ್ನು ಹೊಂದಿಸಿಕೊಂಡು ಇಡೀ ಕುಟುಂಬದ ಹಿತಕ್ಕೆ ಧಕ್ಕೆಯಾಗಿದೆ, ಎಲ್ಲರೂ ಸಮಷ್ಟಿಯಿಂದ ದುಡಿಯಬೇಕೆಂಬ ತರಬೇತಿ ಅವಿಭಕ್ತ ಕುಟುಂಬದಲ್ಲಿ ದೊರಕುತ್ತದೆ. ಆ ತರಬೇತಿಯ ಪರಿಣಾಮವಾಗಿ ಪ್ರತಿ ವ್ಯಕ್ತಿಯು ಇಡೀ ಸಮಾಜದಲ್ಲಿ, ಇಡೀ ಊರಲ್ಲಿ ಎಲ್ಲರೊಡನೆ ಹೇಗೆ ಹೊಂದಿಕೊಂಡು ವರ್ತಿಸಬೇಕೆಂದು ಕಲಿತು ಜೀವನ ನಿರ್ವಹಣೆ ಮಾಡುತ್ತಾನೆ. ಹಾಗಾಗಿ ಒಂದು ರೀತಿಯಲ್ಲಿ ಅವಿಭಕ್ತ ಕುಟುಂಬ ಸಾಮಾಜಿಕ ಸಮನ್ವಯತೆಗೆ ಒಳ್ಳೆಯ ತರಬೇತಿ ಕೇಂದ್ರವಾಗಿದ್ದು ಅದರಿಂದಲೇ ಮುಂದೆ ಯೋಗ್ಯ ನಾಗರಿಕನಾಗಲು ಅನುಕೂಲವಾಗುವುದು. ಇಷ್ಟು ಮಾತ್ರವಲ್ಲ, ಪ್ರತ್ಯೇಕ ಪ್ರತ್ಯೇಕವಾಗಿ ತಂದೆ ತಾಯಿ ಮಕ್ಕಳು ಇದ್ದು ಜೀವನನಿರ್ವಹಣೆ ಮಾಡುವುದಕ್ಕಿಂತ ಸಂಯುಕ್ತ ಕುಟುಂಬದಲ್ಲಿ ವೆಚ್ಚವೂ ಕಡಿಮೆಯೇ. ಅದಲ್ಲದೆ, ಒಂದು ಕುಟುಂಬಕ್ಕೆ ಯಾರಾದರೂ ಹಗೆತನದಿಂದ ಕೆಟ್ಟದು ಮಾಡಲು ಪ್ರಯತ್ನಿಸಿದಲ್ಲಿ, ಸಂಯುಕ್ತ ಕುಟುಂಬದ ಎಲ್ಲರೂ ಒಗ್ಗಟ್ಟಾಗಿ ನಿಂತು ಪ್ರತಿಭಟಿಸಿ ಬದುಕಬಹುದು. ಅದರಲ್ಲೂ ಮನೆಹೊಕ್ಕು, ಕಳವು, ಸುಲಿಗೆ, ಕೊಲೆಗಳನ್ನು ಮಾಡಿ ಸಂಪತ್ತು ದರೋಡೆಗೈವ ಪರಿಸ್ಥಿತಿಯಲ್ಲಿ ಒಂದು ಮನೆಯಲ್ಲಿ ಅಣ್ಣತಮ್ಮಂದಿರೆಲ್ಲರೂ ಒಟ್ಟಾಗಿ ಜೀವಿಸುವುದೇ ಕ್ಷೇಮಕರ. ಹಿಂದೆ, ವಿಧರ್ಮಿಯರಾದ ವಿದೇಶಿಯರ ಆಡಳಿತದ ಅಧಿಕಾರ ದರ್ಪದ ಕಾಲದಲ್ಲಿ, ಬಲಾತ್ಕಾರದಿಂದಲೂ ಮತಾಂತರ ಮಾಡಲಾಗುತ್ತಿದ್ದ ಆ ದುಷ್ಟವೃತ್ತಿ, ವಿಭಕ್ತ ಕುಟುಂಬದಲ್ಲಿ ಸುಲಭವಾದಷ್ಟು ಅವಿಭಕ್ತ ಕುಟುಂಬದಲ್ಲಿ ಸಾಧ್ಯವಿಲ್ಲವಾಗಿ ಸ್ವಧರ್ಮ ರಕ್ಷಣೆಗೂ ಇದು ಅವಶ್ಯವಾಯಿತು.

ನವನಾಗರಿಕತೆಯೆಂಬ ಮೋಹದ ಬಲೆ ನಮ್ಮಲ್ಲಿ ಸ್ವಾರ್ಥದ ಬೀಜವನ್ನು ಬಿತ್ತಿ ಬೆಳೆಸುತ್ತಿದೆ; ಮದುವೆಯಾದ ಕೂಡಲೇ ಗಂಡ ಹೆಂಡಿರು ಬೇರೆ ಮನೆಯಲ್ಲಿ ವಾಸ; ಅವರಿಗೆ ಮಕ್ಕಳಾಗಿ ದೊಡ್ಡವರಾದ ಮೇಲೆ ಅವರೂ ಬೇರೆ ಬೇರೆ. ಮನೆಯಲ್ಲಿ ತಾಯಿತಂದೆ ಮುದುಕಿಮುದುಕರಿದ್ದಾರೆ; ತಾವು ಮಕ್ಕಳನ್ನು ಪಡೆದು ಬಾಲ್ಯಾರಭ್ಯ ಪೋಷಿಸಿ, ದೊಡ್ಡದು ಮಾಡಿದ ಪ್ರತಿಫಲವಾಗಿಯಾದರೂ ವೃದ್ಧಾಪ್ಯದಲ್ಲಿ ತಮ್ಮನ್ನು ಮಕ್ಕಳು ನೋಡಿಕೊಳ್ಳಬೇಕೆಂಬ ಬಯಕೆ ಅವರಿಗಿರುತ್ತದೆ. ಆದರೆ ಇಂದಿನ ಕೆಲ ನವನಾಗರಿಕ ಯುವತಿ – ಯುವಕರ ಧೋರಣೆಯೇ ಬೇರೆ; ಅವರು ನೋಡಿದ, ಕೇಳಿದ ಪಾಶ್ಚಾತ್ಯ ಪದ್ಧತಿಯಲ್ಲಿ ತಾಯಿತಂದೆಯರು ಮುದುಕರಾದಾಗ ಅವರನ್ನು ವೃದ್ಧಾಶ್ರಮದಲ್ಲಿ ಸೇರಿಸುವ ಸಂಪ್ರದಾಯವಿರುವಂತೆ, ತಮ್ಮಲ್ಲಿನ ಮುದುಕಿ ಮುದುಕರನ್ನು ಇವರೂ ವೃದ್ಧಾಶ್ರಮದಲ್ಲಿ ಹಾಕುತ್ತಾರೆ. ಮಾತೃದೇವೋಭವ, ಪಿತೃದೇವೋ ಭವ– ಎಂಬೀ ಸದ್ಭಾವನೆಯು ಮರೆತೇ ಹೋದಂತಿದೆ. ಭಾರತೀಯ ಸಂಸ್ಕೃತಿ ಇಂತು ಇಂದು ಖಿಲವಾಗುತ್ತಿದೆ. ವೃದ್ಧಾಶ್ರಮದಲ್ಲಿ ನಾನಾ ಮೂಲದ, ನಾನಾ ಪ್ರವೃತ್ತಿಯ,

ನಾನಾ ಜನರೊಡನೆ ಅವರು ಶೇಷಾಯುಷ್ಯವನ್ನು ಎಂತಹ ಚಿಂತೆಯಲ್ಲಿ ಕಳೆಯುತ್ತಾರೋ ಅವರಿಗೇ ಗೊತ್ತು; ಅದು ಊಹಾತೀತ. ಇಂತಹ ಒಂದು ವೃದ್ಧಾಶ್ರಮವನ್ನು ತೋರಿಸಲು ಒಮ್ಮೆ ಅದರ ಸ್ಥಾಪಕ ಮಿತ್ರರೊಬ್ಬರು ನನ್ನನ್ನು ಕರೆದುಕೊಂಡು ಹೋದರು. ಅವರು ಮಾಡುವ ಘನವಾದ ಸೇವಾಕಾರ್ಯವನ್ನು ನೋಡಿ ಮೆಚ್ಚುಗೆ ನೀಡಬೇಕೆಂದು ಅವರ ಉದ್ದೇಶ: ನಿಜವಾಗಿಯೂ ಅವರದು ಘನವಾದ ಸೇವಾಕಾರ್ಯವೇ ಹೌದು. ಪ್ರತಿಯೊಬ್ಬ ವ್ಯಕ್ತಿಗೂ, ಹೆಣ್ಣಿರಲಿ, ಗಂಡಿರಲಿ, ತಾಯ್ನುಡಿ ಆತ್ಮೀಯವಾಗುತ್ತ ಆ ಸಂಸ್ಕಾರ ಬಾಳುವೆಯನ್ನು ಬೆಳಗಿಸುತ್ತದೆ. ಅಮ್ಮ ಎನ್ನುವ ನುಡಿ ಮಗುವಿಗೆಂತೋ, ಮಗುವನ್ನು ಹೆತ್ತ ತಾಯಿಗೂ, ಅದನ್ನು ಕೇಳುವವರೆಲ್ಲರಿಗೂ ಅತ್ಯಂತ ಅಪ್ಯಾಯಮಾನ. ಆ ಒಂದು ಪದವೇ ಮಾನವನ ಜೀವಿತದಲ್ಲಿ ಮಹಾಕಾವ್ಯದಷ್ಟು ಧ್ವನಿಪೂರ್ಣ.

'ಇದಮಂಧತಮಃ ಕೃತ್ಸ್ನಂ ಜಾಯೇತ ಭುವನತ್ರಯಂ
ಯದಿ ಶಬ್ದಾಹ್ವಯಂ ಜ್ಯೋತಿಃ ಆಸಂಸಾರಂ ನ ದೀಪ್ಯತೇ ॥'

–ಇದು ದಂಡಿ ಮಹಾಕವಿಯ ಮಾತು. ಶಬ್ದವೆಂಬ ಬೆಳಕು ಸಂಸಾರವನ್ನು ಬೆಳಗಿಸದೇ ಇದ್ದಲ್ಲಿ ಮೂರು ಲೋಕಗಳೂ ಕಗ್ಗತ್ತಲೆಯಿಂದ ಮುಚ್ಚಿಹೋಗುತ್ತಿತ್ತು ಎಂದು ಆತ ಹೇಳುತ್ತಾನೆ. ಮಗು ಕೇಳುವ ಪ್ರಥಮ ಶಬ್ದ ಆತನ ತಾಯ್ನುಡಿ; ಅದು ಆತನ ಸಂಸಾರದ ಬೆಳಕು.

ಮಾನವನಿಗೆ ಆತನ ಮಾತೃಬಾಷೆಯೂ ಉತ್ತಮ ಸಂಸ್ಕಾರ ಸಾಧನೆ ಸಹಾಯಕ ವಾಹಕವಾಗಿದ್ದರೂ ಅದರಿಂದ ಉತ್ತಮ ಫಲಿತಾಂಶ ದೊರಕುವುದು ಅದರ ಸದುಪಯೋಗದಿಂದ. ತಾನು ತನ್ನ ತಾಯ್ನುಡಿಯನ್ನು ಪ್ರೀತಿಸುವಂತೆ, ಇನ್ನೊಬ್ಬನೂ ತನ್ನ ಮಾತೃಭಾಷೆಯನ್ನು ಪ್ರೀತಿಸುವುದೂ ಸಹಜ ಹಾಗು ಸಗ್ದುಣವೆಂಬ ವಿಶಾಲ ದೃಷ್ಟಿ ಪ್ರತಿಯೊಬ್ಬನಿಗೂ ಇರಬೇಕು. ತಾಯ್ನುಡಿಯ ವಿಷಯ ಮಾತ್ರವಲ್ಲ, ತಾನು ತನ್ನ ಹೆತ್ತ ತಾಯಿಯನ್ನು, ಹೊತ್ತ ನೆಲವನ್ನು ಪ್ರೀತಿಸುವಂತೆ ಇತರರೂ ಅವರವರ ಜನನೀ ಜನ್ಮ ಭೂಮಿಯ ಕುರಿತು ಅಭಿಮಾನಪಡುವುದು ಸರಿಯಾದದ್ದೆಂಬ ತಿಳುವಳಿಕೆ ಇರುವುದು ಸಂಸ್ಕಾರ. ಇಂತಹ ವಿಶಾಲದೃಷ್ಟಿ ಇಲ್ಲದಿದ್ದರೆ ದುರಭಿಮಾನದಿಂದ ಕೆಲವೊಮ್ಮೆ ಸಂಪರ್ಕ ಉಂಟಾಗಬಹುದು; ಆಗುತ್ತದೆ. ಹಾಗಾಗಿ ನಾವು ಈ ಎಲ್ಲಾ ವಿಚಾರ ವಿಷಯಗಳಲ್ಲಿ ಪಡುವ ಅಭಿಮಾನವೆಂಬುದು ಸಂಸ್ಕೃತಿಯ ಕುರುಹು ಆಗಬೇಕಿದ್ದರೆ ಸಾಮಾಜಿಕರೆಲ್ಲರಿಗೂ ಇರುವ– ನಮ್ಮಂತೆಯೇ ಅವರು ಪಡುವ ಆ ಅಭಿಮಾನಗಳನ್ನು ನಾವು ಮನಸಾರೆ ಮೆಚ್ಚಬೇಕು.

ನಿಸರ್ಗಸಹಜವಾದ ಇಂತಹ ಸದ್ಭಾವನೆಗಳಿಂದ ಅನ್ಯೋನ್ಯ ಸಹಕಾರದಿಂದ ಜೀವನ ಮಾಡುವ ಸಂಸ್ಕಾರವನ್ನು ಪಡೆಯುವುದರ ಬದಲು ಸಂಕುಚಿತಮತಿಗಳಾಗಿ

ಸಂಘರ್ಷಕ್ಕೆ ದುರುಪಯೋಗಗೊಳಿಸುವುದನ್ನು ಅಲ್ಲಲ್ಲಿ ಕಾಣುತ್ತೇವೆ. ಭಾಷೆಗಾಗಿ, ಜಾತಿಗಾಗಿ ಮತಧರ್ಮಗಳಿಗಾಗಿ ಜಗಳ ಆಗುತ್ತದೆ. ಪ್ರಪಂಚದ ನಾನಾ ಕಡೆಗಳಲ್ಲಿಯೂ ಈ ಸಂಕೋಚ ಪ್ರವೃತ್ತಿ ಅಸಂಸ್ಕೃತಿ ಅಲ್ಲಲ್ಲಿ ಕಾಣುವುದು ಮಾನವ ಸಮಾಜಕ್ಕೆ ತಗುಲಿದ ಶಾಪ. ತಾನು ತಾಯಿಯನ್ನು, ತಾಯ್ನಾಡನ್ನು, ತಾಯ್ನುಡಿಯನ್ನು, ಹುಟ್ಟಿದ ಸಮಾಜವನ್ನು, ನಂಬುವ ಮತಧರ್ಮಗಳನ್ನು ಪ್ರೀತಿಸುವಂತೆ ಇತರರು ಮಾಡುವುದು, ಮಾಡಲೇಬೇಕಾದುದು ಅವರವರ ಕರ್ತವ್ಯವೆಂಬ ಈ ನಮ್ರಭಾವ ಎಲ್ಲರಲ್ಲಿಯೂ ಮೂಡಿದಲ್ಲಿ ಸಂಘರ್ಷ ತಪ್ಪೀತು. ಹಾಗೆ ಸದ್ಭಾವನೆ ಮೂಡಿ ಸುಸಂಸ್ಕೃತರಾಗಿ ನೀವು ಬದುಕುವುದೇ ವಿಶ್ವ ಮಾನವ್ಯತೆಯ ಪರಮೋಚ್ಚ ಸಂಸ್ಕಾರಕ್ಕೆ ಬುನಾದಿಯಾಗಿದೆ. ಜನ್ಮ ಯಾರೊಬ್ಬರ ಅಂಕಿತದಲ್ಲಿಲ್ಲ. ಹಾಗಾಗಿ ಹುಟ್ಟಿನ ಕುರಿತು ಮೇಲು ಕೀಳು ಭಾವನೆ ಸರ್ವಥಾ ಸರಿಯಲ್ಲ. ಮತವೆಂದರೆ ಅಭಿಪ್ರಾಯ 'ಲೋಕೋ ಭಿನ್ನರುಚಿ' ಎಂದಿದೆ. ಒಬ್ಬನಿಗೆ ಸಿಹಿ ಬೇಕಾಗಿದ್ದರೆ ಇನ್ನೊಬ್ಬನಿಗೆ ಹುಳಿ ಹಿಡಿಸುತ್ತದೆ. ಒಬ್ಬನಿಗೆ ಖಾರ ಬೇಕಾಗಿದ್ದರೆ ಇನ್ನೊಬ್ಬನು ಸಪ್ಪೆಯನ್ನು ಸವಿಯುತ್ತಾನೆ.

೪

ಹಿಂದೆ ಪ್ರಸ್ತಾಪಿಸಿದಂತೆ ನಮ್ಮನ್ನು ವಿಭಜಿಸಿ ನಮ್ಮ ಅಧಿಕಾರ ಸುಲಿಗೆಗಳನ್ನು ಸ್ಥಿರವಾಗಿ ಇಲ್ಲಿ ನಡೆಸಲು ಬಂದ ವಿದೇಶಿಯರ ಆಡಳಿತ ಕಾಲದಲ್ಲಿ ನಮ್ಮಲ್ಲಿ ಕೆಲವೊಂದು ದಾಸ್ಯ ಮನೋಭಾವದ ಕೆಸರು ಅಂಟಿಕೊಂಡದ್ದು ಇಂದಿಗೂ ಅದರ ಪರಿಮಾರ್ಜನೆ ಸರಿಯಾಗಿ ಆಗಿಲ್ಲವೆಂಬುದು ಖೇದಕರ.

'ಚಾತುರ್ವರ್ಣ್ಯಂ ಮಯಾ ಸೃಷ್ಟಂ ಗುಣಕರ್ಮವಿಭಾಗಶಃ'

ಎಂಬುದು ಸುಪ್ರಸಿದ್ಧ ಗೀತೋಕ್ತಿ; ರಾಜ್ಯದ, ರಾಷ್ಟ್ರದ ವ್ಯವಸ್ಥೆ ಸರಿಯಾಗಿ ನಡೆಯುತ್ತಿರಬೇಕಾದರೆ, ಬೇರೆ ಬೇರೆ ಇಲಾಖೆಗಳಲ್ಲಿ ಬೇರೆ ಬೇರೆ ಉದ್ಯೋಗಸ್ಥರು ಇರಬೇಕು. ಐ. ಎ. ಎಸ್., ಇಂಜಿನಿಯರ್, ಡಾಕ್ಟರರು, ಕೃಷಿಕರು, ವ್ಯಾಪಾರಸ್ಥರು, ಪೋಲೀಸರು, ಸೈನಿಕರು ಹೀಗೆಲ್ಲಾ ದೇಶದ ಸಕಲ ವಿಭಾಗಗಳಲ್ಲೂ ಆಯಾಯ ವೃತ್ತಿಯಲ್ಲಿ ತಜ್ಞರಾದವರು ದುಡಿದಾಗ, ಸರ್ವ ಸಮುನ್ನತಿಯಾಗುವುದು. ಹಾಗೆಂದು ಡಾಕ್ಟರರ ಮಕ್ಕಳೆಲ್ಲರೂ, ಆ ವೃತ್ತಿ ಕಲಿಯದಿದ್ದರೂ ಡಾಕ್ಟರರಲ್ಲ; ಹಾಗೆ ಇವರ ಎಲ್ಲಾ ಉದ್ಯೋಗಸ್ಥರ ಮಕ್ಕಳೂ. ಅದೇ ರೀತಿ ಬ್ರಹ್ಮಜ್ಞಾನಿ ಬ್ರಾಹ್ಮಣನಾದ, ಯೋಧ ಕ್ಷತ್ರಿಯನಾದ, ವ್ಯಾಪಾರಿ ವೈಶ್ಯನಾದ, ಕೆಲಸಗಾರ ಶೂದ್ರನಾದ. ಅವರವರು ಆ ಆ ಕಾಲದಲ್ಲಿ ಮಾಡಿದ ವೃತ್ತಿಗೆ ಆ ಆ ಹೆಸರು, ಬೇರೆ ಬೇರೆ ಉದ್ಯೋಗಸ್ಥರಿಗೆ ಇರುವಂತೆ ಬಂದಿತು,

'ಜನ್ಮನಾ ಜಾಯತೇ ಜಂತುಃ ಕರ್ಮಣಾ ಜಾಯತೇದ್ವಿಜಃ'

–ಎಂಬ ಸೂಕ್ತಿಯಂತೆ, ಹುಟ್ಟಿನಿಂದ ಪ್ರತಿಯೊಬ್ಬನೂ ಜಂತು. ಪ್ರಾಣಿ ಮಾತ್ರ; ಮುಂದೆ ಆತನು ಮಾಡುವ ಉತ್ತಮ ಕಾರ್ಯದಿಂದ, ಬ್ರಹ್ಮಜ್ಞಾನದಿಂದ ದ್ವಿಜನಾಗುತ್ತಾನೆ ಎಂಬುದು ಕ್ರಮ. ಇದಕ್ಕೆ ಸ್ಪಷ್ಟ ದೃಷ್ಟಾಂತ ಜನ್ಮತಃ ಕ್ಷತ್ರಿಯನಾದ, ಗಾಯತ್ರೀ ಮಂತ್ರದ ದೃಷ್ಟಾರನಾದ ವಿಶ್ವಾಮಿತ್ರನು ಬ್ರಹ್ಮಜ್ಞಾನ ಸಿದ್ಧಿಸಿ, ಮಹಾ ಬ್ರಾಹ್ಮಣನಾದ, ಬ್ರಹ್ಮರ್ಷಿಯಾದ. ನವವಧೂವರರಿಗೆ. ಆದರ್ಶ ದಂಪತಿಗಳೆಂದು ಆಕಾಶದ ನಕ್ಷತ್ರ ಮಂಡಳದಲ್ಲಿ ತೋರಿಸುವ, ವಸಿಷ್ಠ ಆರುಂಧತೀ ನಕ್ಷತ್ರ ದಂಪತಿಗಳಲ್ಲಿ ಅರುಂಧತಿ ಚಂಡಾಲ ಸ್ತ್ರೀಯೆಂದು ಪುರಾಣದಲ್ಲಿದೆ. ಹಾಗಿದ್ದರೆ, ಆಕೆ ಬ್ರಹ್ಮರ್ಷಿ ವಸಿಷ್ಠರಿಗೆ ಹೇಗೆ ಆದರ್ಶ ಪತ್ನಿಯಾದಳು, ಅವಳು ಆದರ್ಶ ಪತ್ನಿಯಾಗಿದ್ದರೆ, ನಮ್ಮ ಸಂಸ್ಕೃತಿಯಲ್ಲಿ ಚಂಡಾಲತ್ವದ ನೈಚ್ಯಭಾವನೆ ಎಲ್ಲಿದೆ? ಆಶ್ರಮದಲ್ಲಿನ ಋಷಿಯ ಗುರುಕುಲಕ್ಕೆ ವಿದ್ಯಾಭ್ಯಾಸ ಪಡೆಯಲು, ಕುಲಪತಿಯಲ್ಲಿಗೆ ಬಾಲಕರು ಪ್ರವೇಶಾರ್ಥಿಗಳಾಗಿ ಬರುತ್ತಿದ್ದಾಗ, ತಾನೂ ವಿದ್ಯೆ ಪಡೆಯಬೇಕೆಂದು ಜಬಾಲೆ ಎಂಬವಳ ಪುತ್ರ ಗುರುವಿನ ಬಳಿ ಸಾರಿ, ತನಗೂ ಕಲಿಯುವ ಆಸೆಯಿದೆ ಎಂದು ವ್ಯಕ್ತಪಡಿಸಿ ಗುರುಕುಲಕ್ಕೆ ಪ್ರವೇಶ ಬೇಡಿದ. ಗುರು ಆಗ ಎಲ್ಲಾ ಪ್ರವೇಶಾರ್ಥಿಗಳ ಹತ್ತಿರ ಕೇಳುವಂತೆ, ಅವನೊಡನೆಯೂ ತಂದೆ ಯಾರು ಗೋತ್ರವೇನು ಎಂದು ಪ್ರಶ್ನಿಸಿದ. ಆ ಹುಡುಗನಿಗೆ ಅದು ಗೊತ್ತಿಲ್ಲದೆ ತಾಯಿ ಜಬಾಲೆಯಲ್ಲಿಗೆ ಬಂದು ತನ್ನ ತಂದೆ ಯಾರು, ಗೋತ್ರ ಏನೆಂದು ತಿಳಿಸಬೇಕೆಂದೂ ಋಷಿಗಳು ಕೇಳಿದರೆಂದೂ ಹೇಳಿದ. ಆಗ ಆ ತಾಯಿ ಜಬಾಲೆ ಹೇಳುತ್ತಾಳೆ: 'ನನ್ನ ಯೌವನದಲ್ಲಿ ಆಶ್ರಮದಲ್ಲಿ ಚಾಕರಿ ಮಾಡುತ್ತಿದ್ದಾಗ ನೀನು ಹುಟ್ಟಿದಿ. ತಂದೆ ಯಾರೆಂದೂ, ಗೋತ್ರ ಏನೆಂದೂ ತಿಳಿಯದು, ಇಷ್ಟೇ ಹೇಳು'– ಎಂದ ಈ ಮಾತನ್ನು ಅಂತೆಯೇ ಋಷಿಗೆ ಜಬಾಲೆಯ ಮಗ ಹೇಳಿದಾಗ, ಅಂತಹ ಕಠೋರಸತ್ಯವನ್ನು ತಿಳಿಸಿದ ತಾಯಿಯ ನಿರ್ಮಲಹೃದಯಕ್ಕೆ ಮೆಚ್ಚಿ ಜಬಾಲೆಯ ಪುತ್ರನನ್ನು ಗುರುಕುಲದಲ್ಲಿ ಸೇರಿಸಿ ಆತನಿಗೆ ಶಿಕ್ಷಣ ನೀಡಿದನು. ಆತ ಮುಂದೆ ಜಾಬಾಲಿ ಮಹರ್ಷಿ ಆದನು, ಶ್ರೀರಾಮನು ವನವಾಸದಲ್ಲಿದ್ದಾಗ ಆತನಿಗೆ ಸಾಂತ್ವನದ ಮಾತು ಹೇಳಿದನು.

'ಏತರಾಯಾಸಮಿದು ಜಗದ್ವಿಖ್ಯಾತನಲ್ಲಾ ರಾಯರಲಿ ನಳ
ಆತಗಾದ ವಿಪತ್ತಿ ಬಲ್ಲೈ ಕೇಳಿ ಪೂರ್ವದಲಿ'

ಎಂಬೀ ನಳಮಹಾರಾಜನ ಕಥೆಯನ್ನು ರಾಮನಿಗೆ ತಿಳಿಸಿ, ನಿನ್ನಂತೆ ನಳಮಹಾರಾಜನು ರಾಜ್ಯಭ್ರಷ್ಟನಾಗಿ, ಕಾಡಿಗೆ ಬಂದು, ಅಲ್ಲಿ ಹೆಂಡತಿ ದಮಯಂತಿಯನ್ನೂ ಕಳೆದುಕೊಂಡು ಕಾರ್ಕೋಟ ಸರ್ಪದಿಂದ ಕಚ್ಚಲ್ಪಟ್ಟು, ವಿಕಾರರೂಪಿಯಾಗಿ, ಮತ್ತೆ ತನ್ನ ಹೆಂಡತಿಯನ್ನೂ, ಹಿಂದಿನ ಸುಂದರ ಶರೀರವನ್ನೂ, ರಾಜ್ಯವನ್ನೂ ಸುಖ ಸಂಪತ್ತುಗಳೆಲ್ಲವನ್ನೂ ಪಡೆದನೆಂಬ ಈ ಸಾಂತ್ವನದ ಉಪದೇಶವನ್ನು

ಅವತಾರ ಪುರುಷನಾಗಿ ಶ್ರೀರಾಮನಿಗೆ ಹೇಳಿ ಬೋಧಿಸುವ ಯೋಗ್ಯತೆ ಆ ಜಬಾಲೆಯ ಪುತ್ರನಿಗೆ ಬಂತು– ಹೀಗೆನ್ನುವಾಗ ನಮ್ಮ ಭಾರತೀಯ ಪರಂಪರೆಯಲ್ಲಿ ಜನ್ಮದಿಂದ ಯಾರೂ ಶ್ರೇಷ್ಠರಲ್ಲ. ಅವರವರ ಕರ್ಮದ ಯೋಗ್ಯತೆಯಿಂದ ಮಾತ್ರ ಉತ್ತಮರಾಗುವರೆಂಬ ಈ ಸಿದ್ಧಾಂತ ಸರ್ವತ್ರ ಸ್ಥಾಪಿತವಾಗಿ ಕಾಣುವುದನ್ನು ಸಂಕುಚಿತ ಮತಿತ್ವದಿಂದ ಇಂದು ಮರೆತಿದ್ದಾರೆ.

ಮಾನವನಲ್ಲಿ ಜನ್ಮತಃ ಬರುವ ಪಶುಬುದ್ಧಿ, ಸ್ವಾರ್ಥ ಆತನಿಗೆ ಅಂಟಿಕೊಂಡಿದ್ದ ಸಂಸ್ಕೃತಿಯಿಂದ ಮಾಜದೆ ಇದ್ದರೆ ಆತ ಸ್ವಾರ್ಥಿಯಾಗುತ್ತಾನೆ; ಮೇಲೆ ಹೋದವ, ಕೆಳಗಿನವರನ್ನು ಕೆಳತಳ್ಳುತ್ತಾ ತನ್ನ ಅಂತಸ್ತನ್ನು ಉಳಿಸಿಕೊಳ್ಳಬೇಕೆಂದು ಸ್ವಾರ್ಥ ಸಾಧಿಸುತ್ತಾನೆ. ಕರ್ಮದಿಂದ ಒಮ್ಮೆ ಮೇಲೇರಿದವರು, ತಮ್ಮ ಕುಟುಂಬ ಪರಂಪರೆಯಿಂದ ತಾವು ಮೇಲಿನವರು ಎಂದು ಸಾಧಿಸುವುದು ಎಲ್ಲಾ ಕಡೆಗಳಲ್ಲಿಯೂ –ಜಗತ್ತಿನಾದ್ಯಂತ– ಅಲ್ಲಲ್ಲಿ ಕಂಡುಬಂದಂತೆ, ಭಾರತದಲ್ಲಿಯೂ ಸ್ಥಾಪಿತವಾಯಿತು. ಈ ಸ್ವಾರ್ಥದ ಲಾಭವನ್ನು ವಿದೇಶೀ ಪ್ರಭುಗಳು ಉಪಯೋಗಿಸಿಕೊಂಡರು. ನೀವು ಹಿಂದೂ ಸಮಾಜದಲ್ಲಿಯೇ ಉಳಿದರೆ, ಮೇಲಿನವರೆಂಬುವರು ನಿಮ್ಮನ್ನು ಮುಟ್ಟದೆ, ಸಮಾನತೆ ನೀಡದೆ, ದೇವಾಲಯಗಳಿಗೂ ಪ್ರವೇಶ ಕೊಡದೆ ನಿರಂತರ ಕೀಳಾಗಿಯೇ ನಟಿಸುತ್ತಾರೆ; ನಮ್ಮ ಮತಕ್ಕೆ ಬನ್ನಿ, ಮುಸ್ಲಿಮರಾಗಿ, ಕ್ರಿಶ್ಚನರಾಗಿ ಎಂದು ಆಮಿಷವೊಡ್ಡಿ ಮತಾಂತರಗೊಳಿಸಲು, ಇದರಿಂದಲೂ ಅನುಕೂಲವಾಯಿತು. ನಮ್ಮೊಳಗಿನ ಸ್ವಾರ್ಥ ಸಂಕುಚಿತತೆಯನ್ನು ವಿದೇಶಿಯರು ಅವರ ಸ್ಥಾನಮಾನಗಳನ್ನು ಬಲಪಡಿಸಲು ನಾನಾ ರೀತಿಯಿಂದ ಉಪಯೋಗಿಸಿಕೊಂಡರು. ಮೂಲತಃ ಭಾರತೀಯರೇ ಆದ ಇಲ್ಲಿನ ಮುಸ್ಲಿಮರು ನಾವು ನಿಮ್ಮಿಂದ ಬೇರೆ ಜನಾಂಗ, ನಮಗೆ ಪ್ರತ್ಯೇಕ ರಾಷ್ಟ್ರವೇ ಆಗಬೇಕೆಂದು ವಾದಿಸಿ ಪಾಕಿಸ್ಥಾನವನ್ನೂ ಪಡೆದುಕೊಂಡರು. ಇದಕ್ಕೆ ಭಾರತದ ಸಮಾಜದಲ್ಲಿ ಮೇಲ್ವರ್ಗದವರೆಂಬವರಿಗಿದ್ದ ಸ್ವಾರ್ಥಸಂಕೋಚ ದೃಷ್ಟಿಯೂ, ನಮ್ಮನ್ನು ಸದಾ ಗುಲಾಮರಾಗಿ, ನಮ್ಮೊಳಗೆ ಜಗಳ ಹುಟ್ಟಿಸಿ, ವಿಭಜಿಸಿ ಆಳಬೇಕೆಂಬ ವಿದೇಶೀ ಪ್ರಭುತ್ವದವರ ಮಹತ್ವಾಕಾಂಕ್ಷೆಯೂ ಸರಿಯಾದ ಕಾರಣವಾಗಿದೆ; ಇದರಿಂದ ಪಾಠ ಕಲಿಯಲು ತಕ್ಕಷ್ಟಿದೆ.

ಭಾರತದಲ್ಲಿ ಜನ್ಮತಃ ಬ್ರಾಹ್ಮಣ ಅಬ್ರಾಹ್ಮಣ ಭೇದಕಲ್ಪನೆ ಇರಲಿಲ್ಲವಾದರೂ, ಇದಕ್ಕೂ ನಮ್ಮೊಳಗಿನ ಸಂಕುಚಿತ ಮನೋವೃತ್ತಿ ಹಾಗೂ ವಿದೇಶೀಯ ಪ್ರಭುತ್ವದ ಗುಲಾಮಗಿರಿಯ ಕೆಸರಿನ ಲೇಪವೂ ಸಮಾನ ಕಾರಣವಾಗಿದೆ. ಒಮ್ಮೆ, ಬ್ರಾಹ್ಮಣರೆಂಬುವರನ್ನು ಕರೆದು, ನೀವು ಉದ್ಯೋಗ ಕೊಡುತ್ತೇವೆ ಎಂದು ಅವರನ್ನು ಹತ್ತಿರ ಮಾಡುವುದು, ಇನ್ನೊಮ್ಮೆ ಅಬ್ರಾಹ್ಮಣರೆಂಬವರನ್ನು ಕರೆದು, ನೀವು ಹಿಂದುಳಿದವರು, ನೀವು ಮುಂದೆ ಬರುವಂತೆ ಮಾಡುತ್ತೇವೆ, ನಿಮಗೆ ಉದ್ಯೋಗ ಕೊಡುತ್ತೇವೆ ಎಂದು ಅವರಿಗೂ ಅಮಿಷ ತೋರಿಸುವುದು, ಈ ಆಟದಿಂದ ಭಾರತದಲ್ಲಿ

ಬ್ರಾಹ್ಮಣ–ಅಬ್ರಾಹ್ಮಣ ಭೇದೋಪಾಯ ಪ್ರಬಲಗೊಂಡಿತು. ಮದ್ರಾಸಿನಲ್ಲಿ ಬ್ರಿಟಿಷ್ ಆಡಳಿತ ಕಾಲದಲ್ಲಿ ಜಸ್ಟಿಸ್ ಪಾರ್ಟಿ ಎಂಬ ಹೆಸರಿನ ಪಕ್ಷವೇ ಈ ಕುಟಿಲ ನೀತಿಯ ಪರಿಣಾಮವಾಗಿ ಸ್ಥಾಪಿತವಾಗಿ, ಚುನಾವಣೆಗೂ ನಿಂತು ಸೋತುಹೋಯಿತು. ಮತ್ತೆ ರಾಮಸ್ವಾಮಿ ನಾಯ್ಕರರು ಅಬ್ರಾಹ್ಮಣರ ಮುಂದಾಳುವಾಗಿ ಹೋರಾಡಿದರು. ಇಂದಿನ 'ಕಜಗಂ'.ಪಕ್ಷಗಳಲ್ಲೂ ಜಾತೀಯತೆಯ ಉತ್ತಮಿಕೆ – ನೀಚತ್ವಗಳ ಭೇದೋಪಾಯ ಹಾಗೂ ಹೋರಾಟ ಇದೆ ಎಂದು ಹೇಳಲಾಗುತ್ತಿದೆ. ಹೇಗಿದ್ದರೂ, ಭಾರತದಲ್ಲಿ ಪ್ರಾಚೀನ ಕಾಲದಿಂದಲೇ ಸ್ಥಾಪಿತವಾಗಿದ್ದ, ಜನ್ಮತಃ ಯಾರೂ ಶ್ರೇಷ್ಠರಲ್ಲ, ಕರ್ಮದಿಂದ ಮಾತ್ರ ಶ್ರೇಷ್ಠರು ಎಂಬೀ ಉಚ್ಚಸಂಸ್ಕಾರ ಇಂದು ಮಸಕಾಗಿದೆ. ಈ ಕಳಂಕವನ್ನು ಹೋಗಲಾಡಿಸಬೇಕು. ಇಂದು ಭಾರತ ಸ್ವತಂತ್ರ ರಾಷ್ಟ್ರ; ನಾವು ಸ್ವಾತಂತ್ರ್ಯವನ್ನು ಪಡೆದು ಇಂದಿಗೆ ಸುಮಾರು ಅರ್ಧಶತಮಾನದಷ್ಟು ಕಾಲವೇ ಕಳೆಯಿತು ಇಷ್ಟಾದರೂ, ನಮ್ಮೊಳಗಿನ ಸಾಮಾಜಿಕವಾದ ಅಸಮಾನತೆಗಳು ಅನೈತಿಕ್ಯಗಳು ಮಾಸಿಹೋಗಿಲ್ಲ; ಮಾಸದೆ ಇದ್ದರೆ, ನಾವು ಸ್ವಾತಂತ್ರ್ಯದ ಸತ್ಫಲವನ್ನು ಸಂಪೂರ್ಣ ಅನುಭವಿಸಲು ಅರ್ಹತೆ ಪಡೆಯಲಾರೆವು. ಸಮುದ್ರಮಥನದಲ್ಲಿ ಮೊದಲು ವಿಷವೇ ಹುಟ್ಟಿದರೂ ಮತ್ತೆ ಅಮೃತ ಕುಂಭ ಲಭಿಸಿದಂತೆ, ನಾವು ಇನ್ನಾದರೂ ಆದರ್ಶ ನಾಗರಿಕರಾಗಬೇಕು; ರಾಷ್ಟ್ರದ ಸರ್ವತೋಮುಖ ಅಭಿವೃದ್ಧಿಯನ್ನು ಕಾಣಬೇಕು.

ಸ್ವತಂತ್ರ ಭಾರತದ ರಾಜ್ಯಘಟನೆ, ಜಾತಿ ಮತ ಧರ್ಮಾತೀತವಾದುದು; ಇಲ್ಲಿ ಎಲ್ಲರೂ ಸಮಾನರು. ಪುರುಷವರ್ಗದಂತೆ, ಸ್ತ್ರೀಸಮಾಜಕ್ಕೂ ನಮ್ಮ ರಾಷ್ಟ್ರದ ಘಟನೆ ಕಾನೂನು ಸಮಾನತೆಯನ್ನು ನೀಡುವುದಿದ್ದರೂ ಅದನ್ನು ಇಂದಿಗೂ ಕಾರ್ಯರೂಪಕ್ಕೆ ತರಲಾಗುತ್ತಿಲ್ಲ. ಸ್ತ್ರೀಶೂದ್ರರು ವೇದಗಳನ್ನು ಓದಬಾರದೆಂದು ಹೇಳುವ ಸಂಕುಚಿತಮತಿಗಳು ಈಗಲೂ ಇದ್ದಾರೆ, ಗಾರ್ಗಿಮೈತ್ರೇಯಿ –ಇಂತಹ ಸ್ತ್ರೀರತ್ನಗಳು ವೇದಮಂತ್ರಗಳ ದ್ರಷ್ಟಾರರಾಗಿದ್ದರೆಂದೂ ಧೀಮಂತ ವೇದರ್ಷಿಗಳನ್ನೂ ವಾದದಲ್ಲಿ ಸೋಲಿಸಿದ್ದರೆಂದೂ, ಅಂಥವರಿಗೆ ತಿಳಿದಿಲ್ಲವೆಂದು ತೋರುತ್ತದೆ. ಮನುಷ್ಯ ಸಮಾಜದಲ್ಲಿ ನುಸುಳಿಬಂದ ಸ್ವಾರ್ಥ ಸಂಕೋಚ ಬುದ್ಧಿಯೇ, ಮನೆ ಮನೆಗಳಲ್ಲಿ ಗೃಹಣಿಯರಿಗಿದ್ದ ಗೌರವಸ್ಥಾನದಿಂದ ಅವರನ್ನು ಕೆಳಕ್ಕೆ ತಳ್ಳಿ ಆ ಸ್ಥಾನವನ್ನು ಪುರುಷರು ಮಾತ್ರ ಆಕ್ರಮಿಸಿಕೊಳ್ಳುವರೆ ಕಾರಣವಾಯಿತು. ಭಾರತದಲ್ಲಿ ಪ್ರಾಚೀನಕಾಲದಲ್ಲಿ ಇಲ್ಲದಿರುವ, ಆಮೇಲೆ ದಾಸ್ಯದ ಕೆಸರ ಹೊಂಡದಲ್ಲಿ ಅದ್ದಿದಾಗ ಅಂಟಿಕೊಂಡ ಈ ವಿಚಾರ ಹೀನತೆಯ ಕೊಳೆಯನ್ನು ನಾವು ತೊಳೆದುಕೊಳ್ಳಲೇಬೇಕು. ಹಾಗಾದರೆ ಮಾತ್ರ ನಾವು ಸಂಸ್ಕೃತಸಂಪನ್ನರಾಗಬಲ್ಲೆವು.

ಭಾರತ ಕೃಷಿಪ್ರಧಾನವಾದ ರಾಷ್ಟ್ರ. ಇಲ್ಲಿನ ಜನತೆಯ ಬಹು ದೊಡ್ಡ ವೃತ್ತಿ ಬೇಸಾಯ. ಅದರಿಂದಲೇ ನಾವು ಜೀವಿಸುತ್ತೇವೆ.

'ಕೃಷಿತೋ ನಾಸ್ತಿ ದುರ್ಭಿಕ್ಷಂ'

'ಬೇಸಾಯದವ ಬೇಗ ತಾ ಸಾಯ'

ಇಂತಹ ಒಳ್ಳೆಯ ನೀತಿ ಮಾತುಗಳನ್ನು ಕೇಳುತ್ತಿದ್ದೇವೆ; ಬೇಸಾಯದಿಂದ ಅಕ್ಕಿ, ರಾಗಿ, ಗೋಧಿ ಇತ್ಯಾದಿ ಆಹಾರ ಧಾನ್ಯಗಳನ್ನು ಉತ್ಪಾದಿಸುತ್ತೇವೆ. ದೇವರ ದಯೆಯಿಂದಲೋ, ಪ್ರಕೃತಿಯ ವರದಿಂದಲೋ ನಮಗೆ ಈ ದೇಹ, ಈ ಜೀವ ದೊದಕಿದೆ; ನಾವು ಬದುಕಬೇಕಾದರೆ ಉಣ್ಣುವ ಅನ್ನಬೇಕು. ನಮ್ಮಲ್ಲಿ ಕೋಟಿ ಕೋಟಿ ರೂಪಾಯಿಗಳಿರಬಹುದು. ಮನೆಯಲ್ಲಿ ಒಂದು ಹಿಡಿ ಅಕ್ಕಿ ಇಲ್ಲ; ನೆರೆಕರೆಯಲ್ಲಿ ಸಿಗುವುದೂ ಇಲ್ಲ. ಹಿಂದಿನ ರೇಶನ್ ಕಾಲದ ಅನುಭವ ಹೆಚ್ಚಿನವರಿಗೆ ಇದ್ದೀತು. ಮನೆಯಲ್ಲಿ ಆಹಾರ ಧಾನ್ಯ ಇಲ್ಲದೇ ಇದ್ದಾಗ ಕೋಟಿ ರೂಪಾಯಿ ನಮ್ಮಲ್ಲಿ ಇದ್ದರೂ ರೂಪಾಯಿ ತಿಂದು ಬದುಕಲಾರೆವು. ಮನೆಯಲ್ಲಿ ನಮ್ಮನ್ನೇ ಅವಲಂಬಿಸಿಕೊಂಡಿರುವ ಅಜ್ಜಿ, ಅಜ್ಜ, ತಾಯಿ, ತಂದೆ, ಹೆಂಡತಿ ಮಕ್ಕಳನ್ನೂ, ಅತ್ಯಂತ ಆಪ್ತ ಬಂಧುಗಳನ್ನೂ ನಾವು ಬದುಕಿಸಲಾರೆವು. ಈ ಸಂದರ್ಭದಲ್ಲಿ–

'ಅನ್ನಂ ಬ್ರಹ್ಮೇತಿ ವ್ಯಜಾನಾತ್'

ಎಂಬ ಈ ವೈದಿಕ ಮಂತ್ರ ನಮಗೆ ಮಾರ್ಗದರ್ಶಿ; ಜೀವವನ್ನು ಉಳಿಸುವ ಬ್ರಹ್ಮ ಅನ್ನವೇ; ಅನ್ನ ಕೃಷಿಯಿಂದ ಮಾತ್ರ ಉತ್ಪಾದಿಸಲ್ಪಡುವುದು; ಕೃಷಿ ಹಳ್ಳಿಗಳ ಪ್ರಮುಖ ವೃತ್ತಿ; ನಮ್ಮ ರಾಷ್ಟ್ರ ಈ ಪ್ರಮುಖ ವೃತ್ತಿಯನ್ನುಮಾಡುವ ಈ ಗ್ರಾಮಗಳಿಂದ ಕೂಡಿದ ರಾಷ್ಟ್ರ' ಹಾಗಾಗಿ ನಾವು ಈ ಗ್ರಾಮೀಣ ವೃತ್ತಿ ಸಂಸ್ಕೃತಿಗಳನ್ನು ಕಾಪಾಡಿಕೊಂಡು ಬಂದಲ್ಲಿ ಸರ್ವಸಂಪನ್ನರು, ಸದಾ ಸ್ವತಂತ್ರರು, ಐಶ್ವರ್ಯವೆನ್ನುವುದು ಜೀವ ಕಾಪಾಡಲಿಲ್ಲ ಅನ್ನದ ಉತಪತಿಯಲ್ಲದ ದ್ರವ್ಯರಾಶಿಯಲ್ಲ, ಎಂಬುದು ನೂರಕ್ಕೆ ನೂರು ಸರಿಯಾದ ಸತ್ಯವಾಗಿದೆ.

ದೌರ್ಭಾಗ್ಯವೆಂದರೆ ಇಂದು ಆಗುತ್ತಿರುವ ಕೃಷಿಯ ಅವಗಣನೆ ಹಾಗೂ ಕೃಷಿಕರ ಶೋಷಣೆ, ನಿಜವಾದ ಅರ್ಥದಲ್ಲಿ ಬೇಸಾಯಗಾರನೇ ಅನ್ನದಾತಾ ಆಗಿದ್ದರೂ ಆತನಿಗೆ ಆ ಗೌರವ ಸಲ್ಲುತ್ತಿಲ್ಲ. ಅದರ ಬದಲು ಶರೀರಾರೋಗ್ಯಕ್ಕೂ, ಪರಿಸರ ನಾಶಕ್ಕೂ ಮುಖ್ಯ ಕಾರಣವಾದ, ಆ ಮೂಲಕ ಲೋಕ ವಿನಾಶಕ್ಕೆ ಮೂಲ ಹೇತುವಾದ ಬೀಡಿ ಸಿಗರೇಟು ಮದ್ಯಗಳ ಕಾರ್ಖಾನೆಗಳನ್ನು ದೊಡ್ಡ ದೊಡ್ಡ ಯಂತ್ರಗಳನ್ನು ಸ್ಥಾಪಿಸಿ ಬೃಹತ್ ಕೈಗಾರಿಕೆಗಳನ್ನು ಮಾಡಿ, ಮನುಷ್ಯನ ಜೀವನವನ್ನು ಹಾಗೂ ವಾತಾವರಣದ ಪರಿಶುದ್ಧತೆಯನ್ನು ಧ್ವಂಸಗೊಳಿಸಿ–ರಾಶಿರಾಶಿ ಹಣ ಗಳಿಸುವವರಿಗೆ,

ಸರಕಾರದಲ್ಲಿ ಅಧಿಕಾರಗಳನ್ನು ಗಳಿಸಿಕೊಂಡು ನ್ಯಾಯ ಮಾರ್ಗದಲ್ಲೋ ಅನ್ಯಾಯದ ಹಾದಿಯಲ್ಲೋ ಹೇಗೊ ಶ್ರೀಮಂತರಾದವರಿಗೆ ಹೆಚ್ಚಿನ ಗೌರವ ಮರ್ಯಾದೆಗಳು ಸಲ್ಲುತ್ತಿರುವುದನ್ನು ನಾವು ಕಾಣುತ್ತೇವೆ. ಇಂತಹ ವಿಭ್ರಮದಿಂದ ಆಕರ್ಷಿತರಾಗಿ ಇಂದು ಕೃಷಿಕರ ಮಕ್ಕಳೂ, ಬೇಸಾಯ ವೃತ್ತಿಯನ್ನು ಬಿಟ್ಟು ಪೇಟೆಗೆ ಧಾವಿಸುತ್ತಿದ್ದಾರೆ; ಸರಕಾರೀ ಚಾಕರಿಗೆ ಕೈಚಾಚುತ್ತಾರೆ; ಗೊಬ್ಬರ ಹೊತ್ತರೂ, ಕೆಸರಲ್ಲಿ ಗದ್ದೆಯಲ್ಲಿ ನೇಗಿಲು ಹಿಡಿದು ಉತ್ತರೂ, ಅದು ಸ್ವತಂತ್ರ ಉದ್ಯೋಗ, ಲೋಕಕ್ಕೆ ಅನ್ನ ಕೊಡುವ ಉತ್ತಮ ವೃತ್ತಿ ಎಂಬ ಅಭಿಮಾನ ಲವಲೇಶವೂ ಇಲ್ಲದೆ, ಕೃಷಿಕರ ಮಕ್ಕಳು ಟೆರ್ಲಿನ್ ಶರ್ಟ್ ಪ್ಯಾಂಟ್‌ಗಳನ್ನು ಧರಿಸಿ ಅರ್ಜಿ ಹಿಡಿದುಕೊಂಡು ನಗರದ ಗಲ್ಲಿ ಗಲ್ಲಿಗಳಲ್ಲಿ ಕಛೇರಿಗಳ ಬಾಗಿಲ ಮುಂದೆ ಕೈಯೊಡ್ಡಿ ಬೇಡುವ ಮನೋಭಾವ ತೀರಾ ಹಾಸ್ಯಾಸ್ಪದ ಹಾಗೂ ಲಜ್ಜಾಕರ. ಇದರಿಂದ ಆತ್ಮಗೌರವಕ್ಕೂ ದೇಶದ ಅಭಿವೃದ್ಧಿಗೂ ಹಾನಿಯಲ್ಲದೆ ವೈಯಕ್ತಿಕ ಆರೋಗ್ಯವೂ ಕೆಡುವುದು, ನಗರಗಳ ಹವೆ ತೀರಾ ಕಲುಷಿತ. ಇಲ್ಲಿ ಉಸಿರಾಡುವ ಗಾಳಿಯೂ ವಿಷ ತುಂಬಿದ್ದಾಗಿರುತ್ತದೆ. ತಿನ್ನುವ ಆಹಾರವೂ ಮಿಶ್ರಣದಿಂದ ಕೃತ್ರಿಮ. ಅಲ್ಲಿನ ಸ್ಪರ್ಧಾಮಯವಾದ ಜೀವನದಿಂದ ಮಾನಸಿಕ ಸಮತೋಲನವು ನಾಶವಾಗಬಹುದು. ತದ್ವಿರುದ್ಧ, ಹಳ್ಳಿಯ ಬೇಸಾಯ ವೃತ್ತಿ ಸ್ವತಂತ್ರ; ತಾನು ಬದುಕುವುದು, ತನ್ನ ಕುಟುಂಬವನ್ನು ಬದುಕಿಸುವಂತೆ ಮಾಡುವುದು ಮಾತ್ರವಲ್ಲ, ನಾಡಿನ ಸಮಸ್ತ ಜನತೆಯನ್ನೂ, ಅವನಿಗೆ ಬೇಕಾದ ಅನ್ನವನ್ನೂ ಉತ್ಪಾದಿಸುವ ಮೂಲಕ ಎಲ್ಲರನ್ನೂ ಬದುಕಿಸುವ ಧನ್ಯಕಾರ್ಯ, ಪುಣ್ಯಕಾರ್ಯ ಕೃಷಿಕನದು. ಸತ್ಯಶಾಮಲೆ, ಸುಜಲೆ, ಸುಫಲೆ, ಮಲಯಜ ಶಿತಲೆ ಗ್ರಾಮ ಗ್ರಾಮಗಳ ನೆಲ. ಅಲ್ಲಿನ ಜೀವನವು ಆಡಂಬರರಹಿತ, ನಿರ್ಮಲ, ಸುಂದರ ಹಾಗೂ ಸದಾ; ಮನಸ್ಸಿಗೂ ನೆಮ್ಮದಿ ಸಿಗುತ್ತದೆ. ಪ್ರಕೃತಿ ದೇವಿಯ ಮಡಿಲಲ್ಲಿ ಆನಂದದಿಂದ ಜೀವಿಸುವ ಬದುಕು ಇಂದು ಯಾರಿಗೂ ಬೇಡವಾಗಿದೆ. ಕೃಷಿಕರ ಮಕ್ಕಳು ಹಳ್ಳಿಯ ಜೀವನವೃತ್ತಿಗಳನ್ನುಳಿದು, ಪೇಟೆಯ ಬಿಸಿಲ್ಗುದುರೆಯ ಬೆನ್ನೇರಲು ಧಾವಿಸುವ ಪ್ರವೃತ್ತಿ ಆತ್ಮಹತ್ಯೆಗೆ ಸಮಾನ.

ನಾನು ಮಣ್ಣಿನ ಮಗನು, ಮಂದಾರ ಮಾಲೆಯೆನೆ
ನೊಗ ನೇಗಿಲು ಹೊತ್ತು ಬದುಕುವವನು,
ಹೊಲನೆಲವನುಳುವವನು ಕೆಸರಿನಲಿ, ಕಸದಲ್ಲಿ,
ಗೊಬ್ಬರದ ಗುಂಡಿಯಲಿ ದುಡಿಯುವವನು
ಇದೆ ಪುಣ್ಯವೆನಗೆ, ಭಾರತದಿ ಜನಿಸಿದ ಭಾಗ್ಯ-
–ಎಂದೂ,
ಕೆಸರಿನಿಂದ ಅಮೃತ ಕಲಶವನ್ನೆತ್ತಿ ಕೊಡೊತಿರುವೆ
ಹಸಿದ ಬಾಯಾರಿದ ಜಗತ್ತಿಗನ್ನವನೆರೆವೆ,

ಸಸ್ಯಶ್ಯಾಮಳೆ ಸುಜಲೆ ಸುಫಲೆ ಮಾತೆಯ

ಪುಣ್ಯಪುತ್ರ ರೈತ ನಮಸ್ತೆ; ನೀನೇ ಪರಮ ಪವಿತ್ರ!.....

ಎಂದೂ ಹಲವು ವರ್ಷಗಳ ಹಿಂದೆಕವನಗಳನ್ನು ರಚಿಸಿದೆ. ನೇಗಿಲಿನ ಜತೆ ಲೇಖನಿ ಹಿಡಿದ ಸೌಭಾಗ್ಯಕ್ಕೆ ಸಾರ್ಥಕತೆಯ ಸಂತುಷ್ಟಿ ಹೊಂದಿದೆ.

'ನೇಗಿಲಿನ ಜತೆಗೆ ಲೇಖನಿ ಹಿಡಿದ ಕೈಯಲ್ಲಿ

ಗೆರೆ ತಪ್ಪದಿರೆ ಬರೆವೆ'

ಎಂದು ಹಾಡಿದೆ; ಹಾಡುತ್ತಾ ದುಡಿದೆ.

ಮಹಾಕವಿ ಕುವೆಂಪು 'ನೇಗಿಲಯೋಗಿ' ಎಂಬ ಅಮರಗೀತದಲ್ಲಿ, ಬೇಸಾಯಗಾರನನ್ನು ಯೋಗಿಯ –ಋಷಿಯ –ಜೀವನ ಸಮುನ್ನತಿಗೇರಿಸಿ, ಕೀರ್ತಿಶಾಲಿಗಳಾಗಿದ್ದಾರೆ, ಆ ಕವನ ಮಾತ್ರವಲ್ಲ, ತಮ್ಮ ಕಥೆ, ಕಾದಂಬರಿಗಳಲ್ಲಿಯೂ ಹಳ್ಳಿಯ ನಿರ್ಮಲ ಜೀವನವನ್ನು, ಗಿರಿಕಂದರ, ಬೆಳೆ, ಹೊಳೆ, ತೋಟ, ಗಿಡ, ವೃಕ್ಷ – ಈ ಸೌಂದರ್ಯ ರಾಶಿಯನ್ನು ಓದುಗರ ಕಣ್ಮುಂದೆ ತಂದು ಚಿರಸ್ಮರಣೀಯವಾಗಿದ್ದಾರೆ. ಇಂತಹ ಸುಂದರ ಸಂಸ್ಕೃತಿಯ, ನಿರ್ಮಲ ಜೀವನದ, ತಾನು ಬದುಕಿ ಲೋಕವನ್ನೇ ಬದುಕಿಸುವ ಈ ಸಂಸ್ಕಾರ ಹೊಂದಿದ ಗ್ರಾಮೀಣ ಜನತಾ ಜನಾರ್ಧನರನ್ನು ನಾವು ಆರಾಧಿಸಬೇಕಾಗಿದೆ.

ರಾಷ್ಟ್ರಪಿತ ಗಾಂಧೀಜಿ ಭಾರತಕ್ಕೆ ಸ್ವಾತಂತ್ರ್ಯ ಬಂದಮೇಲೆ ಗ್ರಾಮಸ್ಥರಾಜ್ಯದ ರಚನಾತ್ಮಕ ಕಾರ್ಯದ ಕುರಿತು ತಿಳಿಸಿ ಹೇಳಿದ್ದರು. ಅಂತಹ ಅವರ ಭವ್ಯಕಲ್ಪನೆಯ ಗ್ರಾಮಸ್ವರಾಜ್ಯದ ಹಿತೋಪದೇಶಕ್ಕೆ ಭಾರತದ ಪ್ರಾಚೀನ ಸಂಸ್ಕೃತಿಯೇ ಆಧಾರ. ವಾಲ್ಮೀಕಿ ಮಹರ್ಷಿ, ರಾಮರಾಜ್ಯದ ಆದರ್ಶ ಚಿತ್ರಣವನ್ನು ಸುಂದರವಾಗಿ ನೀಡಿದ್ದಾನೆ. ಶ್ರೀರಾಮನ ರಾಜ್ಯದಲ್ಲಿ ಎಲ್ಲರೂ ಸುಖಿಗಳು, ಎಲ್ಲರೂ ಅವರವರ ಕರ್ತವ್ಯಕರ್ಮದಲ್ಲಿ ನಿರತರು; ಎಲ್ಲರೂ ಪರಸ್ಪರ ಸಹಕಾರ ನೀಡುವವರು. ಅಲ್ಲಿ ಶೋಷಣೆಯಿಲ್ಲ; ಯಾರೊಬ್ಬನೂ ಅಲ್ಲಿ ಹಸಿವಿನಿಂದ ಬಳಲಲಾರನು; ಎಲ್ಲರೂ ಸಮೃದ್ಧಿ ಸಂತುಷ್ಟ ಜೀವನ ನಡೆಸುವವರು. ಅಲ್ಲಿ ಯಾರಿಗೂ ಯಾರ ಮೇಲೂ ದ್ವೇಷವಿಲ್ಲ. ಎಲ್ಲರಿಗೂ ತೋಷವುಂಟು. ಅಲ್ಲಿ ಶಿಶುಮರಣವಿಲ್ಲ; ಎಲ್ಲರೂ ಪೂರ್ಣಾಯುಸ್ಸು ಬದುಕುವರು. ಅಲ್ಲಿ ವಿಧವೆಯರಿಲ್ಲ; ಎಲ್ಲರೂ ಸೌಭಾಗ್ಯವತಿಯರು. ಇಂತಹ ಭವ್ಯ ಚಿತ್ರಣವನ್ನು ವಾಲ್ಮೀಕಿ ನೀಡಿದ್ದಾನೆ. ಅದನ್ನೇ ಅನುಸರಿಸಲು ಗಾಂಧೀಜಿ ತಿಳಿಸಿದರು. ಕೃಷಿಕರ್ಮವೇ ಪ್ರಧಾನವಾಗಿ, ಆವಶ್ಯವಾದ ಇತರ ವಸ್ತುಗಳ ನಿರ್ಮಾಣವನ್ನು ಗುಡಿಕೈಗಾರಿಗಳಿಂದ ಹಳ್ಳಿಯಲ್ಲಿಯೇ ತಯಾರಿಸಬೇಕೆಂಬುದು ಅವರು ತೋರಿದ ದಾರಿ, ತಾನೇ ನೂತ ನೂಲಿಂದ ಹಳ್ಳಿಯ ಮಗ್ಗಗಳಲ್ಲಿ ತಾನೇ ಬಟ್ಟೆ ನೆಯ್ದು ಉಡಬೇಕು. ಮನುಷ್ಯನು ಪೂರ್ಣ ಸ್ವತಂತ್ರನಾಗುವುದು ಆತನಿಗೆ ಬೇಕಾದ ಆಹಾರವನ್ನು, ಆತನ ಮೈ ಮುಚ್ಚಲು

ಬೇಕಾದ ಬಟ್ಟೆಯನ್ನು ತಾನೇ ಉತ್ಪತ್ತಿಮಾಡುವ ಮೂಲಕ, ದೊಡ್ಡ ದೊಡ್ಡ ಗಿರಣಿಗಳಲ್ಲಿ ಧಾರಾಳ ಬಟ್ಟೆಗಳನ್ನು ಉತ್ಪಾದಿಸುತ್ತಾರೆ. ಅದು ಸಿಗುತ್ತದೆ ಎಂದು ಹೇಳುವುದು; ಆದರೆ ಗಿರಣಿಗಳಲ್ಲಿ ಕೂಲಿಗಾರರು ಮುಷ್ಕರ ನಡೆಸಿದರೆ, ಗಿರಣಿಗಳಿಗೆ ಬಾಂಬು ಬಿದ್ದು ಧ್ವಂಸಗೊಂಡರೆ ಅವನ್ನೇ ಹೊಂದಿಕೊಂಡು ಬಟ್ಟೆ ಧರಿಸುವವರೆಲ್ಲರೂ ನಗ್ನರೇ ಆಗಬೇಕಾದೀತು; ಹಾಗಾಗಿ ಮಾನವ ಪೂರ್ಣ ಸ್ವತಂತ್ರನಾಗುವುದು ಆತನಿಗೆ ಬೇಕಾದ ಆಹಾರವನ್ನೂ, ಆತನಿಗೆ ಅವಶ್ಯವಿರುವ ಬಟ್ಟೆಯನ್ನೂ, ಪ್ರತಿಯೊರ್ವನೂ ತಾನೇ ಉತ್ಪಾದಿಸಿದಾಗ ಮಾತ್ರವೆಂಬ ಸತ್ಯವನ್ನು ಎಲ್ಲರೂ ಅರ್ಥಮಾಡಿಕೊಳ್ಳಬಹುದು.

ಗ್ರಾಮಗಳ ಜನರ ಅಹವಾಲೆಗಳನ್ನು ಕೇಳಿ ವಿಚಾರಿಸಲು ಗ್ರಾಮ ಪಂಚಾಯತಿಗಳೂ ಇರಬೇಕೆಂದು ಗಾಂಧೀಜಿ ತಿಳಿಸಿದ್ದಾರೆ; ಈ ಪಂಚಾಯತಿಯೆನ್ನುವುದು ಅದೇ ಪ್ರಾಚೀನವಾದ ಒಂದು ಸಂಸ್ಕೃತಿಪೂರ್ಣ ಪದ್ಧತಿ. ಗ್ರಾಮದ ಐದು ಜನ ಆಯ್ಕೆಗೊಂಡ ಮುಖ್ಯಸ್ಥರು– ಗುರಿಕಾರರು, ಊರಿನ ದೂರುಗಳನ್ನು ವಿಚಾರಿಸಿ ಯೋಗ್ಯ ತೀರ್ಮಾನ ಕೊಡುತ್ತಾರೆ; ಆ ತೀರ್ಮಾನದಂತೆ ಗ್ರಾಮಸ್ಥರು ನಡೆಯುತ್ತಾರೆ; ಇಂತಹ ವ್ಯವಸ್ಥೆಯಲ್ಲಿ ಪೋಲೀಸರಾಗಲಿ, ಕೋರ್ಟುಕಚೇರಿಗಳಾಗಲಿ, ಸೈನ್ಯವಾಗಲಿ, ಮದ್ದು ಗುಂಡುಗಳಾಗಲಿ ಅವಶ್ಯವಿಲ್ಲ; ಕರಭಾರವೂ ಇಲ್ಲ; ಎಲ್ಲರೂ ಒಳ್ಳೆಯವರಾದಾಗ ದೇಶದಲ್ಲಿ ಜಗಳ ದೊಂಬಿಗಳು ಇಲ್ಲದೆ ಜೀವನ ಹಳ್ಳಿಹಳ್ಳಿಗಳಲ್ಲಿಯೂ ನಡೆದಾಗ, ಈಗಿರುವಂತೆ ಹಲವಾರು ಇಲಾಖೆಗಳು, ಆ ಇಲಾಖಾಧಿಕಾರಿಗಳು – ಈ ವ್ಯವಸ್ಥೆ – ಹಲವು ಉದ್ಯೋಗಸ್ಥರ ನೇಮಕ–ಸಂಬಳ ವೆಚ್ಚಗಳಾವುವೂ ಅವಶ್ಯವಿಲ್ಲದೆ, ಇಂದಿನಂತೆ ಕರಭಾರ ಹೂರಿಸುವ ಅವಶ್ಯಕತೆಯೂ ಇಲ್ಲದೆ, ಎಲ್ಲರ ದುಡಿತವೂ ಅವರೆಲ್ಲರ ಅನುಭವಕ್ಕೇ ಪ್ರಯೋಜನಕಾರಿಯಾಗಿ ಸುಖೀಸಮೃದ್ಧಿ ಜೀವನಕ್ಕೇ ಸುಗಮವಾಗುತ್ತದೆ ಎಂಬುದೂ ಕೊನೆಯ ತೀರ್ಮಾನ. ಇದೇ ಒಳ್ಳೆಯ ನಡತೆ–ಉತ್ತಮ ಸಂಸ್ಕೃತಿ ಮುಂದುವರಿದಲ್ಲಿ ಸರಕಾರವೆಂಬುದೇ ಅವಶ್ಯವಿಲ್ಲವೆಂಬ ನಿರ್ಣಯಕ್ಕೂ ಬರಲು ಸಾಧ್ಯವಿದೆ. ಪ್ರಾಚೀನಭಾರತವೆಂಬ ಪಂಚಾಯತ್ ರಾಜ್ಯದ ಆ ಹಿರಿದಾದ ನೀತಿಯೇ ಗ್ರಾಮಸ್ಥರಾಜ್ಯ ಸಿದ್ಧಾಂತಕ್ಕೂ, ಇಂದಿನ ಪಂಚಾಯಿತ್ ಘಟನೆಯ ಪ್ರಯೋಗಕ್ಕೂ ಆಧಾರವಾಗಿದೆ. ಪಂಚಾಯಿತ್‌ಗಳ ನೂತನ ಘಟನಾವಳಿಯಂತೆ, ಪ್ರತಿಗ್ರಾಮದಲ್ಲೂ ಪಂಚಾಯಿತು ಸ್ಥಾಪಿತವಾಗಿ, ಆ ಪಂಚಾಯತಿಯಲ್ಲಿ ಪುರುಷರಂತೆ ಮಹಿಳೆಯರಿಗೂ ಸ್ಥಾನಮಾನ, ದಲಿತರಿಗೂ ಪ್ರಾತಿನಿಧ್ಯ – ಇಂತಹ ವೈಶಿಷ್ಟ್ಯಗಳಿರುವುದನ್ನು ಗಮನಿಸಬೇಕು. ಅವೆಲ್ಲವೂ ನಾಡಿನ ಸಮಗ್ರತೆಯ ಅಭಿವೃದ್ಧಿಗೆ ಸಹಕಾರಿ. ಈ ಪಂಚಾಯತ್ ಪದ್ಧತಿ, ಅದರ ಮೂಲಪ್ರೇರಣೆಯಂತೆ ಸರಿಯಾಗಿ ನಡೆದಲ್ಲಿ ದೇಶದ ಪ್ರಗತಿ ಖಂಡಿತ ಆಗಲೇಬೇಕು. ಈಗ ಇರುವ ಹಲವಾರು ರಾಜಕೀಯ, ಸಾಮಾಜಿಕ ದುಷ್ಟ ಶಕ್ತಿಗಳು ನಾಶವಾಗಿ ಆದರ್ಶ ಗ್ರಾಮ ಪಂಚಾಯಿತಿಗಳ ಕಾರ್ಯನಿರ್ವಹಣೆಯ ಪ್ರಯೋಜನ ಭಾರತ

ಸಮಗ್ರತೆಯಲ್ಲಿ ಎಲ್ಲರಿಗೂ ಸಿಗುವಂತಾಗಲಿ ಎಂದು ಹಾರೈಸೋಣ.

ಗ್ರಾಮಾಭಿವೃದ್ಧಿಯ ಮೂಲ ಸಿದ್ಧಾಂತದಲ್ಲಿ, ಭದ್ರವಾದ ಆ ಬುನಾದಿಯಲ್ಲಿ ರಾಷ್ಟ್ರರಚನೆ ಮಾಡುವ ಸದುದ್ದೇಶದಿಂದ ಶಿಕ್ಷಣವನ್ನೂ ಅದಕ್ಕೇ ಅನುಗುಣವಾಗಿ ನೀಡಬೇಕೆಂದು ಗಾಂಧೀಜೀ ಮೂಲಶಿಕ್ಷಣವನ್ನು ಪ್ರಯೋಗಿಸಬೇಕೆಂದು ಹೇಳಿದರು; ಈ ಶಿಕ್ಷಣದ ಪಾಠ ನೀಡುವ ಅಧ್ಯಾಪಕರ ತರಬೇತಿ ಕೇಂದ್ರವೂ ಸ್ಥಾಪಿತವಾಗಿ ಕಾರ್ಯಾಚರಣೆ ಪ್ರಾರಂಭವಾಯಿತು. ಅಂತೆ ದೇಶದ ಬೇರೆ ಬೇರೆ ಕಡೆಗಳಲ್ಲಿ ಮೂಲಶಿಕ್ಷಣದ ಶಾಲೆಗಳೂ ಪ್ರಾರಂಭವಾದುವು. ವಿದ್ಯಾರ್ಥಿಗಳಿಗೆ ಭಾಷೆ, ಗಣಿತ, ವಿಜ್ಞಾನ, ಖಗೋಳ, ಭೂಗೋಳ, ಚರಿತ್ರೆ, ಸಮಾಜಶಾಸ್ತ್ರ ಈ ಎಲ್ಲಾ ವಿಷಯಗಳೂ ಅವರವರ ಮಾತೃಭಾಷೆಯಲ್ಲಿಯೇ ಪ್ರಾರಂಭವಾಗುವುದಲ್ಲದೆ, ಹಾಗೆ ಶಿಕ್ಷಣ ನೀಡುವಾಗ, ಆ ಪ್ರತಿಯೊಂದು ವಿಷಯದಲ್ಲಿಯೂ ಪ್ರತ್ಯಕ್ಷ ಕಾರ್ಯಾಚರಣೆಯಿಂದ ಅಭ್ಯಾಸ ನಡೆಯುತ್ತಿತ್ತು, ಉದಾಹರಣೆಗೆ, ನೆಲ ಉಳುವುದು, ಗೊಬ್ಬರ, ಬೀಜ ಬಿತ್ತುವುದು, ಸಸಿ ಬೆಳೆಸುವುದು ಇತ್ಯಾದಿ ಕೆಲಸಗಳನ್ನು ಪ್ರತ್ಯಕ್ಷ ವಿದ್ಯಾರ್ಥಿಗಳೇ ಅಧ್ಯಾಪಕರ ನೇತೃತ್ವದಲ್ಲಿ ಮಾಡಿ ಅದರ ವಿಷಯ ಪಾಠರೂಪದಲ್ಲಿ ಕಲಿತುಕೊಳ್ಳುವರು. ಹಾಗೆ ಕಲಿಯುವುದರಿಂದ ಮುಂದೆ ಶಿಕ್ಷಣ ಮುಗಿದ ನಂತರ ಸ್ವತಂತ್ರವಾಗಿ ಅವರೇ ಗ್ರಾಮೀಣ ಅಭಿವೃದ್ಧಿ ಕಾರ್ಯಗಳನ್ನು ಮಾಡಿ, ತಾವೂ ಸ್ವತಂತ್ರ ಜೀವನ ನಡೆಸಿ ಆ ಮೂಲಕ ಸಮಗ್ರ ರಾಷ್ಟ್ರದ ಅಭ್ಯುದಯಕ್ಕೂ ನೆರವಾಗುತ್ತದೆಂಬ ತತ್ವ ಪ್ರಾಯೋಗಿಕವಾಗಿ ಆಚರಣೆಗೆ ಬರುತ್ತದೆ.

ಬ್ರಿಟಿಷ್ ಆಡಳಿತಕಾಲದಲ್ಲಿ ಶಿಕ್ಷಣದ ಪಾಠಪಟ್ಟಿ ರೀತಿನೀತಿಗಳೆಲ್ಲವೂ, ಅವರಿಗೆ ಇಲ್ಲಿ ಆಡಳಿತ ಮಾಡುವ ಸಂದರ್ಭ, ಕಛೇರಿಗಳಲ್ಲಿ ಚಾಕರಿ ಮಾಡುವ ಗುಮಾಸ್ತರನ್ನು ತಯಾರು ಮಾಡುವ ಗುಮಾಸ್ತರನ್ನು ತಯಾರು ಮಾಡುವ ಧ್ವನಿಯಲ್ಲೇ ಇತ್ತು. ಆ ಶಿಕ್ಷಣದಂತೆ, ವಿದ್ಯಾಭ್ಯಾಸ ಪಡೆದವನು, ಪದವೀಧರನಾದರೂ ಸ್ವತಂತ್ರ ಜೀವನ ನಡೆಸುವ ಅರ್ಹತೆಯನ್ನು ಪಡೆಯುತ್ತಿರಲಿಲ್ಲ. ಎಸ್ ಎಸ್. ಎಲ್. ಸಿ. ಆದಮೇಲೆ ಪಿ.ಯು.ಸಿ., ಆಮೇಲೆ ಬಿ.ಎ., ಬಿ.ಎಸ್.ಸಿ., ಬಿ.ಕಾಂ ಇತ್ಯಾದಿ ಮುಂದೆ ಎಂ. ಎ., ಎಂ ಎಸ್ಸಿ, ಎಂ ಕಾಂ. ಹೀಗೆ ಜೀವನ ನಿರ್ವಹಣೆ ಮಾಡುವ ಮನೋವೃತ್ತಿಯಲ್ಲದೆ, ತಾನು ಸ್ವತಂತ್ರ ಉದ್ಯೋಗ ಮಾಡಿ ಬದುಕಬಲ್ಲೆ ಎಂಬ ವಿಶ್ವಾಸ ಅಂದಿನ ಶಿಕ್ಷಣ ನೀಡುತ್ತಿರಲಿಲ್ಲ. ಹಾಗಾಗಿಯೇ, ಆ ಕಾಲದಲ್ಲಿ, ಬ್ರಿಟಿಷರ ಅಧಿನದ ಪರತಂತ್ರತೆಯನ್ನು ಹೋಗಳಾಡಿಸಿ, ದೇಶ ಸ್ವಾತಂತ್ರ್ಯ ಪಡೆದು ಸರ್ವಾಂಗ ಅಭಿವೃದ್ಧಿಗೊಳ್ಳಬೇಕೆಂಬ ಸದುದ್ದೇಶದಿಂದ ತ್ಯಾಗಬಲಿದಾನಗಳನ್ನು ಮಾಡಿ ಹೋರಾಡಿದ ಸ್ವಾತಂತ್ರ್ಯ ಸಂಗ್ರಾಮದ ಆ ಕಾಲದಲ್ಲಿ ಬ್ರಿಟಿಷರ ಆ ವಿದ್ಯಾಭ್ಯಾಸ ಪದ್ಧತಿಯನ್ನು ಟೀಕಿಸಿ, ಸ್ವಾತಂತ್ರ್ಯ ದೊರೆತ ಮೇಲೆ, ಶಿಕ್ಷಿತರಾದ ಯುವಕರು ಸ್ವತಂತ್ರ ಜೀವನ ಮಾಡುವ ಶಿಕ್ಷಣ ಕೊಡುವ ಭರವಸೆ ನೀಡಲಾಗಿತ್ತು; ಅದರ ಪ್ರಾರಂಭದ ಹಂತವಾಗಿ ಮೂಲ ಶಿಕ್ಷಣವೂ ಅಲ್ಲಲ್ಲಿ

ಪ್ರಯೋಗಕ್ಕೆ ಬಂತು.

ದುರದೃಷ್ಟವೆಂದರೆ, ಮೂಲ ಶಿಕ್ಷಣ ಪದ್ಧತಿಯಲ್ಲಿ ಇಂದು ಮೂಲೆಗೆ ಸೇರಿರುವುದು. ಶಿಕ್ಷಣದಲ್ಲಿ ಸ್ವತಂತ್ರ ಜೀವನ ಮಾಡುವ ರೀತಿಯ ವಿದ್ಯೆಯನ್ನು ಕೊಡುವ ನಿರ್ಧಾರ ಇನ್ನೂ ಸರಿಯಾಗಿ ಜಾರಿಗೆ ಬರಲಿಲ್ಲ; ಇಂದಿಗೂ ಅದೇ ರೀತಿ ಹೆಚ್ಚಿನ ಮಟ್ಟಿಗೆ ಪದವೀಧರರಾದವರು ಸರಕಾರಿ ಚಾಕರಿಗಾಗಿ ಹಾರೈಸುವ, ಕೈಯೊಡ್ಡುವ ಮನೋದಾಸ್ಯದವರಾಗಿದ್ದಾರೆ. ವಿದ್ಯಾವಂತರು ಭಾಷೆ ವಿಜ್ಞಾನ ಗಣಿತಾದಿ ಸಂಪೂರ್ಣ ವಿಷಯಗಳ ಜ್ಞಾನವಂತರಾಗುವುದರೊಂದಿಗೆ, ಮನೆಮನೆಗಳಲ್ಲಿ ಯಾವುದಾದರೊಂದು ವೃತ್ತಿಯನ್ನು ಮಾಡಿ ತಾವು ಸ್ವತಂತ್ರ ದೊರೆತು, ಇಲ್ಲಿಗೆ ಸುಮಾರು ಅರ್ಧ ಶತಮಾನ ಕಾಲವಾದರೂ, ದೇಶದ ರಾಜಕೀಯ ಧುರಿಣರಿಗೆ, ನಮ್ಮನ್ನು ಆಳುವ ಮಂತ್ರಿಮಾನ್ಯರಿಗೆ ಬರಲಿಲ್ಲವೆಂಬುದು ವಿಷಾದನೀಯು, ಈ ಗಂಭೀರ ಸಮಸ್ಯೆ ಶೀಘ್ರ ಪರಿಹಾರವಾಗತಕ್ಕದ್ದು. ಶಿಕ್ಷಣ ಪಡೆದವರೆಲ್ಲರೂ ಸ್ವತಂತ್ರ ಜೀವಿಗಳಾಗಿ ಸಾರ್ಥಕ ಜೀವನ ನಡೆಸುವಂತೆ ಆಗಬೇಕು. ಅದಕ್ಕೆ ಅನುಕೂಲವಾದ ಶಿಕ್ಷಣ ನೀಡುವಂತೆ, ಅಧಿಕಾರಕ್ಕೆ ಏರಿದವರಿಗೆ ಸಮೃದ್ಧಿ ಬರಲೆಂದು ನಾವು ಹಾರೈಸೋಣ.

೬

ಒಂದು ಮಹತ್ವದ ಉದ್ದೇಶಕ್ಕೆ ಶ್ರದ್ಧಾಪೂರ್ವಕ ಶ್ರಮಿಸುವವರು ಸದಾ ಆಶಾವಾದಿಗಳಾಗಬೇಕಾಗಿದೆ.

'ಕುರ್ವನ್ನೇವೇಹ ಕರ್ಮಾಣಿ ಜಿಜೀವಿಶೇತ್ ಶತಂ ಸಮಾಃ'

ಇದು ಈಶಾವಾಸ್ಯದ ಮಂತ್ರ; ಈ ಪ್ರಪಂಚದಲ್ಲಿ ಜನಿಸಿ ಬಂದ ಪ್ರತಿಯೊಬ್ಬರಿಗೂ, ಅವರವರು ಮಾಡಲೇಬೇಕಾದ ಕರ್ತವ್ಯ ಕರ್ಮವಿದೆ; ಅದನ್ನು ಎಲ್ಲರೂ ಶ್ರದ್ಧಾಪೂರ್ವಕ ಮಾಡುತ್ತಾ ಇದ್ದುನೂರು ವರ್ಷಗಳ ವರೆಗೆ ಸಮೃದ್ಧವಾದ ಜೀವನ ನಡೆಸಬೇಕು- ಎಂಬುದು ಈ ಮಂತ್ರದ ಸಾರ, ಕೆಲವರು ಹೇಳುವಂತೆ, ಲೋಕವೆಂಬುದು ಮಾಯೆ; ಜೀವನವೆಂಬುದು ಭ್ರಮೆ ಎಂಬ ಮಾತು ನಮ್ಮ ಸಂಸ್ಕೃತಿಯಲ್ಲ. ಆ ರೀತಿಯ ಮಾಯೆಯ ಭ್ರಮೆಯ ವಿಚಾರವೆಂದರೆ ಆತ್ಮಹತ್ಯೆ ಮಾಡಿಕೊಳ್ಳಬೇಕಾದೀತು. ಬದುಕು- ಬದುಕಲಿಕ್ಕೆ ಅಲ್ಲದೆ ಮರಣಕ್ಕಲ್ಲ; ನೂರು ವರ್ಷಗಳ ತುಂಬು ಜೀವನವೇ ನಮ್ಮ ಆದರ್ಶ.

*"ಶತಶರತ್ಕಾಲ ಶುಭವಕಾಂಬುದು.
ಶತಶರತ್ಕಾಲ ಬದುಕಿಕೊಂಬುದು,
ಶತಶರತ್ಕಾಲ ಸುಖವನುಂಬುದು,
ಶತಶರತ್ಕಾಲ ಮೋದಗೊಂಬುದು.

ನೂರು ವರ್ಷ ಬಲದಿಂದ ಬಾಳ್ವುದು.
ನೂರು ವರ್ಷ ಕಿವಿತುಂಬ ಕೇಳ್ವುದು
ನೂರು ವರ್ಷ ಮಾತೆಲ್ಲ ಪೇಳ್ವುದು
ನೂರು ವರ್ಷಸೋಲಿಲ್ಲದಾಳ್ವುದು."

–ಇಂತಹ ಜೀವನ ಶ್ರದ್ಧೆ ಭಾರತೀಯ ಸಂಸ್ಕೃತಿ; ಶತಾಯುಷಿಯಾಗಿ ಬಾಳುವುದು ಎಂಬ ಮಾತಿನಿಂದ ಜೀವನೋತ್ಸಾಹ ತುಂಬುತ್ತದೆ. ಗಾಂಧೀಜಿ ನೂರ ಇಪ್ಪತ್ತೈದು ವರ್ಷ ಬದುಕಬೇಕೆಂದು ಆಶಿಸಿದ್ದರು. ರಾಷ್ಟ್ರದ ದುರದೃಷ್ಟವೆಂದರೆ, ಅಕಸ್ಮಾತ್ ಹಂತಕನ ಗುಂಡಿಗೆ ಬಲಿಯಾಗಿ ಕೀರ್ತಿಶೇಷರಾದರು. ಇತ್ತೀಚೆಗೆ ನಾನು ಒಬ್ಬ ಗಣಿತ ಜ್ಯೋತಿಶ್ಶಾಸ್ತ್ರಜ್ಞರೊಡನೆ ಮಾತನಾಡುವಾಗ ಮನುಷ್ಯನ ಪೂರ್ಣಾಯುಸ್ಸು ನೂರಿಪ್ಪತ್ತೈದು ವರ್ಷಗಳು ಎಂದು ಹೇಳಿದ್ದು ಮತ್ತಷ್ಟು ಆಶಾದಾಯಕವಾಗಿದೆ; ಗಾಂಧೀಜಿ ಅದೇ ತಿಳುವಳಿಕೆಯನ್ನು ಹಾಗೆ ಹೇಳಿರಬೇಕು; ದೇಶದ ಹಾಗೂ ಜಗತ್ತಿನ ಕೆಲವು ಕಡೆಗಳಲ್ಲಿ ನೂರ ಇಪ್ಪತ್ತೈದು ವರ್ಷ ಬಾಳಿದವರ ಹೆಸರು ನಾವು ಆಗಾಗ ಕೇಳುತ್ತೇವೆ, ಬದುಕಿನಲ್ಲಿ ಸಾಕಷ್ಟು ಆಸೆ ಭರವಸೆಗಳನ್ನು ಇಟ್ಟುಕೊಂಡು ಕರ್ತವ್ಯಗಳನ್ನು ಸರಿಯಾಗಿ ನೆರವೇರಿಸಿ ಕೃತಾರ್ಥರಾಗುವ ಅಚಲ ವಿಶ್ವಾಸವಿರುವುದು ಅಗತ್ಯ. ನಿರಾಶೆ ಸರ್ವಥಾ ಕೂಡದು. ಇಂದು ರಾಷ್ಟ್ರೀಯ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಅಲ್ಲಲ್ಲಿ ಕಂಡುಬರುವ ಕೆಲವೊಂದು ನ್ಯೂನತೆಗಳನ್ನು ಪರಿಹರಿಸಿ, ಪ್ರಗತಿಪಥದಲ್ಲಿ ಮುನ್ನಡೆದು, ದೇಶದ ಅಭಿವೃದ್ಧಿಯನ್ನು ಸಾಧಿಸುವ ಸತ್ಯ ಹಾಗೂ ದೃಢಸಂಕಲ್ಪ – ಈ ಆಶಾವಾದವೇ ನಿಜವಾದ ಜೀವನಾದರ್ಶವಾಗಿದೆ.

ಉತ್ತಮ ಜೀವನಕ್ಕಾಗಿ ಶ್ರದ್ಧಾನ್ವಿತರಾಗಿ–ಕರ್ತವ್ಯ ನೆರವೇರಿಸುತ್ತಾ ಎತ್ತರೆತ್ತರಕ್ಕೆ ಏರುವ ಮಹೋನ್ನತ ಸಾಧನೆ ಸಿದ್ಧಿಗಳಿಗೆ ಕಠೋಪನಿಷತ್ತಿನಲ್ಲಿ ಬರುವ ನಚಿಕೇತನ ಕಥೆ ಒಳ್ಳೆಯ ಉದಾಹರಣೆಯಾಗಿದೆ. ನಚಿಕೇತನ ತಂದೆ ವಾಜಶ್ರವಸನು ವಿಶ್ವಜಿತ್ ಯಾಗ ನೆರವೇರಿಸಿದ; ಆ ಯಾಗದ ಪ್ರಮುಖ ಕಾರ್ಯ, ಬಂದವರಿಗೆ ಬೇಡಿದ್ದನ್ನೆಲ್ಲಾ ಕೊಡುವುದು. ಹಾಗೆ ಸರ್ವಸ್ವವನ್ನೂ ದಾನ ಮಾಡಿದ ವಾಜಶ್ರವನಿಗೆ, ಯಾಗದ ಕೊನೆಯಲ್ಲಿ, ಪುರೋಹಿತರಿಗೆ ದಾನ ಕೊಡಲು ಏನೂ ಉಳಿಯದೆ ತನ್ನಲ್ಲಿ ಇದ್ದ ಬರಡುಜರೆಡು ದನಗಳನ್ನು – ಹಾಲಿಲ್ಲದೆ ಹುಲ್ಲು ಜಗಿಯಲಾಗದೆ ಇದ್ದ ಪಶುಗಳನ್ನು ದಾನಮಾಡುವ ಅಭಿಪ್ರಾಯ ಮಾಡುತ್ತಾನೆ; ಇದನ್ನು ತಿಳಿದ ಆತನ ಕುಮಾರ–ಆರು ವರ್ಷ ಪ್ರಾಯದ ಮಗ–ನಚಿಕೇತ ಶ್ರದ್ಧೆಯಿಂದ ತಂದೆಯೊಡನೆ 'ನನ್ನನ್ನು ಯಾರಿಗೆ ಕೊಡುತ್ತೀ' ಎಂದು ಕೇಳಿದ; ಒಮ್ಮೆ ಕೇಳಿದ, ಮತ್ತೂ ಅದೇ ಪ್ರಶ್ನೆ ಕೇಳಿದ; ಸಿಟ್ಟುಕೊಂಡ ತಂದೆ 'ನಿನ್ನನ್ನು ಯಮನಿಗೆ ಕೊಡುತ್ತೇನೆ' ಎಂದ. ನಚಿಕೇತನು, ಇಷ್ಟು ಉತ್ತಮ ಯಾಗ ಮಾಡಿದ ತನ್ನ ತಂದೆ ಮಂದಿ ಗೋವುಗಳನ್ನು ನಿರರ್ಥಕವಾದವುಗಳನ್ನು

ಕೊನೆಗೆ ದಾನ ಮಾಡಿದಲ್ಲಿ ಪುಣ್ಯಕಟ್ಟಿಕೊಳ್ಳಲಾರನೆಂದು ಚಿಂತಿಸಿ, ಪ್ರತ್ಯಕ್ಷವಾಗಿ ಅವನ್ನು ಕೊಡಬೇಡ ಎಂದು ಹೇಳಲಾರದೆ, ತಂದೆಗೆ ಮಗನೇ ಅತ್ಯಂತ ಪ್ರೀತಿಯವನು, ನನ್ನನು ಯಾರಿಗೆ ಕೊಡುತ್ತೀ ಎಂಬ ಆತನ ಪ್ರಶ್ನೆಯಲ್ಲಿ ಯಾಗದ ಸಾರ್ಥಕ್ಯಕ್ಕೆ ಬೆಲೆ ಬಾಳುವ ಉತ್ತಮ ಸಾಧನಗಳನ್ನು ಕೊಡು ಎಂಬ ಧ್ವನಿಯಿತ್ತು; ಅದನ್ನು ಅರ್ಥಮಾಡಲಾರದೆ ತಂದೆ, ಮಗನನ್ನು ಯಮಲೋಕಕ್ಕೆ ಕಳುಹಿಸಿದ; ತಂದೆಯ ಆಜ್ಞೆ ಪಾಲಿಸಲೇಬಾಕಾದದ್ದು; ನಚಿಕೇತ ಯಮಲೋಕಕ್ಕೆ ಹೋದಾಗ, ಯಮಧರ್ಮ ಅಲ್ಲಿರಲಿಲ್ಲ; ಯಮಲೋಕದ ಬಾಗಿಲು ಮುಚ್ಚಿತ್ತು; ಹಾಗಾಗಿ ದ್ವಾರದಲ್ಲಿ ಮೂರು ದಿನ ಆತ ನಿರಶನ ನಿಂತನು; ಅದು ಪರಿಣಾಮವಾಗಿ ಯಮಲೋಕಕ್ಕೆ ಬೆಂಕಿ ಹಚ್ಚಿಕೊಂಡಿತು; ದೂತರು ವಿಷಯ ತಿಳಿಸಲು ಯಮನು ಧಾವಿಸಿ ಬಂದ; ನಚಿಕೇತನನ್ನು ನೋಡಿದ; ಆತನ ವರ್ಚಸ್ಸಿಗೆ ಬೆರಗಾದ; ಮೂರು ದಿನಗಳ ಉಪವಾಸಗಳ ಸಲುವಾಗಿ ಮೂರು ವರಗಳನ್ನು ನಿನಗೆ ಕೊಡುತ್ತೇನೆ ಎಂದ; ನಚಿಕೇತನು, ಯಾವ ತನ್ನ ತಂದೆಯ ಏಳಿಗೆ ಬಯಸಿ, ಆತನ ಮಾತಿನಂತೆ ಯಮಲೋಕಕ್ಕೇ ಬಂದನೋ, ಆ ತನ್ನ ತಂದೆಯ ಸಿಟ್ಟು ಕಡಿಮೆಯಾಗುವಂತೆ ವರ ನೀಡೇಂದು ಮೊದಲನೇ ವರದಲ್ಲಿ ಕೇಳಿದ; ಅದನ್ನು ಪಡೆದ; ಎರಡನೆ ವರದಲ್ಲಿ ನಚಿಕೇತಾಗ್ನಿಯನ್ನು ಕೇಳಿ ಪಡೆದ. ನಚಿಕೇತನ ಈ ವರದ ನಿಮಿತ್ತವೇ ಲೋಕದಲ್ಲಿ ಈ ಯಜ್ಞಾಗ್ನಿಯು ಉದಯವಾಯಿತೆಂಬ ನಂಬುಗೆಯೂ ಇದೆ. ಮತ್ತೆ ಮೂರನೇ ವರದಲ್ಲಿ 'ಮರಣದಿಂ ಮುಂದೆ ಏನು?' ಎಂಬ ಗಹನ ವಿಚಾರವನ್ನು ನಚಿಕೇತನು ಕೇಳುತ್ತಾನೆ. ಅಂತಹ ಗಹನ ವಿಚಾರವನ್ನು ತಿಳಿದುಕೊಳ್ಳಲು ಕುಮಾರನಾದ ನಚಿಕೇತನು ಅರ್ಹನೋ ಎಂಬುದನ್ನು ಪರೀಕ್ಷಿಸಿ ಆತನಿಗೆ ಪ್ರೇಯಸ್ಸು – ಶ್ರೇಯಸ್ಸುಗಳ ವಿಚಾರವಾಗಿ ಯಮನು ತಿಳಿಯಹೇಳುತ್ತಾನೆ; ಪಂಚೇಂದ್ರಿಯಗಳ ಸುಖವಾದ ಪ್ರಿಯವಾದ, ಪ್ರೇಯಸ್ಸನ್ನು ಬಯಸದೆ, ಜೀವಿತವನ್ನು ಉತ್ತಮಗೊಳಿಸುವ ಶ್ರೇಯಸ್ಸನ್ನು ಬಯಸಬೇಕು–ಅಂಥವನು ಮರಣಾತ್ಪರಂ ಕೂಡ ಉತ್ತಮಿಕೆಯನ್ನು ಪಡೆಯುವನು ಎಂದು ಆತನಿಗೆ ಯಮನು ನೀತಿಸಾರವನ್ನು ಬೋಧಿಸುವನು. ಇಂತಹ ಶ್ರೇಯಸ್ಸಿನ ಸಾಧನೆಗೆ ಸರಿಯಾದ ಶ್ರದ್ಧಾಪೂರ್ವಕವಾದ ಶ್ರಮ ಅಗತ್ಯವೆಂದೂ ತಿಳಿಸುವನು. ಹೀಗಾಗಿ ಜೀವನದಲ್ಲಿ ಯಾವ ಬಗ್ಗೆಯೂ ನಿರಾಶರಾಗದೆ, ಆಶಾವಾದಿಗಳಾಗಿ ಶ್ರದ್ಧಾವಂತರಾಗಿ ಕರ್ತವ್ಯಗಳನ್ನು ನೆರವೇರಿಸುವರು ಶ್ರೇಯೋಭಾಗಿಗಳಾಗುವರೆಂಬುದೇ ಈ ಸತ್‌ಕಥೆಯ ನೀತಿಯಾಗಿದೆ. ನಚಿಕೇತನಿಗೆ ಯಮಧರ್ಮನು ನೀಡಿದ ಆ ಉಪದೇಶ ಪ್ರಾಚೀನ ಭಾರತದ ಜನಜೀವನದ ಒಳ್ಳೆಯ ಸಂಸ್ಕೃತಿಯ ಪಾಠವಾಗಿರುವುದು.

ಶ್ರದ್ಧಾಪೂರ್ವಕವಾದ ಪ್ರಯತ್ನದಿಂದ ವಿದ್ಯಾಬುದ್ಧಿಗಳಲ್ಲಿ ಪರಮೋನ್ನತಿಯನ್ನು ಪಡೆಯಬಹುದು ಎಂಬುದಕ್ಕೆ ಏಕಲವ್ಯನ ಕಥೆಯೂ ಉತ್ತಮ ಸಾಕ್ಷಿ. ದ್ರೋಣಾಚಾರ್ಯರಲ್ಲಿ ಬಿಲ್ಲುವಿದ್ಯೆ ಕಲಿಯಲು ಹೋದ ಬೇಡರ ಕುಲದಲ್ಲಿ ಜನಿಸಿದ

ಏಕಲವ್ಯನಿಗೆ ಆತ ವಿದ್ಯೆ ಕಲಿಸಲು ನಿರಾಕರಿಸಿದ; ಆದರೆ ಏಕಲವ್ಯ, ದ್ರೋಣನ ಮಣ್ಣಿನ ಮೂರ್ತಿ ಮಾಡಿ ಅದರ ಮುಂದೆ ಶ್ರದ್ಧಾನಿಷ್ಠನಾಗಿ ಬಿಲ್ಲು ವಿದ್ಯೆಗಳನ್ನು ಕಲಿತ; ಆತನು ತಾನು ದ್ರೋಣ ಶಿಷ್ಯನೆಂದು ಹೇಳಿಕೊಂಡಿದ್ದಕ್ಕೆ, ದ್ರೋಣನು ಅವನ ಬೆರಳನ್ನೇ ಗುರುದಕ್ಷಿಣೆಯಾಗಿ ಕೇಳಲು, ಕತ್ತರಿಸಿ ಸಮರ್ಪಿಸಿದ. ಆಚಾರ್ಯನನ್ನು ದೇವರು ಎಂದು ತಿಳಿ ಎಂಬ ಮಂತ್ರದ ಅರ್ಥವನ್ನು ಇಷ್ಟೊಂದು ಸಮರ್ಪಣಾ ಭಾವದಿಂದ ಪಾಲಿಸಿದ ವ್ಯಕ್ತಿ ಏಕಲವ್ಯನೊಬ್ಬನೆ, ಇದು ಹಿರಿಯ ಸಂಸ್ಕೃತಿಯ ಚಿಹ್ನೆ. ವೃದ್ಧರಾದ ಮಾತಾಪಿತೃಗಳನ್ನು ಪುಣ್ಯಕ್ಷೇತ್ರ ತೀರ್ಥ ಸಂದರ್ಶನಕ್ಕೆ ಹೊತ್ತುಕೊಂಡು ಹೋಗುತ್ತಿದ್ದಾಗ ತಾಂಡವನು ದಾರಿಯಲ್ಲಿ, ಅವರಿಗೆ ಬಾಯಾರಿಕೆಯಾದಾಗ, ನೀರು ತರಲು ಹೋಗಿ, ಹಳ್ಳದಲ್ಲಿ ಪಾತ್ರೆ ಮುಳುಗಿಸುವಾಗ ಉಂಟಾದ ಗುಳುಗುಳುನಿನಾದದಿಂದ, ಬೇಟೆಗೆ ಹೋಗಿದ್ದ ದಶರಥ ಕಾಡುಮೃಗವೆಂದು ಭ್ರಮಿಸಿ ಬಾಣಬಿಟ್ಟು ಹತನಾದನು- ಮಾತಾಪಿತೃಗಳ ಸೇವೆಯ ಋಣವನ್ನು ಅಷ್ಟೊಂದು ಶ್ರದ್ಧೆಯಿಂದ ನೆರವೇರಿಸುತ್ತಾ ಬಂದು, ಕೊನೆಗೆ ತನ್ನ ಜೀವವನ್ನೇ ಅದರ ಸಲುವಾಗಿ ಬಲಿದಾನ ಮಾಡಿದ್ದು-ಇದು ಅಭೂತಪೂರ್ವ ಪಿತೃಪೂಜೆಯ ಅತ್ಯುತ್ತಮ ಉದಾಹರಣೆಯಾಗಿದೆ. ಇದೇ ರೀತಿ ಪಿತೃವಾಕ್ಯಪಾಲನೆಗಾಗಿ ಹದಿನಾಲ್ಕು ವರ್ಷ ಅರಣ್ಯವಾಸವನ್ನನುಭವಿಸಿದ ಶ್ರೀರಾಮನ ಕರ್ತವ್ಯಪಾಲನೆ, ಅವನನ್ನು ಅನುಸರಿಸಿ ಹೋದ ಲಕ್ಷ್ಮಣನ ಭ್ರಾತೃಸೇವಾಕಾಂಕ್ಷೆ, ನಂದಿಗ್ರಾಮದಲ್ಲಿ ರಾಮನ ಪಾದುಕೆಯನ್ನು ಪೀಠದಲ್ಲಿ ಇಟ್ಟು ವ್ರತನಿಷ್ಠನಾದ ಭರತನ ಬಾತೃಪ್ರೇಮ, ಅಗ್ನಿಪರೀಕ್ಷೆಗೊಳಗಾದ ಸೀತಾದೇವಿ ಪಾತಿವ್ರತ್ಯಮಹಿಮೆ, ಯುಧಿಷ್ಠರನ ಧರ್ಮಬುದ್ಧಿ, ಹರಿಶ್ಚಂದ್ರನ ಸತ್ಯನಿಷ್ಠೆ- ಇವೆಲ್ಲವೂ ನಮ್ಮ ಪುರಾಣಗಳಲ್ಲಿನ ಮಹಾಪುರುಷರ, ಪತಿವ್ರತೆಯರ ಕರ್ತವ್ಯಪಾಲನೆಯ ಉದಾಹರಣೆಗಳು, ಇವು ಸಮಾಜಕ್ಕೆ ಆದರ್ಶಮಯವಾದ ಜೀವನ ಸಾಧನೆ ಸಂಸ್ಕೃತಿಗಳು. ಇಂತಹ ದೃಷ್ಟಾಂತಗಳಿಂದ ನಾವು ಬರುವ ಸಕಲ ಸಂಕಷ್ಟಗಳನ್ನು ಧೈರ್ಯದಿಂದ ಎದಿರಿಸಿ, ಆಶಾವಾದಿಗಳಾಗಿ ಬದುಕನ್ನು ಬೆಳಗಿಸುವಸ್ಫೂರ್ತಿ ಪಡೆದಂತಾಗುತ್ತದೆ.

ಜೀವಿಯಲ್ಲಿ ಉತ್ತಮ ಸ್ಥಿತಿಗೆ ಏರಬೇಕೆಂಬ ಹಾರೈಕೆ ಇರಬೇಕು ಅಂತಹ ಹಾರೈಕೆ ಮಾಡುತ್ತಾ ಅದಕ್ಕಾಗಿ ನಿರಂತರ ಮನಸ್ಸಿಟ್ಟು ದುಡಿಯುತ್ತಾ ಇದ್ದರೆ ಆ ಜೀವಿ ಉತ್ತಮತೆಗೆ. ಏರಬಲ್ಲನು ಎಂದು ವೈಜ್ಞಾನಿಕ ವಿಚಾರವೂ ಇದೆ. ಅದರಂತೆ ಪ್ರತಿಯೊಂದು ಜೀವಿಯ ಅಂತರಾತ್ಮ ಎಂಬ ಕಿರುಜ್ಯೋತಿ, ಪರಮಾತ್ಮನೆಂಬ ಬೃಹತ್ ಜ್ಯೋತಿಯೊಡನೆ ಹಾರೈಸಿ ಸೇರುವುದೇ ಮುಕ್ತಿ ಎಂಬ ಧಾರ್ಮಿಕ ಸಿದ್ಧಾಂತವೂ ಇದೆ. ಸೂರ್ಯನಿಂದಲೇ ಲೋಕಕ್ಕೆ ಬಂದ ಬೆಳಕಿನ ಕಿರಣಗಳೆಲ್ಲಾ ಮತ್ತೆ ರಾತ್ರಿಯಾದಾಗ ಸೂರ್ಯನಲ್ಲೇ ಸೇರುವಂತೆ ಮತ್ತೆ ಪ್ರಕೃತಿ ಸಹಜವೋ, ವಿಜ್ಞಾನವೋ, ಆಧ್ಯಾತ್ಮವೋ ಈ ಎಲ್ಲ ವಿಚಾರಧಾರೆಗಳಲ್ಲೂ, ಜೀವಿ ಉತ್ತಮಿಕೆ ಪಡೆಯಲು

ಪ್ರಯತ್ನಿಸುತ್ತಿರಬೇಕೆಂದೂ, ಅದರಿಂದ ಒಳ್ಳೆಯ ಫಲ ದೊರಕುವುದೆಂದೂ ಅದೇ ಶ್ರದ್ಧಾಪೂರ್ವವಾದ ಜೀವಿಯ ಕರ್ತವ್ಯವೆಂದೂ, ಆ ಮುನ್ನವೇ ಸಾಧಿಸಲು ಪಡೆಯುವ ಪ್ರಯತ್ನದಲ್ಲಿ ಫಲಸಿದ್ಧಿ ಬೇಗನೇ ಲಭಿಸದೇ ಇದ್ದರೂ ಸರಿ ದೊರಕುವ ತನಕ ಕರ್ತವ್ಯದಲ್ಲಿ ಶ್ರದ್ಧೆಯಿಟ್ಟು ಶ್ರಮಪಟ್ಟು ದುಡಿಯುತ್ತಿರಬೇಕೆಂಬ ಈ ಗಂಭೀರ ವಿಷಯವನ್ನು ತಿಳಿದುಕೊಳ್ಳಬಹುದಾಗಿದೆ.

ದೇವರ ಹತ್ತಾವತಾರ ಕಥೆಗಳಲ್ಲೂ ಈ ವಿಷಯ ಸ್ಪಷ್ಟವಾಗುವಂತಿದೆ. ಮಹಾವಿಷ್ಣು ಮೀನು, ಹಂದಿ, ಕೂರ್ಮನರಸಿಂಹ ಇಂತಹ ಪ್ರಾಣಿಗಳ ರೂಪದಲ್ಲಿ ಮೊದಲು ಅವತರಿಸಿ ಮತ್ತೆ ಮೀನು ಅವತಾರ ಪಡೆದು ಬಂದ ಕಥೆ ಓದುತ್ತೇವೆ. ಮೀನು, ಹಂದಿ, ಆಮೆ ಇತ್ಯಾದಿ ಪ್ರಾಣಿ ಜಾತಿಗಳನ್ನೂ ದೇವರು ಎಂದು ನಂಬುವ ಭಾರತೀಯರೂ ಇಂತು ಹತ್ತು ಅವತಾರಗಳನ್ನು ನಂಬುವ ಮೂಲಕ ಸಕಲಜೀವಿ ಜಂತುಗಳಲ್ಲಿಯೂ ಜೀವಾಂಶವನ್ನು ಕಾಣುವ ವಿಶಾಲ ಮತಿಗಳು, ಮಂಗ ಮಾನವನ ಮೂಲವೆಂಬ ಸಿದ್ಧಾಂತವೂ ಉಂಟು. ಹರಿದುಹೋಗುವ ಸರ್ಪಜಾತಿಗಳು ನಾಲ್ಕು ಕಾಲುಗಳಲ್ಲಿ ನಡೆಯುತ್ತಿರುವ ಪಶುಮೃಗಾದಿಗಳನ್ನು ಕಂಡು ಅಂತೆ ಆಗಬೇಕೆಂದು ಮುಂದೆ ಮಾನವರಾಗುತ್ತವೆ ಎಂಬ ಉತ್ತಮ ಅಪೇಕ್ಷೆಯಿಂದ ಉತ್ತಮಿಕೆಗೆ ಏರುವ ಚಿಂತನೆಯೂ ಇದೆ ಎಂಬ ವಾದವೂ ಇದೆ. ಎಲ್ಲ ಜೀವಿಗಳ ಆತ್ಮದಲ್ಲಿಯೂ ಪರಮಾತ್ಮನಿರುವನೆಂಬ ವಿಶಾಲ ಮತಿತ್ವ

'ಚಂಡಾಲೋಸ್ತು ಸತುದ್ವಿಜೋಸ್ತು ಗುರುರಿತ್ಯೇಪಿಮನೀಷಿಮಮ'

ಎಂಬ ಆಚಾರ್ಯ ಶಂಕರರ ಸೂಕ್ತಿಯಲ್ಲಿಯೂ ಕಾಣುತ್ತದೆ. ದೇವರ ಹತ್ತು ಅವತಾರಗಳಲ್ಲಿ ವಿಶ್ವಾಸವಿರಿಸುವ ಪ್ರಾಚೀನ ಹಾಗೂ ಆಧುನಿಕ ದೈವಭಕ್ತರ ಚಿಂತನೆಯ ಮೂಲವನ್ನು ನಾವು ತಿಳಿದುಕೊಂಡಲ್ಲಿ-ಇದರಲ್ಲಿಯೂ ಉತ್ತಮ ಭಾವನೆ ಅಡಕವಾಗಿರುವುದನ್ನು ಅರ್ಥಮಾಡಬಹುದು. ಎಲ್ಲಾ ಜೀವಿಗಳಲ್ಲಿಯೂ ದಯೆಯನ್ನು ಬೀರಿದ ಬುದ್ಧ, ಜಿನರ ವಾಣಿಗಳಲ್ಲಿಯೂ ಈ ಸಂಸ್ಕಾರ ಇದೆ.

'ಜಾತಿಹೀನರ ಮನೆಯ ಜ್ಯೋತಿತಾಹೀನವೆ?'

ಎಂಬೀ ಶರಣರ ವಚನವೂ ಮಾರ್ಗದರ್ಶಿ, ಉಚ್ಚ ವಂಶದಲ್ಲಿ ಜನಿಸಿದರೂ, ಆ ವಂಶಪರಂಪರೆಯ ಜಾತಕರ್ಮಾದಿಗಳನ್ನೊಲ್ಲದೆ 'ಹೊಲೆಮಾದಿಗ'ರೆಂಬವರನ್ನೂ ತನ್ನಂತೆ ಬಗೆದು ಉದ್ಧರಿಸಿದ ಬಸವೇಶ್ವರರ ಈ ಪಂಥವೂ ಮನನೀಯವಾಗಿದೆ.

ಸಹಸ್ರಾರು ನದಿ ನದಗಳ ಪ್ರವಾಹವೆಲ್ಲವೂ ಕೊನೆಗೆ ಸಾಗರವನ್ನೇ ಸೇರುವಂತೆ, ಎಲ್ಲವೂ ಏಕದೇವತ್ವದ ಅಂತಿಮ ನಿರ್ಧಾರಕ್ಕೆ ಬರುವ ಹೆಮ್ಮೆ ನಮ್ಮದು, ಭಿನ್ನತೆಯನ್ನು ಭಾರತೀಯ ತತ್ವಶಾಸ್ತ್ರ ಕೊನೆಯ ನಿರ್ಣಯದಲ್ಲಿ ನಾವು ದೇವರನ್ನು ಆರಾಧಿಸಿದರೂ ಅವೆಲ್ಲವೂ ಒಬ್ಬನೇ ದೇವರ ಆರಾಧನೆಯೆಂಬುದು ನಿಶ್ಚಿತ ಸಿದ್ಧಾಂತ.

"ಏಕಂ ಸತ್ ವಿಪ್ರಾಃ ಬಹುಧಾವದಂತಿ
ಅಗ್ನಿಂ ಯಮಂ ಮಾತರಿಶ್ವಾನಮಾಹುಃ"
ಎಂಬೀ ವೇದೋಕ್ತಿಯೂ,
"ಯಂ ಶೈವಾಃ ಸಮುಪಾಸತೇಶಿವ ಇತಿ ಬ್ರಹ್ಮೇತಿ ವೇದಾಂತಿನಃ
ಬೌದ್ಧಾಃ ಬುದ್ಧ ಇತಿ ಪ್ರಮಾಣಪಟಹಃ ಕರ್ತೇತಿನೈಯ್ಯಾಯಿಕಾಃ
ಅರ್ಹನ್ನಿತ್ಯಥ ಜೈನಶಾಸನರತಾಃ ಕರ್ಮೇತಿ ಮೀಮಾಂಸಕಾಃ
ಸೋಯಂ ವೋವಿದಧಾತು ವಾಂಛಿತ ಫಲಂ ತ್ರೈಲೋಕ್ಯ
ನಾಥೋವಿಭುಃ"
ಎಂಬ ಪ್ರಾಚೀನ ಶಾಸನೋಕ್ತಿಯೂ,
"ಆಕಾಶಾತ್ ಪತಿತಂ ತೋಯಂ
ಯಥಾಗಚ್ಛತಿ ಸಾಗರಂ
ಸರ್ವ ದೇವ ನಮಸ್ಕಾರಃ
ಕೇಶವಂ ಪ್ರತಿ ಗಚ್ಛತಿ"

ಎಂಬ ವಿಶ್ವಾಸವೂ, ನಮ್ಮ ಪ್ರಾಚೀನರ ನಾನಾ ರೂಪಗಳ ಆರಾಧನೆಯೂ ದೇವತ್ವದ ಶುದ್ಧ ನಿರ್ಣಯವನ್ನೇ ಸಾರುತ್ತವೆ ಎಂಬುದು ಮನನೀಯವಾಗಿದೆ.

ಆದ್ದರಿಂದಲೇ ಹಿಂದೂ ಎಂಬ ಪದ ಒಂದು ಪ್ರತ್ಯೇಕ ಧಾರ್ಮಿಕವಂತ ಸಿದ್ಧಾಂತವಾಗಿರದೆ ಪ್ರಪಂಚದ ಸಕಲ ಜನತೆಯೂ ಅನುಸರಿಸಬಹುದಾದ ಉತ್ತಮವಾದ ನಡತೆಯನ್ನು ನೀತಿಯನ್ನು ತಿಳಿಸುವ ಜೀವನ ಕ್ರಮವಾಗಿದೆ. ಸಿಂಧೂ ಎಂಬ ಪದದಿಂದ ಹಿಂದೂ ಎಂಬ ಪದ ಪ್ರಚುರವಾಯಿತೆಂದು ಸಂಶೋಧಕರು ಹೇಳುತ್ತಾರೆ; ಸಿಂಧೂನದಿ ತೀರದಲ್ಲಿದ್ದ ಮೂಲನಿವಾಸಿಗಳು ಅನುಸರಿಸುತ್ತಿದ್ದ ಜೀವನ ಕ್ರಮವೇ ಹಿಂದುತ್ವವಾಯಿತು. ಒಂದು ಪದದಲ್ಲಿ ಬರುವ ಅಕ್ಷರಗಳು ಹವೆ ಆಹಾರ ಇತ್ಯಾದಿಗಳಿಂದ ಬೇರೆ ಬೇರೆ ಪ್ರದೇಶಗಳಲ್ಲಿ ಭಿನ್ನ ರೂಪತಾಳುವುದು ಸಹಜ. ಕನ್ನಡದ ಸೊಪ್ಪು, ತುಳುವಿನಲ್ಲಿ ಸಪ್ಪು, ತಪ್ಪು, ಚಪ್ಪು, ಹಪ್ಪು ಇಷ್ಟು ರೂಪಭೇದಗಳನ್ನು ಭಿನ್ನ ಭಿನ್ನ ಸ್ಥಳಗಳಲ್ಲಿ ಪಡೆಯುತ್ತದೆ; ಹಾಗೆಯೇ ಸಿಂಧೂ ಹಿಂದು ಆಗಿರಬೇಕು; ಹೇಗಿದ್ದರೂ ಇದು ಒಂದು ಪ್ರತ್ಯೇಕ ಸಂಕುಚಿತ ಮತಧರ್ಮ ಸಿದ್ಧಾಂತವಲ್ಲ. ಪ್ರಪಂಚದ ಎಲ್ಲ ಕಡೆಯ ಜನರಿಗೂ, ಸಕಲ ಮತ ಧರ್ಮಗಳವರಿಗೂ ಉತ್ತಮ ಜೀವನ ನಿರ್ವಹಣೆಗೆ ಒಳ್ಳೆಯ ಬೆಳಕನ್ನು ನೀಡುವ ವಿಶಾಲ ಜೀವನ ರೀತಿಯಾಗಿದೆ; ಸತ್ಯಂವದ ಧರ್ಮಂಚರ, ಎಂಬ ಭಾರತದ ಅನಾದಿಕಾಲದ ಆದರ್ಶ ಜೀವನ ತತ್ವವನ್ನು ಲೋಕದ ಸಕಲ ಮತಾಚಾರ್ಯರೂ ಒಪ್ಪಿರದ ಹವ್ಯಾಸ ಹಿಂದುತ್ವದಲ್ಲಿ ಇಲ್ಲವಾದರೂ, ಅಮೆರಿಕದಂತಹ

ಧೀಮಂತ ಶ್ರೀಮಂತ ರಾಷ್ಟ್ರದ ಮಹನೀಯರೇ ಭಾರತ ಜೀವನ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ ಎಂಬುದು ಹಿಂದುತ್ವದ ವಿಶ್ವವ್ಯಾಪೀ ಸದಾಚಾರಿ ಸಂಪನ್ನತೆಯನ್ನು ಸಾರಿ ಹೇಳುತ್ತದೆ.

ಶೃಂಗಾರವೊಂದೇ ರಸ. ಹಾಸ್ಯ, ಕರುಣ, ವೀರ, ರೌದ್ರ, ಭಯಾನಕ, ಬೀಭತ್ಸ, ಅದ್ಭುತ, ಶಾಂತ ಈ ಎಲ್ಲಾ ರಸಗಳೂ ಶೃಂಗಾರರಸ ಜನ್ಯವೆಂದು ಆಲಂಕಾರಿಕರೊಬ್ಬರು ಹೇಳಿದ್ದು ಮನನೀಯ. ಈ ವಿಚಾರ, ಭಾರತೀಯ ಸಾಹಿತ್ಯದ ಮಹೋನ್ನತಿಯನ್ನು ತಿಳಿಸುವಂತಿದೆ. ಈ ವಾದಕ್ಕೆ ಮಹತ್ವದ ಉದಾಹರಣೆ. ಜಯದೇವ ಕವಿಯ 'ಗೀತಗೋವಿಂದ'. ಸಮಸ್ತ ಭಾರತದಲ್ಲಿಯೇ ಈ ಗ್ರಂಥ ಜನಪ್ರಿಯ ಸಂಸ್ಕೃತ ಭಾಷಾಕಾವ್ಯ; ಸರಳವೂ ಸುಂದರವೂ ಆದ ಶೈಲಿಯಲ್ಲಿರುವ ಈ ಕಾವ್ಯ ಸಂಗೀತಕ್ಕಳವಡಿಸಲು ಅನುಗುಣವಿದ್ದು ಅದರ ಜನಪ್ರಿಯತೆಗೆ ಇದೂ ಕಾರಣವೆನ್ನಬಹುದು. ಬಂಗಾಳದಲ್ಲಂತೂ ಗೀತಗೋವಿಂದ ಮನೆ ಮನೆಗಳಲ್ಲಿ ಹಾಡಲ್ಪಡುತ್ತದೆ. ಇದರಲ್ಲಿ ರಾಧಾಕೃಷ್ಣರ ಪ್ರಣಯವಿಲಾಸವನ್ನು ಭಕ್ತಿಪೂರ್ಣ ಭಾವನೆಯಿಂದ ವರ್ಣಿಸಿದೆ :

'ಸ್ಮರಗರಲ ಖಂಡನಂ, ಮಮಶಿರಸಿ ಮಂಡನಂ
ದೇಹಿಪದ ಪಲ್ಲವಮುದಾರಂ'

ಎಂದು ರಾಧೆ ಶ್ರೀಕೃಷ್ಣನೊಡನೆ ಪ್ರಾರ್ಥಿಸುತ್ತಾಳೆ. ಮನ್ಮಥ ವಿಷವನ್ನು ಹೋಗಲಾಡಿಸುವ ಚಿಗುರಿನಷ್ಟು ಮಿದುವಾದ ನಿನ್ನ ಪಾದವನ್ನು ಉದಾರಮನಸ್ಸಿನಿಂದ ನನ್ನ ತಲೆಯ ಮೇಲೆ ಅಲಂಕರಿಸು- ಎಂಬ ಪ್ರಾರ್ಥನೆಯನ್ನು ಶ್ರೀಕೃಷ್ಣನೊಡನೆ ರಾಧೆ ಮಾಡುತ್ತಾಳೆ. ರಾಧೆಯ ತಲೆಯಮೇಲೆ ಇಡುವ ಶ್ರೀಕೃಷ್ಣನ ಮೃದು ಪಾದಗಳು ಆಕೆಯ ಮುಡಿಗೆ ಅಲಂಕಾರವಾಗುತ್ತವೆ ಎಂಬ ಭಾವನೆ, ಆ ಸ್ಪರ್ಶ ಕಾಮವಿಷವನ್ನು ಹೋಗಲಾಡಿಸುತ್ತದೆ ಎಂಬ ವಿಶ್ವಾಸ ಅತ್ಯಂತ ಮನನೀಯ. ಇಲ್ಲಿ ರಾಧೆಗೆ ಶ್ರೀಕೃಷ್ಣನ ಮೇಲಿರುವ ಪ್ರಣಯವೇ ಪರಿಪೂರ್ಣ ಭಕ್ತಿ ನಿರ್ಭರವಾಗಿ ಶಾಂತರಸವಾಗಿ ಮಾರ್ಪಟ್ಟಿದೆ. ಇದೂ ಭಾರತೀಯ ಸಂಸ್ಕಾರದ ಔನ್ನತ್ಯಗಳಲ್ಲಿ ಒಂದು.

ಇಂದು ನಾವು, ಚಲಚ್ಚಿತ್ರಗಳಲ್ಲಿ ಹಾಗೂ ದೂರದರ್ಶನಗಳಲ್ಲಿ ಅಶ್ಲೀಲ ಅರೆನಗ್ನ ಪ್ರದರ್ಶನಗಳನ್ನು ನೋಡಬೇಕಾದ ದೌರ್ಭಾಗ್ಯದವರು. ಹುಲ್ಲುಗಾವಲಲ್ಲಿ ತರುಣಿ ತರುಣರು ಅನ್ಯೋನ್ಯ ಹೊರಳಾಡುತ್ತಾರೆ. ಇದನ್ನು ಮನೆಮನೆಗಳಲ್ಲೂ ಎಳೆ ಹರೆಯದ ಮಕ್ಕಳೂ ನೋಡುತ್ತಿರುತ್ತಾರೆ; ನೋಡುತ್ತಾ ಅವರು ಯಾವ ನೀತಿಪಾಠ ಕಲಿತುಕೊಳ್ಳಬಹುದೆಂದು ಊಹಿಸಬಹುದಾಗಿದೆ. ಗೃಹಣಿಯರಿಗೂ ಗೃಹಸ್ಥರೂ ಎಲ್ಲೆಲ್ಲೂ ಇದ್ದಾರೆ; ಅಜ್ಜಿ, ಅಜ್ಜ, ತಾಯಿ, ತಂದೆ, ಅತ್ತೆ, ಮಾವ-ಹೀಗೆ ನಮ್ಮ ಹಿರಿಯರೂ ಪರಸ್ಪರ ಪ್ರೀತಿಯಿಂದಲೇ ಬದುಕಿದ್ದಾರೆ. ಮದುವೆಯಾದವರಿಗೆ

ಪತ್ನಿಯರೂ ಇದ್ದಾರೆ. ಇವರೆಲ್ಲರ ಹೃದಯ ಹೃದಯಗಳಲ್ಲೂ ಅನ್ಯೋನ್ಯ ಧಾರಾಳ ಪ್ರೀತಿ ಇದ್ದೇ ಇರುತ್ತದೆ. ಆದರೆ ಆ ಪ್ರೀತಿಯನ್ನು, ಯಾರೂ ಈ ರೀತಿ ಸಾರ್ವಜನಿಕವಾಗಿ, ಹುಲ್ಲುಗಾವಲಲ್ಲಿ ಹೊರಳಾಡಿ ಪ್ರದರ್ಶನ ಮಾಡುವುದಿಲ್ಲ. ಭಾರತೀಯ ಸಂಸ್ಕೃತಿಯಲ್ಲಿ ಪ್ರೇಮ ಪ್ರಣಯಗಳು ನಿರ್ಮಲಾಂತಃಕರಣದ ಅಂತರಂಗಕ್ರಿಯೆ ಹೊರತು ಬಹಿರಂಗ ಪ್ರದರ್ಶನವಲ್ಲ. ವಿವಾಹಪೂರ್ವದಲ್ಲಿ ವಧೂವರರು ಮಾಸ ಪರ್ಯಂತ ವರ್ಷ ಪರ್ಯಂತವೂ ಜತೆಯಲ್ಲಿ ಜೀವಿಸುವ ವಿಲಾಸವಿಭ್ರಮಗಳು ಪಾಶ್ಚಾತ್ಯ ದೇಶಗಳಲ್ಲಿ ಇದ್ದರೂ ಇರಬಹುದು; ಹಾಗೆ ದೀರ್ಘಕಾಲಾವಧಿ ಇದ್ದು ಆಮೇಲೆ ಅವರು ವಿವಾಹವಾಗದೆ ಇರುವುದೂ ಇದೆ ಎಂದೂ ತಿಳಿದುಬರುತ್ತದೆ. ಇದು ಭಾರತೀಯ ಸಂಪ್ರದಾಯವಲ್ಲ. ಸಂಸ್ಕಾರವೂ ಅಲ್ಲ; ನಮ್ಮಲ್ಲಿ ಹೆಣ್ಣು ಗಂಡು ದಂಪತಿಗಳ ಪ್ರೀತಿ–ವಿವಾಹಾನಂತರ; ಅದೂ ಅಂತರಂಗಕ್ರಿಯೆಯಾಗಿ ಪವಿತ್ರವಾದುದು. ಹಾಗಿರುವಾಗ, ನಾಟಕ, ಚಲನಚಿತ್ರಗಳ ಕಥೆಗಳಲ್ಲಿ ತೋರಿಸುವ ಘಟನೆಗಳು ಜೀವನದ ಪ್ರತಿಬಿಂಬವಾಗಿರಬೇಕೆನ್ನುವಾಗ, ಈ ರೀತಿಯ ಇಂದಿನ ಅಶ್ಲೀಲ ಪ್ರದರ್ಶನಗಳು ನಮ್ಮ ದೇಶದ ದೃಷ್ಟಿಯಲ್ಲಿ ಅಸಂಸ್ಕೃತಿಯಾಗಿದೆ. ಆದ್ದರಿಂದಲೇ ಅನುಸರಣೀಯವಲ್ಲದ್ದೂ ಆಗಿದೆ.

ಭಾರತೀಯ ಕಾವ್ಯಗಳಲ್ಲಿಯೂ ಪವಿತ್ರ ಪ್ರೇಮವೇ ಭವ್ಯವಾಗಿ ಚಿತ್ರಿತವಾಗಿದೆ. ಕಾಳಿದಾಸನು ಶೃಂಗಾರ ಕವಿಯೆಂದೇ ಪ್ರಸಿದ್ಧನು. ಆತನ ವಿಶ್ವವಿಖ್ಯಾತ ನಾಟಕವಾದ 'ಅಭಿಜ್ಞಾನ ಶಾಕುಂತಲ'ದಲ್ಲಿ ಶಕುಂತಲ ದುಷ್ಯಂತರ ಪ್ರಣಯ ಪ್ರಸಂಗದ ವರ್ಣನೆಯಿದೆ. ದುಷ್ಯಂತನು ತನ್ನ ಮಿತ್ರನೊಡನೆ ತಾನು ಪ್ರೀತಿಸಿದ ಆಶ್ರಮವಾಸಿನಿ ಕನ್ಯೆ ಶಕುಂತಲೆಯ ರೂಪವನ್ನು ವರ್ಣಿಸುತ್ತಾನೆ:

ಅನಾಘ್ರಾತಂ ಪುಷ್ಪಂ ಕಿಸಲಯಮಲೂನಂ ಕರರುಹೈಃ
ಅನಾವಿದ್ಧಂ ರತ್ನಂ ಮಧುನವ ಮನಾಸ್ವಾದಿತ ರಸಂ
ಅಖಂಡಂ ಪುಣ್ಯಾನಾಂ ಫಲಮಪಿ ಚ ತದ್ರೂಪಮನಘಂ
ನ ಜಾನೇ ಭೋಕ್ತಾರಂ ಕಮಿಹನಮು ಪಾಸ್ಥಾನ್ಯಪಿ ವಿಧಿಃ

'ಶಕುಂತಲೆ ಇದುವರೆಗೂ ಯಾರೂ ಮೂಸದ ತೊಡದ ರತ್ನ, ಇದುವರೆಗೆ ಯಾರೂ ಸವಿ ನೋಡದ ಹೊಸ ಜೇನು, ಅಖಂಡವಾದ ಪುಣ್ಯದ ಫಲವಾದ ಅವಳ ರೂಪ ನಿಷ್ಪಾಪವಾದುದು'– ಹೀಗೆ ವಿಶ್ವವಿಖ್ಯಾತ ಶೃಂಗಾರ ಕವಿಯ ಅಸದೃಶ ಸೌಂದರ್ಯ ವರ್ಣನೆಯಿದು. ಇದು ಭಾರತೀಯ ಸೌಂದರ್ಯ ವರ್ಣನೆಯ ಅತ್ಯುನ್ನತ ಶಿಲ್ಪ. ಹೂ, ಚಿಗುರು, ರತ್ನ, ಜೇನು ಇತ್ಯಾದಿ ವಿವಿಧ ರೀತಿಯಿಂದ ತನ್ನ ಪತ್ನಿಯ ಪವಿತ್ರ ಗರ್ಭದಲ್ಲಿ ಭರತ ಖಂಡಕ್ಕೆ ಕೀರ್ತಿ ತಂದ ಭರತ ಚಕ್ರವರ್ತಿ ದುಷ್ಯಂತನ ಪುತ್ರನಾಗಿ ಜನಿಸಿ ಸ್ಮರಿಸಬೇಕಾಗಿದೆ. ಭಾರತೀಯ ಸಾಹಿತ್ಯದ ಸಮುನ್ನತಿ

ಇದಾಗಿದೆ.

ಪ್ರೇಮ ಪ್ರಣಯ ವಿರಹ ಶೃಂಗಾರಗಳನ್ನು ಭಕ್ತಿ ನಿರ್ಭರವಾಗಿ ಹರಡಿದವರು ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅತಿ ವಿರಳರು. ಅಂತಹ ವಿರಳರ ಪಂಕ್ತಿಯಲ್ಲಿ ರಾಷ್ಟ್ರಕವಿ ಗೋವಿಂದ ಪೈ ವಿರಾಜಿಸುತ್ತಾರೆ. ಅವರು ರಚಿಸಿದ 'ನಂದಾದೀಪ' ಕಾವ್ಯಮಾಲೆ ಇದಕ್ಕೆ ಸತ್ಯ ಸಾಕ್ಷಿ. ಪೈಗಳ ಪತ್ನಿ ಕೃಷ್ಣೆ; ಅವರ ಕುಲದೇವತೆ ಕೃಷ್ಣ; 'ತನ್ನ ಕೃಷ್ಣೆಗೋ, ಕೃಷ್ಣನಿಗೋ, ಕೃಷ್ಣಾರ್ಪಿತ'ವೆಂದು 'ನಂದಾದೀಪ'ವನ್ನು ಅವರು ಸಮರ್ಪಿಸಿದರು. ತಾರುಣ್ಯದಲ್ಲಿಯೇ ಅವರಿಗೆ ಪತ್ನಿಯ ನಿಧನದಿಂದ ಅಗಲುವಿಕೆ ಆಯಿತು. ಯಾವಾಗಲೂ ಮನೆಯಲ್ಲಿ ಉರಿಯುತ್ತಿರುವ ದೀಪಕ್ಕೆ 'ನಂದಾದೀಪ'ವೆನ್ನುತ್ತಾರೆ; ಪತ್ನಿಯ ವಿರಹದ ಈ ಚಿಂತೆಯನ್ನು ಕಾವ್ಯರೂಪದಲ್ಲಿ ಹಾಡುತ್ತಾ, ಆ ಹಾಡಿನಲ್ಲಿ ತನ್ನ ಕುಲದೇವತೆ ಶ್ರೀಕೃಷ್ಣನ ಭಕ್ತಿಯನ್ನು ಹೇಳುತ್ತಾ ಪೈಗಳು ಈ ಅಮರಕವನಗಳನ್ನು ಜೀವಿಸಿರುವವರೆಗೂ ಬರೆಯುತ್ತಾ ಬಂದರು. ಅವರು ಕೀರ್ತಿಶೇಷರಾದ ನಂತರ ಮಾತ್ರ 'ನಂದಾದೀಪ' ಪುಸ್ತಕರೂಪದಲ್ಲಿ ಪ್ರಕಟವಾಯಿತು. ಇಂತಹ ಪ್ರಯೋಗ ಕನ್ನಡದಲ್ಲಿ ತೀರಾ ಅಪೂರ್ವ, ಪತ್ನೀವಿಯೋಗದ ಯಾತನೆ ಈ ಕವನಗಳಲ್ಲಿ ಪರಮಾತ್ಮನೊಡನೆ ಆತ್ಮನಿವೇದನೆಯಾಗಿದೆ.

"ಸ್ನೇಹದೆದೆ ಬಟ್ಟಲಲಿ ಬೇಯೆ
ನಂದಾದೀಪಮಾದುದಿಂದೆನ್ನ ಮನಸು;
ಬಾಳುವೆಯ ಹಾಳುಗುಡಿಗಿದನಿಂದು ತಂದು
ನಿನ್ನನರಸುವೆನಲ್ಲಿ-ನೀ ಬಾಷ್ಪಬಂಧು."

"ಸುಮದ ಸುರಭಿಯಂತೆ ಸುಳಿವೆ,
ತಂತಿಗಿಂಚರದಂತಿಳಿವೆ,
ದೃಷ್ಟಿಯೊಲಂಬಕದಿ ಹೊಳೆವೆ-ಹೊರಗೊಳಗೆನ್ನ;
ಸುರಭಿಯ ಸುಮ ಮೂಸದಲ್ಲ,
ಸ್ವರವ ಸರಿಗೆ ಕೇಳದಲ್ಲ,
ಕಂಗೆ ದೃಷ್ಟಿ ಕಾಣದಲ್ಲ-ಬಲ್ಲೆನೆ ನಿನ್ನ!"

"ಚಂದ್ರಚಂದ್ರಿಕೆಯಂತೆ ನಿನ್ನಿಂದಭಿನ್ನಂ,
ನಾನೆಂದು ಬಲ್ಲೆನೊಡೆಯಾ,
ಅಂದಲ್ಲಿ, ಇಂದಿಲ್ಲ, ಮುಂದೆಲ್ಲಿಗೆನ್ನಂ
ಕಾಲನನ್ಯಾನ್ಯಮೆಡೆಯಾ"

"ಕಣ್ಣ ಕೊಟ್ಟಿಹೆ, ಮನವ ಕೊಟ್ಟಿಹೆ

ಮನದೊಳಿಚ್ಛೆಯ ಬಿಟ್ಟೆ ಬಿಟ್ಟಿಹೆ
ಬಾಳ್ವೆಯುದ್ಧದ ಹಸುರಿಗಟ್ಟಿಹೆ
ನೋಡಿ ಹಸಿಯಲೊ- ಮೇಯಲೊ?
ಚೆಲುವ ಕಾಣುವ ಕಣ್ಣ ತಪ್ಪೊ,
ಕಂಡು ಬಯಸುವ ಮನದ ತಪ್ಪೊ,
ಬಯಸಿ ನೆರೆಕೊಳುವೊಡಲ ತಪ್ಪೊ,
ಒಡಲ ಸೃಜಿಸಿದ ನಿನ್ನ ತಪ್ಪೊ,
ಹುಟ್ಟಿಸೊಡೆಯಾ ನನ್ನನೆಂಮ-
ಬೇಡಿದೆನೆ ನೀ ಸೃಜಿಸುವಂದು,
ಸಾರಿ ಹೇಳುವೆನೊಡೆಯ ಕೇಳ
ತಿದ್ದದೊಡೆ ನೀನೆನ್ನ ಬಾಳ
ಆರ ದೂರುವವೆನ್ನ ಬಾಳ - ಹಾಳುಗೆಡವಕಟ ನಿನ್ನನೆ ವಿನಾ ?"

ಈ ಧಾಟಿಯಲ್ಲಿ, ಪತ್ನೀವಿರಹದ ವೇದನೆಯನ್ನು ಪರಮಾತ್ಮನಲ್ಲಿ ಆತ್ಮನಿವೇದನೆ ಆಗಿ ಹಾಡಿದ 'ನಂದಾದೀಪದ'ದ ಎಲ್ಲಾ ಕವನಗಳೂ ಆಳವಾದ ಅರ್ಥಪೂರ್ಣ ಧ್ವನಿಯನ್ನು ಓದುಗರ ಹೃದಯದಲ್ಲಿ ಮಾರ್ದನಿಸುತ್ತವೆ. ಆದರೆ ಈ ಪದ್ಯಗಳ ಆಳವನ್ನು ಅರಿತು ಸವಿಯಲು, ವಿಶೇಷ ವ್ಯಾಸಂಗ ಬೇಕಾಗುತ್ತದೆ; ಅಂತಹ ಮೇಧಾವಿ ವ್ಯಾಸಂಗಶೀಲರು ಇವನ್ನು ಭಾಷಾಂತರಿಸಿದ್ದಲ್ಲಿ, ಇಂಗ್ಲಿಷ್ ಭಾಷೆಗೆ ಪದ್ಯ ರೂಪದಲ್ಲಿ ಅನುವಾದಿಸಿ ಕೊಟ್ಟಲ್ಲಿ, ರವೀಂದ್ರರ 'ಗೀತಾಂಜಲಿ'ಯಂತೆ, ಗೋವಿಂದ ಪೈಗಳ 'ನಂದಾದೀಪ'ವೂ ವಿಶ್ವಮಾನ್ಯಕೃತಿಯಾದೀತು. ನಮ್ಮ ನಾಡಿನ, ಕನ್ನಡ ಸಾಹಿತ್ಯದ ಉತ್ಕೃಷ್ಟ ಸಂಸ್ಕೃತಿಯ ಪ್ರಚಾರಕ್ಕೆ ಯೋಗ್ಯ ಸಾಧನವೂ ಆದೀತು ಎಂಬುದರಲ್ಲಿ ಸಂಶಯವಿಲ್ಲ.

೭

'ನಿರಂಕುಶಾಃ ಕವಯಃ' ಎಂಬ ಸೂಕ್ತಿಯಿದೆ; ಕವಿಗೆ ಕಡಿವಾಣ ಸಲ್ಲದು ಎಂದು ಅದರ ಅರ್ಥ; ಕವಿಯಾದವನಲ್ಲಿ ಸರ್ವಸ್ವತಂತ್ರ ಭವಿಷ್ಯವನ್ನು ತನ್ನ ದೂರದೃಷ್ಟಿಯಿಂದ ಕಾಣಬಲ್ಲ ದ್ರಷ್ಟಾರ ಎಂಬರ್ಥದಲ್ಲಿ ಈಶೋಪನಿಷತ್ತಿನಲ್ಲಿ ಕವಿ ಎಂಬ ಪದ ಉಪಯೋಗವಾಗಿದೆ. ಕನ್ನಡ ಸಾಹಿತ್ಯದಲ್ಲಿಯೂ ಪ್ರಾಚೀನ ಕವಿಗಳು ಹಲವರು ಈ ಸ್ವಾತಂತ್ರ್ಯ ವಹಿಸಿದ್ದಾರೆ. ಆದಿಕವಿ ಪಂಪನು, 'ವಿಕ್ರಮಾರ್ಜುನವಿಜಯ'ಮಹಾಕಾವ್ಯದಲ್ಲಿ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು

ಅರ್ಜುನನಿಗೆ ಹೋಲಿಸಿ, ಅರ್ಜುನನನ್ನು ಪ್ರಧಾನ ಕಥಾನಾಯಕನನ್ನಾಗಿ ಮಾಡಿದವನು.

'ವ್ಯಾಸಮುನೀಂದ್ರರುಂದ್ರವಚನಾಮೃತವಾರ್ಧಿಯನೀಸುವೆ'

ಎಂದು ವ್ಯಾಸಭಾರತದ ಸವಿ ಸವಿದು ಕಾವ್ಯರಚನೆ ಮಾಡಿದರೂ ವ್ಯಾಸಭಾರತದಲ್ಲಿ ಪ್ರಮುಖ ನಾಯಕ ಪಾತ್ರವೆನ್ನಬಹುದಾದ ಯುಧಿಷ್ಠಿರನನ್ನೋ ಇಡೀ ಭಾರತದ ಕಥೆಗೆ, ಜಯಕ್ಕೆ ಕಾರಣನಾದ ಶ್ರೀಕೃಷ್ಣನನ್ನೋ ಕಥಾನಾಯಕನಾಗಿ ಮಾಡದೆ ಅರ್ಜುನನಿಗೆ ಆ ಪಟ್ಟ ನೀಡಿದ್ದಾನೆ. ಆದರೆ 'ವಿಕ್ರಮಾರ್ಜುನ ವಿಜಯ'ವನ್ನು ಬರೆದು ಅದರಲ್ಲಿ ಕೊನೆಗೆ ಪ್ರಶಸ್ತಿಯನ್ನು ಕರ್ಣನಿಗೆ ಅರ್ಪಿಸಿದ್ದು ಮನನೀಯ :

"ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ-ಕರ್ಣನೊಳಾರ್ದೊರೆ?.....
ಕರ್ಣನಪಡೆವಾತಿನೊಳ್ಪುದಿದು ಕರ್ಣರಸಾಯನಮಲ್ತೆ ಭಾರತಂ"

ಇಂತು ಹಲವರು ಕುಲಹೀನನೆಂದು ಜರೆದ ರಾಧೇಯನನ್ನು ಕುಲಶೀಲಸಂಪನ್ನನಾಗಿ ಮಾಡಿದ್ದಾನೆ.

ಪಂಪನನ್ನು ಅನುಸರಿಸಿ 'ಪಂಪರಾಮಾಯಣ'ವನ್ನು ಬರೆದ ಅಭಿನವಪಂಪನೆಂದೇ ಖ್ಯಾತನಾದ ನಾಗಚಂದ್ರಕವಿ, ಮೂಲ ರಾಮಾಯಣದಲ್ಲಿ, ರಾವಣನನ್ನು ವಧಿಸುವುದು ಶ್ರೀರಾಮನಾದರೂ, ಲಕ್ಷ್ಮಣನಿಂದ ರಾವಣವಧೆಯಾದಂತೆ ಹೇಳಿರುವನು. ಆಜನ್ಮ ಬ್ರಹ್ಮಚಾರಿಯಾದ ನಾರದಮಹರ್ಷಿಯನ್ನು ಸೀತಾಸ್ವಯಂವರಕಾಲದ ಕನ್ಯಾರ್ಥಿಗಳಲ್ಲಿ ಒಬ್ಬನನ್ನಾಗಿ ಚಿತ್ರಿಸಿದ್ದಾನೆ. ಮಹಾಭಾರತದಲ್ಲಿಯೂ, ಪದ್ಮಪುರಾಣದಲ್ಲಿಯೂ ಇರುವ ಮೂಲ ಕಥೆಯನ್ನು ಅಭಿಜ್ಞಾನಶಾಕುಂತಲದಲ್ಲಿ ಕಾಳಿದಾಸನು ವ್ಯತ್ಯಾಸ ಮಾಡಿದ್ದಾನೆ. ತಾನು ಪ್ರೇಮಿಸಿ ಗರ್ಭವತಿಯಾದ ಶಕುಂತಲೆಯನ್ನು, ದುಷ್ಯಂತ ಮಹಾರಾಜನು ಮರೆತದ್ದು ಲೋಕಾಪವಾದಭೀತಿಯಿಂದ ಎಂಬಂತೆ, ಮಹಾಭಾರತ-ಪದ್ಮಪುರಾಣಗಳಲ್ಲಿ ಇದ್ದರೂ, ಮರೆತುಹೋದುದಕ್ಕೆ ದೂರ್ವಾಸ ಶಾಪವ ಕಾರಣವನ್ನಿತ್ತ ಕಾಳಿದಾಸನು ದುಷ್ಯಂತನಲ್ಲಿ ಉಂಟಾದ ವೇದನೆಯನ್ನು ಆಮೇಲೆ ಶಕುಂತಲೆಯನ್ನೂ ತನ್ನ ಪುತ್ರನನ್ನೂ ಋಷ್ಯಾಶ್ರಮದಲ್ಲಿ ಕಂಡಾಗ ಆತನಲ್ಲಿ ಆದ ಪಾಶ್ಚಾತ್ತಾಪವನ್ನು ಕವಿ ಅತೀವ ಹೃದಯವಿದ್ರಾವಕವಾಗಿ ವರ್ಣಿಸಿ, ಮೂಲಕಥೆಯಿಂದ ಕವಿ ಮಾಡಿದ ವ್ಯತ್ಯಾಸವನ್ನು ರಸಿಕರು ಮೆಚ್ಚುವಂತೆ ಚಿತ್ರಿಸಿರುವನು.

ಆಧುನಿಕ ಕವಿವರೇಣ್ಯರು ಕೆಲವರು ಜನತೆಯ ಸಂಸ್ಕೃತಿಯ ಉತ್ತಮಿಕೆಯ ದೃಷ್ಟಿಯನ್ನಿಟ್ಟು ಇಂತಹ ಬದಲಾವಣೆಗಳನ್ನು ಮಾಡಿದ್ದನ್ನು ಮೆಚ್ಚಬೇಕಾಗಿರುವುದು. ಮಹಾಕವಿ ಕುವೆಂಪು 'ಶೂದ್ರತಪಸ್ವಿ' ನಾಟಕದಲ್ಲಿ ಶಂಬುಕನ ಕಥೆಯಲ್ಲಿ ಮಾಡಿದ ಬದಲಾವಣೆಯು ಗಮನಾರ್ಹ. ಅವರ 'ಶ್ರೀರಾಮಾಯಣದರ್ಶನಂ' ಮಹಾಕಾವ್ಯದಲ್ಲಿಯೂ ಬರುವ ಕೆಲವೊಂದು ಕಥಾಪಾತ್ರಗಳ ಚಿತ್ರಣ, ಕಾಳಿದಾಸ,

ಪಂಪಾದಿ ಕವಿಶ್ರೇಷ್ಠರಿಗಿದ್ದ ನಿರಂಕುಶತೆ ಕನ್ನಡದ ಆಧುನಿಕ ಮಹಾಕವಿಗೂ ಇದೆಯೆಂಬ ಮೆಚ್ಚುಗೆಗೆ ಪಾತ್ರವಾಗಿದೆ. ಪ್ರಜಾಪ್ರಭುತ್ವದಲ್ಲಿ ಭಾಷಣ-ಲೇಖನಗಳಿಗೆ-ಪ್ರಚಾರಕ್ಕೆ-ನಾಗರಿಕರೆಲ್ಲರಿಗೂ ಇರುವ ಸಮಾನ ಸ್ವಾತಂತ್ರ್ಯದ ಹಕ್ಕಿನ ಹಾಗೆ ಸಾಹಿತ್ಯದಲ್ಲಿಯೂ, ಕಥಾಪಾತ್ರಗಳ ಸೃಷ್ಟಿಯಲ್ಲಿಯೂ ಎಲ್ಲಾ ಕವಿಗಳಿಗೂ ಇರುವ ನಿರಂಕುಶತೆಯನ್ನು ಪ್ರಶ್ನಿಸುವುದು ಸರಿಯಲ್ಲ. ದೃಷ್ಟಿಯನ್ನು ವಿಶಾಲಗೊಳಿಸಿ ಇಂತಹ ಕವಿಶೈಲಿಯನ್ನು ಮೆಚ್ಚಬಲ್ಲೆವಾದರೆ ಸಾಹಿತ್ಯಪ್ರಪಂಚ ಇನ್ನಷ್ಟು ವಿಸ್ತರಿಸೀತು. ಸಮಾಜದ ಪ್ರಗತಿಗೆ ಸಹಾಯಕವಾದೀತು. ಆ ಮೂಲಕ, ಲೋಕದ, ಸಮಾಜದ ಪ್ರಗತಿಗೆ ಸಹಾಯಕವಾಗಿ ಸಂಸ್ಕೃತಿಯ ಸಂವರ್ಧನೆ ಆದೀತು. ಮಹಾಕವಿ ಕುವೆಂಪು ಕೂಡ ಭಾರತೀಯ ಸಾಹಿತ್ಯಪರಂಪರೆಯ ಸನ್ಮಾರ್ಗದಲ್ಲಿ ಮುನ್ನಡೆದಿದ್ದಾರೆ ಎಂಬುದು ಪ್ರಶಂಸನೀಯ.

ಈ ಸಂದರ್ಭದಲ್ಲಿ ಪ್ರಗತಿಶೀಲ ವಿಚಾರಧಾರೆ ಸಾಹಿತ್ಯದಲ್ಲಿ ಮಾಡಿದ ಸಾಮಾಜಿಕ, ಸಾಂಸ್ಕೃತಿಕ, ಸುಧಾರಣೆಗಳನ್ನು ಗುರುತಿಸಬೇಕಾಗಿದೆ. ಲೋಕದಲ್ಲಿ ಸರ್ವತ್ರ ಹಲವು ರೀತಿಯ ಆರ್ಥಿಕ, ಸಾಮಾಜಿಕ, ರಾಜಕೀಯ ವಿಷಮತೆಗಳು, ಧನಿಕ ದರಿದ್ರ ಭೇದಗಳು, ಸ್ತ್ರೀ-ಪುರುಷ ಅಸಮಾನತೆಗಳು, ಉಚ್ಚ-ನೀಚ ಭೇದಭಾವನೆಗಳು. ದಾಸ್ಯ-ಸ್ವಾತಂತ್ರ್ಯ ವಿಚಾರಧಾರೆಗಳು ಕಂಡುಬರುತ್ತವೆ. ಅನಾದಿಕಾಲದಿಂದ ಇಲ್ಲಿನವರೆಗೂ ಇವುಗಳ ಕುರಿತು ಸರಿಯಾದ, ನ್ಯಾಯಸಮ್ಮತವಾದ ಯೋಗ್ಯ ಸುಧಾರಣೆಗಳು ಆಗಲೇಬೇಕೆಂದು ಮೇಧಾವಿಗಳು ಹೇಳುತ್ತಾ ಬಂದಿದ್ದಾರೆ. ವಿಷಮತೆಗಳನ್ನು ಹೋಗಲಾಡಿಸಿ ಸಮತೆಯನ್ನು ಸಾಧಿಸಲು ಹಲವರು ಸರ್ವಪ್ರಯತ್ನ ಮಾಡಿದ್ದಾರೆ; ಹೋರಾಡಿದ್ದಾರೆ, ಇಂತಹ ಜಾಗೃತಿಗೆ ಪ್ರಗತಿ ಶೀಲ ಆಂದೋಲನವೆಂದು ಹೆಸರಾಯಿತು. ಕನ್ನಡ ಸಾಹಿತಿಗಳೂ ಅದರಲ್ಲಿ ಪ್ರಮುಖ ಪಾತ್ರವಹಿಸಿದರು. ಮಹಾಕವಿ ಕುವೆಂಪು 'ಪಾಂಚಜನ್ಯ' ಮೊಳಗಿಸಿದರು, ಅ.ನ.ಕೃ. ಕಟ್ಟೀಮನಿ, ನಿರಂಜನರೂ ದನಿಗೂಡಿಸಿದರು.

'ಮಸೆಯಲಿ ಕ್ರಾಂತಿಯ ಕ್ರೂರಕಠಾರಂ'

-ಎಂದು ರಾಜರತ್ನಂ ಕರೆಯಿತ್ತರು.

'ಎನ್ನೆದೆಯ ಬಿಸಿರಕ್ತವನೆ ಕುದಿಸಿ ಮಸಿ ಮಾಡಿ'

ನಾಂ ಬರೆಯಬಲ್ಲೆನೇ ನಾನು ಕವಿಯು'

'ವಿಷಮ ವಿಷಮಯ ಸಮಾಜದ ಬೇರ ಕಿತ್ತೊಗೆಯೆ

ಕೊಡಲಿ ಲೇಖನಿ ಬೇಕು-ರಕ್ತವದಕೆ ಮಸಿ,

-ಇಂತು ನಾನೂ ದನಿಯೇರಿಸಿದೆ. ಈ ಸಾತ್ವಿಕರೋಷ ಅಂದಿನ ಆ ದಿನಗಳಲ್ಲಿ ನಮ್ಮ ಸಾಹಿತ್ಯದಲ್ಲಿಯೂ ಸಾಕಷ್ಟು ಸತ್ಪರಿಣಾಮ ಬೀರಿದೆ. ಪ್ರಗತಿಶೀಲ ವಿಚಾರಧಾರೆಯಲ್ಲಿ ಹಲವು, ಕಥೆ ಕಾದಂಬರಿ. ಕವನ, ಲೇಖನಗಳು ಆ ದಿನಗಳಲ್ಲಿ ರಚಿತವಾಗಿದ್ದು ಇಂದಿಗೂ ಜನತೆಗೆ ಸ್ಫೂರ್ತಿ ನೀಡಿ ಮುನ್ನಡೆಸುವಂತಿವೆ. ನಮ್ಮಲ್ಲಿ ಒಳ್ಳೆಯ ಸಂಸ್ಕೃತಿಯ

ಸತ್ಪರಿಣಾಮವನ್ನು ಆ ಆಂದೋಲನ ಬೀರಿದೆ ಎಂಬುದು ಮನನೀಯ.

ಸ್ವಾತಂತ್ರ್ಯ ಸಂಗ್ರಾಮದ ದಿನಗಳಲ್ಲಿಯೇ ಅಸ್ಪೃಶ್ಯತಾ ನಿವಾರಣೆ, ಹರಿಜನೋದ್ಧಾರ ಮೊದಲಾದ ರಚನಾತ್ಮಕ ಕಾರ್ಯಕ್ರಮಗಳನ್ನು ರಾಷ್ಟ್ರದ ಮುಂದಿರಿಸಿದ ಗಾಂಧೀಜಿಯಿಂದ ಸಮಾಜದಲ್ಲಿ ಕೆಳವರ್ಗದಲ್ಲಿರುವವರೆಂದು ಭಾವಿಸುವ ದಲಿತ ಸಮಾಜಕ್ಕೆ ಹೊಸ ಜಾಗೃತಿ ಉಂಟಾಯಿತು. ಡಾ। ಅಂಬೇಡ್ಕರರಂತಹ ಮುಖಂಡರಿಂದ ಆ ಜಾಗೃತಿ ಮತ್ತಷ್ಟು ಪ್ರಬಲಗೊಂಡಿತು. ಚತುರ್ವರ್ಣಗಳನ್ನು ಉಚ್ಚನೀಚತೆಯ ವಿಭಾಗ ಮಾಡಿದ ಸಮಾಜದ ಮುಖಂಡರೆಂಬ ಸ್ವಾರ್ಥಿಗಳು, ದಲಿತರನ್ನು ಪಂಚಮವರ್ಣದವರೆಂದೂ ಅತ್ಯಂತ ಕೆಳವರ್ಗವಾಗಿ ಮಾಡಿ ಇನ್ನಷ್ಟು ಅಪ್ರಾಗತಿಕ ಧೋರಣೆ ತೋರಿಸಿದುದರ ಪ್ರತಿಕ್ರಿಯೆಯೂ ಕಾರಣವಾಗಿ ದಲಿತಾಂದೋಲನ ಪ್ರಬಲಗೊಂಡಿತು. ಮನುಷ್ಯ ಮನುಷ್ಯರನ್ನು ಅವರ ಹುಟ್ಟಿನ ನಿಮಿತ್ತ ತಾರತಮ್ಯದಿಂದ ನೋಡಬಾರದೆಂಬೀ ಮೂಲ ಸೂತ್ರವೇ ಈ ಆಂದೋಲನದ ಹಿನ್ನೆಲೆ. ತತ್ಫಲವಾಗಿ ದಲಿತ ಸಾಹಿತ್ಯವೂ ಸೃಷ್ಟಿಯಾಯಿತು. ಸಾಹಿತ್ಯವು ಸಮಾಜದ ಪ್ರತಿಬಿಂಬವೆನ್ನುವಾಗ ಈ ಸಾಹಿತ್ಯಾಂದೋಲನವೂ ಸಹಜವಾದುದೇ. ಸಮಾನತೆಯ, ಪ್ರಗತಿಯ ದೃಷ್ಟಿಯಲ್ಲಿ ಈ ಚಳವಳಿ ಪರಿಣಾಮಕಾರಿಯೂ ಆಗಿದೆ. ವಿದ್ಯೆ, ಉದ್ಯೋಗ, ಸ್ಥಾನಮಾನಗಳಲ್ಲಿ ದಲಿತರೆಂಬವರೂ ಸಮಾನ ಸ್ಥಾನ ಪಡೆಯಲು ಪ್ರಯತ್ನಿಸಿದ್ದೂ ಸಂಪೂರ್ಣ ನ್ಯಾಯವೇ; ಇಂತು ಸಮಾನತೆ, ಸ್ನೇಹ, ಸೌಹಾರ್ದ, ಸೌಕರ್ಯಗಳಿಂದಾಗಿ ಹಾತೊರೆದ ದಲಿತರ ಮನಸ್ಸನ್ನು - ವೇದನೆಯನ್ನು ಎಲ್ಲರೂ ಅರ್ಥಮಾಡಿಕೊಳ್ಳಬೇಕು. ಅರ್ಥೈಸಿಕೊಂಡು ಯೋಗ್ಯವಾದ ಪರಿಹಾರಕ್ಕೆ ಸರ್ವಪ್ರಯತ್ನಗಳನ್ನೂ ಮಾಡತಕ್ಕದ್ದಾಗಿದೆ. ಅಸ್ಪೃಶ್ಯರೆಂದು, ದಲಿತರೆಂದು ಕೆಳತಳ್ಳಲ್ಪಟ್ಟ ಈ ಸಮಾಜ ನಾಡಿನ ಎಷ್ಟೋ ಕಡೆಗಳಲ್ಲಿ ರಾಜ್ಯವಾಳಿದ ಚರಿತ್ರೆಯಿದೆ. ಕೋಟೆಕೊತ್ತಲಗಳನ್ನು ಕಟ್ಟಿಸಿದ ಇತಿಹಾಸವಿದೆ. ಮೂಲದವರೂ ಎಂಬ ಹೆಸರು ಈ ಜನಾಂಗಕ್ಕೆ ಕೆಲವು ಕಡೆಗಳಲ್ಲಿ ರೂಢಿಯಲ್ಲಿದೆ. ಅದರ ಸರಿಯಾದ ಅರ್ಥವೆಂದರೆ ಅವರೇ ಈ ನಾಡಿನಲ್ಲಿದ್ದ ಮೂಲ ಮೊದಲಿನ ಜನಾಂಗವೆಂದು. ಮೂಲದವರಿಗೆ ಹಬ್ಬಹರಿದಿನಗಳಲ್ಲಿ ವಿಶೇಷ ಉಡುಗೊರೆ ದಾನ-ಧರ್ಮಾದಿಗಳನ್ನು ನೀಡುತ್ತಿದ್ದುದೂ ಇತ್ತು. ಇದರಿಂದೆಲ್ಲಾ ದಲಿತರೆಂದು ಕರೆಯಲ್ಪಡುವ ಈ ಜನಾಂಗ ಹಿಂದೆ ಬಲಿತವರಾಗಿದ್ದರು ಎಂದು ಅರ್ಥಮಡಿಕೊಳ್ಳಬಹುದು. ಇಂದು ಪುನಃ ಆ ಜನಾಂಗ ಜಾಗೃತವಾಗಿದೆ. ಸಮಾಜದ ಮುಖ್ಯವಾಹಿನಿಯಲ್ಲಿ ಅವರೂ ಸರಿಯಾದ ರೀತಿಯಲ್ಲಿ ಸೇರಿಕೊಂಡಿರುವುದು ಯೋಗ್ಯ. ಸ್ವಾತಂತ್ರ್ಯಸಂಗ್ರಾಮ ಸಂದರ್ಭದಲ್ಲಿ ಗಾಂಧೀಜಿ ನೇತೃತ್ವದಲ್ಲಿ ಪ್ರಾರಂಭವಾದ ಈ ಸಾಮಾಜಿಕ ಸರ್ವಸಮತಾಭಾವನೆಯ ಸತ್ಪರಿಣಾಮವೇ, ಸಮಾಜದಲ್ಲಿ ಕೆಳಗಿನ ವರ್ಗದಲ್ಲಿ ಜನಿಸಿದವರೆಂಬ, ಹೆಚ್ಚಿನ ವಿದ್ಯಾಭ್ಯಾಸವೂ ಇಲ್ಲದ ಕಾಮರಾಜ ನಾಡಾರ್ ಅಂಥವರೂ ತಮ್ಮ ಕರ್ತವ್ಯ ವ್ರತನಿಷ್ಠೆಯಿಂದ, ಉತ್ತಮಿಕೆಯ ಸ್ಥಾನಕ್ಕೆ ಏರಿ ಅಖಿಲಭಾರತ ಧುರೀಣತೆಯ

ಗೌರವ ಸ್ಥಾನವನ್ನೂ ಪಡೆದರು; ಮದ್ರಾಸ ರಾಜ್ಯದ ಮುಖ್ಯಮಂತ್ರಿಗಳೂ ಆಗಿ ಕೀರ್ತಿಶಾಲಿಗಳಾದರು. ಇಂತು ಕೆಳಮಟ್ಟದ ಸಮಾಜದವರೆನ್ನುವವರನ್ನು ಮೇಲ್ಮಟ್ಟಕ್ಕೆ ತಂದ ಆಧುನಿಕ ಕಾಲದ ಈ ಕ್ರಾಂತಿಕಾರೀ ಸುಧಾರಣೆ ನಮ್ಮ ರಾಷ್ಟ್ರದ ಉತ್ತಮ ಸಂಸ್ಕೃತಿಯ ಅಂಶವೇ ಆಗಿದೆ.

೮

ಸಾಮಾನ್ಯ ಜನತೆಯನ್ನು ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಸಕಲಕ್ಷೇತ್ರಗಳಲ್ಲಿಯೂ ಮೇಲೆತ್ತುವ ಸತ್ಕಾರ್ಯ ಮಾಡುವುದರೊಂದಿಗೆ ಪ್ರತಿವ್ಯಕ್ತಿಯೂ ಸ್ವಂತಕ್ಕೆ ತೋರಿಸುವ ತ್ಯಾಗಜೀವನ ತುಂಬಾ ಪ್ರಶಂಸಾರ್ಹವಾಗಿದೆ. ಅದು ನಮ್ಮ ಪ್ರಾಚೀನ ಋಷಿಪರಂಪರೆಯ ಆದರ್ಶ ಗುಣಭರಿತವಾದುದು ಹಾಗೂ ಅನುಸರಣೀಯ ವೆನಿಸಿದುದು. ಆಧುನಿಕವಾದ ನಮ್ಮ ರಾಷ್ಟ್ರದ ಚರಿತ್ರೆಯಲ್ಲಿಯೂ ಅಂತಹ ಒಂದು ಉತ್ತಮಾದರ್ಶವನ್ನು ನಾವು ಕಣ್ಣಾರೆ ಕಂಡೆವು. ಸ್ವಾತಂತ್ರ್ಯ ಸಂಗ್ರಾಮದ ಪ್ರಶ್ನಾತೀತ ಮುಖಂಡರಾಗಿದ್ದ ಗಾಂಧೀಜಿ, ಸ್ವತಃ ಬ್ಯಾರಿಸ್ಟರ್ ಪದವೀಧರರೂ ಆಗಿದ್ದು, ಆಡಳಿತದ ಸಕಲ ಸೂತ್ರಗಳನ್ನು ಬಲ್ಲವರಾಗಿದ್ದರೂ ಸ್ವತಂತ್ರ ಭಾರತದ ಪ್ರಧಾನಿಯಾಗ ಬಯಸಿದ್ದರೆ ಅದನ್ನು ಭಾರತ ಮಾತ್ರವಲ್ಲ, ಅಖಿಲ ಜಗತ್ತೇ ಏಕಕಂಠದಿಂದ ಒಪ್ಪುತ್ತಿದ್ದರೂ, ಅವರು ಡಿಲ್ಲಿಯ ಸಿಂಹಾಸನದಲ್ಲಿ ನೆಹರೂ, ಪಟೇಲ್ ಪ್ರಭೃತಿಗಳನ್ನು ಕುಳಿತುಕೊಳ್ಳಿಸಿ,

ತಾವು ಅದೇ ತಮ್ಮ ಸನ್ಯಾಸಿ ವೇಷದಲ್ಲಿ, ಮಲೇರಿಯ ಪೀಡಿತ ಗ್ರಾಮದಲ್ಲಿರುವ ವರ್ಧಾದ ಆಶ್ರಮಕ್ಕೆ ತೆರಳಿದರು. ಮತ್ತೆಲ್ಲಿಯೂ ವಿಶ್ರಾಂತಿ ಬಯಸದೆ, ನವಕಾಳಿ ನರಹತ್ಯೆಯನ್ನು ನಿವಾರಿಸಲು ಪಾದಯಾತ್ರೆ ನಡೆಸಿದರು. ಸ್ವಂತದಲ್ಲಿ, ಇಂತಹ ಅನುಪಮ ತ್ಯಾಗಮಾಡಿ ಉದಾತ್ತ ಆದರ್ಶಜೀವನವನ್ನು ಚರಿತ್ರೆಯಲ್ಲಿಯೇ ಉಲ್ಲೇಖಿಸುವಂತೆ ಮಾಡಿದ್ದಲ್ಲದೆ, ಶಾಸಕನಾಗಿಯೋ, ಮಂತ್ರಿಯಾಗಿಯೋ ರಾಜ್ಯದಲ್ಲೋ, ಕೇಂದ್ರದಲ್ಲೋ ಅಧಿಕಾರ ನಿರ್ವಹಿಸಲು ಎಲ್ಲಾ ವಿಧದಿಂದಲೂ ಅರ್ಹನಾಗಿದ್ದ ತನ್ನ ಪುತ್ರ ದೇವದಾಸ ಗಾಂಧಿಯವರಿಗೂ ಯಾವ ಸ್ಥಾನಮಾನ ಪದವಿ ಅಧಿಕಾರಗಳನ್ನು ನೀಡುವಂತೆ ಮಾಡಲಿಲ್ಲವೆಂಬುದೂ ಉಲ್ಲೇಖನೀಯ. ಇದು ಆಧುನಿಕ ಯುಗ ಅತ್ಯಂತ ಉನ್ನತವಾದ ಒಂದು ತ್ಯಾಗಮಯ ಸಂಸ್ಕಾರವಾಗಿದೆ. ಇಂತಹ ಹಿರಿಯ ಯೋಗ್ಯತೆಗಳಿಂದಲೇ ಗಾಂಧೀಜಿ ಇತಿಹಾಸದಲ್ಲಿ ನಿಜವಾದ ಮಹಾತ್ಮರೆಂದು ಬೆಳಗುತ್ತಾರೆ.

ಇಂದು ರಾಜಕೀಯವೆಂಬುದು ಪಕ್ಷಪಂಗಡಗಳಿಗೆ ಸೇರಿಕೊಳ್ಳುವುದು, ಅಧಿಕಾರ ಪೀಠಾರೋಹಣಕ್ಕೆ ಬೇಕಾದ ಸುವರ್ಣ ಸೋಪಾನದಂತಿದೆ; ಆಸೆ – ಆಮಿಷಗಳಿಗೆ ಅದು ಬೀಡು. ಅಧಿಕಾರಲಾಲಸೆಗೆ ಅಂಟಿಕೊಂಡವನು ಅದರಿಂದ ಮುಕ್ತನಾಗುವುದು ತೀರಾ ಅಪೂರ್ವ. ತನಗೆ ಅಧಿಕಾರ ಪಟ್ಟ ದೊರೆತರೆ ಮಾತ್ರ ಸಾಲದು, ವಂಶ ಪರಂಪರೆಯಿಂದಲೂ ಅದು ಉಳಿಯಬೇಕೆಂದೇ ಹೆಚ್ಚಿನವರು ಬಯಸುತ್ತಾರೆ.

ಇಂತಿರುವಾಗ, ಸೂರ್ಯ ಮುಳುಗದ ಮಹಾಸಾಮ್ರಾಜ್ಯ ಪಟ್ಟಕ್ಕೇರಿದ ಬ್ರಿಟಿಷ್ ಪ್ರಭುತ್ವವನ್ನು, ಭಾರತ ಬಿಟ್ಟು ತೊಲಗುವಂತೆ, ರಾಜಕೀಯ ಚರಿತ್ರೆಯಲ್ಲಿಯೇ ನವನೂತನವಾದ ಸತ್ಯ-ಅಹಿಂಸೆಗಳ ಬಲದಿಂದ ಮಾಡಿದ ಗಾಂಧೀಜಿಯ ಈ ತ್ಯಾಗ ನಮ್ಮ ಆರ್ಷೇಯ ಪರಂಪರೆಯ ಸಂಸ್ಕಾರವಾಗಿದೆ ಎಂಬುದನ್ನು ನಾವು ಸರಿಯಾಗಿ ಅರ್ಥಮಾಡಿಕೊಳ್ಳಬಹುದು. ಪಾಶ್ಚಾತ್ಯ ವಿದ್ಯಾಭ್ಯಾಸವನ್ನು ಅವರು ಸರಿಯಾಗಿ ಪಡೆದು ಪದವೀಧರರಾಗಿದ್ದರೂ, ಅದರಲ್ಲಿಯೇ ಮಗ್ನರಾಗಿರದೆ, ಭಾರತೀಯ ತತ್ವಸಿದ್ಧಾಂತಗಳನ್ನು ಜೀರ್ಣಸಿಕೊಂಡಿದ್ದರು; ಭಗವದ್ಗೀತೆಯ ಕರ್ಮ ಸಿದ್ಧಾಂತ ಅನಾಸಕ್ತಯೋಗವೆಂದು ಅವರು ವ್ಯಾಖ್ಯಾನಿಸಿ ಅದನ್ನು ತಮ್ಮ ಜೀವನದುದ್ದಕ್ಕೂ ಅನುಸರಿಸಿದರು.

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು'

–ಈ ಭಗವದ್ವಾಣಿ ಗಾಂಧೀಜಿಗೆ ಮಾರ್ಗದರ್ಶಕವಾಯಿತು. ಭಗವದ್ಗೀತೆಯಂತೆ, ಭಾರತೀಯ ದರ್ಶನದ ಸಾರಸರ್ವಸ್ವದಂತಿರುವ ಹದಿನೆಂಟು ಮಂತ್ರ ಮಾತ್ರವಿರುವ ಈಶೋಪನಿಷತ್ತಿನ 'ತ್ಯಾಗವೇ ಭೋಗ' ಎಂಬ ವಾಣಿ ಕೂಡ ಅವರಿಗೆ ದಾರಿ ದೀಪವಾಯಿತು. ಗಾಂಧೀಜಿಯ ಈ ಮಹಾತ್ಯಾಗವನ್ನು ಭಾರತೀಯ ತತ್ವಸಿದ್ಧಾಂತಗಳ ಬುನಾದಿಯ ಮಹತ್ವದ ದೃಷ್ಟಿಯಲ್ಲಿ ಸರಿಯಾಗಿ ತಿಳಿದುಕೊಂಡು ಸರ್ವದಾ ಸ್ಮರಿಸಬೇಕಾಗಿದೆ.

'ಲೋಕಾಃ ಸಮಸ್ತಾಃ ಸುಖಿನೋ ಭವಂತು'

ಎಂಬುದು ಮಾರ್ಗದರ್ಶಿಯಾದೊಂದು ಸುಭಾಷಿತ. ತಾನೊಬ್ಬನು ಮಾತ್ರ ಸುಖಿಯಾಗಿರಬೇಕೆಂಬ ಸ್ವಾರ್ಥಪ್ರವೃತ್ತಿಯನ್ನು ಬಿಟ್ಟು, ಸಮಸ್ತರ ಹಿತದಲ್ಲಿ ವ್ಯಕ್ತಿಹಿತವೂ ಅಂತರ್ಗತವಾಗಿದೆ ಎನ್ನುವ ವಿಶಾಲದರ್ಶನ ನಮಗಿರಬೇಕು. ಸರ್ವರೂ ಸಮಾನರು ಎಂಬ ಈ ಆಧುನಿಕ ಯುಗದ ಸಮತಾವಾದದ ಮೂಲವೂ ಇದೇ ಆಗಿದೆ. ಆದರೆ ಮನುಷ್ಯನ ಸ್ವಾರ್ಥ ಸರ್ವಹಿತಸಾಧನೆಗೆ ಅಡ್ಡಿಯನ್ನುಂಟು ಮಾಡುತ್ತಿರುವುದು ವ್ಯವಹಾರ. ಆದ್ದರಿಂದಲೇ ಆಧುನಿಕ ಜಗತ್ತಿನ ಸಮತಾವಾದದಲ್ಲಿ ವ್ಯಕ್ತಿ ಸ್ವಾರ್ಥದಿಂದ ಸಮಷ್ಟಿ ಹಿತಕ್ಕೆ ಆತಂಕವಾದಲ್ಲಿ ಆತನನ್ನು ಬಲಾತ್ಕಾರದಿಂದ ಬಗ್ಗಿಸುವ ನೀತಿ ಅನುಸರಿಸಲಾಗುತ್ತಿದೆ. ಐಶ್ವರ್ಯವಂತರಿಗೆ ತಮ್ಮ ಶ್ರೀಮಂತಿಕೆ ಮೆರೆಸಲು, ತಮ್ಮ ಸೇವೆ ಮಾಡಲು ದೀನದರಿದ್ರರು ಯಾವಾಗಲೂ ಬೇಕಾಗುತ್ತದೆ. ಈ ಭಾವನೆ ಘರ್ಷಣೆಗೆ ಆಸ್ಪದ ಮಾಡುತ್ತದೆ. ಹಾಗಾಗಿ, ಶ್ರೀಮಂತಿಕೆ ದಾರಿದ್ರ್ಯಗಳನ್ನು ಸಮತಟ್ಟುಗೊಳಿಸುವ ಬಲಪ್ರಯೋಗ ಸಮತಾವಾದಿ ರಾಷ್ಟ್ರಗಳಲ್ಲಿ ನಡೆಯಿತು. ಅಧಿಕಾರಕ್ಕೇರಿದವರು ಎಲ್ಲಾ ಕಡೆಗಳಲ್ಲಿಯೂ, ತಮ್ಮ ಅಧಿಕಾರವನ್ನುಳಿಸಿಕೊಳ್ಳಲು ಹಂಚಿಕೆ ಹೂಡುವರು. ಈ ತಂತ್ರಗಾರಿಕೆಯ ಬೆಳವಣಿಗೆ ಹಾಗೂ ಅದರ ವರ್ತನೆಗಳ

ಪರಿಣಾಮವೇ ಸಮತಾವಾದಿ ಪ್ರಭುತ್ವಗಳ ದೌರ್ಬಲ್ಯಕ್ಕೂ ಒಂದು ಕಾರಣವೆನ್ನಬಹುದು ಈ ಪಾಠದಿಂದ ನಾವು ಕಲಿಯತಕ್ಕದ್ದೆಂದರೆ, ಎಲ್ಲರ ಸುಖದಲ್ಲಿಯೇ ತನ್ನ ಸುಖವೂ ಅಡಕವಾಗಿದೆ ಎಂಬ ಮೇಲಿನ ಸುಭಾಷಿತದ ನೀತಿ. ಇದೇ ವ್ಯಕ್ತಿ ಹಾಗೂ ಸಮಾಜ ಸಮೂಹದ ಅಂತರ್ಗತ ಸಂಸ್ಕೃತಿ. ಗಾಂಧೀವಾದದಲ್ಲಿ 'ಟ್ರಸ್ಟಿಶಿಪ್' ಎಂಬ ಮಾತು ಬರುತ್ತದೆ. ತನ್ನಲ್ಲಿ ಇರುವ ಸಂಪತ್ತು ತನಗೆ ಒಬ್ಬನಿಗೆ ಆಗಿ ಮಾತ್ರವಲ್ಲ; ಇದು ಸಮಾಜದ್ದು; ಅವರಿಗೆ ಬೇಕಾದಾಗ ನನ್ನಲ್ಲಿ ಇಟ್ಟಿರುವ ಸಂಪತ್ತನ್ನು ನಾನು ಕೊಡಬೇಕು; ನನ್ನನ್ನು ನಂಬಿ ಸಮಾಜ ನನ್ನಲ್ಲಿ ಈ ಸಂಪತ್ತನ್ನು ಇರಿಸಿಕೊಳ್ಳುವಂತೆ ಹೇಳಿದೆ. ಅವರ ಆ ವಿಶ್ವಾಸ ದೊಡ್ಡದು; ಅದಕ್ಕೆ ಭಂಗಬರದಂತೆ ನಾನು ನಡೆದುಕೊಳ್ಳತಕ್ಕದ್ದಿದೆ; ಸರ್ವರಿಗೂ ಸಮಾನವಾಗಿ ಉಪಯೋಗಕ್ಕೆ ಬೇಕಾದ ಈ ಐಶ್ವರ್ಯವನ್ನು ನಾನು ಶ್ರದ್ಧೆಯಿಂದ ಕಾಪಾಡಿಕೊಂಡುಬಂದು, ಅವರ ವಿಶ್ವಾಸಕ್ಕೆ ದ್ರೋಹಬಗೆಯದೆ ನಡೆದುಕೊಳ್ಳತಕ್ಕದ್ದೆಂದು ತಿಳಿದುಕೊಳ್ಳುವ ಈ 'ಟ್ರಸ್ಟಿಶಿಪ್' ಪದ್ಧತಿ ಉತ್ತಮವೆಂದು ಗಾಂಧೀಜಿ ಸಾರಿದರು. ಈ ಪದ್ಧತಿಯಲ್ಲಿ ಬಲಾತ್ಕಾರವಿಲ್ಲ; ಸ್ವಾರ್ಥವಿಲ್ಲ; ವಿಶ್ವಾಸವಿದೆ; ನೀತಿ ಇದೆ; ಅನ್ಯೋನ್ಯ ಸಹಕಾರ ಸಹಾಯವಿದೆ; ಕಾಪಟ್ಯವಿಲ್ಲ; ಸತ್ಯವಿದೆ. ಹಿಂಸೆಯಿಲ್ಲ; ಅಹಿಂಸೆಯಿದೆ. ಇಂತಹ ಮನೋಧರ್ಮವನ್ನು ಬೆಳೆಸಿಕೊಂಡು ಸಮಾಜ, ರಾಜ್ಯ, ರಾಷ್ಟ್ರಹಿತವನ್ನು ಮಾಡುತ್ತಿರುವ ನೀತಿ ಶ್ಲಾಘನೀಯವಾದುದು.

ಭಾರತದ ಪ್ರಾಚೀನ ಸಾಂಸ್ಕೃತಿಕ, ಸಾಹಿತ್ಯಿಕ ಕಲಾಮೌಲ್ಯಗಳನ್ನು ತಿಳಿದುಕೊಳ್ಳುವ ಗಂಭೀರ ಚಿಂತನೆ ಇಂದು ಕಂಡು ಬರುತ್ತಿಲ್ಲ. ಜಾಗತಿಕ ಕ್ಷೇತ್ರದಲ್ಲಿಯೇ ಈ ಸಂಸ್ಕಾರ ಅತೀವ ಪ್ರಾಚೀನವಾಗಿದ್ದರೂ ನಮಗಿಂದು ಆ ಅಭಿಮಾನವಿಲ್ಲ. ಸ್ವಾತಂತ್ರ್ಯ ದೊರೆತು ಅರ್ಧಶತಮಾನ ಸಮೀಪಿಸಿದರೂ ಮಾನಸಿಕವಾಗಿ ಹೆಚ್ಚಿನವರು ಇಂದೂ ವಿದೇಶೀಯ ಸಂಸ್ಕೃತಿಯ ಗುಲಾಮರಂತೆ ವರ್ತಿಸುತ್ತಿದ್ದೇವೆ. ಭಾರತದ ಪ್ರಾಚೀನ ಸಂಸ್ಕೃತಿಯ ವೈಭವವನ್ನು ಸರಿಯಾಗಿ ಅರ್ಥಮಾಡಿಕೊಳ್ಳಬೇಕಾದರೆ ನಾವು ವೈದಿಕ ಸಂಸ್ಕೃತ ಗ್ರಂಥರತ್ನಗಳನ್ನು ಓದಿ ತಿಳಿದುಕೊಳ್ಳಬೇಕು. ನಾಲ್ಕು ಶ್ರುತಿಸ್ಮೃತಿಗಳು, ಅಷ್ಟಾದಶ ಪುರಾಣಗಳು, ರಾಮಾಯಣ ಮಹಾಭಾರತಾದಿ ಮಹಾಕಾವ್ಯಗಳು ನಾವು ಮಥಿಸಿ ನೋಡಬೇಕಾದವುಗಳು. ಬುದ್ಧ, ಜಿನ, ಶಂಕರ, ರಾಮಾನುಜ, ಬಸವೇಶ್ವರ ಪ್ರಭೃತಿ ಆಚಾರ್ಯಪುರುಷರ ಸಿದ್ಧಾಂತಗಳನ್ನು ಅರ್ಥಮಾಡಿಕೊಳ್ಳಬೇಕಾಗಿದೆ. ಇಂತಹ ಹಿರಿದಾದ ಸಾಂಸ್ಕೃತಿಕ ಪರಂಪರೆಯ ಹಿನ್ನೆಲೆಯನ್ನು ತಿಳಿದುಕೊಂಡಲ್ಲಿ, ಅದನ್ನು ಮುಂದುವರಿಸಿ ಇನ್ನಷ್ಟು ಸಂಸ್ಕೃತಿ ಸಂಪನ್ನರಾಗಲು ಪ್ರೇರಣೆ ದೊರೆಯುತ್ತದೆ. ಅಂತಹ ಆಳವಾದ ಅಭ್ಯಾಸ ಇಂದು ಖಿಲವಾಗುತ್ತಿದೆ; ಈ ಲೋಕದೊಂದಿಗೆ ಪರಕೀಯ ಸಂಸ್ಕೃತಿಯ ಅಂಧಾನುಕರಣೆಯ ಮೋಹ ನಮ್ಮ ಬುದ್ಧಿಯನ್ನು ಕಳಂಕಿತಗೊಳಿಸುತ್ತಲೂ ಇದೆ.

ಮಕ್ಕಳಿಗೆ ಮೊದಲ ಶಿಕ್ಷಣ ಅವರವರ ತಾಯ್ನುಡಿಯಲ್ಲಿಯೇ ಆಗಬೇಕು. ಇದು ನೈಸರ್ಗಿಕ ಸಿದ್ಧಾಂತ. ಮಕ್ಕಳಿಗೆ ಮನೆಯಮಂದಿ, ತಾಯಿತಂದೆ, ಗುರುಹಿರಿಯರು, ಪ್ರಾಣಿಜಂತುಗಳ ಪರಿಚಯ ಅವರವರ ಮನೆಯ ಮಾತಿನಲ್ಲಿಯೇ ಆಗುತ್ತದೆ. ತಾಯಿಯನ್ನು ಮಮ್ಮಿ ಎನ್ನುವುದು, ತಂದೆಯನ್ನು ಡ್ಯಾಡಿ ಎನ್ನುವುದು, ನಾಯಿಯನ್ನು ಡೋಗ್ ಎನ್ನುವುದೂ ನಮ್ಮ ಮಕ್ಕಳಿಗೆ ಅಸಂಗತ. ಮನೆಯ ಒಳಗೂ ಹೊರಗೂ ಮಗು ನಿತ್ಯ ನೋಡುತ್ತಿರುವ ಬೆಕ್ಕನ್ನು ಕೇಟ್ ಎಂದು ಕರೆಯುವ ಅವಶ್ಯವೇನು? ಕೇಟ್ ಎಂಬುದನ್ನು ಸಿಎಟಿ ಎಂಬ ಮೂರಕ್ಷರಗಳಿಂದ ಉಚ್ಚರಿಸುವುದು, ಆಮೇಲೆ ಕೇಟ್ ಎಂದು ಹೇಳುವುದು, ಆ ಕೇಟ್ ಎಂದರೆ ಬೆಕ್ಕು ಎಂದು ಮತ್ತೆ ತಿಳಿದುಕೊಳ್ಳುವುದು ಈ ತೆರನ ತಿಳುವಳಿಕೆ ಬಾಲಬುದ್ಧಿಗೆ ನಿಜವಾಗಿಯೂ ಪ್ರಯಾಸಕರ. ಅನೈಸರ್ಗಿಕ. ಅದರ ಬದಲು ಬೆಕ್ಕು ಎಂದು ಹೇಳಿದಾಗ ಅದರ ರೂಪ ನೀತಿ ನಡತೆ ಎಲ್ಲವನ್ನೂ ಮಗು ಒಮ್ಮೆಲೇ ತಿಳಿದುಕೊಳ್ಳುತ್ತದೆ, ಡಿಒಜಿ=ಡೋಗ್=ನಾಯಿ, ಈ ರೀತಿ ಪ್ರಯಾಸಕರವಾಗಿ ನಿತ್ಯ ನೋಡುವ ಪ್ರಾಣಿಗಳನ್ನು ಮಕ್ಕಳಿಗೆ ಗುರುತುಮಾಡಿಕೊಡುವ ಪದ್ಧತಿ ದಾಸ್ಯ ಪ್ರವೃತ್ತಿಯ ಚಿಹ್ನೆ ಮಾತ್ರವಲ್ಲ, ಮಕ್ಕಳ ಬುದ್ಧಿಗೂ ಪ್ರಯಾಸಕರವಾಗಿ ಭಾರವೆನಿಸೀತು, ತಲೆಗೆ ಹೊರಲು ಸಾಧ್ಯವಾದ ಭಾರವನ್ನು ಮಾತ್ರ ಹೋರಿಸಬೇಕು. ಹೆಚ್ಚು ಭಾರ ಹೊತ್ತರೆ, ಅಥವಾ ಹೇರಿಸಿದರೆ ತಲೆಗೆ ಕಷ್ಟವಾಗುವಂತೆ, ನಮ್ಮ ಬುದ್ಧಿಗೂ ಈ ತೆರನ ಭಾರ ಹೊರಿಸಿದಲ್ಲಿ ಬುದ್ಧಿ ಚುರುಕಾಗುವ ಬದಲು, ಕ್ರಮೇಣ ಬುದ್ಧಿ ಮಾಂದ್ಯವಾಗುವ ಸಂಭವವೂ ಒದಗಬಹುದು. ಹಾಗಾಗಿ ಸಣ್ಣ ಮಕ್ಕಳಿಗೆ, ಅವರ ಬಾಲ್ಯವಿದ್ಯಾಭ್ಯಾಸ ತಾಯ್ನುಡಿಯಲ್ಲಿಯೇ ಆಗಬೇಕೆಂದು ಎಲ್ಲಾ ಶಿಕ್ಷಣತಜ್ಞರೂ ಒಪ್ಪುತ್ತಾರೆ. ವಿಜ್ಞಾನಾದಿ ಆಧುನಿಕ ತಂತ್ರಜ್ಞಾನ ಪಡೆಯಲು ಇಂಗ್ಲಿಷ್ ಭಾಷೆ ಬೇಕಾಗಿದೆ ಎಂಬುದೂ ಒಂದು ಭ್ರಮೆಯೆ; ರಶ್ಯಾ ಜಪಾನ್ ಚೀನಾದಿ ರಾಷ್ಟ್ರಗಳು ಇಂದು ವಿಜ್ಞಾನಾದಿ ವಿಷಯಗಳಲ್ಲಿ ಮುಂದುವರಿದಿರುವುದು ಇಂಗ್ಲಿಷ್ ಭಾಷೆಯ ಮೂಲಕವಲ್ಲ; ಅವರವರ ದೇಶದ ಮಾತೃಭಾಷೆಯ ಮೂಲಕವೇ. ರಾಜ್ಯರಾಜ್ಯಗಳನ್ನು ಭಾಷೆಯ ತಳಹದಿಯಲ್ಲಿ ವಿಭಜಿಸಿ, ಪ್ರಾಂತ ಪುನಾರಚನೆ ಮಾಡಿದ್ದೇ ಜನ ಸಾಮಾನ್ಯರಿಗೆ ಆಡಳಿತದ ಕೋರ್ಟು ಕಚೇರಿಗಳ ವ್ಯವಹಾರ ಸರಿಯಾಗಿ ತಿಳುವಳಿಕೆಗೆ ಬರಬೇಕೆಂಬ ಉದ್ದೇಶದಿಂದ. ಆದರೆ, ಇಂದು ಇಂಗ್ಲಿಷ್ ಭಾಷೆ ಅಂತಾರಾಷ್ಟ್ರೀಯ ಸಂಪರ್ಕಭಾಷೆಯಾಗಿ ಹಬ್ಬಿದ ನಿಮಿತ್ತ, ವಿದೇಶ ವ್ಯವಹಾರದ ಬಗ್ಗೆ ಅದನ್ನೂ ಕಾಲೇಜ್ ಶಿಕ್ಷಣಮಟ್ಟದಲ್ಲಿ ಒಂದು ಭಾಷೆಯಾಗಿ ಅವಶ್ಯವಿದ್ದವರು ಕಲಿತುಕೊಳ್ಳಲು ಅನುಕೂಲ ಮಾಡುವುದು ಅವಶ್ಯವಾಗಬಹುದು.

ಮೇಲಿನ ವಿಷಯವನ್ನು ನಮ್ಮ ದೇಶದ ಆಡಳಿತ ನಡೆಸುವವರು ಗಂಭೀರವಾಗಿ ಚಿಂತಿಸತಕ್ಕದ್ದಿದೆ. ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದವರೆಗೆ ನಮ್ಮ ಮಕ್ಕಳಿಗೆ ಅವರವರ

ತಾಯ್ನುಡಿಯಲ್ಲಿ, ರಾಜ್ಯಭಾಷೆಯಲ್ಲಿ ಶಿಕ್ಷಣ ನೀಡಬೇಕು. ವಿಜ್ಞಾನವೋ, ಗಣಿತವೋ, ಚರಿತ್ರೆಯೋ, ಭೂಗೋಳವೋ ಎಲ್ಲಾ ವಿಷಯಗಳನ್ನೂ ಸುಲಭವಾಗಿ ಗ್ರಹಿಸಲು ತಾಯ್ನುಡಿಯೇ ಅನುಕೂಲ. ಕಾಲೇಜ್ ಶಿಕ್ಷಣದ ಮಟ್ಟ ತಲಪುವಾಗ, ರಾಷ್ಟ್ರಭಾಷೆಯೋ, ಸಂಸ್ಕೃತವೋ, ಇಂಗ್ಲಿಷೋ ಬೇಕಾದುದನ್ನು ಅಥವಾ ಅವೆಲ್ಲವನ್ನೂ ಸಾಧ್ಯವಾದಷ್ಟು ಕಲಿತುಕೊಳ್ಳುವರೆ ಆಸ್ಪದವಿರತಕ್ಕದ್ದು. ರಾಜ್ಯಭಾಷೆಯಂತೆ ರಾಷ್ಟ್ರಭಾಷೆಯೂ ಅತ್ಯಂತ ಆವಶ್ಯ. ಸಂಸ್ಕೃತಭಾಷಾ ಜ್ಞಾನವೂ ನಮ್ಮ ರಾಷ್ಟ್ರದ ಸಾಂಸ್ಕೃತಿಕ ಸಂಪತ್ತನ್ನು ಅರಿತುಕೊಳ್ಳಲು ತುಂಬಾ ಸಹಾಯಕ. ದುರ್ದೈವವೆಂದರೆ ಬ್ರಿಟಿಷ್ ಕಾಲದಲ್ಲಿ ಸಂಸ್ಕೃತ ಭಾಷೆಗೆ ಇದ್ದ ಪ್ರೋತ್ಸಾಹ ಇಂದು ಇಲ್ಲವಾಗಿದೆ. ಈ ಲೋಪವನ್ನು ಸರಿಮಾಡುವುದು, ಸಂಸ್ಕೃತ ಭಾಷೆಯನ್ನು ಉನ್ನತಶಿಕ್ಷಣಮಟ್ಟದಲ್ಲಿ ಕಲಿಸುವ ವ್ಯವಸ್ಥೆ ಮಾಡುವುದು ದೇಶದ ಸಾಂಸ್ಕೃತಿಕ ಪ್ರಗತಿಯ ದೃಷ್ಟಿಯಲ್ಲಿ ಅತ್ಯಗತ್ಯ. ತನ್ನ ಮನೆ, ತನ್ನ ಊರು, ತನ್ನ ರಾಜ್ಯ, ತನ್ನ ರಾಷ್ಟ್ರ, ತನ್ನ ನುಡಿ, ತನ್ನ ನಾಡು ಈ ಅಭಿಮಾನದ ವರ್ತುಲವೇ ವಿಶಾಲವಾಗುತ್ತಾ ಇಡೀ ಮಾನವ ಕುಟುಂಬವನ್ನು ಪ್ರೀತಿಸುವ ವಿಶ್ವಮಾನವತೆ ಹೃದಯ ಹೃದಯಗಳಲ್ಲಿ ಬೆಳಗಲು ಇದರಿಂದ ಅನುಕೂಲವಾಗುವುದು. ಇದು ಒಳ್ಳೆಯ ಭಾವನೆಯಾಗಿದೆ.

ಆಧುನಿಕ ಯುಗದ ಭಾರತದ ಸಾಂಸ್ಕೃತಿಕ ಪುನರುತ್ಥಾನಕ್ಕೆ ರಾಷ್ಟ್ರೀಯ ಧುರೀಣರಾಗಿದ್ದ ಬಾಲ ಗಂಗಾಧರ ತಿಲಕರ ಭಗವದ್ಗೀತೆಗೆ ಬರೆದ ವಿಸ್ತಾರವೂ ವಿಚಾರಪೂರ್ಣವೂ ಆದ ವ್ಯಾಖ್ಯಾನ ಬಹುಮಾನ್ಯ. ಕರ್ಮಯೋಗವೇ ಗೀತೆಯ ಉಪದೇಶವೆಂದು ಅವರು ಅದರಲ್ಲಿ ಸಾಧಾರವಾಗಿ ತಿಳಿಸಿದ್ದಾರೆ. ವೇದಾದಿಗಳ ಮಹತ್ವದ ಕುರಿತೂ ತಿಲಕರು ಗ್ರಂಥರಚಿಸಿದ ಮೇಧಾವಿ, ಪ್ರಾರಂಭದಲ್ಲಿ ಕ್ರಾಂತಿಕಾರೀ ಸ್ವಾತಂತ್ರ್ಯ ಯೋಧನಾಗಿದ್ದು, ಮುಂದೆ ಮಹರ್ಷಿಯೆನಿಸಿದ ಅರವಿಂದರೂ ಆಧುನಿಕ ಲೋಕಕ್ಕೆ ಭಾರತದ ಉತ್ತಮ ಸಂಸ್ಕೃತಿಯನ್ನು ಪರಿಚಯಿಸಿದ ಮಹಾಪುರುಷರು. ಶ್ರೀರಾಮಕೃಷ್ಣಪರಮಹಂಸ ವಿವೇಕಾನಂದರೇ ಮೊದಲ್ಗೊಂಡು ಶ್ರೀರಾಮಕೃಷ್ಣ ಮಠದ ಸ್ವಾಮಿಗಳು ಹಲವರು ನಮ್ಮ ಸಾಂಸ್ಕೃತಿಕ ರಾಯಭಾರಿಗಳಾಗಿ ಭಾರತದ ಹಿರಿಮೆಯನ್ನು ಜಗತ್ತಿಗೆ ಸಾರಿದ್ದಾರೆ. ಚಿಕಾಗೋದಲ್ಲಿ ನಡೆದ ಸರ್ವಧರ್ಮ ಸಮ್ಮೇಳನದ ಶ್ರೀ ಸ್ವಾಮಿ ವಿವೇಕಾನಂದರ ಭಾಷಣ ಇತಿಹಾಸ ಪ್ರಸಿದ್ಧ, ಶ್ರೀ ನಾರಾಯಣ ಗುರು, ಶ್ರೀ ರಮಣ ಮಹರ್ಷಿ ಇವರೂ ಈ ಕ್ಷೇತ್ರದಲ್ಲಿ ಚಿರಸ್ಮರಣೀಯರು. ಭಾರತದ ಸಮಾಜದಲ್ಲಿ ಹಬ್ಬಿಕೊಂಡಿರುವ ಮೌಢ್ಯವನ್ನು ಮುರಿಯುವಲ್ಲಿ, ಸರ್ವರೂ ಸಮಾನರೆಂದು ತಿಳಿಸುವಲ್ಲಿ ಆಧುನಿಕ ಮನು ಎಂದು ಖ್ಯಾತರಾದ ಡಾ. ಅಂಬೇಡ್ಕರ್ ಅವರ ಕೊಡುಗೆಯೂ ಗಣನೀಯ. ಇದರಿಂದೆಲ್ಲಾ ಭಾರತ ಸರ್ವತ್ರ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ವಿವಿಧ ಕ್ಷೇತ್ರಗಳಲ್ಲಿ ನವಜಾಗೃತಿ ಸ್ಫುರಿಸಿ, ನಮ್ಮ ಭವಿಷ್ಯತ್ತನ್ನು ರೂಪಿಸುವ ಉತ್ಸಾಹ ತುಂಬುವಂತಾಗಿದೆ. ಅವರೆಲ್ಲರ ಅಪಾರವಾದ, ಮಹತ್ತರವಾದ ಸತ್ಕಾರ್ಯಗಳನ್ನು

ಸ್ಮರಿಸಿ ಕೃತಜ್ಞರಾಗಬೇಕಾಗಿದೆ ಮಾತ್ರವಲ್ಲ, ಅವರು ತೋರಿಸಿದ ಸನ್ಮಾರ್ಗದಲ್ಲಿ ಮುಂದಡಿಯಿಡತಕ್ಕದ್ದಿದೆ.

ಪ್ರಾಚೀನ ಬ್ರಹ್ಮರ್ಷಿಗಳ ದಿವ್ಯದೃಷ್ಟಿಯಿಂದ ತೊಡಗಿ ಆಧುನಿಕ ಕಾವ್ಯರ್ಷಿ ಕುವೆಂಪು ದರ್ಶನ ದೃಷ್ಟಿಯವರಂಗೆ, ಭಾರತದ ಸಂಸ್ಕೃತಿಯ ಪುಣ್ಯವಾಹಿನಿ ನಿರಂತರ ಹರಿದು ಬಂದಿದ್ದರೂ, ಸ್ವಾತಂತ್ರ್ಯ ದೊರೆತ ಈ ನಾಲ್ಕೈದು ದಶಕಗಳ ಅವಧಿಯಲ್ಲಿ ಅಂತರ್ಗಾಮಿಯಾಗಿಯೇ ಹರಿದು ಹೋದಂತೆ ತೋರುತ್ತದೆ. ಮುಂದೊಂದು ದಿನ– ಆ ದೂರಭವಿಷ್ಯದಲ್ಲಿ – ಈ ವಾಹಿನಿ ಪ್ರತ್ಯಕ್ಷವಾಗಿ ನಾಡಿಗೇ ಹರಿದು ಬೆಟ್ಟಬಯಲುಗಳನ್ನು, ಗಿರಿಕಂದರಗಳನ್ನು, ಕಾಡುಮೈದಾನಗಳನ್ನು ತುಂಬಾ ತಂಪಾಗಿಸುವುದೆಂದು ನಿರೀಕ್ಷಿಸಬೇಕು. ವಿದೇಶಿಯರ ಅಧಿಕಾರದ ಕಾಲದಲ್ಲಿ, ದಾಸ್ಯದಲ್ಲಿ, ಆ ಕೆಸರಿನ ಹೊಂಡದಲ್ಲಿ ಅದ್ದಿದ್ದ ಭಾರತೀಯರು, ಸ್ವಾತಂತ್ರ್ಯ ದೊರೆತ ಕೂಡಲೇ ಒಮ್ಮೆಗೇ ಮೇಲೆದ್ದು ಉತ್ಸಾಹಭರಿತರಾಗಿ ತಾವು ತಾವೇ ಸ್ವಾತಂತ್ರ್ಯದ ಸವಿಸುಖಗಳನ್ನೆಲ್ಲಾ ಅನುಭವಿಸಬೇಕೆಂದೂ ಅದರ ಎಲ್ಲಾ ಲಾಭ ಪ್ರಯೋಜನಗಳನ್ನು ತಾವೇ ಪಡೆದು ಸುಖಿಸಬೇಕೆಂದೂ ತಾತ್ಕಾಲಿಕವಾಗಿ ಬಯಸಿದ್ದರೆ ಕ್ಷಮ್ಯ. ಆದರೆ ಎಲ್ಲರೂ ಒಳ್ಳೆಯವರಾಗಬೇಕೆಂಬ ಈ ಪ್ರವೃತ್ತಿ, ಸ್ವಾರ್ಥದ ಸಣ್ಣತನದಿಂದ ಮುಕ್ತವಾಗಿ ಎಲ್ಲರೂ ಉತ್ತಮಿಕೆಯನ್ನು ಪಡೆದು ಸರ್ವತ್ರ ಸುಖ ಸಂತೋಷ ನೆಲಸಬೇಕೆಂಬ ಪ್ರವೃತ್ತಿ ಬೆಳೆದುಬರಬೇಕಾಗಿದೆ. ಹೀಗಾದೀತು ಎಂದು ನಾವು ಇಂದು ಭರವಸೆಪಡತಕ್ಕದ್ದು; ಇಂತು ಆಶಾವಾದಿಗಳಾಗಬೇಕು. ಇಂದು ಹಳ್ಳಿಯಿಂದ ಡಿಲ್ಲಿಯವರೆಗೂ ಹಬ್ಬಿದ ಸ್ವಾರ್ಥಲಾಭಗಳ ಮೋಹದ ಬಲೆ ಕಳಚಿಹಾಕಿ ಉತ್ತಮ ಸಂಸ್ಕಾರಸಂಪನ್ನ ಸಂತಾನವಾಗಿ ಎಲ್ಲರೂ ಮುಂದೆ ಹೋಗತಕ್ಕದ್ದು. ಈ ಸಂದರ್ಭದಲ್ಲಿ ಉಪನಿಷದ್ವಾಣಿಯೊಂದು ನೆನಪಾಗುತ್ತದೆ :

'ಹಿರಣ್ಮಯೇನ ಪಾತ್ರೇಣ
ಸತ್ಯಸ್ಯಾಪಿಹಿತಂ ಮುಖಂ
ತತ್ತ್ವಂ ಪೂಷನ್ನಪಾವೃಣು
ಸತ್ಯಧರ್ಮಾಯ ದೃಷ್ಟಯೇ'

–'ಸತ್ಯದ ಮುಖವು ಬಂಗಾರದ ಮುಚ್ಚಳದಿಂದ ಮುಚ್ಚಿ ಹೋಗಿದೆ. ಎಲೈ ಪೂಷಣನೆ, ಆ ಮುಚ್ಚಳವನ್ನು ಸರಿಸು; ಸತ್ಯ ಧರ್ಮಗಳ ನಿಜಸ್ವರೂಪವನ್ನು ತೋರಿಸು' ಎಂಬುದು ಅಲ್ಲಿನ ಪ್ರಾರ್ಥನೆ; ಅದನ್ನು ಇಂದೂ ಎಂದೆಂದೂ ನಾವು ಮಾಡುತ್ತಿರಬೇಕು. ಜನತೆಯನ್ನು ಆವರಿಸಿರುವ ಹಣದ ಆಸೆ, ಬಂಗಾರದ ಬಯಕೆ, ಭ್ರಷ್ಟಾಚಾರದ ಗಳಿಕೆ, ಅಧಿಕಾರಮೋಹ, ನಾಗರಿಕರ ನಿಜವಾದ ಯೋಗ್ಯತೆಯ ಸ್ವರೂಪವನ್ನು ಹಾಳುಮಾಡಿದ್ದು ಸರಿಯೆ. ಅವೆಲ್ಲಾ ಮಾಯವಾಗಿ ಉತ್ತಮಿಕೆಯನ್ನು ಪಡೆಯುವ

ದೃಷ್ಟಿಯಲ್ಲಿ ದುಡಿಯತಕ್ಕದ್ದು. ಸ್ವಾರ್ಥಸುಖದ ಸಂಕುಚಿತ ಪ್ರವೃತ್ತಿ ತೊಲಗಿ, ಸಮಸ್ತರ ಸುಖದಲ್ಲಿಯೇ ವ್ಯಕ್ತಿಸುಖವೂ ಅಡಗಿದೆ ಎಂಬ ಸತ್ಯದ ಬೆಳಕು ಎಲ್ಲರ ಬಾಳುವೆಯನ್ನು ಬೆಳಗಿಸುವಂತಾಗಲಿ ಎಂದು ಹಾರೈಸಲೇಬೇಕಾಗಿದೆ.

ಇಂತಹ ಹಾರೈಕೆ, ಭರವಸೆ, ಆತ್ಮಧೃತಿ ಪ್ರತಿವ್ಯಕ್ತಿಯಲ್ಲಿಯೂ ಇರುವಂತೆ ಆಗಬೇಕಾದರೆ ಅದಕ್ಕೆ ತಕ್ಕಂತಹ ರಚನಾತ್ಮಕ ಕಾರ್ಯಗಳನ್ನು ನಿರಂತರ ಸಾಧನೆಯಿಂದ ಕೈಗೊಳ್ಳತಕ್ಕದ್ದು. ಹಾಗಾದರೆ ಇಂದಿನ ಅವನತಿಯಿಂದ ನಾವು ಎಲ್ಲರೂ, ದೇಶವಿಡೀ ಉನ್ನತಿ ಪಡೆದೀತು. ಈ ಜಾಗೃತಿಗೆ, ಈ ತೆರನ ರಾಷ್ಟ್ರರಚನೆಗೆ, ಡಿಲ್ಲಿ ಕಡೆಗೆ ನೋಡಬೇಕಾಗಿಲ್ಲ. ಹಳ್ಳಿಹಳ್ಳಿಗಳಲ್ಲಿ ಜಾಗೃತಿ ಮೂಡತಕ್ಕದ್ದು. ಪ್ರತಿ ಹಳ್ಳಿಗಳಲ್ಲಿಯೂ ಆತ್ಮಧೃತಿ ತುಂಬಬೇಕು. ಸರ್ವರೂ ಸದಾ ಉದ್ಯೋಗನಿರತರಾಗಿರತಕ್ಕದ್ದು. ಸಕಲರೂ ಸಾಕ್ಷರರಾಗಬೇಕು. ರಾಷ್ಟ್ರದಲ್ಲಿ ಜಗತ್ತಿನಲ್ಲಿ ಏನು ನಡೆಯುತ್ತಿದೆ, ಎಂಬುದರ ಸರಿಯಾದ ತಿಳುವಳಿಕೆ ಸಕಲರಿಗೂ ಇದ್ದರೆ ಮಾತ್ರ ಜನತೆಯ, ರಾಷ್ಟ್ರದ ಏಳಿಗೆಗೆ ಮೂಡಬೇಕಾದ ಕರ್ತವ್ಯಾಕರ್ತವ್ಯಪ್ರಜ್ಞೆ ನಮ್ಮಲ್ಲಿ ಮೂಡುತ್ತದೆ; ಆ ಪ್ರಜ್ಞೆಯ ಬಲದಿಂದ ಸರಿದಾರಿಯಲ್ಲಿ ನಡೆಯುತ್ತೇವೆ : ಇಡೀ ಸಮುದಾಯವೇ ಮುನ್ನಡಿಯಿಡುವಂತಾಗುತ್ತದೆ. ಗ್ರಾಮಗ್ರಾಮಗಳಲ್ಲಿ ಈ ರೀತಿ ವ್ಯಕ್ತಿವ್ಯಕ್ತಿಗಳ ಸಮುದಾಯ ಸದಾ ಕಾರ್ಯನಿರತವಾಗಿ, ಸತ್ಪ್ರವೃತ್ತಿಯಲ್ಲಿ ಸಾಗಿದಾಗ, ಪ್ರತಿ ರಾಜ್ಯವೂ, ರಾಜ್ಯಗಳಿಂದ ಕೂಡಿದ ರಾಷ್ಟ್ರವೂ ಉತ್ತಮ ಸ್ಥಿತಿಗೆ ತಲುಪುವುದು, ಪಂಚಾಂಗ ಭದ್ರವಾಗದೆ ಮಾಳಿಗೆ ನಿಲ್ಲಲಾರದು. ಪ್ರತಿಹಳ್ಳಿಯೂ ಪ್ರಗತಿಗೊಂಡಾಗ ಡಿಲ್ಲಿಯ ಸಿಂಹಾಸವೂ ಭದ್ರ. ಈ ಪ್ರಾಚೀನ ಕಾಲದಲ್ಲಿಯೂ ಇತ್ತು; ಸರಿಯಾಗಿ ಕೆಲಸಕಾರ್ಯಗಳು ಆಗುತ್ತಿತ್ತು. ಪಂಚಾಯತು ಎನ್ನುವ ಪದ ಬಹಳ ಹಿಂದಿನದು; ಗ್ರಾಮದ ಒಳ್ಳೆಯದು, ಕೆಡುಕನ್ನು ಪರಿಶೀಲಿಸಿ ಯೋಗ್ಯ ತೀರ್ಮಾನ ನೀಡುತ್ತಿದ್ದರು. ಅವರನ್ನು ಗುರಿಕಾರರೆಂದೂ ಹೇಳುವುದಿತ್ತು; ಸಮಾಜಕ್ಕೂ, ಗ್ರಾಮಕ್ಕೂ ಸೀಮೆಗೂ ಯೋಗ್ಯರಾದ ಗುರಿಕಾರರು ಇದ್ದರು. ಇದೇ ಇಂದಿನ ಪಂಚಾಯತು ರಚನೆಗೂ ಸ್ಫೂರ್ತಿಯಾಗಿದೆ. ಹಳ್ಳಿಯ ಹತ್ತು ಸಮಸ್ತರ ಸಕಲ ಸಮಸ್ಯೆಗಳಿಗೂ ಪಂಚಾಯತಿಯ ಪ್ರಮುಖರು ಪರಿಹಾರ ಸೂಚಿಸಿ ಮಾರ್ಗದರ್ಶನ ಮಾಡುವ ಆ ಪದ್ಧತಿಯನ್ನೇ ಗಾಂಧೀಜಿ ಗ್ರಾಮಸ್ಥರಾಜ್ಯವೆಂದು ಕರೆದರು; ಅದೇ ವಾಲ್ಮೀಕಿ ರಾಮಾಯಣದ ರಾಮರಾಜ್ಯದ ಚಿತ್ರಣವೂ ಆಗಿದೆ. ಭಾರತದ ಭದ್ರವಾದ ಬುನಾದಿಯನ್ನು ನಾವು ಇಲ್ಲಿ ಕಾಣಬಹುದು; ಕಂಡು ಹೆಮ್ಮೆಪಡಬಹುದು.

ಪ್ರತಿಯೊಂದು ಜೀವಿಯೂ ಬದುಕಿನಲ್ಲಿ ಹಲವಾರು ಸಮಸ್ಯೆಗಳನ್ನು, ಸಂಕಷ್ಟಗಳನ್ನು ಎದಿರಿಸಬೇಕಾಗಿ ಬರುತ್ತದೆ. ಅವು ಅನಿವಾರ್ಯವೆನ್ನುವುದರಿಂದ, ಯಾರೂ ಧೃತಿಗೆಡದೆ ಅವುಗಳಿಗೆ ಸರಿಯಾದ ಪರಿಹಾರಗಳನ್ನು ಕಂಡುಕೊಳ್ಳಬೇಕು. ತನಗೆ ಸ್ವತಃ ಪರಿಹಾರ ತೋರದೆ ಇದ್ದಲ್ಲಿ, ಹಿತಚಿಂತಕರಿಂದ, ಅನುಭವಶಾಲಿಗಳಿಂದ ತಿಳಿದು ಸರಿಪಡಿಸಿಕೊಳ್ಳತಕ್ಕದ್ದು. ಇದು ಬದುಕುವ ದಾರಿ. ಹಗಲಿನಿಂದ ಕತ್ತಲೆಯೂ, ಶೀತದಂತೆ ಉಷ್ಣವೂ, ಕಷ್ಟದಂತೆ ಸುಖವೂ, ಲಾಭದಂತೆ ನಷ್ಟವೂ, ಗೆಲುವಿನಂತೆ ಸೋಲೂ, ಜೀವಿಯ ಬದುಕಿನಲ್ಲಿ ಸಂಮ್ಮಿಶ್ರ. ಇವೆಲ್ಲವುಗಳಲ್ಲಿಯೂ ಸಮತೋಲನವನ್ನು ಕಾಪಾಡಿಕೊಂಡು ಜೀವಿಸುವವನೇ ಯೋಗ್ಯವ್ಯಕ್ತಿ. ವಿಘ್ನಗಳು ನೂರಾರು ಬಂದರೂ, ಯಾರು ವಿಚಲಿತರಾಗುವುದಿಲ್ಲವೋ ಅವರೇ ಧೀರರು ಎಂಬ ಮಾತಿದೆ. ಹಾಗಾಗಿ ಒಬ್ಬನ ಧೈರ್ಯವನ್ನು, ಯೋಗ್ಯತೆಯನ್ನು ಪರೀಕ್ಷಿಸಲು ವಿಘ್ನಗಳು ಬರುತ್ತದೆ ಎಂದೂ ನಾವು ಸಮಧಾನಪಟ್ಟುಕೊಳ್ಳಬಹುದು. ಜೀವನಾಕಾಶದಲ್ಲಿ ಸುಖದ ಮಿಂಚು ಒಮ್ಮೊಮ್ಮೆ ಮಾತ್ರ ಮಿನುಗುತ್ತಿದ್ದರೆ. ದುಃಖದ ಕಾರ್ಮೋಡಗಳು ವಿಸ್ತಾರವಾಗಿ ಆವರಿಸಿಕೊಂಡಿರುತ್ತವೆ. ಪ್ರಕೃತಿ, ಪರಿಸ್ಥಿತಿ ಇಂತಿರುವಾಗ ಕಷ್ಟನಷ್ಟಗಳಿಗೆ, ಸಮಸ್ಯೆಗಳಿಗೆ ಅಂಜದೆ ಅಳುಕದೆ ಎದೆಗಾರಿಕೆಯಿಂದ, ಸಹನೆಯಿಂದ ಎಲ್ಲವನ್ನು ಸಮಚಿತ್ತರಾಗಿ ಇದಿರಿಸಿ ಬಾಳಿದವರೇ ಯೋಗ್ಯವೆನಿಸುತ್ತಾರೆ. ಇತರ ಜೀವಜಂತುಗಳ ಹುಟ್ಟಿಗಿಂತ ಮಿಗಿಲೆನಿಸಿದ ಮನುಷ್ಯಜನ್ಮದಲ್ಲಿ ಜನಿಸಿ ಬಂದ ಹಿರಿಯ ಯೋಗ್ಯತೆಗೆ, ವಿವೇಕ ವಿಚಕ್ಷಣತೆಗೆ, ಸದಾ ಶಾಂತ ಚಿತ್ತದ ಬಾಳುವೆ ಬದುಕತಕ್ಕದ್ದು. ಇದು ಮನುಷ್ಯನ ಸಂಸ್ಕಾರಗಳಲ್ಲಿ ಪ್ರಮುಖವಾದೊಂದು ವಿಷಯವಾಗಿದೆ.

ತನ್ನ ಸಂಕಷ್ಟಗಳಲ್ಲಿ ಶಾಂತಚಿತ್ತತೆಯನ್ನು ಕಾಪಾಡಿ ಬದುಕುವುದು ಎಷ್ಟು ಯೋಗ್ಯವೋ, ಅವಶ್ಯವೋ, ಅಷ್ಟೇ ಇತರರ ದುಃಖ ಸಂಕಷ್ಟ ಸಮಸ್ಯೆಗಳಲ್ಲಿ ನಾವು ಸಹಾನುಭೂತಿಪರರಾಗಿರತಕ್ಕದ್ದು. ದುಃಖಿತರ ದೀನ ದರಿದ್ರರ ಕಣ್ಣೀರನ್ನು ಒರೆಸುವುದು ನಿಜವಾದ ಭಾಗ್ಯ. ನಮ್ಮ ಸಂಕಷ್ಟಕಾಲದಲ್ಲಿ ಅನ್ಯರಿಂದ ಸಹಾಯ ಸಹಾನುಭೂತಿ ಪಡೆಯಬೇಕಾದರೂ, ನೆರೆಕರೆಯವರಲ್ಲಿ, ಸಮಾಜದ ಬಂಧುಗಳಲ್ಲಿ ನಮ್ಮ ವರ್ತನೆಯೂ ನಿರ್ವಂಚನೆಯದೂ ಉದಾರವೂ ಆದುದು ಆಗಿರತಕ್ಕದ್ದು. ಇತರರ ಸಮಸ್ಯೆಗಳಿಗೆ ನಾವು ಅವರಿಗೆ ಪರಿಹಾರ ದೊರಕಲು ಸಹಾಯವಿತ್ತರೆ ಅವರೂ ಅದರಂತೆ ಪ್ರತಿಕ್ರಿಯಿಸುವುದು ಸಹಜ ಗುಣ; ಪ್ರತಿಯೊಂದು ಕ್ರಿಯೆಗೂ ಸಮಾನಾದ ಪ್ರತಿಕ್ರಿಯೆ ಇದ್ದೇ ಇದೆ ಇತರರಿಗೆ ಒಳ್ಳೆಯದನ್ನು ಬಗೆದರೆ ನಮಗೂ ಅವರು ಒಳ್ಳೆಯದನ್ನೇ ಬಗೆವಂತೆ, ಕೆಟ್ಟದನ್ನು ಮಾಡಿದರೆ ಕೆಟ್ಟದ್ದೇ ಒದಗೀತು ಎಂಬುದು ಮಾನವನ ಸಹಜ ಸ್ವಭಾವ. ಅನ್ಯೋನ್ಯತೆ, ಆತ್ಮೀಯತೆ ಮನುಷ್ಯಜೀವಿತದ ಸಂಸ್ಕಾರ.

ಬುದ್ಧ ಸಾಹಿತ್ಯದಲ್ಲಿ ಅನ್ಯರ ಸಂಕಷ್ಟಕಾಲದಲ್ಲಿ ಮಾಡಿದ ಉಪಕಾರದ ಉತ್ತಮ ಫಲದ ಕುರಿತು ಒಂದು ಉದಾತ್ತ ಕಥೆಯಿದೆ; ಶ್ರಾವಸ್ತಿಪುರದಲ್ಲಿ ಒಂದು ಸುಡುಬಿಸಿಲಿನ ದಿನ ಮಾತಂಗಿಯೊಬ್ಬಳು ಬಾವಿಯಿಂದ ನೀರೆಳೆಯುತ್ತಿದ್ದಳು. ಆ ದಾರಿಯಲ್ಲಿ ಪಯಣಿಸುತ್ತಿದ್ದ ಬುದ್ಧಶಿಷ್ಯ ಆನಂದನೆಂಬ ಭಿಕ್ಷು ಬಾವಿಯ ಬಳಿ ಬಂದು. 'ಭಗಿನಿ, ನನಗೆ ತುಂಬಾ ಬಾಯಾರಿಕೆಯಾಗಿದೆ; ದಯೆ ಮಾಡಿ ನೀರನೆರೆ' ಎಂದು ಬೊಗಸೆ ಕೈಚಾಚಿದನು. 'ಅಯ್ಯೋ, ನಾನು ಚಂಡಾಳಿ, ನೀಚ ನಾರಿಯ ಕೈಯ ನೀರು ಕುಡಿಯಬಹುದೇ?' ಎಂದು ಅಂಜುತ್ತಾ ಕೇಳಿದಳಾಕೆ. 'ನೋಡು, ನಾನು ಜಾತಿ ಕೇಳಲಿಲ್ಲ; ನೀರು ಕೇಳಿದೆ, ನನಗೆ ದಾಹಿಸಿದೆ, ಗಂಟಲಾರಿದೆ, ನೀರನೆರೆ' ಎಂದು ಆತ ಅಂಗಲಾಚಿ ಬೇಡಿದನು. ಕೋಮಲಹೃದಯದ ಆ ತನ್ವಿ ಮಾತಂಗಿ, ನಸುಬಾಗಿ, ಕೆಂದಾವರೆಯಂತಹ ಚೆಂದದ ಬೊಗಸೆ ಚಾಚಿದ ಸುಂದರನಾದ ಭಿಕ್ಷುವಿಗೆ, ಮೆಲ್ಲಮೆಲ್ಲನೆ ತಂಪುನೀರನ್ನೆರೆದಳು. ಭಿಕ್ಷು ಆನಂದನು ಅದನ್ನು ಹೀರುತ್ತಾ ಸಂತೃಪ್ತಿಗೊಂಡನು. ಇದನ್ನು ಕಂಡು ಮಾತಂಗಿ ಉಲ್ಲಸಿತಳಾದಳು; ಬಿಕ್ಷುವಿನ ಬಳಲಿಕೆ ನೀಗಿತು; ನರಗಳು ಬೀಗಿದವು. ಮತ್ತೆ ಮೋದಗೊಂಡು ಭಿಕ್ಷು ಹೇಳುತ್ತಾನೆ: 'ತಂಗೀ, ಲೋಕವಂದ್ಯನಾದ ನನ್ನ ಗುರು ನಿನ್ನನ್ನು ಹರಸುವನು' – ಹೀಗೆ ಹೇಳಿ ಭಿಕ್ಷು ಹೊರಟುಹೋದನು. ಮಾತಂಗಿಗೆ ಭಿಕ್ಷುದರ್ಶನದ ಸಂತಸದ ಗುಂಗು; ಆತನ ಗುರುವರನನ್ನು ಕಾಣುವ ಬಯಕೆ ಬಲವಾಗಿ ಮಾತಂಗಿ ಬುದ್ಧನ ಆಶ್ರಮಕ್ಕೆ ಹೋಗುತ್ತಾಳೆ; ಅಲ್ಲಿ ಬುದ್ಧದೇವನ ದರ್ಶನವಾಯಿತು; ಮುಂದೆ ಅಲ್ಲಿಯೇ ಆಶ್ರಮದಲ್ಲಿ ಭಿಕ್ಷುಣೀಮಂದಿರದಲ್ಲಿ ನೆಲಸಿ, ಬುದ್ಧವಾಣಿಯಿಂದ ಮಾತಂಗಿ ಪರಮಪವಿತ್ರಳಾದಳು. ಕೇವಲ ಒಬ್ಬ ದಾರಿಹೋಕನ ಬಾಯಾರಿಕೆ ನಿವಾರಿಸಲು ಬಾವಿಯ ನೀರನ್ನೆತ್ತಿ ಎರೆದ ಮಾತಂಗಿಯ ಪುಣ್ಯದ ಫಲವನ್ನು, ಆಕೆ ಪವಿತ್ರಳಾಗಿ ಭಿಕ್ಷುಣಿಯಾಗಿ ಸಮುನ್ನತಿ ಪಡೆದ ಕಥೆಯನ್ನು ಇದು ತಿಳಿಸುತ್ತದೆ. ಅನಿರೀಕ್ಷಿತವಾಗಿಯೂ, ಅಪ್ರಯತ್ನದಿಂದಲಾದರೂ ಇತರರ ಸಂಕಷ್ಟಕಾಲದಲ್ಲಿ ಮಾಡಿದ ಸಹಾನುಭೂತಿಪರವಾದ ಕಿಂಚಿತ್ ಸಹಾಯವೂ ನಮ್ಮ ಜೀವನವನ್ನು ಪರಮಪವಿತ್ರವಾಗಿಸುತ್ತದೆ ಎಂಬ ನೀತಿಯನ್ನು ಈ ಜಾತಕ ಕಥೆ ಸಾರುತ್ತದೆ. ಶ್ರೀರಾಮನಿಗೆ ವನವಾಸದ ಆ ದಿನಗಳಲ್ಲಿ ಕಷ್ಟಜೀವನದ ಸಂದರ್ಭದಲ್ಲಿ, ಮುದಿ ಶಬರಿಯೊಬ್ಬಳು, ತಾನೇ ಮೊದಲು ರುಚಿನೋಡಿ ನೀಡಿದ ಹಣ್ಣಿನ ಪುಣ್ಯಫಲ ಆಕೆಯ ಜೀವನವನ್ನು ಉದ್ಧರಿಸಿತು–ಎಂಬ ಕಥೆ ರಾಮಾಯಣದಲ್ಲಿಯೂ ಬರುತ್ತದೆ.

'ಸಂತೋಷಂ ಜನಯೇತ್ ಪ್ರಾಜ್ಞಃ ತದೇವೇಶ್ವರಪೂಜನಂ'

ಎಂಬ ವಾಣಿ ಸ್ಮರಣೀಯ ಹಾಗೂ ಮಾರ್ಗದರ್ಶಕ. ಕಲ್ಲು, ಮರ, ಮಣ್ಣುಗಳಿಂದ ಮೂರ್ತಿಗಳನ್ನು ಕೆತ್ತಿಮೆತ್ತಿ ದೊಡ್ಡ ದೊಡ್ಡ ದೇವಾಲಯಗಳನ್ನು ಕಟ್ಟಿ ಮಾಡುವ ದೇವರ ಆರಾಧನೆಗಳಿಗಿಂತಲೂ, ಇತರರಿಗೆ ಸಂತೋಷವನ್ನು ನಾವು ಒಂದಿಷ್ಟಾದರೂ ನಮ್ಮ ನಡತೆಯಿಂದ ನೀಡಬಲ್ಲೆವಾದರೆ, ನಿಜವಾದ ದೈವಭಕ್ತರೆನಿಸುವೆವು– ಎಂಬ

ಈ ಸೂಕ್ತ ಮನನೀಯ; ಮನುಷ್ಯನ ನಿಜವಾದ ಕರ್ತವ್ಯಕರ್ಮವನ್ನು ಈ ನೀತಿವಾಕ್ಯ ತಿಳಿಸುತ್ತದೆ.

ಉಪಕಾರಗೈದವರಿಗೆ ಪತ್ಯುಪಕಾರ ಮಾಡುವುದು ಒಂದು ರೀತಿಯಲ್ಲಿ ಸಹಜಗುಣ. ಅದು ಒಳ್ಳೆಯ ನಡತೆಯೇ ಸರಿ. ಆದರೆ ಅದಕ್ಕಿಂತಲೂ ಹಿರಿದಾದ ಉತ್ತಮ ನಡತೆಯೆಂದರೆ ನಮಗೆ ಅನ್ಯಾಯಗೈದವರಿಗೂ ನ್ಯಾಯ ನೀಡುವುದು. ಉಪದ್ರವವಿತ್ತವರಿಗೂ ಉಪಕಾರ ಮಾಡುವುದು. ಶ್ರೀರಾಮನನ್ನು ಹದಿನಾಲ್ಕು ವರ್ಷ ಕಾಡಿಗಟ್ಟಿ ತನ್ನ ಮಗ ಭರತನಿಗೆ ಸಾಮ್ರಾಜ್ಯಪಟ್ಟವನ್ನೂ ಸಕಲಸಂಪತ್ತು ಸಂಭ್ರಮಗಳನ್ನೂ ಕೈಕೇಯೂ ದಶರಥನಿಂದ ವರ ಪಡೆದಳು, ಹೀಗಿದ್ದರೂ ಶ್ರೀರಾಮನು ತನ್ನ ಚಿಕ್ಕತಾಯಿಯ, ಕೈಕೇಯಿಯ ಬಳಿ ಬಂದು, ಹೇಳುತ್ತಾನೆ; 'ತಾಯೇ, ನನ್ನನ್ನು ವನವಾಸಕ್ಕೆ ಕಳುಹಿಸುವುದರಿಂದ ನನ್ನ ಒಬ್ಬನ ದೇಹರಕ್ಷಣೆಯ ಹೊಣೆಗಾರಿಕೆ ಮಾತ್ರ ನನಗೆ ಇತ್ತು ಉಪಕಾರ ಮಾಡಿದೆ. ಆದರೆ, ನಿನ್ನ ಮಗ ಭರತನ ಮೇಲೆ ಇಡೀ ರಾಜ್ಯದ ಆಡಳಿತದ, ಸಕಲರ ಸಂರಕ್ಷಣೆಯ ಹಿರಿದಾದ ಭಾರವನ್ನು ಹೊರಿಸಿದಿ. ನಮ್ಮಿಬ್ಬರಲ್ಲಿ ವಾತ್ಸಲ್ಯದಿಂದ ನನಗೇ ಹೆಚ್ಚು ಉಪಕಾರ ಮಾಡಿದಿ. ನಿನ್ನೀ ಪ್ರೀತಿಯನ್ನು ನಾನು ಮರೆಯಲರೆ; ನನ್ನನ್ನು ಹರಸಿ ಕಾಡಿಗೆ ಕಳುಹಿಸಿಕೊಡುವ ಉಪಕಾರಮಾಡು.' ಇಂತು ಶ್ರೀರಾಮನು ಬೇಡಿಕೊಳ್ಳುತ್ತಾನೆ. ಇಂತಹ ಸದ್ಭಾವನೆ, ನಡತೆ, ಸಂಸ್ಕಾರವೇ ಶ್ರೀರಾಮನನ್ನು ಕೌಸಲ್ಯಾ – ದಶರಥ ದಂಪತಿಗಳ ಪುತ್ರನಾದ – ದೇವರ ಅವತಾರ ಪುರುಷನನ್ನಾಗಿ ಜನತೆ ನಿತ್ಯ ಆರಾಧಿಸುವಂತೆ ಮಾಡಿತು ಎಂದು ನಾವು ಅರ್ಥಮಾಡಿಕೊಳ್ಳಬಹುದು.

ಎಂತಹ ಕಷ್ಟಕಾಲದಲ್ಲಿಯೂ ಸತ್ಪುರುಷರು ಸತ್ಯದ ದಾರಿಯಿಂದ ವಿಚಲಿತರಾಗರು ಎಂಬುದಕ್ಕೆ ಹರಿಶ್ಚಂದ್ರನ ಕಥೆ ಒಂದು ಉತ್ತಮ ಉದಾಹರಣೆ. ಎಳೆಯ ಹರೆಯದಲ್ಲಿ ಹರಿಶ್ಚಂದ್ರನಾಟಕ ನೋಡಿಯೇ ತನಗೆ ಸತ್ಯಪಾಲನೆ ಶ್ರದ್ಧೆ ಉಂಟಾಯಿತೆಂದು ಗಾಂಧೀಜಿ ಆತ್ಮಕಥೆಯಲ್ಲಿ ಬರೆದಿದ್ದಾರೆ. ಆ ಸತ್ಯಹರಿಶ್ಚಂದ್ರನ, ಸತ್ಯಪಾಲನೆಯ ವ್ರತದ ಮಹೋನ್ನತಕಾರ್ಯವನ್ನು ರಾಷ್ಟ್ರಕವಿ ಗೋವಿಂದ ಪೈ, ತನ್ನ ಒಂದು ಚತುರ್ದಶಪದಿಯಲ್ಲಿ ಅತ್ಯಂತ ಮಾರ್ಮಿಕವಾಗಿ ಚಿತ್ರಿಸಿದ್ದಾರೆ; ಹರಿಶ್ಚಂದ್ರನು ಸತ್ಯವಾಕ್ಯಪರಿಪಾಲನಾರ್ಥ, ತನ್ನ ರಾಜ್ಯಸರ್ವಸ್ವವನ್ನೂ ವಿಶ್ವಾಮಿತ್ರನಿಗೆ ಧಾರೆಯೆರೆದು ಮತ್ತೂ ಋಣ ತೀರದಿರಲು, ರಾಜ್ಯದ ಹೊರಗಿರುವ ಕಾಶೀಪಟ್ಟಣಕ್ಕೆ ಹೋಗಿ. ಹೆಂಡತಿ ಮತ್ತು ಮಗನನ್ನು ಒಬ್ಬ ಬ್ರಾಹ್ಮಣನ ಮನೆಯಲ್ಲಿ ಒತ್ತೆಯಿಟ್ಟು, ತಾನು ವೀರ ಬಾಹುಕನೆಂಬ ಚಂಡಾಲನ ಆಳಾಗಿ ಸ್ಮಶಾನ ಕಾಯುವ ಕೆಲಸ ಮಾಡಿ ಋಣ ತೀರಿಸುತ್ತಾನೆ ಈ ಮಧ್ಯೆ ಬ್ರಾಹ್ಮಣನ ಮನೆಯಲ್ಲಿ ಕಟ್ಟಿಗೆ ತರಲು ಹೋದ ಹರಿಶ್ಚಂದ್ರನ ಮಗ ಲೋಹಿತಾಶ್ವನು ಸರ್ಪ ಕಚ್ಚಿ ಸಾಯಲು, ತಾಯಿ ಚಂದ್ರಮತಿ ಮನೆಚಾಕರಿಯನ್ನು ಮಾಡಿ ಮುಗಿಸಿ, ರಾತ್ರಿ ಹೊತ್ತು ಮಗ ಲೋಹಿತಾಶ್ವನ ಶವ ಹೊತ್ತುಕೊಂಡು ರುದ್ರ

ಭೂಮಿಗೆ ತರುವಳು; ಅಲ್ಲಿ, ಜತೆಯಲ್ಲಿ ಉರಿದು ಉಳಿದ ಕಟ್ಟಿಗೆಗಳ ತುಂಡುಗಳನ್ನೆಲ್ಲಾ ಒಟ್ಟುಮಾಡಿ, ಮಗನಿಗೆ ಚಿತೆ ನಿರ್ಮಿಸಿ, ಆತನ ಶವವನ್ನು ಅದರಲ್ಲಿರಿಸಿ ಕೊನೆಗೊಮ್ಮೆ ಗೋಳೋ ಎಂದು ಆಳುತ್ತಾಳೆ. ಈ ರೋದನವನ್ನು ಕೇಳಿ, ಸ್ಮಶಾನದ ಕಾವಲುಗಾರ ಹರಿಶ್ಚಂದ್ರ ಓಡಿಬರುತ್ತಾನೆ; 'ಯಾರದು ಒಪ್ಪಿಗೆ ಪಡೆಯದೆ ಹೆಣ ಸುಡುತ್ತಾರೆ' ಎಂದು ಗದರಿಸುತ್ತಾ ಬಂದವನು, ಚಂದ್ರಮತಿಯನ್ನೂ ಜತೆಯಲ್ಲಿರುವ ಮಗನ ಶವವನ್ನೂ ಗುರುತಿಸಿದರೂ, ವೀರಬಾಹುಕನ ಆಳಾಗಿರುವ ತಾನು, ಏನೂ ಮಾಡಲಾರದೆ, "ಇಲ್ಲಿ ಹೆಣ ಸುಡುವವರು ಆ ಬಗ್ಗೆ ದ್ರವ್ಯವನ್ನೂ, ಹೆಣದ ಬಟ್ಟೆಯನ್ನೂ ಕೊಡಲೇಬೇಕು" ಎಂದಾಗ ಚಂದ್ರಮತಿ ಬಿಕ್ಕಿ ಅಳುತ್ತಾ, ತಾನು ಬಡವಳು, ತನ್ನಲ್ಲಿ ಹಣವಿಲ್ಲವೆಂದಾಗ 'ಹಣ ನನಗೆ ಸಲ್ಲ ತಕ್ಕದ್ದು, ಅದನ್ನು ಬಿಟ್ಟೆ, ಆದರೆ ಬಟ್ಟೆ ನನ್ನ ದಣಿಗೆ ಕೊಡಬೇಕಾದದ್ದು, ಅದನ್ನು ನೀಡದೆ ಹೆಣ ಸುಡಲು ಬಿಡಲಾರೆ' ಎಂದಾಗ. ಚಂದ್ರಮತಿ ತಾನುಟ್ಟ ಬಟ್ಟೆಯಿಂದ ಒಂದು ಭಾಗ ಹರಿದು ಕೊಡುವೆನೆಂದು ಸೀರೆಗೆ ಕೈಯಿಕ್ಕಿದಾಗ, ಗಗನದಲ್ಲಿ ಗರಗರನೆ ದೇವವಿಮಾನವೊಂದು ಇಳಿದು ಬಂದು ಈ ಮಾತು ಹೇಳಿತು : 'ಅಯ್ಯಾ, ನಿಮ್ಮಂತಹ ಸತ್ಯಸಂಧರು ಈ ಪಾಪಿಲೋಕದಲ್ಲಿ ಇರತಕ್ಕವರಲ್ಲ; ಬನ್ನಿ ಸ್ವರ್ಗಕ್ಕೆ; ಈ ವಿಮಾನವೇರಿ' ಎಂದಾಗ. ಸತ್ಯಹರಿಶ್ಚಂದ್ರನು ಉನ್ಮುಖನಾಗಿ ಇಂತು ಹೇಳುತ್ತಾರೆ :

'ಶ್ವಪಚನಂ ಬಿಟ್ಟು ನಾ ದಿವಕೇರ್ವೆನೆಂತು?'

"ನನ್ನ ದಣಿ ಚಂಡಾಲ ವೀರಬಾಹುಕನನ್ನು ಬಿಟ್ಟು ಆತನ ಋಣ ತೀರಿಸದೆ ನಾನು ಸ್ವರ್ಗಕ್ಕೆ ಹೇಗೆ ಬರಲಿ?' ಎಂದು 'ಮಹಾಕವಿ ರಾಘವಾಂಕನು ಬರೆದ ಹರಿಶ್ಚಂದ್ರ ಕಾವ್ಯದ ಘನೀಭೂತವಾದ ನೀತಿಯ ತಿರುಳು–ಸಾರಸರ್ವಸ್ವವನ್ನು ಈ ಚತುರ್ದಶ ಪದಿಯಲ್ಲಿ ಪೈಗಳು ತೋರಿಸಿದ್ದಾರೆ. ಈ ಮಾಂತ್ರಿಕ ಶೈಲಿಯ ಚತುರ್ದಶ ಪದಿಯೇ ಮಹಾಕಾವ್ಯದ ಸಾರವನ್ನು ಧ್ವನಿಸುತ್ತದೆ. ಕೇವಲ ಸತ್ಯವಾಕ್ಯಪಾಲನೆಗಾಗಿ ಸರ್ವಸ್ವವನ್ನೂ, ತನ್ನನ್ನೂ, ಹೆಂಡತಿಮಗನನ್ನೂ ಇತರರಿಗೆ ಮಾರಿದುದು, ತನ್ನ ಮಗನೇ ಸತ್ತು ಆತನ ಹೆಣ ಕಣ್ಣಮುಂದಿದ್ದರೂ, ಮುಂದೆ, ಶಿಶುಹತ್ಯೆ ಆರೋಪದಿಂದ ಚಂದ್ರಮತಿಯನ್ನು ವಧಾಗೃಹದಲ್ಲಿ ಸೇವೆ ಮಾಡುತ್ತಿರುವ ತಾನೇ ವಧಿಸಲು ಖಡ್ಗದ ಧಾರೆಯಿಂದ ದೇವರೇ ಪ್ರತ್ಯಕ್ಷನಾಗಿ ಸತ್ಯಪಾಲನೆಯ ಪುಣ್ಯಫಲ ಹರಿಶ್ಚಂದ್ರನಿಗೆ ದೊರೆತುದು–ಇವೆಲ್ಲವೂ ಭಾರತೀಯ ಸಂಸ್ಕೃತಿಯ ಪರಮೋಚ್ಚ ವಿಷಯಗಳಾಗಿವೆ.

ಭಾರತೀಯ ಸಾಹಿತ್ಯ ಸಂಸ್ಕೃತಿ ಉತ್ತಮಾದರ್ಶವೊಂದನ್ನು ಈ ಕಥೆಯ ಕೊನೆಯಲ್ಲಿ ಕಾಣಬಹುದು. ಜೀವನವು ದುಃಖಮಯವೆಂದೇನೋ ಪಾಶ್ಚಿಮಾತ್ಯರು ದುಃಖಾಂತ ಕಥೆಗಳನ್ನು ಬರೆಯುತ್ತಾರೆ; ಮೆಚ್ಚುತ್ತಾರೆ. ಆದರೆ ಭಾರತೀಯ ಲೇಖಕರು, ಎಷ್ಟೇ ಕಷ್ಟ ಬಂದರೂ ಸತ್ಯ ನೀತಿಗಳನ್ನು ಬಿಡದೆ ಅವನ್ನು ಪಾಲನೆ ಮಾಡಿದವರಿಗೆ,

ಹರಿಶ್ಚಂದ್ರನಿಗೆ ಲಭಿಸಿದಂತೆ ಪುನಃ ಶ್ರೇಯಸ್ಸು, ರಾಜ್ಯಭಾರಗಳೂ, ಸಕಲ ಸಂಪತ್ತುಗಳೂ, ಮೃತ್ಯುವಿನೊಡನೆ ಹೋರಾಡಿದ ಪುತ್ರನ ಪುನರ್ಜೀವ ಎಲ್ಲವೂ ಒದಗಿ ಸುಖಾಂತವಾಗುವಂತೆ ಮಾಡುತ್ತಾರೆ. ಇದರಲ್ಲೂ ಒಂದು ಒಳ್ಳೆಯ ಪಾಠವಿದೆ. ಉತ್ತಮ ನಡತೆಯಲ್ಲಿ ಮುನ್ನಡೆದವನಿಗೆ ಜೀವನದಲ್ಲಿ ದುರಂತವೇ ಕೊನೆಗೂ ಒದಗಿದಲ್ಲಿ ಯಾರೂ ಒಳ್ಳೆಯ ನಡತೆ ಅನುಸರಿಸಲಾರರು; ಅದರ ಬದಲು ಎಷ್ಟೇ ಕಷ್ಟ ಬಂದರೂ, ಸರಿದಾರಿಯಲ್ಲಿ ನಡೆದವರು ಸತ್ಯಸಂಧರು, ಕೊನೆಗೆ ಸುಖಸಂತೋಷ ಅನುಭವಿಸುತ್ತಾರೆಂದು ಚಿತ್ರಿಸಿದಲ್ಲಿ ಸನ್ಮಾರ್ಗದಲ್ಲಿ ನಡೆವ ವ್ರತನಿಷ್ಠರಾಗುವರು. ಹಾಗಾಗಿ ಸಾಹಿತ್ಯದಲ್ಲಿಯೂ, ಜೀವನದಲ್ಲಿಯೂ ದುರಂತವನ್ನು ಚಿತ್ರಿಸದೆ, ಸುಖಾಂತವನ್ನೇ ತೋರಿಸುವುದು, ಅನುಭವಿಸುವುದು ಸಂಪೂರ್ಣ ಯೋಗ್ಯವಾಗಿದೆ; ಸಂಸ್ಕಾರವೂ ಆಗಿದೆ. ಈ ದೃಷ್ಟಿಯಲ್ಲಿ ಭಾರತೀಯ ಸಾಹಿತ್ಯ ಕಥೆಗಳ ಸುಖಾಂತ ಸ್ವರೂಪವನ್ನು ನಾವು ಮೆಚ್ಚಬೇಕಾಗಿದೆ; ಮೆಚ್ಚುತ್ತೇವೆ.

ಹೀಗಿದ್ದರೂ, ನಮ್ಮ ನಾಡಿನ ಆಧುನಿಕ ಲೇಖಕರು, ಕವಿ ಶ್ರೇಷ್ಠರು, ಪಾಶ್ಚಾತ್ಯ ದುರಂತ ಕಥೆಗಳ, ಕಾವ್ಯಗಳ ಹಾಗೂ ಭಾರತೀಯ ಸುಖಾಂತ ಕಾವ್ಯನಾಟಕಾದಿಗಳ ಮಿಶ್ರಣಾಭ್ಯಾಸದ ಪ್ರಭಾವದಿಂದ ದುರಂತ –ಸುಖಾಂತಗಳ ಒಂದು ಮಿಶ್ರ ರೂಪದ ಚಿತ್ರಣವನ್ನು ನೀಡಿದ್ದಾರೆ. ಅದರಲ್ಲಿನ ಅಂತರ್ಗತ ಭಾವನೆ ಸತ್ವ ಧ್ವನಿ ಸಂಪೂರ್ಣ ಮಾನವೀಯತೆಯ ಸತ್‌ಸ್ವಭಾವ ನಿರೂಪಣೆಯೇ ಆಗಿ ಕಂಡುಬರುತ್ತದೆ. ಕುವೆಂಪು ಮಹಾಕವಿ ತಮ್ಮ ಶ್ರೀರಾಮಾಯಣದರ್ಶನಂ ಮಹಾಕಾವ್ಯದಲ್ಲಿ ಚಿತ್ರಿಸಿದ ಮಂಥರೆ ಇದಕ್ಕೆ ಸಾಕ್ಷಿಯಾಗಿದೆ. ದಸ್ಯುಶಿಶುವಾಗಿ ಕಾಡಿನಲ್ಲಿ ಬಿದ್ದಿದ್ದ ವಿಕಾರ ರೂಪದ ಮಗುವನ್ನು ಕಂಡು, ಕರುಣೆಯಿಂದ ಕೇಕಯ ರಾಜನು ಅರಮನೆಗೆ ತಂದು ಸಾಕಿದ; ಬೆಳೆದಂತೆ ಆ ಮಗು ಮತ್ತಷ್ಟು ವಿಕಾರವಾಗಿ, ಅಸಹ್ಯವಾಗಿ ತೋರಿದ್ದರಿಂದ ಅರಮನೆಯಲ್ಲಿ ಯಾರೂ ಬಳಿಸೇರಿಸದಿದ್ದರೂ, ಕೇಕಯ ರಾಜ ತನ್ನ ಮಗಳು ಕೈಕೇಯಿಯನ್ನು ಸಾಕಲು ಮಂಥರೆಗೆ ಒಪ್ಪಿಸಿದನು; ಅದರಿಂದಾಗಿ ಆಕೆಗೆ ಕೈಕೇಯಿಯೇ ಪ್ರೀತಿಯ ಸರ್ವಸ್ವವಾದಳು. ಮುಂದೆ ಕೈಕೇಯಿ ದಶರಥನ ರಾಣಿಯಾಗಿ ಅಯೋಧ್ಯೆಗೆ ಹೋದಾಗ, ಮಂಥರೆಯೂ ಅಯೋಧ್ಯೆಗೇ ಬಂದಳು. ಅಲ್ಲಿಯೂ ಆಕೆಯನ್ನು ಯಾರೂ ಹತ್ತಿರ ಸೇರಿಸಲಿಲ್ಲ. ಬಾಲಕ ಶ್ರೀರಾಮನನ್ನು ಎತ್ತಿ ಕೊಳ್ಳಲು ಹೋದಾಗ ಕೌಸಲ್ಯೆ 'ನೀನು ಮುಟ್ಟಬಾರದು' ಎಂದು ಹೀನೈಸಿದಳು. ಮಂಥರೆಗೆ ಕೈಕೇಯಿ ಮತ್ತು ಆತನ ಮಗ ಭರತನೇ ಸರ್ವಸ್ವವಾದರು. ಆ ನಿಮಿತ್ತವಾಗಿಯೇ ಶ್ರೀರಾಮನಿಗೆ ವನವಾಸ, ಭರತನಿಗೆ ರಾಜ್ಯಭಾರವಾಗಬೇಕೆಂಬ ವರವನ್ನು ದಶರಥನೊಡನೆ ಕೇಳುವಂತೆ ಮಂಥರೆ ಕೈಕೇಯಿಯನ್ನು ಪ್ರೇರೇಪಿಸಿ ಯಶಸ್ವಿಯಾದಳು. ಆಕೆ ಪ್ರೀತಿಸಿದವರಿಗೇ ಸುಖ ಸಂಪತ್ತು ಅಧಿಕಾರ ಎಲ್ಲಾ ಲಭಿಸಬೇಕೆಂಬುದೇ ಮಂಥರೆಯ ಏಕಮಾತ್ರ ಧ್ಯೇಯವಾಗಿತ್ತು; ಶ್ರೀರಾಮ ಕಾಡಿಗೆ ಹೋದ ಮೇಲೆ, ಮಾತುಲನ ಮನೆಯಲ್ಲಿದ್ದ ಭರತನು ಅಯೋಧ್ಯೆಗೆ

ಬಂದಾಗ, ತನ್ನ ಸೋದರ ಶ್ರೀರಾಮನನ್ನು ಕಾಡಿಗೆ ಅಟ್ಟುವಂತೆ ಪ್ರೇರೇಪಿಸಿದವಳು ಮಂಥರೆ ಎಂದು ತಿಳಿದು, ಆಕೆಗೆ ಹೊಡೆದು ಬಿಡುತ್ತಾನೆ. ಮುದಿ ಮಂಥರೆಗೆ ಪೆಟ್ಟಿನಿಂದ ಅಸದಳವಾದ ನೋವಾದರೂ, ತಾನು ಪ್ರೀತಿಸಿದ ಭರತನಿಗೆ ರಾಜ್ಯ ದೊರಕಬೇಕೆಂದು ಬಯಸಿ ತಾನೇ ಕೃತ್ಯ ಮಾಡಿದ್ದರೂ, ಈಗ ಅದೇ ತನ್ನ ಪ್ರೀತಿಯ ಭರತನಿಗೆ ಆತನ ಅಣ್ಣ ಶ್ರೀರಾಮನೇ ಬೇಕೆಂದಾಗ, ತನಗೂ ರಾಮನೇ ಬೇಕೆಂದು, ಪೆಟ್ಟಿನ ನೋವನ್ನೆಲ್ಲಾ ನುಂಗಿಕೊಂಡೇ, ಆಕೆ, ಶ್ರೀರಾಮನನ್ನು ಕಾಡಿನಿಂದ ಕರೆದು ತರುತ್ತೇನೆಂದು ಹೊರಟುಹೋಗುತ್ತಾಳೆ. 'ಓ ಭರತನನಣ್ಣಯ್ಯ, ರಾಮಯ್ಯ' ಎಂದು ಕೂಗುತ್ತಾ ಕಾಡಿಗೆ ಪ್ರವೇಶಿಸಿದಾಗ, ಅಲ್ಲಿ ಕಾಡ್ಗಿಚ್ಚು ಆಕೆಯ ದೇಹವನ್ನು ಸುಟ್ಟು ಬೂದಿಮಾಡಿತು. ಮಂಥರೆಯ ದೇಹ ಶ್ರೀಗಂಧದ ಕೊರಡು ಅಗ್ನಿ ಎಂದು ಕುವೆಂಪು ಶ್ಲಾಘಿಸುತ್ತಾರೆ. ಇಲ್ಲಿ ಮಂಥರೆಯ ಇಡೀ ಜೀವನ ಕಷ್ಟಮಯವಾದುದರಿಂದ, ಆಕೆಗೆ ಕೇವಲ ತನ್ನನ್ನು ಪ್ರೀತಿಸಿದ ಕೈಕೇಯಿ ಮತ್ತು ಆಕೆಯ ಮಗ ಭರತರೇ ಹತ್ತಿರದವರಾದ್ದರಿಂದ, ಅವರಿಗಾಗಿ ವರ ಬೇಡಿದರೂ, ಭರತನಿಗೆ ಶ್ರೀರಾಮನೇ ಬೇಕಾದರೆ ತನಗೂ ಬೇಕೆಂಬ ಆ ಪವಿತ್ರಪ್ರೇಮವನ್ನು ಶ್ರೀಗಂಧದ ಪರಿಮಳಕ್ಕೆ ಕುವೆಂಪು ಹೋಲಿಸಿದ್ದು – ಜೀವನದ ದುರಂತವಲ್ಲ–ಮಾನವೀಯ ಸದ್ಗುಣದ ಸುಖಾಂತವೆಂದೆನಿಸಿದೆ; ರಾಮನಾಮ ಜಪಿಸುತ್ತಾ ಆಕೆ ವೈಕುಂಠವನ್ನೇ ಸೇರಿದಳೆಂದು ಆಸ್ತಿಕರು ಭಾವಿಸುವಂತೆ ಆಗಿದೆ. ಹೀಗೆ ಪಾಶ್ಚಾತ್ಯ ಸಾಹಿತ್ಯದ ದುರಂತಸಿದ್ಧಾಂತವೂ, ನಮ್ಮ ನಾಡಿನ ಶ್ರೇಷ್ಠ ಕವಿಗಳ ರೀತಿಯಂತೆ ಪವಿತ್ರಾತ್ಮಕ್ಕೆ ಮಾತ್ರ ದೊರಕುವ ಪುಣ್ಯಫಲವಾಗಿ, ಆಸ್ತಿಕರ ರೀತ್ಯಾ ಮುಕ್ತಿದಾಯಕ ಸದ್ಗುಣವಾಗಿ, ಚಿತ್ರಿತವಾದುದು ಅತೀವ ಮನೋಜ್ಞವಾಗಿದೆ. ಇಂತು, ಭಾರತದ ಹಾಗೂ ಕನ್ನಡದ ಪ್ರಾಚೀನ ಮತ್ತು ಆಧುನಿಕ ಕವಿಶ್ರೇಷ್ಠರು ಹಲವರು ಉತ್ತಮ ಸಾಹಿತ್ಯಸಂಸ್ಕಾರವನ್ನು ಬೋಧಿಸಿದ್ದಾರೆ; ಮಾರ್ಗದರ್ಶನ ನೀಡಿದ್ದಾರೆ.

೧೧

ಭಾರತೀಯ ಜೀವನದಲ್ಲಿ ಯಜ್ಞ, ಯಾಗ, ಯೋಗ, ತಪಸ್ಸುಗಳಿಗೆ ಮಹತ್ವದ ಸ್ಥಾನವಿದೆ. ಅಂತಹ ಮಹತ್ವಕ್ಕೆ ಕಾರಣ ಅವೆಲ್ಲವೂ ಮಾನವನ ಬಾಳುವೆಯನ್ನು ಬೆಳಗಿಸಲು ಸಹಾಯಕಗಳು ಎಂಬುದು, ವಾಜಶ್ರವಸನು ಮಾಡಿದ ವಿಶ್ವಜಿತ್‌ಯಾಗದ ಕುರಿತು, ಆತನ ಕುಮಾರ ನಚಿಕೇತನು ಯಮಧರ್ಮನಿಂದ ಉಪದೇಶ ಪಡೆದ ವಿಚಾರ ಹಿಂದೆ ಪ್ರಸ್ತಾಪಿಸಿದೆ. ಈ ವಿಶ್ವಜಿತ್ ಯಾಗಕ್ಕೆ ಇಷ್ಟು ಮಹತ್ವ ಬರಲು ಕಾರಣವೆಂದರೆ, ಅದರಲ್ಲಿ ಬೇಡಿದವರಿಗೆ ಬೇಕಾದಷ್ಟನ್ನು ಕೊಡುವುದು, ತನ್ನಲ್ಲಿರುವ ಸರ್ವಸ್ವವನ್ನೂ ದಾನಮಾಡುವುದು. ಸೂರ್ಯವಂಶದ ಅರಸನಾದ ರಘುಮಹಾರಾಜನೂ ಈ ವಿಶ್ವಜಿತ್ ಯಾಗ ಮಾಡಿದವನು. (ರಘುಮಹಾರಾಜನಿಂದಲೇ ಸೂರ್ಯವಂಶಕ್ಕೆ ರಘುವಂಶವೆಂಬ ಹೆಸರೂ ಬಂತು–

ಕಾಳಿದಾಸನ ಒಂದು ಕಾವ್ಯದ ಹೆಸರು ರಘುವಂಶ) ರಘುಮಹಾರಾಜನಲ್ಲಿಗೆ ವಿಶ್ವಾಮಿತ್ರ ಋಷಿಯ ಶಿಷ್ಯನಾದ ಕೌತ್ಸನೆಂಬವನು ಬಂದು ಗುರುದಕ್ಷಿಣೆ ನೀಡಲು ದ್ರವ್ಯಸಹಾಯ ಕೇಳಿದನು; ಆ ಸಮಯಕ್ಕೆ ರಘುರಾಜನು ತನ್ನಲ್ಲಿದ್ದುದನ್ನೆಲ್ಲಾ ದಾನವಿತ್ತು ಮುಗಿಸಿದ್ದನು; ಆದರೂ ಕೌತ್ಸನ ಬೇಡಿಕೆಯನ್ನು ಪೂರೈಸಲು ಕುಬೇರನಿಂದ ದ್ರವ್ಯಪಡೆದು ದಾನಗೈದನೆಂದು ಕಥೆಯಿದೆ. ಕಾಳಿದಾಸನು 'ರಘುವಂಶ' ಕಾವ್ಯದ ಪ್ರಸ್ತಾವನಾ ಶ್ಲೋಕವೊಂದರಲ್ಲಿಯೇ ಆ ವಂಶದ ರಾಜರೆಲ್ಲರೂ–

'ತ್ಯಾಗಾಯ ಸಂಭೃತಾರ್ಥಾನಾಂ ಸತ್ಯಾಯ ಮಿತಷಿಭಾಷಿನಾಂ'

ಇತ್ಯಾದಿ ಗುಣವುಳ್ಳವರೆಂದು ವರ್ಣಿಸಿದ್ದಾರೆ. ಆ ವಂಶದ ರಾಜರೆಲ್ಲರೂ ಹಣ ಸಂಗ್ರಹಸಿಟ್ಟುಕೊಳ್ಳುವುದೇ ತ್ಯಾಗಕ್ಕಾಗಿ ಎಂಬ ಯೋಗ್ಯತೆ ಹೇಳಿದ್ದಾನೆ. ಇದು ಮಹಾತ್ಮರ 'ಟ್ರಸ್ಟಿಶಿಪ್'ನದೇ ಪೂರ್ವರೂಪ. ಯಜ್ಞಯಾಗಾದಿಗಳನ್ನು ನೆರವೇರಿಸುವಾಗ ಅಗ್ನಿಗೆ ಆಹುತಿ ನೀಡುವ ಸಕಲ ದ್ರವ್ಯಗಳು ಪರಿಸರವನ್ನು ಶುದ್ಧಗೊಳಿಸಿ ಜೀವಜಂತುಗಳ ಆರೋಗ್ಯವನ್ನು ವೃದ್ಧಿಗೆಯ್ಯುವ ಗುಣವುಳ್ಳದ್ದಾಗುತ್ತವೆಂದು ವಿಜ್ಞಾನಿಗಳೂ ಒಪ್ಪುತ್ತಾರೆ. ಹಾಗಾಗಿ ಭಾರತದಲ್ಲಿ ಅನಾದಿಕಾಲದಿಂದ ಪ್ರಚಲಿತವಾಗಿರುವ ಯಜ್ಞಯಾಗಾದಿಗಳಿಗೆ, ಅದರ ವಿಧಿವಿಧಾನ ನಿರ್ವಹಣಾ ಕ್ರಮಗಳಿಗೆ ಮಾನವಜೀವನದ ಸಂಸ್ಕೃತಿಯೇ ಮೂಲವೆಂದು ಹೇಳಬಹುದು.

ಅದರಂತೆಯೇ ಯೋಗಾಭ್ಯಾಸವೂ ಒಂದು ನಡತೆ. ಯೋಗವೆಂದರೆ ಆತ್ಮ ಪರಮಾತ್ಮನಲ್ಲಿ ಕೂಡುವಿಕೆ ಎಂಬ ಅರ್ಥ ಆಗುತ್ತದೆ.

'ಯೋಗೇನಾಂತೇ ತನುತ್ಯಜಾಂ'

ಎಂಬ ಶ್ಲೋಕವೂ ಇದಕ್ಕೆ ಆಧಾರ. ಆಸ್ತಿಕರು ನಂಬುವ ಜೀವನದ ಕೊನೆಯ ಗುರಿ ಜೀವಾತ್ಮ ಪರಮಾತ್ಮನಲ್ಲಿ ಸೇರುವುದು. ಅದನ್ನೇ ಮೋಕ್ಷವೆಂದೂ ಹೇಳುತ್ತಾರೆ. ಹೇಗಿದ್ದರೂ ಯೋಗ ಜನ್ಮದ ಉತ್ತಮಿಕೆಗೆ ಸಾಧನ ಎಂದು ತಿಳಿಯಬೇಕಾಗಿದೆ.

'ಯೋಗಃ ಕರ್ಮಸಂ ಕೌಶಲಂ'

ಎಂಬ ಈ ಸೂಕ್ತಿಯಂತೆ, ಕರ್ಮವನ್ನು ಕರ್ತವ್ಯವನ್ನು ಅದರ ಫಲಾಪೇಕ್ಷೆಯಿಲ್ಲದೆ ಮಾಡುವುದನ್ನು ಕರ್ಮಯೋಗ ಎಂದು ಕರೆದರು. ಭಗವದ್ಗೀತೆಯಲ್ಲಿ ಅರ್ಜುನನು ಕುರುಕ್ಷೇತ್ರ ಯುದ್ಧರಂಗವನ್ನು ಪ್ರವೇಶಿಸಿದಾಗ, ತನಗೆ ಇದಿರಾಳಿಗಳಾಗಿ ಹೋರಾಡಲು ಸಿದ್ಧರಾದ ಗುರು ಹಿರಿಯರನ್ನು, ಬಂಧುಬಳಗದವರನ್ನು ಕಂಡು ಅವರ ಹತ್ಯೆಮಾಡಿ ಲಭಿಸುವ ರಾಜ್ಯ ಬೇಡವೆಂದು ವಿಷಾದಗೊಂಡಾಗ ಆತನಿಗೆ ಶ್ರೀಕೃಷ್ಣನು ಮಾಡುವ ಉಪದೇಶವೇ ಕರ್ಮಯೋಗ–

'ಕರ್ಮಣ್ಯೇವಾಧಿಕಾರಸ್ತೇ ಮಾ ಫಲೇಷು ಕದಾಚನ
ಮಾ ಕರ್ಮಫಲಹೇತುರ್ಭೂಃ ಮಾ ತೇ ಸಂಗೋಸ್ತ್ವಕರ್ಮಣಿ'

ಎನ್ನುವ ಉಪದೇಶ ಫಲಾಪೇಕ್ಷೆ ಇಟ್ಟುಕೊಳ್ಳದೆ, ನಿನ್ನ ಪಾಲಿಗೆ ಬಂದ ಕರ್ತವ್ಯವನ್ನು ನೆರವೇರಿಸು ಎಂಬ ತತ್ವವನ್ನು ಬೋಧಿಸುತ್ತದೆ ಅದನ್ನೇ ಕರ್ಮಯೋಗವೆಂದು ವ್ಯಾಖ್ಯಾನಿಸಿದರು. ಯೋಗದಲ್ಲಿ ಜ್ಞಾನಯೋಗ, ರಾಜಯೋಗ, ಭಕ್ತಿಯೋಗ ಎಂಬೀ ಪ್ರಸ್ತಾವನೆಗಳಿದ್ದರೂ, ಅವುಗಳೆಲ್ಲವಕ್ಕೂ ಬೇರೆ ಬೇರೆ ವಿಧಿವಿಧಾನಗಳಿದ್ದರೂ, ಮನುಷ್ಯಜೀವಿತದಲ್ಲಿ ಫಲಾಪೇಕ್ಷೆಯಿಟ್ಟುಕೊಳ್ಳದೆ ತನ್ನ ಪಾಲಿಗೆ ಬಂದ ಕರ್ತವ್ಯ ಕರ್ಮವನ್ನು ಮಾಡುವ ಧ್ಯೇಯದ ಕರ್ಮಯೋಗಕ್ಕೆ ಹೆಚ್ಚಿನ ಪ್ರಾಶಸ್ತ್ಯವಿದೆ. ಇದು ಸಾಂಸಾರಿಕ ವ್ಯಕ್ತಿಯ ಸಂಸ್ಕಾರಕ್ಕೂ ಹೊಂದಿಕೆಯಾಗುವಂತಿದೆ. ಪ್ರತಿಯೊಬ್ಬನೂ ನಿರ್ಮಲಮನಸ್ಸಿನಿಂದ ಕರ್ಮನಿರತನಾಗಿದ್ದು ಅದರ ಫಲ ಪ್ರಯೋಜನ ಲಾಭ ಅಧಿಕಾರ ಐಶ್ವರ್ಯಪ್ರಾಪ್ತಿಗಳ ಕಡೆಗೆ ಕಿಂಚಿತ್ತೂ ಗಮನಹರಿಸದ ನಿಷ್ಕಾಮಕರ್ಮಿಯಾಗಿರಬೇಕೆಂಬುದು ಉದಾತ್ತ ಸಾಂಸಾರಿಕ ಜೀವನದ ದಾರಿಯಾಗಿದೆ. ಲೋಕಹಿತಾರ್ಥ, ಅನಾಸಕ್ತಿಯಿಂದ ಕರ್ಮನಿರತನಾಗಿರುವ ಸದ್ಭಾವನೆಯಿರುವ ಮನಸ್ಸು ಶುದ್ಧವಾಗಿರುತ್ತದೆ, ಜೀವನ ಪಾವನವಾಗುವುದು.

'ದುಡಿತವೇ ನನ್ನ ದೇವರು, ಲೋಕ ದೇವಕುಲ
ಬೆವರೆ ಹೂ ಹಣ್ಣು ಕಾಯ್, ಕಣ್ಣೀರೆ ತೀರ್ಥಂ'

ಎಂಬೀ ಕವನಪಂಕ್ತಿಗಳನ್ನು ನಾನು ಬರೆದುದು ಇದೇ ಭಾವನೆಯಿಂದ. ಹೀಗಾಗಿ ಮನುಷ್ಯನ ಶುದ್ಧ ಮನಸ್ಸಿನ ನಿಃಸ್ವಾರ್ಥ ಕರ್ತವ್ಯಕರ್ಮಾಚರಣೆ ಉತ್ತಮವಾದ ಯೋಗವೆನಿಸುವುದು. ಇದು ಶ್ಲಾಘನೀಯ ಸಂಸ್ಕೃತಿಯೂ ಹೌದು.

ಭಾರತೀಯರ ಇನ್ನೊಂದು ಮಹತ್ವಪೂರ್ಣ ಆಚರಣೆ ಸಾಧನೆ ಸಿದ್ಧಗಳೆಂದರೆ ತಪಸ್ಸು. ತಪಸ್ಸು ಎಂಬ ಪದದ ಅರ್ಥ ಬಿಸುಪು ಎಂದು. ಉರಿಯುವುದು, ಜ್ವಲಿಸುವುದು ಎಂದು ಅರ್ಥ ಮಾಡಬೇಕು. ಕಠಿಣವಾದ ಸಾಧನೆ ತಪಸ್ಸಿಗೆ ಬೇಕಾಗುತ್ತದೆ. ಸಂಸಾರದ ವ್ಯಾಮೋಹ ಬಿಡಬೇಕು. ಅರಣ್ಯದಲ್ಲಿ ಆಶ್ರಮದಲ್ಲಿ ತಪೋಜೀವನ ನಡೆಸಬೇಕು. ಅನ್ನಾಹಾರಗಳ ಕುರಿತು ಆಸಕ್ತಿ ಕಡಿಮೆಗೊಳಿಸಬೇಕು ಶರೀರಪುಷ್ಟಿಯ ವಿಚಾರವಿಲ್ಲ, ದೇಹ ಉಳಿದರೆ ಸಾಕು; ಅಷ್ಟಕ್ಕೆ ಬೇಕಾದಷ್ಟು ತಿಂಡಿ ತೀರ್ಥ ಸೇವನೆ, ನಿರಾಹಾರದಿಂದಲೂ ತಪಸ್ಸು ಮಾಡುವುದಿದೆ. ಪಂಚಾಗ್ನಿ ಮಧ್ಯದ ತಪಸ್ಸು ಅತ್ಯುಗ್ರ ತಪಸ್ಸೆಂದು ಹೇಳಲಾಗುತ್ತದೆ. ತಲೆಮೇಲೆ ಸುಡುವ ಸೂರ್ಯನು, ನಾಲ್ಕು ದಿಕ್ಕುಗಳಲ್ಲಿಯೂ ಯಜ್ಞದ ಬೆಂಕಿಯ ರಾಶಿ; ಈ ಮಧ್ಯೆ ಎರಡು ಕಾಲುಗಳೂರಿ ಮತ್ತೆ ಒಂದೇ ಕಾಲಲ್ಲಿ ನಿಂತು, ಹೀಗೆ ಮಹೋಗ್ರ ತಪಸ್ಸುಗಳನ್ನಾಚರಿಸಿ ಪ್ರಸಿದ್ಧಿ ಪಡೆದ ಮಹರ್ಷಿಗಳ ಕಥೆಗಳನ್ನು ನಾವು ಕೇಳುತ್ತೇವೆ, ಓದುತ್ತೇವೆ, ಮೆಚ್ಚುತ್ತೇವೆ. ಶಿವನೇ ಪತಿಯಾಗಬೇಕೆಂದು ಪಾರ್ವತಿ ತಪಸ್ಸನ್ನಾಚರಿಸಿದಳು. ಒಂದೇ ಸಲ ಆಹಾರ ತೆಗೆದುಕೊಂಡು, ತರಗೆಲೆಗಳನ್ನು ಮಾತ್ರ ತಿಂದು, ಮತ್ತೆ ನಿರಾಹಾರಿಯಾಗಿ, ಪಂಚಾಗ್ನಿ

ಮಧ್ಯದಲ್ಲಿಯೂ ತಪೋನಿರತಳಾದಳು. ಪಾರ್ವತಿಯ ಈ ಪರಮಭಕ್ತಿಯನ್ನು ಪರೀಕ್ಷಿಸಲೆಂದು ಸಾಕ್ಷಾತ್ ಶಿವನೇ ವಟುವೇಷಧಾರಿಯಾಗಿ ಬಂದು ಪಾರ್ವತಿಯನ್ನು ಪ್ರಶ್ನಿಸುತ್ತಾನೆ. ಗಜಚರ್ಮಾಂಬರಧಾರಿ, ಹಾವನ್ನು ಹಾರವಾಗಿ ಹಾಕಿಕೊಂಡವನು, ಜಡೆಬಿಟ್ಟವನು, ಸ್ಮಶಾನವಾಸಿ, ಅಂತಹ ಆ ಶಿವನನ್ನು ಏಕೆ ವರಿಸಲಪೇಕ್ಷಿಸುತ್ತೀ? ಎಂದಾಗ ಪತಿನಿಂದನೆ ಕೇಳಲಾಗದೆ ವಟುವಿನ ಮುಖಕ್ಕೆ ಭಸ್ಮವನ್ನು ಎರಚುವಳು. ಆಗ ಶಿವನು ಪ್ರತ್ಯಕ್ಷನಾಗುವನು; ಪಾರ್ವತಿ ಶಿರಬಾಗಿ ವಂದಿಸುವಳು.

'ಅದ್ಯಪ್ರಭೃತ್ಯವನತಾಂಗಿ, ತವಾಸ್ಮಿ ದಾಸಃ

ಕ್ರೀತಸ್ತಮೋಭಿಃ–'

ಎಂದು ಶಿವನು ಹೇಳಿದಾಗ, 'ನಿನ್ನ ತಪಸ್ಸಿನಿಂದ ಕ್ರಯಕ್ಕೆ ಪಡೆದವನಂತಾದ ನಾನು ಇಂದಿನಿಂದ ನಿನ್ನ ದಾಸನು' ಪಾರ್ವತಿಗೆ ಅಷ್ಟು ದಿನಗಳ ಆಯಾಸ ಪರಿಶ್ರಮಗಳೆಲ್ಲವೂ, ಫಲ ದೊರಕಿತೆಂಬುದರಿಂದ ಸಂಪೂರ್ಣ ಹೋಯಿತು–ಎಂದು ಬಹು ಮನೋಜ್ಞವಾಗಿ ಕಾಳಿದಾಸನು ವಿವರಿಸುತ್ತಾನೆ. ತನ್ನ ಪತ್ನಿಯ ಶುದ್ಧ ಮನಸ್ಸಿಗೆ, ನಿರ್ಮಲಚರಿತೆಗೆ 'ತವಾಸ್ಮಿ ದಾಸಃ' ಎಂದು ಶಿವನೇ ಶಿಫಾರಸುಪತ್ರ ಕೊಡುವುದು ಇಲ್ಲಿ ಮನನೀಯವಾಗಿದೆ.

'ಯತ್ರ ನಾರ್ಯಸ್ತು ಪೂಜ್ಯಂತೇ ರಮಂತೇ ತತ್ರ ದೇವತಾಃ'

ಎಂಬ ಈ ಸ್ಮೃತಿವಾಕ್ಕು ಇಲ್ಲಿ ನೆನಪಾಗುವುದು. ಇದು ನಮ್ಮ ಪರಮೋಚ್ಚಗಾರ್ಹಸ್ಥ ಸಂಸ್ಕಾರದ ಆದರ್ಶವಾಗಿದೆ.

ಹಿಂದಿನ ಕಾಲಗಳಲ್ಲಿ ಭರತವರ್ಷದಲ್ಲಿ ಅಲ್ಲಲ್ಲಿ ತಪೋವನಗಳಿದ್ದುವು, ಋಷ್ಯಾಶ್ರಮಗಳಿದ್ದುವು. ಅಲ್ಲಿ ತಪಸ್ವಿಗಳೂ ಇದ್ದರು. ಪಂಚೇಂದ್ರಿಯಗಳ ಸುಖ ಕೇವಲ ತಾತ್ಕಾಲಿಕ, ಅಂತಹ ಸುಖಲೋಲುಪರಾಗದೆಯೇ ಪಾರಮಾರ್ಥಿಕ ಶ್ರೇಯಸ್ಸನ್ನು ಪಡೆಯಲು ಬಯಸಿ ಅರಣ್ಯದಲ್ಲಿ ಆಶ್ರಮದಲ್ಲಿ ಋಷಿಗಳು ತಪೋನಿರತರಾಗಿದ್ದರು. ಅಂತಹ ಯೋಗ್ಯ ಋಷಿಗಳ – ಧೀಮಂತರ ಉಪದೇಶವನ್ನು ಸಮಾಜ ಪಡೆಯುತ್ತಿತ್ತು. ವಸಿಷ್ಠರಂತಹ ಋಷಿಗಳು ಸೂರ್ಯವಂಶದ ರಾಜರಿಗೆ ಹಿತೋಪದೇಶ ನೀಡುವ ಗುರುಗಳಾಗಿದ್ದರು. ಹೀಗೆ ತಪಸ್ವಿಯಾಗುವುದು ಅತ್ಯುನ್ನತ ಸ್ಥಾನ. ತಪಸ್ಸು ಪುಣ್ಯಸಂಪಾದನೆಯ ಕಾರ್ಯ; ತಪಸ್ವಿಗೆ ಎಲ್ಲರೂ ತಲೆಬಾಗಬೇಕು. ಅರಸನಾದರೂ, ತಪೋವನವನ್ನು ಪ್ರವೇಶಿಸುವಾಗ, ರಥದಿಂದ, ಕುದುರೆಯಿಂದ ಇಳಿದು ವಿನೀತವೇಷದಲ್ಲಿ ಆಶ್ರಮ ಪ್ರವೇಶಿಸಬೇಕು. ದೇವಾಲಯಗಳ ಬಳಿಗೆ ಹೋಗುವಂತೆ.

'ವಿನೀತವೇಷೇಣ ಪ್ರವೇಶಿತವ್ಯಾನಿ ತಪೋವನಾನಿ'

ಎಂದು ದುಷ್ಯಂತನು ಕಣ್ವಾಶ್ರಮಕ್ಕೆ ಪ್ರವೇಶಿಸುವನು. ಮಹಾರಾಜರಿಂದಲೂ ತಪಸ್ವಿಗಳಿಗೆ ಈ ಹಿರಿಯ ಗೌರವ ಸಲ್ಲುತ್ತಿತ್ತು. ಇದು ಭಾರತದ ಪ್ರಾಚೀನ ಜನತೆಯ

ಸಂಸ್ಕಾರಗಳಲ್ಲಿ ಒಂದು. ವಿದ್ವಾಂಸರನ್ನು ಪುಣ್ಯಜೀವಿಗಳನ್ನು ಗೌರವಿಸುವುದು ಎಲ್ಲರ ಕರ್ತವ್ಯವೇ ಆಗಿದೆಯಷ್ಟೆ.

ಋಷಿಮೂಲವನ್ನೂ, ನದೀಮೂಲವನ್ನೂ ನೋಡಬಾರದು–ಎಂಬ ಮಾತಿದೆ. ತಪಸ್ಸುಮಾಡಿ ಪುಣ್ಯ ಸಂಪಾದಿಸಿದವನು ಋಷಿಯಾಗುತ್ತಾನೆ. ಹಾಗೆ ಒಬ್ಬನು ಯೋಗ್ಯತೆಯಿಂದ, ಸಾಧನೆಸಿದ್ಧಿಗಳಿಂದ ಮೇಲ್ಮೈ ಪಡೆದ ಮೇಲೆ ಆತನ ತಾಯಿ ಯಾರು, ತಂದೆ ಯಾರು, ಕುಲ ಯಾವುದು ಎಂದು ತಿಳಿಯಬೇಕಾಗದ ಅವಶ್ಯವಿಲ್ಲ. ಆತ ಋಷಿಯಾದುದರಿಂದ ಎಲ್ಲರೂ ಗೌರವಿಸಬೇಕು. ನದೀಜಲ ಜಗದಗಲ ಬಯಲು ಭೂಮಿಗಳಿಗೆ ತಂಪು ನೀರು ಒದಗಿಸುತ್ತದೆ. ಪುಷ್ಟಿಯನ್ನು ಸಸ್ಯಶ್ಯಾಮಲೆ ಮಾಡುತ್ತದೆ. ಜನ – ಜಾನುವಾರುಗಳಿಗೆ ಕುಡಿವ ನೀರು ಧಾರಾಳ ಒದಗಿಸುತ್ತದೆ–ಹೀಗಿರುವಾಗ ಆ ನದಿ ಎಲ್ಲಿ ಹುಟ್ಟಿತು, ಯಾವ ಯಾವ ನೆಲದಲ್ಲಿ ಹರಿದು ಬಂತು– ಇದನ್ನೆಲಾ ವಿಚಾರಿಸಬೇಕಾದ ಅವಶ್ಯವೇನು? ವಿಚಾರಿಸಬೇಕಾಗಿಲ್ಲ ಎಂಬುದು ಹಿರಿಯರ ವ್ಯಾವಹಾರಿಕ ನೀತಿ, ಇಂತಿದ್ದರೂ ಚಾತುರ್ವರ್ಣ್ಯ ವರ್ಣಾಶ್ರಮಗಳ ಉಚ್ಚನೀಚ ಭಾವನೆ ಕ್ರಮಶಃ ನಮ್ಮ ಬುದ್ಧಿಗೆ ಕಳಂಕದ ಲೇಪ ಹಚ್ಚಿಬಿಡುತ್ತದೆ, ಹುಟ್ಟಿನಿಂದಲೇ ಶ್ರೇಷ್ಠ ಕನಿಷ್ಠ ಎಂಬ ಈ ಸಂಕುಚಿತದೃಷ್ಟಿ ಸಮಾಜದ ಕೆಲವರಲ್ಲಿ ಅಂಕುರಿಸಿ, ಬೆಳೆದು ಬಲಗೊಳ್ಳುತ್ತದೆ. ಈ ಭಾವನೆ, ಇಂತಾಗಿ ಸ್ವಾರ್ಥಮೂಲದ ನಡತೆ ಪ್ರಚಾರಗೊಂಡು, ಪುರಾಣಗಳಲ್ಲೂ ಕೆಲವೊಂದು ಕಥೆಗಳು ಬುದ್ಧಿಪೂರ್ವಕವೋ ಬುದ್ಧಿರಹಿತವಾಗಿಯೋ ಪ್ರಕ್ಷಿಪ್ತವೋ, ಅಪ್ರಕ್ಷಿಪ್ತವೋ ಹೇಗೋ ನುಸುಳಿಕೊಂಡಿವೆ; ಧೀಮಂತರ ಕಟು ವಿಮರ್ಶೆಗೆ ಗುರಿಯಾದ ಕಥೆಗಳಲ್ಲಿ ಶಂಬುಕನ ಕಥೆಯೂ ಒಂದು, ಈ ಕಥೆ ಉತ್ತರರಾಮಾಯಣದಲ್ಲಿ ಬಂದಿದೆ (ಉತ್ತರರಾಮಾಯಣವನ್ನು ವಾಲ್ಮೀಕಿಯೇ ಬರೆದನೋ ಇಲ್ಲವೋ ಎಂಬ ಕುರಿತಾಗಿ ಚರ್ಚೆಯಿದೆ) ರಾಮರಾಜ್ಯದಲ್ಲಿ ಶಿಶುಮರಣವಿಲ್ಲವಷ್ಟೆ; ಹೀಗಿರುವಾಗ, ಒಬ್ಬ ಬ್ರಾಹ್ಮಣನ ಮಗು ಸತ್ತುಹೋಯಿತು. ಆತ ಶ್ರೀರಾಮನಲ್ಲಿ ದೂರಿತ್ತ; ಏನೋ ರಾಜ್ಯದಲ್ಲಿ ಅನ್ಯಾಯ ನಡೆದಿದೆ ಎಂದು ಶ್ರೀರಾಮನು ಬಾಣ ಬಿಟ್ಟ; ಬಾಣವು ತಪಸ್ಸುಮಾಡುತ್ತಿದ್ದ ಶೂದ್ರ ಶಂಬುಕನನ್ನು ಕೊಂದಿತು; ಬ್ರಾಹ್ಮಣ ಶಿಶು ಬದುಕಿತು– ಇದು ಉತ್ತರ ರಾಮಾಯಣದ ಮೂಲಕಥೆ.

ಈ ಕಥೆಯ ನೀತಿ ಭಾರತೀಯ ಸಂಸ್ಕೃತಿಗೆ ನಿಜವಾಗಿಯೂ ಅನುಗುಣವಾಗಿಲ್ಲ; ಎಷ್ಟೋ ಮಂದಿ ಋಷಿವರರ ಮೂಲ ಯಾರಿಗೂ ಗೊತ್ತಿಲ್ಲ. ಉದಾಹರಣೆಗೆ ಹಿಂದೆ ಹೇಳಿದ ಸತ್ಯಕಾಮಜಾಬಾಲಿಯ ಮೂಲ; ತಾಯಿಗೇ ಆತನ ತಂದೆ ಯಾರೆಂದು ತಿಳಿಯದು. ಆದರೂ ಆತನು ಮಹರ್ಷಿಯೆನಿಸಿದ. ತಪಸ್ಸುಮಾಡಿ ಪುಣ್ಯ ಸಂಪಾದಿಸಿ ಪೂಜ್ಯನಾದ. ಹಾಗಿರುವಾಗ ಶೂದ್ರನಾಗಿದ್ದರೂ ಶಂಬುಕನು ತಪಸ್ಸುಮಾಡಿದ್ದರಲ್ಲಿ, ಪುಣ್ಯಸಂಪಾದಿಸಲು ಪ್ರಯತ್ನಿಸಿದ್ದರಲ್ಲಿ ತಪ್ಪೇನಿದೆ? ಇಂತಹ ಶುದ್ಧ ತಾರ್ಕಿಕಬುದ್ಧಿಯಿಂದ ಮಹಾಕವಿ ಕುವೆಂಪು 'ಶೂದ್ರತಪಸ್ವಿ'ಯಲ್ಲಿ ಶಂಬುಕನ ಕಥೆಯನ್ನು ಯೋಗ್ಯ ರೀತಿಯಲ್ಲಿ

ಚಿತ್ರಿಸಿದರು. ಬ್ರಾಹ್ಮಣ ಶಿಶು ಸತ್ತುಹೋದ ದೂರು ಕೇಳಿ ಶ್ರೀರಾಮ ಬಿಟ್ಟ ಬಾಣ, ತಪಸ್ಸು ಮಾಡುತ್ತಿದ್ದ ಶಂಬುಕನಿಗೆ ಪ್ರದಕ್ಷಿಣೆಗೈದು ದೂರಿತ್ತ ಬ್ರಾಹ್ಮಣನನ್ನೇ ಬೆನ್ನಟ್ಟಿ ಬಿಟ್ಟಿತು; ಎಲ್ಲೆಲ್ಲಿಗೆ ಓಡಿಓಡಿಹೋದರೂ, ಯಾರ ಕೈಕಾಲು ಹಿಡಿದರೂ ಆ ಬ್ರಾಹ್ಮಣನಿಗೆ ನಿವೃತ್ತಿ ಸಿಗದೆ ಕೊನೆಗೆ ಶ್ರೀರಾಮನಲ್ಲಿಗೆ ಪ್ರಾಣರಕ್ಷಣೆ ಬೇಡುತ್ತಾನೆ. ಆಗ ಶ್ರೀರಾಮನು ಹೇಳುವನು : 'ಶಂಬುಕ ತಪಸ್ಸುಮಾಡುವುದು ಪುಣ್ಯ ಸಂಪಾದನೆಗಾಗಿ; ಒಬ್ಬ ಶೂದ್ರ ಪುಣ್ಯ ಸಂಪಾದಿಸುತ್ತಾನೆಂದು ನೀನು ಮತ್ಸರಗ್ರಸ್ಥನಾದ ಕಾರಣ ನಿನ್ನ ಶಿಶು ಮೃತಿಹೊಂದಿತು; ಬಿಟ್ಟ ಬಾಣವನ್ನು ನಾನೇ ಹಿಂದಕ್ಕೆ ತೆಗೆದುಕೊಳ್ಳಲಾರೆ; ನಾನು ಭಕ್ತಾಧೀನ ನನ್ನ ಬಾಣವೂ ಅಂತೆಯೇ; ನೀನು ನನ್ನ ಭಕ್ತನಾದ ತಪಸ್ವಿ ಶಂಬುಕನಿಗೇ ಶರಣಾಗು; ಆತನು ರಕ್ಷಣೆ ನೀಡುವವನು ಎಂದನು. ಅಂತೆಯೇ ಬ್ರಾಹ್ಮಣನು ಶೂದ್ರ ತಪಸ್ವಿ ಶಂಬುಕನ ಕಾಲಿಗೆರಗಿ ಕ್ಷಮೆ ಬೇಡಿದ; ಬಾಣ ಉಪಸಂಹಾರಗೊಂಡಿತು; ಬ್ರಾಹ್ಮಣ ಶಿಶುವಿಗೆ ಜೀವವೂ ಬಂತು. ಇಂತು, ಪ್ರಾಚೀನ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಶಂಬುಕನ ಕಥೆಗೆ ಹೊಸ ತಿರುವನ್ನಿತ್ತು ಪುಣ್ಯ ಸಂಪಾದನೆಗೆ ತಪಸ್ಸಿಗೆ ಎಲ್ಲರೂ ಅರ್ಹರು, ಹಾಗೆ ತಪಸ್ಸು ಮಾಡಿದವರು ಮಹಾತ್ಮರು ಎಂಬೀ ಸಂಸ್ಕೃತಿಯ ತಿರುಳನ್ನು 'ಶೂದ್ರ ತಪಸ್ವಿ'ಯಲ್ಲಿ ಎತ್ತಿ ತೋರಿಸಿದ ಕುವೆಂಪು ಪ್ರಶಂಸನೀಯರು. ಸ್ವಾಮಿ ವಿವೇಕಾನಂದರು ಕೇರಳ ಸಂದರ್ಶಿಸಿದ ಆ ಕಾಲದಲ್ಲಿ, ಅಲ್ಲಿನ ಶ್ರೀಮಂತರಾದ ನಂಬೂದಿರಿ ಬ್ರಾಹ್ಮಣರು ನಡೆದು ಬರುವಾಗ, ದಾರಿಯಲ್ಲಿ 'ಪರೆಯ' ಎಂಬ ದಲಿತ ಜನಾಂಗದ ವ್ಯಕ್ತಿ ಕಾಣಿಸಿದಾಗ ನಂಬೂದಿರಿ ಗಟ್ಟಿಯಾಗಿ ಕೂಗುತ್ತಾ ಇದ್ದರೆ ಆ ಕೂಗಿನ ಸ್ವರ ಕೇಳುವಲ್ಲಿವರೆಗೆ ಆ 'ಪರೆಯ' ಓಡಿಓಡಿಹೋಗಿ ಕಣ್ಮರೆಯಾಗಬೇಕಿತ್ತು; ಈ ಅಮಾನುಷ ಸಂಪ್ರದಾಯವನ್ನು ಕಂಡೇ ವಿವೇಕಾನಂದರು ಕೇರಳವನ್ನು ಭ್ರಾಂತಾಲಯ ಎಂದು ಕರೆದರು. ಇಂದು ಪರಿಸ್ಥಿತಿ ಎಷ್ಟು ಬದಲಾವಣೆಯಾಗಿದೆ ಎಂದರೆ ಆ ನಂಬೂದಿರಿಪಾಡರು ದೀನ ದಲಿತ ದರಿದ್ರರ ಧುರೀಣರಾಗಿ ಅಖಿಲ ಭಾರತ ಕೀರ್ತಿವಂತರೆನಿಸಿದ್ದಾರೆ. ಇದು ಯೋಗ್ಯವೂ ಅನುಸರಣೀಯವೂ ಆಗಿದೆ. ರಾಷ್ಟ್ರದ ಸಂಸ್ಕೃತಿಯನ್ನು ಯಾರೇ ಎತ್ತಿಹಿಡಿಯಲಿ, ಅವರೆಲ್ಲರೂ ಪ್ರಶಂಸಾರ್ಹರಾಗಿದ್ದಾರೆ.

೧೨

'ಮಾನವ ಜನ್ಮ ದೊಡ್ಡದು' ಎಂದು ಜ್ಞಾನಿಗಳಾದ ದಾಸವರೇಣ್ಯರು ಹೇಳಿದರು. ಇಂತು ದೊಡ್ಡದಾದ– ಇತರ ಪ್ರಾಣಿಜಂತು ಜನ್ಮಗಳಿಗಿಂತ ಮೇಲ್ಮಟ್ಟದ ಒಂದು ಜನ್ಮವನ್ನು ಪಡೆದು ಬಂದ ಮನುಷ್ಯನು ತನ್ನ ಜೀವನದಲ್ಲಿ ಇನ್ನಷ್ಟು ಉತ್ತಮಿಕೆಯನ್ನು ಏರಬೇಕೆಂದು ಹಾರೈಸುವುದು ಯೋಗ್ಯವೂ ಸಹಜವೂ ಆಗಿದೆ. ಉತ್ತಮಿಕೆಗೇರತಕ್ಕಂತಹ ಒಳ್ಳೆಯ ಕೆಲಸಗಳನ್ನು, ಜೀಮಂತಿಕೆಯನ್ನು ಉಪಯೋಗಿಸಿ ಮಾಡುತ್ತಿದ್ದರೆ

ಖಂಡಿತವಾಗಿಯೂ ಆತ ಶ್ರೇಷ್ಠತೆ ಪಡೆದೇ ಪಡೆಯುತ್ತಾನೆ. ರಾಜನಾಗುತ್ತಾನೆ, ರಾಜತ್ವ ಪಡೆದರೂ, ಪ್ರಜಾರಂಜನೆಯೇ ತನ್ನ ಕರ್ತವ್ಯವೆಂದು ನೆರವೇರಿಸುತ್ತಾನೆ. ಮಹರ್ಷಿಯೂ ಆಗುತ್ತಾನೆ; ತಪಸ್ಸು ಮಾಡಿ ಗಳಿಸಿದ ಪುಣ್ಯವನ್ನು ಲೋಕಹಿತಾರ್ಥ ಧಾರೆ ಎರೆಯುತ್ತಾನೆ. ಉತ್ತಮವಾದ ನಡತೆಯಿಂದ ಜನತೆ ವಿಚಲಿತರಾಗುವ ಸಂದರ್ಭದಲ್ಲಿ ಧೀಮಂತರು ಸದಾ ಎಚ್ಚರಿಸಬೇಕಾಗುತ್ತದೆ. ಇಂತಹ ಎಚ್ಚರಿಕೆಯನ್ನು ದೂರದರ್ಶಿಗಳಾದ ಕವಿಗಳು ಅಂದೂ ಇಂದೂ ಮಾಡಿದ್ದಾರೆ. ಸ್ವರ್ಗದ ದೇವತೆಗಳನ್ನೂ ಅಷ್ಟದಿಕ್ಪಾಲಕರನ್ನೂ ಸೇವಕರನ್ನಾಗಿ ಮಾಡಿದ ಲಂಕಾಶ್ರೀ ಆತ ಕಾಮಮೋಹಿತನಾಗಿ ಸೀತಾಪಹರಣಮಾಡಿದ ನೀಚ ನಡತೆಯಿಂದ ಧ್ವಂಸವಾಯಿತು. ಹನ್ನೊಂದಕ್ಷೌಹಿಣೀ ಸೇನಾಸಮುದ್ರದಿಂದಕೂಡಿದ ಭೀಷ್ಮ, ದ್ರೋಣ, ಕೃಪಾ, ಅಶ್ವತ್ತಾಮ, ಕರ್ಣರಂತವರೇ ಬೆಂಬಲವಿದ್ದು, ನೂರು ಮಂದಿ ಕೌರವರೂ ಅರಣ್ಯವಾಸಿಗಳಾಗಿ ಅಲೆದಾಡಿದ ಪಂಚಪಾಂಡವರಿಂದ ಹತರಾದರು; ಧರ್ಮಕ್ಕೆ ಜಯವಾಯಿತು. ಇಂತಹ ಸಂಸ್ಕಾರವನ್ನು ಕವಿಗಳು ತಮ್ಮ ಕಾವ್ಯಾದಿಗಳಲ್ಲಿ ಚಿತ್ರಿಸಿ ತೋರಿಸಿ ಸಮಾಜಕ್ಕೆ ಮಾರ್ಗದರ್ಶಕರಾಧರು. ಇಂದಿನ ಕವಿ ಶ್ರೇಷ್ಠರೂ ಅಂತೆಯೇ ಹಿಂದೆ ಹೇಳಿದ ರೀತಿ ಸರಿದಾರಿ ತೋರಿಸಿದ್ದಾರೆ.

ರಾಜಕೀಯ, ಸಾಮಾಜಿಕ, ಸಾಹಿತ್ಯಿಕ ಸಕಲ ಕ್ಷೇತ್ರಗಳೂ ಜನತೆಗೆ ಆಗಾಗ ದಾರಿ ತೋರಿಸುವ ಸಂಸ್ಕೃತಿಯ ದೀಪವನ್ನು ಬೆಳಗಿಸಿ ಮುನ್ನಡೆಸುತ್ತಿರಬೇಕು. ಕುರಿಹಿಂಡಿನಂತೆ, ವಿಚಾರವಿಲ್ಲದೆ ಎಂದಿಗೂ ನಾವು ಗತಾನುಗತಿಕರಾಗ ಕೂಡದು. ಪ್ರತಿಯೊಂದು ವಿಷಯವನ್ನೂ, ವಿಚಾರವನ್ನೂ ಧೀಮಂತಿಕೆಯ ಒರೆಗಲ್ಲಿಗೆ ಹಚ್ಚಿ ತಿಕ್ಕಿ ನೋಡತಕ್ಕದು. ಅಂಧವಿಶ್ವಾಸದ ಕೊಳೆ ಕಶ್ಮಲಗಳು ದೂರವಾಗಿ ನಡತೆ ನಿರ್ಮಲವಾಗಬೇಕು. ಅಂತಹ ನಿರ್ಮಲವಾದ ನಡತೆಯಿಂದ ಪ್ರತಿಯೊಬ್ಬನೂ ಮಾಡುವ ಕರ್ತವ್ಯಕರ್ಮಗಳು ಸಮಾಜದ ಹಿತಕ್ಕೆ ಪೋಶಕವಾಗಿದ್ದು, ವ್ಯಕ್ತಿ ವ್ಯಕ್ತಿಯೂ ನೆರವೇರಿಸುವ ಸತ್ಕಾರ್ಯಗಳ ಸತ್ಫಲ ತನಗೊಬ್ಬನಿಗೆ ಮಾತ್ರವಲ್ಲ ಇಡೀ ಸಮುದಾಯಕ್ಕೇ ಸಿಗಬೇಕೆಂಬ ವಿಶಾಲಮತಿತ್ವ ಬೆಳೆದು ಬರುವುದೇ ನಿಜವಾದ ಸಂಸ್ಕಾರವೆನಿಸುತ್ತದೆ. ಇಂತಹ ವಿಶೇಷ ಸಂಸ್ಕಾರ ಪಡೆಯಲು ಶ್ರಮಪಡಬೇಕಾಗಿದೆ. ಗತಾನುಗತಿಕವಾಗಿ, ಅಂಧವಿಶ್ವಾಸದಿಂದ ಜೀವನ ಸಾಗಿಸುವಲ್ಲಿ ಯಾವುದೇ ಶ್ರಮವಿಲ್ಲ. ಹಾಗಾಗಿ ಹೆಚ್ಚಿನವರಿಗೆ ಈ ಶ್ರಮಸಾಧ್ಯವಾದ ಕಾರ್ಯದ ಕಡೆಗೆ ಮನಸ್ಸು ಹೋಗದೆ. ಗತಾನುಗತಿಕವಾಗುವುದೇ ಸುಲಭವೂ ಸೌಕರ್ಯವೂ ಎನಿಸುತ್ತದೆ. ಇದು ಹಲಸಿಗಳ ರೀತಿ. ಬರಡು ನೆಲದಲ್ಲಿ ಉತ್ತಮ ಬೆಳೆ ತೆಗೆಯಬೇಕಾದರೆ ನೆಲವನ್ನು ಮೊದಲು ಸಮತಟ್ಟು ಮಾಡಬೇಕು; ಆಮೇಲೆ ಉಳಬೇಕು; ಸೊಪ್ಪು ಗೊಬ್ಬರ ಹಾಕಬೇಕು; ಬೀಜಬಿತ್ತಬೇಕು; ನೀರು ಹಾಯಿಸಬೇಕು; ಕ್ರಿಮಿ ಕೀಟಗಳ ಬಾಧೆ, ವನ್ಯಮೃಗಗಳ ಪೀಡೆ ನಿವಾರಿಸಲು ಸದಾ ಕಾಯುತ್ತಿರಬೇಕು. ಸರಿಯಾಗಿ ಬಂದ ಬೆಳೆಯನ್ನು ಸಕಾಲದಲ್ಲಿ ಕಟಾವು ಮಾಡಿ ಅಂಗಳಕ್ಕೆ ತಂದು ಹುಲ್ಲು ಭತ್ತ ಬೇರೆ ಬೇರೆ ಮಾಡತಕ್ಕದ್ದು; ಮುಂದೆ ಅಕ್ಕಿ ಮಾಡಿ

ಬೇಯಿಸಿ ಸಮೃದ್ಧವಾದ ಭೋಜನದಿಂದ ಸಂತೃಪ್ತರಾಗಬಹುದು. ನಾವು ಇಂತು ಬದುಕಬೇಕಾದ ಅನ್ನದ ಉತ್ಪತ್ತಿಗೇ ಇಷ್ಟು ಮಾಡಬೇಕಾಗಿದೆ; ಆ ಪರಿಶ್ರಮಗಳೆಲ್ಲವೂ, ಕುಟುಂಬ ತುಂಬು ಮೃಷ್ಟಾನ್ನ ಭೋಜನ ಮಾಡಿ ಸಂತೃಪ್ತರಾಗುವುದನ್ನು ಕಂಡಾಗ ಪರಿಹಾರವಾಗುತ್ತವೆ; ಪರಿಶ್ರಮ ಸಾರ್ಥಕವೆನಿಸುತ್ತದೆ. ಜೀವನದಲ್ಲಿ ಮುಂದೆಯೂ ಶ್ರಮಿಸಿ ಸತ್ಫಲ ಪಡೆಯಲು ಹುರುಪು ತುಂಬುತ್ತದೆ. ಅದರ ಬದಲು, ಭೂಮಿ ಇದ್ದರೂ ಸಮತಟ್ಟು ಮಾಡದೆ, ಉತ್ತು ಬಿತ್ತಿ ಬೆಳೆ ಬೆಳಸದೆ ಇದ್ದರೆ, ಆಲಸಿಗರಾಗಿದ್ದರೆ ನಾವೂ ಉಪವಾಸ ಬೀಳಬೇಕು, ನಮ್ಮ ಕುಟುಂಬಕ್ಕೂ ಉಪವಾಸವೇ ಗತಿ. ಹೀಗಾಗಿ ಈ ಲೋಕಕ್ಕೆ ಜನ್ಮವೆತ್ತಿ ಬಂದ ಪ್ರತಿವ್ಯಕ್ತಿಯೂ ತನ್ನ ವಿಚಾರವನ್ನು ಧೀಮಂತಿಕೆಯ ಒರೆಗಲ್ಲಿಗೆ ಹಚ್ಚಿ ಕರ್ತವ್ಯಾಕರ್ತವ್ಯಗಳನ್ನು ಅರಿತುಕೊಂಡು, ಸಮಪೂರ್ವಕ ದುಡಿದು ತಾನೂ ಬದುಕಲು ಕಲಿಯಬೇಕು ತನ್ನ ಕುಟುಂಬವನ್ನೂ ಸಮಾಜವನ್ನೂ ಲೋಕವನ್ನೂ ಬದುಕಿಸುವ ಸರಿದಾರಿಯಲ್ಲಿ ಸಾಗತಕ್ಕದ್ದು. ಇತರರ ದುಡಿಮೆಯ್ಹಿಂದ ತಾನು ಬದುಕುತ್ತೇನೆ ಎಂಬ ಭಾವನೆ ಕೇವಲ ಶೋಷಣೆಯ ಬುದ್ಧಿ, ಈ ಬುದ್ಧಿ ಅಪಾಯಕಾರಿ; ಶೋಷಿತ ಸಮಾಜ ಸಹಜವಾಗಿ ಒಂದಲ್ಲ ಒಂದು ದಿನ ಶೋಷಣೆಗೈದವರ ಮೇಲೆ ಪ್ರತಿಕಾರ ಮಾಡಲು ಬಯಸುವುದು ನಿಶ್ಚಯ. ಅದರಿಂದ ಸಂಘರ್ಷಗಳು ಸದಾ ಸಂಭವಿಸುವುವು. ಅಂತಹ ಸಂಘರ್ಷಗಳು ಸಮಾಜವನ್ನು ದುರ್ಬಲಗೊಳಿಸುವುವು. ಪರಸ್ಪರ ವಿಶ್ವಾಸ ಮಾಯವಾಗುವುದು. ಬದುಕು ಅಸಹನೀಯವಾಗುವ ದುಃಸ್ಥಿತಿಗೆ ಬರುವುದು. ಹಾಗಾಗಿ ಇತರರು ದುಡಿದು ತಾನು ಬದುಕುತ್ತೇನೆಂಬ ಭಾವನೆ ವ್ಯಕ್ತಿಗೂ ಸಮಾಜಕ್ಕೂ ಅಪಾಯಕಾರಿ. ಅದರ ಬದಲು ತನ್ನ ಸಮಾಜದ, ರಾಷ್ಟ್ರದ ಉತ್ತಮ ಜೀವನ ಸಾಧನೆಗಾಗಿ ಪ್ರತಿವ್ಯಕ್ತಿಯು ಶ್ರಮಿಸುವುದು ಅತ್ಯಂತ ಯೋಗ್ಯ ಪ್ರವೃತ್ತಿಯಾಗಿದೆ.

೧೩

ಸಾರ್ವಜನಿಕ ಜೀವನದಲ್ಲಿ, ದೇಶ ಸಮಾಜಗಳಿಗೆ ಹೊಂದಿಕೊಂಡ ವ್ಯಕ್ತಿಯ ನಡತೆಯಲ್ಲಿ ಇರಬೇಕಾದ ಸದ್ಗುಣಗಳ ಕುರಿತು ಪ್ರಸ್ತಾಪಿಸಿದೆವು. ಇದರಷ್ಟೇ ಪ್ರಾಮುಖ್ಯವಾದುದು ವ್ಯಕ್ತಿ ತನ್ನ ಕುಟುಂಬ ಪರಿಸರಕ್ಕೆ ಸಂಬಂಧಿಸಿದ ಒಳ್ಳೆಯ ರೀತಿಯಿಂದ, ಸತ್ ಸ್ವಭಾವದಿಂದ, ಸ್ಪಂದಿಸಬೇಕಾದುದು ಕೂಡಾ. ಕುಟುಂಬದಲ್ಲಿರುವ ಮನುಷ್ಯ ಮನುಷ್ಯರ ಅನ್ಯೋನ್ಯತೆ, ತಾಯಿ ತಂದೆ ಮಕ್ಕಳು ಒಂದಾಗಿರುವ ಆತ್ಮೀಯಭಾವನೆ, ಅಗಲುವಿಕೆಯ ನೋವು, ಪತಿಗೃಹಕ್ಕೆ ಮಗಳನ್ನು ಕಳುಹಿಸಿಕೊಡುವಾಗ ಹೆತ್ತವರಿಗೆ ಆಗುವ ಊತ್ಕಂಠೆ, ತಾವು ಮುದ್ದಾಗಿ ಬೆಳೆಸಿದ ಮಗಳು ಗಂಡನ ಮನೆಯಲ್ಲಿ ಹೇಗಿರುತ್ತಾಳೋ ಎಂಬ ಚಿಂತೆ, ಗೃಹಿಣೀ ಗೃಹಸ್ತರ ನಡತೆಗಳು, ಮಗಳು ಹೆತ್ತವರಲ್ಲಿ ಪ್ರೀತಿ ಇಟ್ಟುಕೊಂಡತೆ, ಗಂಡನ ಮನೆಯ ಹಿರಿಯರನ್ನೂ ನೋಡಿಕೊಳ್ಳಬೇಕಾದ ಆಕೆಯ ಕರ್ತವ್ಯ – ತವರು ಮನೆಯ ಸುಖಸೌಕರ್ಯಗಳಿಗೂ, ಪತಿಗೃಹದ ಅನುಕೂಲತೆಗಳಿಗೂ ಯಾವುದೇ ವ್ಯತ್ಯಾಸವಾದರೂ ಕುಗ್ಗದೆ ಹಿಗ್ಗದೆ

ಒಳ್ಳೆಯ ಗೃಹಣಿಯಾಗಿ ನಡೆದುಕೊಳ್ಳಬೇಕಾದ ಅವಶ್ಯಕತೆ, ಅಂತೆಯೇ ಪತಿಯೂ ಪತಿಯ ಮನೆಯವರೂ ಮಗಳ ಮೇಲೆ ಪ್ರೀತಿ ವಿಶ್ವಾಸದಿಂದ ವರ್ತಿಸಿ ಕುಲವನ್ನು ಬೆಳಗಿಸಬೇಕೆಂಬ ಆಸೆ–ಇಂತಹ ಮಾನವೀಯ ಗುಣಸ್ವಭಾವಗಳಲ್ಲಿಯೂ ನಾವು ಹಿಂದಿನಿಂದ ಇಂದಿನವರೆಗೂ ಸಂಸ್ಕೃತಿಯ ಗುರುತುಗಳನ್ನು ಕಾಣಿಸಿದ್ದೇವೆ, ಅನುಭವಿಸುತ್ತೇವೆ.

'ಎಮ್ಮ ಮನೆಯಂಗಳದಿ ಬೆಳದೊಂದು ಹೂವನ್ನು
ನಿಮ್ಮ ಮಡಿಲೊಳಗಿಡಲು ತಂದಿರುವೆವು'

ಎಂದು ಹಾಡಿದ ವಿ. ಸೀ. ಯವರ ಕವನ ನಾಡಿನಲ್ಲಿ ಜನಪ್ರಿಯ; ಅದರಲ್ಲಿ ಕವಿ ವ್ಯಕ್ತಮಾಡಿದ ಭಾವನೆಯೂ ಅಷ್ಟೇ ಹಿತವಾದುದು; ಆತ್ಮೀಯವಾದುದು. ಈ ಹಾಡಿನ ಹಿನ್ನೆಲೆ ತುಂಬಾ ಪ್ರಾಚೀನ ಕೌಟುಂಬಿಕ ಸದ್ಭಾವನೆಯದು. ಗಂಡನ ಮನೆಗೆ ಮಗಳನ್ನು ಕಳುಹಿಸುವ ಸಂದರ್ಭದಲ್ಲಿ ಹಿಂದಿನಿಂದಲೇ ಹೇಳುವ ಕೆಲವು ಶ್ಲೋಕಗಳು, ಉಕ್ತಿಗಳು ಪ್ರಚಲಿತವಾಗಿವೆ; ಪತಿಗೃಹಕ್ಕೆ ಪುತ್ರಿಯನ್ನು ಕಳುಹಿಸಿಕೊಡುವಾಗ ಅಲ್ಲಿನ ಪ್ರಾಣಿ, ತರುಲತೆಗಳಿಗೂ ಪ್ರಕೃತಿಯ ಪ್ರತಿಯೊಂದು ಜೀವಜಾಲಕ್ಕೂ ಉಂಟಾದ ಸ್ಪಂದನವನ್ನು ಕಾಳಿದಾಸಾದಿ ಕವಿವರ್ಯರು ತುಂಬಾ ಚೆನ್ನಾಗಿ ಚಿತ್ರಿಸಿರುವರು.

ಶಕುಂತಲೆ ನಿಜವಾಗಿಯೂ ಸಾಕುಮಗಳಾದರೂ, ಕಣ್ವರ್ಷಿಗೆ ತನ್ನ ಸ್ವಂತ ಮಗಳಷ್ಟೇ ಪ್ರೀತಿ–ವಾತ್ಸಲ್ಯ ಅವಳ ಮೇಲೆ ಕಣ್ವರು ಆಶ್ರಮದಲ್ಲಿ ಇಲ್ಲದಿರುವಾಗ, ಆ ಗುರುಕುಲದ ವಿಚಾರ ಶಕುಂತಲೆ ನೋಡಿಕೊಳ್ಳುವಳು; ಬಂದ ಅತಿಥಿಗಳನ್ನು ಸತ್ಕರಿಸುವಳು. ಹಸ್ತಿನಾವತಿಯ ರಾಜಾ ದುಷ್ಯಂತನನ್ನೂ ಸ್ವಾಗತಿಸಿ ಆತಿಥ್ಯ ನೀಡಿದಳು. ಆ ಪರಿಚಯ ಪ್ರೇಮವಿವಾಹದಲ್ಲಿ ಊರ್ಜಿತವಾಯಿತು, ಗರ್ಭಿಣಿಯಾದ ಶಕುಂತಲೆಯನ್ನು ಕಣ್ವರ್ಷಿ ಪತಿಗೃಹಕ್ಕೆ ಕಳುಹಿಸಿಕೊಡುತ್ತಾನೆ. ಶಾರ್ಙರವ, ಶಾರದ್ವತರೆಂಬ ವಟುಗಳೂ, ಗೌತಮಿ ಎಂಬ ವೃದ್ಧ ತಾಪಸಿಯೂ ಶಕುಂತಲೆಯನ್ನು ಹಸ್ತಿನಾವತಿಗೆ ಕರೆದುಕೊಂಡು ಹೋಗಲು ಸಿದ್ಧರಾಗುತ್ತಾರೆ. ಈ ಸಂದರ್ಭದ ಶಾಕುಂತಲ ನಾಟಕದ ನಾಲ್ಕನೆಯ ಅಂಕದ ನಾಲ್ಕು ಶ್ಲೋಕಗಳು ಮಾನವೀಯತೆಯ ಅತ್ಯುತ್ತಮ ಆತ್ಮೀಯ ಭಾವನೆಗಳ ಸತ್ಯಸಾಕ್ಷಿಗಳಾಗಿವೆ; ಸುಂದರ ಕಲಾಕೃತಿಗಳಾಗಿವೆ. ಆದ್ದರಿಂದಲೇ

'ಕಾವ್ಯೇಷು ನಾಟಕಂ ರಮ್ಯಂ, ತತ್ರ ರಮ್ಯಾ ಶಕುಂತಲಾ
ತತ್ರಾಪಿ ಚ ಚತುರ್ಥೋಂಕಃ ತತ್ರ ಶ್ಲೋಕಚತುಷ್ಟಯಂ'

ಎಂಬ ಈ ಮಾತು ಪ್ರಸಿದ್ಧವಾಯಿತು.

ಕಣ್ವನು ಶಕುಂತಲೆಯನ್ನು ಕಳುಹಿಸಿಕೊಡುವಾಗ ಹೇಳುವ ಮಾತು ಇದು: "ಇಂದು ಶಕುಂತಲೆ ಹೋಗಲಿದ್ದಾಳೆ ಎಂಬುದನ್ನು ಯೋಚಿಸಿ ನನ್ನ ಹೃದಯ ಉಮ್ಮಳಿಸುತ್ತದೆ. ಕಂಠ ಗದ್ಗದಿತವಾಗಿದೆ. ಕಣ್ಣುಗಳಲ್ಲಿ ಬಾಷ್ಪ ತುಂಬಿ, ಚಿಂತೆಯಿಂದ

ದೃಷ್ಟಿ ಜಡವಾಗಿದೆ. ನನ್ನಂತಹ ತಪೋವನವಾಸಿಗೆ, ಸಾಕುಮಗಳನ್ನು ಪತಿಗೃಹಕ್ಕೆ ಕಳುಹಿಸುವಾಗ ಇಷ್ಟೊಂದು ವ್ಯಥೆಯಾದರೆ. ಸ್ವತಃ ತಾವು ಹೆತ್ತು ಹೊತ್ತು ಸಾಕಿದ ಪುತ್ರಿಯನ್ನು ಗಂಡನ ಮನೆಗೆ ಕಳುಹಿಸುವಲ್ಲಿ ಗೃಹಸ್ಥರಿಗೆ ಎಷ್ಟೊಂದು ಸಂಕಟವಾದೀತು? ಶೈಶವದಿಂದ ಯುವತಿಯಾಗುವ ತನಕ ತಾನೇ ಆಶನವಸನಗಳನ್ನಿತ್ತು ಸಾಕಿ ಬೆಳೆಸಿದವಳು, ಬೆಳೆದಂತೆ ಪಿತೃಪೂಜ್ಯ ಭಾವದಿಂದ ತನ್ನ ಸೇವೆ ಮಾಡುತ್ತಾ ಬಂದವಳು. ತಾನು ವಹಿಸಿಕೊಟ್ಟ ಕರ್ತವ್ಯಗಳನ್ನು ಮನಃಪೂರ್ವಕ ನೆರವೇರಿಸಿದವಳೂ– ಹೆತ್ತವರ ಬಾಳಿಗೆ ಬೆಳಕಾದವಳೂ, ತಮ್ಮ ಮನೆಯಂಗಳದಲ್ಲಿ ಅರಳಿ ನಿಂತ ಈ ಸುಂದರ ಪುಷ್ಪ–ಮುಂದೆಯೂ ಮಗಳು ಸುಖವಾಗಿ ಜೀವಿಸಬೇಕು–ಪತಿಗೃಹದಲ್ಲಿ ಹೇಗೆ ಅವಳಿಗೆ ಆಗುತ್ತದೋ– ಇಲ್ಲಿನ ಪ್ರೀತಿವಾತ್ಸಲ್ಯ ಅಲ್ಲಿಯೂ ಮಗಳಿಗೆ ಸಿಗಲಿ– ಇಂತಹ ಮಾನವೀಯ ಸದ್ಭಾವನೆಗಳು ನಮ್ಮ ಸಾಹಿತ್ಯಪ್ರಪಂಚದಲ್ಲಿ, ಕೌಟುಂಬಿಕ ಪ್ರಪಂಚದಲ್ಲಿ ಎಲ್ಲೆಲ್ಲೂ ಎದ್ದು ತೋರುತ್ತಿರುವುದು ಅತೀವ ಶ್ಲಾಘನೀಯ ಸಂಸ್ಕೃತಿ. ಮಾನವತೆಯ ಮೃದುಹೃದಯದ ಈ ಮಧುರಸ್ಪಂದನ ಯಾವುದೇ ಒಂದು ಕುಟುಂಬಕ್ಕೆ ಮಾತ್ರ ಸೀಮಿತವಾಗಿರದೆ ಇದು ವಿಶ್ವಕುಟುಂಬವ್ಯಾಪೀ ಸಂಸ್ಕಾರವೆಂಬುದರಿಂದ ಅತ್ಯಂತಶ್ಲಾಘನೀಯವೂ ಸ್ಮರಣೀಯವೂ ಅನುಸರಣೀಯವೂ ಆದುದು. ಆದ್ದರಿಂದಲೇ ಕಾವ್ಯಪ್ರಪಂಚದ ಈ ಸಂದರ್ಭದ ಈ ಶ್ಲೋಕ ಸಕಲರ ಮೆಚ್ಚುಗೆಗೆ ಪಾತ್ರವಾಗಿದೆ.

"ಯಾಸ್ಯತ್ಯದ್ಯ ಶಕುಂತಲೇ..ಪಿ ಹೃದಯಂ ಸಂಸ್ಪೃಷ್ಟ ಮುತ್ಕಂಠಯಾ
ಕಂಠಃ ಸ್ತಂಭಿತಬಾಷ್ಪವೃತ್ತಿಕಲುಷಃ ಚಿಂತಾ ಜಡಂ ದರ್ಶನಂ
ವೈಕ್ಲವ್ಯಂ ಮಮತಾವದೀದೃಶಮಿದು ಸ್ನೇಹಾದರಣ್ಯೌಕಸಃ
ಪೀಡ್ಯಂತೇ ಗ್ರಹಿಣಃ ಕಥಂ ನಂ ತನಯಾ ವಿಶ್ಲೇಷದುಃಖೈರ್ನವ್ಯೈಃ"

ಸಾಂಸಾರಿಕ ಸಂಸ್ಕಾರವುಳ್ಳ ಸಕಲ ಕಾವ್ಯರಸಿಕರೂ ಸ್ವಾರಸ್ಯ ಅನುಭವಿಸಿ ಸಂತೋಷ ತೃಪ್ತಿಪಡಬೇಕಾದ ಕವನಪಂಕ್ತಿಗಳು ಮೇಲಿನವು,

ಶಕುಂತಲೆ ಹೊರಟು ನಿಂತಾಗ, ಅವಳು ಸಾಕಿದ ಹರಿಣ ಶಿಶು ಆಕೆಯನ್ನು ಬಳಸಿ ಬಂದು ಮೂಸಿತು; ಅವಳು ಕಟ್ಟೆ ಕಟ್ಟಿ ನೀರೆರೆದು ಅರಳಿಸಿದ ಹೂಗಳು ಆಕೆಯನ್ನೇ ನೋಡುತ್ತಾ ಇದ್ದಂತೆ ಕಂಡಿತು; ಈ ಪ್ರಾಣಿಗಳ, ಈ ತರುಲತೆಗಳ, ಈ ಹೂಗಳ ಸಮುದಾಯಕ್ಕೆ ಶಕುಂತಲೆಯ ಅಗಲಿಕೆಯ ಚಿಂತೆ ಆದಂತೆ ಕಣ್ವರ್ಷಿಗೆ ತೋರುತ್ತದೆ; ಹಾಗಾಗಿಯೇ ಕಣ್ವನು ಹೇಳುತ್ತಾನೆ: 'ನಿಮಗೆ ನೀರೆರೆಯದೆ ಯಾರು ನೀರನ್ನು ಮೊದಲು ಕುಡಿಯುವಳೋ, ಅಲಂಕಾರಪ್ರಿಯಳಾದರೂ ನಿಮ್ಮ ಮೇಲಿನ ಸ್ನೇಹದಿಂದ ಹೂ ಚಿಗುರುಗಳನ್ನು ಯಾರು ಮುಟ್ಟಳೋ, ನೀವು ಮೊದಲು ಹೂಬಿಡುವಾಗ ಯಾರಿಗೆ ಅತೀವ ಆನಂದವಾಗಿದೆಯೋ, ಆ ನಿಮ್ಮ ಶಕುಂತಲೆ ಪತಿಗೃಹಕ್ಕೆ ಹೋಗುತ್ತಾಳೆ, ಅವಳನ್ನು ಕಳುಹಿಸಿಕೊಡಿ' ಎಂದು ಕಣ್ವನು ಅಲ್ಲಿನ

ಪರಿಸರಪಕೃತಿಯೊಡನೆ, ಹೂಚಿಗುರುಗಳೊಡನೆ, ಕೇಳಿಕೊಳ್ಳುತ್ತಾನೆ. ಈ ಮಾತು ಕೇವಲ ಕಾವ್ಯವಾಣಿಯಲ್ಲ; ಕೇವಲ ಭಾವನಾಮಯವಾದ ಸುಂದರವಾದ ಹಾಡಲ್ಲ, ಈ ಸ್ಥಿತಿ ನಿಜವಾದ ಸತ್ಯವೂ ಆಗಿದೆ. ಕಣ್ವಾರ್ಷಿ ಮಹಾಜ್ಞಾನಿ; ಪ್ರಕೃತಿ ತರುಲತೆಗಳಲ್ಲಿಯೂ ಜೀವವಿದೆ ಎಂಬ ವೈಜ್ಞಾನಿಕ ದಿವ್ಯದೃಷ್ಟಿ ಆತನಿಗೆ ಇದ್ದೇ ಇದೆ. ಹಾಗಾಗಿಯೇ, ತನಗೆ ಮಗಳನ್ನು ಕಳುಹಿಸಿಕೊಡುವಾಗ ಆಗುವ ವ್ಯಥೆಯಂತೆ, ಆ ತನ್ನ ಮಗಳ ನಿತ್ಯ ಸಹವಾಸದಲ್ಲಿ, ಪೋಷಣೆಯಲ್ಲಿ ಇದ್ದ ಪ್ರಾಣಿಗಳಿಗೂ. ಹೂಚಿಗುರುಗಳಿಗೂ ತನ್ನಂತೆಯೇ ದುಃಖದುಮ್ಮಾನ ಬಂದಿರಲೇಬೇಕೆಂಬ ವೈಜ್ಞಾನಿಕ ಸತ್ಯವನ್ನು ಕಣ್ವಾರ್ಷಿಯ ಈ ಮಾತು ಸಾರುತ್ತದೆ. ಶಕುಂತಲೆಯ ಪ್ರಥಮ ದರ್ಶನ ದುಶ್ಯಂತನಿಗಾಗಿದ್ದು, ಆಕೆ ಕೊಡ ಹಿಡಿದು ಹೂಗಿಡಗಳಿಗೆ ನೀರೆರೆಯುತ್ತಿರುವಾಗ ಎಂದು ವರ್ಣನೆಯಿದೆ. ಆದ್ದರಿಂದಲೆ ಆಕೆಯ ಜೀವನದಲ್ಲಿ ಹೂಚಿಗುರುಗಳು, ತರುಲತೆಗಳು ಇತರ ಮನುಷ್ಯ ಪ್ರಾಣಿಗಳಷ್ಟೇ ಹಾಸುಹೊಕ್ಕಾಗಿ ಆತ್ಮೀಯ ಸಂಬಂಧ ಬೆಳೆಸಿಕೊಂಡಿವೆ. ಕಣ್ವಾರ್ಷಿ ಹೂವಿನ ಗಿಡಗಳನ್ನು ಸಂಬೋಧಿಸಿ ಹೇಳುವ ಈ ಮಾತು ತುಂಬಾ ಮನಃಸ್ಪರ್ಶಿ:

'ಪಾತುಂ ನ ಪ್ರಥಮಂ ವ್ಯವಸ್ಯತಿ ಜಲಂ ಯುಷ್ಮಾಸ್ವಪೀತೇಷುಯಾ
ನಾದತ್ತೇ ಪ್ರಿಯ ಮಂಡನಾಪಿ ಭವತಾಂ ಸ್ನೇಹೇನಯಾ ಪಲ್ಲವಂ
ಆದ್ಯೇವಃ ಕುಸುಮ ಪ್ರಸೂತಿಸಮಯೇ ಯಸ್ಯಾ ಭವತ್ಯುತ್ಸವಃ
ಸೇಯಂ ಯಾತಿ ಶಕುಂತಲಾ ಪತಿಗೃಹಂ ಸರ್ವೈರನುಜ್ಞಾಯತಾಂ',

ಕಣ್ವಾರ್ಷಿಯ ವಾಣಿಯಲ್ಲಿ ಕಂಡುಬರುವ ಈ ಸುಂದರ ಸದ್ಭಾವನೆ, ಹೂಚಿಗುರುಗಳಷ್ಟೇ ಚೆಲುವಾದುದು; ಆ ಚೆಲುನುಡಿಯ ಆಳ ಅತ್ಯಂತ ಮನನೀಯ ಎಂದು ನಾವು ತಿಳಿದುಕೊಳ್ಳಬೇಕು.

ಮುದ್ದುಮುದ್ದಾಗಿ ಸಾಕಿ ಬೆಳೆಸಿದ ತಮ್ಮ ಮಗಳನ್ನು, ವಿವಾಹವಾದ ಆಕೆಯ ಪತಿ, ಅಷ್ಟೇ ಚೆನ್ನಾಗಿ ಮುಂದೆಯೂ ಪ್ರೀತಿಯಿಂದ ನೋಡಿಕೊಳ್ಳಬೇಕೆಂದು ಹೆತ್ತವರು ಆಶಿಸುವುದು ಸಹಜವೇ ಅದರಲ್ಲೂ ಅನ್ಯೋನ್ಯತೆಯಿಂದ ಅವರೇ ಪ್ರೇಮವಿವಾಹವಾದ, ತತ್ಫಲವಾಗಿ ಗರ್ಭಿಣಿಯಾದ ತಮ್ಮ ಮಗಳನ್ನು ಇದುವರೆಗೂ ಕರೆದುಕೊಂಡು ಹೋಗಲು ವ್ಯವಸ್ಥೆ ಮಾಡದ ರಾಜ ದುಷ್ಯಂತನಿಗೆ ಕಣ್ವಾರ್ಷಿ ಸೂಕ್ತ ಉಪದೇಶವನ್ನು ಸಂದೇಶವಾಗಿ ಹೇಳಿಕಳುಹಿಸುತ್ತಾನೆ; ಈ ಉಪದೇಶದ ಸಂದೇಶ ಧ್ವನಿಪೂರ್ಣವಾಗಿದೆ. "ನಾವು ಸಂಯಮಿಗಳು, ಸಾಧುಗಳು ಎಂಬುದನ್ನು, ನೀನು ಶ್ರೇಷ್ಠ ರಾಜವಂಶದಲ್ಲಿ ಜನಿಸಿದವನೆಂಬುದನ್ನು ಚೆನ್ನಾಗಿ ಯೋಚಿಸಿಕೋ; ಬಂಧುಗಳ ಒಪ್ಪಿಗೆಯನ್ನೂ ಅಪೇಕ್ಷಿಸದೆ ನೀವು ಮಾಡಿಕೊಂಡ ಸ್ನೇಹಪ್ರವೃತ್ತಿಯನ್ನು ಗಮನದಲ್ಲಿ ಇಟ್ಟುಕೊ. ಈ ವಿಷಯಗಳನ್ನು ಸರಿಯಾಗಿ ವಿಚಾರಮಾಡಿಕೊಂಡು, ನೀನು ಈಕೆಯನ್ನು ಅಂತಃಪುರದ ಇತರ ಸ್ತ್ರೀಯರೊಂದಿಗೆ ಸಾಮಾನ್ಯಳಾಗಿ ನೋಡಿಕೊಳ್ಳಬೇಕು. ಮುಂದಿನದು ಅವರವರ

ಭಾಗ್ಯ; ಅದನ್ನು ವಧೂಬಂಧುಗಳು ಹೇಳತಕ್ಕದ್ದಲ್ಲ" ಎಂಬ ಈ ಸಂದೇಶದಲ್ಲಿ, ನಮ್ಮನ್ನು ಸಾಧುಗಳು, ಎಂದರೆ ಸಜ್ಜನರು ಎಂದು ತಿಳಿದುಕೋ ಎಂದು ನಾವು ಸಾಧು-ಸನ್ಯಾಸಿಗಳು, ಶಾಪಾನಿಗ್ರಹಸಮರ್ಥರೆಂದು ತಿಳಿಯೆಂದೂ ಧ್ವನಿಯಿದೆ. ಬಂಧುಗಳೊಡನೆ ವಿಚಾರಿಸದೆ ನೀವೇ ಪರಸ್ಪರ ಪ್ರೇಮಿಸಿ ಮಾಡಿಕೊಂಡ ವಿವಾಹವೆಂಬುದರಿಂದ ಈಕೆಯನ್ನು ಸಾಮಾನ್ಯ ಇತರ ಅಂತಃಪುರ ಸ್ತ್ರೀಯರ ಜತೆಯಲ್ಲಿ ಸರಿಯಾಗಿ ನೋಡಿಕೊಳ್ಳುವುದೆಂದೂ, ಸಾ=ಈಕೆ, ಮಾನ್ಯ= ಹೆಚ್ಚಿನ ಗೌರವದಿಂದ ನೋಡಿಕೊಳ್ಳತಕ್ಕವಳು, ಏಕೆಂದರೆ ನೀವಾಗಿ ಪ್ರೇಮಿಸಿದ ಕಾರಣ ಎಂದೂ ಧ್ವನಿಯಿದೆ. ಹೀಗೆ ಋಷಿಸಹಜವಾದ ಸಜ್ಜನಿಕೆ ವಿನಯವೂ, ಸಾತ್ವಿಕವಾದ ಸಿಟ್ಟೂ ಈ ಸಂದೇಶದಲ್ಲಿ ಕಂಡುಬರುವುದು ಸರಿಯಾದದ್ದೆ. ಸ್ತ್ರೀಪುರುಷರು, ತರುಣತರುಣಿಯರು, ಅನ್ಯೋನ್ಯ ಪ್ರೀತಿಸಿ, ಬಂಧುಗಳ ಒಪ್ಪಿಗೆ ಕೂಡ ಅಪೇಕ್ಷಿಸದೆ ಪ್ರೇಮವಿವಾಹ ಮಾಡಿಕೊಂಡಲ್ಲಿ ತೊಂದರೆಯಿಲ್ಲ; ಆದರೆ ಅವರಿಗೆ ಇಬ್ಬರಿಗೂ ತಾವೇ ಮುಂದುವರಿದು ಗೈದ ಕಾರ್ಯದ ಕುರಿತು ಎಚ್ಚರವಿರಬೇಕು. ಹಾಗೆ ಮುಂದುವರಿದದ್ದು ಸರಿದಾರಿಯಲ್ಲಿ ಹೋಗುವಂತಿರಬೇಕು. ಪ್ರೇಮವಿವಾಹ ಮಾಡಿಕೊಂಡು ನೇರ್ಪಡಿಸಿಕೊಳ್ಳದೆ ಹೋದರೆ ಅದರ ದುಷ್ಫಲವನ್ನು ಅವರೇ ಅನುಭವಿಸಬೇಕಾಗುತ್ತದೆ ಎಂಬೀ ಸಂದೇಶ ಕಣ್ವರ್ಷಿ ದುಷ್ಯಂತನಿಗೆ ಕಳುಹಿಸಿದ್ದು ಸಂಪೂರ್ಣ ಸರಿಯೇ; ಅದು ಮಾನವನ ಜೀವನದ ಉತ್ತಮಿಕೆಗೆ ಯೋಗ್ಯ ಸಲಹೆ ಆಗಿದೆ. ಇಂದಿಗಾದರೂ ಆ ವಿಷಯ ತುಂಬಾ ಗಮನೀಯ. ಆ ಧ್ವನಿಪೂರ್ಣ ಸಂದೇಶ ಈ ಕೆಳಗಿನದು:

'ಆಸ್ಮಾನ್ ಸಾಧುವಿಚಿಂತ್ಯ ಸಂಯಮಧನಾನ್ ಉಚ್ಚೈಃ ಕುಲಂ ಚಾತ್ಮನಃ
ತ್ವಯ್ಯಸ್ಯಾಃ ಕಥಮಪ್ಯಬಾಂಧವಕೃಪಾಂ ಸ್ನೇಹಪ್ರವೃತ್ತಿಂ ಚ ತಾಂ
ಸಾಮಾನ್ಯ ಪ್ರತಿಪತ್ತಿ ಪೂರ್ವಕಮಿಯಂ ದಾರೇ ತು ದೃಶ್ಯಾ ತ್ವಯಾ
ಭಾಗ್ಯಾಯತ್ತಮತಃ ಪರಂ ನ ಖಲು ತದ್ವಾಚ್ಯಂ ವಧೂಬಂಧುಭಿಃ'

ಶಕುಂತಲಾ ದುಷ್ಯಂತರ ಪ್ರೇಮವಿವಾಹ, ದೂರ್ವಾಸ ಶಾಪ ನಿಮಿತ್ತ, ಮೊದಲಿಗೆ ಕಷ್ಟಕರವಾಗಿ ಹೋದರೂ, ಮುಂದೆ ಭರತ ಖಂಡಕ್ಕೆ ಹೆಸರು ತಂದ ಪುತ್ರನನ್ನು ಪಡೆದು ಸುಖಮಯವಾಯಿತು. ಕಣ್ವರ್ಷಿಯ ಸಂದೇಶ ಸರಿಯಾಯಿತು.

ತನ್ನ ಮಗಳು, ಮುಂದೆ ಪತಿಗೃಹಕ್ಕೆ ಹೋದಮೇಲೆ ಅಲ್ಲಿ, ಆ ಮನೆಮಂದಿಗೆ ಹೊಂದಿಕೊಂಡು, ಗಂಡನಿಗೆ ಅನುಕೂಲೆಯಾಗಿ, ಗುರುಹಿರಿಯರಿಗೆ ವಿಧೇಯಳಾಗಿ, ಸಖಿಯರಿಗೆ ಸ್ನೇಹಿತೆಯಾಗಿ ನಡೆದು ಹೇಗೆ ಉತ್ತಮ ಗೃಹಣಿಯೆನಿಸಿ ಬಾಳಬೇಕೆಂದು ತಂದೆಯಾದವನು ಮಗಳಿಗೆ ಉಪದೇಶ ನೀಡಬೇಕು, ಅಂತಹ ಸದುಪದೇಶವನ್ನು ಶಕುಂತಲೆಗೂ ಕಣ್ವನು ಕೊಡುತ್ತಾನೆ. "ಗುರುಹಿರಿಯರ ಸೇವೆಮಾಡು, ಅಂತಃಪುರದ

ಸಪತ್ನೀಜನರೊಂದಿಗೆ ಗೆಳತಿಯರಂತೆ ನಡೆದುಕೊ. ಗಂಡನು, ಯಾವಾಗಲಾದರೊಮ್ಮೆ ನಿನ್ನ ಮನಸ್ಸಿಗೆ ವಿರೋಧವಾಗಿ ವರ್ತಿಸಿದರೂ, ಸಿಟ್ಟುಗೊಂಡು ಆತನಿಗೆ ಇದಿರಾಡದಿರು. ಸೇವಕರಲ್ಲಿ ದಾಕ್ಷಿಣ್ಯದಿಂದ ವರ್ತಿಸು, ಭಾಗ್ಯ ಬಂದಾಗ ಹಿಗ್ಗದಿರು; ಹೀಗೆ ನಡೆದರೆ ಮಾತ್ರ ಉತ್ತಮ ಗೃಹಣಿಯರೆನಿಸುತ್ತಾರೆ; ಇದರ ವಿರುದ್ಧ ವರ್ತಿಸುವವರು ವಂಶಕ್ಕೆ ಕೆಡುಕನ್ನು ಉಂಟುಮಾಡುವರು." ಗೃಹಣಿಯಾಗಿ ಪತಿಗೃಹಕ್ಕೆ ಹೋದವಳಿಗೆ, ಅಲ್ಲಿರುವವರೆಲ್ಲರೂ ಹೊಸಬರು; ಅವರ ಸ್ವಭಾವ ನಡೆನುಡಿ ಯಾವುದೂ ಈಕೆಗೆ ತಿಳಿಯದು; ಹಾಗಾಗಿ ಅಲ್ಲಿನವರೊಡನೆ-ಅಲ್ಲಿನ ಗುರುಹಿರಿಯರಾಗಲಿ, ಸೇವಕರಲ್ಲಿ -ಅವರೊಂದಿಗೆ ಹಾಗೂ ಪತಿಯೊಂದಿಗೂ ತುಂಬಾ ಎಚ್ಚರದಿಂದ, ಸಹನೆ ತಾಳ್ಮೆಗಳಿಂದ ನಡೆದು ಶ್ರೇಷ್ಠ ಗೃಹಣಿಯೆಂಬ ಹೊಗಳಿಕೆ ಪಡೆದರೆ ತವರುಕುಟುಂಬಕ್ಕೂ, ಪತಿಯ ಸಂಸಾರಕ್ಕೂ, ಉಭಯಕುಲಗಳಿಗೂ ಕೀರ್ತಿಬಂದೀತೆಂದು ಮುಂಜಾಗ್ರತೆಯ ಮಾತು ಹೆತ್ತವರು ಹೇಳುವುದು ಸರಿ; ಅದರಂತೆ ಗೃಹಣಿಯರು ವರ್ತಿಸುವುದೂ ಯೋಗ್ಯವೇ. ಇಂತಹ ಸದ್ವರ್ತನೆಯ ಉಪದೇಶಾತ್ಮಕ ಕವಿವಾಣಿ ಈ ಕೆಳಗಿನದು.

'ಶುಶ್ರೂಷಸ್ವ ಗುರೂನ್, ಕುರು ಪ್ರಿಯಸಖೀವೃತ್ತಿಂ ಸಪತ್ನೀಜನೇ
ಭರ್ತುರ್ವಿಪ್ರಕೃತಾಪಿ ಭೀತರೂಪಯಾ ಮಾಸ್ಥ ಪ್ರತೀಪಂಗಮಃ
ಭೂಯಿಷ್ಠಂ ಭವ ದಕ್ಷಿಣಾ ಪರಿಜನೇ ಭಾಗ್ಯೇತ್ವನುದ್ವೇಗಿನೀ
ಯಾಂತ್ಯೇವಂ ಗೃಹಣೀಪದಂ ಯುವತಯಂ ರಾಮಾಃ ಕುಲಸ್ಯಾಧಯಃ'

ಸ್ವರ್ಗ-ಮರ್ತ್ಯ ಈ ಉಭಯ ಲೋಕಗಳ ಸತ್ಯಸೌಂದರ್ಯವನ್ನು 'ಶಾಕುಂತಲ' ಎಂಬೀ ಒಂದೇ ಪದದಲ್ಲಿ ನಾವು ಕಾಣಬಹುದು-ಎಂದು ಆಂಗ್ಲ ಕವಿಶ್ರೇಷ್ಠನು ಹೇಳಿದ್ದು ಇಂತಹ ಮಾನವೀಯ ಸಂಸ್ಕಾರಸದ್ಗುಣಗಳ ಬೋಧೆ ತುಂಬಿಕೊಂಡಿರುವ ಕಾರಣದಿಂದಲೇ ಎಂಬುದನ್ನು ನಾವು ತಿಳಿದುಕೊಳ್ಳಬಹುದು.

'ಪುರಾ ಕವೀನಾಂ ಗಣನಾ ಪ್ರಸಂಗೇ ಕನಿಷ್ಠಕಾಧಿಷ್ಠಿತ ಕಾಳಿದಾಸ
ಅದ್ಯಾಪಿ ತತ್ತುಲ್ಯಕವೇರಭಾವಾತ್ ಅನಾಮಿಕ ಸಾರ್ಥವತೀ ಬಭೂವ'

ಎಂಬೊಂದು ಪ್ರಶಂಸಾತ್ಮಾಕ ಶ್ಲೋಕವನ್ನು ಈ ಸಂದರ್ಭದಲ್ಲಿ ಸ್ಮರಿಸಬಹುದು. ಹಿಂದೆ, ಒಮ್ಮೆ ಒಂದು ಸಭೆಯಲ್ಲಿ, ಧೀಮಂತರು ಸೇರಿದ ಆ ಕೂಟದಲ್ಲಿ, ಯಾರು ಶ್ರೇಷ್ಠ ಕವಿಗಳು ಎಂಬ ಪ್ರಸ್ತಾಪ ಬಂದಾಗ ಕಾಳಿದಾಸನ ಹೆಸರು ಮೊದಲು ಬಂತು. ಸರಿ ಎಂದು ಅವನ ಹೆಸರು ಹೇಳಿ ಕಿರುಬೆರಳನ್ನು ಮಡಚಿ, ಮುಂದೆ ಯಾರು ಶ್ರೇಷ್ಠ ಕವಿಗಳು-ಹೆಸರು ಹೇಳಿ ಎಂದಾಗ, ಕಾಳಿದಾಸನಿಗೆ ಸಮಾನರಾದ ಯಾವನೊಬ್ಬ ಕವಿಯ ಹೆಸರೂ ಬರಲಿಲ್ಲವಾಗಿ ಎರಡನೆ ಹೆಸರಿಗೆ ಬೆರಳು ಮಡಚಲು ಆಗದೆ, ಆ ಬೆರಳಿಗೆ ಅನಾಮಿಕ ಎಂಬ ಹೆಸರು ಪ್ರಸಿದ್ಧವಾಯಿತು ಎಂಬ ಮಾತಿನಲ್ಲಿ ಶ್ಲಾಘನೆ ಇದ್ದರೂ, ಸತ್ಯವೂ ಸೇರಿದೆ ಸುಂದರವೂ ಆಪ್ಯಾಯಮಾನವೂ ಆದ ಶೈಲಿಯಲ್ಲಿ

ಅರ್ಥಗರ್ಭಿತವೂ ಧ್ವನಿಪೂರ್ಣವೂ ಆಗಿ ಕಾಳಿದಾಸನಂತೆ ಕವನಿಸಿದ ಪ್ರಸಿದ್ಧರು ತೀರಾ ಕಡಿಮೆ. ಆತನ ಕಾವ್ಯ ನಾಟಕ ಸಾಹಿತ್ಯಗಳೆಲ್ಲವೂ ಭಾರತದ, ಪ್ರಪಂಚದ, ಮಾನವಲೋಕದ ಅತ್ಯುನ್ನತ ಸಂಸ್ಕೃತಿಯ ವಾಹಿನಿಗಳಾಗಿವೆ. ಅಂದಿನಿಂದ ಇಂದಿನವರೆಗೂ, ಮುಂದಿನ ಯುಗಕ್ಕೂ ಆ ಸಂಸ್ಕೃತಿಪ್ರವಾಹ ನಿರಂತರ ಹರಿಯುತ್ತಾ ಲೋಕಕ್ಕೆ ಒಳ್ಳೆಯ ಬೆಳಕನ್ನು ಬೀರುವುದರಲ್ಲಿ ಎರಡು ಮಾತಿಲ್ಲ, ಆ ಕಾರಣಕ್ಕಾಗಿಯೇ ಕಾಳಿದಾಸನ ಶ್ರೇಷ್ಠ ಕಾವ್ಯಭಾಗವನ್ನಿಲ್ಲಿ ಎತ್ತಿ ಉದಾಹರಿಸಲಾಗಿದೆ.

೧೪

ಕಣ್ವರ್ಷಿಯ ಆಶ್ರಮದ ವಿಷಯ ಪ್ರಸ್ತಾಪಿಸಿದ ಈ ಸಂದರ್ಭದಲ್ಲಿ ಆ ಮಹರ್ಷಿಯ ಸುಪ್ರಸಿದ್ಧ ಗುರುಕುಲ ಪದ್ಧತಿಯನ್ನು–ಆ ಪದ್ಧತಿಯಲ್ಲಿ ಭಾರತದ ಅತ್ಯುನ್ನತ ಶೈಕ್ಷಣಿಕ ಜೀವನಾಭ್ಯಾಸ ಪದ್ಧತಿಯನ್ನು ಆ ಸಂಸ್ಕೃತಿಯ ವಿಚಾರವನ್ನು ಹೇಳುವುದು ಅವಶ್ಯವಾಗಿದೆ. ಹಿಂದಿನ ಋಷಿವರ್ಯರು ಲೌಕಿಕ ಸುಖಭೋಗಗಳನ್ನು ತ್ಯಜಿಸಿ, ಅರಣ್ಯಗಳಿಗೆ ಹೋಗಿ, ಆಶ್ರಮಗಳನ್ನು ಸ್ಥಾಪಿಸಿ, ತಪೋಜೀವನ ನಡೆಸಿ, ಬದುಕಿನ ಆಳ ವಿಶಾಲತೆ ಯೋಗ್ಯತೆಗಳ ಕುರಿತು ಚಿಂತಿಸಿದರು. ಗುರುಕುಲಗಳನ್ನು ಸ್ಥಾಪಿಸಿ ಸಹಸ್ರ ಸಹಸ್ರ ವಿದ್ಯಾರ್ಥಿಗಳಿಗೆ ಅತ್ಯುತ್ತಮ ಶಿಕ್ಷಣ ನೀಡಿ ನಾಗರಿಕರನ್ನಾಗಿ ಮಾಡಿದರು. ಗುರುಕುಲದ ಪ್ರಮುಖ ಗುರುವಿಗೆ ಕುಲಪತಿಯೆಂಬ ನಾಮಧೇಯ; ಕಣ್ವರ್ಷಿ ಅಂತಹ ಓರ್ವ ಕುಲಪತಿ. ಕುಲಪತಿಯೆನಿಸಬೇಕಾದರೆ ಆತ ತನ್ನ ಗುರುಕುಲದಲ್ಲಿ ಅಶನವಸನಗಳನ್ನಿತ್ತು ವಿದ್ಯಾಭ್ಯಾಸ ಕೊಡುವವನಾಗಿರಬೇಕು. ಗುರುಕುಲಕ್ಕೆ ಋಷ್ಯಾಶ್ರಮಕ್ಕೆ ತನ್ನದೇ ಆದ ಅಷ್ಟೊಂದು ಸಹಸ್ರಸಂಖ್ಯೆಯ ವಿದ್ಯಾರ್ಥಿಗಳನ್ನು ಪೋಷಿಸಿ ಶಿಕ್ಷಣ ನೀಡಲು ಬೇಕಾದ ಸೊತ್ತು, ಬದುಕು, ಸಂಪತ್ತು ಇರಲಿಲ್ಲ. ಹಾಗಿದ್ದರೂ, ಊರಿಗೆ ಊರೇ, ಎಲ್ಲರೂ ಗುರುಕುಲಕ್ಕೆ ಅವಶ್ಯವಿರುವ ಸಕಲ ಸಾಧನಸಾಮಾಗ್ರಿ, ಸಹಾಯ ಒದಗಿಸುತ್ತಿದ್ದರು. ರಾಜ್ಯವಾಳುವ ಅರಸರೂ ನೆರವು ನೀಡುವರು. ತಾವು ನೀಡಿದ ನೆರವಿಗೆ ಋಷಿಗಳು ತಮಗೆ ಋಷಿಗಳ ತಪಸ್ಸಿನ ಪುಣ್ಯಫಲದ ಷಡ್ಭಾಗ ದೊರಕುವುದೆಂದು ನಂಬುತ್ತಿದ್ದರು.

'ತಪಃ ಷಡ್ಭಾಗಮಕ್ಷಯ್ಯಂ ದದಾತ್ಯಾರಣ್ಯಕಾ ಹಿ ನಃ'

ಎಂದು ರಾಜರು ವಿಶ್ವಾಸವುಳ್ಳವರಾಗಿದ್ದರು. ಇಂತು, ಊರಿನ ಅರಸರ ಸಕ್ರಿಯ ಸಹಾಯದೊಂದಿಗೆ ಸ್ಥಳೀಯ ಮಹಾಜನರು, ತಾವು ಉತ್ಪಾದಿಸಿದ ಗೋಧಿ, ಅಕ್ಕಿ, ರಾಗಿ, ಹಾಲು, ತುಪ್ಪ, ತರಕಾರಿ ಹೀಗೆ ಜೀವನೋಪಾಯಕ್ಕೆ ಅವಶ್ಯವಿರುವ ವಸ್ತುಗಳನ್ನು ಸಕಲರೂ ಕಳುಹಿಸಿ ಕೊಡುತ್ತಿದ್ದರು. ಇಂತು ಸಮಾಜದಿಂದ, ಸ್ವೇಚ್ಛೆಯಿಂದ ಸರ್ವ ಸಹಾಯಸಹಕಾರಗಳನ್ನೂ ಪಡೆದು ಋಷಿಯಾದ ಕುಲಪತಿ ಗುರುಕುಲ ನಡೆಸುತ್ತಿದ್ದನು.

ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ನೀಡುತ್ತಾ ದೇಶದ ಸಂಸ್ಕೃತಿ ಜ್ಯೋತಿಯನ್ನು ಬೆಳಗಿಸುತ್ತಿದ್ದನು. ಇಂತಹ ಒಂದು ಉತ್ತಮ ಶಿಕ್ಷಣ ಪದ್ಧತಿ– ತಕ್ಷಶೀಲಾ, ನಲಂದಾ ಗುರುಕುಲಗಳವರೆಗೂ ನಡೆಯುತ್ತಾ ಬಂತು, ಈ ಗುರುಕುಲಗಳ ಶಿಕ್ಷಣಕ್ರಮವನ್ನು ಮೆಚ್ಚಿ ಅಲ್ಲಿ ಅಭ್ಯಾಸ ಮಾಡಲು ಪರದೇಶಗಳಿಂದ, ಚೀನಾ ಮೊದಲಾದ ರಾಷ್ಟ್ರಗಳಿಂದಲೂ ಜ್ಞಾನಾರ್ಥಿಗಳು ಬರುತ್ತಿದ್ದರು.

ಋಷ್ಯಾಶ್ರಮದ ಗುರುಕುಲದಲ್ಲಿ ಶಿಕ್ಷಣ ಪಡೆವ ವಿದ್ಯಾರ್ಥಿಗಳೆಲ್ಲರೂ ಸಮಾನರು, ರಾಜಕುಮಾರನು, ಸಾಮಾನ್ಯ ನಾಗರಿಕನ ಮಗನೂ ಅಲ್ಲಿ ಏಕಸಮಾನ. ಕೃಷ್ಣಸುದಾಮರೂ, ದ್ರುಪದದ್ರೋಣರೂ ಸಮನರೇ; ಗುರು ಹೇಳಿಕೊಟ್ಟ ವಿದ್ಯೆಯನ್ನು ಕಲಿಯುವುದರೊಂದಿಗೆ ಗುರು ಹೇಳಿದ ಕೆಲಸಗಳನ್ನೂ ಮಾಡುವರು. ಕಾಡಿಗೆ ಹೋಗಿ ಕಟ್ಟಿಗೆ ಸಮಿತ್ತು ತರುವುದು. ಬೌದ್ಧಿಕ ವಿದ್ಯಾಭ್ಯಾಸದೊಂದಿಗೆ ದೈಹಿಕ ಶ್ರಮವನ್ನೂ ಶ್ರದ್ಧೆವಿಧೇಯತೆಗಳಿಂದ ಮಾಡುವರು. ಇಂತಹ ಒಂದು ಸರ್ವಸಮಾನತೆಯ, ಬೌದ್ಧಿಕ ದೈಹಿಕ ಶ್ರದ್ಧಾಪೂರ್ಣವಾದ ದುಡಿಮೆ, ಅಂದಿನಿಂದ ಇಂದಿಗೂ ಸ್ವಾಗತಾರ್ಹ. ಗಾಂಧೀಜಿ ಬೋಧಿಸಿದ ಮೂಲಶಿಕ್ಷಣ ಪದ್ಧತಿಯಲ್ಲಿಯೂ ಇದರ ಅಂಶವಿದೆ. ಇಂತು, ಪ್ರಾಚೀನ ಭಾರತೀಯ ಶಿಕ್ಷಣವ್ಯವಸ್ಥೆ, ಗುರುಕುಲ ಪದ್ಧತಿ ಒಂದು ಉತ್ತಮ ಆದರ್ಶ ಪದ್ಧತಿಯಾಗಿದೆ; ಸಂಸ್ಕಾರಪೂರ್ಣವಾಗಿದೆ.

ಪ್ರಾಚೀನ ಶಿಕ್ಷಣಪದ್ಧತಿಯ ತರಬೇತಿ ಅಂದಿನ ಸಮಾಜದಲ್ಲಿ ಉಂಟುಮಾಡಿದ ಬೌದ್ಧಿಕ ವಿಚಾರಕ್ರಾಂತಿ ಗಣನೀಯ. ಶಾಕ್ಯರಾಜವಂಶದ ಉತ್ತರಾಧಿಕಾರಿ ಯುವರಾಜ ಸಿದ್ಧಾರ್ಥನು ತನ್ನ ತುಂಬಿದ ಯೌವ್ವನದ ಪ್ರಾಯದಲ್ಲಿ ಮಡದಿಯನ್ನು, ಪುತ್ರನನ್ನು ಬಿಟ್ಟು, ರಾಜ್ಯಸಕಲವೈಭವವನ್ನು ತುಚ್ಛವಾಗಿ ಗಣಿಸಿ ಲೋಕದ ಜನತೆಯ ಶೋಕಸಂಕಟಗಳಿಗೆ ಪರಿಹಾರ ಕಂಡು ಹುಡುಕಲು ಬೋಧಿವೃಕ್ಷದ ನೆರಳನ್ನು ಆಶ್ರಯಿಸಿ ಧ್ಯಾನಮಗ್ನನಾಗಿ ಕುಳಿತು ತಿಳಿವಿನ ಬೆಳಕನ್ನು ಕಂಡನು. ಲೋಕಕ್ಕೆ ಬೆಳಕು ಬೀರಿದನು. ಆತನ ಬೋಧನೆಯಿಂದ ಪ್ರಭಾವಿತರಾದ ಸಹಸ್ರ ಸಹಸ್ರ ಸಂಖ್ಯೆಯ ಭಿಕ್ಷುಗಳು ಭಾರತದಾದ್ಯಂತ ಜೀವನ ಸಂಸ್ಕೃತಿಯನ್ನು ಬೋಧಿಸಿದ್ದಲ್ಲದೆ, ಮುಂದೆ ಜಪಾನು ಚೀನಾ ದೇಶಗಳಿಗೂ ಬುದ್ಧಸಂದೇಶ ಸಾರಿದರು. ದಿಗ್ವಿಜಯ ಗೈದು, ರಾಜಮಹಾರಾಜರುಗಳನ್ನೆಲ್ಲಾ ಶರಣಾಹತರಾಗಿಸಿರಿ ಅವರಿಂದ ಕಪ್ಪಕಾಣಿಕೆ ಪಡೆದು ರಾಜ್ಯಕ್ಕೆ ಬಂದ ಅಣ್ಣನ ದರ್ಪವನ್ನು ಕಂಡು ಅದನ್ನು ಪ್ರತಿಭಟಿಸಿ ಆತನ ಅಹಂಕಾರ ಮುರಿಯಲು ಹೋರಾಡಿದ ತಮ್ಮ ಬಾಹುಬಲಿ, ಯುದ್ಧದಲ್ಲಿ ಅಣ್ಣನನ್ನು ಸೋಲಿಸಿ ಆದಮೇಲೆ, ಈ ಅಶಾಶ್ವತವಾದ ರಾಜ್ಯದ ಸುಖಭೋಗಕ್ಕಾಗಿ ಒಡಹುಟ್ಟಿದ ಅಣ್ಣನೊಡನೆ ಕಾದಾಡಿದ ತನ್ನ ಹೀನಕೃತ್ಯಕ್ಕೆ ಪಶ್ಚಾತ್ತಾಪಗೊಂಡ ಸರ್ವಸಂಗಪರಿತ್ಯಾಗಮಾಡಿ, ಗೊಮ್ಮಟೇಶ್ವರನಾದನು. ಜೀವನ ಭವ್ಯತೆ ದಿವ್ಯತೆಗಳನ್ನು ಪ್ರಕಟಿಸಿ ಶ್ರೇಷ್ಠನಾದನು. ಹಿಂದೆ ಹೇಳಿದಂತೆ, ಗಾಂಧೀಜಿ ಕೂಡ ಅಧಿಕಾರಕ್ಕೆ ಕಿಂಚಿತ್ತೂ ಆಸೆಪಡದೆ ನಿಜವಾದ

ಮಹಾತ್ಮರಾದರು ಇಂತಹ ಉತ್ತಮ ಆದರ್ಶ, ಮಹೋನ್ನತ ಜೀವಿತಸಂಸ್ಕಾರಗಳು ನಮ್ಮನ್ನು ರಾಷ್ಟ್ರದ ಸಮಸ್ತ ಜನತೆಯನ್ನು ಪ್ರಗತಿಪಥದಲ್ಲಿ ಮುನ್ನಡೆಸಲು ಸಹಾಯವಾಗಿವೆ.

ಕನ್ನಡನಾಡುನುಡಿಗಳ ಉನ್ನತ ಸಾಂಸ್ಕೃತಿಕ ಪರಂಪರೆಯನ್ನು ಪಂಪ ರನ್ನ ರುದ್ರಭಟ್ಟ, ಷಡಕ್ಷರಿ, ನಾರಣಪ್ಪ, ರತ್ನಾಕರವರ್ಣಿ, ಮುದ್ದಣ, ಗೋವಿಂದ ಪೈ, ಕುವೆಂಪು ಇಂತಹ ಕವಿಶ್ರೇಷ್ಠರು, ಮಧ್ವ, ಬಸವ, ಪುಂದರ, ಕನಕಾದಿ ದಾಸವರೇಣ್ಯರು ಅಂದಿನಿಂದ ಇಂದಿನವರೆಗೂ ಬೆಳೆಸುತ್ತಾ ಬಂದಿದ್ದಾರೆ. ಕನ್ನಡಭಾಷೆಯಲ್ಲೆಂತೋ ಭಾರತದ ವಿವಿಧ ಭಾಷೆಗಳಲ್ಲಿ, ವಿವಿಧ ಭಾಗಗಳಲ್ಲಿ ಬಂಗಾಳ, ಮಹಾರಾಷ್ಟ್ರ, ಗುಜರಾಥ್ ತಮಿಳುನಾಡು, ಕೇರಳದ ಎಲ್ಲಾ ಕಡೆಗಳಲ್ಲಿಯೂ, ವಿಶ್ವಕವಿ ರವೀಂದ್ರರೇ ಮೊದಲಾಗಿ ಹಲವಾರು ಧೀಮಂತರು ಸಂಸ್ಕೃತಿಯ ದೀಪ ಹಚ್ಚಿದ್ದಾರೆ. ಠಾಕೂರರು, ವಿಶ್ವಮಾನ್ಯವಾದ ಸಾಹಿತ್ಯ ರಚಿಸಿ, ನಮ್ಮ ಸಂಸ್ಕೃತಿಯನ್ನು ದೇಶ ವಿದೇಶಗಳ ಜ್ಞಾನಾರ್ಥಿಗಳಿಗೆ ಸಾಹಿತ್ಯ, ಕಲೆ, ತತ್ವ, ನೀತಿ ನಡತೆಗಳನ್ನೂ ಕಲ್ಪಿಸಿ ಮಾರ್ಗದರ್ಶಕರಾದರು. ವಿದೇಶಿಯರಾದ ರೆವೆರೆಂಡ್ ಅಂಡ್ರೂಸರೂ ಗುರುದೇವನ ಅನುಯಾಯಿಯಾಗಿ ಶಾಂತಿನಿಕೇತನದಲ್ಲಿಯೇ ನೆಲೆಸಿದರು. ಮಹರ್ಷಿ ಅರವಿಂದರೂ ಅರವಿಂದಾಶ್ರಮ ಸ್ಥಾಪಿಸಿದರು. ಅಲ್ಲಿಗೂ ದೇಶವಿದೇಶಗಳ ಜ್ಞಾನಾರ್ಥಿಗಳು ಬಂದು ಸದ್ಗತಿಪಡೆದರು. ಅಂತೆಯೇ ರಮಣಾಶ್ರಮ ಕೂಡ. ಪ್ರಕೃತಿಯ ಮಡಿಲಲ್ಲಿ, ವೃಕ್ಷರಾಜಿಗಳ ನೆರಳಲ್ಲಿ, ಸುಂದರ ಶಾಂತ ವಾತಾವರಣದಲ್ಲಿ ಸ್ಥಾಪಿತವಾದ ಈ ಆಶ್ರಮಗಳೆಲ್ಲ ನಮ್ಮ ರಾಷ್ಟ್ರದ ಸಂಸ್ಕಾರದ ಹಿರಿತನವನ್ನು ಲೋಕಕ್ಕೆ ತಿಳಿಸುವ ಮಹಾತ್ಕಾರ್ಯ ಮಾಡಿವೆ. ರಾಷ್ಟ್ರಪಿತ ಮಹಾತ್ಮಾಜಿ ಕೂಡ, ಸ್ವಾತಂತ್ರ್ಯ ಹೋರಾಟದ ಕಾಲದಲ್ಲಿಯೇ ಸಬರ್ಮತಿ, ವರ್ಧಾಗಳಲ್ಲಿ ಆಶ್ರಮಗಳನ್ನು ಸ್ಥಾಪಿಸಿ, ಅಲ್ಲಿ ದೇಶಸೇವಕರನ್ನು ಸರ್ವತ್ಯಾಗಕ್ಕೂ ಸಿದ್ಧತೆ ಮಾಡಿದರು. ಅಂತಹ ಸಿದ್ಧತೆಯ ಕಾರಣವಾಗಿಯೇ ಭಾರತ ಸ್ವತಂತ್ರವಾಯಿತು; ಜಗತ್ತಿನ ಮುಂದೆ ಇಂದು ನಾವು ತಲೆಯೆತ್ತಿ ನಡೆಯುವಂತಾಯಿತು. ಹಿಂದೆ ಪ್ರಸ್ತಾಪಿಸಿದ ನಮ್ಮ ಪ್ರಾಚೀನ ಋಷಿವರೇಣ್ಯರ, ಅಂದಿನ ಆ ಗುರುಕುಲಗಳ ಉತ್ತಮ ಶಿಕ್ಷಣನೀತಿಯೇ ಮೂಲವಾಗಿ ಇಂದಿನ ವರ್ಧಾದ ಆಶ್ರಮದ ತನಕ ನಮ್ಮ ನಾಡಿನ ಸಂಸ್ಕೃತಿಯನ್ನು ಬೆಳಗಿಸಿದ ಮಹಾಪುರುಷರೆಲ್ಲರೂ ಪರಮಪೂಜ್ಯರೂ ಚಿರಸ್ಮರಣೀಯರೂ ಆಗಿದ್ದಾರೆ.

ತನ್ನ ಪಾಲಿಗೆ ಬಂದ ಕರ್ತವ್ಯಕರ್ಮವನ್ನು ವ್ಯಕ್ತಿಯೊಬ್ಬನು ತ್ರಿಕರಣಶುದ್ಧವಾಗಿ ಮಾಡಿದ್ದಲ್ಲಿ ಮಾತ್ರ ಸಕಲತೆಯ ಸಿದ್ಧಿ ದೊರಕಬಹುದಾಗಿದೆ. ತ್ರಿಕಣಗಳೆಂದರೆ ಮನೋ ವಾಕ್ ಕಾಯಗಳು. ಮನಸ್ಸಿನಲ್ಲಿ ಗ್ರಹಿಸಿದ್ದನ್ನೇ ಮಾತಿನಲ್ಲಿಯೂ ಹೇಳುವುದು. ಹಾಗೆ ಮಾತಿನಲ್ಲಿ ಹೇಳಿದಂತೆ ಕೆಲಸದಲ್ಲಿಯೂ ಮಾಡಿತೋರಿಸುವುದು. ಈ ಅಕೃತ್ರಿಮವಾದ ವರ್ತನೆಯನ್ನು ತ್ರಿಕರಣಶುದ್ಧಿಯೆಂದು ಹೇಳುವುದು. ಅದೇ ಮನುಷ್ಯನ ಉತ್ತಮ ನಡತೆಗೆ ಸೋಪಾನ.

'ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ಮಹಾತ್ಮನಾಂ
ಮನಸ್ಯೇಕಂ ವಚಸ್ಯೇಕಂ ಕರ್ಮಣ್ಯೇಕಂ ದುರಾತ್ಮನಾಂ'

ಎಂಬ ಸಮಾನ ಪದಗಳಿಂದ ವಿವರಿಸುವ ಮಹಾತ್ಮ-ದುರಾತ್ಮರ ಲಕ್ಷಣಗಳನ್ನು ತಿಳಿಸುವ ಒಂದು ಸುಭಾಷಿತ ಶ್ಲೋಕವಿದೆ. ಈ ಶ್ಲೋಕದಲ್ಲಿ ಉಪಯೋಗಿಸಿದ ಪದಗಳು ಪೂರ್ವಾರ್ಧ ಉತ್ತರಾರ್ಧ ಪಂಕ್ತಿಗಳು ಸಮಾನ ಪದಗಳಿಂದ ಕೂಡಿದ್ದಾಗಿ ಮೇಲಿಂದ ಮೇಲೆ ನೋಡುವಾಗ ಹಾಸ್ಯ ವ್ಯಂಜಕವಾಗಿದೆ. ಮಹಾತ್ಮರಿಗೂ ದುರಾತ್ಮರಿಗೂ ಒಂದೇ ಲಕ್ಷಣದಂತಿದೆ. ಆದರೆ ಆಳವಾಗಿ ಅರ್ಥಮಾಡಿದರೆ ಮನಸ್ಸಿನಲ್ಲಿ ವಚಸ್ಸಿನಲ್ಲಿ ಕರ್ಮದಲ್ಲಿ ಮಹಾತ್ಮರಿಗೆ ಒಂದೇ ರೀತಿಯ ವ್ಯವಹಾರವೆಂದೂ ದುರಾತ್ಮರಿಗೆ ಮನಸ್ಸಿನಲ್ಲಿ ಒಂದು ವಚಸ್ಸಿನಲ್ಲಿ ಮತ್ತೊಂದು ಕರ್ಮದಲ್ಲಿ ಬೇರೊಂದು ಎಂದು ಭಿನ್ನ ಭಿನ್ನಾರ್ಥ ವ್ಯಂಜಕವಾಗಿ ನಗುವಂತೆ ಆಗುತ್ತದೆ. ಹೇಗೂ ಈ ಸುಭಾಷಿತವು ಅರ್ಥದ ಆಳದಲ್ಲಿ ಮಹಾತ್ಮ ದುರಾತ್ಮರ ಲಕ್ಷಣಗಳನ್ನು ಹೇಳುತ್ತದೆ. ತ್ರಿಕರಣಶುದ್ಧವಾದ ಸದ್ ಆಚರಣೆ ಪ್ರತಿಯೊಬ್ಬನಿಗೂ ಇರಬೇಕು. ಅದೇ ಮಹತ್ವಿಕೆಗೆ ಹಾದಿ, ಸದಾಚಾರವೆಂಬುದು ಸುಭಾಷಿತಕಾರನ ಅಭಿಪ್ರಾಯ.

ಯಾವನೊಬ್ಬ ವ್ಯಕ್ತಿ ಬೇರೆ ಯಾವೊಬ್ಬ ವ್ಯಕ್ತಿಯ ಸಹವಾಸದಲ್ಲಿ ಇದ್ದಾನೆ ಎಂಬುದರಿಂದ ಆತನ ಗುಣಶೀಲಗಳನ್ನು ತಿಳಿದುಕೊಳ್ಳಬಹುದಾಗಿದೆ. ಕುಡುಕತನ, ವ್ಯಭಿಚಾರ, ಭ್ರಷ್ಟಾಚಾರ, ಕಳವು, ಕೊಲೆ, ಸುಲಿಗೆಗಳಲ್ಲಿ ವ್ಯಾಪೃತನಾದವನ ಜತೆಯಲ್ಲಿ ಇರುವವನು ಆ ಸಹವಾಸಿಯ ಎಲ್ಲಾ ದುರ್ಗುಣಗಳ ಪಾಪಲೇಪಗಳನ್ನು ಅರಿತುಕೊಳ್ಳುವುದು ಸಹಜವೇ ಆದುದು, ಸತ್ಯ ಧರ್ಮ ಸಜ್ಜನಿಕೆ ಸದಾಚಾರಗಳುಳ್ಳ ವ್ಯಕ್ತಿಗಳ ಸಂಪರ್ಕ ಸಹವಾಸ ಈ ಗುಣಗಳನ್ನು ಹೊಂದಲು ಅವಕಾಶ ನೀಡುತ್ತದೆ. ಆದ್ದರಿಂದಲೇ ದುರ್ಜನಸಂಗ ಮಾಡಬಾರದು; ಸಜ್ಜನವಾಸ ಇರತಕ್ಕದ್ದು ಎಂದು ತಿಳಿದವರೆಲ್ಲಾ ನೀತಿ ಸಾರಿದರು; ಕೊಳಕು, ಅಶುದ್ಧಿ, ಮಲಮೂತ್ರಗಳ ಸುತ್ತಲ ವಾತಾವರಣ ರೋಗರುಜಿನಗಳನ್ನು ಉಂಟುಮಾಡಿ ಶರೀರಕ್ಕೆ ಬಾಧೇ ನೀಡುತ್ತದೆ; ನಾವು ವಾಸಿಸುವ ಮನೆ ಊರು ಪ್ರದೇಶಗಳು ಸದಾ ಸ್ವಚ್ಛನಿರ್ಮಲವಾಗಿದ್ದರೆ, ಪರಿಸರ ಶುದ್ಧವಿದ್ದರೆ ಅಂತಹ ವಾತಾವರಣದಲ್ಲಿ ಆರೋಗ್ಯವಂತರಾಗಿ ಬಾಳಬಹುದು. ಇವು ಬಾಹ್ಯವಿಶೇಷಗಳಾದರೂ ಅವು ಮನುಷ್ಯರಿಗೆ ಸಕಲಜೀವಿಗಳಿಗೂ ಕೆಡುಕನ್ನು ಒಳಿತನ್ನು ಮಾಡಬಹುದಾದುದರಿಂದ ಸಹವಾಸ ಸದಾ ನಿರ್ಮಲವಾಗಿರಕತ್ತದ್ದು. ಇದರಂತೆ ದಿನನಿತ್ಯ ನೋಡುವ ದೂರದರ್ಶನ ಚಲಚ್ಚಿತ್ರ ನಾಟಕಾದಿಗಳಲ್ಲಿ ಕೊಲೆ ಸುಲಿಗೆ, ಅಶ್ಲೀಲ ಅಸಹ್ಯಗಳೇ ತುಂಬಿದ್ದರೆ ಅದನ್ನು ನೋಡುವವರ ಚಿತ್ತವೃತ್ತಿಯು ಕಲುಶಿತವಾಗದಿರದು. ಅದೇ ರೀತಿ ಬೋಧನೆಗಾಗಿ ಗಾಂಧೀಜಿ ತನ್ನ ಮುಂದೆ ಸದಾ ಮೂರು ಮಂಗಗಳ ಮೂರ್ತಿಗಳನ್ನು ಇಟ್ಟುಕೊಂಡಿದ್ದರು; ಒಂದು ಮಂಗ

ಬಾಯಿಮುಚ್ಚಿಕೊಂಡಿದೆ; ಇನ್ನೊಂದು ಕಿವಿ ಮುಚ್ಚಿಕೊಂಡಿದೆ; ಮತ್ತೊಂದು ಕಣ್ಣು ಮುಚ್ಚಿಕೊಂಡಿದೆ. ಅದರ ಅರ್ಥ ಕೆಟ್ಟದ್ದನ್ನು ಹೇಳಬಾರದು, ಕೇಳಬಾರದು, ನೋಡಬಾರದು ಎಂದು.

'ಭದ್ರಂ ಕರ್ಣೇಭಿಃ ಶೃಣಯಾಮ ದೇವಾಃ

ಭದ್ರಂ ಪಶ್ಯೇಮಾಕ್ಷಭಿರ್ಯಜತ್ರಾಃ'

ಇದು ಉಪನಿಷತ್ ಮಂತ್ರವಾಣಿ; ಒಳ್ಳೆಯದ್ದನ್ನೇ ಕಿವಿಯಿಂದ ಕೇಳುತ್ತಿರಬೇಕು, ಒಳ್ಳೆಯದನ್ನೇ ಕಾಣುತ್ತಿರಬೇಕು ಎಂಬಿತ್ಯಾದಿ ನೀತಿಮಾತುಗಳು ಪ್ರಾಚೀನ ಋಷಿ ಗಳೇ ಹೇಳಿದ್ದಾರೆ ಇದು ಒಂದು ಉತ್ತಮ ನಡತೆಯ ಸಂಸ್ಕಾರದ ಸಾಕ್ಷಿಯಾಗಿದೆ.

ಇದರಂತೆ ಮನುಷ್ಯನು ದಿನನಿತ್ಯ ಉಪಯೋಗಿಸುವ ಆಹಾರ ವಸ್ತುಗಳು ಉತ್ತಮ ಹಾಗೂ ಅಧಮ ಪರಿಣಾಮಗಳನ್ನು ಉಂಟುಮಾಡಬಲ್ಲವು. ಶರೀರದ ಆರೋಗ್ಯ ಸಂರಕ್ಷಣೆಗೆ ಅವಶ್ಯವಿರುವ ಪೋಷಕಾಂಶವುಳ್ಳ ಆಹಾರ ಅವಶ್ಯ; ದೇಹದ ಬೆಳವಣಿಗೆಗೆ ಬೇಕಾದ ಜೀವಾತುಗಳು ಆಹಾರದಲ್ಲಿ ಕಡಿಮೆಯಾದರೆ ಆರೋಗ್ಯ ಕೆಟ್ಟು ಹೋಗಬಹುದು, ಈ ಎಚ್ಚರ ಇರಲೇಬೇಕು. ಆದರೆ ಲವಶ್ಯವಿಲ್ಲದ ಅಧಿಕರೂಪ ಪೋಶಕಾಂಶಗಳು ಜೀವಾತುಗಳು ಇರುವ ಆಹಾರ ತೆಗೆದುಕೊಂಡಲ್ಲಿ ಅದು ಅನಾರೋಗ್ಯಕ್ಕೆ ಕಾರಣವಾಗುವುದು. ಸಮತೋಲನದ ಆಹಾರ ದೇಹಕ್ಕೆ ಎಷ್ಟು ಅವಶ್ಯವೋ ಅಷ್ಟೇ ಸ್ವೀಕರಿಸುವುದು. ಬದುಕುದಕ್ಕಾಗಿ ಆಹಾರವಲ್ಲದೆ ಆಹಾರಕ್ಕಾಗಿ ಬದುಕುವುದಲ್ಲ. ಬಾಯಾರಿಕೆಯಾದರೆ ಶುದ್ಧನೀರು ತುಂಬಾ ಆವಶ್ಯ; ಹಾಲು ಮಜ್ಜಿಗೆ ಕುಡಿಯಬಹುದು ಉತ್ತೇಜಕ ಆಹಾರವಾಗಲಿ ಪಾನಿಯವಾಗಲಿ ಅವಶ್ಯವಿಲ್ಲ. ಮುಖ್ಯವಾಗಿ ಮಧ್ಯಪಾನ ವರ್ಜಿಸಲೇಬೇಕು; ಆದ್ದರಿಂದ ನಮ್ಮ ಶರೀರದ ಆರೋಗ್ಯ ಕೆಡುವುದು ಮಾತ್ರವಲ್ಲ ನಮ್ಮ ಬುದ್ಧಿಯೂ ಹಾಳಾಗುವುದು. ಸಮಾಜದಲ್ಲಿ ನಮ್ಮ ನೈತಿಕ ಸ್ಥಾನಮಾನ ಅಧಃಪತನವಾಗುವುದು ಹಾಗಾಗಿ ಆಹಾರವನ್ನು ಹಿಂದಿನವರೇ ಸಾತ್ವಿಕ ರಾಜಸ ತಾಮಸಗಳೆಂದು ಮೂರು ವಿಧಗಳಾಗಿ ವಿಂಗಡಿಸಿದ್ದಾರೆ. ಸಾತ್ವಿಕಾಹಾರ ಸ್ವೀಕಾರಾರ್ಹ; ತಾಮಸಾಹಾರ ಸಂಪೂರ್ಣವರ್ಜ್ಯ' ದೇಹಕ್ಕೆ ಅವಶ್ಯವಿದ್ರೆ ವೈದ್ಯರ ಸಲಹೆಯಂತೆ ರಾಜಸಾಹಾರ ಸ್ವೀಕರಿಸಬಹುದು. ಪಂಚೇಂದ್ರಿಯ ಸುಖಾನುಭವದಲ್ಲಿ ಸಂಯಮ ತೀರಾ ಅವಶ್ಯ. ನಾಲಿಗೆಯು ಪಂಚೇಂದ್ರಿಯಗಳಲ್ಲೊಂದು ಅದರ ಸಂಯಮವು ಆರೋಗ್ಯಕ್ಕೆ ಒಳ್ಳೆಯ ನಡತೆಗೆ ಅವಶ್ಯ. ನಿರ್ಮಲವಾದ ಪ್ರಾಕೃತಿಕ ಸಾತ್ವಿಕಾಹಾರವನ್ನು ಸ್ವೀಕರಿಸಿ ಸರಳ ಜೀವನ ನಡೆಸುವುದೇ ಒಳ್ಳೆಯ ಸಂಸ್ಕಾರಕ್ಕೆ ಪೋಷಕ.

ಇಂದು ಪರಿಸರ ಸಂರಕ್ಷಣೆಯ ಕುರಿತು ಮೇಧಾವಿಗಳು ಚಿಂತಿತರಾಗಿದ್ದಾರೆ. ಮಾರ್ಗಗಳಲ್ಲಿ ನಿರಂತರ ವಾಹನಗಳು ಸಂಚರಿಸುತ್ತಿರುವಾಗ ಏಳುವ ಧೂಳಿನ

ರಾಶಿಯಿಂದ ಅವುಗಳ ಓಡಾಟದ ಆರ್ಭಟಗಳಿಂದ ಜನಜಂಗುಳಿಯ ಸಂಚಲನ ಕೋಲಾಹಲಗಳಿಂದ ಬೃಹತ್ ಕೈಗಾರಿಕೆಗೆ ಆಕಾಶವ್ಯಾಪಿ ಹೊಗೆಯ ರಾಶಿಯಿಂದ ಭೀಮ ಯಂತ್ರಗಳ ಬೊಬ್ಬೆಯಿಂದ ನದಿಗಳಿಗೆ, ಸಮಾಜಕ್ಕೆ ಬಿಡುವ ಕೈಗಾರಿಕೇ ಸ್ಥಾವರಗಳಿಂದಾದ ಕೊಳೆ, ಕಲ್ಮಶಗಳಿಂದ ಮಿಶ್ರಣದ ಕೆಟ್ಟ ಆಹಾರದಿಂದ ನಾಗರಿಕ ಜೀವನ ಪ್ರಕೃತಿ ಪರಿಸರ ಇಂದು ಕೆಡುತ್ತಾ ಇವೆ. ವಿಷಮಯವಾಗುತ್ತಿವೆ. ದೊಡ್ಡ ನಗರಗಳಲ್ಲಿ ಪ್ರತಿ ದಿನ ತಿನ್ನುವ ಮಿಶ್ರಣವಾದ ಆಹಾರದಿಂದಲೂ ಸೇವಿಸುವ ಅಶುದ್ಧ ಗಾಳಿಯಿಂದಲೂ ನಮಗೆ ಗೋಚರವಾಗದೆಯೇ ನಾವು ವಿಷಸೇವಿಸುವ ಅನಿಷ್ಟ ತಂದುಕೊಳ್ಳುತ್ತೇವೆ. ಇಂತಹ ಸಂಕಷ್ಟಗಳನ್ನು ನಿವಾರಿಸಲು, ಪರಿಸರ ನೈರ್ಮಲ್ಯವನ್ನು ಕಾಪಾಡಿ. ಮನುಷ್ಯ, ಪ್ರಾಣಿ, ಮೃಗ, ಪಕ್ಷಿ ತರುಲತೆಗಳನ್ನು ಪುಷ್ಟವಾಗಿ ಬದುಕಿಸಲು ನಡೆಸುತ್ತಿರುವ ಪರಿಸರಾಂದೋಲನ ಪ್ರಶಂಸಾರ್ಹ; ಜೀವನದ ವಿಷಮತೆ ಕೃತ್ರಿಮತೆಗಳನ್ನು ಪರಿಹರಿಸಲು ಈ ಅಂದೋಲನ ಅತ್ಯಾವಶ್ಯಕ. ಹಸ್ತಿನಾವತಿಯ ನಾಗರಿಕರ ಜೀವನವನ್ನು ನೋಡಿ ಕಣ್ವ ಶಿಷ್ಯರು ಹೇಳುತ್ತಾರೆ:

'ಅಭ್ಯಕ್ತಮೀವ ಸ್ನಾತಃ ಶುಚಿರವಶುಚಿಮಿವ
ಪ್ರಬುದ್ಧ ಇವ ಸುಪ್ತಂ; ಬದ್ಧಮಿವ ಸ್ಥೈರಗತಿಃ
ಇಹಸುಖ ಸಂಗಿನಂ ಅವೈಮಿ'

ಈ ನಗರದಲ್ಲಿ ತಾವು ಸುಖಿಗಳೆಂದು ತಿರುಗಾಡುವ ಈ ಜನರನ್ನು ಕಂಡಾಗ ನಮಗೆ ಸ್ನಾನಮಾಡಿದವನು ಎಣ್ಣೆ ಹಚ್ಚಿಕೊಂಡವನು, ಮುಟ್ಟಿದ ಹಾಗೆ ನಿದ್ದೆ ಮಾಡಿದವನನ್ನು ಎಚ್ಚರಗೊಂಡವನು ಕಂಡ ಹಾಗೆ ಸ್ವತಂತ್ರನಾದವನು ಗುಲಾಮನನ್ನು ನೋಡಿದಂತೆ...... ಆಗುತ್ತದೆ. ಎಂಬ ಈ ಪ್ರಾಚೀನ ಕವಿವಾಣಿ ಇಂದಿಗೂ ಮನನೀಯ ಪ್ರಾಚೀನ ಕಾಲದಲ್ಲಿಯೂ ನಗರಗಳ ರಾಜಧಾನಿಗಳ ಪರಿಸ್ಥಿತಿ ಪರಿಸರ ಶೋಚನೀಯವೇ ಆಗಿತ್ತು ಎಂಬುದು ಇದರಿಂದ ತಿಳಿಯುತ್ತದೆ. ಸಕಲ ಜೀವಿಗಳ ಪ್ರಾಣ ಸಂರಕ್ಷಣೆಗಾಗಿ ಸಮೃದ್ಧವಾದ ಲೋಕಜೀವನ ಸುಖಕ್ಕಾಗಿ ಪ್ರಕೃತಿಯಲ್ಲಿ ಸಹಜವಾಗಿರುವ ಅಮೃತ ಸಮಾನ ಆರೋಗ್ಯಕರ ಸತ್ವಸಾರವನ್ನು ಕಾಪಾಡಿಕೊಂಡು ಪೂರ್ಣಜೀವನ ನಡೆಸುವ ಸಲುವಾಗಿ ನಮ್ಮನ್ನು ನಮ್ಮ ಜನ್ಮಭೂಮಿಯನ್ನು ಭರತಮಾತೆಯನ್ನೂ ವಿಶ್ವಜನನಿಯನ್ನೂ ಸಂರಕ್ಷಿಸುವರೇ ಪರಿಸರ ನೈರ್ಮಲ್ಯವನ್ನು ಕಾಪಾಡಿಕೊಳ್ಳುವಂತೆ ಸದಾ ಜಾಗೃತರಾಗಿರಬೇಕು ಅದು ಎಲ್ಲರ ಕರ್ತವ್ಯ ಕರ್ಮ ಹಾಗೂ ನಮ್ಮ ಸಂಸ್ಕೃತಿಯ ಉತ್ತಮ ಕ್ಷೇತ್ರವೂ ಆಗಿದೆ.

೧೫

ಕೊನೆಗಾದರೂ ವಿಶ್ವಮಾನವ ಕುಟುಂಬದ ಅಂತೆಯೇ ಭಾರತೀಯ ಜೀವನದ್ದೂ

ಆದ ಒಂದು ಅತೀ ಪ್ರಾಮುಖ್ಯವಾದ ಸಂಸ್ಕೃತಿಯೊಂದರ ವಿಚಾರವನ್ನು ಇಲ್ಲಿ ವಿಶ್ಲೇಷಿಸುವುದು ಅತೀ ಅಗತ್ಯವಾಗಿದೆ. ಭಾರತದಲ್ಲಿ ಮಾತ್ರವಲ್ಲ ಲೋಕಾದ್ಯಂತ ವಿವಿಧ ಮತ ಧರ್ಮಾನುಯಾಯಿಗಳು ದೇವರಿದ್ದಾನೆ ಎಂಬ ನಂಬಿಕೆಯವರಾದರೂ ಇರುವ ಈ ದೇವರನ್ನು ಪ್ರತ್ಯಕ್ಷ ಕಂಡವರು–ಕಥೆಗಳಲ್ಲಿ ಹೊರತು–ಯಾರೂ ಇಲ್ಲವೆಂದು ಹೇಳಬಹುದು. ಆದರೆ ಈ ಪ್ರಪಂಚದ ಸ್ಥಿತಿಗತಿಗಳನ್ನು ಪರ್ಯಾಲೋಚಿಸಿದರೆ ಪ್ರಕೃತಿ ಭೂಗೋಳ ಖಗೋಳ ಸೂರ್ಯ ಚಂದ್ರ ನಕ್ಷತ್ರಾದಿಗಳನ್ನು ಹಗಲು ರಾತ್ರಿ, ಹುಟ್ಟುಸಾವು ಇತ್ಯಾದಿ ನಾನಾಪ್ರಕಾರಗಳನ್ನೂ ವೈಚಿತ್ರ್ಯಗಳನ್ನು ಪರಿಶೀಲಿಸಿದಾಗ ಯಾವುದೋ ಒಂದು ಶಕ್ತಿ ಇದನ್ನೆಲ್ಲಾ ಮಾಡುತ್ತಿದೆ ಎಂಬ ಅಭಿಪ್ರಾಯಕ್ಕೆ ಬರಬಹುದು. ಅದು ದೈವಿಕ ಶಕ್ತಿ ಇರಬಹುದು; ನಿಸರ್ಗ ಸಹಜ ಶಕ್ತಿ ಇರಬಹುದು; ಅಂತೂ ಏನೋ ಇದೆ; ಲೋಕವನ್ನು ನಡೆಸುತ್ತದೆ ಎಂದು ಹೆಚ್ಚಿನವರು ಒಪ್ಪುತ್ತಾರೆ' ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಇತ್ಯಾದಿ ವಿವಿಧ ಮತಧರ್ಮದವರು ದೇವರ ಅಸ್ತಿತ್ವವನ್ನು ಒಪ್ಪುತ್ತಾರೆ. ಅಲ್ಲಲ್ಲಿ ದೇವರಿಲ್ಲ ಎಂಬ ನಾಸ್ತಿಕರೂ ಇದ್ದಾರೆ. ಆಸ್ತಿಕ್ಯವನ್ನು ನಾಸ್ತಿಕ್ಯವನ್ನೂ ಮನಪೂರ್ವಕ ವಾಧಿಸುವವರು ಒಳ್ಳೆಯ ನಡತೆಯವರೂ ಇದ್ದಾರೆ.

ಹಿಂದುಗಳು ಬ್ರಹ್ಮ ವಿಷ್ಣು ಮಹೇಶ್ವರ ಎಂಬ ತ್ರಿಮೂರ್ತಿಗಳನ್ನು ಲೋಕದ ಜೀವಜಂತುಗಳ ಸೃಷ್ಟಿ ರಕ್ಷಣೆ ಸಂಹಾರ ಈ ಮೂರು ಕಾರ್ಯ ಕರ್ತವ್ಯಗಳೆಂದು ಹೇಳುವರು. ಬ್ರಹ್ಮನಿಗೆ ಚತುರ್ಮುಖವಿದೆಯೆಂದು ಈ ನಾಲ್ಕು ಮುಖಗಳಿಂದ ಋಕ್, ಯಜಸ್ಸು, ಸಾಮ, ಅಥರ್ವ ಎಂಬ ನಾಲ್ಕು ವೇದಗಳಾದುವೆಂದು ವರ್ಣಿಸುತ್ತಾರೆ. ಬ್ರಹ್ಮಜ್ಞಾನವೆಂಬುದು ವಿಶೇಷವಾದ ಜ್ಞಾನವೆಂಬುದರಿಂದ ಈ ಜ್ಞಾನಿ ಬ್ರಹ್ಮನೇ ಎಂದು ಆತನೇ ಜ್ಞಾನಭಂಡಾರವಾದ ವೇದಗಳ ಕರ್ತೃವೆಂದೂ ಅವನನ್ನು ವರ್ಣಿಸುವುದು ಸಾಮಾನ್ಯತಃ ಸರಿಹೋಗುತ್ತದೆ. ಬ್ರಹ್ಮನ ಪತ್ನಿಯು ಸರಸ್ವತಿ. ಸರಸ್ವತಿ ವಿದ್ಯಾದೇವತೆಯೆಂಬುದು ಇದಕ್ಕೆ ಹೊಂದಿಕೆಯಾಗುತ್ತದೆ. ವಿಷ್ಣು ಕ್ಷೀರಸಾಗರ ಶಾಹಿ; ಲಕ್ಷ್ಮಿ ಆತನ ಪತ್ನಿ; ಆಕೆ ಸಂಪತ್ತಿನ ಆದಿದೇವತೆ ಕೂಡ; ಲೋಕವನ್ನು ಪಾಲಿಸುವುದಕ್ಕೆ ಸಂಪತ್ತು ಅವಶ್ಯವಷ್ಟೆ. ಶಿವ ಕೈಲಾಸವಾಸಿ, ಗಜಚರ್ಮಾಂಭರದರ, ರುಂಡಮಾಲಾದರ, ಆತನ ತಾಂಡವ ನೃತ್ಯ ಪ್ರಳಯ ಕಾಲದ ನೃತ್ಯ. ಈತನ ಪತ್ನಿಯೇ ಪಾರ್ವತಿ. ಆಕೆಯು ಪರ್ವತ ರಾಜ ಹಿಮಾಲಯನ ಮಗಳು. ಈ ಮೂರು ಮೂರ್ತಿಗಳನ್ನು ದೇವರೆಂದು ನಂಬುತ್ತಾರೆ. ಶಿವನೇ ಶ್ರೇಷ್ಠನೆಂದು ಶೈವರು, ವಿಷ್ಣುವೇ ಶ್ರೇಷ್ಠನೆಂದು ವೈಷ್ಣವರು ಹೇಳುತ್ತಾರೆ. ವಿಷ್ಣುವಿಗೆ ಮತ್ಸ್ಯಕೂರ್ಮವರಾಹ, ನರಸಿಂಹ, ಶ್ರೀರಾಮ, ಶ್ರೀಕೃಷ್ಣಾದಿ ಹತ್ತವತಾರಗಳನ್ನು ಹೇಳುತ್ತಾರೆ. ದೇವರು ಪಶು ಪ್ರಾಣಿಗಳಲ್ಲಿಯೂ ಮನುಷ್ಯರಲ್ಲಿಯೂ ಇರುತ್ತಾನೆ; ಅದೇ ಜೀವಾತ್ಮ; ಮುಂದೆ ಆ ಜೀವಾತ್ಮ ಪರಮಾತ್ಮನಲ್ಲಿ ಸೇರುವುದೇ ಮೋಕ್ಷವೆಂಬ ಕಲ್ಪನೆಗೆ ಈ ಮೀನು, ಹಂದಿ, ಆನೆ ಮನುಷ್ಯ ರೂಪಗಳ ಹತ್ತಾವತಾರಗಳ ವಿಶ್ವಾಸವು ಪ್ರಮಾಣವೆಂಬಂತೆ ತೋರುತ್ತದೆ. ದೇವರಿಗೂ ಮಕ್ಕಳಿದ್ದಾರೆ.

ಶಿವನ ಪುತ್ರರು ಗಣಪತಿ ಸುಬ್ರಹ್ಮಣ್ಯರು. ಅವರು ದೇವರೆ. ದೇವರನ್ನು ದ್ವೈತ, ಅದ್ವೈತ, ವಿಶಿಷ್ಟ ದ್ವೈತ ತತ್ವ ಪ್ರಣಾಳಿಕೆಯಿಂದ ಮದ್ವಾಚಾರ್ಯರು ಶಂಕರಾಚಾರ್ಯರು, ರಾಮಾನುಜಾಚಾರ್ಯರು ಭಜಿಸುವಂತೆ ಶಿಷ್ಯರಿಗೆ ಉಪದೇಶಿಸಿದರು. ಭಾರತದಲ್ಲಿಯೇ ಈ ತ್ರಿಮೂರ್ತಿ ಸಿದ್ಧಾಂತಕ್ಕಿಂತ ಭಿನ್ನವಾಗಿ ಬುದ್ಧಜೀವತತ್ವಗಳೂ ಇನ್ನೂ ಕೆಲವು ಧಾರ್ಮಿಕ ಚಿಂತನೆಗಳು ಮೂಡಿಬಂದವು. ಜಯದೇವ ಕವಿಯು ಬುದ್ಧನನ್ನು ದಶಾವತಾರಗಳಲ್ಲಿ ಒಂದಾಗಿ –

'ಕಾರುಣ್ಯ ಮಾಪನ್ವತೇ'

ಎಂಬ ವಿಶೇಷಣದಿಂದ ಸ್ತುತಿಸಿ ಅದಂ ಭಿನ್ನವಲ್ಲವೆಂದು ಹೇಳಿದಂತಿದೆ.

ಇಷ್ಟು ಆಸ್ತಿಕ್ಯದ ಪ್ರಚಾರ ಪ್ರಭಾವ ಭಾರತದಲ್ಲಿ ಪ್ರಬಲವಾಗಿ ಸ್ಥಾಪಿತವಾಗಿದ್ದರೂ ಸಾಲದ್ದೆಂಬಂತೆ ಪ್ರಪಂಚದ ಇತರ ಕಡೆಗಳಿಂದ ವಿದೇಶಿಯರು ಅಲ್ಲಿಗೆ ಬಂದು ಮುಸ್ಲಿಂ ಕ್ರಿಶ್ಚಿಯನ್ ಮತಧರ್ಮಗಳನ್ನು ಸ್ಥಾಪಿಸಿದರು. ಅವರವರ ಮತಸಂಪ್ರದಾಯದಂತೆಯೇ ದೇವರ ಕೃಪೆಗೆ ಪಾತ್ರರಾಗಬೇಕೆಂದು ಬೋಧಿಸಿದರು. ಕೆಲವೊಮ್ಮೆ ಈ ಭಿನ್ನ ಭಿನ್ನ ದೃಷ್ಟಿಯ ದೇವತಾರಾಧನೆಯ ನಿಮಿತ್ತವಾಗಿ ಪ್ರಚಾರ ಮತಾಂತರ ಮೊದಲಾದ ಕಾರ್ಯಗಳ ಪ್ರಾಬಲ್ಯದಿಂದಲೂ ಗಲಭೆಗೊಂದಲ ಜಗಳಗಳು ಧರ್ಮದ ಹೆಸರಿನಲ್ಲಿ ದೇವರ ಹೆಸರಿನಲ್ಲಿ ನಡೆದಂತಿದೆ. ಏನಿದ್ದರೂ ಭಾರತೀಯ ಆಸ್ತಿ ದೃಷ್ಟಿ ಧಾರ್ಮಿಕ ನೀತಿ ಉದಾರವಾದದ್ದು. ಭಿನ್ನಾಭಿಪ್ರಾಯವನ್ನು ಸಹಿಸುವಂತಹುದು ಹಿಂದೂ ಮತಿಯರು. ಧಾರ್ಮಿಕ ನೇತಾರರು ಮತಾಂತರಕ್ಕೆ ಪ್ರೇರಣೆ ಮಾಡಲಾರರು. ಆ ಬಗ್ಗೆ ಆಶೆ ಅಮಿಶ ಒಡ್ಡಲಾರರು. ಇಂತಹ ವಿಶೇಷ ಗುಣ ಈ ಉದಾರ ದೃಷ್ಟಿ. ಇಂದು ಭಾರತೀಯ ಧರ್ಮ ದೃಷ್ಟಿಯ ಕುರಿತು ಅಭಿಮಾನ ಮೂಡಿಸಿದೆ. ಲೌಕಿಕ ಸುಖಭೋಗಗಳನ್ನು ಧಾರಾಳ ಅನುಭವಿಸಲು ಅಸಕ್ತರಾದ ವಿದ್ಯಾವಂತರು ಶ್ರೀಮಂತರೂ ಆದ ವಿದೇಶಗಳ ರಾಷ್ಟ್ರೀಯರೇ ಭಾರತಕ್ಕೆ ಬಂದು ಇಲ್ಲಿ ಭಾರತೀಯ ಧಾರ್ಮಿಕ ರೀತಿ ನೀತಿಯಂತೆ ನಡೆದುಕೊಳ್ಳುತ್ತಿದ್ದಾರೆ. ಈ ದೃಷ್ಟಿಯಿಂದ ನೋಡಿದರೆ ಭಾರತೀಯ ಧರ್ಮದೃಷ್ಟಿ ಹಾಗೂ ದೈವ ಚಿಂತನೆ ವಿಶಾಲವಾದುದೆನ್ನುವುದು ಸ್ಪಷ್ಟ. ಎಲ್ಲಾ ನದಿಗಳ ನೀರು ಒಂದೇ ಕಡಲನ್ನು ಸೇರುವಂತೆ ವಿವಿಧ ದೇವರ ಕಲ್ಪನೆಯ ಪೂಜೆಯು ಒಂದೇ ದೇವರಿಗೆ ಅರ್ಪಿತವಾಗುವುದೆಂಬ ಉದಾತ್ತವಾದ ಚಿಂತನೆ ಭಾರತದೇಶದ್ದು; ಆದ್ದರಿಂದಲೇ ದೇವರು ಮನುಷ್ಯ ರೂಪದಲ್ಲಿ ಮಾತ್ರವಲ್ಲ ಮತ್ಸ್ಯ ವರಾಹ ಕೂರ್ಮಾದಿ ರೂಪಗಳಲ್ಲಿಯೂ ಅವತರಿಸಿದ್ದಾನೆ; ಅಣುರೇಣು ತೃಣಕಾಷ್ಟಗಳಲ್ಲಿಯೂ ಗೋಚರಿಸುತ್ತಾನೆ ಎಂಬೀ ಉದಾತ್ತ ತತ್ವ ಭಾರತೀಯ ಧಾರ್ಮಿಕ ಸಂಸ್ಕೃತಿಯಾಗಿರುವುದು.

ಆಸ್ತಿಕ ಬುದ್ಧಿಯಂತೆ ನಾಸ್ತಿಕ್ಯ ವಿಚಾರವಾದುವು. ಭಾರತದಲ್ಲಿ ಪ್ರಾಚೀನ

ಕಾಲದಿಂದಲೇ ಇದ್ದುದನ್ನು ನೋಡಬಹುದು. ನಾಸ್ತಿಕ್ಯವನ್ನು ಸಾರಿದವನು ಚಾರ್ವಾಕ.

'ಭಸ್ಮಿ ಭೂತಸ್ಯ ದೇಹಸ್ಯಪುನರಾಗಮನಂ ಕುತಃ

ಅತಃ ಸರ್ವಪ್ರಯತ್ನೇನ ಋಣಂ ಕೃತ್ವಾ ಘೃತಂ ಪಿಬೇತ್'

ಎಂಬ ನೀತಿಯನ್ನು ಚಾರ್ವಾಕ ಬೋಧಿಸಿದ್ದಾನೆ. ಈ ಶರೀರ ಒಂದು ದಿನ ಬೂದಿಯಾಗಲೇಬೇಕು; ಆಗುತ್ತದೆ. ಹಾಗಿರುವಾಗ ಪುನಃ ಶರೀರ ಧರಿಸಿ ಬರುವುದು ಎಂದರೇನು? ಸಂಭವವೇ ಇಲ್ಲ; ಹಾಗಾಗಿ ಸಾಲಮಾಡಿಯಾದರೂ ತುಪ್ಪ ತಿಂದು ಈ ಶರೀರದ ಸುಖವನ್ನು ಅನುಭವಿಸುವ – ಎಂಬುದು ಚಾರ್ವಾಕವಾದ; ದೇವರಿಲ್ಲವೆಂದೇ ಅವನ ಸಿದ್ಧಾಂತ; ಆತನನ್ನೂ ಋಷಿಯೆಂದೇ ಕರೆದರು; ಚಾರ್ವಾಕ ಋಷಿಯ ತತ್ವವನ್ನು ದರ್ಶನಗಳಲ್ಲಿ ಒಂದು ಎಂದು ಒಪ್ಪಿಕೊಂಡರು. ಸಹನೆ, ಈ ವಿಶಾಲದೃಷ್ಟಿ ನಮ್ಮ ಭಾರತೀಯರದ್ದು ಎಂದು ಅಭಿಮಾನಪಡಬೇಕು. ಪ್ರಾಚೀನ ವಿಚಾರವಂತರೇ, ಚಿಂತಕರೇ, ದೈವಭಕ್ತರೇ, ಚಾರ್ವಾಕ ಸಿದ್ಧಾಂತವನ್ನು ಮಹತ್ತಾದುದೆಂದು ತಿಳಿದುಕೊಂಡರೆಂದು ಅರ್ಥಮಾಡಬಹುದು.

ಇಲ್ಲಿ ಲೋಕಸಾಮಾನ್ಯವಾದ ಒಂದು ಸಿದ್ಧಾಂತವನ್ನು ಹೋಲಿಸಬಹುದು. ಅದೇ ಪ್ರಜಾಪ್ರಭುತ್ವ; ಪ್ರಜಾಪ್ರಭುತ್ವದಲ್ಲಿ ಆಳುವ ಪಕ್ಷ ಸರಿಯಾಗಿ ಕಾರ್ಯನಿರ್ವಹಿಸಲು ವಿರೋಧ ಪಕ್ಷವೂ ಬೇಕಷ್ಟೇ, ಹಾಗೆ ದೇವರಿದ್ದಾನೆ ಎಂದು ಹೇಳುವವರೊಡನೆ, ದೇವರಿಲ್ಲ ಎನ್ನುವವರೂ ತರ್ಕಿಸುವಾಗ, ವಿಷಯದ ಸಮರ್ಥನೆಗೆ ಉಭಯತರೂ ಹೆಚ್ಚು ಬುದ್ಧಿಶಕ್ತಿಯನ್ನು ಉಪಯೋಗಿಸಬೇಕಾಗುತ್ತದೆ. ನಾಸ್ತಿಕ್ಯವನ್ನು ಖಂಡಿಸಿ ಆಸ್ತಿಕ್ಯದ ಸಾಧನೆಗೆ ಹೆಚ್ಚಿನ ಪ್ರತಿಪಾದನೆ ಅವಶ್ಯ. ಹೀಗೆ ನಾಸ್ತಿಕ್ಯಾಸ್ತಿಕ್ಯದ ಸಾಧನೆಗೆ ಅಪ್ರತ್ಯಕ್ಷ ಸಹಾಯಕವಾಗಿದೆ. ಈ ಸಂದರ್ಭದಲ್ಲಿ ನಾನೀ ವಿಷಯವನ್ನು ಇನ್ನಷ್ಟು ಗಂಭೀರವಾಗಿ ಚರ್ಚಿಸಬೇಕು. ದೇವರಿದ್ದಾನೆ ಎಂದು ನಂಬಿದವನು. ದೇವರು ತನ್ನನ್ನು ರಕ್ಷಿಸುತ್ತಾನೆ ಎಂದು ನಿಶ್ಚಿಂತವಾಗಿ ಕುಳಿತು ಬಿಡಲೂ ಬಹುದು. ಏಕೆಂದರೆ ಆತ ದೇವವಿಶ್ವಾಸಿ. ಆತನನ್ನು ರಕ್ಷಿಸುವುದು ದೇವರ ಕರ್ತವ್ಯವೆಂದು. ಆದರೆ ದೇವರಿಲ್ಲ ಎಂದವನಿಗೆ, ಒಂದು ಪಕ್ಷ ದೇವರಿದ್ದರೆ ಖಂಡಿತ ತನ್ನನ್ನು ಶಿಕ್ಷಿಸದೆ ಬಿಡಲಾರನೆಂಬ ಭಯ ಹಗಲಿರುಳೂ ಇರುವುದು ಸಹಜ. ಆ ಭಯದ ನಿಮಿತ್ತ ಆತ ನಿಂತಲ್ಲಿ ಕುಳಿತಲ್ಲಿ, ಎಚ್ಚರದಲ್ಲಿ ನಿದ್ದೆಯಲ್ಲಿ ದೇವರೆಂದೇ ಚಿಂತೆ ಮಾಡುತ್ತಾ ಇರುತ್ತಾನೆ. ಈ ವಿಚಾರಸರಣಿಯಂತೆ ಆಸ್ತಿಕನಿಗಿಂತ ನಾಸ್ತಿಕನೇ ಹೆಚ್ಚು ಸಮಯ ದೈವಚಿಂತನೆಯಲ್ಲಿರುತ್ತಾನೆಂದು ತಿಳಿದುಕೊಳ್ಳಬಹುದು.

ಮೇಲಿನ ವಿಚಾರಧಾರೆಗೆ, ಜಯವಿಜಯರ ಕಥೆ ಒಂದು ಉತ್ತಮ ಉದಾಹರಣೆ. ಶ್ರೀಮನ್ನಾರಾಯಣನ ದರ್ಶನಾರ್ಥ ವೈಕುಂಠಕ್ಕೆ ಆಗಮಿಸಿದ ಸನಕಸನಂದಾದಿ ಋಷಿಗಳನ್ನು ದ್ವಾರಪಾಲಕರಾದ ಜಯವಿಜಯರು ಒಳಗೆ ಪ್ರವೇಶಿಸದಂತೆ ಬಾಗಿಲಲ್ಲಿ

ತಡೆದರು. ದೇವರ ದರ್ಶನ ಮಾಡಲು ಬಿಡದ ಆ ದ್ವಾರಪಾಲಕರನ್ನು ಮುನಿಗಳು ಶಪಿಸಿದರು, ನೀವು ಮರ್ತ್ಯಲೋಕದಲ್ಲಿ ಜನಿಸಿರಿ ಎಂದು. ಮುನಿಗಳ ಶಾಪದಿಂದ ಭೀತರಾದ ಜಯವಿಜಯರು ತಮ್ಮ ತಪ್ಪಿಗೆ ಕ್ಷಮೆ ನೀಡಬೇಕೆಂದೂ ಬೇಡಿಕೊಂಡರು, ಕ್ಷಮಾಯಾಚನೆಯಿಂದ ಸಿಟ್ಟುತಗ್ಗಿದ ಋಷಿಗಳು ಹೇಳುತ್ತಾರೆ : 'ದೈವಭಕ್ತರಾಗಿ ನೀವು ಮರ್ತ್ಯಲೋಕದಲ್ಲಿ ಏಳು ಜನ್ಮ ಕಳೆದು ಇಲ್ಲಿಗೆ ಬರುತ್ತೀರೋ? ದೈವದ್ರೋಹಿಗಳಾಗಿ ಮೂರು ಜನ್ಮದಲ್ಲಿ ಇಲ್ಲಿಗೆ ಬರುತ್ತೀರೋ?–ನಿಮ್ಮ ಇಷ್ಟವಾದ ವರವನ್ನು ಕೇಳಿರಿ' ಎಂದರು. ಆಗ ಜಯವಿಜಯರು ದೈವದ್ರೋಹಿಗಳಾದರೂ, ಮೂರೇ ಜನ್ಮದಲ್ಲಿ ಮರಳಿ ವೈಕುಂಠಕ್ಕೆ ಬರುವ ವರನೀಡಿ ಎಂದು ಪ್ರಾರ್ಥಿಸಿದರಂತೆ, ಅವರು ಹಿರಣ್ಯಕಶಿಪು–ಹಿರಣ್ಯಾಕ್ಷ, ರಾವಣ–ಕುಂಭಕರ್ಣ, ಶಿಶುಪಾಲ–ದಂತವಕ್ತ್ರರೆಂದು ಮೂರು ಜನ್ಮಗಳನ್ನು ಮರ್ತ್ಯಲೋಕದಲ್ಲಿ ದೈವದ್ರೋಹಿಗಳಾಗಿ ಕಳೆದು ಮರಳಿ ವೈಕುಂಠಕ್ಕೆ ಬಂದರು ಎಂದು ಪ್ರಸಿದ್ಧವಾದ ಪುರಾಣ ಕಥೆಯಿದೆ. ದೇವರಿದ್ದಾನೆ ಎಂದರೆ ಏಳು ಜನ್ಮ. ದೇವರಿಲ್ಲ ಎಂದರೆ ಮೂರೇ ಜನ್ಮ ಎಂಬೀ ವರದಲ್ಲಿಯೂ, ಆಸ್ತಿಕರಿಗಿಂತ ನಾಸ್ತಿಕರೇ ಹೆಚ್ಚಾಗಿ ದೈವಭೀರುಗಳೆಂಬ ಅಂಶ ವ್ಯಕ್ತವಾಗುವುದು. 'ದೇವರ ಭಯವೇ ಜ್ಞಾನದ ಆರಂಭ' ಎಂಬೀ ಸೂಕ್ತಿಯನ್ನು ನಾವೀ ಸಂದರ್ಭದಲ್ಲಿ ನೆನಪಿಸಿಕೊಳ್ಳಬಹುದು. ಹಾಗಾಗಿ, ಪ್ರಜಾಪ್ರಭುತ್ವದಲ್ಲಿ ಆಡಳಿತ ಮಾಡುವ ಪಕ್ಷ ಸರಿಯಾಗಿ ರಾಜ್ಯಭಾರ ಮಾಡುವರೇ ಸಶಕ್ತವಾದ ವಿರೋಧಪಕ್ಷ ಹೇಗೆ ಅಗತ್ಯವೋ ಹಾಗೆ ದೇವರಿದ್ದಾನೆ ಎಂದು ಸ್ಥಿರವಾಗಿ ಸಾಧಿಸಲು ದೇವರಿಲ್ಲ ಎಂಬ ವಿರೋಧವೂ ಅನುಕೂಲವಾಗಿ ಅದೂ ಒಂದು ದರ್ಶನದೃಷ್ಟಿಯೆಂದು ಪ್ರಾಚೀನ ಭಾರತೀಯರು ತಿಳಿದುಕೊಂಡಂತೆ ತೋರುತ್ತದೆ. ವಿರೋಧಾಭಿಪ್ರಾಯಗಳನ್ನು ಮಂಡಿಸುವವರ ವಾದಸರಣಿಯಲ್ಲಿಯೂ ಅರಿತುಕೊಳ್ಳಬೇಕಾದ ಹಲವು ಸತ್ಯಸಂಗತಿಗಳಿವೆ ಎಂಬ ನೀತಿ, ಸಹನೆ, ಸಾಮರಸ್ಯದ ನಿಲುವು ಪ್ರತಿಯೊಬ್ಬನಿಗೂ ಪ್ರತಿಯೊಂದು ಪಂಥಕ್ಕೂ ಇರುವುದು ಅವಶ್ಯ. ಆದ್ದರಿಂದಲೇ ನಾಸ್ತಿಕದ ಕುರಿತು ಆಸ್ತಿಕರಿಗೆ ಇಲ್ಲಿ ಆವಾಹನೆ ಇರುವುದಿಲ್ಲ. ಇದು ನಮ್ಮ ರಾಷ್ಟ್ರದ ಒಂದು ಉತ್ತಮ ಯೋಗ್ಯ ಸಂಸ್ಕಾರ ಇಂತಹುವೆಲ್ಲವೂ ಭಾರತೀಯ ಸಂಸ್ಕೃತಿಯ ಹಲವು ಹೆಗ್ಗುರುತುಗಳು.

ಪ್ರತಿಯೊಬ್ಬ ಜೀವಿಯ, ವ್ಯಕ್ತಿಯ ಸ್ವಂತದ ಉತ್ಕರ್ಷದ ಪ್ರಯೋಜನದ ಫಲದಿಂದ – ವಿಶ್ವದ ಅನಂತ ವಿಶಾಲತೆಯವರೆಗೂ ಹಬ್ಬುವ ಧಾರ್ಮಿಕ, ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಸಾಹಿತ್ಯಿಕ– ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲರೂ ಎಚ್ಚರದಿಂದ ಉಳಿಸಿ ಬೆಳೆಸಿಕೊಂಡು ಬರಬೇಕಾದ ಕೆಲವೊಂದು ಒಳ್ಳೆಯ ನಡತೆಗಳನ್ನು ಸಂಸ್ಕೃತಿಯ ಹೆಗ್ಗುರುತುಗಳಾಗಿ ಇಲ್ಲಿ ಸೂಕ್ಷ್ಮತಃ ತಿಳಿಸಲಾಗಿದೆ. ಸದ್ಗುಣಗಳನ್ನು, ಸಶ್ಶೀಲಗಳನ್ನು ನಿರಂತರ ಬದುಕಿನಲ್ಲಿ ಅಳವಡಿಸಿಕೊಂಡು ನಾವು ಪ್ರಗತಿಸಾಗರ ಜೀವಿತದಲ್ಲಿ ಪೂರ್ಣತೆಯನ್ನು ಪಡೆಯಲು ಹಾರೈಸುತ್ತಾ ಇದ್ದಲ್ಲಿ, ಆ ಹಾದಿಯಲ್ಲಿ ಸದಾ

ದುಡಿಯುತ್ತಿದ್ದಲ್ಲಿ ಅಂತಹ ಸದಭಿಲಾಷೆ ನಮ್ಮನ್ನು ಪೂರ್ಣತೆಯ ಕಡೆಗೆ ಒಯ್ಯುವುದರಲ್ಲಿ ಸಂಶಯವಿಲ್ಲ. ಪ್ರತಿಯೊಂದು ಜೀವಿಯಲ್ಲಿರುವ ಜೀವಾತ್ಮ ಉತ್ತಮಿಕೆಯನ್ನು ಬಯಸುತ್ತಾ ಕೊನೆಗೆ ಉತ್ತಮೋತ್ತಮನಾದ ಪರಮಾತ್ಮನಲ್ಲಿ ಐಕ್ಯಗೊಂಡು ಮೋಕ್ಷ ಹೊಂದುವುದೆಂಬ ವಿಶ್ವಾಸದಲ್ಲಿ ಈ ನಿರಂತರ ಸಾಧನೆಗೆ ಪ್ರೇರಣೆ ಇದೆ.

ಇಂತಹ ಸಾಧನೆ-ಇಂತಹ ಪ್ರೇರಣೆ ನಮ್ಮೆಲ್ಲರನ್ನೂ ಸಂಸ್ಕೃತಿ ಸಂಪನ್ನರಾಗಿ ರೂಪಿಸಲಿ ಎಂದು ಹಾರೈಸಿ ವಿರಮಿಸುತ್ತೇನೆ.

●

ಮಹಾಕವಿ ಗೋವಿಂದ ಪೈ
ಬದುಕು – ಬರೆಹ

ಪ್ರವೇಶ

ಭಾರತದೇಶದ ಇತಿಹಾಸದಲ್ಲಿ ಹತ್ತೊಂಬತ್ತನೆಯ ಶತಮಾನ ಹಲವಾರು ಮಹತ್ವದ ಸಾಧನೆ – ಸಿದ್ಧಿಗಳ ಸ್ಮರಣೀಯ ಕಾಲ. ನೂರಾರು ವರ್ಷಗಳ ದಾಸ್ಯಪಂಜರದಲ್ಲಿ ನರಳುತ್ತಿದ್ದ ರಾಷ್ಟ್ರ ಸಿಂಹ ಕೆರಳಿ ಗರ್ಜಿಸತೊಡಗಿತು. ಹೊರಗಿನ ನಿರ್ಬಂಧದಿಂದ ಬಿಡುಗಡೆಯಾಗಬೇಕೆಂಬ ಪ್ರಬಲಾಕಾಂಕ್ಷೆಯೊಂದಿಗೆ, ಒಳಗಿನ ಆತ್ಮಶಕ್ತಿಯೂ ಉದ್ದೀಪನಗೊಂಡಿತ್ತು. ನಾಡು, ನುಡಿ, ಕಲೆ, ಸಂಸ್ಕೃತಿ – ಹೀಗೆ ಒಂದು ರಾಷ್ಟ್ರದ ಸಮಗ್ರತೆಯ ವಿಕಾಸಕ್ಕೆ ಅವಶ್ಯವಿರುವ ಪ್ರಗತಿಪರ ಕಾರ್ಯಕ್ರಮಗಳು ಹಲವಾರು ರೂಪುಗೊಂಡವು. ಮೇಲುಕೀಳೆನ್ನದೆ, ಸಜಾತಿ ವಿಜಾತಿಯೆನ್ನದೆ, ಹೆಣ್ಣುಗಂಡೆನ್ನದೆ ಭಾರತದ ಸಮಸ್ತಜನತೆ ಒಂದೇ ಶಕ್ತಿಯ ಪ್ರವಾಹದಂತೆ ಮುನ್ನಡೆಯಿತು. ಇಂತಹ ಅನುಪಮ ಸಾಹಸದ ಅಸದೃಶ ತ್ಯಾಗದ, ನಿರಂತರಪ್ರಯತ್ನದ ಉತ್ತಮಫಲಸಿದ್ಧಿಯೆಂದರೆ ಭಾರತದೇಶ ಪಡೆದ ಸ್ವಾತಂತ್ರ್ಯದ ಅಮೃತ!

ಈ ಪುಣ್ಯ ಸಂಧಿಕಾಲದಲ್ಲಿ ಜನತೆಯ ಅಂತರಂಗ ಆತ್ಮಶಕ್ತಿಯನ್ನು ಜಾಗೃತಗೊಳಿಸಿದವರಲ್ಲಿ ಪ್ರಮುಖರು, ಶ್ರೀ ರಾಮಕೃಷ್ಣ ಪರಮಹಂಸರು, ಸ್ವಾಮೀ ವಿವೇಕಾನಂದರು, ಮಹರ್ಷಿ ಅರವಿಂದರು, ದಯಾನಂದ ಸರಸ್ವತಿಯವರು, ರಾಜಾರಾಮಮೋಹನರಾಯರು. ಶ್ರೀ ನಾರಾಯಣಗುರು – ಮೊದಲಾದವರು; ಧಾರ್ಮಿಕ, ಆಧ್ಯಾತ್ಮಿಕ, ತಾತ್ವಿಕ – ವಿಚಾರಗಳಲ್ಲಿ ಭಾರತದ ಜನತೆ, ಲೋಕದ ಯಾವುದೇ ಎಚ್ಚೆತ್ತ ಜನಾಂಗದೊಂದಿಗೆ ಸರಿ ಮಿಗಿಲೆನಿಸಿ ತಲೆಯೆತ್ತಿ ನಡೆಯಬಲ್ಲುದೆಂಬ ಆತ್ಮಾಭಿಮಾನವನ್ನು ಉಂಟುಮಾಡಿದರು. ಸತ್ಯ ಅಹಿಂಸೆ ತ್ಯಾಗಗಳ ಅಸಾಮಾನ್ಯವಾದ ಹೋರಾಟ ಹೂಡಿ, ಸೂರ್ಯ ಮುಳುಗದ ಸಾಮ್ರಾಜ್ಯದ ಪ್ರಬಲಶಕ್ತಿ ಪಡೆದಿದ್ದ ಬ್ರಿಟಿಷ್ ಪ್ರಭುತ್ವವನ್ನು ಕಾಲ್ತೆಗೆವಂತೆ ಮಾಡಿದ ಸ್ವಾತಂತ್ರ್ಯ ವೀರರಾದ ತಿಲಕ, ಗಾಂಧಿ, ನೆಹರು, ಸುಭಾಸ್ ಮೊದಲಾದ ರಾಷ್ಟ್ರಪುರುಷರ ಧೀರೇತಿಹಾಸವೂ ಚಿರಸ್ಮರಣೀಯ.

ದೇಶದ ಏಳಿಗೆ ಪೂರಕವಾಗಿ ಭಾಷೆಯ ಅಭಿಮಾನ – ಅಭಿವೃದ್ಧಿಗಳ ಕಾರ್ಯವೂ ಏಕಪ್ರಕಾರ ಸಾಗಿತು. ಬಂಗಾಳ ಈ ದಿಶೆಯಲ್ಲಿ ಸಮಸ್ತ ಭಾರತಕ್ಕೆ

ಮಾರ್ಗದರ್ಶಿಯಾಯಿತು. ಬಂಕಿಂಚಂದ್ರ ಚಟರ್ಜಿ, ರವೀಂದ್ರನಾಥ ಠಾಗೋರ್ ಮೊದಲಾದ ಪ್ರಭಾವಿಲೇಖಕರು, ಕವಿಗಳು, ಭಾಷಾಪ್ರೇಮ, ಸಾಹಿತ್ಯಪ್ರೇಮಗಳನ್ನು ಹೆಚ್ಚಿಸುವುದರಲ್ಲಿ ದೇಶಾಭಿಮಾನವನ್ನೂ ಉದ್ದೀಪಿಸಿದರು. ಸ್ವತಂತ್ರ ಭಾರತದೇಶ, ರಾಷ್ಟ್ರಗೀತೆಯಾಗಿ ಬಂಕಿಂಚಂದ್ರರ 'ವಂದೇ ಮಾತರಮ್' ಗೀತೆಯನ್ನೂ, ಠಾಗೋರರ 'ಜನಗಣಮನ' ಗಾನವನ್ನೂ ಆಯ್ಕೆ ಮಾಡಿರುವುದೇ ಮೇಲಿನ ಮಾತಿಗೆ ಉತ್ತಮ ಸಾಕ್ಷಿ. ಬಂಗಾಳದಲ್ಲಿ ಬೆಳಗಿದ ಈ ಜ್ಯೋತಿ ಅಖಿಲಭಾರತದಲ್ಲಿಯೂ ಬೆಳಕನ್ನು ಬೀರಿತು; ಪಂಜಾಬು, ಗುಜರಾತು, ಮಹಾರಾಷ್ಟ್ರ, ಕರ್ನಾಟಕ, ಕೇರಳ, ಆಂಧ್ರ, ತಮಿಳನಾಡು – ಎಲ್ಲಾ ಕಡೆಗಳಲ್ಲಿಯೂ ಭಾಷಾಭಿಮಾನಿಗಳ ಕಣ್ತೆರೆಯಿಸಿತು.

ದಕ್ಷಿಣ ಭಾರತದಲ್ಲಿ ಈ ಜಾಗೃತಿಯ ಕಹಳೆಯನ್ನು ಊದಿದವರಲ್ಲಿ ಅಗ್ರಗಣ್ಯರು ತಮಿಳುನಾಡಿನ ಕವಿ ಸುಬ್ರಹ್ಮಣ್ಯ ಭಾರತಿ; ಕವಿತಾರಚನೆಯೊಂದಿಗೆ ಸ್ವಾತಂತ್ರ್ಯ ಸಂಗ್ರಾಮಕ್ಕೂ ತನ್ನ ಅನುಪಮ ಕಾಣಿಕೆಯನ್ನು ಸಲ್ಲಿಸಿದ ಚಿರಸ್ಮರಣಿಯರಲ್ಲಿ ತಮಿಳಿನ ಕವಿ ಭಾರತಿ ಪ್ರಥಮ ಪಂಕ್ತಿಯವರು. ಮಲೆಯಾಳಿ ಭಾಷೆಯ ಕುಮಾರನ್ ಆಶಾನ್, ವಲ್ಲತ್ತೋಳ್ ನಾರಾಯಣ ಮೆನೋನ್, ಕನ್ನಡದ ಬಿ. ಎಂ. ಶ್ರೀಕಂಠಯ್ಯ, ಬೇಂದ್ರೆ, ಕುವೆಂಪು, ಗೋವಿಂದ ಪೈ ಮೊದಲಾದವರೂ ಈ ದಿಸೆಯಲ್ಲಿ ಮಹತ್ವದ ಪಾತ್ರ ವಹಿಸಿದರು. ಜನತೆಯ ಚೇತನವನ್ನು ಅರಳಿಸುವ ಉತ್ತಮ ಕಾವ್ಯ ಸಾಹಿತ್ಯಗಳ ಸೃಷ್ಟಿಯಿಂದ ಇವರೆಲ್ಲರೂ ಆಯಾ ಭಾಷೆಗಳ ಸೌಂದರ್ಯಸಂಪತ್ತನ್ನು ಹೆಚ್ಚಿಸುವುದರೊಂದಿಗೆ ಸಮಗ್ರದೇಶದ ಅಭಿವೃದ್ಧಿಯ ಕಾರ್ಯದಲ್ಲೂ ತೊಡಗಿ ತಮಗೆಲ್ಲಾ ಗೌರವಾರ್ಹರಾಗಿದ್ದಾರೆ.

ಅಂತಹ ಮಹನೀಯರಲ್ಲಿ ಒಬ್ಬರಾದ ಮಹಾಕವಿ ಗೋವಿಂದ ಪೈಗಳ ಬದುಕು ಬರೆಹಗಳ ಕುರಿತಾದ ಅವರ ಅಪೂರ್ವ ವ್ಯಕ್ತಿತ್ವವನ್ನು ವಾಚಕರ ಮುಂದಿಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಎಳವೆಯಲ್ಲಿ

ಇಂದಿಗೆ, ನೂರ ನಾಲ್ಕು ವರುಷಗಳ ಹಿಂದೆ, ಎಂದರೆ ಕ್ರಿಸ್ತ ಶಕ 1883ನೆಯ ಇಸವಿ ಮಾರ್ಚ್ ತಿಂಗಳ ಇಪ್ಪತ್ತಮೂರನೆಯ ದಿನ ದೇವಕಿಯಮ್ಮ ತಿಮ್ಮ ಪೈ ಎಂಬ ಮಾತಾಪಿತೃಗಳ ಪುಣ್ಯದ ಫಲವೆಂಬಂತೆ, ಅವರ ಪ್ರಥಮ ಪುತ್ರರಾಗಿ ಗೋವಿಂದ ಪೈ ಜನಿಸಿದರು. ಅವರಿಗೆ ಮೂವರು ತಮ್ಮಂದಿರೂ, ಮೂವರು ಸೋದರಿಯರೂ ಇದ್ದರು. ನಾರಾಯಣ ಪೈ, ಅನಂತ ಪೈ ಮತ್ತು ಸುಬ್ರಾಯ ಪೈ ಇವರೇ ತಮ್ಮಂದಿರು. ಅಮ್ಮಣಿ ಯಾನೆ ಗಂಗಾ ಭವಾನಿ, ಕೃಷ್ಣಬಾಯಿ, ಸರಸ್ವತೀ ಬಾಯಿ ಇವರು ಮೂವರು ಸೋದರಿಯರು. ಒಡಹುಟ್ಟುಗಳನ್ನೂ ಅವರ ಮಕ್ಕಳನ್ನು, ಅತ್ಯಂತ ವಾತ್ಸಲ್ಯದಿಂದ ಗೋವಿಂದ ಪೈಗಳು ನೋಡಿಕೊಂಡು ಬಂದಂತೆ, ಅವರಾದರೂ ಪೈಗಳನ್ನು ಪೂಜ್ಯ ಭಾವದಿಂದಲೂ ಭಕ್ತಿಯಿಂದಲೂ ಗೌರವಿಸಿ ಕೊನೆಕಾಲದ ವರೆಗೂ ಸೇವೆ ಸಲ್ಲಿಸಿದರು.

ಪೈಗಳ ಹೆಸರಿನ ಹಿಂದೆ ಬರುವ 'ಮಂ' ಅಥವಾ 'ಎಂ' ಎಂಬ ಪದ ಮಂಗಳೂರು, ಮಂಜೇಶ್ವರ ಎರಡು ಸ್ಥಳಗಳಿಗೂ ಸಮಾನವಾಗಿ ಅನ್ವಯಿಸುತ್ತದೆ. ಅವರು ಮಂಗಳೂರಿನ ಶ್ರೀಮಂತ ಸಾಹುಕಾರ ಬಾಬಾ ಪೈ ಮನೆತನದವರು. ಈ ಮನೆತನದ ಮೂಲ ಮನೆ ಇಂದಿಗೂ ಮಂಗಳೂರಿನ ರಥಬೀದಿಯಲ್ಲಿದೆ. ಅವರ ಕುಟುಂಬದವರು ಇಂದಿಗೂ ಆ ಮನೆಯಲ್ಲಿ ವಾಸಿಸುತ್ತಾರೆ. ಆ ಮನೆತನದ ಆರಾಧ್ಯ ದೇವರಾದ ಕಾಳಿಂಗಮರ್ದನ ಶ್ರೀ ಕೃಷ್ಣ ಮಂದಿರವು ಅಲ್ಲಿಯೇ ಇದೆ. ಪುತ್ತೂರಿಗೆ ಸಮೀಪದ ಅನಂತಾಡಿ ಎಂಬಲ್ಲಿ ಈ ಮನೆತನಕ್ಕೆ ಸೇರಿದ ಆಸ್ತಿಯಿದೆ. ಅಲ್ಲಿನ ದೈವವಾದ ಉಳ್ಳಾಳ್ತಿಯ ಮೆಚ್ಚಿ ಎಂಬ ಪ್ರಸಿದ್ಧ ಉತ್ಸವದ ಹಿರಿತನ ಈಗಲೂ ಈ ಮನೆತನದವರಿಗೆ ಸಲ್ಲುತ್ತದೆ. ಈ ಕುಟುಂಬದಲ್ಲಿ ಅನೇಕ ಮಂದಿ ಪ್ರಸಿದ್ಧ ವ್ಯಾಪಾರಿಗಳೂ, ಡಾಕ್ಟರರೂ, ಇಂಜಿನೀಯರರೂ, ವಿಜ್ಞಾನಿಗಳೂ, ಸಮಾಜಸೇವಕರೂ ಜನಿಸಿ ಖ್ಯಾತಿ ಪಡೆದಿದ್ದಾರೆ. ಗೋವಿಂದ ಪೈಗಳ ತಂದೆ ತಿಮ್ಮ ಪೈಯವರು ಜ್ಯೋತಿಶ್ಶಾಸ್ತ್ರದಲ್ಲಿ ಪರಿಣತರಾಗಿದ್ದರು. ಪೈಗಳ ಅಜ್ಜನ ಹೆಸರು ನಾರಾಯಣ ಪೈ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹುಶಃ ಮೊತ್ತಮೊದಲನೆಯದಾಗಿ 1839ರಲ್ಲಿ ಸಹಸ್ರಭೋಜನ ನಡೆಸಿದವರು ನಾರಾಯಣ ಪೈಗಳು. ಅವರಿಗೆ ತಲಚೇರಿ, ಗುಜರಾತು, ಮಂಗಳೂರು ಮೊದಲಾದ ಕಡೆಗಳಲ್ಲಿ ಹುಂಡಿ ವ್ಯಾಪಾರವಿತ್ತು. ಮಂಗಳೂರಿನ ಸರಕಾರೀ ಕಾಲೇಜಿನ ಸ್ಥಾಪಕರಲ್ಲಿ ಅವರೂ ಒಬ್ಬರಾಗಿದ್ದರು.

ಗೋವಿಂದ ಪೈಗಳ ತಾಯಿಯ ತವರು ಮನೆ ಮಂಜೇಶ್ವರ. ಅಲ್ಲಿನ ಪ್ರಸಿದ್ಧ ಮನೆತನದ ಲಕ್ಷ್ಮಣ ಶ್ಯಾನುಭಾಗರ ಮಗಳು ದೇವಕಿಯಮ್ಮ ಇವರ ತಾಯಿ. ತಂದೆಮನೆ ಮಂಗಳೂರಿನಲ್ಲಿದ್ದರೂ, ಗೋವಿಂದಪೈಗಳೂ, ಅವರ ಸೋದರಿ ಸೋದರರೂ ಹುಟ್ಟಿ ಬೆಳೆದದ್ದು ಮಂಜೇಶ್ವರದಲ್ಲಿ. ಮಂಜೇಶ್ವರದ ಶ್ಯಾನುಭಾಗರ ಮನೆಯ ಹಿರಿಯರು, ತಮ್ಮ ಮಗಳ ಮಕ್ಕಳು, ತಮ್ಮ ಊರಲ್ಲಿಯೇ ನೆಲೆಸಿರುವಂತೆ ಅಲ್ಲಿ ಮನೆ ಕಟ್ಟಿಸಿ ಸಕಲ ವ್ಯವಸ್ಥೆಗಳನ್ನೂ ಅತ್ಯಂತ ವಾತ್ಸಲ್ಯದಿಂದ ಕಲ್ಪಿಸಿಕೊಂಡರು. ಹಾಗಾಗಿ ಗೋವಿಂದ ಪೈಗಳೂ ಅವರ ಸೋದರರೂ ತಮ್ಮ ಪೂರ್ಣಾಯುಸ್ಸನ್ನೂ ತಮ್ಮ ಮಂಜೇಶ್ವರದ ಮನೆಯಲ್ಲಿಯೇ ಕಳೆದರು. ಮಂಗಳೂರಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾಗಲೂ ರಜೆ ಸಮಯ ಇವರು ಮಂಜೇಶ್ವರದಲ್ಲಿಯೇ ಇದ್ದರು. ಗೋವಿಂದ ಪೈಗಳು ಕವಿತಾ ರಚನೆ, ಸಂಶೋಧನೆ, ಸಾಹಿತ್ಯತಪಸ್ಸು – ಇವೆಲ್ಲವನ್ನೂ ಸಂಪೂರ್ಣ ಮಂಜೇಶ್ವರದಲ್ಲಿಯೇ ಸಾಧಿಸಿ ಸಿದ್ಧಿಪಡಿಸಿದರು. ಆದ್ದರಿಂದ ಮಂಗಳೂರು ಗೋವಿಂದ ಪೈಗಳು ಮಂಜೇಶ್ವರ ಗೋವಿಂದ ಪೈಗಳೆಂದೇ ಸಾರ್ಥಕವಾದ ರೀತಿಯಲ್ಲಿ ಲೋಕಕ್ಕೆ ಪರಿಚಿತರಾದರು. ತಮ್ಮ ಕೆಲವು ಪದ್ಯಗಳ ಕೊನೆಯಲ್ಲಿ, ತಾಯಿಯ ನೆನಪಿಗಾಗಿ 'ದೇವಕೀತನಯ' ಎಂಬ ಅಂಕಿತವನ್ನು ಇಟ್ಟುಕೊಂಡುದನ್ನೂ ನಾವು ಸ್ಮರಿಸಬಹುದಾಗಿದೆ. ಗೋವಿಂದ ಪೈಗಳಿಗೆ ಮಾಳ ಪೈ ಎಂಬ ಪ್ರೀತಿಯ ಅಡ್ಡಹೆಸರೂ ಇತ್ತೆಂದೂ

ತಿಳಿದುಬರುತ್ತದೆ. ಆದರೆ ಮುಂದೆ ಯಾರೂ ಆ ಹೆಸರಿನಿಂದ ಕರೆಯುತ್ತಿದ್ದಿಲ್ಲವಾಗಿ ಅದು ಪ್ರಚಾರದಲ್ಲಿಲ್ಲ.

ಪೈಗಳ ಮೊದಲ ವಿದ್ಯಾಭ್ಯಾಸ ಮಂಗಳೂರು ಮಿಶ್ಯನ್ ಹೈಸ್ಕೂಲಲ್ಲಿ ನಡೆಯಿತು; ಅವರು ಓರ್ವ ಪ್ರತಿಭಾವಂತ ವಿದ್ಯಾರ್ಥಿಯಾಗಿದ್ದರು. ಮತ್ತೆ ಹೈಸ್ಕೂಲ್ ಶಿಕ್ಷಣ ಮಂಗಳೂರಿನ ಕೆನರಾ ಹೈಸ್ಕೂಲಲ್ಲಿ ಮುಂದುವರಿಯಿತು. ಕನ್ನಡದ ಖ್ಯಾತ ಲೇಖಕರಲ್ಲೊಬ್ಬರಾದ ಎಂ. ಎನ್. ಕಾಮತರು ಹೈಸ್ಕೂಲ್ ಶಿಕ್ಷಣಕಾಲದಲ್ಲಿ ಸಹಪಾಠಿಯಾಗಿದ್ದರು. ಅವರಿಗೆ, ಬಂಟ್ವಾಳ ವಾಮನ ಬಾಳಿಗರೂ, ಬಂಟ್ವಾಳ ಪುಂಡಳೀಕ ಬಾಳಿಗರೂ ಅಲ್ಲಿ ಕನ್ನಡದ ಅಧ್ಯಾಪಕರಾಗಿದ್ದರು. 1999ರಲ್ಲಿ ಪೈಗಳೂ ಅವರ ಸಹಪಾಠಿ ಇತರ ವಿದ್ಯಾರ್ಥಿಗಳೂ ಸೇರಿ ಕೆನರಾ ಹೈಸ್ಕೂಲಲ್ಲಿ ಕಲಿಯುತ್ತಿದ್ದಾಗ Angel ಎಂಬ ಇಂಗ್ಲಿಷ್ ಕೈಬರಹದ ಪತ್ರಿಕೆ ಹೊರಡಿಸಿದರು; ಆ ಹಸ್ತಪತ್ರಿಕೆಯಲ್ಲಿ ಪೈಗಳೂ ಕಾಮತರೂ ಲೇಖನಗಳನ್ನು ಬರೆಯುತ್ತಿದ್ದರು.

ಕವಿತಾವತಾರ

ಶಾಲೆಯ ಬಿಡುವಿನ ದಿನಗಳಲ್ಲಿ ಪೈಗಳು ಮಂಜೇಶ್ವರಕ್ಕೆ ಬರುತ್ತಿದ್ದರೆಂದು ಹೇಳಿದೆವಷ್ಟೆ. ಊರಲ್ಲಿ ಜರಗುತ್ತಿದ್ದ ದಶಾವತಾರ ಯಕ್ಷಗಾನ ಪ್ರಸಂಗಗಳ ಹಾಡುಗಳು, ತಾಳಕ್ಕೆ ಸರಿಯಾಗಿ ಬಡಿವ ಜಾಗಟೆ, ಚೆಂಡೆ ಮದ್ದಳೆಗಳು, ಪೌರಾಣಿಕ ವೇಷ ಭೂಷಣಗಳು, ಕುಣಿತ-ಮಾತುಗಾರಿಕೆಗಳು ಸೋಬಾನೆ ಹಾಡುಗಳು, ಓಬೇಲೇ ಪಾಡ್ದನಗಳು ಇವೆಲ್ಲವೂ ಅವರ ಮನಸ್ಸಿಗೆ ಹಿತಕರವೆನಿಸಿ ಎಳೆತನದಲ್ಲೇ ಅವರಲ್ಲಿ ಸಾಹಿತ್ಯಕಲೆಗಳ ಕುರಿತು ಆಸಕ್ತಿಯನ್ನು ಕೆರಳಿಸಿದುವು.

ಇಂತಹ ಸಂದರ್ಭದಲ್ಲಿ ಗೋವಿಂದ ಪೈಗಳ ಜೀವನದಲ್ಲಿ ಒಂದು ಅವಿಸ್ಮರಣೀಯ ಘಟನೆ ನಡೆಯಿತು.

ಅಂದು ಜಯ ಸಂವತ್ಸರದ ಮಾಘಮಾಸದ ಕೊನೆಯ ವಾರ; ಕ್ರಿಸ್ತಶಕ ೧೮೯೫ನೆಯ ಫಬ್ರವರಿ ತಿಂಗಳ ಕೊನೆಯ ವಾರ. ಆ ದಿನ ಎಂದೂ ಇಲ್ಲದ ಮಳೆ ಜಿನುಗುತ್ತಿತ್ತು. ಮನೆಯ ಅಂಗಳ ಇಡೀ ಚಪ್ಪರ ಹಾಕಿದೆ. ನೆಂಟರಿಷ್ಟರು ಬಹಳ ಮಂದಿ ಬಂದಿದ್ದಾರೆ. ನೂಲಮದುವೆಯ ಸಂಭ್ರಮ. ಚಪ್ಪರದಲ್ಲಿ ಒಂದು ಕಡೆ ಲಡ್ಡುಗೆ ಕಟ್ಟುತ್ತಾರೆ; ಇನ್ನೊಂದೆಡೆ ಮಂಡಿಗೆ ಮಡಚುತ್ತಾರೆ. ಬೇರೊಂದು ಕಡೆ ಸೇವಿಗೆ ಒತ್ತುತ್ತಾರೆ. ಅಂದು ಶನಿವಾರವೋ, ಆದಿತ್ಯವಾರವೋ, ಶಿವರಾತ್ರಿಯೋ, ಹೇಗೂ ವಿದ್ಯಾರ್ಥಿಗಳಿಗೆ ಶಾಲೆಯಿಲ್ಲ; ರಜೆ. ಜೋಳದ ಗದ್ದೆಯಲ್ಲಿ ಗಿಳಿಗಳ ಕೋಲಾಹಲದಂತೆ ಚಪ್ಪರದಲ್ಲಿ ಎಲ್ಲಾ ಕಡೆಯಲ್ಲೂ ಗದ್ದಲವೇ ಗದ್ದಲ. ಗಂಡುಸರು, ಹೆಂಗುಸರು, ಕಿರಿಯರು, ಹಿರಿಯರು, ನೆಂಟರು ಇಷ್ಟರು-ಇವರೆಲ್ಲರ ಓಡಾಟ, ಮಾತಿನ ಗಜಿಬಿಜಿ. ಸಂಭ್ರಮವೋ ಸಂಭ್ರಮ.

ಇಂತಹ ಸಂಭ್ರಮದ ಕೋಲಾಹಲದ ಮಧ್ಯೆ ಕುಗ್ಗಿದ ದನಿಯಲ್ಲಿ ಸವಿಯಾದ ಕೊರಳಲ್ಲಿ ಹಾಡುವ ಇನಿದಾದ ಒಂದು ಜಾನಪದ ಹಾಡು ಕೇಳಿಸಿತು:

ಅಡವಿಗೆ ಪೋಪರೇನೆ? ಕಂದಯ್ಯಾ, ಅಡವಿಗೆ ಪೊಪರೇನೆ !

ಅಡವಿಯೊಳಗೆ ಬಲು ಕಡು ಖೂಳ ಮೃಗಗಳು

ಬಿಡದೆ ಬಾಧಿಪವೊ ನಿನ್ನ; ಅಡವಿಗೆ ಪೋಪರೇನೇ ಕಂದಯ್ಯಾ !

ಇಂಪಾದ ಈ ಹಾಡನ್ನು ಕೇಳಿದ್ದೇ ತಡ, ಆ ಮನೆಯಲ್ಲಿ ಸಂಭ್ರಮದಿಂದ ಓಡಾಡುತ್ತಿದ್ದ ಒಂಬತ್ತು ವರ್ಷದ ಬಾಲಕನಿಗೆ ಏನಾಯಿತೋ? ಏನು ತೋಚಿತ್ತೋ? ಮತ್ತೆ ಆ ಚಪ್ಪರದ ಗವುಜು, ಕೋಲಾಹಲ, ಯಾವುದೂ ಆತನಿಗೆ ಕೇಳಿಸಲಿಲ್ಲ. ನೆಟ್ಟಗೆ ಹೋಗಿ ಅಭ್ಯಾಸದ ಪುಸ್ತಕವನ್ನು ಕೈಗೆತ್ತಿಕೊಂಡ; ಲೇಖನಿ ಹಿಡಿದು ಬರೆಯತೊಡಗಿದ; ಏಕಾಂಕ ನಾಟಕವೆಂದು ಹೇಳಬಹುದಾದ ಒಂದು ನಾಟಕ ಅಂದು ಸಂಜೆಯೊಳಗೆ ಪೂರ್ತಿಯಾಯಿತು. ಅದಾದ ಎರಡೋ ಮೂರೋ ದಿನಗಳಲ್ಲಿ ಮತ್ತೊಂದು ನಾಟಕ. ಕೇವಲ ಹಾಡುಗಳುಳ್ಳದ್ದು. ಬರೆದ ನಾಟಕದಲ್ಲಿನ ಕಥೆಯೆಂದರೆ, ತಾಯಿ ತಂದೆಯರ ಒಬ್ಬನೇ ಮಗ ಕಾಡಿಗೆ ಹೊರಟಾಗ ಆತನ ತಾಯಿ ಸುನೀತಿಗಾದ ಶೋಕ, ಶ್ರೀರಾಮ, ವನವಾಸಕ್ಕೆ ತೆರಳಿದಾಗ ದಶರಥನ ಪ್ರಲಾಪ– ಈ ಪೌರಾಣಿಕ ಕಥೆಗಳಲ್ಲಿನ ಘಟನೆಗಳನ್ನು ಯಕ್ಷಗಾನ ಬಯಲಾಟಗಳಲ್ಲೋ, ಕೇಳಿರಬಹುದಾದ ಆ ಹುಡುಗನ ಮನಸ್ಸನ್ನು ಮೇಲಿನ ಹಾಡಿನ ಸೊಲ್ಲು ಒಮ್ಮೆಗೇ ಕಲಕಿಬಿಟ್ಟಿತು. ಆದಿಕವಿ ವಾಲ್ಮೀಕಿಗೆ ಕ್ರೌಂಚಮಿಥುನದ ಅಗಲುವಿಕೆಯ ಕರುಣಾಕ್ರಂದನದಿಂದ ಒಮ್ಮೆಲೇ ಉಂಟಾದ ಶೋಕ ಶ್ಲೋಕವಾದಂತೆ, ಈತನಿಗೂ ಆ ಹಾಡಿನ ಸೊಲ್ಲು, ಕವನಿಸುವ, ಸ್ಫೂರ್ತಿ ನೀಡಿತು! ವಾಲ್ಮೀಕಿ, ಆದಿಕವಿಯೆಂದು ಪ್ರಖ್ಯಾತನಾದಂತೆ, ಮುಂದೆ ಅದೇ ಹುಡುಗ, ಉತ್ತಮೋತ್ತಮ ಕವನಗಳನ್ನೂ ಖಂಡಕಾವ್ಯಗಳನ್ನೂ ಬರೆದು ಕನ್ನಡದ ಪ್ರಥಮ ರಾಷ್ಟ್ರಕವಿಯೆನಿಸಿ ಮಹಾಕವಿಯಾಗಿ ಮನ್ನಣೆಗೆ ಪಾತ್ರನಾದನು ಎಂಬುದು ಸಂತೋಷದ ವಿಷಯ.

–ಆ ಬಾಲಕನೇ ಗೋವಿಂದ ಪೈ! ಮೇಲಿನ ಘಟನೆಯ ವಿವರವನ್ನು ಅವರೇ ಬರೆದ 'ಸಾಹಿತ್ಯಜ್ಞರ ಆತ್ಮಕಥನ' ಎಂಬ ಲೇಖನದಿಂದ ಉದ್ಧರಿಸಿ ಕೊಡಲಾಗಿದೆ.

ಇಂತು, ಕೇವಲ ಹತ್ತು ಹನ್ನೆರಡನೆಯ ವರ್ಷ ಪ್ರಾಯದೊಳಗೇ ಪೈಗಳು ಕೃತಿರಚನೆಗೆ ತೊಡಗಿದ್ದರು; ಅದೇ ಕಾಲಕ್ಕೆ ಎಂದರೆ ೧೮೯೫ರಲ್ಲಿ ಅವರು ಒಂದು ಯಕ್ಷಗಾನಪ್ರಸಂಗವನ್ನೂ ಬರೆದರು. ಆ ಪ್ರಸಂಗದ ಹೆಸರು ಮಕರಾಕ್ಷನ ಕಾಳಗ, ಮಕರಾಕ್ಷನಾರೋ ಅವರಿಗೆ ಆಗ ತಿಳಿಯದು. ಅವನನ್ನು ಶ್ರೀರಾಮನೇನೋ ಸಂಹರಿಸುತ್ತಾನೆ, ಮೂರನೆಯ ಒಂದು ಪಾಲು ಬರೆದಾಗ ಮನಸ್ಸಿಗೆ ಒಗ್ಗದೆ ಹರಿದುಬಿಟ್ಟರು. ಅಂತೂ ಕನ್ನಡದ ಕರಾವಳಿಯಲ್ಲಿ ಅಂದಿನಿಂದ ಇಂದಿನ ವರೆಗೂ

ಜನಪ್ರಿಯ ಕಲಾಸಾಹಿತ್ಯ ಮಾಧ್ಯಮವಾದ ಯಕ್ಷಗಾನ ಪೈಗಳ ಬರವಣಿಗೆಗೂ ಸ್ಫೂರ್ತಿ ನೀಡಿದೆ ಎಂಬುದು ಗಮನಾರ್ಹ.

ಇದೇ ಕಾಲಕ್ಕೆ ಎಂದರೆ ೧೮೯೬ರ ಸುಮಾರಿಗೆ ಪೈಗಳ ಜೀವಿತದಲ್ಲಿ ಮತ್ತೊಂದು ಘಟನೆ ಸಂಭವಿಸಿತು; ಅವರು ಕವನಿಸುವ ವಿಷಯ ಹೆತ್ತವರಿಗೆ ತಿಳಿದಿರಲಿಲ್ಲ; ಏನೋ ಕಾರಣಕ್ಕಾಗಿ, ತಮ್ಮಂದಿರೊಡನೆ ಜಗಳವಾಯಿತು; ಸಿಟ್ಟುಗೊಂಡ ಅವರು, ತಾಯಿಯೊಡನೆ, ಪೈಗಳು ಕವಿತೆ ಬರೆಯುತ್ತಾರೆಂದು ದೂರಿತ್ತರು. ಅವರ ತಾಯಿ ಹಳೆಬಳಕೆಯ ಹೆಂಗುಸು; ಪ್ರಸಿದ್ಧ ಯಕ್ಷಗಾನ ಕವಿಯಾದ ಮೂಲ್ಕಿಯ ವಾಸುದೇವ ಪ್ರಭು 'ಬಿಲ್ಲಹಬ್ಬ' ಎಂಬ ಯಕ್ಷಗಾನ ಪ್ರಸಂಗವನ್ನು ಬರೆಯುತ್ತಲೆ ಅವರಿಗೆ ಹುಚ್ಚುಹಿಡಿಯಿತು; ಮತ್ತೆ; ಸಮುದ್ರ ಮಥನ' ಪ್ರಸಂಗ ರಚಿಸಿದ ನಂತರ ಹುಚ್ಚು ಬಿಟ್ಟಿತಂತೆ! ಹಾಗಾಗಿ ಕವಿತೆ ಬರೆದರೆ ಹುಚ್ಚುಹಿಡಿಯುತ್ತದೆ ಎಂದು ಮನಸಾರೆ ನಂಬಿದ್ದ ಅವರ ತಾಯಿ, ತಮ್ಮಂದಿರ ದೂರು ಕೇಳುತ್ತಲೇ ಸಿಟ್ಟುಗೊಂಡು ಕವಿತೆ ಬರೆವ ಹುಚ್ಚನ್ನು ಬಿಡಿಸಬೇಕೆಂದು ಪೈಗಳನ್ನು ದಂಡಿಸಿದರು. ಆಮೇಲೆ ಕೆಲಸಮಯದ ವರೆಗೆ ಮನೆಯಲ್ಲಿ ಕವನಿಸಲಾರದೆ, ನಡೆದಾಡುವಾಗ ಬೀದಿಯಲ್ಲೋ, ಬಿಡುವಾದಾಗ ಸಾಲೆಯಲ್ಲೋ ಕವನ ಬರೆಯುತ್ತಿದ್ದರು. ಹೀಗೆ ೧೮೯೮ರ ವರೆಗೆ ಸಾಗಿತು. ಈ ಮಧ್ಯೆ, ಮಂಗಳೂರಲ್ಲಿ ಸ್ಥಾಪಿತವಾದ ಬಾಸೆಲ್ ಮಿಶನ್ ಸಂಸ್ಥೆಯವರು ಪ್ರಕಟಿಸಿದ 'ಹಳೆಗನ್ನಡ ವ್ಯಾಕರಣ ಸೂತ್ರಗಳು' ಪುಸ್ತಕವನ್ನು ಅಭ್ಯಾಸ ಮಾಡಿ ಅದರಲ್ಲಿ ಬರುವ ಛಂದೋಲಕ್ಷಣಗಳನ್ನು ಅರಿತುಕೊಂಡು ಗದುಗಿನ ಭಾರತ, ಜೈಮಿನಿ ಭಾರತ ಮುಂತಾದ ಜನಪ್ರಿಯ ಕಾವ್ಯಗಳನ್ನು ಓದುತ್ತಿದ್ದು ೧೮೯೮ರ ತನಕ ವಿವಿಧ ಛಂದಸ್ಸುಗಳಲ್ಲಿ ಹಲವಾರು ಕವಿತೆಗಳನ್ನು ಬರೆದರು; ಬರೆದಂತೆ ಹರಿದುಹಾಕಿಬಿಟ್ಟರು.

ಪ್ರಾಸಾತೀತ

ಪೈಗಳ ಕಾಲೇಜ್ ವಿದ್ಯಾಭ್ಯಾಸ, ಇಂಟರ್‌ಮೀಡಿಯೆಟ್ ವರೆಗೆ ಮಂಗಳೂರು ಸರಕಾರೀ ಕಾಲೇಜಿನಲ್ಲಿ ಆಯಿತು. ಕನ್ನಡ ನವೋದಯ ಸಾಹಿತ್ಯದ ಆಚಾರ್ಯಪುರುಷರಲ್ಲಿ ಒಬ್ಬರಾದ ಪಂಜೆ ಮಂಗೇಶರಾಯರು ಅಲ್ಲಿ ಅವರಿಗೆ ಕನ್ನಡದ ಅಧ್ಯಾಪಕರಾಗಿದ್ದರು. ಕೆಲಕಾಲ ಮುನ್ನೂರು ಶಿವರಾಮಯ್ಯನವರೂ ಕನ್ನಡ ಕಲಿಸಿದ್ದರು. ಅದು ೧೮೯೯-೧೯೦೦ರ ಕಾಲ. ದ್ವಿತೀಯಾಕ್ಷರ ಪ್ರಾಸ ಕವಿತೆಯ ಜೀವವೆಂದು ಕನ್ನಡ ಲಾಕ್ಷಣಿಕರು ಹೇಳಿದ್ದರು; ಆ ಅನಿವಾರ್ಯತೆಯಿಂದ ಕನ್ನಡದ ಎಲ್ಲಾ ಕವಿಗಳೂ ಆ ಪ್ರಾಸ ಇಟ್ಟೇ ಬರೆಯುತ್ತಿದ್ದರು. ಪ್ರಾಸ ಕೇವಲ ಶಬ್ದಾಲಂಕಾರ, ಅದೇನು ಕವನದ ಜೀವವಾಗಲಾರದು; ಶ್ರೇಷ್ಠ ಸಾಹಿತ್ಯಗಳಾದ ಇಂಗ್ಲಿಷ್ ಸಂಸ್ಕೃತಾದಿ ಸಾಹಿತ್ಯಗಳಲ್ಲಿ ದ್ವಿತೀಯಾಕ್ಷರ ಪ್ರಾಸವಿಲ್ಲ ನಾವಾದರೂ ಅದನ್ನು ಏಕೆ ಬಿಟ್ಟು ಬರೆಯಬಾರದು ಎಂಬ ಯೋಚನೆ ಪೈಗಳಿಗೆ ಬಂತು. ಪಂಜೆಯವರು ಕವಿಗಳಾಗಿ ವಿದ್ವಾಂಸರಾಗಿ ಆಗಲೇ ಪ್ರಸಿದ್ಧರಾದವರು, ಮಾತ್ರವಲ್ಲ, ತನ್ನ ಗುರುಗಳು ಕೂಡ;

ಅವರಲ್ಲಿ ಕೇಳಿಯೇ ಬಿಡುವುದೆಂದು ಧೈರ್ಯ ತಂದುಕೊಂಡು, ದ್ವಿತೀಯಾಕ್ಷರ ಪ್ರಾಸ ಬಿಟ್ಟು ಬರೆದರೆ ಹೇಗೆ – ಆ ಸಂಪ್ರದಾಯ ಮೀರಿದರೆ ತಪ್ಪೇನು? ಎಂದು ಪ್ರಶ್ನಿಸಿಬಿಟ್ಟರು. ಪಂಜೆಯವರು ಆ ಪ್ರಶ್ನೆಗೆ ನೇರವಾಗಿ ಉತ್ತರಿಸದೆ, ಆಗದೆಂದಾಗಲಿ, ಆಗಬಹುದೆಂದಾಗಲಿ ಹೇಳದೆ ಮಾತನ್ನು ತೇಲಿಸಿಬಿಟ್ಟ ಕಾರಣ, ಕೆಲಕಾಲ ಪೈಗಳು ಪ್ರಾಸ ಬಿಟ್ಟು ಬರೆವುದೂ, ಹಾಗೆ ಬರೆದುದನ್ನು ಹರಿದುಹಾಕುವುದೂ ಹೀಗೆ ಸಾಗಿತು. ಮುಂದೆ ೧೯೧೧ರ ಎಪ್ರಿಲ್ ತಿಂಗಳಲ್ಲಿ ಬರೋಡಾ ರಾಜ್ಯದ ನವಸಾರಿಯಲ್ಲಿ ಇದ್ದಾಗ, ಇನ್ನು ಮೀನ ಮೇಷ ಎಣಿಸದೆ ಧೈರ್ಯಮಾಡಿ ಪ್ರಾಸವನ್ನು ತೊರೆದು ಬಿಡುವುದೇ ನಿಶ್ಚಯವೆಂದು ನಿರ್ಧಾರ ಮಾಡಿ ರವೀಂದ್ರರ 'ಆಯಿ ಭುವನ ಮನಮೋಹಿನಿ' ಎಂಬ ಬಂಗಾಳಿ ಪದ್ಯವನ್ನು ಪ್ರಾಸರಹಿತವಾಗಿ ಕನ್ನಡಿಸಿದರು.

ಇಕ್ಬಾಲರ 'ಹಿಂದೂಸ್ಥಾನ್ ಹಮಾರಾ' ಉರ್ದು ಪದ್ಯವನ್ನೂ ಭಾಷಾಂತರಿಸಿದರು. 'ಹೊಲೆಯನು ಯಾರು?' ಎಂಬ ಸ್ವಂತ ಕವನವನ್ನೂ ರಚಿಸಿದರು. ಈ ಎಲ್ಲಾ ಪದ್ಯಗಳೂ ಮಂಗಳೂರಲ್ಲಿ ಪ್ರಕಟವಾಗುತ್ತಿದ್ದ 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಮುದ್ರಿತವಾದಾಗ, ಒಮ್ಮೆ ಸಾಹಿತ್ಯಕ್ಷೇತ್ರದಲ್ಲಿ ಪ್ರಬಲ ವಾದ ವಿವಾದಗಳ ಕೋಲಾಹಲವೇ ಎದ್ದಿತು, ಅಂದು ಪೈಗಳು ನಡೆದ ಆ ಮೇಕೆದಾರಿಯೇ ಇಂದು ತೇರು ಎಳೆವ ಹೆದ್ದಾರಿಯಾದುದನ್ನು ನಾವು ನೋಡುತ್ತೇವೆ. ಮಂಗಳೂರು, ಬೆಂಗಳೂರು, ಕಾರವಾರ, ಧಾರವಾಡ, ಮೈಸೂರು ಎಲ್ಲಾ ಕಡೆಯ ಕವಿಗಳೂ ದ್ವಿತೀಯಾಕ್ಷರ ಪ್ರಾಸ ಬಿಟ್ಟು ಬರೆಯಲು ತೊಡಗಿದರು. ಕನ್ನಡದ ಕಾವ್ಯ ಮಾರ್ಗದಲ್ಲಿ ಈ ಹೊಸಹಾದಿಯನ್ನು ನಿರ್ಮಿಸಿದ ಮೊದಲಿಗರು ಪೈಗಳು ಎಂಬುದೂ ಅವರ ಪ್ರಸಿದ್ಧಿಗೆ ಕಾರಣವಾಗಿದೆ. ಪ್ರಾಸದ ಸಂಕೋಲೆಯಿಂದ ಕಾವ್ಯವನಿತೆಯನ್ನು ಬಿಡಿಸಿದ ಮಹಾವ್ಯಕ್ತಿಯೆಂದು ಪೈಗಳನ್ನು ಸಾಹಿತ್ಯದ ಇತಿಹಾಸ ಲೇಖಕರು ಉಲ್ಲೇಖಿಸುವಂತಾಗಿದೆ. ಕನ್ನಡದ ಪ್ರಥಮ ಸಣ್ಣ ಕತೆಗಾರರಾಗಿ ಗುರುಗಳಾದ ಪಂಜೆಯವರು ಖ್ಯಾತರಾದಂತೆ, ಅವರ ಶಿಷ್ಯರಾದ ಪೈಗಳೂ ಕನ್ನಡದ ದ್ವಿತೀಯಾಕ್ಷರ ಪ್ರಾಸಭಂಜಕರಾಗಿ ಸ್ಮರಣೀಯರೆನಿಸಿದ್ದಾರೆ. ಇವರಿಬ್ಬರೂ ಕನ್ನಡದ ಕರಾವಳಿಯವರೆನ್ನುವುದೂ ಕೊಂಕಣಿ ಮನೆಮಾತಿನವರೆನ್ನುವುದೂ ಗಮನಾರ್ಹ ಸಂಗತಿ.

ಗೋವಿಂದ ಪೈಗಳು ೧೮೯೯ರಲ್ಲಿ ಎಂದರೆ ತಮ್ಮ ಹದಿನಾರನೆಯ ವಯಸ್ಸಿನಲ್ಲಿ ಶೇಕ್ಸ್‌ಪೀಯರ್ ಕವಿಯ Twelfth Night ನಾಟಕದ ಪ್ರಥಮಾಂಕದ ಕೆಲವು ದೃಶ್ಯಗಳನ್ನು ವೃತ್ತ–ಕಂದಗಳಲ್ಲಿ ಕನ್ನಡಿಸಿ, ಮುದ್ದಣ್ಣ ಮಹಾಕವಿಯೆಂದು ಖ್ಯಾತರಾದ ನಂದಳಿಕೆ ಲಕ್ಷ್ಮೀನಾರಾಯಣಯ್ಯ ಅವರಿಗೆ ಕಳುಹಿಸಿಕೊಟ್ಟರು. ಅವರು ಮುಂದುವರಿಸಬಹುದೆಂದು ಪ್ರೋತ್ಸಾಹಿಸಿದರೂ, ಅದನ್ನು ಪೈಗಳು ಮತ್ತೆ

ಮುಂದುವರಿಸಲಿಲ್ಲ.

ಬಂಗಾರದ ಪದಕ

ಮಂಗಳೂರು ಸರಕಾರಿ ಕಾಲೇಜಿನಲ್ಲಿ ಇಂಟರ್‌ಮೀಡಿಯೆಟ್ ವಿದ್ಯಾಭ್ಯಾಸವನ್ನು ಉತ್ತಮರೀತಿಯಲ್ಲಿ ಪೂರ್ತಿಗೊಳಿಸಿದ ಅವರು ಮುಂದಿನ ಓದಿಗಾಗಿ ಮದ್ರಾಸಿಗೆ ತೆರಳಿ ಅಲ್ಲಿನ ಕ್ರಿಶ್ಚಿಯನ್ ಕಾಲೇಜು ಸೇರಿದರು. ಆಗ ದಕ್ಷಿಣ ಕನ್ನಡ ಜಿಲ್ಲೆ ಕಾಸರಗೋಡು ಸಹಿತ, ಮದ್ರಾಸು ರಾಜ್ಯಕ್ಕೆ ಸೇರಿದ್ದುದರಿಂದ, ರಾಜಧಾನಿಯಾದ ಮದ್ರಾಸಿನಲ್ಲಿ ಉಚ್ಚಶಿಕ್ಷಣ ಪಡೆಯುವುದು ಅಂದಿನ ವಿದ್ಯಾರ್ಥಿಗಳ ಮಹತ್ವಾಕಾಂಕ್ಷೆಯಾಗಿತ್ತು. ಅಂತೆ ಅವರು ಮದ್ರಾಸಿನಲ್ಲಿ ಬಿ. ಎ. ತರಗತಿಗೆ ಸೇರಿದರು. ಮಹಾದಾರ್ಶನಿಕನೆಂದೂ, ಆಮೇಲೆ ಭಾರತದ ರಾಷ್ಟ್ರಪತಿಯೆಂದೂ ಸುಪ್ರಸಿದ್ಧರಾದ ಡಾ| ಎಸ್. ರಾಧಾಕೃಷ್ಣನ್ ಅಲ್ಲಿ ಪೈಗಳ ಸಹಪಾಠಿಯಾಗಿದ್ದರು. ರಾಜಧಾನಿಯ ವಾಸ, ಅಲ್ಲಿನ ಉನ್ನತಶಿಕ್ಷಣ, ಅವರ ಅನುಭವಕ್ಷೇತ್ರವನ್ನು ಮತ್ತಷ್ಟು ವಿಸ್ತಾರಗೊಳಿಸಿತು. ಬಿ.ಎ. ವಿದ್ಯಾರ್ಥಿಯಾಗಿದ್ದಾಗಲೆ ಅವರು ಹಲವು ಭಾಷೆಗಳ ಅಭ್ಯಾಸ ಮಾಡಿದರು. ಲೇಟಿನ್, ಫ್ರೆಂಚ್ ಮೊದಲಾದ ಪಾಶ್ಚಾತ್ಯ ಭಾಷೆಗಳ, ಸಂಸ್ಕೃತ, ಬಂಗಾಳಿ, ಪಾಲಿ ಮುಂತಾದ ಪೌರಸ್ತ್ಯ ಭಾಷೆಗಳ ಪರಿಚಯ ಆಯಿತು.

ವಿಶ್ವವಿದ್ಯಾಲಯದ ಬಿ. ಎ. ತರಗತಿಯ ಕೊನೆಯ ವರ್ಷದ ಪರೀಕ್ಷೆಗೆ ಕುಳಿತು ಇಂಗ್ಲಿಷ್ ಭಾಷೆಯ ಪ್ರಶ್ನೆಪತ್ರಿಕೆಗೆ ಉತ್ತರ ಬರೆದಾಗಿತ್ತು. ಅಷ್ಟರಲ್ಲಿ ತಂದೆ ಅಸ್ವಸ್ಥಗೊಂಡು ರುಗ್ಣಶಯ್ಯೆಯಲ್ಲಿದ್ದಾರೆಂಬ ಸಿಡಿಲು ಸುದ್ದಿ ಬಂತು; ಪರೀಕ್ಷೆಯನ್ನು ಅರ್ಧದಲ್ಲಿಯೇ ಬಿಟ್ಟು ಊರಿಗೆ ಧಾವಿಸಿದರು. ಹಾಗೆ ಅಲ್ಲಿಂದ ಮರಳಿದವರು ಮತ್ತೆ ಬಿ.ಎ. ಪದವಿಪರೀಕ್ಷೆಗಳನ್ನು ಪೂರ್ತಿಗೊಳಿಸಲೇ ಇಲ್ಲ. ಪರೀಕ್ಷೆಗೆ ಕುಳಿತು ಉತ್ತರಿಸಿದ್ದ ಇಂಗ್ಲಿಷ್ ಭಾಷಾವಿಷಯದಲ್ಲಿ ವಿಶ್ವವಿದ್ಯಾನಿಲಯದಲ್ಲಿಯೇ ಸರ್ವಪ್ರಥಮರೆನಿಸಿ ಬಂಗಾರದ ಪದಕ ಪಡೆದರೆಂಬುದು ಅವರ ಆಳವಾದ ಅಭ್ಯಾಸದ ಅರ್ಹತೆಯನ್ನು ತಿಳಿಸುತ್ತದೆ.

ಭಾಷಾಗ್ರಂಥಸಂಪತ್ತು

ಆಮೇಲಿನ ಪೈಗಳ ಶಿಕ್ಷಣ ಓದುಗಾರಿಕೆಯೆಲ್ಲವೂ ಸ್ವಂತ ಮನೆಯಲ್ಲಿಯೇ; ಎಲ್ಲವೂ ಸ್ವಾರ್ಜಿತ. ಮಂಗಳೂರು ಬಾಸೆಲ್ ಮಿಶನಿನವರು ಆಗ ಕನ್ನಡದ ಕೆಲವೊಂದು ಅತ್ಯುತ್ತಮ ಪ್ರಾಚೀನಾರ್ವಾಚೀನ ಗ್ರಂಥಗಳನ್ನು ಪ್ರಕಟಿಸುತ್ತಿದ್ದರು. ಅವೆಲ್ಲವನ್ನೂ ಕೊಂಡು ಓದಬಹುದೆಂದು ಹಿರಿಯರ ಒಪ್ಪಿಗೆ ದೊರೆತುದರಿಂದ ಕೊಂಡು ಓದಿದರು. ತನ್ನ ಜ್ಞಾನತೃಷೆಯನ್ನು ಹಿಂಗಿಸಿಕೊಳ್ಳಲು ದೇಶ–ವಿದೇಶಗಳಿಂದಲೂ ಹಲವು ಅಮೂಲ್ಯ ಉದ್ಗ್ರಂಥಗಳನ್ನು ತರಿಸಿ ಓದಿ ಅಭ್ಯಾಸಿಸುತ್ತಾ ವಿದ್ವತ್ತಿನ ಉತ್ತುಂಗ ಶಿಖರವನ್ನು ತಲಪಿದರು.

ಅಷ್ಟೊಂದು ವಿಪುಲವೂ ಬಹುಳವೂ ಆದ ಓದುಗಾರಿಕೆ, ಅಭ್ಯಾಸ, ಗ್ರಂಥಸಂಗ್ರಹಗಳ ವಿಷಯಗಳಲ್ಲಿ ಗೋವಿಂದ ಪೈಗಳಿಗೆ ಹೋಲಿಕೆಯೆಂದರೆ ಗೋವಿಂದ ಪೈಗಳೇ! ಏಕವ್ಯಕ್ತಿಯಾಗಿ ಆ ರೀತಿ ಸಾಧನೆ ಮಾಡಿದವರೂ, ಅದರ ಫಲವಾಗಿ ಅಂತಹ ಸಿದ್ಧಿಯನ್ನು ಪಡೆದವರೂ ನಮ್ಮ ದೇಶದಲ್ಲಿ ಸಿಗುವುದು ತೀರಾ ವಿರಳ. ಅವರ ಮಂಜೇಶ್ವರದ ಮನೆಯ ಕೋಣೆ ಮಾಳಿಗೆಗಳಲ್ಲಿ ಪುಸ್ತಕ ತುಂಬಿದ ಕಪಾಟುಗಳು ತುಂಬಿದ್ದುವು; ಅಲ್ಲಲ್ಲಿ ಪುಸ್ತಕಗಳ ರಾಶಿ ರಾಶಿಯೇ ಬಿದ್ದುಕೊಂಡಿತ್ತು. ಕೊಂಡ ಪುಸ್ತಕಗಳೆಲ್ಲವನ್ನೂ ಆದ್ಯಂತ ಓದಿಯೇ ಮುಗಿಸುತ್ತಿದ್ದರು. ಅವರು ಬರೆಯಲು ಉಪಯೋಗಿಸುತ್ತಿದ್ದ ನೇರಳೆ ಶಾಯಿಯಲ್ಲಿ ಆ ಗ್ರಂಥಗಳ ಪ್ರತಿ ಪುಟದಲ್ಲಿ ಅಡಿಗೆರೆ ಗುರುತಿಸುತ್ತಿದ್ದರು. ಇಂದು, ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿರುವ, ಅವರು ಉಪಯೋಗಿಸಿದ 'ಕಿಟ್ಟಲ್ ಕೋಶ'ದಲ್ಲಿ ಪ್ರತಿ ಪುಟದ ಪ್ರತಿ ಪದಕ್ಕೂ ಎಂಬಂತೆ ಅಕ್ಷರ ಅಕ್ಷರ ಬಿಡದೆ ನೇರಳೆ ಶಾಯಿಯಲ್ಲಿ ಅಡಿಗೆರೆ, ಪ್ರಶ್ನೆ, ತಿದ್ದುಪಡಿ ಇತ್ಯಾದಿ ಗುರುತು ಮಾಡಿದ್ದನ್ನು ನಾವು ನೋಡಬಹುದು; ಗುರುತು ಆ ನಿಘಂಟಿನ ಪ್ರಾರಂಭದ ಪುಟದಿಂದ ಕೊನೆಯ ೧೭೫೨ಯ ಪುಟದ ವರೆಗೂ ವ್ಯಾಪಿಸಿದೆ. ಒಂದು ನಿಘಂಟನ್ನು ಇಷ್ಟು ಆಳವಾಗಿ ಅಭ್ಯಾಸ ಮಾಡಿದ ಚರಿತ್ರೆ ಭಾರತ ದೇಶದ ಹಾಗೂ ಪ್ರಪಂಚದ ಭಾಷಾವಿದ್ವಾಂಸರ ಪಂಕ್ತಿಯಲ್ಲಿ ಕಾಣುವುದು ದುರ್ಲಭ. ಇದೊಂದು ಉದಾಹರಣೆಯನ್ನೇ ಎತ್ತಿಕೊಂಡರೆ ಸ್ಥಾಯೀ ಪುಲಾಕ ನ್ಯಾಯದಂತೆ ಗೋವಿಂದ ಪೈಗಳ ಅಭ್ಯಾಸ ಕ್ರಮದ ಆಳ ವಿಸ್ತಾರಗಳನ್ನು ಸರಿಯಾಗಿ ಅರ್ಥಮಾಡಿಕೊಳ್ಳಬಹುದು.

ವೈದಿಕ, ಸಂಸ್ಕೃತ, ಪಾಲಿ, ಹಿಂದಿ, ಉರ್ದು, ಬಂಗಾಳಿ, ಗುಜರಾಥಿ ಇತ್ಯಾದಿಯಾಗಿ ಆರ್ಯವರ್ಗದ ಭಾಷೆಗಳನ್ನೂ, ಕನ್ನಡ, ಮಲೆಯಾಳ, ತಮಿಳು ಇತ್ಯಾದಿ ದ್ರಾವಿಡವರ್ಗದ ಭಾಷೆಗಳನ್ನೂ, ಗ್ರೀಕ್, ಲ್ಯಾಟಿನ್, ಇಟಾಲಿಯನ್, ಫ್ರೆಂಚ್, ಜಪಾನ್ ಇತ್ಯಾದಿ ವಿದೇಶೀ ಭಾಷೆಗಳನ್ನೂ, ಇಂತು ಒಟ್ಟು ಅವರು ಇಪ್ಪತ್ತೆರಡು ಭಾಷೆಗಳನ್ನು ಬಲ್ಲವರಾಗಿದ್ದರು. ಇಷ್ಟೊಂದು ಭಾಷೆಗಳನ್ನು ಬಲ್ಲ ಏಕವ್ಯಕ್ತಿ ಇಡೀ ದೇಶದಲ್ಲೇ ಅಪೂರ್ವವೆನಬೇಕು. ಪೈಗಳ ಕೊನೆ ಕೊನೆಯ ದಿನಗಳಲ್ಲಿ ವೃದ್ಧಾಪ್ಯದ ದೆಸೆಯಿಂದ ಉಂಟಾದ ಮರವಿನ ನಿಮಿತ್ತ ಇತರರ ಕೈಗೆ ಹೋದ ಅವರ ಕೆಲವೊಂದು ಮರಳಿ ಬಾರದ ಪುಸ್ತಕಗಳನ್ನು ಉಳಿದು ಬಾಕಿಯಿರುವ ೪೭೫೪ ಗ್ರಂಥಗಳು, ನಲುವತ್ತಮೂರು ಭಾಷೆಗಳಲ್ಲಿ ಇರುವಂಥವುಗಳು, ಪೈಗಳ ಮರಣಾನಂತರ ಅವರ ತಮ್ಮಂದಿರ ಮಕ್ಕಳು ಉಡುಪಿಯ ಮಹಾತ್ಮಾ ಗಾಂಧಿ ಕಾಲೇಜಿಗೆ ದಾನ ನೀಡಿದ್ದು. ಈಗಲೂ ಅಲ್ಲಿನ ಗೋವಿಂದ ಪೈ ಸಂಶೋಧನ ಕೇಂದ್ರದಲ್ಲಿರುವುದನ್ನು ನೋಡಬಹುದು.

ಆ ಗ್ರಂಥಭಂಡಾರದಲ್ಲಿ ಇರುವ ಗೋವಿಂದ ಪೈಗಳದ್ದಾದ ವಿವಿಧ ಭಾಷೆಗಳ ಗ್ರಂಥಗಳ ಪಟ್ಟಿ ಈ ಕೆಳಗಿನಂತಿದೆ :

ಭಾಷೆ	ಸಂಖ್ಯೆ	ಭಾಷೆ	ಸಂಖ್ಯೆ	ಭಾಷೆ	ಸಂಖ್ಯೆ
ಇಂಗ್ಲಿಷ್	೧೮೭೨	ಗ್ರೀಕ್	೪೧	ತೆಲುಗು	೫
ಕನ್ನಡ	೧೨೮೦	ಲಾಟಿನ್	೨೮	ಅಸ್ಸೀರಿಯನ್	೬
ಸಂಸ್ಕೃತ	೩೯೮	ತಮಿಳು	೨೪	ಪಹ್ಲವಿ (ಅಜೆಂಡಾ)	೭
ಮರಾಠಿ	೧೮೫	ಸ್ಪಾನಿಷ್	೨೩	ಪೋರ್ಚುಗೀಸ್	೬
ಹಿಂದಿ	೧೩೬	ಉರ್ದು	೧೭	ಇತಾಲಿಯನ್	೪
ಫ್ರೆಂಚ್	೧೨೭	ಕೊಂಕಣಿ	೧೪	ಬರ್ಮೀ	೩
ಅವೆಸ್ತಾ ಮತ್ತು ಪಲ್ಲವಿ	೧೯	ಗುಜರಾಥಿ	೧೮	ರಶ್ಯನ್	೩
ಬಂಗಾಳಿ	೫೮	ಮಲಡಯಾಳಿ	೧೧	ಚೀನೀ	೩
ಪಾಲಿ	೪೫	ತಿಬೆತಿನ್	೧೧	ಕೊಡವ	೨
ಪರ್ಶಿಯನ್	೪೪	ಜರ್ಮನ್	೧೨	ಒರಿಯಾ	೨
ಹಿಬ್ರೂ	೧೦	ಇರಾನಿ	೨	ಅರಾಬಿಕ್	೯
ಗಾಲ್ಲಿಕ್	೧	ಗೋಂಡ	೧	ಇತರ	೨೦೬
				ಒಟ್ಟು	೪೭೩೪

ಅರ್ಧ ಶತಮಾನಕ್ಕಿಂತಲೂ ಹೆಚ್ಚಿನ ಕಾಲ, ಜೀವನದ ಬಹುಭಾಗವನ್ನು ಏಕೈಕ ವ್ಯಕ್ತಿ, ತಪಸ್ಸಿನ ನಿಷ್ಠೆಯಿಂದ ಕುಳಿತು, ಇಷ್ಟು ವಿಪುಲ ಭಾಷೆಗಳ ಗ್ರಂಥರಾಶಿಗಳನ್ನು, ಇಷ್ಟು ದೊಡ್ಡ ಗ್ರಂಥಭಂಡಾರವನ್ನು ಸಂಗ್ರಹ ಮಾಡಿ ಅವೆಲ್ಲವನ್ನೂ ಪರಿಪೂರ್ಣ ಓದಿ ಜೀರ್ಣೀಸಿಕೊಂಡರೆಂಬುದು ಪೈಗಳ ಅದ್ಭುತ ಕ್ರಿಯಾಶಕ್ತಿಯನ್ನು, ಧೀಮಂತಿಕೆಯನ್ನೂ ಎತ್ತಿತೋರಿಸುತ್ತದೆ. ಗೋವಿಂದ ಪೈಗಳ ಸರ್ವಶ್ರೇಷ್ಠ ವಿದ್ವತ್ ವ್ಯಕ್ತಿತ್ವಕ್ಕೆ ಈ ವಿಶಿಷ್ಟ ಹಿನ್ನೆಲೆ ಜ್ಯೋತಿರ್ಮಯ ಪ್ರಭಾವಳಿಯನ್ನು ಒದಗಿಸಿ, ಎಂದೆಂದಿಗೂ ಅವರನ್ನು ಉನ್ನತ ಮಟ್ಟದ ಮನ್ನಣೆಯ ಮಣೆಯಲ್ಲಿ ಬೆಳಗಿರುವಂತೆ ಮಾಡಿದೆ.

ಗಾರ್ಹಸ್ಥ್ಯ

ಬಹುಭಾಷಾ ವ್ಯಾಸಂಗ, ಗ್ರಂಥಸಂಗ್ರಹ, ಕವನ ರಚನೆ, ಸಾಹಿತ್ಯ ಸಂಶೋಧನೆಗಳಲ್ಲಿ ಮಗ್ನರಾಗಿ ಕೀರ್ತಿಶಿಖರಕ್ಕೇರಿದ ಗೋವಿಂದ ಪೈಗಳ ಗೃಹಸ್ಥ ಜೀವನದ ಕುರಿತೂ ಪರಿಚಯಿಸಬೇಕು. ಮದ್ರಾಸಿನ ಬಿ.ಎ. ಪರೀಕ್ಷೆಯನ್ನು ಅರ್ಧದಲ್ಲಿಯೇ ಬಿಟ್ಟುಬಂದ ಪೈಗಳಿಗೆ ತಂದೆಯ ನಿಧನಾನಂತರ ಮಂಜೇಶ್ವರದ ಮನೆಯಲ್ಲಿಯೇ ನೆಲೆಸಬೇಕಾಗಿ ಬಂತು; ಅವರೇ ಕುಟುಂಬದ ಹಿರಿಯರಾಗಿದ್ದ ಕಾರಣ, ಅದು ಅವರ ಹೊಣೆಗಾರಿಕೆ

ಕೂಡ ಆಗಿತ್ತು. ಅಂತು ನೆಲೆನಿಂತ ಅವರಿಗೆ ಲಕ್ಷ್ಮಿ ಯಾನೆ ಕೃಷ್ಣಾಬಾಯಿಯೆಂಬವರೊಡನೆ ವಿವಾಹ ಜರಗಿತು. ೧೯೧೦ರಲ್ಲಿ ಕೃಷ್ಣಾಬಾಯಿಯವರು ಒಂದು ಹೆಣ್ಣು ಮಗುವನ್ನು ಹೆತ್ತರು. ಆ ಮಗು ಕೆಲವೇ ದಿನಗಳಲ್ಲಿ ತೀರಿಹೋಯಿತು. ಮುಂದೆ ಕೃಷ್ಣಾಬಾಯಿಯವರೂ ೧೯೨೭ರಲ್ಲಿ ಉಬ್ಬಸರೋಗದಿಂದ ಮರಣ ಹೊಂದಿದರು. ಆಗ ಗೋವಿಂದ ಪೈಗಳ ವಯಸ್ಸು ೪೪ ವರ್ಷ; ಅವರು ಮರುಮದುವೆ ಮಾಡಿಕೊಳ್ಳಲಿಲ್ಲ; ಕುಟುಂಬದ ಹಿರಿಯರಾಗಿ ತಮ್ಮಂದಿರನ್ನೂ ತಮ್ಮಂದಿರ ಮಕ್ಕಳನ್ನೂ ವಾತ್ಸಲ್ಯದಿಂದ ನೋಡಿಕೊಂಡರು.

ಕೃಷ್ಣಾಬಾಯಿಯವರು ಪತಿಯ ಸಾಹಿತ್ಯ ವ್ಯವಸಾಯದಲ್ಲಿ ಅನುಕೂಲೆಯಾಗಿದ್ದರು. ಅವರಿಗೆ ಮರಾಠಿ ಭಾಷೆಯಲ್ಲಿ ಪರಿಚಯ ಪಾಂಡಿತ್ಯವಿತ್ತು. ಅವರ ಪ್ರೇರಣೆಯೂ ಕಾರಣವಾಗಿ ಪೈಗಳು ಮರಾಠಿ ಭಾಷೆಯನ್ನು ಚೆನ್ನಾಗಿ ಅಭ್ಯಸಿಸಿದರು; ನವಸಾರಿಯಲ್ಲಿ ಕಾಕಾ ಕಾಲೇಲ್ಕರ್‌ರವರ ಜತೆಯಲ್ಲಿದ್ದಾಗ, ಕಾಲೇಲ್ಕರರು ಮರಾಠಿಯಲ್ಲಿ ಒಳ್ಳೆಯ ವಿದ್ವಾಂಸರಿದ್ದುದರಿಂದ, ಮರಾಠಿ ಸಾಹಿತ್ಯವನ್ನು ಅವರ ಮೂಲಕ ಕಲಿತುಕೊಳ್ಳಿರೆಂದು ಪತಿಗೆ ಕೃಷ್ಣಾಬಾಯಿ ಬರೆದಿದ್ದರಂತೆ. 'ಸೈರಂಧ್ರಿ' ಎನ್ನುವ ಒಂದು ಕಾವ್ಯಖಂಡವನ್ನು ಪತ್ನಿಯ ಪ್ರೋತ್ಸಾಹದಿಂದ ಬರೆದಿದ್ದುದಾಗಿ ಪೈಗಳು ಹೇಳುತ್ತಿದ್ದರು.

ಅಗಲಿದ ಸಹಧರ್ಮಿಣಿಯನ್ನು ಅವರು ಜೀವನವಿಡೀ ಸ್ಮರಿಸಿಕೊಂಡರು. ನಸುಕು ಹರಿಯುವ ಮುನ್ನ, ಪಕ್ಷಿಗಳ ಚಿಲಿಪಿಲಿ ಸದ್ದಿನೊಂದಿಗೆ ಎದ್ದವರೇ ನಿತ್ಯಕರ್ಮಗಳನ್ನು ತೀರಿಸಿ ಸ್ನಾನಮಾಡಿ ಶುಚಿರ್ಭೂತರಾಗಿ ತೋಟದ ಗಿಡಗಳಿಂದ ಹೂಗಳನ್ನಾಯ್ದು ಮನೆಯ ಮೆಟ್ಟಲೇರಿ ಕೋಣೆಯಲ್ಲಿರುವ ಅಗಲಿದ ಪತ್ನಿಯ ಚಿತ್ರಕ್ಕೆ ಹೂಗಳನ್ನರ್ಪಿಸುತ್ತಿದ್ದರು. ಅಲ್ಲಿ ಮೌನಪ್ರಾರ್ಥನೆ ಸಲ್ಲಿಸುತ್ತಿದ್ದರು. ತನ್ನ ಪ್ರಥಮ ಕವನಸಂಕಲನ 'ಗಿಳಿವಿಂಡು' ಕೃತಿಯನ್ನು ಪತ್ನಿಯ ಹೆಸರಲ್ಲಿ 'ಕೃಷ್ಣಾರ್ಪಣ' ಮಾಡಿದರು. ಪತ್ನಿಯ ನೆನಪಿಗೆ ಬಾಷ್ಪಾಂಜಲಿಯಾಗಿ, ತಮ್ಮನ್ನು ಅಗಲಿಸಿದ ವಿಧಾತನಿಗೆ ಶ್ರದ್ಧಾಂಜಲಿಯಾಗಿ 'ನಂದಾದೀಪ' ಕವಿತೆಗಳನ್ನು ರಚಿಸಿದರು; ಸಹಧರ್ಮಿಣಿಯ ಅಗಲುವಿಕೆಯಿಂದ ತನ್ನಲ್ಲಿ ನಿರಂತರ ಹೊತ್ತುತ್ತಾ ತಾನು ಇರುವತನಕ ನಂದದ ಶೋಕಾನಲದಿಂದ ದೇವರ ಮುಂದೆ ಹಚ್ಚಿ ಇರಿಸಿದ ದೀಪ ಎಂಬರ್ಥದಲ್ಲಿ ಆ ಕವಿತೆಗಳಿಗೆ 'ನಂದಾದೀಪ' ಎಂದು ಹೆಸರಿಟ್ಟರು. ಪತ್ನೀವಿರಹದ ಯಾತನೆ ಪರಮಾತ್ಮ ಚಿಂತನೆಯಾಗಿ, ಮಾರ್ಪಟ್ಟ ಅಪೂರ್ವ ಕಾವ್ಯ ಪ್ರಕಾರವೇ 'ನಂದಾದೀಪ'ವಾಗಿದೆ ಗೋವಿಂದ ಪೈಗಳು ೧೯೨೮ರಲ್ಲಿ ಬರೆದ 'ಗೊಮ್ಮಟ ಜಿನಸ್ತುತಿ' ಎಂಬ ಕವನಗಳು ಕೂಡ ಪತ್ನಿಯ ನೆನಪಿಗಾಗಿಯೇ ಅರ್ಪಿತವಾಗಿದೆ. ಕೃಷ್ಣಾಬಾಯಿಯವರಿಗೆ ತವರುಮನೆಯವರಿಟ್ಟ ಹೆಸರು 'ಲಕ್ಷ್ಮೀ' ಎಂದಾಗಿತ್ತು. 'ನಂದಾದೀಪ' ಪದ್ಯಗಳಲ್ಲಿ ಅಲ್ಲಲ್ಲಿ ಲಕ್ಷ್ಮೀ ಅಂಕಿತ ಬಂದಿದೆ.

ಮೃಗರಾಜನಂತೆ ಕಾವ್ಯಮಾರ್ಗದಲ್ಲಿ ಮುಂದಡಿಯಿಟ್ಟು ಪೈಗಳು ಸಹ ಧರ್ಮಿಣಿಯ ಮರಣಾನಂತರ ಕೆಲಕಾಲ ಕವನಿಸುವುದನ್ನು ಕಡಿಮೆ ಮಾಡಿ ಕೇವಲ ಸಂಶೋಧನೆಯಲ್ಲಿಯೇ ಮಗ್ನರಾಗಿದ್ದರು. ಈ ಬಗ್ಗೆ ಅವರು ಈ ಲೇಖಕನೊಡನೆ ಒಮ್ಮೆ ಇಂತು ಹೇಳಿದ್ದರು.

"ಕಾವ್ಯದ ಗತಿ ತೀರಾ ಮಾರ್ದವ; ನವರಸಪೂರ್ಣ; ಅದಕ್ಕೆ ಕೈಹಚ್ಚಿದಾಗ ಮತ್ತೆ ರಸಲೋಕದ ಗಾರ್ಹಸ್ಥ್ಯ ಜೀವನ, ಲೌಕಿಕ ಸುಖದ ಸವಿ, ಮನಸ್ಸಿನಲ್ಲಿ ಮರುಕಳಿಸಲು ಸಹಜವಾದ ಆಸ್ಪದವಾಗುತ್ತದೆ. ಅಂಥಾದನ್ನು ಮರೆತು ನನ್ನ ಗಮನ ಬೇರೆ ಕಡೆ ಹರಿಸಬೇಕಾಗಿತ್ತು. ಸಂಶೋಧನೆಯನ್ನು ಕೈಗೆತ್ತಿಕೊಂಡೆ. ಸಂಶೋಧನೆಯೆಂದರೆ ಸತ್ಯವನ್ನು ಕಂಡುಹುಡುಕುವ ಕೆಲಸ; ಸ್ವಲ್ಪ ಸತ್ಯ, ಅರ್ಧಸತ್ಯ ತಿಳಿದರೆ ಸಾಲದು. ಪೂರ್ಣಸತ್ಯದ ಅರಿವಾಗಬೇಕು. ಪೂರ್ಣಸತ್ಯವನ್ನು ದರ್ಶಿಸಬೇಕಾದರೆ ಏಕಾಗ್ರತೆ ಮೈಗೂಡಿಸಿಕೊಳ್ಳಬೇಕು. ಆಗ ಮನಸ್ಸಿನ ಮಾರ್ದವ, ನವರಸಗಳ ಆವಿಷ್ಕಾರ ಕಡಿಮೆಯಾಗುತ್ತದೆ. ಗೃಹಸ್ಥ ಜೀವನದ ಸವಿನೆನಹು ಮಾಸಿ ಸಂಶೋಧನೆಯ ಏಕಾಗ್ರತೆಯಲ್ಲಿ ಮನಸ್ಸು ನೆಲೆನಿಲ್ಲುತ್ತದೆ. ಅದಕ್ಕಾಗಿ ನಾನು ಕವಿತಾರಚನೆ ಕಡಿಮೆ ಮಾಡಿ ಸಂಶೋಧನೆಗೆ ಶರಣುಹೋದೆ."

ಆತ್ಮಸಂಯಮನಕ್ಕೆ ಎಂತಹ ಉದಾತ್ತ ಪ್ರವೃತ್ತಿಯನ್ನು ಹವ್ಯಾಸವಾಗಿಸಿ ಕೊಂಡರು! ಹೀಗಾದರೂ, ಕವಿತಾಕಾಮಿನಿ ಕೊನೆಗೂ ಅವರನ್ನು ಬಿಡಲಿಲ್ಲ. ಮುಂದೆ ಅತ್ಯುತ್ಕೃಷ್ಟ ಕಾವ್ಯಗಳನ್ನು ರಚಿಸಿದರು; ಕನ್ನಡದ ಮಹಾಕವಿಯೆನಿಸಿದರು.

ಪಂಡಿತವಕ್ಕಿ

ಕವಿತಾರಚನೆಯನ್ನು ಪೈಗಳು ಪುನಃ ಗಂಭೀರವಾಗಿ ಕೈಗೆತ್ತಿಕೊಂಡ ಬಗೆಗೂ ಒದಗಿದ ಒಂದು ಪ್ರಚೋದನೆ ಹೀಗಿದೆ :

ಸಂಶೋಧನೆಯಲ್ಲಿ ಅಧಿಕ ಸಮಯವನ್ನು ಅವರು ವ್ಯಯಿಸುತ್ತಿದ್ದಾಗ, ಅವರಿಗೆ ಕವಿಗಳು ಎನ್ನುವುದಕ್ಕಿಂತ, ಸಂಶೋಧಕರು ಎಂಬ ಖ್ಯಾತಿಯೇ ಹೆಚ್ಚಾಗುತ್ತಾ ಬಂತು. ಬುದ್ಧ, ಮಹಾವೀರಾದಿ ಧಾರ್ಮಿಕಪುರುಷರ ಕುರಿತು ರನ್ನ ಪಂಪಾದಿ ಕವಿಗಳ ಕುರಿತು, ರಾಷ್ಟ್ರಕೂಟ, ಹೊಯ್ಸಳ, ಗಂಗ, ಕದಂಬಾದಿ ರಾಜವಂಶೀಯರ ಕುರಿತು, ತುಳುನಾಡಿನ ಕುರಿತು, ತಾಳೆಗರಿ, ಶಾಸನಾದಿಗಳ ಅಭ್ಯಾಸ ಮಾಡುತ್ತಾ ನಾಡಿನ ಪ್ರಮುಖ ಪತ್ರಿಕೆಗಳಲ್ಲೆಲ್ಲಾ ಅವರ ಅಸಂಖ್ಯಾತ ಲೇಖನಗಳು ಪ್ರಕಟವಾದುವು. ಈ ಸಂದರ್ಭದಲ್ಲಿ ಎಂದರೆ ೧೯೪೦ರಲ್ಲಿ ಪೈಗಳ ಆಪ್ತರಲ್ಲೊಬ್ಬರಾದ ಶ್ರೀ ಪಾಂಡೇಶ್ವರ ಗಣಪತಿರಾಯರ 'ಚೆಂಗಲವೆ' ಎಂಬ ಕವನಸಂಗ್ರಹವೊಂದು ಪ್ರಕಟವಾಯಿತು. ಅದರಲ್ಲಿ 'ಪಂಡಿತವಕ್ಕಿ' ಎಂಬೊಂದು ಕವನವಿದೆ. ಅದರ ಸಾರಾಂಶ ಇಂತಿದೆ :

"ಮರವೆ ಮುಸುಕಿದ ಕಾಲವೆಂಬ ಕಾಡಿನಲ್ಲಿ ಗರಿ ಮುದುರಿ ಕುಳಿತು ತೂಕಡಿಸುತ್ತಾ, ಇತಿಹಾಸವೆಂಬ ಸೂತ್ರದಲ್ಲಿ ಕೋದುತ್ತುಗಳನ್ನು, ಸತ್ಯಮಿಥ್ಯಗಳ ಸಂವಾದದ ಬಿತ್ತುಗಳನ್ನು ತಿಂದು, ಎಲ್ಲೈ ಹಕ್ಕಿಯೇ! ನಿನಗೆ ಇನ್ನೂ ತೃಪ್ತಿ ಇಲ್ಲವಷ್ಟೆ. ಆದರೆ ಮುಂದಿರುವ ಮೃತ್ಯುವನ್ನು ನೋಡು! ಹೀಗೆ ನಿನ್ನೆಗಳನ್ನು ನೆನೆಯುತ್ತಾ ಈ ಶುಷ್ಕ ತರ್ಕ ಮಾಡುತ್ತಾ, ಒಳ್ಳೆಯ ಹಾಡುಗಾರನಾಗಿದ್ದ ನೀನು ಹಾಡುವುದನ್ನು ಮರೆತು ಏಕೆ ಸುಮ್ಮನೆ ಕುಳಿತಿರುವಿ? ನಾವೋ ಹಾಡಲಾರದೆ ಬಿಕ್ಕಿ ಅಳುತ್ತಾ ಇದ್ದೇವೆ. ಕಾಲ ಮೀರಿ ಹೋಗುತ್ತದೆ' ಕೃತಕ ಹಾಡುಗಾರರು ತಾವೇ ದೊಡ್ಡವರೆಂದು ಹೆಸರು ಮಾಡುತ್ತಾ ಹೋಗುತ್ತಾರೆ. ಆದರೆ ನಮ್ಮ ತೋಟದ ಈ ಪಂಡಿತವಕ್ಕಿ ಏಕೆ ಹಾಡುತ್ತಿಲ್ಲ? ನಿನ್ನೊಡನೆ ನಾವು ಪ್ರಾರ್ಥಿಸುತ್ತೇವೆ : ಎಲ್ಲೈ, ಸವಿಕೊರಲಿನ ಕೋಗಿಲೆಯೇ, ನೀನು ಉಲ್ಲಾಸದಿಂದ ಹಾಡು; ನಮ್ಮ ಪ್ರಾರ್ಥನೆಯನ್ನು ಸಲಿಸು."

–'ಪಂಡಿತವಕ್ಕಿ' ಯನ್ನು ಸಂಬೋಧಿಸಿ ಮಾಡಿದ ಈ ಪ್ರಾರ್ಥನೆ, ಈ ಎಚ್ಚರ ವ್ಯರ್ಥವಾಗಲಿಲ್ಲ. ಪೈಗಳ ಕಾವ್ಯಮಯ ವಾಣಿಯನ್ನು ಆಲಿಸಬೇಕೆಂದು ಕನ್ನಡಲೋಕ ಪಾಂಡೇಶ್ವರರ ಮೂಲಕ ಪ್ರಾರ್ಥನೆ ಸಲ್ಲಿಸಿದ್ದು ಫಲಕಾರಿಯಾಯಿತು. ಆಮೇಲೆ ಅವರು ಹಲವಾರು ಉತ್ತಮ ಕಾವ್ಯ ಕೃತಿಗಳನ್ನು ರಚಿಸಿ ಕನ್ನಡಸಾಹಿತ್ಯಸಂಪತ್ತನ್ನು ಹೆಚ್ಚಿಸಿದರು. 'ಹೆಬ್ಬೆರಳು' ಎಂಬ ಖಂಡಕಾವ್ಯ ಬಂತು. ಹಲವು ಶ್ರೇಷ್ಠ ಕಥನಕವನಗಳು, ಚತುರ್ದಶಪದಿಗಳು ಭಾವಗೀತೆಗಳು ಇವೆಲ್ಲಾ ಪ್ರಕಟವಾಗಿ ಒಬ್ಬ ಮಹಾಕವಿಯನ್ನು ಸಾರಸ್ವಲೋಕ ಶಾಶ್ವತವಾಗಿ ನೆನಪಿಟ್ಟುಕೊಳ್ಳುವಂತಾಯಿತು.

ದೇಶಾಭಿಮಾನ

ರಾಷ್ಟ್ರಪುರುಷನ ಹೃದಯ ಅಂದು ಸ್ವಾತಂತ್ರ್ಯದಾಹದಿಂದ ಕುದಿಯುತ್ತಿತ್ತು. ಆಗ ಮೂಕನೂ ವಾಚಾಳಿಯಾಗುವ ಕಾಲ; ದೇಶಕ್ಕಾಗಿ ಸರ್ವಸ್ವವನ್ನೂ ತ್ಯಾಗಮಾಡುವ ಸ್ಫೂರ್ತಿಯಿಂದ ತರುಣರು ಮುನ್ನುಗ್ಗುತ್ತಿದ್ದರು; ತಿಲಕ; ಗಾಂಧಿ ಅಂತಹ ಅಪ್ರತಿಮಧುರೀಣರ ಮುಂದಾಳುತನವೂ ದೊರಕಿತ್ತು. ಅಹಿಂಸಾ ಸತ್ಯಾಗ್ರಹಿಗಳು ಮಾತ್ರವಲ್ಲ, ದೇಶದಾದ್ಯಂತ ಸಹಸ್ರ ಸಂಖ್ಯೆಯಲ್ಲಿ ಕ್ರಾಂತಿವೀರರೂ ಮಾತೃಭೂಮಿಯ ಬಂಧವಿಮೋಚನೆಗಾಗಿ ಪಣತೊಟ್ಟು ರಣರಂಗಕ್ಕೆ ಇಳಿದಿದ್ದರು. ಅಸ್ಪೃಶ್ಯತಾ ನಿವಾರಣೆ, ಖಾದಿ, ಜಾತೀಯ ಐಕ್ಯ–ಇಂಥ ರಚನಾತ್ಮಕ ಕಾರ್ಯಗಳಲ್ಲಿ ಹಲವರು ಮಗ್ನರಾದರು. ಪೈಗಳೂ ಖಾದೀವ್ರತವನ್ನು ಸ್ವೀಕರಿಸಿ ಕೊನೆಗಾಲದ ವರೆಗೆ ಅದನ್ನು ಪಾಲಿಸಿದರು; ಜಾತೀಯೈಕ್ಯ, ಅಸ್ಪೃಶ್ಯತಾ ನಿವಾರಣೆ ಇಂತಹ ವಿಷಯಗಳನ್ನೆತ್ತಿ ಕವನ ಕಟ್ಟಿದರು. ತಾಯ್ನಾಡಿನ ಬಂಧ ವಿಮೋಚನೆಗಾಗಿ ಮರಣ ಅಥವಾ ಸ್ವಾತಂತ್ರ್ಯ ಎಂಬ ಉದ್ದೇಶದ ಉಜ್ವಲ ವೀರ ಸ್ಫೂರ್ತಿಯುತವಾದ ಹಾಡುಗಳನ್ನು ರಚಿಸಿ ಜನಜಾಗೃತಿಗೊಳಿಸಿದರು.

ಅದೇ ಉದ್ದೇಶಕ್ಕಾಗಿಯೆ ಅವರು ನೌಸಾರಿ ಯಾತ್ರೆಯನ್ನು ಕೈಗೊಂಡರು. ಬರೋಡದ ಮಹಾರಾಜರಲ್ಲಿ ಉದ್ಯೋಗದಲ್ಲಿದ್ದ ದೇಶಪಾಂಡೆ ಎಂಬವರು ಶ್ರೀ ಅರವಿಂದ ಘೋಷರಿಂದ ಸ್ಫೂರ್ತಿ ಪಡೆದು ಅಲ್ಲಿ ಒಂದು ರಾಷ್ಟ್ರೀಯ ಶಿಕ್ಷಣಸಂಸ್ಥೆ ಸ್ಥಾಪಿಸಿದರು. ಅರವಿಂದರು ಕೊನೆಗೆ ಆಧ್ಯಾತ್ಮದ ಕಡೆಗೆ ತೀವ್ರ ಒಲವು ತೋರಿಸಿ ಮಹರ್ಷಿಗಳೆನಿಸಿದರೂ, ಅವರ ಪ್ರಾರಂಭದ ದಿನಗಳು ಕ್ರಾಂತಿಕಾರೀ ಗುಪ್ತಚಟುವಟಿಕೆಗಳಿಂದ ಕೂಡಿದ್ದುವು. ಗೋವಿಂದ ಪೈಗಳು ತನ್ನನ್ನು ದೇಶಸೇವೆಗೆ ಅರ್ಪಿಸಿಕೊಳ್ಳಲು ಅಲ್ಲಿನ ರಾಷ್ಟ್ರೀಯ ಸಂಸ್ಥೆಗೆ ಸೇರಿ ದುಡಿಯಲು ಅತ್ತ ತೆರಳಿದ್ದರು.

ದೇಶಪಾಂಡೆಯವರು ಇವರನ್ನು ಕಾಕಾ ಕಾಲೇಲ್ಕರರಲ್ಲಿ ಕಳುಹಿಸಿದರು. ಕಾಲೇಲ್ಕರರೂ ಅದೇ ಸಂಸ್ಥೆಯಲ್ಲಿ ದುಡಿಯುತ್ತಿದ್ದರು. ಅವರೊಳಗೆ ಬೆಸೆದ ಅಂದಿನ ಮೈತ್ರಿ ಕೊನೆಯ ಕಾಲದ ವರೆಗೂ ನೆಲೆನಿಂತಿತ್ತು. ಇಬ್ಬರೂ ಮಹಾವಿದ್ವಾಂಸರು; ಇಬ್ಬರೂ ಉಜ್ವಲ ದೇಶಾಭಿಮಾನಿಗಳು. ಕಾಲೇಲ್ಕರರ ಮೂಲಕ ರಾಷ್ಟ್ರದ ಅಂದಿನ ಕ್ರಾಂತಿಕಾರೀ ಕಾರ್ಯಕ್ರಮಗಳಲ್ಲಿ ಮಾಹಿತಿ ಪಡೆಯಲು ಪೈಗಳು ಆಸಕ್ತಿ ವಹಿಸಿದರು. ರಹಸ್ಯವನ್ನು ಹೊಸಬರಿಗೆ ಹೇಳುವುದು ಹೇಗೆ? ಸನ್ಮಿತ್ರನೊಬ್ಬನಿಂದ ಯಾವುದೇ ವಿಷಯವನ್ನು ಅಡಗಿಸಿಡುವುದೇ?- ಹೀಗೆ ಸ್ವಲ್ಪ ಸಮಯ ಕಾಲೇಲ್ಕರರು ಡೋಲಾಯಮಾನ ಮನಸ್ಕರಾದರೂ, ತಾನು ಅಪಾತ್ರರನ್ನು ನಂಬಿದ್ದಲ್ಲವೆಂದು ಖಚಿತಮಾಡಿಕೊಂಡು ಪೈಗಳಿಗೆ ಕ್ರಾಂತಿಕಾರೀ ಕಾರ್ಯಕ್ರಮಗಳ ಕೆಲವೊಂದು ಮಾಹಿತಿ ನೀಡಿದರು. ಅಲ್ಲಿಯೇ ಇನ್ನೊಂದು ವಿಭಾಗದಲ್ಲಿ ಕಾರ್ಯಪ್ರವೃತ್ತರಾಗಿದ್ದ ಮೋಹನಲಾಲ ಪಾಂಡ್ಯ ಎಂಬ ಮಹನೀಯರ ಪರಿಚಯವೂ ಇವರಿಗಾಯಿತು. ಅವರಿಂದಲೂ ಹೆಚ್ಚಿನ ಮಾಹಿತಿ ಪಡೆದುಕೊಂಡರು. ಅಷ್ಟರಲ್ಲಿ ಪತ್ನಿಯ ತೀವ್ರ ಅಸೌಖ್ಯದ ಸುದ್ದಿ ಬಂತು; ನೌಸಾರಿಯನ್ನು ಬಿಟ್ಟು ಬರಲೇ ಬೇಕಾಯಿತು. ಕ್ರಾಂತಿಕಾರಿಯಾಗಿ ಮಾತೃಭೂಮಿಗಾಗಿ ಆತ್ಮ ಬಲಿದಾನ ಮಾಡುವ ಸಂದರ್ಭ ಹಾಗೆ ವಂಚಿತವಾಯಿತು. ಆರ್. ಕೆ. ಪ್ರಭು, ಎಚ್. ವಿ. ಕಾಮತ್ ಇಂತಹ ಅಗ್ರಗಣ್ಯ ದೇಶಭಕ್ತರ ಸಮೀಪ ಪರಿಚಯವನ್ನು ಪೈಗಳು ಇಟ್ಟುಕೊಂಡಿದ್ದರು. ಎಚ್. ವಿ. ಕಾಮತರು ಇವರ ಸಮೀಪದ ಸಂಬಂಧಿ ಕೂಡ ಆಗಿದ್ದರು.

ಗಾಂಧೀಜಿಯ ಊರುಗೋಲು

ಕಾಲೇಲ್ಕರರೊಂದಿಗೆ ಪೈಗಳಿಗಾದ ಪರಿಚಯ, ಮುಂದೆ ಒಂದು ಐತಿಹಾಸಿಕ ಘಟನೆಗೂ ಕಾರಣವಾಯಿತು; ರಾಷ್ಟ್ರಭಾಷಾ ಪ್ರಚಾರದ ನಿಮಿತ್ತ ಕಾಲೇಲ್ಕರ್ ದೇಶಾದ್ಯಂತ ಪ್ರಚಾರಕ್ಕೆ ಹೊರಟವರು ಮಂಗಳೂರಿಗೂ ಬಂದಿದ್ದು, ಹಳೆಯ ಮಿತ್ರನನ್ನು ಭೇಟಿಯಾಗಲು ಮಂಜೇಶ್ವರಕ್ಕೂ ಹೋದರು. ಅವರ ಜೊತೆ ಒಂದು ದಿನ ಇದ್ದು ಹೊರಡುವ ವೇಳೆ ಕಾಲೇಲ್ಕರರಿಗೆ ಪೈಗಳು ಒಂದು ಹಳೆಯ ಬೆತ್ತವನ್ನು ಉಡುಗೋರೆ

ನೀಡಿದರು. ಅದು ಅವರ ಹಿರಿಯರು ಉಪಯೋಗಿಸುತ್ತಿದ್ದ ಅಮೂಲ್ಯ ವಸ್ತು. ಮಹಾತ್ಮಾ ಗಾಂಧಿ ೧೯೩೦ರಲ್ಲಿ ದಂಡಿಯಾತ್ರೆಗೆ ಹೊರಟಾಗ ಕಾಲೇಲ್ಕರ್ ಅದನ್ನು ಗಾಂಧೀಜಿಗೆ ಉಪಯೋಗಿಸಲು ನೀಡಿದರು. ಉದ್ದನೆಯ ಊರುಗೋಲು ಹಿಡಿದು ಗಾಂಧಿ ಮಾಡಿದ ಆ ಚಾರಿತ್ರಿಕ ಯಾತ್ರೆಯಲ್ಲಿ ಕಾಣುವ ಬೆತ್ತ ಅದೇ ಆಗಿದೆ. ಮಹಾತ್ಮಾ ಗಾಂಧಿಯವರು ಉಪಯೋಗಿಸಿದ ವಸ್ತು ಸಂಗ್ರಹಾಲಯದಲ್ಲಿ, ದಂಡೀ ಯಾತ್ರೆಯ ಸ್ಮಾರಕವಾದ ಆ ಪವಿತ್ರವಾದ ಬೆತ್ತವನ್ನೂ ಇಡಲಾಗಿದೆ. ರಾಷ್ಟ್ರಪಿತ ಮಹಾತ್ಮಾ ಗಾಂಧಿಯವರನ್ನೂ ಅವರ ಚಾರಿತ್ರಿಕ ದಂಡಿ ಯಾತ್ರೆಯನ್ನೂ ಲೋಕ ಸ್ಮರಿಸುವಷ್ಟು ಕಾಲ ಗೋವಿಂದ ಪೈಯವರು ನೀಡಿದ ಆ ಪವಿತ್ರ ವಸ್ತುವನ್ನು, ಮಹಾತ್ಮರಿಗೆ ಊರುಗೋಲಾದ ಆ ಬೆತ್ತವನ್ನು ಎಲ್ಲರೂ ನೆನಪಿಟ್ಟುಕೊಳ್ಳುತ್ತಾರೆಂಬುದು ನಮಗೆಲ್ಲಾ ಅತ್ಯಂತ ಅಭಿಮಾನದ ವಿಷಯ.

ಗೋವಿಂದ ಪೈಗಳ ಮೊದಲ ಕವಿತೆ ಪ್ರಕಟವಾದುದು ಮಂಗಳೂರಿನ 'ಸುವಾಸಿನಿ' ಎಂಬ ಸಾಹಿತ್ಯಿಕ ಮಾಸಪತ್ರಿಕೆಯಲ್ಲಿ. ೧೯೦೦ ಜುಲೈ ತಿಂಗಳಲ್ಲಿ ಬೋಳಾರ ವಿಠಲರಾಯರು, ಬೆನಗಲ್ ರಾಮರಾಯರು, ಪಂಜೆ ಮಂಗೇಶರಾಯರು ಮೊದಲಾದ ಅಗ್ರಗಣ್ಯ ಸಾಹಿತ್ಯಾಭಿಮಾನಿಗಳ ಸಹಯೋಗದಿಂದ ಮಂಗಳೂರಲ್ಲಿ ಆ ಪತ್ರಿಕೆ ಪ್ರಾರಂಭವಾಯಿತು. ಅದೇ ಇಸವಿ ಅಗಸ್ಟ್ ತಿಂಗಳ ಆ ಪತ್ರಿಕೆಯಲ್ಲಿ ಗೋವಿಂದ ಪೈಗಳು ಬರೆದ 'ಸುವಾಸಿನೀ' ಶಿರೋನಾಮೆಯ ಮೂರು ಕಂದಪದ್ಯಗಳ ಕವಿತೆ, ಪ್ರಥಮಮುದ್ರಿತಕವನವಾಗಿ ಪ್ರಕಟವಾಯಿತು. ಆ ಪತ್ರಿಕೆ ಏರ್ಪಡಿಸಿದ ಕವಿತಾಸ್ಪರ್ಧೆಗೆ ಇವರು ಅದನ್ನು ಬರೆದಿದ್ದರು; ಅದಕ್ಕೆ ಪ್ರಥಮ ಬಹುಮಾನವನ್ನೂ ಪಡೆದರು. ಕವಿತೆಯ ಶಿರೋನಾಮೆ ಪತ್ರಿಕೆಯದೇ ಹೆಸರಾದರೂ ಆ ಪದ್ಯಗಳಲ್ಲಿ ತೋರುವ ಭಾವನೆ ತುಂಬಾ ವಿಶಾಲವಾದುದು; ಲೋಕದ ತಾಯ್ತನದ ಪ್ರತೀಕವಾದ ಸುಮಂಗಲೆಯ ಮತ್ತು ಪರಿಮಳಭರಿತ ಪುಷ್ಪದ ಸಂಕೇತವದು. ನಮ್ಮೆಲ್ಲರ ತಾಯಿಯ ನೆನಪನ್ನು ಮಾಡಿಕೊಡುತ್ತಾ, ತಾಯ್ನುಡಿಯ ಪರಿಮಳ ನಾಡೆಲ್ಲಾ ಹಬ್ಬುತ್ತಿರಲಿ ಎಂಬ ಶುಭಕಾಮನೆ ಆ ಮೂರು ಕಂದಪದ್ಯಗಳಲ್ಲಿ ವ್ಯಕ್ತವಾಗುತ್ತದೆ. ಕಂದ ಪದ್ಯದಂತಹ ಪ್ರೌಢವಾದ ಛಂದೋಗತಿಯಲ್ಲಿ ಆ ಎಳೆಯ ವಯಸ್ಸಿನಲ್ಲಿಯೆ ಕವನಿಸಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನದ ಯಶಸ್ಸು ಪಡೆದುದು ಇವರ ಪ್ರತಿಭಾಸಂಪತ್ತನ್ನೂ ಕಾವ್ಯರಚನಾಸಾಮರ್ಥ್ಯವನ್ನೂ ವ್ಯಕ್ತಗೊಳಿಸುವುದು.

ಪ್ರಥಮಗಳ ಸರ

ಪದ್ಯದಂತೆ ಗದ್ಯದಲ್ಲಿಯೂ ಪೈಗಳು ಸಿದ್ಧಹಸ್ತರು; ನವೀನಚಂದ್ರಸೇನರು ಬಂಗಾಳಿಯಲ್ಲಿ ಬರೆದ ಶ್ರೀ ಕೃಷ್ಣಚರಿತ್ರಾತ್ಮಕವಾದ ರೈವತಕ, ಕುರುಕ್ಷೇತ್ರ ಮತ್ತು ಪ್ರಭಾಸ ಎಂಬ ಮೂರು ಕಾವ್ಯಗಳನ್ನು ಗದ್ಯದಲ್ಲಿ ಕನ್ನಡಿಸಿ ಅದರ ಆರು ಪ್ರಕರಣಗಳನ್ನು 'ಸ್ವದೇಶಾಭಿಮಾನಿ' ಪತ್ರಿಕೆಯಲ್ಲಿ ಪ್ರಕಟಿಸಿದರು. ಅದೇ ಪೈಗಳ ಮೊತ್ತಮೊದಲನೆಯ

ಪ್ರಕಟಿತ ಗದ್ಯಲೇಖನ. ಅನಂತರ ಪಾಲಿಯಿಂದ 'ನಿಗಾಲಸುತ್ತ' ಎಂಬ ಬೌದ್ಧಧರ್ಮ ಸೂತ್ರವನ್ನು ಕನ್ನಡಿಸಿದರು. ಅದನ್ನು ೧೯೧೧ರಲ್ಲಿ ಅದೇ ಪತ್ರಿಕೆಯಲ್ಲಿ ಅಚ್ಚು ಹಾಕಿಸಿದರು. ೧೯೧೬ರಲ್ಲಿ ಗ್ರೀಕ್ ರುದ್ರ ನಾಟಕಕಾರ ಕೃತಿಗಳನ್ನು ಓದಿ ಆ ಮಾದರಿಯಲ್ಲಿ ಭಾರತದ ವಿರಾಟಪರ್ವದಲ್ಲಿ ಬರುವ ಕೀಚಕನ ವೃತ್ತಾಂತವನ್ನು ಎತ್ತಿಕೊಂಡು ೧೯೩೦ರಲ್ಲಿ 'ಸೈರಂಧ್ರಿ' ಎಂಬ ನಾಟಕವನ್ನು ಬರೆಯತೊಡಗಿದರು. ಅಂತ್ಯಪ್ರಾಸಯುಕ್ತವಾದ ವೀರದ್ವಿಪದಿಯಲ್ಲಿ ೫೦೦ ಪಂಕ್ತಿಗಳನ್ನು ಬರೆದಾಗುವಾಗ ಅವರ ಏಕಮಾತ್ರ ಸೋದರಸೊಸೆ ತೀರಿಹೋಗಲು, ಆ ವ್ಯಥೆಯಿಂದ ಆ ನಾಟಕವನ್ನು ಬರೆವ ಕಥೆ ಅಲ್ಲಿಗೇ ನಿಂತಿತು.

ಪಾಶ್ಚಾತ್ಯ ಸಾಹಿತ್ಯಪ್ರಕಾರದಲ್ಲಿ ಜನಪ್ರಿಯವಾಗಿರುವ 'ಸೊನೆಟ್' ಎಂಬ ಚತುರ್ದಶೀ ರೀತಿಯ ಕವನರಚನೆಯಲ್ಲಿ ಪೈಗಳಿಗೆ ಹೆಚ್ಚಿನ ಅಭಿರುಚಿ. ಅವರು ಹಲವಾರು ಉತ್ತಮ ಚತುರ್ದಶಪದಿಗಳನ್ನು ಬರೆದಿದ್ದಾರೆ. ಅವರ ಮೊದಲ ಚತುರ್ದಶಿ 'ಕವಿತಾವತಾರ' ಎಂಬುದು; ಅದನ್ನು ೧೯೧೬ರಲ್ಲಿ ಬರೆದರು; ಅದು ಮಂಗಳೂರಿಂದ, ಪಂಡಿತ ಮುಳಿಯ ತಿಮ್ಮಪ್ಪಯ್ಯವನರ ಸಂಪಾದಕತ್ವದಿಂದ ಹೊರಡುತ್ತಿದ್ದ 'ಕನ್ನಡ ಕೋಗಿಲೆ' ಎಂಬ ಸಾಹಿತ್ಯಿಕ ಮಾಸಪತ್ರಿಕೆಯಲ್ಲಿ ಪ್ರಕಟವಾಯಿತು. ವಿಶ್ವವಿಖ್ಯಾತ ಉಮರ್ ಖಯಾಮ್ ಎಂಬ ಪಾರಸೀ ಕವಿಯ 'ರುಬಾಯಿಯಾತ್'ನ್ನು ಪಿಟ್ಸ್‌ಜೆರಾಲ್ಡ್ ಎಂಬ ಕವಿ ಆಂಗ್ಲ ಭಾಷೆಗೆ ಭಾಷಾಂತರಿಸಿದ್ದನ್ನು ಪೈಗಳು ೧೯೨೮ರಲ್ಲಿ ಕನ್ನಡಕ್ಕೆ ತಂದರು. ಆಮೇಲೆ, ಡಿ. ವಿ. ಜಿ. 'ಉಮರನ ಒಸಗೆ' ಎಂಬ ಹೆಸರಿನಿಂದಲೂ ಶ್ರೀ ಮಟ್ಟಿ ರಾಧಾಕೃಷ್ಣರಾಯರು 'ಪಾನಪೂಜೆ' ಎಂಬ ಹೆಸರಿನಿಂದಲೂ, ಅದನ್ನು ಭಾಷಾಂತರಿಸಿದರೂ, ಆ ಜಗತ್ಪ್ರಸಿದ್ಧ ಕಾವ್ಯವನ್ನು ಪ್ರಪ್ರಥಮವಾಗಿ ಕನ್ನಡಕ್ಕೆ ತಂದ ಕೀರ್ತಿ ಪೈಗಳದ್ದಾಗಿದೆ.

–ಹೀಗೆ, ಕನ್ನಡದ ಸಾಹಿತ್ಯಚರಿತ್ರೆಯಲ್ಲಿ ಗೋವಿಂದ ಪೈಗಳು ಹಲವು ಪ್ರಥಮಗಳ ಸಾಧಕರು. ಈ ಎಲ್ಲಾ ಯೋಗ್ಯ ಸಾಹಸಮಯಸಾಹಿತ್ಯಿಕ ಸಾಧನೆಗಳ ಫಲವಾಗಿ ಕನ್ನಡದ ಪ್ರಥಮ ರಾಷ್ಟ್ರಕವಿಯೆನಿಸುವ ಅರ್ಹತೆಯನ್ನೂ ಪಡೆದು ಕೀರ್ತಿಭಾಜನರಾದರು.

ಕುರಿತು ಬಂದ ಕೃತಿಗಳು :

ಗೋವಿಂದ ಪೈಗಳ ಜೀವನ ಪರಿಚಯ ರೂಪವಾಗಿಯೂ ಅವರ ಕಾವ್ಯ ಸಂಶೋಧನೆ ಕೃತಿಗಳ ಕುರಿತೂ ಲೇಖನಗಳನ್ನೂ ವಿಮರ್ಶೆಗಳನ್ನೂ ಗ್ರಂಥಗಳನ್ನೂ ಹಲವರು ಬರೆದಿದ್ದಾರೆ. ಇಂತಹ ಕಾರ್ಯ, ಅವರ ಜೀವಿತಾವಧಿಯಲ್ಲಿಯೇ ಪ್ರಾರಂಭವಾಗಿದ್ದು, ಇಂದಿಗೂ ಮುಂದುವರಿಯುತ್ತಾ ಇದೆ.

ಅವರಿಗೆ ರಾಷ್ಟ್ರಕವಿ ಬಿರುದು ಬಂದಾಗ ಇದೇ ಲೇಖಕನಿಂದ 'ರಾಷ್ಟ್ರಕವಿ ಗೋವಿಂದ ಪೈ' ಎಂಬ ಪುಸ್ತಕ ರಚಿತವಾಗಿ ಪ್ರಕಟವಾಯಿತು. ಜಿ. ಪಿ. ರಾಜರತ್ನಂ, 'ಕವಿ ಗೋವಿಂದ ಪೈ' ಎಂಬ ಪುಸ್ತಕವನ್ನು ಬರೆದರು. ಪಾಂಡೇಶ್ವರ ಗಣಪತಿ ರಾಯರ 'ಚೆಂಗಲವೆ' ಕವನಸಂಕಲನದ ಮುದ್ರಣವಾಗುತ್ತಿದ್ದಾಗ ಅದರಲ್ಲಿರುವ 'ಪಂಡಿತವಕ್ಕಿ' ಎಂಬ ಕವನದ ಆಶಯವನ್ನು ಮನನಮಾಡುತ್ತಾ ಈ ಲೇಖಕ, ಬೆಂಗಳೂರಿಂದ ಪ್ರಕಾಶಿತವಾಗುತ್ತಿದ್ದ ಮಾಸಪತ್ರಿಕೆಯೊಂದರಲ್ಲಿ 'ಮಹಾಕವಿ ಗೋವಿಂದ ಪೈ' ಎಂಬೊಂದು ಲೇಖನವನ್ನೂ ಬರೆದುದು, ದಕ್ಷಿಣ ಕನ್ನಡದ ಮಟ್ಟಿಗಾದರೂ, ಅವರ ಕುರಿತಾದ ಪ್ರಥಮ ಲೇಖನವೆಂದು ಹೇಳಬಹುದು.

ಕುಂದಾಪುರದ ಭಂಡಾರ್‌ಕಾರ್ಸ್ ಕಾಲೇಜಿನ ಸ್ಮಾರಕ ಸಮಿತಿ ಪ್ರಕಟಿಸಿದ 'ದೀವಿಗೆ' ಹೆಸರಿನ ಎರಡು ಬೃಹತ್ ಸ್ಮರಣಸಂಪುಟಗಳಲ್ಲಿಯೂ, 'ಸಮರ್ಪಣೆ' ಸಂಚಿಕೆಯಲ್ಲಿಯೂ ಪೈಗಳ ಕುರಿತು ನಾಡಿನಾದ್ಯಂತ ಕವಿಗಳು, ಲೇಖಕರು ಹಾಗೂ ಇತರ ಮಹನೀಯರು ಬರೆದ ತುಂಬಾ ಲೇಖನಗಳಿವೆಯಷ್ಟೆ. ಅದರಲ್ಲಿ ಬೇಂದ್ರೆ, ಕುವೆಂಪು ಮೊದಲಾದ ಹಿರಿಯ ಕಿರಿಯರಾದಿಯಾದ ಇಪ್ಪತ್ತನಾಲ್ಕು ಮಂದಿ ಕವಿಗಳು ಅವರ ಬಗ್ಗೆ ಕವಿತೆಗಳನ್ನು ಬರೆದಿದ್ದಾರೆ; ಇಂಗ್ಲಿಷಿನಲ್ಲಿ ಬರೆದ ಏಳು ಲೇಖನಗಳೂ ಕೂಡಿ ಒಟ್ಟು ನಲ್ವತ್ತೇಳು ಮಂದಿ ನೆನಹುಗಳನ್ನು ಬಿತ್ತರಿಸಿದ್ದಾರೆ. ಒಂಭತ್ತು ಮಹನೀಯರು ಅವರ ಕೃತಿವಿಮರ್ಶೆ ಮಾಡಿದ್ದಾರೆ.

'ದೀವಿಗೆ'ಯ ಪ್ರಥಮ ಸಂಪುಟದಲ್ಲಿಯೆ ಪ್ರೊ॥ ಕು. ಶಿ. ಯವರು ಸಂಗ್ರಹಿಸಿದ 'ಓಲೆ ಹೇಳುವ ಕತೆ' ಕೂಡ ಪ್ರಕಟವಾಗಿದೆ. ಸಮಗ್ರ ಕರ್ನಾಟಕ, ಮಹಾಕವಿಯನ್ನು ಕಂಡು ಕೊಂಡಾಡಿದ ವಿಪುಲ ಸಂಗ್ರಹ 'ದೀವಿಗೆ'ಯಲ್ಲಿದೆ.

ರಾಜರತ್ನಂ ಒಬ್ಬರೇ ಪೈಗಳ ಬಗೆಗೆ ಎರಡು ಪುಸ್ತಕಗಳನ್ನು ಬರೆದಿದ್ದಾರೆ. ಮೊದಲನೆಯದು 'ಕವಿ ಗೋವಿಂದ ಪೈ' ಎನ್ನುವುದು. ಅದರಲ್ಲಿ ಅವರ ಜೀವನ ಕೃತಿಗಳ ಸೂಕ್ಷ್ಮಪರಿಚಯವಿದೆ. ಇನ್ನೊಂದು ಪುಸ್ತಕ 'ಶ್ರೀ ಎಂ. ಗೋವಿಂದ ಪೈ ಅವರ ಪತ್ರಗಳು' ಎಂಬುದು. ಇದರಲ್ಲಿನ ನಲವತ್ತೇಳು ಪತ್ರಗಳಲ್ಲಿ ಕೇವಲ ಐದು ಮಾತ್ರ ಇತರರಿಗೆ ಬರೆದುದು. ಉಳಿದುದೆಲ್ಲವೂ ರಾಜರತ್ನಂ ಅವರಿಗೇ ಬರೆದುವು. ಪ್ರೊ॥ ಕು. ಶಿ. ಮತ್ತು ರಾಜರತ್ನಂ ಇವರಿಬ್ಬರೂ ಮಾಡಿದ ಈ ಪತ್ರಸಂಗ್ರಹದ ಪ್ರಕಟಣೆಯಿಂದಾಗಿ ಪೈಗಳ ಪತ್ರ ಸಾಹಿತ್ಯದ ಮಹತ್ವ ಇಂದಿನವರಿಗೂ, ಮುಂದಿನವರಿಗೂ ತಿಳಿವಂತೆ ಆಗಿದೆ; ಮಾತ್ರವಲ್ಲ ಪ್ರೊ॥ ಕು. ಶಿ. ಯವರು 'ಗೋವಿಂದ ಪೈ' ಕುರಿತು ಒಂದು ಹೊತ್ತಿಗೆಯನ್ನೂ ಬರೆದಿರುವರು.

ಗೋವಿಂದ ಪೈಗಳ ಸಾಹಿತ್ಯ ಸಂಶೋಧನೆಗಳನ್ನು ಅಧ್ಯಯನ ಮಾಡಿ ಪುಸ್ತಕಗಳನ್ನು ಬರೆದ ಇನ್ನೊಬ್ಬ ಮಹನೀಯರು ಡಾ॥ ಶ್ರೀನಿವಾಸ ಹಾವನೂರರು;

ಶ್ರೀ ಮ. ವಿ. ನಾಯಕರೊಂದಿಗೆ ಅವರು 'ಗೋವಿಂದ ಪೈ ವಾಙ್ಮಯ ದರ್ಶನ' ಎಂಬೊಂದು ಗ್ರಂಥವನ್ನು ಸಂಪಾದಿಸಿ ಪ್ರಕಟಿಸಿದರು; ಎರಡನೆಯದಾಗಿ 'ಗೋವಿಂದ ಪೈ ಸಮಗ್ರ ವಾಙ್ಮಯ ಸಮೀಕ್ಷೆ' ಎಂಬ ಪುಸ್ತಕವೊಂದನ್ನು ಅವರೇ ಬರೆದಿದ್ದರು. ವಿಪುಲ ಸಾಮಾಗ್ರಿಗಳನ್ನು ಒಂದೇ ಕಡೆಯಲ್ಲಿ ಕ್ರೋಢೀಕರಿಸಿ ಅಭ್ಯಾಸಕ್ಕೆ ಅನುಕೂಲಮಾಡಿಕೊಟ್ಟ ಡಾ॥ ಹಾವನೂರ ಮತ್ತು ಅವರ ಗೆಳೆಯರ ಈ ಪ್ರಯತ್ನಗಳು ಪ್ರಶಂಸನೀಯ.

ಕನ್ನಡ ಸಾಹಿತ್ಯ ಪರಿಷತ್ತು ಹಂಪನಾ ಮತ್ತು ಕಾವ್ಯಜೀವಿ ಇವರು ಬರೆದ 'ಗೋವಿಂದ ಪೈ, ಬದುಕು – ಬರೆಹ' ಎಂಬೊಂದು ಗ್ರಂಥ ಪ್ರಕಟಿಸಿದೆ. ಐದು ಅಧ್ಯಾಯಗುಳುಳ್ಳ ಈ ಪುಸ್ತಕದಲ್ಲಿ, ಪೈಗಳ ಜೀವಿತ ಹಾಗೂ ಬರೆಹಗಳ ನಾನಾ ಮುಖಗಳನ್ನು ಮನೋಜ್ಞವಾಗಿ ನೀಡಲಾಗಿದೆ.

ಕರ್ನಾಟಕ ಸಾಹಿತ್ಯ ಅಕಾದೆಮಿ, ಡಾ॥ ಎನ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಸಂಪಾದಕತ್ವದಲ್ಲಿ 'ಗೋವಿಂದ ಪೈ – ಶತಮಾನ ಸ್ಮರಣೆ' ಎಂಬ ಪುಸ್ತಕ ಹೊರತಂದಿದೆ; ಕವಿಗಳ ಶತಮಾನೋತ್ಸವ ಸಂದರ್ಭದಲ್ಲಿ ಅಕಾದೆಮಿ ಏರ್ಪಡಿಸಿದ ವಿಚಾರಸಂಕಿರಣದಲ್ಲಿ ನಾಡಿನ ವಿವಿಧ ವಿದ್ವಾಂಸರು ಮಂಡಿಸಿದ ಪ್ರಬಂಧಗಳ ಸಂಗ್ರಹವಿದು. ಪ್ರಬಂಧಗಳನ್ನು ಮಂಡಿಸಿದವರೆಲ್ಲರೂ ಖ್ಯಾತ ವಿದ್ವಾಂಸರಿದ್ದು ಅಭ್ಯಾಸಪೂರ್ಣವಾಗಿ ವಿಷಯಗಳನ್ನು ಇದರಲ್ಲಿ ವಿಸ್ತಾರವಾಗಿ ತಿಳಿಸಿದ್ದಾರೆ.

ಪೈಗಳು ಕವಿತೆಯ ರಚನೆಯಲ್ಲಿ ಹಲವು ಹಳೆ–ಹೊಸ ಛಂದಸ್ಸುಗಳ ಪ್ರಯೋಗ ಮಾಡಿದವರು. ಸಂಸ್ಕೃತ, ಕನ್ನಡ, ಹಿಂದಿ, ಬಂಗಾಲಿ, ಇಂಗ್ಲಿಷ್ ಈ ಎಲ್ಲಾ ಭಾಷೆಗಳ ಕಾವ್ಯಮಾರ್ಗವನ್ನು ಕ್ರಮಿಸಿದ ಅವರಿಗೆ ಆ ಭಾಷೆಗಳ ಛಂದಸ್ಸಿನ ಗತಿ ಕರತಲಾಮಲಕ. ರೂಢಿಯಲ್ಲಿರುವ ಛಂದಸ್ಸಿನಲ್ಲಿಯೇ ಗತಾನುಗತಿಕವಾಗಿ ಕಾವ್ಯರಚನೆ ತೊಡಗುವುದಕ್ಕಿಂತ ಹೊಸಹೊಸ ಪ್ರಯೋಗ ಮಾಡುವುದರಲ್ಲಿ ಅವರಿಗೆ ವಿಶೇಷ ಆಸಕ್ತಿ. ಈ ವಿಷಯದಲ್ಲಿ ಅಭ್ಯಾಸಪೂರ್ಣವಾಗಿ ಶ್ರೀ ಎಸ್. ಶಂಕರನಾರಾಯಣ ಭಟ್ಟರು 'ಗೋವಿಂದ ಪೈ ಅವರ ಛಂದೋಗತಿ' ಎಂಬ ಶಾಸ್ತ್ರೀಯ ಗ್ರಂಥವೊಂದನ್ನು ಬರೆದು ಉಪಕಾರ ಮಾಡಿದ್ದಾರೆ. ಲಕ್ಷಣ, ಲಕ್ಷ್ಯಗಳಿಂದ ಕೂಡಿ, ಪ್ರಸ್ತಾರ ಸಹಿತವಾಗಿರುವ ಈ ಗ್ರಂಥ ಸಂಗ್ರಹ ಯೋಗ್ಯವಾಗಿದೆ.

ಅಂತಹುದೇ ಒಂದು ನೂತನ ಅಭ್ಯಾಸಪೂರ್ಣ ಕೃತಿ 'ಗೋವಿಂದ ಪೈ ಪದಪ್ರಯೋಗ ಕೋಶ' ಎಂಬುದು. ಅದನ್ನು ಶ್ರೀ ಎ.ವಿ. ನಾವಡ ಮತ್ತು ಸಿ. ಉಪೇಂದ್ರ ಸೋಮಯಾಜಿ ಇವರು ರಚಿಸಿರುವರು. ಹೊಸಹೊಸ ಪದಗಳನ್ನು ಟಂಕಿಸಿ ಪ್ರಯೋಗಿಸುವುದರಲ್ಲಿ, ಹಳೆಯ ಪದಗಳನ್ನು, ಭಾಷಾಶುದ್ಧಿ ಕೆಡದಂತೆ ಹೊಸ ರೂಪವಿತ್ತು ಉಪಯೋಗಿಸುವಲ್ಲಿ, 'ಇಸು' ಪ್ರತ್ಯಯ ಹಚ್ಚಿ ಹೊಸ ಪದಗಳನ್ನು

ಸೃಷ್ಟಿಸುವುದರಲ್ಲಿ ಪೈಗಳು ಪ್ರಖ್ಯಾತರು. ಹಾಗೆ ಅವರ ಸಮಗ್ರಕೃತಿಗಳಲ್ಲಿ ಬಂದಿರುವ ಆದಷ್ಟು ಅಂತಹ ಶಬ್ದಗಳನ್ನು ಸಂಗ್ರಹಿಸಿ ಈ ಕೋಶವನ್ನು ಆ ಲೇಖಕರು ನಿರ್ಮಿಸಿರುವರು. ಕನ್ನಡದ ಪ್ರಾಚೀನಕವಿಗಳಾದ ಪಂಪ, ನಾಗಚಂದ್ರ, ಕುಮಾರವ್ಯಾಸರ ಕುರಿತು ಈ ತೆರನಾದ ಪದಕೋಶಗಳು ರಚಿಸಿದ್ದರೂ, ಆಧುನಿಕ ಕನ್ನಡ ಸಾಹಿತ್ಯಜ್ಞರ ಕುರಿತು ಪ್ರಕಟವಾದ ಪ್ರಥಮದ ಒಂದು ಕೋಶ ಇದೆಂಬುದು ಈ ಪುಸ್ತಕದ ಮಹತ್ವ

ಪೈಗಳ ಎಂಭತ್ತೆರಡನೆಯ ಜಯಂತಿಯ ಭಕ್ತಿಯ ಕಾಣಿಕೆಯೆಂದು ಶ್ರೀ ಎ. ಬಾಲಕೃಷ್ಣ ಶೆಟ್ಟಿ, ಪೊಳಲಿ ಇವರು 'ಹೆಬ್ಬೆರಳು-ಕೃತಿದರ್ಶನ' ಎಂಬ ಪುಸ್ತಕ ಬರೆದಿರುವರು. 'ಹೆಬ್ಬೆರಳು' ದೃಶ್ಯಕಾವ್ಯದಲ್ಲಿ ತೋರುವ ಏಕಲವ್ಯನ ಗುರು ಭಕ್ತಿ, ದ್ರೋಣಾಚಾರ್ಯನ ಹೃದಯದ ಹೊಯ್ದಾಟ, ಹಿರಣ್ಯಧನುವಿನ ಶಂಕೆ, ವರ್ಣಭೇದದ ವಿಷಮತೆಯ ಕುರಿತು ಗಾಢವಾದ ಚಿಂತೆ- ಇವನ್ನೆಲ್ಲಾ ಶೆಟ್ಟರು ಸೋದಾಹರಣವಾಗಿ ಮಾರ್ಮಿಕವಾಗಿ ಎತ್ತಿ ತೋರಿಸಿದ್ದಾರೆ. ಮಾತ್ರವಲ್ಲದೆ, ತುಳುಭಾಷೆ, ಸಾಹಿತ್ಯ ಸಂಶೋಧನೆಗಳಲ್ಲಿ ಪ್ರಸಿದ್ಧರಾದ ಅವರ ಅಜ್ಜ ಪೊಳಲಿ ಶೀನಪ್ಪ ಹೆಗ್ಗಡೆಯವರಿಗೆ ಬರೆದ ಒಂಭತ್ತು ಪತ್ರಗಳನ್ನೂ ಟಿಪ್ಪಣಿಯೊಂದಿಗೆ ಪ್ರಕಟಿಸಿದ್ದಾರೆ. ಅಂತೆ, ಬಿ. ಪದ್ಮನಾಭ ಸೋಮಯಾಜಿ, ಪೈ ಜಯಂತಿ ಸಂದರ್ಭ, ೧೯೬೯ರಲ್ಲಿ ಬರೆದು ಓದಿದ ಪ್ರಬಂಧವನ್ನು ಪುಸ್ತಕರೂಪವಾಗಿ 'ಗಿಳಿವಿಂಡು ಸಮೀಕ್ಷೆ' ಎಂದು ಶ್ರೀ ವೆಂಕಟ್ರಾಯಾಚಾರ್ಯರು ಪ್ರಕಾಶ ಪಡಿಸಿದ್ದಾರೆ. ಸಂಸ್ಕೃತ ಕನ್ನಡ ಈ ಎರಡೂ ಭಾಷೆಗಳಲ್ಲಿ ಆಳವಾದ ವಿದ್ವತ್ತು ಪಡೆದ ಶ್ರೇಷ್ಠ ಲೇಖಕರಾದ ಸೋಮಯಾಜಿಗಳು ಮಾಡಿದ ಈ 'ಗಿಳಿವಿಂಡು ಸಮೀಕ್ಷೆ' ಯಥಾಯೋಗ್ಯವಾಗಿದೆ.

ಕರ್ನಾಟಕ ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳು ಕವಿ ಶತಮಾನೋತ್ಸವ ವರ್ಷ, ೧೯೮೩ರಲ್ಲಿ, ವಿಚಾರ ಸಂಕಿರಣಗಳನ್ನು, ಉಪನ್ಯಾಸಗಳನ್ನು, ಗೋಷ್ಠಿಗಳನ್ನು ಏರ್ಪಡಿಸಿ ಪ್ರಕಟಣೆಗಳನ್ನು ಹೊರತಂದಿದೆ. ಕರ್ನಾಟಕ ವಿಶ್ವವಿದ್ಯಾನಿಲಯದ ತ್ರೈಮಾಸಿಕ ಪತ್ರಿಕೆಯ ವಿಶೇಷಾಂಕದಲ್ಲಿ ಲೇಖನಗಳು ಪ್ರಕಟಣೆಗೊಂಡಿದೆ. ಮಂಗಳೂರು ವಿಶ್ವವಿದ್ಯಾನಿಲಯ, ತನ್ನ ಪ್ರಪ್ರಥಮ ಪ್ರಕಟಣೆಗಾಗಿ ಇದೇ ಲೇಖಕ ಬರೆದ 'ಗೋವಿಂದ ಪೈ: ಸ್ಮೃತಿ-ಕೃತಿ' ಎಂಬ ಗ್ರಂಥವನ್ನು ಪ್ರಕಟಿಸಿದೆ. ಆ ಗ್ರಂಥದ ಬಿಡುಗಡೆಯ ಸಮಾರಂಭ ಜ್ಞಾನಪೀಠ ಪ್ರಶಸ್ತಿ ವಿಜೇತರಾದ ಡಾ॥ ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಜರಗಿತು. ಬೆಂಗಳೂರು, ಮೈಸೂರು ವಿಶ್ವವಿದ್ಯಾನಿಲಯಗಳೂ ಶತಮಾನೋತ್ಸವದ ಕಾಲದಲ್ಲಿ ಯೋಗ್ಯವಾದ ರೀತಿಯಲ್ಲಿ ಕವಿಸ್ಮರಣೆಯನ್ನು ಮಾಡಿವೆ.

ಮಂಗಳೂರಿನ 'ಕಲಾದರ್ಶನ' ಬೆಂಗಳೂರಿನ 'ಜ್ಞಾನಸುಧಾ' ಮಣಿಪಾಲದ 'ತರಂಗ' ಹಾಗೂ ಇತರ ಪತ್ರಿಕೆಗಳೂ ಶತಮಾನೋತ್ಸವ ಕಾಲದಲ್ಲಿ ವಿಶೇಷ ೧೦

ಸ್ಮರಣಸಂಚಿಕೆಗಳನ್ನು ಪ್ರಕಟಿಸಿವೆ. ಅವೆಲ್ಲದರಲ್ಲಿಯೂ ಕವಿಗಳು ವಿದ್ವಾಂಸರು ಹಲವರು, ಪೈಗಳ ಸಾಧನೆ ಸಿದ್ಧಿಗಳ ಕುರಿತು ಕವಿತೆ ಲೇಖನಗಳನ್ನು ಬರೆದು ಸಂಚಿಕೆ ಶೋಭೆ ಹೆಚ್ಚಿಸಿದ್ದಾರೆ. ಶತಮಾನೋತ್ಸವ ವರ್ಷ ನಾಡಿನ ಹಲವೆಡೆ ಸಂಘಸಂಸ್ಥೆಗಳು ವಿದ್ಯಾಲಯಗಳು ಅವರನ್ನು ಸ್ಮರಿಸಿವೆ; ನಮ್ಮ ದೇಶ, ಸಂಸ್ಕೃತಿಗಳ ಘನತೆ ಗೌರವಗಳನ್ನು ಎತ್ತಿಹಿಡಿದ ಮಹಾ ಚೇತನವೆಂದು ಇಂದಿಗೂ, ಎಂದಿಗೂ ಪೈಗಳನ್ನು ಜನತೆ ಸ್ಮರಿಸುತ್ತದೆ.

ಗೋವಿಂದ ಪೈಗಳಿಗೆ ಈ ಲೇಖಕನಲ್ಲಿ ಏನೋ ಅನಿಮಿತ್ತವಾದ ಸ್ನೇಹ-ವಾತ್ಸಲ್ಯವಿತ್ತು. ಅವರು ವಾಸವಾಗಿದ್ದುದು ಮಂಜೇಶ್ವರದ ಪೇಟೆಯಲ್ಲಿರುವ ಮನೆಯಲ್ಲಿ. ಲೇಖಕನೂ, ಮಂಜೇಶ್ವರ ಮಾಗಣೆಯೆಂದು ಕರೆಯಲ್ಪಡುತ್ತಿದ್ದ ಆ ಪ್ರದೇಶದವನು; ಹೀಗೆ ಭೌಗೋಳಿಕವಾಗಿಯೂ ತುಸು ಸಮೀಪದವನು. ಆದ್ದರಿಂದ, ಸಹಜವಾಗಿ ಪರಸ್ಪರ ಕಾಣುವ ಸಂಭಾಷಿಸುವ ಸಂದರ್ಭ ಸ್ವಲ್ಪ ಹೆಚ್ಚು ಇತ್ತು. ಅದರ ಮೇಲೆ, ಅವರು ಸಿದ್ಧಿ-ಪ್ರಸಿದ್ಧಿ ಗಳಿಸಿದ ಕಾವ್ಯ ಸಾಹಿತ್ಯಭಾಷಾಭ್ಯಾಸಗಳ ವಿಷಯದಲ್ಲಿ ಕುತೂಹಲಾಸಕ್ತಿ ಇಟ್ಟುಕೊಂಡವನು. ಅಂತೂ, ಆಗ ಈ ಲೇಖಕನಿಗೆ, ಸಾಹಿತ್ಯ ರಂಗಸ್ಥಳದಲ್ಲಿ ಪ್ರತ್ಯಕ್ಷವಾಗಿ ಕುಣಿಯಲು ಧೈರ್ಯ ಸಾಲದೆ ತೆರೆಯ ಮರೆಯಲ್ಲಿ ನಿಂತೇ ತಾಳಕ್ಕೆ ಹೆಜ್ಜೆ ಹಾಕುತ್ತಿದ್ದ ಕಾಲ. ಮೊದಲ ಸಂದರ್ಶನದ ಸಂದರ್ಭದಲ್ಲಿಯೇ ಹೆಸರು ಹೇಳಿದಾಗ, ಲೇಖಕನ ಸಾಹಿತ್ಯ ಗುಪ್ತನಾಮವನ್ನು ಅವರು ಹೇಳಿಬಿಟ್ಟರು! ಅಂಥಾ ಹೆಸರಲ್ಲಿ ಕವಿತೆ ಬರೆಯುತ್ತಿರುವವರು ನೀವೇ ಅಲ್ಲವೇ ಎಂದು ಒಮ್ಮೆಗೇ ಕೇಳಿದರು. ದೊಡ್ಡವರ ನೆನಪಿನಲ್ಲಿ ಕಿರಿಯನೊಬ್ಬನ ಗುಪ್ತನಾಮ ಕೂಡಾ ಅಚ್ಚಳಿಯದೆ ಉಳಿದುಕೊಂಡ ಬಗೆಗೆ ಅಚ್ಚರಿಯೇ ಆಗಿತ್ತು!

ಇಂತಹ ಮೆಚ್ಚುಗೆಯೂ ಕಾರಣವಾಗಿ, ಅವರ ಕೃತಿಗಳ ಅಭ್ಯಾಸ ಮುಂದುವರಿಯಿತು. ಅವರ ಕುರಿತು ಅನೇಕ ಕಡೆ ಉಪನ್ಯಾಸ ನೀಡುವ, ಲೇಖನ ಬರೆಯುವ ಸಂದರ್ಭಗಳೂ ಒದಗಿದುವು. ಲೇಖನವನ್ನು ಓದಿದವರು ಮಾತುಗಳನ್ನು ಕೇಳಿದವರು ಮೆಚ್ಚುಗೆ ವ್ಯಕ್ತಪಡಿಸಿದರು; ಪರಿಣಾಮವೆಂದರೆ, ಕೊನೆಕೊನೆಗೆ ಅವರ ಪದ್ಯಗಳ ಕುರಿತು, ಕೃತಿಗಳ ಕುರಿತು, ಅರ್ಥವನ್ನೋ, ಸಂದೇಹವನ್ನೋ ಯಾರಾದರೂ ಅವರಲ್ಲಿ ಕೇಳಲು ಬಂದವರನ್ನು ಲೇಖಕನಲ್ಲಿಗೆ ಕಳುಹಿಸಿದ್ದರು! ಲೇಖಕನಿಗೆ ಅವರ ಕೃತಿಗಳ ಅಭ್ಯಾಸ 'ಏಕಲವ್ಯ'ನ ಅಭ್ಯಾಸ; ಆದರೆ 'ಹೆಬ್ಬೆರಳು' ಕೇಳುವ ಗುರು ಅವರಲ್ಲ. ಬದಲು, ಚತುರ್ಭುಜಗಳ ಶಕ್ತಿಯನ್ನು ನೀಡುವ ಅವರ ಆಶೀರ್ವಾದ ಸದಾ ಇತ್ತು!

ಈ ಹಿರಿದಾದ ಋಣಭಾರವನ್ನು ಇಳಿಸಬೇಕು; ಅವರ ರಾಷ್ಟ್ರಕವಿ ಪ್ರಾಪ್ತಿಗೆ ಅಪ್ರತ್ಯಕ್ಷವಾಗಿ ಮಾಡಿದ ಅಳಿಲಸೇವೆಯ ಕುರಿತು ಹಿಂದೆ ಹೇಳಿದೆ. ಅವರು

ಸಮ್ಮೇಳನಾಧ್ಯಕ್ಷರಾದಾಗ ಬರೆದ 'ರಾಷ್ಟ್ರಕವಿ' ಗೋವಿಂದ ಪೈ' ಕೃತಿ ಅರ್ಪಿತವಾಯಿತು; ಮುಂದೆ ಶತಮಾನೋತ್ಸವ ಕಾಲದಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದವರು, "ಗೋವಿಂದ ಪೈ : ಸ್ಮೃತಿ-ಕೃತಿ ಗ್ರಂಥ ರಚಿಸಲು ಲೇಖಕನೊಡನೆ ಕೇಳಿಕೊಂಡಾಗ, ಕರ್ತವ್ಯದೃಷ್ಟಿಯಿಂದ ಅದನ್ನೂ ನಿರ್ವಹಿಸಲಾಯಿತು. ಪ್ರಕೃತ, ಕೇರಳ-ಕರ್ನಾಟಕ ಸರಕಾರಗಳ ಸಂಯುಕ್ತ ಸ್ಮಾರಕ ಸಮಿತಿ ಪ್ರಕಟಿಸುವ 'ಮಹಾಕವಿ ಗೋವಿಂದ ಪೈ' ಗ್ರಂಥರಚನೆಗೆ ಲೇಖಕನನ್ನೇ ಕೇಳಿಕೊಂಡಾಗ, ಅವರ ಸ್ನೇಹ ವಾತ್ಸಲ್ಯಗಳ ಹಿರಿದಾದ ಸಾಲದ ಹೊರೆ ಸ್ವಲ್ಪವಾದರೂ ಇಳಿಸುವ ಸಂದರ್ಭವಿದೆಂದು ಭಾವಿಸಿ ಬರೆಯಲು ಒಪ್ಪಿ ಯಥಾಮತಿ ಯಥಾಶಕ್ತಿ ಈ ಕೃತಿರಚನೆಯ ಕಾರ್ಯವೂ ಪೂರ್ತಿಗೊಂಡಿದೆ, ಎಂಬ ಸಮಾಧಾನವಿದೆ.

ಮಹಾಕವಿ ಗೋವಿಂದ ಪೈಗಳ ಗದ್ಯ ಪದ್ಯ ಬರೆಹಗಳು ಓದಿದಷ್ಟೂ ಆಳವಾದ ಅರ್ಥವನ್ನು ನೀಡುವವುಗಳು. ಬರೆದಷ್ಟೂ ಮತ್ತೂ ಬರೆಯಬೇಕಾಗಿತ್ತು ಎಂದೂ ಭಾವಿಸುವವುಗಳು. ಅವರು ಉಪಯೋಗಿಸಿದ ಭಾಷೆ, ಶಬ್ದ, ಅಲಂಕಾರ, ಛಂದಸ್ಸು, ವಾಕ್ಯಬಂಧ, ನಾಳ್ನುಡಿ ಎಲ್ಲವೂ ಸಾಣೆ ಹಿಡಿದ ವಜ್ರದಂತೆ ಎಲ್ಲಿಂದ ನೋಡಿದರೂ ಎಲ್ಲಾ ಕಡೆಗೂ ಪ್ರಕಾಶದ ಜ್ವಲಂತ ಕಿರಣಗಳನ್ನು ಬೀರುವವುಗಳು. ಹಾಗಾಗಿ ಬರೆದು, ಹೇಳಿ ಮುಗಿಸಿದೆ ಎಂದು ತೃಪ್ತಿ ಪಡುವುದು ಸಾಧ್ಯವಾಗದು.

ಕಾಳಿದಾಸ ಮಹಾಕವಿಯ ಮಾತು ಈ ಸಂದರ್ಭದಲ್ಲಿ ನೆನಪಾಗುತ್ತದೆ :

"ಕ್ವ ಸೂರ್ಯಪ್ರಭವೋ ವಂಶಃ ಕ್ವಚಾಲ್ಪವಿಷಯಾ ಮತಿಃ
ತಿತೀರ್ಷುಃ ದುಸ್ತರಂ ಮೋಹಾತ್ ಉಡುಪೇನಾಸ್ಮಿ ಸಾಗರಮ್"

-ಸೂರ್ಯನ ಮುಂದೆ ಸೊಡರು ಎತ್ತಿಹಿಡಿದ ಕೆಲಸ ಮಾತ್ರ ಇಲ್ಲಿ ನಡೆದಿದೆ:

ಆ ಹಿರಿಯ 'ನಂದಾದೀಪ'ಕ್ಕೆ ಈ ಲೇಖಕನೂ, ಇಂತು ತನ್ನ ಸ್ವಂತ ಕವಿತಾರೂಪದ ಭಕ್ತಿಯೇ ಒಂದು ಬಿಂದು ಎಣ್ಣೆ ಎರೆದು, ಆ ಜಾಜ್ವಲ್ಯಮಾನವಾದ ಜ್ಯೋತಿ ಮತ್ತಷ್ಟು ಪ್ರಜ್ವಲಿಸುವಾಂತಾದಲಿ ಎಂದು ಪ್ರಾರ್ಥಿಸುತ್ತಾನೆ:

ರಾಷ್ಟ್ರಕವಿ

೧

ಉನ್ನತೋನ್ನತ ಪಶ್ಚಿಮಾದ್ರಿಯು
ಬೆನ್ನ ಹಿಂದಕೆ ನಿಂತಿದೆ;
ಅಳೆಯಲಾರದ ಆಳದಗಲದ
ನೀಲಜಲಧಿಯು ಮುಂತಿದೆ,
ಅತ್ತ ಗಜ ಶಾರ್ದೂಲ ಗರ್ಜನೆ

ಇತ್ತ ಪೆರ್ದೆರೆ ಮೊರೆತವು;
ಇಂಥ ಮೇಳವು ರಾಗತಾಳವು
ನಿನ್ನ ಸ್ಫೂರ್ತಿಗೆ ದೊರೆತವು.

೨

ಗಂಧವತಿ ಈ ಪೃಥ್ವಿ, ಕಳಮೆಯ
ಕಂಪು ಹೊಲ ಸಿರಿ ಮಂಚವು;
ತೆಂಗು ಕಂಗಿನ ತೋಟ ತಲೆಯನು
ತೂಗುತಿರೆ ರೋಮಾಂಚವು.
ಭೂತನರ್ತನ, ದುಡಿಯ ವಾದನ
ಯಕ್ಷಗಾನವು ಪಾಡ್ದನ;
ನದಿನಿನಾದವು ಪಕ್ಷಿ ಕೂಜನ
ನಿನ್ನ ಪ್ರತಿಭೆಗೆ ಸಾಧನ.

೩

ಕರುಣೆಯಿಂ ಕವಿತಾವತಾರವು
ನಿನಗೆ ವಾಲ್ಮೀಕಿಯ ತೆರ;
ದೇವಪುತ್ರನ ಶಿಲುಬೆಗಿಕ್ಕಿದ
ನೋವು, ಗೋಲ್ಗೊಥದಾಕರ.
ವೇಶ್ಯೆ ವಾಸವದತ್ತೆ ಮಸಣದಿ
ಬುದ್ಧ ಭಿಕ್ಷುವನೀಕ್ಷಿಸೆ;
ಕವಷ ದೇವರ್ಷಿಯ ಮಹಾದಾ
ಹಕ್ಕೆ ಸೂಕ್ತವು ಸಾಕ್ಷಿಸೆ.

೪

ಉತ್ತಮರ ನೀಚತ್ವ ಪ್ರಕಟಿತ
ಹೆಬ್ಬೆರಳ ಬಲಿದಾನದಿ;
ತಂಗಿಯಾದಳು ಸುಗತಗಾಮಾ-
ತಂಗಿ ನಿರ್ಮಲಹೃದಯದಿ.
ವೇದ ಬೈಬಲ್ ಧಮ್ಮಪದ ಜೈ-

ನಾಗಮವ ನೀ ಜೀರ್ಣಿಸಿ
ಎತ್ತಿ ತೋರಿದೆ ರತ್ನದಂತಹ
ಕಾವ್ಯ ಕತೆಗಳ ಪೂರ್ಣಿಸಿ

೫

ಎದೆಯ ಸ್ನೇಹವನೆರೆದು ಉರಿಸಿದೆ
ಕಾವ್ಯ ನಂದಾದೀಪವ;
ಜೀವ ಕೃಷ್ಣಾರ್ಪಿತಯೆಂಬೆನು
ಆ ಅಭಿನ್ನದ ಭಾವವ.
ಆತ್ಮನಲಿ ಪರಮಾತ್ಮ ದರ್ಶನ
ಕಾಂಬ ಮಹಿಮಾದೃಷ್ಟಿಯು
ಅದೆ ನಿರಂತರ ನಿನ್ನ ಚಿಂತನ
ಅದಕೆ ಕಾವ್ಯದ ಸೃಷ್ಟಿಯು.

೬

ಸತ್ಯದನ್ವೇಷಣೆಗೆ ತೊಡಗಿ ಚ-
ರಿತ್ರೆ ಶೋಧನೆ ಮಾಡಿದೆ;
ಕವಿಯ ಕಾಲವ ಕಾವ್ಯದಾಳವ
ಮಥಿಸಿ ಬೋಧನೆ ನೀಡಿದೆ.
ನೀನು ಪ್ರಾಂತ್ಯದ ಹಿಮಾಚಲ
ಶಿಖರ- ಗೌರೀಶಂಕರ;
ನಿನ್ನ ಬಣ್ಣಿಸಲೆನ್ನೆಳವೆ
ನಾ ಕಿರಿಯವನು ಕವಿ ಕಿಂಕರ.

೭

ಕವಿತೆ ಸಂಶೋಧನೆಗಳುಭಯವು
ಸವ್ಯಸಾಚಿಸಿ ಸಾಗಿತು;
ಆಂಗ್ಲ ಕೊಂಕಣಿ ಕನ್ನಡಗಳ ತ್ರಿ-
ವೇಣಿ ಸಂಗಮವಾಯಿತು.
ಪದ್ಯದಲ್ಲಿಯೂ ಗದ್ಯದಲ್ಲಿಯೂ

ನಿನ್ನ ಶೈಲಿಯು ನಿನ್ನದೇ;
ಒಬ್ಬ ಪೈ ಮತ್ತೊಬ್ಬರಿಲ್ಲವು
ಎಂಬ ಹೆಮ್ಮೆಯು ನಮ್ಮದೆ!

೮

ತೌಳವರ ಇತಿಹಾಸ ಇರುಳಲಿ
ಮುಚ್ಚಿ ಮರೆತಿರೆ ಬೀರಿದೆ
ಬೆಳಕನಲ್ಲಿಗೆ, ತುಳುವ ನಾಡನು
ಮೆಚ್ಚಿ ಮಮತೆಯ ತೋರಿದೆ;
ಮತ್ತೆ ಮರುಹುಟ್ಟಿದ್ದರೆನ್ನನು
ಮರಳಿಸೌ ನಿನ್ನಂಕಕೆ;
ಎಂದು ತೌಳವ ಮಾತೆಯನು ನೀ
ಭಿನ್ನವಿಸಿದ್ಯೆ ಬಿಂಕದೆ.

೯

ಹೆತ್ತ ಕೊಂಕಣಿ ತಾಯಿ ನಿನ್ನನು
ಇತ್ತಳೈ ತುಳುವಬ್ಬೆಗೆ;
ಹೊತ್ತು ಮೆರೆಸಿದಳಲ್ತೆ ಕನ್ನಡ
ಮಾತೆ ಬೆಳಕಿಗೆ ಹಬ್ಬುಗೆ!
ಭಾರತಾಂಬೆಯ ಭಕ್ತಿಯೆನಿತೋ
ಆತ್ಮ ಶಕ್ತಿಯನಿತ್ತಿತು;
ಎಲ್ಲ ತಾಯದಿರೆಲ್ಲ ಹರಕೆಯು
ನಿನ್ನ ಸಿರಿಮುಡಿಗೆತ್ತಿತು.

ದಾಸ್ಯದೈತ್ಯನ ಮುರಿಯೆ ಬಿಡುಗಡೆ
ದೇವರಿಗೆ ಕರೆನೀಡಿದೆ;
ಭರತಮಾತೆಯ ಕಂಬನಿಯ ಕಿಡಿ
ನಿನ್ನ ನುಡಿಯೊಳು ನೋಡಿದೆ!
ತೃಷೆಗೆ ಎರೆದಾ ನೀರುಹಾ! ಉ

ಪ್ಪಾದುದೆನ್ನುತ ಮರುಗಿದೆ;
ರಾಹು ತೊಲಗಿಸಿ ಕೇತು ತಂದೆಯ
ತಂದೆ! ಎನ್ನುತ ಕೊರಗಿದೆ.

೧೧

ಜೇನು ಸುರಿಯುವ ಹಾಲು ಹರಿಯುವ
ನಾಡು-ಕನ್ನಡ ಹಾಡಿದೆ;
ತಾಯೆ! ಬಾ ಮೊಗತೋರು ಮಕ್ಕಳ
ಹರಸು, ಎನ್ನುತ ಬೇಡಿದೆ,
ಪುಣ್ಯ ಸ್ಮರಣೆಗೆ ಕವನ ಪುಷ್ಪವ
ಅರ್ಪಿಸುವರ್ರೈ ಕವಿಗಳು;
ಅನು ಕಣ್ಣೀರ್‌ತುಂಬಿ ತಂದಿಹೆ
ಬಾಷ್ಪಬಂಧುವೆ ! ಕೈಕೊಳು.

-ಕಯ್ಯಾರ ಕಿಂಞಣ್ಣ ರೈ

ಸಾಹಿತ್ಯದಿಂದ ಸಂಸ್ಕೃತಿ ಸಂವರ್ಧನೆ

ಅಕ್ಕತಂಗಿಯರೆ, ಅಣ್ಣತಮ್ಮಂದಿರೆ,

ಅರುವತ್ತಾರನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಪೀಠದಲ್ಲಿ ಆಸೀನನಾಗುವಂತೆ ನನ್ನ ಮೇಲೆ ಅಪಾರ ಪ್ರೀತಿ ವಿಶ್ವಾಸಗಳನ್ನಿರಿಸಿ ಅನುಮತಿಸಿದ ತಮ್ಮೆಲ್ಲರ ಹೃದಯ ವಿಶಾಲತೆಗೆ ನಮನಗಳನ್ನು ಸಲ್ಲಿಸುತ್ತೇನೆ. ನಾಡು ನುಡಿಗಳ ಕೈಂಕರ್ಯವೇ ಜೀವನಧ್ಯೇಯವೆಂದು, ಬದುಕಿನುದ್ದಕ್ಕೂ, ನಂಬಿ ನಡೆಯುತ್ತಾ ಬಂದ, ಹಾಗಿದ್ದರೂ ಇಂದು, ಕರ್ನಾಟಕ ರಾಜ್ಯದಿಂದ ಹೊರಗುಳಿದ, ಓರ್ವನನ್ನು ಸಮ್ಮೇಳನಾಧ್ಯಕ್ಷತೆಗೇರಿಸಿದ ನಿಮ್ಮೆಲ್ಲರ ಆತ್ಮೀಯತೆಯ ಅಭಿಮಾನಕ್ಕೆ ಋಣಿಯಾಗಿದ್ದೇನೆ. ಇದು ಕನ್ನಡತಾಯಿ ಭುವನೇಶ್ವರಿಯ ಆಶೀರ್ವಾದವೆಂದು ನಂಬಿ, ಈ ಹಿರಿಯ ಹೊಣೆಗಾರಿಕೆಯನ್ನು ತಲೆಬಾಗಿ ನಿರ್ವಹಿಸುತ್ತೇನೆ. ಸಮ್ಮೇಳನದ ಸಕಲ ಕಾರ್ಯಕ್ರಮಗಳೂ ಯಶಸ್ವಿಯಾಗುವಂತೆ ಸರ್ವರ ಸಹಕಾರವನ್ನು ಯಾಚಿಸುತ್ತೇನೆ.

ಕಣ್ಣ ಮುಂದೆ ನೀಲಜಲತರಂಗಿತ ವಿಶಾಲಗಂಭೀರ ಸಾಗರ; ಬೆನ್ನ ಹಿಂದೆ ಭದ್ರವೂ ಉನ್ನತವೂ ಆದ ತರುಗುಲ್ಮ ರಾಜಿರಾರಾಜಿತ ಸಹ್ಯಾದ್ರಿ ಶಿಖರ, ಇಕ್ಕಡೆಗಳಲ್ಲಿಯೂ ಸಮುದ್ರ ಸಂಗಮಕ್ಕೆ ನಲಿದು ಬರುತ್ತಿರುವ ಪಯಸ್ವಿನೀ, ನೇತ್ರಾವತೀ, ಶಾಂಭವೀ, ಸೀತಾ ಮುಂತಾದ ನದಿಗಳ ನಿರ್ಮಲ ಪ್ರವಾಹ, ಆ ನದಿಗಳ ನೀರುಂಡು ಇಬ್ಬದಿಗಳಲ್ಲಿಯೂ ಕಂಗೊಳಿಸುವ ಹಸಿರು ಹೊಲಗಳ ಸಸ್ಯರಾಶಿ; ಈ ಚೆಲುವಿಗೆ ತಲೆದೂಗಿಸುವಂತೆ ಅಲ್ಲಲ್ಲಿನ ತೋಟಗಳಲ್ಲಿ ಸಾಲು ಸಾಲಾಗಿ ಬೆಳೆದು ಶೋಭಿಸುವ ಕಂಗಿನ ತೆಂಗಿನ ಬಾಳೆಯ ತಾಳೆಯ ಫಲಭರಿತ ವೃಕ್ಷ ಸಮೂಹ; ಮಧುರಕಂಠದಿಂದ ಜಾನಪದ ಗೀತಗಳನ್ನು ಹಾಡುತ್ತಿರುವ ಮುಗ್ಧ ಗ್ರಾಮೀಣ ರಸಿಕಲೋಕ, ಇಂತಹ ಒಂದು ನಿಸರ್ಗ ಸುಂದರ ವಾತಾವರಣದ ಮಂಗಳೂರಲ್ಲಿ ಜರಗುವ ಈ ಸಾಹಿತ್ಯ

---

* ಮಂಗಳೂರಿನಲ್ಲಿ ಜರಗಿದಅಖಿಲಭಾರತ 66ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣ.

ಸಮ್ಮೇಳನ, ಕರ್ನಾಟಕ ರಾಜ್ಯ, ಅಖಿಲ ಭಾರತ ಹಾಗೂ ವಿದೇಶಗಳಿಂದಲೂ ಆಗಮಿಸಿದ ಸಮಸ್ತ ಕನ್ನಡಿತಿಯರಿಗೂ ಕನ್ನಡಿಗರಿಗೂ ಸಾಹಿತ್ಯ ಸಂಸ್ಕೃತಿಯ ಸವಿಯನ್ನು ಉಣಿಸಲೆಂದೂ ಹಾರೈಸುತ್ತೇನೆ.

ಕನ್ನಡದ ಖ್ಯಾತ ವೈಯಾಕರಣ ಭಟ್ಟಾಕಳಂಕನು, 'ಸರ್ವಭಾಷಾಮಯೀದೇವೀ' ಎಂದು ವಾಗ್ದೇವಿಯ ವಿಶ್ವರೂಪವನ್ನು ಚಿತ್ರಿಸಿದ್ದಾನೆ; ಪಾಶ್ಚಾತ್ಯ ವಿದ್ವಾಂಸರು ಭಾಷೆಗಳಲ್ಲಿ ಇಂಡೋ ಯುರೋಪಿಯನ್ ಹಾಗೂ ದ್ರವಿಡಿಯನ್ ಎಂಬೀ ಭೇದಗಳ ಕೊಳೆಯನ್ನು ನಮ್ಮ ಬುದ್ಧಿಗೆ ಅಂಟಿಸಿದ್ದಾರೆ; ನಮ್ಮನ್ನು ವಿಭಜಿಸಿ ಆಳುವ ಸೂತ್ರವಾಗಿ ಕಣ್ಣು ಮುಚ್ಚಿ ನಾವು ಅದನ್ನು ನಂಬಿದೆವು. ಈ ತೆರನ ಭಾಷಾ ವಿಭಜನೆ ಸರಿಯಲ್ಲ. ಹೇಗೆ ಸಕಲ ಜೀವಜಂತುಗಳು, ಪಶುಪಕ್ಷಿಗಳು, ಮರಗಿಡಬಳ್ಳಿಗಳು, ಮನುಷ್ಯರು ಕೂಡಾ ಪ್ರಕೃತಿ ಸಹಜವಾಗಿ ಜನಿಸಿದರೋ ಅಂತೆ ಭಾಷೆ ಭಾವನೆಗಳೂ ಪ್ರಾಕೃತಿಕ ನಿಯಮದಂತೇ ಆಗಿವೆ. ದುಃಖಗೊಂಡಾಗ ಕಂಬನಿ ಹೆದರಿಕೆಯಲ್ಲಿ ನಡುಕ, ಸಂತೋಷಗೊಂಡಾಗ ನಗು ದ್ರಾವಿಡರಿಗೂ ಆರ್ಯರಿಗೂ ಯುರೋಪಿಯನವರಿಗೂ ಎಲ್ಲಾ ಮನುಷ್ಯ ಸಂತತಿಗೂ ಸಮಾನ. ಹಾಗೆಯೇ ಭಿನ್ನಭಿನ್ನ ಸಂದರ್ಭಗಳಲ್ಲಿ ಜೀವಿಗಳು ಉಚ್ಚರಿಸುವ ಶಬ್ದಗಳ ಉತ್ಪತ್ತಿ ಕೂಡ. ಕರು ತಾಯಿಯನ್ನು ಅಂಬಾ ಎಂದು ಕರೆಯುತ್ತದೆ. ಸಂಸ್ಕೃತ ಭಾಷೆಯಲ್ಲಿ ಅಂಬಾ ಎಂದರೆ ತಾಯಿ; ಕನ್ನಡದ ಅಬ್ಬೆ ತುಳುವಿನ ಅಪ್ಪೆ, ಈ ರೂಪಗಳೂ ಕರುವಿನ ಸಾಹಜಿಕವಾದ ಅಂಬಾ ಪದದ ತದ್ರೂಪ. ಮದರ್, ಅಮ್ಮಾ, ಮಾ, ಮಾಯಿ, ಪಿತೃ, ಫಾದರ್, ಸಿಸ್ಟರ್, ಸ್ವಸ್ ಈ ಪದಗಳು ಭಾರತದ ಭಾಷೆಗಳಲ್ಲಿಯೂ ವಿದೇಶ ಭಾಷೆಗಳಲ್ಲಿಯೂ ಸಾದೃಶ್ಯವುಳ್ಳವುಗಳು. ಪ್ರಾಣಿ ಮನುಷ್ಯ ವರ್ಗಗಳು ಉಪಯೋಗಿಸುವ ಆಹಾರ ವಾಸಿಸುವ ವಾತಾವರಣ– ಇವುಗಳಿಗೆ ಹೊಂದಿಕೊಂಡು ಮೂಲ ರೂಪದಲ್ಲಿ ನಿಸರ್ಗಕ್ಕೆ ಹೊಂದಿಕೊಂಡೇ ಕೆಲವು ಮಾರ್ಪಾಟುಗಳು ಅನಿವಾರ್ಯವಾಗಿ ಆಗುತ್ತವೆ. ತುಳುಭಾಷೆ ಒಂದರಲ್ಲಿಯೇ ಕನ್ನಡದ ಸೊಪ್ಪು ಸಪ್ಪು, ತಪ್ಪು, ಚಪ್ಪು, ಹಪ್ಪು ಇಷ್ಟು ರೂಪಗಳನ್ನು ಬೇರೆ ಬೇರೆ ಪ್ರದೇಶಗಳಲ್ಲಿ ಪಡೆದಿದೆ. ಹೋರಾಟ ಓರಾಟವಾಗುವುದೂ ಹಾಗೆಯೇ. ಸಂಸ್ಕೃತದ ರವೀಂದ್ರ, ಬಂಗಾಳದಲ್ಲಿ ರಬೀಂದ್ರ, ವಸು ಬಸು ಆಗಿದೆ. ಕರಿ, ಬಿಳಿ ಇಂತಹ ಶಾರೀರಿಕ ವ್ಯತ್ಯಾಸಗಳಿಗೂ ಆಹಾರ ಪ್ರದೇಶಗಳಿಗೆ ಸಂಬಂಧಿಸಿ ಆಗುವವು. ಜಗತ್ತಿನ ಸಕಲ ಭಾಷೆಗಳ ಉತ್ಪತ್ತಿಯೂ ನಿಸರ್ಗ ಸಹಜ ಸ್ಫೂರ್ತಿಯಿಂದ ಒಂದೇ ತೆರನ ನಿಯಮದಂತೆ, ಭಾವನೆಗಳ ಭಿನ್ನತೆಗೆ ಅನುಗುಣವಾಗಿ ಆಗಿದೆ ಎಂದು ತಿಳಿದುಕೊಂಡಲ್ಲಿ, ವಿಶ್ವ ಮಾನವ್ಯ ವಿಶಾಲ ಸಂಸ್ಕೃತಿ ನಮ್ಮಲ್ಲಿ ಉಂಟಾಗುವುದು, ವಾಗ್ದೇವಿ 'ಸರ್ವಭಾಷಾಮಯೀ ದೇವಿ' ಎಂಬ ಕನ್ನಡ ವೈಯಾಕರಣಿಯ ವಾಣಿ ಉತ್ತಮ ಆದರ್ಶ ತೋರುವ ಮಂತ್ರವಾಣಿಯಂತಿದೆ. ಆ ಮಹಾಸಮ್ಮೇಳನ ಅಖಿಲಭಾರತ ವ್ಯಾಪ್ತಿಯದ್ದಾಗಿದ್ದು ದೇಶ ವಿದೇಶಗಳಿಂದಲೂ ಧೀಮಂತರು ಆಗಮಿಸಿದ್ದೀರಿ ಎಂಬುದರಿಂದ ನಿಮ್ಮೆಲ್ಲರ

ಉದಾರ ಅವಗಾಹನೆಗಾಗಿ ಪ್ರಾರಂಭದಲ್ಲಿ ಈ ಪ್ರಸ್ತಾವನೆಯನ್ನು ಮಾಡಲಾಗಿದೆ. 'ಮನುಷ್ಯ ಜಾತಿ ತಾನೊಂದೆ ವಲಂ' ಎಂಬ ಆದಿಕವಿ ಪಂಪನ ಸೂಕ್ತಿಗೂ ಈ ವಿಚಾರಧಾರೆ ಅನ್ವಯಿಸುತ್ತದೆ.

ಕನ್ನಡ ಭಾಷೆ ಸಾಹಿತ್ಯ ಸಂಸ್ಕೃತಿ ಎಲ್ಲವೂ ಭಾರತಾಂತರ್ಗತವೆಂಬ ಸತ್ಯವನ್ನು ಅರ್ಥ ಮಾಡಿಕೊಂಡಲ್ಲಿ ಭಾರತೀಯ ಸಾಹಿತ್ಯ ಸಂಸ್ಕೃತಿಗಳ ಒಂದು ವಿಹಂಗಮಾವಲೋಕನ ಅವಶ್ಯ. ಇಂದು ಅಭಿವೃದ್ಧಿಗೊಂಡಿರುವ ಹಲವು ರಾಷ್ಟ್ರಗಳು ಅಜ್ಞಾನದ ಅಂಧಕಾರದಲ್ಲಿ ಮುಳುಗಿದ್ದಾಗ ಭಾರತ ಸಾಹಿತ್ಯ ಸಂಸ್ಕೃತಿಗಳ ದೀವಟಿಗೆ ಎತ್ತಿ ಹಿಡಿದಿತ್ತು. ಪಾಶ್ಚಾತ್ಯ ವಿದ್ವಾಂಸರೇ ಒಪ್ಪುವಂತೆ ವೇದೋಪನಿಷತ್ತುಗಳು ಹತ್ತು ಸಾವಿರ ವರ್ಷಗಳಿಗಿಂತಲೂ ಪ್ರಾಚೀನ. ಅವೆಲ್ಲವುಗಳ ಅಧ್ಯಯನ ಮನುಷ್ಯನ ಆತ್ಮ ಸಂಸ್ಕಾರಕ್ಕೆ ಸಹಾಯಕಗಳು. ವೇದದಲ್ಲಿ ಉಷಾಸೂಕ್ತವೆಂಬ ಮಂತ್ರವಿದೆ. ಅದು ಉಷಃಕಾಲದ ಪ್ರಕೃತಿ ವರ್ಣನಾತ್ಮಕ ಕಾವ್ಯ. ರಾತ್ರಿ ನಿದ್ರಾಪರವಶರಾಗಿದ್ದ ಮಾನವ ಉಷಃಕಾಲದಲ್ಲಿ ಎಚ್ಚತ್ತವನೇ ಉಲ್ಲಸಿತನಾಗುತ್ತಾನೆ. ಪ್ರಥಮ ಸೂರ್ಯಕಿರಣವನ್ನು ಕಂಡಾಗ ಆಗುವ ಹರ್ಷೋಲ್ಲಾಸ ಅಪೂರ್ವ; ಅಂತಹ ಸಂತೋಷವನ್ನು ನೀಡಿದ ಸೂರ್ಯ ದೇವನಿಗೆ ಅರ್ಘ್ಯ ಅರ್ಪಿಸುತ್ತಾ ಧೀಯೋಯೋನಃ ಪ್ರಚೋದಯಾತ್ – ನಮ್ಮ ಬುದ್ಧಿಯನ್ನು ಬೆಳಗಿಸೆಂದು ಸಲ್ಲಿಸುವ ಪ್ರಾರ್ಥನಾ ಭಾವಗೀತಾ ರೂಪದ ಸನ್ಮಂತ್ರವೇ ಗಾಯತ್ರಿ, ಕೃತ್ರಿಮತೆಯ ಪರೆ ಕಳಚಿ ಸತ್ಯ ಧರ್ಮಗಳ ಶಾಶ್ವತ ನೆಲೆಯನ್ನು ಒದಗಿಸು ಎಂಬ 'ಹಿರಣ್ಮ ಯೇನಪಾತ್ರೇಣ' ಎಂಬೀ ಉಪನಿಷನ್ಮಂತ್ರ ಕೂಡ ಜೀವನ ಸಂಸ್ಕೃತಿಯ ಪ್ರಾರ್ಥನಾಗೀತೆ. ನಿರ್ಮಲ ವಾತಾವರಣದ ಆಶ್ರಮಗಳಲ್ಲಿ ಕಾವ್ಯಮಯವಾಗಿ ಹಾಡಿದರು. ಇದು ನಮ್ಮ ಹಿರಿಮೆ ಗರಿಮೆಗಳಾಗಿವೆ. ಗ್ರಾಮ ಗ್ರಾಮಾಂತರಗಳಲ್ಲಿ ನಮ್ಮ ಮುಗ್ಧ ಜನತೆ ಹಾಡುತ್ತಿರುವ ಜಾನಪದಗಳಲ್ಲಿಯೂ ಪಾಡ್ದನಗಳಲ್ಲಿಯೂ ಇಂತಹ ಸಾಹಿತ್ಯ ಸಂಸ್ಕೃತಿಯ ಕಾಂತಿಯನ್ನು ಕಾಣಬಹುದು.

ವೇದಕಾಲದ ನಂತರ ಭಾರತದ ವಿಶಾಲತೆಯಲ್ಲಿ ಉತ್ತರದಲ್ಲಿಯೂ ದಕ್ಷಿಣದಲ್ಲಿಯೂ ಪ್ರಚಾರವಾದ ಭಾಷಾ ಸಾಹಿತ್ಯ ಸಂಸ್ಕೃತ. ವ್ಯಾಸ, ವಾಲ್ಮೀಕಿ, ಭಾಸ, ಕಾಳಿದಾಸಾದಿ ಕವಿಗಳಿಂದ ರಚಿತವಾದ ಮಹಾಕಾವ್ಯಗಳು, ನಾಟಕಗಳು ಅತ್ಯಂತ ಜನಪ್ರಿಯ. ವ್ಯಾಸಭಾರತದಷ್ಟು ವಿಶಾಲವೂ ಸಮೃದ್ಧವೂ ಆದ ಮಹಾಕಾವ್ಯ ಪ್ರಪಂಚದಲ್ಲಿಯೇ ಬೇರೊಂದಿಲ್ಲ. ಸ್ವರ್ಗಮರ್ತ್ಯಗಳ ಸಕಲ ಸೌಂದರ್ಯ ಸಾರವೂ ಕಾಳಿದಾಸನ ಶಾಕುಂತಲ ಎಂಬೊಂದೇ ಕೃತಿಯಲ್ಲಿ ಕಾಣಬಹುದೆಂದು ಪಾಶ್ಚಾತ್ಯ ಕವಿ ಮುಕ್ತಕಂಠದಿಂದ ಪ್ರಶಂಸಿಸಿರುವನು. ಪಾಲಿ ಮೊದಲಾದ ಪ್ರಾಕೃತ ಭಾಷೆಗಳು ಸಂಸ್ಕೃತ ಜನ್ಯವೆಂದೂ, ಪ್ರಾಕೃತ ಭಾಷೆಗಳನ್ನೇ ಪಾಣಿನಿ ವ್ಯಾಕರಣದಿಂದ ಪರಿಷ್ಕರಿಸಿ ಸಂಸ್ಕೃತಗೊಳಿಸಿದನೆಂದೂ ವಾದವಿದ್ದರೂ ಪ್ರಾಕೃತ ಸಂಸ್ಕೃತ ಭಾಷೆಗಳು ಅನ್ಯೋನ್ಯಾಶ್ರಯ ಹೊಂದಿವೆ ಎಂಬುದು ಶತಃಸಿದ್ಧ, ಬಂಗಾಳಿ, ಗುಜರಾಥಿ,

ಮಹಾರಾಷ್ಟ್ರ, ಸಿಂಧಿ, ಕೊಂಕಣಿ, ಕರ್ಹಾಡ–ಇತ್ಯಾದಿ ಭಾಷೆಗಳು ಪ್ರಾಕೃತ ಭಾಷಾಜನ್ಯಗಳಿಗಾಗಿ ಸಂಸ್ಕೃತಕ್ಕೂ ಹತ್ತಿರದವುಗಳಾಗಿವೆ. ಇಂತಹ ಹಿನ್ನೆಲೆಯಲ್ಲಿ ಅಖಿಲ ಭಾರತ ಸಮಸ್ತ ಭಾಷಾ ಪಂಗಡಗಳಲ್ಲಿನ ಸಾಮರಸ್ಯ ವೇದ್ಯವಾಗುವುದು.

ಸಂಸ್ಕೃತ ತಮಿಳು ಭಾಷೆಗಳನ್ನು ಬಿಟ್ಟರೆ, ಪ್ರಾಚೀನತೆಯಲ್ಲಿ ಕನ್ನಡ ಭಾಷೆಗೆ ಮೂರನೆಯ ಸ್ಥಾನ. ಕರ್ನಾಟಕ ರಾಜ್ಯವೂ ವಿಶಾಲವಾದುದು. ಕರ್ನಾಟಕದ ಹೊರಗೂ, ಮುಂಬಯಿ ಮದ್ರಾಸು ದೆಹಲಿಗಳಂತಹ ಪ್ರಮುಖ ನಗರಗಳಲ್ಲಿ, ವಿದೇಶಗಳಲ್ಲಿಯೂ ಇಂದು ಕನ್ನಡಿಗರು ನೆಲೆಸಿದ್ದಾರೆ; ಕನ್ನಡ ಸಂಘ ಸಂಸ್ಥೆಗಳು ಸಾಕಷ್ಟಿವೆ. ತಾವು ನೆಲೆಸಿರುವ ದೇಶ ವಿದೇಶಗಳಲ್ಲಿ ಸ್ಥಳೀಯರ ಉತ್ತಮ ಸಹಕಾರಗಳಿಂದ ಕನ್ನಡಿಗರು ಸಾಹಿತ್ಯ ಸಂಸ್ಕೃತಿಗಳ ಸಂವರ್ಧನೆಯ ಮಹತ್ಕಾರ್ಯ ನೆರವೇರಿಸುತ್ತಿರುವುದು ಅಭಿನಂದನೀಯ. ಕನ್ನಡಿಗರ ಇಂತಹ ಅಭಿಮಾನಕ್ಕೆ ಸತ್ಕಾರ್ಯಕ್ಕೆ ಸಾಕಷ್ಟು ಸಾಹಜನಿಕ ಕಾರಣಗಳೂ ಇವೆ. ಎರಡು ಸಾವಿರ ವರ್ಷಗಳಿಗೂ ಮಿಕ್ಕಿದ ಚಾರಿತ್ರಿಕ ಸಾಂಸ್ಕೃತಿಕ ಮಹತ್ವ ಕನ್ನಡದ್ದು. ಶಾತವಾಹನರು, ಗಂಗರು, ಕದಂಬರು, ಚಾಲುಕ್ಯರು, ರಾಷ್ಟ್ರಕೂಟದ, ಹೊಯ್ಸಳರು, ವಿಜಯನಗರದ ಕೆಳದಿಯ ಇಕ್ಕೇರಿಯ ಅರಸರು ಕರ್ನಾಟಕವನ್ನು ಆಳಿದರು. ಅವರ ರಾಜ್ಯಭಾರ ಕಾಲದಲ್ಲಿ ಕರ್ನಾಟಕ ರಾಷ್ಟ್ರೀಯ ಅಂತಾರಾಷ್ಟ್ರೀಯ ಖ್ಯಾತಿ ಪಡೆದಿತ್ತು. ಕ್ರಿಸ್ತಪೂರ್ವ ಮೂರನೆಯ ಶತಮಾನದಲ್ಲಿ ಅಶೋಕ ಚಕ್ರವರ್ತಿ ಬನವಾಸಿಗೆ ಬುದ್ಧ ಭಿಕ್ಷುವನ್ನು ಕಳುಹಿಸಿದ್ದನು. ಉತ್ತರದಿಂದ ಬಂದ ಜೈನಮತೀಯರು, ಇಲ್ಲಿನ ಜನತೆಯೊಂದಿಗೆ ಸಾಮಾಜಿಕವಾಗಿಯೂ. ಸಾಂಸ್ಕೃತಿಕವಾಗಿಯೂ ತುಂಬಾ ಸಾಮರಸ್ಯದಿಂದ ಬೆರೆತು ನಾಡು ನುಡಿಗಳ ಸಮೃದ್ಧಿಗೆ ನಿರಂತರ ಶ್ರಮಿಸುತ್ತಾ ಪ್ರೋತ್ಸಾಹಿಸುತ್ತಾ ಇರುವುದು ಗಣನೀಯ ವಿಚಾರ.

ಕನ್ನಡ ಭಾಷೆಯಲ್ಲಿ ಗದ್ಯ ಪದ್ಯ ರೂಪಗಳಲ್ಲಿ ಕ್ರಿಸ್ತಶಕದ ಆದಿಯ ಕಾಲದಿಂದಲೇ ಶಾಸನ ಕೃತಿಗಳು ಉಪಲಬ್ಧವಾದರೂ, ಇಂದು ದೊರೆತಿರುವ ಪ್ರಥಮ ಗ್ರಂಥ ಕವಿರಾಜ ಮಾರ್ಗ. ಇದು ಎಂಟು ಒಂಭತ್ತನೆಯ ಶತಮಾನಗಳ ಅಂತರದಲ್ಲಿ ರಚಿತವಾದುದು. ಇದರ ಗ್ರಂಥಕರ್ತೃ ನೃಪತುಂಗನೋ, ಶ್ರೀವಿಜಯನೋ, ಕವೀಶ್ವರನೋ ಎಂಬೀ ಕುರಿತು ವಾದವಿದ್ದರೂ, ಆ ಗ್ರಂಥದಲ್ಲಿಯೇ ಉದ್ಧೃತವಾದಂತೆ, ಕವಿರಾಜಮಾರ್ಗಕ್ಕಿಂತ ಹಿಂದೆಯೇ ಹಳಗನ್ನಡವೆಂಬೊಂದು ಭಾಷೆಯಿತ್ತೆಂದೂ ಕೆಲವು ಕೃತಿಗಳೂ ರಚಿತವಾಗಿದ್ದುವೆಂದೂ ತಿಳಿದು ಬರುವುದು ಗಮನಾರ್ಹ. ಅಂತಹ ಒಂದು ಲಕ್ಷಣ ಗ್ರಂಥ ಬರೆಯಬೇಕಾದ ಸಂದರ್ಭ ಉಂಟಾಗುವುದು ಹಲವು ಲಕ್ಷ್ಯ ಗ್ರಂಥಗಳು ರಚಿತವಾದ ನಂತರವೇ. ಆ ಕಾರಣದಿಂದಲೂ ಕವಿರಾಜ ಮಾರ್ಗ ಕೃತಿಗಿಂತ ಹಿಂದೆಯೇ ಕನ್ನಡದಲ್ಲಿ ಉತ್ತಮ ಕಾವ್ಯ ಸೃಷ್ಟಿ ಆಗಿರಲೇಬೇಕೆಂದು ನಿರ್ಧರಿಸಬಹುದು. ಸಂಸ್ಕೃತ ಭಾಷೆಯ ಪ್ರಸಿದ್ಧ ಲಕ್ಷಣ ಗ್ರಂಥವಾದ ದಂಡಿಯ ಕಾವ್ಯಾದರ್ಶವನ್ನು ಆಧರಿಸಿ ಕವಿರಾಜಮಾರ್ಗ ರಚಿತವಾಗಿದ್ದರೂ ಇದರಲ್ಲಿ ಕನ್ನಡ

ಭಾಷಾ ಸಾಹಿತ್ಯಕ್ಕೇ ಅನ್ವಯಿಸುವ ಕೆಲವೊಂದು ವಿಶೇಷ ವಿಷಯಗಳೂ ಉಲ್ಲೇಖಗೊಂಡಿರುವುದರಿಂದ, ಇದು ಸ್ವತಂತ್ರ ರಚನೆಯೆಂಬಷ್ಟು ಮಹತ್ವ ಪಡೆದಿದೆ.

ಕನ್ನಡದ ಗದ್ಯ ಪದ್ಯ ಕಾವ್ಯಗಳಿರಲಿ, ರಸಾಲಂಕಾರ ಛಂದಶಾಸ್ತ್ರ ಗ್ರಂಥಗಳಿರಲಿ ಹೆಚ್ಚಾಗಿ ಸಂಸ್ಕೃತ ಭಾಷಾ ಕೃತಿಗಳ ಆಧಾರದಿಂದಲೇ ರಚಿತವಾಗಿದ್ದರೂ, ಎಲ್ಲದರಲ್ಲಿಯೂ ಕನ್ನಡದ ಸ್ವತಂತ್ರತೆಯನ್ನು ಎತ್ತಿ ಹಿಡಿಯುವುದರಲ್ಲಿ ಹಿಂದಿನ ಕನ್ನಡ ಕವಿಗಳು ಯಶಸ್ವಿಗಳಾಗಿದ್ದಾರೆ. ಅಂಡಯ್ಯ, ತಿಮ್ಮಪ್ಪಯ್ಯ, ಪುಟ್ಟಣ್ಣ ಗೌಡರಂತಹ ಕೆಲ ಧೀಮಂತ ಲೇಖಕರು, ಅಚ್ಚಗನ್ನಡದಲ್ಲಿಯೇ ಒಂದೊಂದು ಕೃತಿ ರಚಿಸುವ ಸಾಹಸ ತೋರಿಸಿದರೂ ಆ ಶೈಲಿ ಸಾಕಷ್ಟು ಪ್ರಚುರವಾಗಲಿಲ್ಲ. 'ಲಲಿತವಹ ಕನ್ನಡದ ನುಡಿಯಲಿ ತಿಳಿದು ತನ್ನಲಿ ತನ್ನ ಮೋಕ್ಷವ ಗಳಿಸಿಕೊಂಡರೆ ಸಾಲದೇ, ಸಂಸ್ಕೃತದೊಳಿನ್ನೇನು' ಎಂಬ ಅನುಭವವಾವ್ಯೃತದ ಕವಿಯೂ ಲಲಿತ ಸಂಸ್ಕೃತ ಪದಗಳನ್ನೂ ಉಪಯೋಗಿಸಿಕೊಂಡಿದ್ದಾನೆ. 'ಶ್ರೀರಾಮಾನಟಿಕೌಸ್ತುಭದ್ಯುತಿಕಿರತ್ ಪುಷ್ಪಾಂಜಲಿಕ್ಷೇಪವ ಕೊರಂಗಸ್ಥಿತೆ' ಎಂಬೀ ರುದ್ರಭಟ್ಟನ ಪದ್ಯಪಂಕ್ತಿ, 'ಅಂಭಃ ಕುಂಭೀನ ಕುಂಭೀನಸಮಕರಮಹಾಕೂರ್ಮಕೀಣೋರ್ಮಿಮಾಲಾಜ್ಯಂಭದ್ದಂಭೋಳಿ ಹಸ್ತಾಹತಚಕಿತ' ಎಂಬೀ ಷಡಕ್ಷರಿಯ ಸಾಲುಗಳೂ, 'ವ್ಯಾಸ ಮುನೀಂದ್ರರುಂದ್ರವಚನಾಮೃತವಾರ್ದಿ' ಎಂಬೀ ಪಂಪನ ಪದ್ಯ, 'ಲಕ್ಷನಕ್ಷತ್ರ ಮಯವಕ್ಷಾಂತರಿಕದಾಕ್ಷೀರಸಾಗರದಿಂ ಕಿಶೋರಶಶಿ ಬರುವಂತೆ' ಎಂಬೀ ಕುವೆಂಪು ಶೈಲಿಯೂ – ಇವೆಲ್ಲವೂ ಅಂದಿನಿಂದ ಇಂದಿನವರೆಗೂ ಕನ್ನಡ ಭಾಷೆ ಮಡಿವಂತಿಕೆಯನ್ನು ಬಿಟ್ಟು ಭಾಷಾ ಸಾಮರಸ್ಯವನ್ನು ಸಾಧಿಸಿಕೊಂಡು ಬಂದದ್ದಕ್ಕೆ ಸ್ಪಷ್ಟ ನಿದರ್ಶನಗಳು. ಒಂದು ಭಾಷೆಯ ಸಮೃದ್ಧವಾದ ಬೆಳವಣಿಗೆಗೆ ಈ ಉದಾರ ದೃಷ್ಟಿ ಅವಶ್ಯಕವಾಗಿದೆ ಎಂಬುದನ್ನು ನಾವು ತಿಳಿದಿರಬೇಕು.

ಕನ್ನಡದ ಆದಿಕವಿ ಪಂಪ; ಆತನೂ ವ್ಯಾಸನಿಗೆ ಋಣಿ. ಸಂಸ್ಕೃತದ ಮಹಾಭಾರತ ರಾಮಾಯಣ ಕಾವ್ಯಗಳು ಕನ್ನಡ ಭಾಷೆಗೆ ಮಾತ್ರವಲ್ಲ, ಅಖಿಲ ಭಾರತದ ಸಮಗ್ರ ಭಾಷಾ ಸಾಹಿತ್ಯಗಳೂ ಸ್ಫೂರ್ತಿಯ ಚಿಲುಮೆಗಳಾಗಿವೆ. 'ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ಸೂಕ್ತಿಗೆ ಸಮಾನವಾಗಿದೆ ಪಂಪನ 'ಆರಂಕುಶವಿಟ್ಟೊಡಂ ನೆನೆವುದೆನ್ನಮನಂ ಬನವಾಸಿದೇಶಮಂ ಎಂಬ ತಾಯ್ನಾಡಿನ ಕುರಿತಾದ ಅಭಿಮಾನ ಪದ್ಯ ಪಂಕ್ತಿ. ಉತ್ತರದ ಹಸ್ತಿನಾವತಿಯ ರಾಜಪುತ್ರನನ್ನು ದಕ್ಷಿಣದ ಸುಂದರ ಬನವಾಸಿ ಪ್ರದೇಶಕ್ಕೆ ಉದ್ದೇಶಪೂರ್ವಕ ಯಾತ್ರೈಸಿದ ಪಂಪಕವಿ, ತನ್ನ ಹುಟ್ಟಿದ ನೆಲ ಬನವಾಸಿಯ ಬಗ್ಗೆ ಎಂತಹ ಅವಿಸ್ಮರಣೀಯ ಪದ್ಯಪಂಕ್ತಿಗಳಿಂದ ಕೃತಜ್ಞತೆ ವ್ಯಕ್ತಪಡಿಸಿದನೆಂಬುದು ಪ್ರಶಂಸನೀಯ. ಹೆತ್ತ ತಾಯಿ ಮತ್ತು ಹೊತ್ತ ನೆಲದ ಕುರಿತು ಮಾನವ ಸಂತತಿಗೆ ಅನಾದಿ ಕಾಲದಿಂದಲೂ ಇರುವ ಅಪರಿಮಿತವಾದ ಇಂತಹ ಅಭಿಮಾನ ಪ್ರಪಂಚದಾದ್ಯಂತ ಕಂಡುಬರುವ ಚಿರಸ್ಮರಣೀಯ ಸಂಸ್ಕೃತಿಯಾಗಿದೆ.

ಈ ಜೀವವನ್ನು ವಿಧಿ ಬೆನ್ನಟ್ಟುತ್ತಿರಲು, ನವಮಾಸ ತನ್ನ ಪುಣ್ಯೋದರದಲ್ಲಿ ಮಂಗಳಾಶ್ರಯವಿತ್ತು, ಸಾಕಿ ಸಲಹಿ ಒಂದು ಶುಭಮುಹೂರ್ತದಲ್ಲಿ ಪ್ರಥಮ ಸೂರ್ಯಕಿರಣವನ್ನೂ ವಿಶ್ವದ ವಿಶಾಲ ಕ್ಷೇತ್ರವನ್ನೂ ತೋರಿಸಿದ ತಾಯಿ, ಆಯುಷ್ಕಾಲಪರ್ಯಂತ ಅನ್ನಾಹಾರ ಆಶ್ರಯಗಳನ್ನಿತ್ತು, ಉಳಿಸಿ ಬೆಳೆಸಿದ ತಾಯ್ನೆಲ ಇವೆರಡಕ್ಕಿಂತ ಮೇಲಾದುದು ಯಾವ ಜೀವಿಗೂ ಬೇರೊಂದಿಲ್ಲವೆಂದು ಕೃತಜ್ಞಾಪೂರ್ವಕವಾದ ಸಂಸ್ಕೃತಿ ಭಾರತದ ಸಕಲ ಭಾಷಾ ಸಾಹಿತ್ಯಗಳಲ್ಲಿಯೂ ತೋರುವಂತೆ ಕನ್ನಡದಲ್ಲಿಯೂ ಪ್ರಕಾಶಿತವಾಗಿದೆ.

ಪಂಪ ಭಾರತದ ಕಥಾ ನಾಯಕ ಅರ್ಜುನ. 'ವಿಕ್ರಮಾರ್ಜುನ ವಿಜಯ'ವೆಂದೇ ಆ ಕಾವ್ಯದ ನಾಮದೇಯ; ಆದರೆ ಆ ಕಾವ್ಯವನ್ನು ಮೆಚ್ಚಿ ಓದಿದವರಿಗೆ ಆತನ ಹಿತೋಕ್ತಿ–ಇಡೀ ಭಾರತವನ್ನು ಓದಿದ ನಂತರ ರಸಗ್ರಾಹಿಗಳು ನೆನಪಿಟ್ಟುಕೊಳ್ಳಬೇಕಾದ ಮಹಾವ್ಯಕ್ತಿ ಅರ್ಜುನನಲ್ಲ, ಯುಧಿಷ್ಠಿರನಲ್ಲ; ಶ್ರೀಕೃಷ್ಣನೂ ಅಲ್ಲ; ಕರ್ಣನೊಬ್ಬನೇ ಎಂದು. "ನೆನೆಯದಿರಣ್ಣ ಭಾರತದೊಳಿಂ ಪೆರರಾರುಮನೊಂದೆಚಿತ್ತದಿಂನೆನೆವೊಡೆ ಕರ್ಣನಂ ನೆನೆಯ" ಎಂದು ಪಂಪ ಸಾರಿ ಹೇಳುತ್ತಾನೆ. ಕರ್ಣನ ಸತ್ಯ, ಕರ್ಣನ ತ್ಯಾಗ, ಕರ್ಣನ ಶೌರ್ಯ ಇಂತಹ ಉತ್ತಮ ಶ್ಲಾಘ್ಯ ಗುಣಗಳ ಕಾರಣ, 'ಕರ್ಣರಸಾಯನ ಮಲ್ತೆ ಭಾರತಂ' ಎಂದು ಘೋಷಿಸುತ್ತಾನೆ. ಕುಂತೀಪುತ್ರನಾಗಿ ಜನಿಸಿದ್ದರೂ, ಅಜ್ಞಾತಕುಲಗೋತ್ರನಾಗಿ ಲೋಕದ ದೃಷ್ಟಿಯಲ್ಲಿ ಹೀನವಂಶಜನೆಂದೇ ಬೆಳೆದ ಆತನಲ್ಲಿದ್ದ ಸತ್ಯ ತ್ಯಾಗ ಧೈರ್ಯ ಸಾಹಸಾದಿ ಗುಣರಾಶಿ ಅನ್ಯತ್ರ ಯಾರಲ್ಲಿಯೂ ಕಂಡುಬರಲಿಲ್ಲವೆಂಬ ಕಾರಣದಿಂದ ಪಂಪ ಈ ಪ್ರಶಂಸೆ ಮಾಡಿದ್ದಾಗಿದೆ. ರಾಜಸಭೆಯಲ್ಲಿ ಕರ್ಣನನ್ನು ಕುಲಹೀನನೆಂದು ಜರೆದಾಗ, "ಕುಲವೆಂದುದುಂಟೆ ಶೀಲಮೆ ಕುಲಮಲ್ಲದೆ" ಎಂಬ ಉತ್ತರದ ಮಾತೂ ಪಂಪನ ಕಾವ್ಯದಲ್ಲಿದೆ. ಜಾತಿ ಕುಲಗಳ ಶ್ರೇಷ್ಠತೆಯ ಹೆಸರಲ್ಲಿ, ನವನಾಗರಿಕ ಯುಗವೆಂಬೀ ಕಾಲದಲ್ಲಿಯೂ ಹಲವರು ವಿಜೃಂಭಿಸುತ್ತಿರುವಾಗಲೂ, ಸಾಮಾಜಿಕ ಅನೈಕ್ಯ ತೋರಿಸುತ್ತಿರುವಾಗ, ಆ ಪ್ರಾಚೀನ ಕಾಲದಲ್ಲಿಯೇ, ಎಂತಹ ಉದಾತ್ತವಾದ ಆದರ್ಶ ಕನ್ನಡ ಕವಿಗಳಲ್ಲಿತ್ತು ಎಂಬುದನ್ನು ನಾವು ಕಂಡುಕೊಳ್ಳಬಹುದು. ಮುಂದಿನ ಶಿವಶರಣರೂ 'ಜಾತಿಹೀನನ ಮನೆಯ ಜ್ಯೋತಿ ತಾ ಹೀನವೇ? ಎಂದು ಹಾಕಿದ ಸವಾಲು ಇದೇ ಉದಾತ್ತ ಚಿಂತನೆಯದು. ಇಂದು ಸಾಹಿತ್ಯದಲ್ಲಿ ಸಾರಿ ಹೇಳಲಾಗುತ್ತಿರುವ ದಲಿತ ಪ್ರಜ್ಞೆ ಪಂಪನ ಕಾಲದಿಂದಲೇ ಕನ್ನಡದಲ್ಲಿ ಇತ್ತೆಂದು ಅಭಿಮಾನಪಡಬಹುದು.

'ನಿರಂಕುಶಾಃ ಕವಯಃ' ಎಂಬುದು ಪ್ರಾಚೀನ ಸೂಕ್ತಿ; ಅದನ್ನು ಹಿಂದಿನ ಕನ್ನಡ ಕವಿಗಳೂ ಸಾಧಿಸುತ್ತಾ ಬಂದಿದ್ದಾರೆ. ರೂಢಿಯಲ್ಲಿರುವ ಮತೀಯ ಅಂಧಾಚಾರಿಗಳಿಗೆ ಸ್ವತಂತ್ರಮತಿಗಳಾದ ಕವಿಗಳು ಕೆಲವೊಮ್ಮೆ ವಿರೋಧವಾಗಿ ಬರೆದಾಗ ಗಲಭೆ ಗೊಂದಲ ಸೃಷ್ಟಿಸುವ ಹವ್ಯಾಸ ಎಲ್ಲೆಡೆಯೂ ಇರುವಂತೆ ಕನ್ನಡದಲ್ಲಿಯೂ

ಕಂಡುಬರುತ್ತದೆ. ಕಾವ್ಯದಲ್ಲಿ, ಕತೆಗಳಲ್ಲಿ, ಬರವಣಿಗೆಯಲ್ಲಿ – ಕಾವ್ಯಾಂಶ ಸಾಹಿತ್ಯಾಂಶ ಇದೆಯೋ ಎಂಬುದು ಸಾಹಿತ್ಯಾಸಕ್ತರ ವಿಷಯವಾಗಿರಬೇಕೇ ಹೊರತು ಸಂಪ್ರದಾಯಶರಣತೆಯ ಅಂಧವಿಶ್ವಾಸವಲ್ಲ. ಕಣ್ವರ್ಷಿಯ ಆಶ್ರಮದಲ್ಲಿ ಶಕುಂತಲೆಯ ಪ್ರಥಮ ದರ್ಶನದಲ್ಲಿಯೇ ಪ್ರೇಮಾಸಕ್ತನಾದ ದುಷ್ಯಂತನೂ, ಅಂತೆ ದುಷ್ಯಂತನಿಗೊಲಿದ ಶಕುಂತಲೆ ಕೂಡ ಗಾಂಧರ್ವ ವಿವಾಹ ಮಾಡಿಕೊಂಡ ನಂತರ, ದುಷ್ಯಂತ ಆಕೆಯನ್ನು ಅರಮನೆಗೆ ಕರೆಸಿಕೊಳ್ಳದೆ ಮರೆತಿದ್ದಾಗ, ಗರ್ಭಿಣಿಯಾದ ಆಕೆಯನ್ನು ಕಣ್ವರ್ಷಿ ಹಸ್ತಿನಾವತಿಗೆ ಕಳುಹಿಸಿಕೊಟ್ಟರೂ ದುಷ್ಯಂತ ಬುದ್ಧಿಪೂರ್ವಕವಾಗಿ ಮದುವೆಯಾದ ವಿಷಯ ಮರೆತಂತೆ ವರ್ತಿಸಿದ ಎಂಬ 'ಪದ್ಮಪುರಾಣ' ಮಹಾಭಾರತಗಳ ಮೂಲಕಥೆಗೆ ದೂರ್ವಾಸ ಶಾಪವೃತ್ತಾಂತವನ್ನು ಕಾಳಿದಾಸ ಕವಿ ನಾಟಕದಲ್ಲಿ ತಂದು ದುಷ್ಯಂತ ಶಕುಂತಲೆಯರ ಶೀಲಗಳಿಗೆ ಕುಂದುಬರದಂತೆ ಚಿತ್ರಿಸಿದ್ದಾನೆ. ಹೀಗೆ ಪುರಾಣ ಕಥೆಯನ್ನು ಕಾಳಿದಾಸ ವ್ಯತ್ಯಾಸ ಮಾಡಿದನೆಂದು ಯಾವ ವಿಮರ್ಶಕರೂ ಟೀಕಿಸಿಲ್ಲ; ಮಾತ್ರವಲ್ಲ ಆ ಬದಲಾವಣೆಯನ್ನು ಪ್ರಶಂಸಿಸಿದ್ದಾರೆ. ಅದಕ್ಕಿಂತಲೂ ಹೆಚ್ಚಿನ ಬದಲಾವಣೆ ನಾಗಚಂದ್ರ ಕವಿಯ ರಾಮಚಂದ್ರ ಚರಿತ ಪುರಾಣದಲ್ಲಿ ಬರುತ್ತದೆ. ರೂಢಿಯ ರಾಮಾಯಣ ಕಥೆಗೆ ಅಲ್ಲಿ ತೀರಾ ವ್ಯತ್ಯಾಸಗಳಿವೆ. ಅದರಲ್ಲಿ ರಾವಣನನ್ನು ವಧಿಸುವುದು ಶ್ರೀರಾಮನಲ್ಲ; ಲಕ್ಷ್ಮಣ. ನಾರದ ಮಹರ್ಷಿಯೂ ಸೀತಾ ಸ್ವಯಂವರದಲ್ಲಿ ಓರ್ವ ಉಮೇದುವಾರ. ಸುಗ್ರೀವಾದಿಗಳು ಕಪಿಗಳಲ್ಲ, ಕಪಿಧ್ವಜರು. ಶ್ರೀರಾಮನ ತಾಯಿ ಕೌಸಲ್ಯೆಯಲ್ಲ, ಅಪರಾಜಿತೆ. ಸುಮಿತ್ರೆಗೆ ಲಕ್ಷ್ಮಣನೊಬ್ಬನೇ ಮಗ. ಶತ್ರುಘ್ನನ ತಾಯಿ ಸುಭದ್ರೆ–ಈ ಬದಲಾವಣೆ ಜಿನರಾಮಾಯಣಕ್ಕೆ ಅನುಗುಣವಾಗಿರಬಹುದು. ಆದರೆ ಇತರ ಪಂಥಗಳ ಕನ್ನಡ ಕಾವ್ಯ ರಸಿಕರು, ರಾಮಚಂದ್ರಚರಿತ ಪುರಾಣವನ್ನು ಅದರಲ್ಲಿರುವ ಉತ್ತಮ ಸಾಹಿತ್ಯಾಂಶಕ್ಕಾಗಿ ಮೆಚ್ಚಿದ್ದಾರೆ ಹೊರತು ಸಂಪ್ರದಾಯ ಶರಣತೆಯಿಂದ ವಿರೋಧಿಸಲಿಲ್ಲ. ಇಂದು, ಕನ್ನಡದಲ್ಲಿ, ಭಾರತದಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಅಲ್ಲಲ್ಲಿ ಸ್ವತಂತ್ರ ಮತಿಗಳಾದ ಧೀಮಂತ ಲೇಖಕರ ಕೃತಿಗಳ ಕುರಿತು ಕಂಡು ಬರುವ ಪ್ರತಿಭಟನೆಗಳು ಸ್ವಾಗತಾರ್ಹವಲ್ಲ. ಕಾವ್ಯದಲ್ಲಿ, ಗ್ರಂಥದಲ್ಲಿ, ಸಾಹಿತ್ಯಾಂಶ ಇದೆಯೋ ಎನ್ನುವುದು ಮುಖ್ಯವಲ್ಲದೆ ಇತರ ವಿಚಾರಗಳು ಅಸಂಗತ ಸಾಂಪ್ರದಾಯಿಕ ವಿಶ್ವಾಸಗಳಿಗೆ ಭಿನ್ನವಾಗಿದ್ದರೂ, ಆ ಗ್ರಂಥದಲ್ಲಿ ವಿಚಾರಪ್ರಚೋದಕವೂ, ಕಲ್ಯಾಣಕಾರಕವೂ ಆದ ಸಂಸ್ಕೃತಿಯ ಹೊಳಪು ಇದ್ದಲ್ಲಿ ಆ ಸತ್ಕೃತಿ ಬೆಳಕಿಗೆ ಬಂದೇ ಬರುತ್ತದೆ.

ಹಳೆಗನ್ನಡ, ಸಂಸ್ಕೃತಿ ಸಮೃದ್ಧ ಸಾಹಿತ್ಯದ ನಂತರ ನಡುಗನ್ನಡ ಸಾಹಿತ್ಯ ಸೃಷ್ಟಿಯಾಯಿತು. ಕಾಲಕ್ಕೆ ತಕ್ಕಂತೆ ಮನುಷ್ಯರ ವೇಷ ಭೂಷಣಾದಿಗಳಲ್ಲಿ ವ್ಯತ್ಯಾಸವಾಗುವಂತೆ, ಭಾಷೆಯಲ್ಲಿಯೂ, ಭಾಷಾ ಸಾಹಿತ್ಯ ರೂಪಗಳಲ್ಲಿಯೂ ಬದಲಾವಣೆ ಬಂದಿದೆ. ಕಾವ್ಯ ಪದ್ಯ ಚಂಪೂ ರೀತಿಯಲ್ಲಿದ್ದುದು, ನಡುಗನ್ನಡ ಕಾಲದಲ್ಲಿ ಷಟ್ಪದಿ, ತ್ರಿಪದಿ, ವಚನ, ರಗಳೆ, ದಾಸಸಾಹಿತ್ಯ ರೂಪಗಳಲ್ಲಿ ಪ್ರಕಟಗೊಂಡಿತು,

ಸಂಸ್ಕೃತ ಛಂದೋರೂಪಗಳ ಬದಲಾಗಿ ಕನ್ನಡ ಛಂದಸ್ಸುಗಳು ಪ್ರಚಲಿತವಾದುವು. ಲಕ್ಷ್ಮೀಶನ ಜೈಮಿನಿ ಭಾರತ, ರಾಘವಾಂಕನ ಹರಿಶ್ಚಂದ್ರ ಕಾವ್ಯ, ಹರಿಹರನ ರಗಳೆ, ಕುಮಾರವ್ಯಾಸ, ಕುಮಾರ ವಾಲ್ಮೀಕಿ, ಚಾಟುವಿಠಲ ಈ ಕವಿಗಳ ಭಾರತ ರಾಮಾಯಣ ಭಾಗವತ ಕೃತಿಗಳು, ಬಸವಣ್ಣ ಚೆನ್ನಬಸವಣ್ಣ, ಅಕ್ಕಮಹಾದೇವಿ ಇಂಥವರ ವಚನಗಳು, ಪುರಂದರದಾಸ ಕನಕದಾಸಾದಿ ಸಂತವರೇಣ್ಯರ ದಾಸಸಾಹಿತ್ಯ – ಇವೆಲ್ಲವನ್ನೂ ಕನ್ನಡದ ಸಮಗ್ರ ಕನ್ನಡ ಜನತೆ ಆತ್ಮೀಯತೆಯಿಂದ ಸ್ವಾಗತಿಸಿತು; ಮೆಚ್ಚಕೊಂಡಿತು. ಹಿಂದೆ ಐಗಳ ಮಠಗಳಲ್ಲಿಯೂ ಶಿಷ್ಯರಿಗೆ ಲಕ್ಷ್ಮೀಶಭಾರತವನ್ನು ಅಶ್ವಧಾಟಿಯಲ್ಲಿ ಕಲಿಸುತ್ತಿದ್ದರು. ವೈದಿಕ ಸಾಹಿತ್ಯದಲ್ಲಿ ಶ್ರುತಿಸ್ಮೃತಿಗಳಲ್ಲಿ ಹೇಳಿದ ಉತ್ತಮ ಜೀವನದ ಸಂಸ್ಕೃತಿಗಳನ್ನು ಪ್ರಚಲಿತ ಸಮಾಜಕ್ಕೆ ಹೊಂದಿಕೆಯಾಗುವಂತೆ ಷಟ್ಪದಿಕಾರರು, ದಾಸಸಾಹಿತ್ಯಕಾರರು ಹೇಳಿ ಜನಮನವನ್ನು ವಿಕಾಸಗೊಳಿಸಿದರು. ಕುಮಾರವ್ಯಾಸ, ಕುಮಾರವಾಲ್ಮೀಕಿ, ಚಾಟುವಿಠಲರ ಭಾರತ ರಾಮಾಯಣ ಭಾಗವತ ಗ್ರಂಥಗಳು ಮನೆಮನೆಗಳಲ್ಲಿ ನಿತ್ಯ ಪಾರಾಯಣ ಗ್ರಂಥಗಳಾದುವು. ವಚನ ದಾಸಸಾಹಿತ್ಯಗಳೂ ಜನಪ್ರಿಯವಾದುವು. ಕರ್ನಾಟಕ ಸಂಗೀತ ಕಲೆಗೆ ಪುರಂದರ ದಾಸರ ಕೊಡುಗೆ ಅಪಾರ. ಕನ್ನಡ ನಾಡಿನಾದ್ಯಂತ ಜನಪ್ರಿಯವಾದ ಆ ಕಾಲದ ಇನ್ನೊಂದು ಸಾಹಿತ್ಯ ಪ್ರಕಾರ ಸರ್ವಜ್ಞನ ತ್ರಿಪದಿಗಳು. ಧೀಮಂತ ವಿರಾಗಿಯಾದ ಸರ್ವಜ್ಞ ಕರದಿ ಕಪ್ಪರವಿಡಿದು ತ್ರಿಪದಿಗಳನ್ನು ಹಾಡುತ್ತಾ ಜನತೆಯನ್ನು ಎಚ್ಚರಿಸಿದನು. ಕನ್ನಡ ಸಾಹಿತ್ಯ ಸರಸ್ವತಿ, ಕೊರಳುಬಾಗುವ ಗಟ್ಟಿ ಆಭರಣಗಳ ಸಂಕಲೆಗಳ ಮಾಲೆಯಿಂದ ಬಿಡುಗಡೆ ಹೊಂದಿ ಸರಳ ಸೌಂದರ್ಯದ ನಿರ್ಮಲ ಮೂರ್ತಿಯಾಗಿ ಶೋಭಿಸಿದ ಕಾಲವದು.

ನಡುಗನ್ನಡ ಹಾಗೂ ಪ್ರಾಚೀನ ಕನ್ನಡ ಸಾಹಿತ್ಯ ಕಾಲಗಳಲ್ಲಿ, ಕನ್ನಡದಲ್ಲಿ ನಾಟಕ ರಚನೆ ತೀರಾ ವಿರಳ. 'ರತ್ನಾವಳೀ' ಸಂಸ್ಕೃತ ನಾಟಕದ ಆಧಾರದಿಂದ ರಚಿತವಾದ 'ಮಿತ್ರವೃಂದಾ ಗೋವಿಂದ' ಎಂಬ ಒಂದೇ ಕೃತಿ ಕಾಣಸಿಗುತ್ತದೆ; ಇದು ಒಂದು ಲೋಪವೆಂದು ಕಂಡುಬಂದರೂ, ನಾಟಕ ಪ್ರಯೋಗದ ಸ್ವಾರಸ್ಯಾನುಭವ ನಾಡಿನಾದ್ಯಂತ ತುಂಬಾ ಪ್ರಚಾರವಿರುವ ಜಾನಪದ ಸಾಹಿತ್ಯ ಕಲಾ ನೃತ್ಯಗಳಿಂದ ಕನ್ನಡಿಗರಿಗೆ ಒದಗುತ್ತಿತ್ತು. ಮುಖ್ಯವಾಗಿ ಯಕ್ಷಗಾನ ಬಯಲಾಟಗಳು, ಭೂತನರ್ತನಗಳು, ಡೋಲುಕುಣಿತಗಳು, ಡೊಂಬರ ಆಟಗಳು ಇಂತಹ ಅಸಂಖ್ಯ ಲೀಲಾ ವಿನೋದಗಳು ಕನ್ನಡ ನಾಡಿನಲ್ಲಿ ಎಲ್ಲೆಡೆಗಳಲ್ಲೂ ಹೆಚ್ಚು ಪ್ರಚಾರದಲ್ಲಿದ್ದ ಕಾರಣ, ಹಳ್ಳಿ ಹಳ್ಳಿಗಳಲ್ಲಿ ಇವುಗಳ ಪ್ರದರ್ಶನಗಳು ನಿತ್ಯ ನಡೆಯುತ್ತಾ ಇದ್ದುದರಿಂದ ನಾಟಕದಂತಹ ಪ್ರತ್ಯೇಕ ಮನರಂಜನೆಯ ಕಡೆಗೆ ಅಂದು ಕನ್ನಡ ಜನರು ಗಮನಹರಿಸಲಿಲ್ಲವೆಂದು ಹೇಳಬಹುದು. ಭಾಗವತಿಕೆ, ಜಾಗಟೆ, ಚೆಂಡೆ ಮದ್ದಳೆಗಳಿಂದ ವೇಷಭೂಷಣಗಳಿಂದ ಕೃತ, ತ್ರೇತ, ದ್ವಾಪರಾ ಯುಗದ ಕಥೆಗಳ ಚಿತ್ರಣದಿಂದ ಯಕ್ಷಗಾನ ಬಯಲಾಟ ಕನ್ನಡ ನಾಡಿನಲ್ಲಿ ಹೆಚ್ಚಿನ ಕಡೆಗಳಲ್ಲಿ ಮನರಂಜನೆಯೊಂದಿಗೆ

ನೀತಿ ಧರ್ಮ ಸತ್ಯಗಳ ಸಂಸ್ಕೃತಿಯ ಬೋಧನೆಯನ್ನೂ ನೀಡುತ್ತಿತ್ತು. ಅಬಾಲವೃದ್ಧರು, ಮಹಿಳೆಯರೂ ಮಹನೀಯರೂ ಅದರಿಂದ ಆಕರ್ಷಿತರಾಗುತ್ತಿದ್ದರು. ಇದೇ ಮುಖ್ಯ ಕಾರಣವಾಗಿ ಅಂದು ಕನ್ನಡ ಜನತೆ ನಾಟಕಗಳ ಕುರಿತು ಗಮನ ಸಾಕಷ್ಟು ಹರಿಸಲಿಲ್ಲವೆಂದೂ ಲೇಖಕರೂ ನಾಟಕ ರಚನೆಯ ಕಡೆಗೆ ಹೆಚ್ಚು ಮನಸ್ಸು ಮಾಡಲಿಲ್ಲವೆಂದೂ ತಿಳಿಯಬಹುದಾಗಿದೆ.

ಈ ಲೋಪ ಮುಂದೆ ಪರಿಹಾರವಾಯಿತು; ಅದಕ್ಕೆ ಮುಖ್ಯ ಪ್ರೇರಣೆ ಮಹಾರಾಷ್ಟ್ರದ ನಾಟಕ ಕಂಪೆನಿಗಳು. ಕನ್ನಡ ನಾಡಿನಲ್ಲಿಯೂ ಮಹಾರಾಷ್ಟ್ರ ನಾಟಕ ಕಂಪೆನಿಗಳು ಜನಾಕರ್ಷಣೆ ಮಾಡುತ್ತಿರುವುದನ್ನು ತಿಳಿದು ಕನ್ನಡಿಗರೂ ಆಸಕ್ತರಾದರು. ಬಸವಪ್ಪ ಶಾಸ್ತ್ರೀಗಳಂತಹ ವಿದ್ವಾಂಸರು ಶಾಕುಂತಳವೇ ಮೊದಲಾದ ಸಂಸ್ಕೃತ ನಾಟಕಗಳನ್ನೂ ಕೆಲವು ಸ್ವತಂತ್ರ ನಾಟಕಗಳನ್ನೂ ರಚಿಸಿದರು; ಅವು ಕನ್ನಡ ನಾಡಿನ ರಂಗಸ್ಥಳಗಳಲ್ಲಿ ಪ್ರಯೋಗಗೊಂಡವು. ಮೈಸೂರು ನಾಟಕ ರಂಗಭೂಮಿಯ ಕೇಂದ್ರವಾಯಿತು. ಜನಬೆಂಬಲ ದೊರಕಿತು. ವರದಾಚಾರ್, ಗುಬ್ಬಿವೀರಣ್ಣ, ಸುಬ್ಬಯ್ಯ ನಾಯ್ಡು, ನಾಗೇಂದ್ರ ರಾವ್ ಪ್ರಭೃತಿ ಕಲಾವಿದರು, ನಟರು ಉತ್ತಮ ರೀತಿಯಲ್ಲಿ ನಾಟಕಗಳನ್ನು ಪ್ರದರ್ಶಿಸಿ ಜನಮನವನ್ನು ರಂಜಿಸಿದರು. ಪೌರಾಣಿಕ, ಐತಿಹಾಸಿಕ ಕಥೆಗಳಲ್ಲದೆ ಸಾಮಾಜಿಕ ಕಥೆಗಳನ್ನೂ ನಾಟಕ ರೂಪವಾಗಿ ಪ್ರದರ್ಶಿಸಿ ಜನಮನ್ನಣೆ ಗಳಿಸಿದರು. ಮುಂದೆ ರಂಗಭೂಮಿಗಳಲ್ಲಿ ಪ್ರದರ್ಶನಕ್ಕೆ ಮಾತ್ರವಲ್ಲ, ಸಾಹಿತ್ಯಾಸಕ್ತಿ ಬೆಳೆಸುವ ಕೆಲವು ನಾಟಕಗಳೂ ರಚಿತವಾದುವು; ಶಾಲೆಗಳಲ್ಲಿ ವರ್ಧಂತ್ಯುತ್ಸವ ಸಂದರ್ಭ ಏಕಾಂಕಗಳು ಪ್ರದರ್ಶಿತವಾದುವು. ಕನ್ನಡ ಸಂಘ ಸಂಸ್ಥೆಗಳಲ್ಲಿಯೂ ಪ್ರದರ್ಶಿಸುತ್ತಾ ಬಂದಿವೆ. ಇದರಿಂದ ಇಂದು ಕನ್ನಡದಲ್ಲಿ ಹಿಂದೆ ಇದ್ದ ನಾಟಕ ರಚನೆಯ ಅಭಾವ ಸಂಪೂರ್ಣ ಇಲ್ಲವಾದುದು ಒಂದು ಗಣನೀಯ ಪ್ರಗತಿಯಾಗಿದೆ.

ಹೊಸಗನ್ನಡ ಸಾಹಿತ್ಯದಲ್ಲಿ ಆಂಗ್ಲಭಾಷಾಭ್ಯಾಸ ಹಾಗೂ ಪಾಶ್ಚಾತ್ಯ ಸಂಸ್ಕೃತಿಗಳ ಪ್ರಭಾವ ಕಂಡು ಬಂದರೂ ನಮ್ಮ ಮೂಲ ಭಾರತೀಯ ಭಾಷಾ ಸಾಹಿತ್ಯಾಂಶಗಳ ತಳಹದಿ ಭದ್ರವಾಗಿಯೇ ಇರುವುದು ಗಣನೀಯ ಹಾಗೂ ಪ್ರಶಂಸನೀಯ. ಆಂಗ್ಲಭಾಷಾ ಪ್ರಭಾವ ಕನ್ನಡಕ್ಕೆ ಮಾತ್ರವಲ್ಲ, ಭಾರತದ ಸಮಸ್ತ ಭಾಷೆಗಳಲ್ಲೂ ಸಾಕಷ್ಟು ಬೀರಿದೆ. ಅದು ಅನಿವಾರ್ಯವೂ ಆಗಿತ್ತಲ್ಲದೆ, ಹೊಸ ವಿಚಾರಸರಣಿಯ ನವನಾಗರಿಕತೆ ಜನತೆಗೆ ಆಕರ್ಷಕವೂ ಆಗಿರುವುದರಿಂದ ಸ್ವಾಗತಾರ್ಹವಾಯಿತು. ಗೋವಿಂದ ಪೈ, ಪಂಜೆ, ಬಿ. ಎಂ. ಶ್ರೀ, ಕುವೆಂಪು, ಬೇಂದ್ರೆ ಇಂತಹ ಆಧುನಿಕ ಸಾಹಿತ್ಯವರೇಣ್ಯರು ಹಲವರು ಈ ಪ್ರಭಾವಕ್ಕೆ ಒಳಗಾದರೆ, ಇವರೆಲ್ಲರೂ ಕನ್ನಡದ ಭಾರತೀಯತೆಯ ಅಂತಸ್ಸತ್ವವನ್ನು ಸರಿಯಾಗಿ ಉಳಿಸಿಕೊಂಡವರು. ಬೇಂದ್ರೆ, ತನ್ನ ಕಾವ್ಯರಚನಾಶೈಲಿಯನ್ನು ಹೆಚ್ಚಾಗಿ ಜಾನಪದ ಶೈಲಿಗೆ ಅನುಗುಣವಾದ ಭಾಷೆ ಛಂದೋರೂಪಗಳಲ್ಲಿ ಪ್ರಕಟಗೊಳಿಸಿದರೂ, ಅಲ್ಲಿನ ಭಾವನೆಗಳ ವೇದೋಪನಿಷತ್‌ಗಳ ತತ್ವಗಳಿಂದಲೂ

ಶೋಭಾಯಮಾನವಾಗಿವೆ. ಗೋಂವಿಂದ ಪೈ ಕ್ರಿಶ್ಚಿಯನ್ ಪುರಾಣವಾದ ಬೈಬಲಿನಿಂದ 'ಗೊಲ್ಗೋಥಾ'ದಂತಹ ಖಂಡಕಾವ್ಯ ರಚಿಸಿ ಯಶಸ್ಸು ಗಳಿಸಿದರು; ಋಗ್ವೇದದ ಕಥೆಯನ್ನೂ ಬುದ್ಧ ಜಾತಕದ ಕಥೆಯನ್ನು ಕೂಡ ಎತ್ತಿಕೊಂಡು, ಶ್ರೀಕೃಷ್ಣಾವಸಾನದ ಕಥೆಯ ಕಾವ್ಯವನ್ನೂ ರಚಿಸಿ ಪ್ರಸಿದ್ಧರಾದರು. ಇಂದಿನ ಹಲವು ಭಾವಗೀತೆಗಳು, ಆದಿಯ ಮಾನವನು ಪ್ರಥಮ ಸೂರ್ಯ ಕಿರಣವನ್ನು ಕಂಡಾಗ ಉಲ್ಲಸಿತನಾಗಿ ತನ್ನ ಬುದ್ಧಿಯನ್ನು ಬೆಳಗಿಸೆಂದು ಸೂರ್ಯದೇವನಲ್ಲಿ ಮಾಡುವ ಪ್ರಾರ್ಥನಾ ಪದ್ಯದಂತಿದೆ. ಚುಟುಕುಗಳು ಹಿಂದಿನ ಹಿತೋಪದೇಶ ಶ್ಲೋಕಗಳ ಹಾಗೂ ಆ ಮೇಲಿನ ಸರ್ವಜ್ಞ ತ್ರಿಪದಿಗಳ ಮುಂದುವರಿದ ರೂಪದಂತಿರುವುವು. ಆಧುನಿಕ ವಿಚಾರಗಳು ಇವುಗಳಲ್ಲಿ ತುಂಬಿರುವುದಾದರೂ ಭರ್ತೃಹರಿಯ ಹಿತೋಪದೇಶ, ಸರ್ವಜ್ಞ ತ್ರಿಪದಿ ಕೂಡಾ ಅಂದಿನ ಸಾಮಾಜಿಕ ಸ್ಥಿತಿಗತಿಗಳನ್ನೇ ತಿಳಿಸಿವೆ. ನಿಸರ್ಗದ ಚೆಲುವಿಗೆ, ಸಾಮಾಜಿಕ ನೋವು ನಲಿವುಗಳಿಗೆ ಸ್ಪಂದಿಸುವ ಕವಿಹೃದಯದ ಗಾನವಾಣಿ ಹಿಂದಿನ ಕಾಲದಂತೆ ಇಂದಿನ ಕವಿತೆಗಳಲ್ಲೂ, ಸಾಮಾಜಿಕ ಘಟನೆಗಳ ಚಿತ್ರಣ ಹಿಂದಿನ ಚಂಪೂ ಹಾಗೂ ನಾಟಕಗಳಂತೆ ಇಂದಿನ ಕತೆ ಕಾದಂಬರಿ ನಾಟಕಗಳಲ್ಲೂ ಕಾಲಾನುಗುಣವಾಗಿ ಚಿತ್ರಿತವಾಗುತ್ತಾ ಇದೆ. ಜೀವನದ ಭಾವನೆಗಳ ತುಮುಲವನ್ನು, ನಿಸರ್ಗದ ಚೆಲುವನ್ನು ಹೊರಗೆಡಹುವ ಭಾವಗೀತೆ ಪ್ರಕೃತಿ ಗೀತೆಗಳು ಇಂದು ಜನಪ್ರಿಯವಾಗಿವೆ. ಹೊಸಗನ್ನಡದ ನವೋದಯ ಕಾಲದಿಂದ ಇಂದಿನ ನವ್ಯ ದಲಿತ ಸಾಹಿತ್ಯ ಕಾಲದ ತನಕವೂ ಲಘು ಕವನಗಳು ಕನ್ನಡದಲ್ಲಿ ಹೆಚ್ಚಾಗಿ ಬಂದಿವೆ. ಅಲ್ಲಲ್ಲಿ ಖಂಡ ಕಾವ್ಯಗಳೂ, ಕಥನ ಕವನಗಳೂ ಶೋಭಿಸಿವೆ. ಆಸೆ ಭರವಸೆ ಮೂಡಿಸುವ ಮಹಾಕಾವ್ಯಗಳೂ ಬಂದಿರುವುದು ಅಭಿಮಾನಪಡತಕ್ಕ ಸಂಗತಿ.

ಸಣ್ಣ ಕತೆ, ಕಾದಂಬರಿ, ಶಿಶು ಗೀತೆಗಳು ಹೊಸಗನ್ನಡ ಸಾಹಿತ್ಯದ ವಿಶೇಷ ಕೊಡುಗೆ. ಚಾರಿತ್ರಿಕವಾಗಿ ಪಂಜೆಯವರೇ ಸಣ್ಣ ಕತೆಗಳ ಪಿತಾಮಹರಾದರೂ, ಆ ಸಾಹಿತ್ಯ ಪ್ರಕಾರವನ್ನು ಸಮೃದ್ಧವಾಗಿಸಿದವರು ಮಾಸ್ತಿಯವರು. ಪಂಜೆ, ಹೊಯ್ಸಳ, ರಾಜರತ್ನಂ ಅಂಥವರಿಂದ ಶಿಶು ಗೀತೆಗಳು ಜನಪ್ರಿಯವಾದುವು. ಗಳಗನಾಥರ ಕಾದಂಬರಿಗಳು, ವೆಂಕಟಾರ್ಯರ ಬಂಗಾಳೀ ಅನುವಾದಿತ ಕಾದಂಬರಿಗಳು ಕನ್ನಡದ ಆದಿಯ ಜನಪ್ರಿಯ ಕಾದಂಬರಿ ಕೃತಿಗಳು. ಮುಂದೆ ಕುವೆಂಪು, ಕಾರಂತ, ಅನಕೃ, ಕಟ್ಟೀಮನಿ, ತರಾಸು, ನಿರಂಜನ ಹಾಗೂ ಹಲವು ಮಹಿಳಾ ಲೇಖಕಿಯವರೂ ಕನ್ನಡದಲ್ಲಿ ಕಾದಂಬರಿಗಳನ್ನು ರಚಿಸಿ ಮನ್ನಣೆ ಗಳಿಸಿದರು. ಗುಲ್ವಾಡಿ ವೆಂಕಟರಾಯರು, ಬೋಳಾರ ಬಾಬು ರಾಯರು, ಎಂ. ಎಸ್. ಪುಟ್ಟಣ್ಣನವರು. ಸಾಮಾಜಿಕ ಕಾದಂಬರಿಗಳ ಲೇಖಕರಲ್ಲಿ ಮೊದಲಿಗರು. ಈ ಸಾಹಿತ್ಯ ಪ್ರಕಾರಕ್ಕೆ ಕಾದಂಬರಿ ಎಂಬ ನಾಮಕರಣಕ್ಕೆ ಕಾರಣ ಸಂಸ್ಕೃತದ ಬಾಣಕವಿಯ ಕಾದಂಬರಿ ಕೃತಿ. ಆದರೆ ಬಾಣನ ಕಾದಂಬರಿ ಶೈಲಿಗೂ ಇಂದಿನ ಕನ್ನಡ ಕಾದಂಬರಿ ಶೈಲಿಗೂ ಅಜಗಜಾಂತರ

ವ್ಯತ್ಯಾಸವಿದೆ. ಇಂದಿನ ಕನ್ನಡ ಕಾದಂಬರಿಗಳು ಆಂಗ್ಲ ಭಾಷೆಯ ನೋವೆಲ್ ರೀತಿಯವು. ಸಂಸ್ಕೃತದಲ್ಲಿ ಬಾಣಕವಿ ಕಾದಂಬರಿ ಹೆಸರಿನ ಗದ್ಯ ಕಾವ್ಯ ರಚಿಸಿ ಪ್ರಸಿದ್ಧನಾದನು. ಅದರಲ್ಲಿ ಕಾದಂಬರೀ ಎಂಬುದು ಕಥಾನಾಯಕಿಯ ಹೆಸರು. ಆ ಹೆಸರಿನಿಂದ ಬಾಣನ ಕೃತಿ ಜನಪ್ರಿಯವಾಯಿತು. ಕನ್ನಡದಲ್ಲಿ ಹೊರತು, ಭಾರತದ ಇತರ ಭಾಷೆಗಳಲ್ಲಿ ನೋವೆಲ್ ಮಾದರಿಯ ಈ ಸಾಹಿತ್ಯ ಪ್ರಕ್ಕಾರಕ್ಕೆ ಕಾದಂಬರಿ ಎಂಬ ನಾಮಕರಣವಿಲ್ಲ. ಬಾಣನ ಕಾದಂಬರಿ ಶೈಲಿಗೂ, ಕನ್ನಡದ ಇಂದಿನ ಕಾದಂಬರಿ ಶೈಲಿಗೂ ತುಂಬಾ ವ್ಯತ್ಯಾಸವಿದೆ. ಬಾಣನ ಕಾದಂಬರಿಯಲ್ಲಿ ಯಾವುದಾದರೊಂದು ವರ್ಣನೆ ಬಂದರೆ, ಅದು ಪುಟ ಪುಟಗಳ ತನಕ ವಿಸ್ತಾರವಾಗಿರುತ್ತದೆ. ಉಪಮಾ ರೂಪಕಾದಿ ಅಲಂಕಾರಗಳು ಅಲ್ಲಿ ಸಮೃದ್ಧವಾಗಿವೆ. ಇಂದಿನ ನಮ್ಮ ಕನ್ನಡ ಕಾದಂಬರಿಗಳಲ್ಲಿ ಆ ವೈಶಿಷ್ಟ್ಯ ತೀರಾ ಕಡಿಮೆ. 'ಕಾದಂಬರಿ' ಎಂಬ ಹೆಸರಿನ ಸಾಹಿತ್ಯ ಪ್ರಕಾರದ ವಿಶ್ಲೇಷಣೆಗಾಗಿ ಈ ವ್ಯತ್ಯಾಸಗಳನ್ನು ಉಲ್ಲೇಖಿಸಿದರೂ, ಇಂದು ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳೆ ಹೆಚ್ಚಿನ ಜನಪ್ರಿಯತೆ ಗಳಿಸಿವೆ. ಸಣ್ಣ ಕತೆ, ಕಾದಂಬರಿಗಳ ರಚನೆ ಮಾತ್ರವಲ್ಲ, ಸಾಹಿತ್ಯದ ನಾನಾ ಪ್ರಕಾರಗಳಲ್ಲಿ ಮಂಗಳೂರು, ಬೆಂಗಳೂರು, ಮೈಸೂರು, ಧಾರವಾಡ, ಕಾರವಾರ – ಹೀಗೆ ಕರ್ನಾಟಕದ ನಾನಾ ಭಾಗಗಳಲ್ಲಿ, ಕನ್ನಡದ ಕವಿ ಕತೆಗಾರ ಕಾದಂಬರಿಕಾರ ಪ್ರಬಂಧಕಾರ ಲೇಖಕರು ಹಾಗೂ ಕಾರ್ಯಕರ್ತರು ಕನ್ನಡಕ್ಕಾಗಿ, ಕನ್ನಡ ಸಾಹಿತ್ಯಾಭಿವೃದ್ಧಿಗಾಗಿ ಎಡೆಬಿಡದೆ ದುಡಿಯುತ್ತಾ ಇರುವುದು ಹೆಮ್ಮೆ ಪಡತಕ್ಕ ಸಂಗತಿ. ಹಿಂದಿನ ಮತ್ತು ಇಂದಿನ ಅಂತಹ ಹಲವು ಮಹನೀಯರ ಸಂಘ ಸಂಸ್ಥೆಗಳ ಪರಿಚಯವಿದ್ದರೂ ಆ ಹೆಸರುಗಳನ್ನು ಉದ್ಧರಿಸಿ ಹೇಳುವುದು ಅಭಿಮಾನಕರವಾದರೂ ಭಾಷಣದ ವಿಸ್ತಾರದ ಭಯದಿಂದ ಸರ್ವತ್ರ ಸಮೃದ್ಧವಾಗಿ ನಡೆಯುತ್ತಿರುವ ಕನ್ನಡದ ಈ ಮಹಾತ್ಕಾರ್ಯದ ಕಾರ್ಯಕರ್ತರೆಲ್ಲರಿಗೂ ಸಾಮೂಹಿಕವಾಗಿ ವಂದನೆ ಅಭಿನಂದನೆ ಸಲ್ಲಿಸಬೇಕಾಗಿದೆ.

ಇಂದು ಮುದ್ರಣ ಯುಗ; ಹಿಂದಿನಂತೆ ಹಲಗೆ ಬಳಪ ಬಳಸಿಯೂ ತಾಳೆಗರಿಯಲ್ಲಿ ಕಂಠದಿಂದ ಅಕ್ಷರಗಳನ್ನು ಕೆತ್ತಿಯೂ ಗ್ರಂಥಗಳನ್ನೂ ರಚಿಸಬೇಕಾದ ಕಷ್ಟದ ಕೆಲಸ ಇಂದಿಲ್ಲ; ಮುದ್ರಣದಲ್ಲಿಯೂ ಮಹತ್ಕ್ರಾಂತಿಯಾಗಿದೆ. ತಾಸಿನೊಳಗೆ ಲಕ್ಷಾಂತರ ಪ್ರತಿಗಳು ಮುದ್ರಣಗೊಳ್ಳುತ್ತವೆ. ಹಾಗಾಗಿ ಕನ್ನಡದಲ್ಲಿಯೂ ಇತರ ಭಾಷೆಗಳಂತೆ ಕತೆ ಕಾದಂಬರಿ ಕಾವ್ಯಗಳು ಎಲ್ಲವನ್ನೂ ಲೇಖಕರು ಶಾಯಿ ಲೇಖನಿಗಳಲ್ಲಿ ತ್ವರಿತಗತಿಯಿಂದ ಬರೆದು ಸಹಸ್ರ ಸಂಖ್ಯೆಗಳಲ್ಲಿ ಮುದ್ರಿಸಿಕೊಡಬಹುದು. ಪುಸ್ತಕಗಳಂತೆ ದೈನಿಕ, ವಾರಿಕ, ಪಾಕ್ಷಿಕ, ಮಾಸಿಕ ಪತ್ರಿಕೆಗಳೂ ಸಾಕಷ್ಟು ಪ್ರಕಟವಾಗಿ ವಾಚಾನಾಭಿರುಚಿ ಹೆಚ್ಚಿದೆ; ಹೆಚ್ಚು ಪುಸ್ತಕಗಳೂ ಪತ್ರಿಕೆಗಳೂ ಎಲ್ಲೆಲ್ಲೂ ಪ್ರಕಟಗೊಳ್ಳುತ್ತಿದ್ದು ಅಧಿಕ ಸಂಖ್ಯೆಯಲ್ಲಿ ಓದುಗರೂ ಮುಂದೆ ಬರುತ್ತಿದ್ದಾರೆ. ಇದರಿಂದ ಜನತೆ ತಮ್ಮ ಜ್ಞಾನಭಂಡಾರವನ್ನು ದಿನದಿಂದ ದಿನಕ್ಕೆ ಹೆಚ್ಚಿಸುತ್ತಿದ್ದಾರೆ. ವಿಷಾದಕರವಾದ

ವಿಷಯವೆಂದರೆ ಕನ್ನಡದಲ್ಲಿ ಪುಸ್ತಕಗಳನ್ನೂ ಪತ್ರಿಕೆಗಳನ್ನೂ ಕೊಂಡು ಓದುವವರ ಸಂಖ್ಯೆ ಇತರ ಕಡೆಗಳಿಗಿಂತ ತೀರಾ ಕಡಿಮೆ. ಲೇಖನ ವ್ಯವಸಾಯದಲ್ಲಿ ತೊಡಗಿದವರು, ಆ ವೃತ್ತಿಯಿಂದ ಜೀವನ ನಡೆಸಲು ಸಾಧ್ಯವಾದರೆ, ಆವ್ಯವಸಾಯವನ್ನು ಅವರು ಮತ್ತಷ್ಟು ಉತ್ಸಾಹದಿಂದ ಮುಂದುವರಿಸಬಹುದು; ಅದೇ ರೀತಿ ಪತ್ರಿಕಾ ಪ್ರಕಾಶಕರೂ, ಓದುಗರ ಸಂಖ್ಯೆ ಹೆಚ್ಚಿದರೆ ಉತ್ತಮ ರೀತಿಯಲ್ಲಿ ಇನ್ನಷ್ಟು ಶ್ರೇಷ್ಠ ಪತ್ರಿಕೆಗಳನ್ನು ಹೊರತರಬಹುದು. ಇಂತಹ ಸದಾವಕಾಶದ ಸತ್ಫಲವು ಇಂದು ಕನ್ನಡ ಲೇಖಕ ಪ್ರಕಾಶಕರಿಗೆ ಪತ್ರಿಕಾ ವೃತ್ತಿಯವರಿಗೆ ಕಡಿಮೆಯಾಗಿರುವುದು ಕನ್ನಡ ಸಾಹಿತ್ಯ ಸಂಸ್ಕೃತಿ ಸಂವರ್ಧನೆಗೆ ಹಿಂದೇಟು ಕೊಡುವಂತಿದೆ ಎಂಬೀ ವಿಷಯವನ್ನು ಗಂಭೀರವಾಗಿ ಪರಿಗಣಿಸಬೇಕು.

ಕನ್ನಡ ರಾಜ್ಯ ಸಮಸ್ತ ಭಾರತದಲ್ಲಿಯೇ ವಿಶಾಲವಾದ ರಾಜ್ಯಗಳಲ್ಲಿ ಒಂದು; ಕನ್ನಡ ಭಾಷೆಯು ವಿಸ್ತಾರ ಪ್ರದೇಶಗಳಲ್ಲಿ ಹಬ್ಬಿದೆ. ಹೀಗಿದ್ದರೂ ಬರವಣಿಗೆಯ ಉದ್ಯೋಗದಿಂದ ಜೀವನ ನಿರ್ವಹಿಸುವುದು ಕನ್ನಡ ಲೇಖಕರಿಗೂ, ಪತ್ರಿಕೆಗಳನ್ನು ಪ್ರಕಟಿಸಿ ಬಾಳುವೆ ಮಾಡುವುದು ಕನ್ನಡ ಪತ್ರಿಕಾ ವ್ಯವಸಾಯಿಗಳಿಗೂ ಕಷ್ಟಕರವಾಗಿರುವುದು ಒಂದು ದುರ್ದೈವ. ಭಾರತ ದೇಶದಲ್ಲಿ ಕಡಿಮೆ ವಿಸ್ತಾರವಿರುವ ರಾಜ್ಯಗಳಲ್ಲಿ ಕೇರಳ ಒಂದಾಗಿದೆ; ಸಹಜವಾಗಿ ಜನಸಂಖ್ಯೆ ಕೂಡ ಕನ್ನಡಕ್ಕಿಂತ ಕಡಿಮೆಯೇ ಇರಬೇಕಷ್ಟೆ; ಆದರೂ ಕೇರಳದಲ್ಲಿ ಪ್ರಕಟವಾಗುವ 'ಮಲೆಯಾಳ ಮನೋರಮಾ' ಪತ್ರಿಕೆ ಇಂದು ಎಪ್ಪತ್ತು ಲಕ್ಷಕ್ಕಿಂತಲೂ ಅಧಿಕ ಸಂಖ್ಯೆಯಲ್ಲಿ ಪ್ರತಿದಿನವೆಂಬಂತೆ ಪ್ರತಿಗಳು ಮುದ್ರಣಗೊಂಡು ಯಶಸ್ವಿಯಾಗಿ ಮಾರಾಟವಾಗುತ್ತಿದೆ. ಕನ್ನಡದಲ್ಲಿ ಒಂದೆರಡು ಲಕ್ಷಗಳಿಗೆ ಮೀರಿದುವು ಎಷ್ಟಿವೆ? ಸುಮಾರು ಮೂವತ್ತು ವರ್ಷಗಳ ಹಿಂದೆಯೇ ನಾನು ಸಂದರ್ಶಿಸಿದ ಮಲೆಯಾಳದ ಕವಿಯೊಬ್ಬರು, ತನ್ನ ಕವನ ಸಂಗ್ರಹಗಳ ಮಾರಾಟದ ಹಾಗೂ ಕವಿತೆಗಳ ರಾಯಲ್ಟಿಯ ಹಣದಿಂದಲೇ ಜೀವನ ನಿರ್ವಹಿಸುತ್ತಿರುವುದಾಗಿ ದೃಢ ವಿಶ್ವಾಸವುಳ್ಳವರಾಗಿದ್ದರು. ಅಷ್ಟು ವರ್ಷಗಳ ಹಿಂದೆ ಬಿಟ್ಟು, ಇಂದಿಗೂ ಕೂಡ ಯಾವ ಕನ್ನಡದ ಮಹಾಕವಿಯೂ ಈ ಭರವಸೆ ಪಡುವುದು ಸಾಧ್ಯವಿಲ್ಲ.

ಈ ಸಮಸ್ಯೆಯನ್ನು ಕನ್ನಡ ಹಿತಚಿಂತಕರು ರಚನಾತ್ಮಕ ರೀತಿಯಲ್ಲಿ ಪರಿಹರಿಸಬೇಕು. ಆ ಬಗ್ಗೆ ಒಂದು ಸಲಹೆ ತಮ್ಮೆಲ್ಲರ ಮುಂದಿಡಲು ಅನುಮತಿ ಯಾಚಿಸುತ್ತೇನೆ. ಕೇರಳದಲ್ಲಿ ಕಾರ್ಮಿಕರೆಂಬವರೂ ಪುಸ್ತಕ, ಪತ್ರಿಕೆಕೊಂಡು ಓದುತ್ತಾರೆ; ಕನ್ನಡಿಗರು ವಾಚನಾಲಯಗಳಿಂದಲೋ ಪುಸ್ತಕ, ಭಂಡಾರಗಳಿಂದಲೋ ಪುಸ್ತಕ ಓದುವವರು ಹೆಚ್ಚು; ಇನ್ನು ಕೆಲವರು, ಸ್ವತಃ ಕೊಂಡು ಓದಲು ಶಕ್ತರಿದ್ದರೂ ಬೇರೆಯವರಿಂದ ಕೇಳಿ ಪಡೆದು ಓದಿ ಮರಳಿಸುತ್ತಾರೆ. ಈ ಪ್ರವೃತ್ತಿ ನಿಲ್ಲಬೇಕು; ಅದಕ್ಕೆ ಒಂದು ಸೂಚನೆಯೆಂದರೆ, ಪ್ರತಿಮನೆಯಲ್ಲಿಯೂ ಅವರವರ ಅಭಿರುಚಿಗೆ

ತಕ್ಕಂತಹ ವಿಷಯಗಳ ಕನ್ನಡ ಪುಸ್ತಕಗಳನ್ನು ಪಡೆದು ಒಂದೊಂದು ಚಿಕ್ಕ ಪುಸ್ತಕ ಭಂಡಾರ ಪ್ರಾರಂಭಿಸಬೇಕು. ಒಂದೊಂದು ಕನ್ನಡ ದೈನಿಕ, ವಾರಿಕ, ಪಾಕ್ಷಿಕ ಮಾಸಿಕಗಳನ್ನಾದರೂ ಪ್ರತಿ ಮನೆಗೂ ತರಿಸಬೇಕು. ಕರ್ನಾಟಕದ ರಾಜ್ಯದಲ್ಲಿ ಇಂತಹ ಒಂದು ಸಾಹಿತ್ಯ ಸಾಂಸ್ಕೃತಿಕ ವ್ಯವಸ್ಥೆ ಕೈಗೊಳ್ಳಲು ಸಾಕಷ್ಟು ಮಂದಿ ಶ್ರೀಮಂತರೂ ಧೀಮಂತರೂ ಇದ್ದಾರೆ. ಈ ರಚನಾತ್ಮಕ ಸಾಹಿತ್ಯಿಕ ಆಂದೋಲನವನ್ನು ಇಂದು ಕೈಗೊಳ್ಳ ತಕ್ಕದ್ದಿದೆ; ಆದ್ದರಿಂದ ಕನ್ನಡಿಗರ ಜ್ಞಾನ ಭಂಡಾರ, ಸಂಸ್ಕೃತಿ ಸಂಪತ್ತು ಹೆಚ್ಚುವುದಲ್ಲದೆ, ಇಡೀ ಕುಟುಂಬದ ಸಂಸ್ಕೃತಿಯ ಸಮುನ್ನತಿಯೂ ಸಾಧಿತವಾಗುವುದು. ಇಂತಹ ಒಂದು ಜನಾಂದೋಲನದ ಈ ಸಮ್ಮೇಳನದ ಸುಮುಹೂರ್ತ ಕಾಲದಿಂದಲೇ ಪ್ರಾರಂಭವಾಗಲಿ. ಸಮ್ಮೇಳನ ಸಭಾ ಮಂಟಪ ಮತ್ತು ಶೋಭಿಸುತ್ತಿರುವ ಪುಸ್ತಕ ಮಾರಾಟದ ಮಳಿಗೆಗಳಲ್ಲಿರುವ ಉತ್ತಮ ಗ್ರಂಥಗಳೆಲ್ಲವೂ ಮಾರಾಟವಾಗುವ ಚಾರಿತ್ರಿಕ ದಾಖಲೆ ಇಲ್ಲಿಂದಲೇ ತೊಡಗಲಿ ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಇದು ಪರೋಪಕಾರ ತ್ಯಾಗವಲ್ಲ; ಆತ್ಮೋದ್ಧಾರ, ಕುಟುಂಬ ಸಂತಾನದ ಏಳಿಗೆಯ ಮಾರ್ಗ. ಈ ಸಂದರ್ಭದಲ್ಲಿ ಕರ್ನಾಟಕ ಸರಕಾರದೊಡನೆಯೂ ನನ್ನ ವಿನಂತಿಯೊಂದಿದೆ; ಕನ್ನಡದಲ್ಲಿ ಪ್ರಕಟವಾಗುವ ಉತ್ತಮ ಸಾಹಿತ್ಯ ಕೃತಿಗಳನ್ನು ರಾಜ್ಯದ ಎಲ್ಲಾ ಪುಸ್ತಕ ಭಂಡಾರಗಳಿಗೂ ಸರಕಾರ ಒದಗಿಸುವ ವ್ಯವಸ್ಥಿತ ಕಾರ್ಯಕ್ರಮ ಕೈಗೊಳ್ಳಬೇಕು. ನನ್ನ ಈ ಸೂಚನೆಗಳು ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಪ್ರತ್ಯಕ್ಷವಾಗಿಯೇ ಸಂಬಂಧಿಸಿದವುಗಳಾದುದರಿಂದ ಸಮಸ್ತರೂ ಸಂಪೂರ್ಣ ಮನಸ್ಸಿನಿಂದ ಸಹಕರಿಸುವಂತಾಗಲು ಒಂದು ನೈತಿಕ ಆಂದೋಲನ ಪ್ರಾರಂಭಿಸ ತಕ್ಕದ್ದಿದೆ. ಅದರ ಯಶಸ್ವಿಗೆ ಇಂದು ಇಲ್ಲಿಯೇ ಪ್ರತಿಜ್ಞಾಬದ್ಧರಾಗಿ ನಾಡು - ನುಡಿಗಳ ಏಳಿಗೆಯ ಪವಿತ್ರ ಕಾರ್ಯದಲ್ಲಿ ಪಾಲ್ಗೊಳ್ಳೋಣ ಎಂದು ಪ್ರಾರ್ಥಿಸುತ್ತೇನೆ.

ಈ ಕಾರ್ಯಕ್ರಮಕ್ಕೆ ಪೂರಕವಾಗಿ, ಪ್ರತಿ ನಗರ ಗ್ರಾಮಗಳಲ್ಲಿಯೂ, ಹೊಸ ಪುಸ್ತಕಗಳು ಬಿಡುಗಡೆಯಾದಾಗ ಆ ಪುಸ್ತಕಗಳ ಕುರಿತು ವಿಚಾರಗೋಷ್ಠಿಗಳನ್ನು ಸ್ಥಳೀಯ ಕನ್ನಡ ಸಂಘ ಸಂಸ್ಥೆಗಳು ಏರ್ಪಡಿಸಬೇಕು. ಸ್ವಾಸಂತ್ರ್ಯ ಪೂರ್ವ ಕಾಲದಲ್ಲಿ ಇಂತಹ ಉತ್ಸಾಹ ಅಲ್ಲಲ್ಲಿ ಹೆಚ್ಚಾಗಿ ಕಂಡುಬರುತ್ತಿತ್ತು. ಮಂಗಳೂರು, ಮೈಸೂರು, ಧಾರವಾಡ, ಬೆಂಗಳೂರು ಮೊದಲಾದ ಕಡೆಗಳಲ್ಲಿ ಮಿತ್ರ ಮಂಡಳಿ, ಗೆಳೆಯರ ಬಳಗ, ಕಿರಿಯರ ಪ್ರಪಂಚ, ಕರ್ನಾಟಕ ಸಂಘ ಇಂತಹ ಕನ್ನಡ ಸಂಸ್ಥೆಗಳು ಗೋಷ್ಠಿಗಳನ್ನು ಏರ್ಪಡಿಸುವುದು, ಅದರಲ್ಲಿ ಹೆಸರಾಂತ ಲೇಖಕರು ಭಾಗವಹಿಸುವುದೂ ನಡೆಯುತ್ತಿತ್ತು. ಆ ಸಂಸ್ಥೆಗಳು ಉತ್ತಮ ಪ್ರಾತಿನಿಧಿಕ ಕವನ, ಕಥೆ, ಪ್ರಬಂಧ ಸಂಗ್ರಹಗಳನ್ನೂ ಪ್ರಕಟಿಸುತ್ತಿದ್ದುವು. ಕಾಸರಗೋಡಿನ ಹಳ್ಳಿ ಪೆರಡಾಲ ಎಂಬಲ್ಲಿಯೂ ಪ್ರೇಮಕೂಟ ಎಂಬೊಂದು ಸಂಸ್ಥೆಯಿತ್ತು; ನನ್ನ ಪ್ರಥಮ ಸಂಕಲನ 'ಶ್ರೀಮುಖ'ವನ್ನು ಆ ಪ್ರೇಮಕೂಟವೇ ಪ್ರಕಟಿಸಿತು. ಇಂತಹ ಕನ್ನಡ ಸಂಸ್ಥೆಗಳಲ್ಲಿ

ಜರಗುವ ಸಾಹಿತ್ಯ ಚಟುವಟಿಕೆಗಳಿಗೆ ಸ್ಥಳೀಯ ಶಾಲಾ ಕಾಲೇಜುಗಳ ಅಧ್ಯಾಪಕರೂ ವಿದ್ಯಾರ್ಥಿಗಳೂ ಭಾಗವಹಿಸುವಂತೆ ಮಾಡುವುದು ಅತ್ಯಂತ ಯೋಗ್ಯ. ಅದರಿಂದ ಕನ್ನಡದ ಕೆಲಸ ಮತ್ತಷ್ಟು ಪ್ರಗತಿ ಹೊಂದಲು ಅವಕಾಶವಾಗುತ್ತದೆ. ಆಗಾಗ ಸ್ಥಳೀಯ ಕನ್ನಡ ಸಂಘಗಳಿಗೆ ಹಿರಿಯ ಕವಿ, ವಾಗ್ಮಿಗಳನ್ನು ಬರಮಾಡಿಸಿ ಅವರಿಂದ ಕವಿತಾವಾಚನ ಭಾಷಣಗಳನ್ನು ಏರ್ಪಡಿಸುವ ಕಾರ್ಯ ಕೈಗೊಳ್ಳಬೇಕು. ಇಂತಹ ಸಂಸ್ಥೆಗಳು, ವರಕವಿ ಬೇಂದ್ರೆಯವರನ್ನು ಗಮಕಿಶ್ರೇಷ್ಠ ಕೀರ್ತಿಶೇಷ ಕಾಳಿಂಗರಾಯರಂಥವನ್ನು ಆಮಂತ್ರಿಸಿ ಅವರಿಂದ ಕವನವಾಚನ ಮಾಡಿಸಿದಾಗ, ಅಂದು ಮೈಕ್ ಇಲ್ಲವಾಗಿದ್ದರೂ ಸಹಸ್ರ ಸಹಸ್ರ ಸಂಖ್ಯೆಯ ಸಭಾಸದರು ಮಂತ್ರಮುಗ್ಧರಾದಂತೆ ಸ್ವಾರಸ್ಯವನ್ನು ಅನುಭವಿಸುತ್ತಿದ್ದುದನ್ನು ನಾವು ಕಂಡು ಹಿಗ್ಗಿದ್ದೇವೆ. ಅಂತಹ ಉತ್ಸಾಹ ಇಂದಿಗೂ ಮುಂದಕ್ಕೂ ತುಂಬುವಂತೆ, ಅದರಿಂದಲೂ ನಾಡು ನುಡಿಗಳ ಅಭಿಮಾನ ವೃದ್ಧಿಸುವಂತೆ ಮಾಡುತ್ತಾ ಇರುವುದು ಸರಿಯಾದ ಸಾಹಿತ್ಯ ಸಂಸ್ಕೃತಿಯ ಸತ್‌ಪ್ರಚಾರ. ದೂರದರ್ಶನದ ಆಕರ್ಷಣೆಯ ದೆಸೆಯಿಂದ ಈ ಕಾರ್ಯಕ್ರಮಗಳು ಇಂದು ತುಸು ಕುಂಠಿತವಾಗಿದ್ದರೂ, ಮರಳಿ ಪುನರುಜ್ಜೀವಿಸುವಂತೆ ಮಾಡುವುದು ಅವಶ್ಯ. ಆಕಾಶವಾಣಿ, ದೂರದರ್ಶನಗಳೂ ಇಂತಹ ಕೆಲವೊಂದು ಉತ್ತಮ ಕಾರ್ಯಕ್ರಮಗಳನ್ನು ಒದಗಿಸುತ್ತಿವೆ; ಅವುಗಳೂ ಈ ದಿಸೆಯಲ್ಲಿ ಇನ್ನಷ್ಟು ಜಾಗೃತರಾಗಿರಲು ನಾಡಿನ ಜನತೆಯ ಸಂಸ್ಕೃತಿಯ ಸಮೃದ್ಧಿಗೆ ಸಹಾಯಕವಾದೀತು.

ಶತಮಾನಗಳ ತನಕವೂ ದಾಸ್ಯದ ಕೆಸರಲ್ಲಿ ಅದ್ದಿ ಹೋಗಿದ್ದ ನಮ್ಮ ರಾಷ್ಟ್ರ ಗಾಂಧೀಜಿಯಂತವರ ನೇತೃತ್ವದಲ್ಲಿ ಸ್ವತಂತ್ರವಾಯಿತು. ಸ್ವತಂತ್ರ್ಯ ಸಂಗ್ರಾಮದ ಆ ಸಂದರ್ಭದಲ್ಲಿಯೇ ಭಾಷಾಮೂಲವಾದ ರಾಜ್ಯ ರಚನೆಯಾಗಬೇಕೆಂಬ ಸಂಕಲ್ಪದಿಂದ ರಚಿಸಿದ ನೆಹರೂ ಸಮಿತಿ ರಚಿಸಿ ಅನುಕೂಲ ವರದಿಯೊಪ್ಪಿಸಿತು. ಆಡಳಿತ ಭಾಷೆ, ಕೋರ್ಟು ಕಛೇರಿಗಳ ವ್ಯವಹಾರ ಸಾಮಾನ್ಯ ಜನತೆಗೂ ಮನದಟ್ಟಾಗುವಂತೆ ಆಗಬೇಕೆಂದು ಭಾಷಾವಾರು ರಾಜ್ಯವಾಗಬೇಕೆಂದು ದೇಶಧುರೀಣರು ನಿರ್ಧರಿಸಿದರು. ಆಲೂರು ವೆಂಕಟರಯರು, ಕಡಪಾ ರಾಘವೇಂದ್ರರಾಯರು, ರಂಗರಾವ್ ದಿವಾಕರರು, ಕೋಟ ರಾಮಕೃಷ್ಣ ಕಾರಂತರು, ಜಿನರಾಜ ಹೆಗ್ಗಡೆಯವರು, ನಿಜಲಿಂಗಪ್ಪನವರು ಇಂತಹ ರಾಷ್ಟ್ರನಾಯಕರೇ ಏಕೀಕರಣ ಮುಂದಾಳುಗಳೂ ಆದರು. ಇಂದಿಗೆ ಐವತ್ತು ವರ್ಷಗಳ ಹಿಂದೆ ದೇಶ ಸ್ವತಂತ್ರವಾಯಿತು. ದೇಶ ಧುರುಣರು ಸಮ್ಮತಿಸಿದಂತೆ ಭಾಷಾ ರಾಜ್ಯ ರಚನೆಯಾಗಲಿಲ್ಲವೆಂದು ಆಂಧ್ರದ ಪೊಟ್ಟಿ ಶ್ರೀರಾಮುಲು ಆತ್ಮ ಬಲಿದಾನವಿತ್ತರು. ಅದರಿಂದಾಗಿ, ಅ ಕೂಡಲೇ ಆಂಧ್ರ ಪ್ರಾಂತ ನಿರ್ಮಾಣವಾಯಿತು. ಅದೇ ವರ್ಷ ಕಾಸರಗೋಡಿನಲ್ಲಿ ಸೇರಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕದ ಹಿರಿಯ ನೇತಾರರೆಲ್ಲರೂ ಏಕಕಂಠದಿಂದ ಏಕೀಕರಣ ಆಗಲೇಬೇಕೆಂಬ ಘೋಷಣೆ

ಮಾಡಿದರು. ಕೇಂದ್ರ ಸರಕಾರ, ಫಜಲಾಲಿ ಆಯೋಗ ನೇಮಿಸಿ, ಅದರ ವರದಿಯಂತೆ ಸಮಸ್ತ ಭಾರತದಲ್ಲಿ ಭಾಷಾಮೂಲ ರಾಜ್ಯಗಳು ರಚಿತವಾದುವು; ಹತ್ತಾರು ಆಡಳಿತಗಳಲ್ಲಿ ಹರಿಹಂಚಿ ಹೋಗಿದ್ದ ಕರ್ನಾಟಕವೂ ಏಕೀಕೃತವಾಗಿ ಜನತೆಯ ಇಚ್ಛೆಗೆ ಮನ್ನಣೆ ದೊರೆತಂತಾಯಿತು.

ಸ್ವಾತಂತ್ರ್ಯ ಪಡೆದು ಐವತ್ತು ವರ್ಷಗಳೂ ರಾಜ್ಯದ ರಚನೆಯಾಗಿ ನಲವತ್ತು ವರ್ಷಗಳೂ ಆದುವು. ರಾಜಕೀಯವಾಗಿ ನಾವು ಸ್ವತಂತ್ರ ಭಾರತದ ಏಕೀಕೃತ ಕರ್ನಾಟಕದ ಪ್ರಜೆಗಳೆನಿಸಿದರೂ ಮಾನಸಿಕವಾಗಿ ಹಿಂದಿನ ಗುಲಾಮಗಿರಿಯ ಕೊಳೆಯನ್ನು ಸಂಪೂರ್ಣ ತೊಳೆದಿಲ್ಲ. ಈಗಲೂ ಆಂಗ್ಲ ಭಾಷಾ ವ್ಯಾಮೋಹವಿದೆ; ಆಂಗ್ಲಭಾಷಾ ಮಾಧ್ಯಮ ಶಾಲೆಗಳಿಗೆ ಬೇಡಿಕೆ ಹೆಚ್ಚುತ್ತಿದೆ. ಎಳೆಯ ಮಕ್ಕಳನ್ನು ಇಂತಹ ಶಾಲೆಗಳಿಗೇ ಕಳುಹಿಸುವರೇ ಅನೇಕರು ಉತ್ಸುಕರಾಗಿರುವರು. ಸ್ಪೆಲ್ಲಿಂಗ್ ಒಂದು, ಪದೋಚ್ಚಾರ ಇನ್ನೊಂದು ಅರ್ಥ ಬೇರೊಂದು. ಡಿ.ಒ.ಜಿ. ಡೋಗ್ ನಾಯಿ ಎಂಬೀ ರೀತಿಯ ಬೌದ್ಧಿಕ ಶ್ರಮದ ವಿದ್ಯಾಭ್ಯಾಸವನ್ನು ತಮ್ಮ ಮಕ್ಕಳಿಗೆ ಕೊಡಲು ಹೆತ್ತವರು ಆಗ್ರಹಪಡುವುದು ಆಭಾಸಕರವಾಗಿದೆ. ಹೊರಲಾರದ ಹೊರೆಯನ್ನು ಬರಿಸಿದರೆ. ಕುಸಿದುಬೀಳುವಂತೆ ಈ ಬೌದ್ಧಿಕ ಕಷ್ಟವನ್ನು ಎಳೆಯ ಮಕ್ಕಳಿಗೆ ನೀಡಿದಲ್ಲಿ ಮುಂದಿನ ಸಮಾಜ ಮಾನಸಿಕವಾಗಿ ದುರ್ಬಲಗೊಳ್ಳುವುದೆಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಅದರ ಬದಲು ಅವರವರ ಮಾತೃಭಾಷೆಯಲ್ಲಿಯೇ ವಸ್ತು ವಿಷಯಗಳ ಪರಿಚಯವಾದಲ್ಲಿ ಬುದ್ಧಿಯ ಬೆಳವಣಿಗೆ ಸಹಜವೂ ಸತ್ವಪೂರ್ಣವೂ ಆಗುವುದರಲ್ಲಿ ಸಂಶಯವಿಲ್ಲ. ಐದನೇಯ್ತು ತರಗತಿ ವರೆಗೆ ಅವರವರ ಮಾತೃಭಾಷೆಯಲ್ಲಿಯೇ, ಹತ್ತನೆಯ ತರಗತಿ ತನಕ ಮಾತೃ ಭಾಷೆ ಹಾಗೂ ರಾಜ್ಯ ಭಾಷೆಯಲ್ಲಿ ಮಕ್ಕಳಿಗೆ ಶಿಕ್ಷಣವಿತ್ತು ಆ ಮೇಲೆ ಅವರು ಇಷ್ಟಪಡುವ ಯಾವುದೇ ಭಾಷೆಯನ್ನಾದರೂ, ಸಂಸ್ಕೃತವೋ, ಹಿಂದಿಯೋ, ಇಂಗ್ಲೀಷೋ ಕಲಿಸುವುದು ಮಕ್ಕಳ ಮಾನಸಿಕ ದೈಹಿಕ ಪರಿಸ್ಥಿತಿಗೆ ಅನುಕೂಲವೂ ದೇಶದ ರಾಜ್ಯದ ಸಮುನ್ನತಿಗೆ ಯೋಗ್ಯವೂ ಆಗಿದೆ. ಈ ವಿಚಾರದಲ್ಲಿ ಜನಾಭಿಪ್ರಾಯವನ್ನು ಜಾಗೃತಗೊಳಿಸಿ ಸರಕಾರ, ಕಟ್ಟುನಿಟ್ಟಾದ ಕ್ರಮಕೈಗೊಳ್ಳುವಂತೆ ಮಾಡಿದಲ್ಲಿ ಮಾತೃಭಾಷೆ ರಾಜ್ಯಭಾಷೆಗಳ ಅಭಿವೃದ್ಧಿಯು ಸಮೃದ್ಧವಾಗಿ ಆಗುವುದು. ಆಡಳಿತದಲ್ಲಿ, ನ್ಯಾಯ ನೀತಿ ನಿಯಮಗಳಲ್ಲಿ ಸಮಸ್ತ ಜನತೆಯೂ ಪಾಲ್ಗೊಳ್ಳುವಂತಾಗಿ ಪ್ರಜಾಪ್ರಭುತ್ವ ಪದ್ಧತಿಗೆ ಕಳೆಗೊಡುವುದು. ನಾವು ಇನ್ನೂ ಇಂಗ್ಲಿಷ್ ಭಾಷೆಯ ವ್ಯಾಮೋಹದ ಮಾನಸಿಕ ಗುಲಾಮಗಿರಿಯಲ್ಲಿರುವುದು ತೀರಾ ಅಪಹಾಸ್ಯಕರ.

ಶಿಕ್ಷಣಕ್ಕೂ, ಸಾಹಿತ್ಯಕ್ಕೂ ಅವಿನಾಭಾವ ಸಂಬಂಧ. ಶಾಲಾ ಶಿಕ್ಷಣದ ಪ್ರಾರಂಭ ಹಂತದಲ್ಲಿಯೇ ವಿದ್ಯಾರ್ಥಿಗಳಿಗೆ ತಪ್ಪಿಲ್ಲದೆ ಓದಲು ಬರೆಯಲು ಕಲಿಸುವಲ್ಲಿ. ಅಧ್ಯಾಪಕರಿಗೆ ವಿಶೇಷ ಶ್ರದ್ಧೆ ವಹಿಸುವುದು. ಅದಕ್ಕೆ ಅಧ್ಯಾಪಕರ ಪಾಠ ಪ್ರವಚನ

ಮಾರ್ಗದರ್ಶನವಾಗಿರತಕ್ಕದ್ದು. ಹಿಂದೆ ಕೇವಲ ಐದನೆಯ ತರಗತಿವರೆಗೆ ಓದಿದವರಿಗೂ ಭಾಷಾಶುದ್ಧಿ, ಸಾಹಿತ್ಯಾಭಿರುಚಿ ಇದ್ದರೆ ಇಂದು ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿಯೂ ಅಷ್ಟಾಗಿ ಕಾಣಿಸುತ್ತಿಲ್ಲ. ಪಾಠ ಪುಸ್ತಕಗಳನ್ನೂ ಹೊರಲಾರದಷ್ಟು ಭಾರವಾಗಿಸುವ ಬದಲು ಎಷ್ಟು ಲಘು, ಸುಂದರ, ಆಕರ್ಷಕವಾಗಿ ಮಾಡಬಹುದೆಂಬುದನ್ನು ಪಠ್ಯ ಪುಸ್ತಕ ಸಮಿತಿ ಹಾಗೂ ಲೇಖಕರು ಗಂಭೀರವಾಗಿ ಯೋಚಿಸತಕ್ಕದ್ದಾಗಿದೆ. ಪಾಠಗಳೂ ದೇಶ, ಭಾಷೆ, ಮಾನವೀಯತೆಯ ಆತ್ಮೀಯಾಭಿಮಾನ ಹುಟ್ಟಿಸುವವುಗಳಾಗಿರಬೇಕು. ಮಕ್ಕಳು ಬೆಳೆಯುವ ಸುತ್ತಲ ವಾತಾವರಣದ ಪ್ರಕೃತಿ ಸೌಂದರ್ಯದ ಪ್ರಜ್ಞೆ ಉಂಟಾಗುವ ರೀತಿಯ ಪಾಠಗಳು ಸೇರುವುದೂ ಅಗತ್ಯ. ಆ ಮೂಲಕವೇ ಸಹಜವಾಗಿ ಭಾಷೇತರ ವಿಷಯಗಳಾದ ವಿಜ್ಞಾನ, ಸಮಾಜಶಾಸ್ತ್ರ, ಚರಿತ್ರೆ ಇವೂ ಅರ್ಥವಾಗುವಂತೆ ಮಾಡತಕ್ಕದ್ದು. ಗೋವಿನ ಕಥೆಯ ಪದ್ಯವನ್ನು ಹಾಡಿ ವಿವರಿಸುತ್ತಾ, 'ಸತ್ಯವೆಂಬುದೇ ತಾಯಿ ತಂದೆಯು, ಸತ್ಯವೆಂಬುದು ಬಂಧುವಳಗವು, ಸತ್ಯ ವಾಕ್ಯಕೆ ಮಿಕ್ಕಿ ನಡೆದರೆ ಮೆಚ್ಚನಾ ಜಗದೀಶನು' ಎಂದು ಹೇಳಿದಂತೆ ನಡೆದ ಪುಣ್ಯ ಕೋಟಿಯ ಸತ್ಯದ ನಡತೆಗೆ ಮೆಚ್ಚಿದ ಹುಲಿ ರಾಯನು, 'ಎನ್ನ ಒಡಹುಟ್ಟಿದವಳು ನೀನು, ನಿನ್ನ ಕೊಂದು ಏನ ಪಡೆವೆನು ಎನ್ನುತಾ ಹುಲಿರಾಯನಾಗಲೆ ತನ್ನ ಪ್ರಾಣವ ಬಿಟ್ಟಿತು' ಎಂದು ಅಧ್ಯಾಪಕರು ಹೇಳುವಾಗ ವಿದ್ಯಾರ್ಥಿಗಳು ತನ್ಮಯತೆಯಿಂದ ಮೈಮರೆಯುವರು. ಸತ್ಯಮಾರ್ಗದಲ್ಲಿ ನಡೆಯುವ ಸಂಸ್ಕಾರ ವಿದ್ಯಾರ್ಥಿಗಳಲ್ಲಿ ಉಂಟಾಗುತ್ತದೆ. ನುಣ್ಣಗೆ ಬಾನೊಳು ಬೆಣ್ಣೆ ಮುದ್ದೆಯ ಹಾಗೆ ಕಣ್ಣಿಗೆ ಕಾಣುವ ಹುಣ್ಣಿಮೆ ಚಂದ್ರನ, ತ್ಥಾರಮ್ಮಯ್ಯ ತಂದು ತೋರಮ್ಮಯ್ಯ' ಎಂಬೀ ರೀತಿಯ ಪ್ರಕೃತಿ ವರ್ಣನಾತ್ಮಕವಾದ ಹಾಡುಗಳೂ, 'ಇರಲೆನಗೆ ಕರಿಕನ್ನ ಉಣ್ಣಲು, ಬರಿಯ ನೆಲವಿರಲೆನಗೆ ಮಲಗಲು, ಇರದು ಚಿಂತೆಯು ತಾಯೆ, ನಿನ್ನುದರಲಿ ಜನಿಸುವುದೇ ಪರಮಭಾಗ್ಯವು ಎಂಬೀ ರೀತಿಯ ದೇಶಾಭಿಮಾನ ಪ್ರೇರೇಪಿಸುವ ಪದ್ಯಗಳು ವಿದ್ಯಾರ್ಥಿಗಳಲ್ಲಿ ಸಾಹಿತ್ಯ ಸಂಸ್ಕಾರಗಳನ್ನು ಉಂಟುಮಾಡುವುವು. ರಾಷ್ಟ್ರ ಸ್ವಾತಂತ್ರ್ಯಕ್ಕೆ ತ್ಯಾಗ ಮಾಡಿದ ತಿಲಕ, ಗಾಂಧಿ, ಸುಭಾಸ್, ಸರೋಜಿನಿ ದೇವಿ, ಉಳ್ಳಾಲದ ರಾಣಿ ಅಬ್ಬಕ್ಕ ಇಂಥವರ ಜೀವನ ಚರಿತ್ರೆಗಳು ಪಠ್ಯಗಳಲ್ಲಿ ಬಂದರೆ, ವಿದ್ಯಾರ್ಥಿಗಳಲ್ಲಿ ತಾಯ್ನಾಡಿನ ಕುರಿತು ಅಭಿಮಾನ ಉಂಟಾಗಿ, ತಾವೂ ನಾಡಿಗಾಗಿ ನಿಃಸ್ವಾರ್ಥ ಸೇವೆ ಸಲ್ಲಿಸಬೇಕೆಂಬ ಸ್ಫೂರ್ತಿ ಬರುವುದು.

ಇಡೀ ರಾಷ್ಟ್ರದಲ್ಲಿಯೇ ಇಂದಿನ ಉನ್ನತ ಶಿಕ್ಷಣ ವ್ಯವಸ್ಥೆ ಉತ್ತಮ ನಾಗರಿಕರಾಗಿ ಬದುಕುವುದಕ್ಕೆ ಸಹಾಯಕವಾಗಿಲ್ಲವೆಂಬುದು ಶೋಚನೀಯ. ಹತ್ತನೆಯ ತರಗತಿ ವರೆಗೆ ಎಲ್ಲರಿಗೂ ಸಮಾನ ವಿದ್ಯಾಭ್ಯಾಸವಿದ್ದರೆ, ಮುಂದೆ ಅವರವರ ಅಭಿರುಚಿಗೆ, ಅವರ ಮುಂದಿನ ಜೀವನಕ್ಕೆ ಅನುಗುಣವಾದ ಶಿಕ್ಷಣ ವ್ಯವಸ್ಥೆ ಏರ್ಪಟ್ಟರೆ ಮಾತ್ರ ಮುಂದಿನ ಯುವಜನಾಂಗ ಸಂತೃಪ್ತಿಯ ಸಂಸ್ಕಾರಪೂರ್ಣ ಜೀವನ ನಡೆಸಲು

ಅನುಕೂಲವಾದೀತು. ಅದರ ಬದಲು ಇಂದು ಹತ್ತನೆಯ ತರಗತಿಯ ನಂತರ ಪಿ.ಯು.ಸಿ. ಮತ್ತೆ ಬಿ.ಎ. ಮುಂದೆ ಎಂ. ಎ. ಈ ವ್ಯವಸ್ಥೆಯೇ ನಮ್ಮಲ್ಲಿದ್ದು ಪದವೀಧರ ಯುವಕರು ಹೆಚ್ಚಿನವರು ನಿರುದ್ಯೋಗಿಗಳಾಗಿ, ಅವರಲ್ಲಿ ಪ್ರಕೃತಿ ಸಹಜವಾಗಿರುವ ಯುವಚೈತನ್ಯವು ರಚನಾತ್ಮಕ ಕಾರ್ಯಗಳ ಕಡೆಗೆ ಹೋಗದೆ, ಕೆಲವೊಮ್ಮೆ ವಿಧ್ವಂಸಕ ಕಾರ್ಯಗಳಿಗೂ ಧುಮುಕುತ್ತಿರುವುದು ಸರ್ವಥಾ ಅವರ ತಪ್ಪಲ್ಲ. ಅವರಿಗಿತ್ತ ಇಂದಿನ ನಿರುದ್ಯೋಗೀ ಶಿಕ್ಷಣ ಪದ್ಧತಿಯ ಪರಿಣಾಮ. ಆಸಕ್ತಿ ಇದ್ದವರು, ಅರ್ಹತೆ ಇದ್ದವರು, ಇಂಜಿನಿಯರೊ, ಡಾಕ್ಟರರೋ ಆಗಲಿ. ಆದರೆ ಉಳಿದ ಎಲ್ಲರೂ, ಅವರವರಿಗೆ ಅನುಕೂಲವಾದ ವೃತ್ತಿಯನ್ನು ಕೈಕೊಂಡು ಸ್ವತಂತ್ರರಾಗಿ ಬದುಕುವ ಶಿಕ್ಷಣ ಪಡೆದಲ್ಲಿ ದೇಶದ ಏಳಿಗೆಯಾದೀತು. ಇದಕ್ಕೆ ಜಪಾನು ಉತ್ತಮ ಉದಾಹರಣೆ. ಸಕಲ ಸಾಮಾಗ್ರಿಗಳನ್ನೂ ಅವರೇ ಉತ್ಪತ್ತಿ ಮಾಡುವುದರೊಂದಿಗೆ, ಇಂದು ಆ ವಸ್ತುಗಳನ್ನು ವಿದೇಶಗಳಿಗೂ ಕಳುಹಿಸಿ, ಜಪಾನು ಶ್ರೀಮಂತ ರಾಷ್ಟ್ರವೆನಿಸಿದೆ. ಇಂತಹ ಒಂದು ವೃತ್ತಿಪರ ಶಿಕ್ಷಣ ಪದ್ಧತಿಯನ್ನು ಗಾಂಧೀಜಿ ತಿಳಿಸಿದ್ದರು; ನಾವಿಂದು ಎಲ್ಲವನ್ನೂ ಮರೆತು, ಹಿಂದಿನ ಬ್ರಿಟಿಷ್ ಪದ್ಧತಿಯ ಶಿಕ್ಷಣ ಕ್ರಮವನ್ನೇ ಅನುಸರಿಸಿ, ವಿದ್ಯಾವಂತರೆಂಬವರು ಅರ್ಜಿ ಹಿಡಿದುಕೊಂಡು ಚಾಕರಿ ಕೇಳುವ ಅರ್ಹತೆ ಪಡೆವ ಶಿಕ್ಷಣವನ್ನು ಮುಂದುವರಿಸಿರುವುದು ನಾಡಿನ ಅವನತಿಯಾಗಿದೆ; ಇದರಿಂದ ನಮ್ಮ ಸಂಸ್ಕೃತಿಗೆ ಧಕ್ಕೆಯೊದಗಿದೆ. ಉತ್ತಮ ಜೀವನ ವೃತ್ತಿ ದೊರಕುವ, ಆ ಮೂಲಕ ದೇಶ ಭಾಷೆಗಳ ಮೇಲೆ ಪ್ರತಿಯೊಬ್ಬರಿಗೂ ಅಭಿಮಾನ ಉಂಟಾಗುವ ಶಿಕ್ಷಣ ಕ್ರಮವನ್ನು ಪ್ರಯೋಗಕ್ಕೆ ತರುವಂತೆ ಜನತೆ ಎಚ್ಚರಗೊಳ್ಳಬೇಕು. ಇದು ಅತ್ಯಂತ ಅವಶ್ಯಕ ಹಾಗೂ ಶೀಘ್ರ ಪ್ರಯೋಗಕ್ಕೆ ಬರಬೇಕಾದ ಒಂದು ಮಹತ್ಕಾರ್ಯ. ಇದರಿಂದ ನಾಡು – ನುಡಿಗಳ ಏಳಿಗೆ ಸರ್ವಾಂಗೀಣವಾಗಿ ಆಗುವುದು ಎಂದು ನಾವು ತಿಳಿದುಕೊಳ್ಳಬಹುದು.

ಸ್ವಾತಂತ್ರ್ಯ ದೊರೆತ ಮೇಲೆ ಏಕೀಕರಣವಾದ ಈ ಅವಕಾಶದಲ್ಲಿ ಯಾವುದೇ ದೌರ್ಬಲ್ಯವನ್ನು ಕಿತ್ತೊಗೆಯುವ ಸಾಮರ್ಥ್ಯ ಕನ್ನಡಿಗರಲ್ಲಿ ಮೂಡಿಬರಬಹುದು ಎಂದು ನಾನು ಭರವಸೆಯುಳ್ಳವನು. "ಸಾಧುಗೆ ಸಾಧು, ಮಾಧುರ್ಯಂಗೆ ಮಾಧುರ್ಯಂ ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್" ಎಂಬ ಕನ್ನಡಿಗರ ಕುರಿತಾದ ಪ್ರಾಚೀನ ಶಾಸನದ ಉಲ್ಲೇಖದಂತೆ, ಕನ್ನಡಿಗರು ಜನ್ಮತಃ ಕೆಲವೊಂದು ಅರ್ಹತೆಯುಳ್ಳವರು; ಇಂದು ಮುಂಬಯಿ, ಮದ್ರಾಸು, ದೆಹಲಿ ಇಂತಹ ಕೇಂದ್ರ ನಗರಗಳಲ್ಲಿಯೂ ಸಂಘ ಸಂಸ್ಥೆಗಳನ್ನು ಸ್ಥಾಪಿಸಿ ಕನ್ನಡದ ಕೀರ್ತಿಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಅಲ್ಲಿನ ಅನ್ಯ ಭಾಷಿಕರೊಂದಿಗೆ ಸಮರಸವಾಗಿ ಬೆರೆತು ಕನ್ನಡತನ ಬೆಳೆಸಿಕೊಳ್ಳುತ್ತಿರುವುದು ಅಭಿನಂದನೀಯ. ಮುಂಬಯಿಗೆ ಹೋದಲ್ಲಿ ನಾವು ಕರ್ನಾಟಕ ರಾಜ್ಯದ ಒಂದು ನಗರಕ್ಕೆ ಹೋದಂತೆಯೂ ನಮಗನಿಸುತ್ತದೆ; ಅಷ್ಟು ಮಂದಿ ಕನ್ನಡಿಗರು, ಕನ್ನಡ ಸಂಸ್ಥೆಗಳು, ಪತ್ರಿಕೆಗಳೆಲ್ಲವೂ ಅಲ್ಲಿವೆ. ಅಲ್ಲಿ ಕನ್ನಡವನ್ನು ಅಭಿಮಾನದಿಂದ

ಅಭ್ಯಸಿಸುತ್ತಿದ್ದಾರೆ. ಕನ್ನಡ ವಿದ್ವಾಂಸರು, ಕವಿಗಳು, ಕತೆಗಾರರು, ಲೇಖಕರು ಬಹುಮಂದಿ ಅಲ್ಲಿರುವವರು. ಹೊರ ರಾಜ್ಯಗಳಲ್ಲಿ ಮಾತ್ರವಲ್ಲ ವಿದೇಶಗಳಲ್ಲಿಯೂ ಕನ್ನಡದ ಸಂಘ ಸಂಸ್ಥೆಗಳು ಚಟುವಟಿಕೆ ನಡೆಸುತ್ತಿವೆ. ಹೀಗೆ ದೇಶ ವಿದೇಶಗಳಲ್ಲಿ ಕನ್ನಡ ಬಾವುಟವನ್ನು ಎತ್ತಿ ಹಿಡಿದಿರುವ ಕನ್ನಡಿಗರನ್ನು ನಾವು ಮನಸಾ ಅಭಿನಂದಿಸಬೇಕು. ಕರ್ನಾಟಕ ಸರಕಾರವೂ ಪ್ರೋತ್ಸಾಹಿಸಬೇಕು. ಕನ್ನಡ ಸಾಹಿತ್ಯ ಪರಿಷತ್ತು ಅಲ್ಲೆಲ್ಲಾ ಸದಸ್ಯರನ್ನು ನೊಂದಾಯಿಸುವುದಲ್ಲದೆ ವಿಶೇಷ ಘಟಕಗಳನ್ನು ಸ್ಥಾಪಿಸುವ ಮಲಕವೂ ಸಂಪರ್ಕ ಸಂವರ್ಧನೆ ಮಾಡತಕ್ಕದ್ದು ಅತ್ಯಗತ್ಯ.

ಕನ್ನಡ ನಾಡು-ನುಡಿಗಳ ಪ್ರಗತಿಗೆ ಕನ್ನಡ ಸಾಹಿತ್ಯ ಪರಿಷತ್ತು ಇಷ್ಟು ವರ್ಷಗಳಿಂದಲೂ ನಿರಂತರ ಪ್ರಯತ್ನ ಮಾಡಿ ಸಾಧನೆಯ ಸಫಲತೆ ಪಡೆದಿದೆ. ಸ್ವಾತಂತ್ರ್ಯಪೂರ್ವದಲ್ಲಿ ಹಾಗೂ ಏಕೀಕರಣಕ್ಕಿಂತ ಮೊದಲು ಭಿನ್ನ ಭಿನ್ನ ಆಡಳಿತಗಳಲ್ಲಿ ಕರ್ನಾಟಕ ಛಿದ್ರ ಛಿದ್ರವಾಗಿ ಹಂಚಿ ಹೋಗಿದ್ದರೂ ಇಂದು, ನಾವೆಲ್ಲರೂ ಒಂದೇ ಕನ್ನಡ ತಾಯಿಯ ಮಕ್ಕಳು ಎಂಬ ಭಾವನೆ ಬಂದಿದೆ. 1915ನೆಯ ಇಸವಿಯಲ್ಲಿ ಸ್ಥಾಪಿತವಾದೀ ಸಂಸ್ಥೆ ಅಂದಿನಿಂದ ಇಂದಿನವರೆಗೂ ಈ ಮಹಾತ್ಕಾರ್ಯವನ್ನು ಮುಂದುವರಿಸುತ್ತಾ ಬಂದಿದೆ. (ಆಕಸ್ಮಿಕವೋ ಭಾಗ್ಯವೋ ಎಂಬಂತೆ, ನಾನೂ ಅದೇ ವರ್ಷ ಪ್ರಪಂಚದ ಬೆಳಕನ್ನು ಕಂಡವನು ಎಂಬುದು ಕಾಕತಾಳೀಯತೆಯೇ ಆಗಿದ್ದರೂ ಅದಕ್ಕಾಗಿ ಹೆಮ್ಮೆ ಪಡುತ್ತೇನೆ.) ಕನ್ನಡ ಸಾಹಿತ್ಯ ಪರಿಷತ್ತು ಮೈಸೂರು ಮಹಾರಾಜರ ಕೃಪಾಶ್ರಯದಿಂದ ಪ್ರಾರಂಭವಾಗಿ ಮುಂದೆ ಸಮಸ್ತ ಕನ್ನಡಿಗರ ಮನ್ನಣೆಗೂ ಪಾತ್ರವಾಯಿತೆಂಬುದು ಅಭಿನಂದನೀಯ. ಬೆಂಗಳೂರು ಮಾತ್ರ ಕೇಂದ್ರವಾಗಿ ಸಾಹಿತ್ಯಿಕ ಚಟುವಟಿಕೆಗಳು ಪ್ರಾರಂಭದಲ್ಲಿ ನಡೆಯುತ್ತಿದ್ದರೂ, ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕ್ಷೇತ್ರ ಮತ್ತೆ ನಾಡಿನಾದ್ಯಂತ ವಿಸ್ತಾರಗೊಂಡಿತು. ಆ ಕಾಲದಲ್ಲಿಯೇ ಭಿನ್ನ ಭಿನ್ನ ಆಡಳಿತಗಳಿಗೆ ಸೇರಿದ ಕನ್ನಡದ ಜಿಲ್ಲೆ ಜಿಲ್ಲೆಗಳಲ್ಲೂ ಶಾಖೆಗಳನ್ನು ತೆರೆದು ಸಾಹಿತ್ಯ ಕಾರ್ಯಗಳನ್ನು ಪರಿಷತ್ತು ವಿಸ್ತರಿಸಿದ್ದಲ್ಲದೆ ಈಚೆಗೆ ತಾಲೂಕು ಮಟ್ಟದಲ್ಲಿಯೂ ಶಾಖೋಪಶಾಖೆಗಳನ್ನು ಸ್ಥಾಪಿಸುತ್ತಾ ಬರುವುದು ನಿಜವಾಗಿಯೂ ಉತ್ತಮ ಕಾರ್ಯ. ಅಖಿಲ ಭಾರತ ಸಮ್ಮೇಳನಗಳನ್ನು ವಿಜೃಂಭಣೆಯಿಂದ ಜರಗಿಸುತ್ತಿರುವಂತೆ, ಜಿಲ್ಲಾ ತಾಲೂಕು ಮಟ್ಟಗಳಲ್ಲಿಯೂ ಸಾಹಿತ್ಯ ಸಮ್ಮೇಳನಗಳು ಇಂದು ಜರಗುತ್ತಿವೆ; ಈ ಸ್ತುತ್ಯ ಕಾರ್ಯ ಗ್ರಾಮ ಗ್ರಾಮಗಳಿಗೂ ಪಸರಿಸಬೇಕು. ನಮ್ಮ ದೇಶ ಭಾಷೆ ಸಾಹಿತ್ಯ ಸಂಸ್ಕೃತಿ ಎಲ್ಲದರ ಭದ್ರವಾದ ತಳಹದಿ ಗ್ರಾಮಗಳಲ್ಲಿಯೂ ಸುವ್ಯವಸ್ಥಿತವಾಗಿ ಸ್ಥಾಪಿತವಾಗುವುದೇ ಸರಿಯಾದ ಸಾಹಿತ್ಯ ಸಂಸ್ಕೃತಿಗಳ ಜನಸಂಪರ್ಕಕಾರ್ಯವಾಗಿದೆ. ಈ ಮಹಾತ್ಕಾರ್ಯ ಸುವ್ಯವಸ್ಥಿತವಾಗಿ ಜರಗಿ ಹಳ್ಳಿಯಿಂದ ಡಿಲ್ಲಿಯ ತನಕ ವಿಸ್ತರಿಸುತ್ತಾ ಹೋಗಬೇಕೆಂದು ನಾವೆಲ್ಲರೂ ಪ್ರಯತ್ನಿಸೋಣ.

ಸಾಹಿತ್ಯ ಪರಿಷತ್ತಿನ ಈ ಬೆಳವಣಿಗೆಯನ್ನು ಪ್ರಸ್ತಾಪಿಸುವ ಈ ಸಂದರ್ಭದಲ್ಲಿ ಕನ್ನಡ ನಾಡು ನುಡಿಗಳ ಅಭಿವೃದ್ಧಿಗಾಗಿ ಪರಿಷತ್ತಿಗಿಂತಲೂ ಹಿಂದೆಯೇ ಸ್ಥಾಪಿತವಾಗಿ, ಕನ್ನಡದ ಉತ್ತಮ ಕಾರ್ಯಗಳನ್ನು ಅಂದಿನಿಂದ ಇಂದಿನವರೆಗೂ ಮಾಡುತ್ತಾ ಬರುತ್ತಿರುವ ಧಾರವಾಡದ ವಿದ್ಯಾವರ್ಧಕ ಸಂಘದ ಸಾಧನೆಗಳನ್ನೂ ಕೊಂಡಾಡಲೇಬೇಕಾಗಿ. ಕನ್ನಡದ ಶ್ರೇಷ್ಠ ಕವಿ ಸಾಹಿತಿಗಳು, ಏಕೀಕರಣ ಅಗ್ರಗಣ್ಯ ನೇತಾರರು ಅನೇಕರು ಈ ಮಹಾಸಂಸ್ಥೆಯಲ್ಲಿ ದುಡಿದಿದ್ದಾರೆ. ಇಂದಿಗೂ ಹಲವರು ಧುರೀಣರು ದುಡಿಯುತ್ತಾ ಇದ್ದು ನಾಡು ನುಡಿಗಳಿಗೆ ಅನುಪಮ ಸೇವೆ ಸಲ್ಲಿಸುತ್ತಿದ್ದಾರೆ. ಧಾರವಾಡದ ವಿದ್ಯಾವರ್ಧಕ ಸಂಘ, ಸಾಹಿತ್ಯ ಪರಿಷತ್ತಿಗಿಂತ ಪ್ರಾಚೀನ ಸಂಸ್ಥೆಯಾದರೂ ತನ್ನ ವೈಯಕ್ತಿಕ ಘನತೆ ಯೋಗ್ಯತೆಗಳನ್ನು ಉಳಿಸಿಕೊಂಡು ಸಾಹಿತ್ಯ ಪರಿಷತ್ತಿನ ಬೆಳವಣಿಗೆಗೆ ಸಂಪೂರ್ಣ ಸಹಕರಿಸುತ್ತಾ ಬಂದಿರುವುದು ಅಭಿನಂದನೀಯ. ವಿದ್ಯಾವರ್ಧಕ ಸಂಘದ ಈ ಉತ್ತಮ ಸಹಕಾರವನ್ನು ಕೊಂಡಾಡುವುದೂ, ಮಾತ್ರವಲ್ಲ, ಆ ಸಂಸ್ಥೆ ಇತೋಪ್ಯತಿಶಯ ಸಾಧನೆಗಳನ್ನು ಮಾಡಿ ಕನ್ನಡಿಗರೆಲ್ಲರ ಅಭಿಮಾನದ ಸಂಸ್ಥೆಯಾಗಿ ಚಿರಕಾಲ ಪ್ರಗತಿಪಥದಲ್ಲಿ ಮುನ್ನಡೆಯಲಿ ಎಂದು ಹಾರೈಸುತ್ತೇನೆ.

ಸಾಹಿತ್ಯವೆಂದರೆ ಹಿತದಿಂದ ಕೂಡಿರುವುದೆಂದರ್ಥ. ಹಿತವೆನ್ನುವುದು ಕೇವಲ ಕ್ಷಣಿಕ ತಾತ್ಕಾಲಿಕ ನಶ್ವರವಾದುದಲ್ಲ; ಶಾಶ್ವತವಾದುದು; ದೇಹಕ್ಕೆ ಮಾತ್ರ ಸಂಬಂಧಿಸಿದ್ದಲ್ಲ; ಬುದ್ಧಿ ಹೃದಯಗಳಿಗೂ ಸಂಬಂಧಿಸಿದ್ದು. ಆದ ಕಾರಣವೇ ಸಾಹಿತ್ಯ, ಸಂಸ್ಕೃತಿಯನ್ನು ಸಮೃದ್ಧಿ ಮಾಡುವ ಶ್ರೇಷ್ಠ ಸಾಧನ. ಕಾವ್ಯ ಆತ್ಮ ಧ್ವನಿಯೆಂದು ಪ್ರಾಚೀನ ಲಾಕ್ಷಣಿಕರೇ ಹೇಳಿದ್ದಾರೆ; ಧ್ವನಿಯೆಂಬುದು ಬಾಹ್ಯವಲ್ಲ; ಅಂತರ್ಗತ ವಿಷಯ. ಮಾತಿಗೆ ಆಳವಾದ, ಯೋಚಿಸಿದಷ್ಟು ವಿಶಾಲವಾದ ಅಂತರಾರ್ಥ ಧ್ವನಿಸಬೇಕು; ಉತ್ತಮವಾದ ಅರ್ಥ ಹೊಳೆಯಬೇಕು. ರಸಾತ್ಮಕವಾದ ವಾಕ್ಯವೇ ಕಾವ್ಯವೆಂಬ ಮಾತೂ ಇದೆ. ರಸಿಕತೆ ಹಾಗೂ ರಸಾಸ್ವಾದನೆ ಬಹಿರಂಗ ಸೌಂದರ್ಯದ ಆಸ್ವಾದನೆಯಲ್ಲ, ಆಳವಾದ, ಪರಿಶುದ್ಧವಾದ, ಅಂತರಂಗ ಸ್ವಾರಸ್ಯಗ್ರಹಣ. ಶೃಂಗಾರ, ಹೊರಗಿನ ರೂಪದ ಬೆಡಗು ವಯ್ಯಾರಗಳೆಂದು ಸಾಮಾನ್ಯವಾದ ತಿಳುವಳಿಕೆಯಿದೆ; ಕಾಳಿದಾಸನು ಶೃಂಗಾರಕವಿಯೇಂದೇ ಪ್ರಸಿದ್ಧ; ಆತ ತನ್ನ ಅಮೋಘ ಕೃತಿ ಶಾಕುಂತಳದಲ್ಲಿ, ದುಷ್ಯಂತನು ಶಕುಂತಳೆಯ ಸೌಂದರ್ಯ ವಣಿಸುತ್ತಾ, ಅವಳ ರೂಪ ಅಖಂಡ ಪುಣ್ಯಾನಾಂ ಫಲಂ – ಅಪಿತ ತದ್ರೂಪಂ ಅನಘಂ' ಎಂದು ಹೇಳುತ್ತಾನೆ. ತಾನು ಮೆಚ್ಚಿದ ಕನ್ಯೆಪುಣ್ಯದ ರಾಶಿ; ಅವಳ ರೂಪ ನಿಷ್ಪಾಪವಾದುದು ಎಂಬೀ ಮಾತು, ಭಾರತೀಯ ಶೃಂಗಾರ ದೃಷ್ಟಿ; ಅಂತಹ ಪುಣ್ಯವತಿಯ ಗರ್ಭದಲ್ಲಿ ಜನಿಸಿದ ಪುತ್ರ ಭರತ ಭಾರತದ ಪ್ರಥಮ ಚಕ್ರವರ್ತಿಯಾದ ಇಂತಹ ಧ್ವನಿ ಆ ಮಾತಿನಲ್ಲಿ ನಮಗೆ ಹೊಳೆಯುವುದು. ಶ್ರೀಕೃಷ್ಣನು, ಸ್ವರಗರಳಖಂಡನಮಾಡುವ ಪದಪಲ್ಲವವನ್ನು ತನ್ನ ತಲೆಯ ಮೇಲಿಡಬೇಕೆಂಬ ರಾಧೆ ಪ್ರಾರ್ಥಿಸುವ ರೀತಿಯ ಜಯದೇವ ಕವಿಯ

ಗೀತಗೋವಿಂದ ಕಾವ್ಯವೂ ಇಂತಹ ಉತ್ತಮ ಧ್ವನಿಗೆ ಉದಾಹರಣೆ. ಸಾಮಾನ್ಯವಾಗಿ ನವರಸಗಳು ಎಂಬ ಎಣಿಕೆಯಿದೆ. ಆ ರಸಗಳಲ್ಲಿ ಶಾಂತರಸ ಕೊನೆಯದು. ಬಾಳುವೆ ಕೊನೆಗೆ ಶಾಂತಿ ಹೊಂದಬೇಕು; ಮುಕ್ತಿ ಪಡೆಯಬೇಕೆಂಬ ದೃಷ್ಟಿಯಲ್ಲಿಯೂ ಇರಬಹುದು; ಶೃಂಗಾರವೊಂದೇ ರಸವೆಂಬ ಮಾತೂ ಇದೆ; ಅದರ ಮಥಿತಾರ್ಥ ಶಾಂತರಸವೂ ಶೃಂಗಾರದಲ್ಲಿಯೇ ಅಡಕವಾಯಿತು ಎಂದು; ಹಾಗಾಗಿಯೇ ಕಾಳಿದಾಸನ ಉಕ್ತಿ, ಜಯದೇವನ ಮಾತು ನಮಗೆ ಜೀವನದ ಪರಮಲಕ್ಷ್ಯಗಳಾದ ಶಾಂತಿ ಸಮಾಧಾನಗಳ ಕಡೆಗೆ ಮಾರ್ಗದರ್ಶನ ಮಾಡುತ್ತವೆ. ಈ ಸಾಹಿತ್ಯ, ಇಂತಹ ಸಂಸ್ಕೃತಿ ನಮ್ಮದು; ಮನಸ್ಸು ಇಂತು ಹರಿವಂತೆ ಮಾಡುವುದೇ ಸಾಹಿತ್ಯದ ಲಕ್ಷ್ಯವಾಗಿರಬೇಕು. 'ನಾನೃಷಿಃ ಕುರುತೇಕಾವ್ಯಂ' ಎಂಬ ವಾಣಿಯೂ ಈ ಮಥಿತಾರ್ಥವನ್ನು ಬೋಧಿಸುತ್ತದೆ; ಭವಿಷ್ಯತ್ತನ್ನು ಕಾಣುವ ದೂರದೃಷ್ಟಿಯುಳ್ಳವನು ಋಷಿ; ಅಂತಹ ಋಷಿಯಾಗದೆ ಕವಿಯೆನಿಸಲು ಸಾಧ್ಯವಿಲ್ಲ. 'ಕವಿರ್ಮನೀಷೀ ವಿಬುಧಃ ಸ್ವಯಂಭೂಃ' ಎಂಬ ಉಪನಿಷನ್ಮಂತ್ರವೂ ಕವಿ ಎಂಬ ಪದದ ಉತ್ತಮೋತ್ತಮವಾದ ನೆಲೆಯನ್ನು ಬೋಧಿಸುತ್ತದೆ. ಈ ತೆರನ ಪವಿತ್ರ ವಾತಾವರಣ ಸಮಾಜ ಜೀವನದಲ್ಲಿ ಉಂಟು ಮಾಡುವ ಪುಣ್ಯ ಕಾರ್ಯ, ನಮ್ಮ ಕನ್ನಡ ಸಾಹಿತ್ಯದಿಂದಲೂ ಆಗಿದೆ; ಇನ್ನೂ ಆಗಬೇಕಾಗಿದೆ.

ಕನ್ನಡ ನಾಡಿನ ಜನಮನದ ಸಂಸ್ಕಾರಕ್ಕೆ ಯಕ್ಷಗಾನ ಕಲೆ ಸಾಹಿತ್ಯ ನೀಡಿದ ಕೊಡುಗೆ ಅಪಾರ; ಕರಾವಳಿ ಕರ್ನಾಟಕದ ವಿಸ್ತಾರಕ್ಕೂ, ಯಕ್ಷಗಾನ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣತಮತಿ'ಗಳಾಗಿ ಕನ್ನಡಿಗರನ್ನು ರೂಪಿಸಿದೆ. ಯಕ್ಷಗಾನ ಸಾಹಿತ್ಯವೂ ಕನ್ನಡದ ಇತರ ಕಾವ್ಯ ಸಾಹಿತ್ಯ ಪ್ರಕಾರಗಳಿಗಿಂತ ಕಡಿಮೆ ಸತ್ವವುಳ್ಳದ್ದಲ್ಲ. ನಾಗಚಂದ್ರ ಕವಿಯ ರಾಮಚಂದ್ರ ಚರಿತ ಪುರಾಣದಲ್ಲಿ, ಸೀತಾದೇವಿಯ ಅಗಲಿಕೆಯಿಂದ ಶೋಕಿಸುವ ಶ್ರೀರಾಮನು 'ತಳಿರೇ ತಾವರೆಯೇ ಮದಾಳಿಕುಲಮೇ ಕನ್ಮೈದಿಲೆ ಕಂಡಿರೆ ಸೀತೆಯಂ' ಎನ್ನುತ್ತಾನೆ. ಅದೇ ಸನ್ನಿವೇಶವನ್ನು ಯಕ್ಷಗಾನಾಚಾರ್ಯ ಪಾರ್ತಿಸುಬ್ಬ ಕವಿ 'ಪೊಡವಿ ಗಿಡಮರಕಲ್ಲು ನೋಡಿದರೆ ಅರಸಿನದ ಪುಡಿಗೆದರಿದಂತಿಹುದು ತಮ್ಮ, ಮಡದಿ ಜಾನಕಿರತುನವಿಲ್ಲದೀ ಮೈಯ್ಯೊಂದು ಬಿಡುಹಗ್ಗವಾಯ್ತಲ್ಲೊ ತಮ್ಮಾ' ಎಂದು ಹೇಳುವನು. ರತ್ನ ಕಳಚಿ ಹೋದಲ್ಲಿ ಕುತ್ತಿಗೆಯಲ್ಲಿ ಉಳಿಯುವುದು ದಾರ ಮಾತ್ರ. ಮಡದಿ ಸೀತಾದೇವಿ ಸ್ತ್ರೀರತ್ನ ಎಂಬ ಇಲ್ಲಿರುವ ಮಾತಿನಲ್ಲಿ ಎಷ್ಟೊಂದು ಧ್ವನಿಯಿದೆ. ಕನ್ನಡದ ಇತರ ಯಾವುದೇ ಕಾವ್ಯ ಪ್ರಭೇದಗಳಿಗಿಂತ ಯಾವುದಕ್ಕೂ ಕಡಿಮೆಯಿಲ್ಲದ ಸಾಹಿತ್ಯ ಸಂಸ್ಕಾರ ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಇದೆ; ಮಾತ್ರವಲ್ಲ; ಯಕ್ಷಗಾನ ಪ್ರಸಂಗದ ಹಾಡುಗಳು, ಅದರ ಜತೆಗೆ ಜಾಗಟೆ ಚೆಂಡೆ ಮದ್ದಳೆಗಳ ಬಡಿತಗಳು, ಅವುಗಳಿಗೆ ತಕ್ಕಂತೆ ಲಾಸ್ಯ ತಾಂಡವನೃತ್ಯಗಳು, ಕೃತ ತ್ರೇತಾ ದ್ವಾಪರಾ ಯುಗದ ಚಿತ್ರಗಳನ್ನು ಕಣ್ಣಿಗೆ ಕಟ್ಟಿದಂತೆ ಮಾಡುವ

ವೇಷಭೂಷಣಗಳು – ಕೊನೆಗೆ ಇವೆಲ್ಲದರ ಪರಿಣಾಮವಾಗಿ ಸತ್ಯಕ್ಕೇ ಜಯ, ಧರ್ಮಕ್ಕೇ ಜಯ ಎಂಬ ನೀತಿ ಬೋಧಿಸುತ್ತಿರುವ ಯಕ್ಷಗಾನ ಬಯಲಾಟ ತಾಳಮದ್ದಳೆಗಳು, ಜನತೆ ಉತ್ತಮ ನಾಗರಿಕರಾಗಲು ಸರಿಯಾದ ತರಬೇತಿ ನೀಡುವ ಕಲಾಸಾಹಿತ್ಯಗಳಾಗಿರುವುವು. ಇಂತಹ ಅಸಾಧಾರಣ ಕ್ರಿಯಾಶೀಲ ಸದ್ಗುಣಗಳಿಂದ ಕೂಡಿದ ಯಕ್ಷಗಾನ ಕಲೆಗೆ ಇನ್ನಷ್ಟು ಪ್ರೋತ್ಸಾಹ ನೀಡಬೇಕು; ಯಕ್ಷಗಾನ ಕಲಾಭಿವೃದ್ಧಿಗಾಗಿ ಕೇರಳದಲ್ಲಿ ಕಥಕ್ಕಳಿಗೆ ಸ್ಥಾಪಿತವಾದಂತೆ ಒಂದು ಕಲಾಕ್ಷೇತ್ರ ಕರ್ನಾಟಕದಲ್ಲಿಯೂ ಸ್ಥಾಪನೆ ಆಗುವುದು ಅವಶ್ಯ. ಆ ಕಲಾವಿದರನ್ನು ಪ್ರೋತ್ಸಾಹಿಸಬೇಕು. ಈ ವಿಚಾರದಲ್ಲಿ ಸಾರ್ವಜನಿಕರೂ ಅಂತೆ ಸರಕಾರವೂ ಗಮನಹರಿಸುವುದು ತೀರಾ ಅಗತ್ಯ.

ಸಾಹಿತ್ಯ ಸಮ್ಮೇಳನಗಳಲ್ಲಿ ಸಾಹಿತ್ಯ ಕಲೆ ಮುಂತಾದ ವಿಷಯಗಳಿಗೆ ಸಂಬಂಧಿಸಿ ವಿವಿಧ ಗೋಷ್ಠಿಗಳಲ್ಲಿ ಏರ್ಪಡಿಸಲಾಗುತ್ತಿದೆ. ಈ ಗೋಷ್ಠಿಗಳಲ್ಲಿ ಅಖಿಲ ಭಾರತ, ಅಖಿಲ ಕರ್ನಾಟಕ ಹಾಗೂ ಸಮ್ಮೇಳನ ಜರಗುವ ಪ್ರದೇಶಗಳಿಗೆ ಸಂಬಂಧಿಸಿದ ವಿಷಯ ವಿಚಾರಗಳಿಗಿರಬೇಕು. ಐತಿಹಾಸಿಕ, ಧಾರ್ಮಿಕ, ಸಾಹಿತ್ಯಿಕ, ಸಾಮಾಜಿಕ ವಿಷಯಗಳು ಹಿಂದಿನಿಂದ ಇಂದಿನ ತನಕವೂ ಮುಂದಕ್ಕೆ ಹೇಗಿರಬೇಕೆಂಬ ಚಿಂತನ – ಮಂಥನಗಳು ಗೋಷ್ಠಿಗಳಲ್ಲಿ ನಡೆಯತಕ್ಕದ್ದು. ಅದರಿಂದ ಸಮ್ಮೇಳನದ ಸಭಾಸದರಿಗೆ ತೃಪ್ತಿಕರವಾದ ಜ್ಞಾನದ ಉಣಿಸನ್ನು ಬಡಿಸಿದಂತಾಗುವುದು. ಪರಂಪರೆಯಿಂದ ಇಂದಿನ ಈ ಇಪ್ಪತ್ತನೆಯ ಶತಮಾನದ ತನಕದ ಮತ್ತೆ ಮುಂದಿನ ಶತಮಾನದ ಸಾಹಿತ್ಯ ಇತಿಹಾಸಾದಿಗಳಿಗೂ ಅನ್ವಯಿಸುವ, ಪ್ರಗತಿ ಚರ್ಚೆಗಳು ಈ ಗೋಷ್ಠಿಗಳಲ್ಲಿ ನಡೆಯಬೇಕು. 'ನಿರಂಕುಶಾಃ ಕವಯಃ' ಎಂಬ ಸೂಕ್ತಿಯಿದ್ದರೂ, ವ್ಯವಹಾರದಲ್ಲಿ, ಲೇಖಕರಿಗೆ, ಪತ್ರಿಕೆಯವರಿಗೆ ಅವರ ಬರೆಹಗಳ ಕುರಿತು ಯಾವ ಟೀಕೆಗಳನ್ನು ಆಗಾಗ ಕೇಳುತ್ತಾ ಇದ್ದೇವೆ; ಅದಾಗಿ ಇಂತಹ ವಿಚಾರ ಸಮ್ಮೇಳನದ ಗೋಷ್ಠಿಗಳಲ್ಲಿ ಚರ್ಚಿಸಬೇಕಾದ ಒಂದು ಮಹತ್ವದ ವಿಷಯ. ಜಗತ್ತಿನಲ್ಲಿ ಹಾಗೂ ಭಾರತದಲ್ಲಿ ಕನ್ನಡದ ಸ್ಥಾನಮಾನ, ಗಡಿನಾಡು ಹೊರನಾಡುಗಳಲ್ಲಿ ವಿದೇಶಗಳಲ್ಲೂ ಕನ್ನಡದ ಉಳಿವು ಬೆಳವಣಿಗೆ, ಕನ್ನಡಿಗರ ಉದ್ಯೋಗ, ನಾಡಿನ ಪರಿಸರ, ಜಲಗಡಿ ಸಮಸ್ಯೆಗಳೂ ಸರಕಾರಕ್ಕೂ ಸರಿಯಾದ ಮಾರ್ಗದರ್ಶನ ನೀಡಬೇಕು. ದೇಶದ ವಿವಿಧ ಭಾಷೆಗಳ ಕವಿಗೋಷ್ಠಿಗಳು ಸಮ್ಮೇಳನಕ್ಕೆ ಶೋಭೆ ತರುವವು; ಸರ್ವ ಭಾಷೆಗಳ ಸಾಮರಸ್ಯವೂ ಅದರಿಂದ ಸ್ಥಾಪಿತವಾಗುವುದು.

ಭಾರತದ ಸಾಹಿತ್ಯದಲ್ಲಿ ಸರ್ವತ್ರ ಎಂಬಂತೆ ಕನ್ನಡದಲ್ಲಿಯೂ, ಮೂಲತಃ ಈ ರಾಷ್ಟ್ರದಲ್ಲಿದ್ದ ಭಾರತದ ಮತತ್ವ– ಕಥೆ ಪುರಾಣಗಳ ಕುರಿತೇ ಕಾವ್ಯ ನಾಟಕಾದಿ ಸಾಹಿತ್ಯ ರಚನೆಯಾದುದು ಸರಿಯೆ. ಅಶೋಕ ಚಕ್ರವರ್ತಿಯ ಕಾಲದಲ್ಲಿ ಬೌದ್ಧಭಿಕ್ಷುಗಳು

ಬನವಾಸಿಗೆ ಬಂದಿದ್ದರೆಂದು ತಿಳಿದುಬರುವುದಾದರೂ, ಬೌದ್ಧಮತ ತತ್ವ ಪುರಾಣಗಳ ಕುರಿತು ಕನ್ನಡದಲ್ಲಿ ಗ್ರಂಥ ರಚನೆಯಾದುದು ಅಪೂರ್ವ. ಆದರೆ ಜೈನಮತ ತತ್ವ ಪುರಾಣಗಳ ಕುರಿತು ಕನ್ನಡದಲ್ಲಿ ಗ್ರಂಥ ರಚನೆಯಾದುದು ಅಪೂರ್ವ. ಆದರೆ ಜೈನಮತ ತತ್ವ ಚಿಂತನೆಗಳು ಕನ್ನಡದಲ್ಲಿ ಬಂದಷ್ಟು ಅವು ಬರಲಿಲ್ಲ; ಮುಖ್ಯ ಕಾರಣ, ಉತ್ತರದಿಂದ ಬಂದ ಜೈನರು, ದಾಕ್ಷಿಣ್ಯಾತ್ಯರೊಡನೆ, ಸಾಮಾಜಿಕ ಪದ್ಧತಿ ನಡೆ ನುಡಿ ಎಲ್ಲದರಲ್ಲಿಯೂ ಸುಶಿಕ್ಷಿತರಾದ ಮೇಲು ವರ್ಗದವರೇ ಹೆಚ್ಚಾಗಿ ಲೇಖಕರಿದ್ದುದರಿಂದ ಅವರು ಬರೆದ ಆ ಸಾಹಿತ್ಯ ಸಾಮಾನ್ಯ ಜನತೆಯನ್ನು ಅಷ್ಟಾಗಿ ಸ್ಪರ್ಶಿಸಿರಲಿಲ್ಲ; ಮುಂದೆ ಶರಣರ ವಚನಗಳು, ದಾಸರ ಪದಗಳು ಸಾಮಾನ್ಯ ಜನರಿಗೂ ಕೇಳವರ್ಗದವರೆಂಬವರಿಗೂ ತಲಪಿತು. ವೇದೋಪನಿಷತ್ತುಗಳಲ್ಲಿ ಮಹಾಕಾವ್ಯಗಳಲ್ಲಿ, ಶ್ರುತಿ, ಸ್ಮೃತಿ ಪುರಾಣಗಳಲ್ಲಿ ಹೇಳಲಾದ ಘನತತ್ವ ವಿಚಾರಗಳೂ ವಚನಗಳ, ದಾಸರ ಪದಗಳ, ಯಕ್ಷಗಾನ ಪ್ರಸಂಗಗಳ ಮೂಲಕವೂ ಜನತೆಯನ್ನು ಮುಟ್ಟಿತು ಎಂಬುದು ಕನ್ನಡ ಸಾಹಿತ್ಯದಲ್ಲಿನ ಒಂದು ಪ್ರಗತಿಯೇ ಎನ್ನಬೇಕು. ಅದೇ ಕಾಲದಲ್ಲಿ ಸರ್ವಜ್ಞನ ತ್ರಿಪದಿಗಳು, ರಾಘವಾಂಕ, ಲಕ್ಷ್ಮೀಶರೇ ಮೊದಲಾದವರ ಷಟ್ಪದಿಗಳು, ಕುಮಾರವ್ಯಾಸ, ಕುಮಾರವಾಲ್ಮೀಕಿ, ಚಾಟು ವಿಠಲರ ಭಾರತ ರಾಮಾಯಣ ಭಾಗವತ ಗ್ರಂಥಗಳೂ ನಿತ್ಯಪಾರಾಯಣ ಗ್ರಂಥಗಳಾಗಿ ಮೆರೆದವು.

ವೇದೋಪನಿಷತ್ತು ಪುರಣಾದಿಗಳ ತತ್ವಕಥೆಗಳನ್ನು ಆಧರಿಸಿ ಆ ಮೇಲೆ ಬೌದ್ಧ ಜಾತಕಕಥೆಗಳನ್ನೂ, ಜೈನ ಪುರಾಣಗಳನ್ನೂ, ಶರಣರ ಚರಿತ್ರೆಗಳನ್ನೂ ಆಧರಿಸಿ ಕನ್ನಡದಲ್ಲಿ ಸಾಹಿತ್ಯ ಸೃಷ್ಟಿಯಾದಂತೆ, ಕುರಾನ್, ಬೈಬಲ್, ಕಥೆಗಳ ಸಾಹಿತ್ಯಾಂಶಗಳನ್ನು ಎತ್ತಿಕೊಂಡು ಆ ಜನಜೀವನವನ್ನು ಚಿತ್ರಿಸುವ ಸಾಹಿತ್ಯ ಸೃಷ್ಟಿಯಾದಲ್ಲಿ ಸಾಹಿತ್ಯದ ಸಮೃದ್ಧಿಗೆ ಪೋಷಕವೆನಿಸೀತು. ಪೈಯವರು ಬರೆದ 'ಗೊಲ್ಗೊಥಾ' ಉತ್ತಮ ಖಂಡಕಾವ್ಯವೆನಿಸಿದೆ. ಅದೇ ಕಾಲದಲ್ಲಿ ಕೇರಳದ ರಾಷ್ಟ್ರಕವಿ ವಲ್ಲತ್ತೋಳ್ 'ಮೆಗ್ದಲದ ಮರಿಯ' ಖಂಡಕಾವ್ಯ ಬರೆದು ಹೆಸರು ಪಡೆದರು. ಆದರೆ, ಕನ್ನಡದ ಲೇಖಕರು ಈ ಕಡೆ ಇನ್ನೂ ಸಾಕಷ್ಟು ಗಮನ ಹರಿಸಲಿಲ್ಲ. ಇಂದು ಕನ್ನಡದಲ್ಲಿ ಕಥೆ ಕವನ ಕಾದಂಬರಿಗಳನ್ನು ಬರೆವ ಕ್ರಿಶ್ಚಿಯನ್ ಮುಸ್ಲಿಂ ಲೇಖಕರು ಲೇಖಕಿಯರೂ ಇದ್ದಾರೆ. ಅವರೂ ಈ ದೃಷ್ಟಿಯಲ್ಲಿ ಸಾಹಿತ್ಯ ರಚನೆ ಮಾಡಿದ್ದು ವಿರಳ. ಈ ಹೊಸ ಕ್ಷೇತ್ರದಲ್ಲಿ ಉತ್ತಮ ಸಾಹಿತ್ಯ ಕೃಷಿ ಮಾಡಬಹುದು; ಎಲ್ಲರ ಮನಸ್ಸಿಗೂ ಒಪ್ಪುವಂತೆ ಈ ಚಿತ್ರಣಗಳು ಕವನ, ಕಥಾರೂಪಗಳಲ್ಲಿ ಕನ್ನಡದಲ್ಲಿ ಬಂದರೆ ನಮ್ಮ ಸಾಹಿತ್ಯ ಹೊಸ ಕ್ಷೇತ್ರವನ್ನು ಕಂಡಂತಾದೀತು. ಮತೀಯ ಸಾಮರಸ್ಯ ಹೆಚ್ಚಾಗುವ ರೀತಿ ಈ ಪ್ರಯೋಗ ಯಶಸ್ವಿಯಾಗಬೇಕು. ಇದು ಎಲ್ಲಾ ದೃಷ್ಟಿಯಿಂದಲೂ ಅವಶ್ಯವಾಗಿದೆ. ಸ್ವತಂತ್ರ ವಿಚಾರಶೀಲರಾದ, ಪರಮತಸಹಿಷ್ಣುಗಳಾದ ಕನ್ನಡಿಗರೂ, ಈ ವಿಷಯವನ್ನು ಸಾಕಷ್ಟು ತಾಳ್ಮೆ, ಶ್ರದ್ಧೆ ವಿಶ್ವಾಸಗಳಿಂದ ಸ್ವೀಕರಿಸಿದಲ್ಲಿ, ಅದರಿಂದ ಜನತೆಯಲ್ಲಿ ಉತ್ತಮ

ಸಂಸ್ಕೃತಿಯುಂಟಾಗುವುದರೊಂದಿಗೆ, ರಾಷ್ಟ್ರದ ಜಾತ್ಯಾತೀತ ಸದ್ಭಾವನೆಗೆ ಇನ್ನಷ್ಟು ಪುಷ್ಟಿ ನೀಡಿದಂತಾಗುವುದು, ಹಾಡಿದ್ದನ್ನೇ ಹಾಡಿ, ಹೇಳಿದ್ದನ್ನೇ ಹೇಳಿ, ಚರ್ವಿತಚರ್ವಣ ರೀತಿಯಲ್ಲಿ ವಸ್ತು ವಿಷಯ ವಿಚಾರಾದಿಗಳನ್ನು ಸಾಹಿತ್ಯದಲ್ಲಿ ಹೆಚ್ಚಿಸುತ್ತಾ, ಓದುಗರಲ್ಲಿ ಅನಾಸಕ್ತಿ ತಲೆದೋರದಂತೆ ಮಾಡಲು, ಈ ಹೊಸದೃಷ್ಟಿ ಅವಶ್ಯವೆಂಬುದನ್ನು ಎಲ್ಲರೂ ಒಪ್ಪುವರೆಂದು ವಿಶ್ವಾಸವಿದೆ.

ಪುರುಷರಂತೆ ಸಮಾಜದಲ್ಲಿ ಸ್ತ್ರೀಯರಿಗೂ ಸಮಾನ ಸ್ಥಾನಮಾನಗಳು ಸಿಗಬೇಕೆಂಬ ಆಂದೋಲನಕ್ಕೆ ಇಂದು ಹೆಚ್ಚಿನ ಬೆಂಬಲವಿದೆ. ಈ ಆಂದೋಲನ ರಾಜಕೀಯ ಸಾಮಾಜಿಕ ಕ್ಷೇತ್ರಗಳಲ್ಲಿ ಎಂತೋ ಅಂತೆ ಸಾಹಿತ್ಯ ರಂಗದಲ್ಲಿಯೂ ಇರುವುದು ಸಹಜವೂ ಆಗಿರುವುದು. ಇದು ಸಂಪೂರ್ಣ ಸ್ವಾಗತಾರ್ಹ. ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಿತ್ತೂರು ಚೆನ್ನಮ್ಮ, ಉಳ್ಳಾಲದ ವೀರರಾಣಿ ಅಬ್ಬಕ್ಕ ಇಂಥವರು ಅನೇಕರು ಹಿಂದಿನಿಂದಲೂ ರಾಜಕೀಯ ಕ್ಷೇತ್ರದಲ್ಲಿ ಹೆಸರು ಪಡೆದವರು. ಕಠಾರಿ ಹಿಡಿದು ವಿದೇಶೀಯರನ್ನು ಸದೆಬಡಿದವರು. ಸಂಸ್ಕೃತ, ಆಂಗ್ಲ, ಬಂಗಾಳಿ, ಮಲೆಯಾಳ ಮುಂತಾದ ಹಲವು ಭಾಷೆಗಳಲ್ಲಿ ಪ್ರಸಿದ್ಧರಾದ ಲೇಖಕಿಯರು ಆಗಿದ್ದಾರೆ. ಕನ್ನಡದಲ್ಲಿಯೂ ಕಲ್ಯಾಣಮ್ಮ, ತ್ರಿವೇಣಿ, ಎಂ.ಕೆ. ಇಂದಿರಾ, ಜೈನ ಮಹಿಳೆ, ಸರಸ್ವತೀ ಬಾಯಿ ರಾಜವಾಡೆ, ಉಡುಪಿ ಕೃಷ್ಣಾಬಾಯಿ – ಇಂತಹ ಹಲವರು ಉತ್ತಮ ಲೇಖಕಿಯರಾಗಿ ಕತೆಗಾರ್ತಿಯರಾಗಿ ಹೆಸರು ಪಡೆದಿದ್ದಾರೆ. ಶ್ರೀಮಂತರಾದವರು ತಮ್ಮ ಶ್ರೀಮಂತಿಕೆಯನ್ನು ಉಳಿಸಿಕೊಳ್ಳಲು, ಬಡವರಾಗಿಯೇ ಇರಿಸಿಕೊಳ್ಳುವಂತೆ, ಧೀಮಂತರೆಂಬವರು ತಮ್ಮ ಉತ್ತಮಿಕೆಯನ್ನು ಕಾಪಾಡಿಕೊಳ್ಳಲು ಅವಿದ್ಯಾವಂತ ನಿರಕ್ಷರರನ್ನು ಉಳಿಸಿಕೊಂಬಂತೆ, ಪುರುಷ ಸಮಾಜ ತನ್ನ ಹಿರಿಮೆಯನ್ನು ಸ್ಥಾಪಿಸಲು ಸ್ತ್ರೀಯರನ್ನು ಅಧೀನತೆಯಲ್ಲಿಯೇ ಇರಿಸಿಕೊಳ್ಳುತ್ತಿದೆ. ಇದು ಪ್ರಾಕೃತಿಕವಾದ ಪಶು ಬುದ್ಧಿ. ಮಾನವನು ಪಶು ಬುದ್ಧಿಯನ್ನು ತೊಡೆದು ಹಾಕಿ ವಿವೇಕಿಯಾಗಬೇಕು. ಪ್ರಪಂಚದಲ್ಲಿ ಸ್ತ್ರೀ ಸಮುದಾಯ ಇಲ್ಲವಾಗಿದ್ದರೆ ಮನುಷ್ಯ ಸಂತಾನವೇ ಆಗುತ್ತಿರಲಿಲ್ಲ. ಜಗತ್ತಿನ ಉತ್ಪತ್ತಿ ಪ್ರಕೃತಿ ಪುರುಷ ಸಂಯೋಗದಿಂದ ಆಯಿತೆಂದು ಶಾಸ್ತ್ರೋಕ್ತಿ; ಸ್ತ್ರೀಯೊಡಗೂಡಿದ ಪುರುಷ ಸ್ಥಳಬಿಟ್ಟು ಎಲ್ಲಿಗೂ ಹೋಗಬಹುದು. ವ್ಯಾಪಾರಿಯಾಗಿ ದೇಶ ವಿದೇಶಗಳಲ್ಲಿ ತಿರುಗಾಡಬಹುದು. ಆದರೆ ಗರ್ಭಿಣಿಯಾದ ಹೆಂಗಸು ಮನೆಯಲ್ಲಿಯೇ ಇರಬೇಕಾಗುತ್ತದೆ. ಆತ ನಾಡಾಡಿಯಾಗಿ ತಿರುಗಬಹುದು; ಯೋಧನಾಗಿ ಹೋಗಿ ಯುದ್ಧದಲ್ಲಿ ಸತ್ತು ಹೋಗಬಹುದು. ವ್ಯಾಪಾರಿಯಾಗಿ ದೇಶ ವಿದೇಶಗಳಲ್ಲಿ ತಿರುಗಾಡಬಹುದು. ಆದರೆ ಗರ್ಭಿಣಿಯಾಧ ಹೆಂಗಸು ಮನೆಯಲ್ಲಿಯೇ ಇರಬೇಕಾಗಿದೆ, ತನ್ನ ಪುಣ್ಯೋದರದಲ್ಲಿ ಬೆಳೆಯುತ್ತಿರುವ ಮಗುವಿನ ಎದೆಯ ನೆತ್ತರನ್ನೇ ಅಮೃತವಾಗಿಸಿ ಉಣಿಸುತ್ತಾ ನವಮಾಸ ತುಂಬಿದ ಒಂದು ಸುಮುಹೂರ್ತದಲ್ಲಿ ಸಹಿಸಲಾರದ ಪ್ರಸವ ವೇದನೆಯನ್ನೂ ಹೆತ್ತ ಶಿಶುವಿನ ಮುದ್ದು

ಮೊಗ ನೋಡಿ ಮರೆತು ಮತ್ತೆ ಮಗುವನ್ನು ಲಾಲಿಸಿ ಪಾಲಿಸುವಳು. ಹೀಗೆ ಮನೆಯೆಂದರೆ ಮಹಿಳೆಯೇ, ಮನೆ ಆಕೆಯದೇ. 'ಗೃಹಣೀಗೃಹಮುಚ್ಯತೇ' ಎಂಬ ಮಾತು ಪ್ರಸಿದ್ಧವಾಗಿದೆ. ತಾಯಿ ಯಾರೆಂಬುದು ಪ್ರತಿ ಮಗುವಿಗೂ ಜನ್ಮದಿಂದಲೇ ಳಿದಿರುತ್ತದೆ. ಮಗು, ಮಡಿಲಲ್ಲೇಮಲ ಮೂತ್ರಾದಿ ವಿಸರ್ಜಿಸಿದರೂ, ಅಸಹ್ಯಪಡದೆ, ಸಂತೋಷದಿಂದ ಸಾಕುವಾಕೆ ಪುಣ್ಯವತಿಯಾದ ತಾಯಿ, ತಂದೆಯಲ್ಲ. ತಂದೆ ಯಾರೆಂಬುದು ಮುಂದೆ ತಾಯಿಯ ಮೂಲಕ ಮಗುವಿಗೆ ತಿಳಿಯುವುದು. ಈ ನೈಸರ್ಗಿಕ ಸತ್ಯದ ಕಾರಣದಿಂದಲೇ ವಟುವಿಗೆ ಉಪದೇಶಿಸುವ ಮೊದಲ ಮಂತ್ರ 'ಮಾತೃದೇವೋಭವ' ಎಂಬುದು; 'ಪಿತೃದೇವೋಭವ' ಎಂಬೀ ಮಂತ್ರ ಎರಡನೆಯದು. 'ಶಿವಃ ಶಕ್ತ್ಯಾಯುಕ್ತೋ ಯದಿ ಭವತಿ ಶಕ್ತಃ ಪ್ರಭವಿತುಂ' 'ಕ್ವಚಿದಪಿ ಕುಮಾತಾ ನಭವತಿ' ಎಂಬೀ ಶ್ರೀ ಶಂಕರಾಚಾರ್ಯರ ವಾಣಿ ಸ್ತ್ರೀಯ ಪ್ರಾಧಾನ್ಯವನ್ನೇ ಮುಕ್ತಕಂಠ ಸಮರ್ಥಿಸುತ್ತದೆ. ಸ್ತ್ರೀ ಪ್ರಾಧಾನ್ಯವನ್ನು ಎತ್ತಿ ಹೇಳುವ ಕತೆ, ಕವನ, ಕಾದಂಬರಿ ಲೇಖನಗಳು ಸಾಹಿತ್ಯದಲ್ಲಿ ಬರಬೇಕು. ಸ್ತ್ರೀ ಲೇಖಕಿಯರಿಗೂ ಸರಿಯಾದ ಸ್ಥಾನಮಾನ ನೀಡಬೇಕು. ದಕ್ಷಿಣಕನ್ನಡವೆಂಬೀ ತುಳುನಾಡಿನಲ್ಲಿ ಅನಾದಿ ಕಾಲದಿಂದಲೂ ಸ್ತ್ರೀಯರಿಗೇ ಪ್ರಾಧಾನ್ಯವಿತ್ತು. ಆಳಿಯಕಟ್ಟು ಎಂಬ ಮಾತೃ ಪ್ರಧಾನ ಕುಟುಂಬ ಪದ್ಧತಿ ಇಲ್ಲಿನ ಬಹುಸಂಖ್ಯಾತ ಸಮಾಜದಲ್ಲಿದ್ದು, ಹಿಂದೂ ಕೋಡು ಬಂದ ಮೇಲೂ ಆ ಸಾಮಾಜಿಕ ನಡತೆ ಇಲ್ಲಿ ಪ್ರಚಲಿತವಾಗಿರುವುದನ್ನು ಕಾಣಬಹುದು. ಮಾತೃ ಮೂಲ ಪದ್ಧತಿಯಲ್ಲಿ ಹೆಂಗಸಿಗೆ ಆಸ್ತಿಯ ಒಡೆತನ ಸಂಪೂರ್ಣ ಹಕ್ಕು ಇದ್ದರೂ, ಕುಟುಂಬದ ಗಂಡಸು ಸ್ವತಂತ್ರನಾಗಿ ಆಸ್ತಿಯ ಆಡಳಿತವನ್ನು ನಡೆಸಲು ಹೆಂಗಸರು ಒಪ್ಪುತ್ತಾರೆಂಬುದು ಒಂದು ವಿಶೇಷ. ಹಾಗಾಗಿಯೇ ಮಾವನಿಂದ ಅಳಿಯವನಿಗೆ ಆಡಳಿತದ ಅಧಿಕಾರ ಬರುತ್ತದೆ; ತಾಯಿಯಿಂದ ಮಗಳಿಗೆ ಆಸ್ತಿಯ ಹಕ್ಕು ಉಳಿಯುತ್ತದೆ; ಈ ಹೊಂದಾಣಿಕೆ ಅನ್ಯೋನ್ಯತೆಂಯುದ್ದಾಗಿದೆ. ಆ ಕಾರಣವೂ ಸಾಹಿತ್ಯದಲ್ಲಿ ಸ್ತ್ರೀವಾದೀ ಸಾಹಿತ್ಯಾಂದೋಲನವನ್ನು ಈ ಪ್ರದೇಶದ ಜನತೆ ಹೃತ್ಪೂರ್ವಕ ಬೆಂಬಲಿಸುವರೆಂದು ಭರವಸೆ ಪಡಬಹುದು.

ಈ ಸಾಹಿತ್ಯ ಸಮ್ಮೇಳನ ಜರಗುವ ಸ್ಥಳಕ್ಕೆ ಉಳ್ಳಾಲದ ವೀರವಾಣಿ ಅಬ್ಬಕ್ಕ ದೇವಿಯ ನಾಮಕರಣ ಮಾಡಿದರೂ ಈ ಹಿನ್ನೆಲೆಯಲ್ಲಿ ಯೋಗ್ಯವೆನ್ನಬೇಕು. ಇದೇ ನವಂಬರ ಎರಡನೆಯ ವಾರದಲ್ಲಿ ಅಬ್ಬಕ್ಕ ದೇವಿಯ ವಾಸಸ್ಥಳವಾಗಿದ್ದ ಉಳ್ಳಾಲದಲ್ಲಿ ಅಬ್ಬಕ್ಕ ಸ್ಮಾರಕೋತ್ಸವ ಅಭೂತಪೂರ್ವ ಉತ್ಸಾಹ ವಿಜೃಂಭಣೆಯಿಂದ ಜರಗಿತು. ಬ್ರಿಟೀಷರಿಗಿಂತ ಮೊದಲೇ ವಿದೇಶಿಯರಾದ ಪೋರ್ಚುಗೀಸರು ಭಾರತದ ಸ್ವಾತಂತ್ರ್ಯವನ್ನು ಸೂರೆ ಮಾಡಲು ಇಲ್ಲಿಗೆ ಬಂದಾಗ, ಚೌಟರಸು ಮನೆತನದ ರಾಣಿ ಅಬ್ಬಕ್ಕದೇವಿ, ಕೈಯಲ್ಲಿ ಕಠಾರಿ ಹಿಡಿದು ಸ್ವತಃ ರಣರಂಗಕ್ಕಿಳಿದು ವಿದೇಶಿಯರನ್ನು ಬೆನ್ನಟ್ಟಿದ ಸಾಹಸ ಚರಿತ್ರೆ ಭಾರತದ ಪ್ರಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ವೀರಕಥೆಯಾಗಿದೆ.

ತನ್ನ ಪತಿ ಮಂಗಳೂರಿನ ಬಂಗರಸು ಪೋರ್ಚುಗೀಸರಿಗೆ ನೆರವು ನೀಡಿದರೂ ಗಣಿಸದೆ ಆಕೆ ಜಯ ಗಳಿಸಿದ್ದು ಗಣನೀಯ. ವೀರರಾಣಿಯ ಇಂತಹ ಶೌರ್ಯ ಸಾಹಸದ ಸ್ವಾತಂತ್ರ್ಯ ಸಂಗ್ರಾಮದ ವಿಜಯದ ಚರಿತ್ರೆಯನ್ನು ವಿದೇಶೀ ಲೇಖಕರು ಹಲವರು, ಕನ್ನಡ ನಾಡಿನ ಸಾಲೆತ್ತೂರ್, ಗಣಪತಿ ರಾವ್ ಐಗಳ್, ಪೊಳಲಿ ಶೀನಪ್ಪ ಹೆಗ್ಗಡೆ ಪ್ರಭೃತಿ ಚರಿತ್ರಕಾರರೂ ಉಲ್ಲೇಖಿಸಿದ್ದರೂ ರಾಷ್ಟ್ರದ ಸ್ವಾತಂತ್ರ್ಯ ಸುವರ್ಣ ಮಹೋತ್ಸವಾದೀ ಸಂದರ್ಭದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಮಂಗಳೂರಲ್ಲಿ ಜರಗುತ್ತಿರುವೀ ಸನ್ನಿವೇಶದಲ್ಲಿ ಉಳ್ಳಾಲದ ಆ ಸ್ವಾತಂತ್ರ್ಯ ಯೋಧೆ ವೀರರಾಣಿ ಅಬ್ಬಕ್ಕಳ ಸ್ಮರಣೆ ಸಮಸ್ತರೂ ನವೋನ್ಮೇಷದಿಂದ ಆದುದು ಮಹತ್ವಪೂರ್ಣ ಸಂಗತಿ. ಕರ್ನಾಟಕದ ಸಾಮ್ರಾಜ್ಯವಾದ ವಿಜಯ ನಗರದ ವೈಭವವನ್ನು ಸ್ಮರಣೆ ಮಾಡುವ ಹಂಪಿಯ ಉತ್ಸವದಂತೆ ಪ್ರತಿ ವರ್ಷವೂ ಅಬ್ಬಕ್ಕದೇವಿಯ ಉತ್ಸವ ಉಳ್ಳಾಲದಲ್ಲಿ ಜರಗುವಂತೆ ಆಗಲೆಂದೂ, ಮುಂದಿನ ಜನಾಂಗವಾದ ವಿದ್ಯಾರ್ಥಿಗಳಲ್ಲಿ ತಾಯ್ನಾಡಿನ ಕುರಿತು ಅಭಿಮಾನ ಹೆಚ್ಚುವಂತೆ, ಆ ರಾಣಿಯ ಚರಿತ್ರೆ ಪಾಠಪುಸ್ತಕಗಳಲ್ಲಿ ಸೇರುವಂತಾಗಲೆಂದೂ ಆಗ್ರಹಪೂರ್ವಕ ವಿನಂತಿಸುತ್ತೇನೆ.

ಉಡುಪಿ, ಮಂಗಳೂರು, ಕಾಸರಗೋಡು ಈ ಪ್ರದೇಶಗಳನ್ನು ಒಳಗೊಂಡ ದಕ್ಷಿಣಕನ್ನಡ ಜಿಲ್ಲೆಗೆ ತುಳುನಾಡು ಎಂದು ಚಾರಿತ್ರಿಕ ನಾಮಧೇಯ, ವಿಜಯನಗರದ ಕೃಷ್ಣದೇವರಾಯನು ತುಳುವಂಶದವನೆಂದು ಚರಿತ್ರೆಯಲ್ಲಿ ಪ್ರಸಿದ್ಧನು. ಅದರಂತೆ ತುಳುನಾಡು ತುಂಬಾ ವಿಪುಲ ವಿಸ್ತಾರವುಳ್ಳದ್ದು. 'ಕೆಳದಿ ನೃಪವಿಜಯ'ವೆಂಬ ಕನ್ನಡ ಕಾವ್ಯದಲ್ಲಿ ತುಳುನಾಡಿನ ಕುರಿತು ಉಲ್ಲೇಖಗಳಿವೆ. ಪಾಶ್ಚಾತ್ಯ ಸಂಶೋಧಕನೂ ಭಾಷಾ ಪಂಡಿತನೂ ಆದ ಕಾಲ್ಡ್‌ವೆಲ್ ಇತರ ಎಲ್ಲಾ ದ್ರಾವಿಡ ಭಾಷೆಗಳಿಗಿಂತಲೂ ತುಳು ಅತ್ಯಂತ ಚೆಲುವಾದುದು ಎಂದು ಪ್ರಶಂಸಿಸಿದ್ದಾನೆ. ಈ ಪ್ರದೇಶದ ಜನರಿಗೆ ತುಳುಭಾಷೆಯ ಮೇಲೆ ಮಮತೆ. ಎಂ. ಎನ್. ಕಾಮತರು 'ತುಳುನಾಡ ರಾಣಿ ನೀ ಧನ್ಯೆ' ಎಂದು ಹಾಡಿದ್ದಾರೆ. 'ತುಳುನಾಡೊಳು ಹೊಳಲು ಮೆರೆವುದು ಹಳೆಯ ಕಾರ್ಕಳ' ಎಂಬುದು ಪಂಜೆಯವರ ಪದ್ಯ. 'ಪುನರ್ಜನ್ಮವಿದ್ದರೆ, ತೌಳವಮಾತೆಯೇ ಮರಳಿ ನಿನ್ನುದರದಲ್ಲಿ ಜನಿಸುವಂತೆ ಹರಸು' ಎಂದು ಗೋವಿಂದ ಪೈ ಕೇಳಿಕೊಂಡಿದ್ದಾರೆ. ಇವರೆಲ್ಲರೂ ಪ್ರಸಿದ್ಧ ಕನ್ನಡದ ಲೇಖಕರು; ಇವರ ಮನೆ ಮಾತು ಕೊಂಕಣಿ. ಆದರೂ ತುಳುನಾಡಿನ ಕುರಿತು ಅಷ್ಟು ಅಭಿಮಾನ. ಇಲ್ಲಿನ ಪ್ರಸಿದ್ಧ ಕನ್ನಡ ಸಾಹಿತಿಗಳಲ್ಲಿ ಖ್ಯಾತ ನಾಮರಾದ ರತ್ನಾಕರವರ್ಣಿ, ಮುದ್ದಣ, ಪಾರ್ತಿಸುಬ್ಬ ಹಲವರು ತುಳು ಮಾತೃ ಭಾಷೆಯವರು. ಇಲ್ಲಿ ಅಧಿಕ ಸಂಖ್ಯೆಯ ಖ್ಯಾತ ಲೇಖಕರನ್ನು ಹೆತ್ತಾಕೆ ತುಳು ತಾಯಿ; ಸಾಕಿದವಳು ಕನ್ನಡ ಮಾತೆ. ಆ ಇಬ್ಬರು ತಾಯಂದಿರ ಋಣವೂ ಅವರಿಗೆಲ್ಲರಿಗಿದೆ.

ಸುಮಾರು ನಾಲ್ಕು ನೂರು ವರ್ಷಗಳ ಹಿಂದಿನ ವಿಷ್ಣುತುಂಗ ಕವಿಯ 'ಶ್ರೀ ಭಾಗವತೋ' ತುಳುಕಾವ್ಯ ಇಂದು ಪ್ರಕಟವಾಗಿದ್ದು ಅಷ್ಟು ಹಿಂದಕ್ಕೆ ಮಹಾಕಾವ್ಯ ಶೈಲಿಯ ಅಂತಹ ತುಳುಕಾವ್ಯ ರಚಿತವಾಗಿದ್ದು ಅದಕ್ಕಿಂತ ಹಿಂದೆಯೇ ತುಳು ಭಾಷೆಯಲ್ಲಿ ಸಾಹಿತ್ಯ ರಚನೆ ಸಮೃದ್ಧವಾಗಿರಬೇಕು. ವಿಜಯನಗರ, ಕೆಳದಿ, ಇಕ್ಕೇರಿ ಮೊದಲಾದ ಕನ್ನಡದ ಅರಸರು ಈ ಪ್ರದೇಶವನ್ನು ಆಳುತ್ತಿದ್ದ ಕಾರಣ, ಇಲ್ಲಿನ ಜನತೆ ಕನ್ನಡವನ್ನು ಆಡಳಿತ ಭಾಷೆಯಾಗಿಯೂ, ತುಳುವನ್ನು ವ್ಯವಹಾರ ಭಾಷೆಯಾಗಿಯೂ ಅಂಗೀಕರಿಸಿತು. ರಾಜ್ಯ ಪುನರಚನೆಯನ್ನು ಭಾಷಾ ತಳಹದಿಯಲ್ಲಿ ಮಾಡಬೇಕೆಂದು ನೆಹರು ವರದಿ ಬಂದಾಗಲೇ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರು, ಪೊಳಲಿ ಶಿನಪ್ಪ ಹೆಗ್ಡೆ, ನಾರಾಯಣ ಕಿಲ್ಲೆ, ಸತ್ಯಮಿತ್ರ ಬಂಗೇರ, ಬಡಕಬೈಲ್ ಪರಮೇಶ್ವರ ಮೊದಲಾದವರು ತುಳು ಚಳವಳ ಪ್ರಾರಂಭಿಸಿದರು. ತುಳು ಸಾಹಿತ್ಯ ರಚನೆ ಆಯಿತು; ಇಂದು ತುಳು ಭಾಷೆಯಲ್ಲಿ ಹಲವು ಪತ್ರಿಕೆಗಳೂ ಸಹಸ್ರ ಸಂಖ್ಯೆಯ ನಾಟಕ, ಕತೆ, ಕಾದಂಬರಿ, ಕವನ ಕೃತಿಗಳು ರಚಿತವಾಗುತ್ತಿವೆ. ಹೀಗಿದ್ದರೂ ಇಲ್ಲಿನ ಎಲ್ಲಾ ತೌಳವರೂ ಕನ್ನಡಪರವಾಗಿರುವವರೇ ಎಂಬುದು ಗಮನಾರ್ಹ ವಿಷಯ. "ಕನ್ನಡಾಂತರ್ಗತಂ ತುಳುನಾಡು ನನ್ನದಿದು; ಭಾರತಾಂತರ್ಗತಂ ಕನ್ನಡದ ಬದುಕು" ಎಂದು ನಾನೇ ಅರ್ಧಶತಮಾನಕ್ಕಿಂತಲೂ ಹಿಂದೆ ಹೇಳಿರುವೆನು. ತುಳುನಾಡಿನ ಕುರಿತು, ತುಳು ಭಾಷೆಯ ಕುರಿತು ಈ ಪ್ರದೇಶದ ಬಹುಸಂಖ್ಯಾತರಿಗೆ ಅಭಿಮಾನವಿದೆ. ಆದರೆ ಆ ಅಭಿಮಾನ ಕನ್ನಡ ವಿರೋಧಿ ಸರ್ವಥಾ ಅಲ್ಲ; ಇದನ್ನು ವಿಶಾಲ ಹೃದಯದಿಂದ ಸ್ವೀಕರಿಸಿ ಕರ್ನಾಟಕ ಸಮಸ್ತರೂ ಸಹಾನುಭೂತಿಪರರಾಗತಕ್ಕದ್ದು. ಕರ್ನಾಟಕ ಸರಕಾರ, ತುಳು ಸಾಹಿತ್ಯ ಅಕಾಡೆಮಿ ಸ್ಥಾಪಿಸಿರುವುದು ಅಭಿನಂದನೀಯ. ರಾಜ್ಯ ಘಟನೆಯ ಎಂಟನೆಯ ಪರಿಚ್ಛೇದದಲ್ಲಿ, ತುಳು ಭಾಷೆ ಸೇರುವಂತೆ ಆಗಲೇಬೇಕು. ಉಡುಪಿಯ ರಾಷ್ಟ್ರಕವಿ ಗೋವಿಂದ ಪೈ ಸ್ಮಾರಕ ಸಂಶೋಧನ ಕೇಂದ್ರ ಇವರು ಹೊರತಂದಿರುವ. 'ತುಳು ನಿಘಂಟು' ಆರು ಸಂಪುಟಗಳು – ನಾಡಿನ ಪ್ರಸಿದ್ಧ ಭಾಷಾ ವಿದ್ವಾಂಸರು ಹಲವರ ಹದಿನೆಂಟು ವರ್ಷಗಳ ಸತತ ಪರಿಶ್ರಮದ ಸಾಹಸ ಸಾಧನೆಯ ಸಂಪೂರ್ಣ ಸಿದ್ಧಿಯಾಗಿದೆ. ನಿಘಂಟು ರಚನಾ ಇತಿಹಾಸದಲ್ಲಿಯೇ ಈ ತುಳು ನಿಘಂಟು, ಹೊಸ ದಾಖಲೆ ನಿರ್ಮಿಸಿದ್ದು ಈಗಾಗಲೇ ರಾಷ್ಟ್ರೀಯ ಖ್ಯಾತಿ ಗಳಿಸಿರುವುದು ಪ್ರಶಂಸನೀಯ.

ಕರ್ನಾಟಕದ ಈ ಪ್ರದೇಶದಲ್ಲಿ ತುಳುವರಂತೆ ಕೊಂಕಣಿ ಭಾಷೆಯವರೂ ಕನ್ನಡಕ್ಕೆ ಸಲ್ಲಿಸಿದ ಸೇವೆ ಅಮೂಲ್ಯ, ಕನ್ನಡದ ಪ್ರಥಮ ಕಾದಂಬರಿಕಾರ ಗುಲ್ವಾಡಿ ವೆಂಕಟರಾಯರ ಮನೆ ಮಾತು ಕೊಂಕಣಿ; ಕನ್ನಡದ ಸಣ್ಣ ಕತೆಗಳ ಪಿತಾಮಹರೆನಿಸಿದ ಪಂಜೆಯವರ ಮಾತೂ ಕೊಂಕಣಿ; ಕನ್ನಡದ ಪ್ರಥಮ ರಾಷ್ಟ್ರಕವಿ ಗೋವಿಂದ ಪೈ, ಕೊಂಕಣಿ ಮಾತೃಭಾಷೆಯವರು. ಅಂತೆಯೇ ಉಗ್ರಾಣ, ಉಳ್ಳಾಲ, ಕಾಮತ್, ಬೆನಗಲ್, ಕುಡ್ವಿ, ದಿನಕರ ದೇಸಾಯಿ ಪ್ರಭೃತಿ ಕೊಂಕಣಿ ಮಾತೃಭಾಷೆಯ ಮಹನೀಯರು,

ಕನ್ನಡ ಕಾವ್ಯ, ನಾಟಕ, ಪತ್ರಿಕೋದ್ಯಮ ಮುಂತಾದ ವಿವಿಧ ಕ್ಷೇತ್ರಗಳಲ್ಲಿ ಕನ್ನಡ ಸಾಹಿತ್ಯಕ್ಕೆ ಅವಿಸ್ಮರಣೀಯ ಸೇವೆ ಸಲ್ಲಿಸಿದ್ದಾರೆ. ಕೊಂಕಣಿ ಮಾತೃಭಾಷೆಯ ಈ ಕನ್ನಡ ಸಾಹಿತ್ಯಾಭಿಮಾನಿಗಳು ಕರಾವಳಿಯುದ್ದಕ್ಕೂ ವಿಶಾಲ ಕ್ಷೇತ್ರದಲ್ಲಿದ್ದಾರೆ. ಕನ್ನಡ ಸಾಹಿತ್ಯ ಸಮೃದ್ಧಿಗೆ ಪರಿಶ್ರಮಿಸುವುದರೊಂದಿಗೆ ಕೊಂಕಣಿ ಭಾಷಾಭಿವೃದ್ಧಿಗೂ ದುಡಿಯುತ್ತಿದ್ದಾರೆ. ಕೊಂಕಣಿ ಭಾಷೆಯಲ್ಲಿ ಹಲವು ಪತ್ರಿಕೆಗಳಲ್ಲಿ ಅನೇಕ ಕಥೆ, ಕವನ, ನಾಟಕಾದಿಸತ್ಕೃತಿಗಳು ರಚಿತವಾಗಿವೆ. ಇಂದು, ಒಂದು ಬೃಹತ್ ಕೊಂಕಣಿ ನಿಘಂಟು ರಚನೆಗೂ ಉಡುಪಿಯ ಆ ಸಂಶೋಧನ ಕೇಂದ್ರ ಮುಂದೆ ಬಂದಿದೆ. ಕನ್ನಡ ನಾಡು ನುಡಿಗಳಿಗೆ ಈ ಪ್ರದೇಶದ ಕೊಂಕಣಿ ಭಾಷಿಕರು ನೀಡಿದ ಅಪಾರ ಕೊಡುಗೆಯನ್ನು ಕೃತಜ್ಞತಾಪೂರ್ವಕ ಸ್ಮರಿಸುತ್ತಾ ಕನ್ನಡಿಗರು, ಅವರ ಕೊಂಕಣಿ ಭಾಷಾ ಸಾಹಿತ್ಯ ಪ್ರಚಾರದಲ್ಲಿ ಸಹಾನುಭೂತಿಯಿಂದ ಸಹಕರಿಸಬೇಕಾದುದು ಅಗತ್ಯ. ಈ ಅನ್ಯೋನ್ಯತೆಯನ್ನೇ ಇಂತಹ ಭಾಷಾ ಸಾಮರಸ್ಯವನ್ನೇ ಕನ್ನಡ ವೈಯಾಕರಣಿ ಭಟ್ಟಾಕಳಂಕನು "ಸರ್ವಭಾಷಾಮಯೀ ದೇವೀ" ಎಂದು ಹೇಳಿರುವನು.

ಶ್ರೀ ಕ್ಷೇತ್ರ ಧರ್ಮಸ್ಥಳದಲ್ಲಿ ನಿರಂತರ ನಡೆಸುತ್ತಿರುವ ಹಲವಾರು ರಾಷ್ಟ್ರೀಯ ಖ್ಯಾತಿಯ ಧಾರ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಮಹತ್ಕಾರ್ಯಗಳ ಜತೆಗೆ, ಕಳೆದ ಸುಮರು ಅರ್ಧ ಶತಕಗಳ ಪ್ರತಿವರ್ಷವೂ ಯಶಸ್ವಿಯಾಗಿ ಜರಗಿಸುತ್ತಿರುವ ಸರ್ವಧರ್ಮ ಸಮ್ಮೇಳನ ಹಾಗೂ ಸಾಹಿತ್ಯ ಸಮ್ಮೇಳನಗಳ ವಿಚಾರ ಉಲ್ಲೇಖನೀಯವಾಗಿದೆ. ನಾಡಿನಾದ್ಯಂತದಿಂದ ಪ್ರಸಿದ್ಧರೂ ವಿದ್ವಾಂಸರೂ ಹಿಂದೂ ಮುಸ್ಲಿಂ ಕ್ರಿಶ್ಚಿಯನ್ ಸಕಲ ತಜ್ಞ ಧರ್ಮಾನುಯಾಯಿಗಳನ್ನು ಆಮಂತ್ರಿಸಿ ನಮ್ಮ ರಾಷ್ಟ್ರದ ಧರ್ಮಾತೀತ್ಯತೆ ಜಾತ್ಯಾತೀತತೆಗಳ ನಿಜರೂಪವನ್ನೇ ಆ ಧರ್ಮಸಮ್ಮೇಳನಗಳು ತೋರಿಸುವುದರೊಂದಿಗೆ ಅಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನವೂ ಅದರ ಜತೆಗೆ ಪ್ರತಿ ವರ್ಷವೂ ಜರಗುತ್ತಿದೆ. ಡಿ. ವಿ. ಜಿ., ಮಾಸ್ತಿ, ಅ. ನ. ಕೃ., ಕಾರಂತ ಹೀಗೆ ಕರ್ನಾಟಕದ ಹಿಂದಿನ ಮತ್ತು ಇಂದಿನ ಸಕಲ ಖ್ಯಾತ ಸಾಹಿತ್ಯ ವಿದ್ವಾಂಸರೂ ಆಮಂತ್ರಿತರಾಗಿ ನಡೆಯುತ್ತಿರುವ ಸಾಹಿತ್ಯ ಸಮ್ಮೇಳನ ಕನ್ನಡ ಸಾಹಿತ್ಯ ಪರಿಷತ್ತು ಜರಗಿಸುವ ಸಮ್ಮೇಳನಗಳಂತೆ ಆಕರ್ಷಕವಾಗಿರುತ್ತದೆ. ರಾಜ್ಯದ ಯವುದೇ ವಿಶ್ವವಿದ್ಯಾಲಯವೂ ಪ್ರಕಟಿಸುವ ಸಾಹಸ ಮಾಡದಂತಿರುವ ಬೃಹತ್ ಸಾಹಿತ್ಯ ಸಂಪುಟಗಳನ್ನು ಉಗ್ರಾಣ ಮಂಗೇಶರಾಯರ ಹಾಗೂ ಎಂ. ಎನ್. ಕಾಮತರ ಸಮಗ್ರ ಸಾಹಿತ್ಯ ಸಂಪುಟಗಳನ್ನು ಪ್ರಕಟಿಸಿದ ಪುತ್ತೂರು ಕರ್ನಾಟಕ ಸಂಘ ಅಂತೆಯೇ ಗೋವಿಂದ ಪೈಯವರ ಸಮಗ್ರ ಸಂಶೋಧನ ಲೇಖನಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಪ್ರತ್ಯೇಕ ಸಂಪುಟಗಳಲ್ಲಿ ಹೊರತಂದ ಉಡುಪಿ ಗೋವಿಂದ ಪೈ ಸಂಶೋಧನ ಕೇಂದ್ರದ ಮಹತ್ಕಾರ್ಯ ಪ್ರಶಂಸಾರ್ಹವಾಗಿದೆ. ಕರ್ನಾಟಕ ರಾಜ್ಯ ರಚನೆಯಾದ ನಂತರ ಮಾತ್ರ ಸಾಹಿತ್ಯ ಸಮ್ಮೇಳನಗಳಿಗೆ ರಾಜ್ಯ ಸರಕಾರ ಹಣ ಬಿಡುಗಡೆ ಮಾಡಲು ಪ್ರಾರಂಭಿಸಿದ್ದು; ಅದಕ್ಕಿಂತ ಹಿಂದೆಯೇ

ಮದ್ರಾಸು, ಬೊಂಬಾಯಿ, ಹೈದರಬಾದ್ ಮೊದಲಾದ ರಾಜ್ಯಗಳಲ್ಲಿ ಕನ್ನಡ ಹಂಚಿದ್ದಾಗಲೂ ಸರಕಾರದ ಹಣ ಪಡೆಯದೆ ಬೇರೆ ಬೇರೆ ಪ್ರದೇಶಗಳಲ್ಲಿ ಯಶಸ್ವಿಯಾಗಿ ಸಮ್ಮೇಳನಗಳು ಜರಗಿವೆ; ವಸತಿ ಊಟೋಪಚಾರಗಳು ವ್ಯವಸ್ಥಿತವಾಗಿ ಆಗಿವೆ. ಇಂದು ಸರಕಾರ ಧನಸಹಾಯ ಮಾಡುವುದಿದ್ದರೂ, ಅದು ಜನತೆ ನೀಡಿದ ತೀರ್ವೆ ತೆರಿಗೆಗಳ ಆದಾಯದ ಭಾಗವಲ್ಲದೆ, ಬೇರೆಯಲ್ಲ. ಅದೂ ಜನಸಾಮಾನ್ಯರ ಕೊಡುಗೆಯೇ ಅದನ್ನು ಸ್ವೀಕರಿಸುವುದರಲ್ಲಿ ಅಪರಾಧವಿಲ್ಲ. ಹಣ ನೀಡಿದ ಬಗ್ಗೆ ಸರಕಾರಕ್ಕೆ ಸಂಪೂರ್ಣ ಕೃತಜ್ಞರಾಗಲೇಬೇಕು. ಸಕಾಲದಲ್ಲಿ ಸರಿಯಾದ ಲೆಕ್ಕ ಪತ್ರಗಳನ್ನು ಒದಗಿಸತಕ್ಕದ್ದು. ಹಾಗೆಂದು ಹಣ ಪಡೆದದ್ದರಿಂದ ಆತ್ಮಾಭಿಮಾನಶೂನ್ಯರಾಗಬಾರದು. ಅಥವಾ ಧನಸಹಾಯ ಪಡೆದು ಆಡಂಬರ ಮಾಡಕೂಡದು. ಸಾಹಿತ್ಯಸಮ್ಮೇಳನಗಳು ನಿರುದ್ದೇಶದ ಜನಜಂಗುಳಿಯ ಜಾತ್ರೆಯಾಗದೆ ಸದುದ್ದೇಶದ ಪುಣ್ಯಯಾತ್ರೆಯಂತಿರಬೇಕು. ಈ ಸಲದ ಸಾಹಿತ್ಯ ಸಮ್ಮೇಳನ ಅಂತಹ ಉತ್ತಮ ಆದರ್ಶವನ್ನು ಮುಂದಿಟ್ಟು ಸುವ್ಯವಸ್ಥಿತವಾಗಿ ಜರಗುತ್ತದೆ. ಜರಗಲಿ ಎಂದು ನನ್ನ ಹಾರೈಕೆ. ಸಮೇಳನಗಳನ್ನು ರಾಜ್ಯ ಜಿಲ್ಲಾ ತಾಲೂಕು ಮಟ್ಟಗಳಲ್ಲಿ ಯಶಸ್ವಿಯಾಗಿಸಿದ ಅನುಭವಶಾಲೀ ಮಹನೀಯರೇ ಇಲ್ಲಿಯೂ ಮುಂದಾಳುತನ ವಹಿಸಿರುವುದು ಅಭಿನಂದನೀಯ. ಮುಂದಿನ ಸಮ್ಮೇಳನಗಳ ಸಮರ್ಥ ಸಂಘಟನೆಗೆ ಈ ಉದಾರ ಹೃದಯದಿಂದ ಸರ್ವರೂ ಸಹಕರಿಸಬೇಕೆಂದೂ ವಿನಂತಿಸುತ್ತೇನೆ.

ಸಾಹಿತ್ಯ ಸಮ್ಮೇಳನಗಳಲ್ಲಿ ಮಂಜೂರಾಗುವ ನಿರ್ಣಯಗಳು ಜಾರಿಯಾಗುವಂತೆ ಪ್ರಯತ್ನಿಸಬೇಕಾದ ಮಹತ್ವದ ಕರ್ತವ್ಯವಿದೆ; ಪ್ರತಿ ಸಮ್ಮೇಳನದಲ್ಲೂ ಆದ ನಿರ್ಣಯಗಳನ್ನು ಸಂಬಂಧಪಟ್ಟವರಿಗೆ ಯೋಗ್ಯ ಕಾರ್ಯಕ್ರಮ ಕೈಗೊಳ್ಳುವರೆ ಕೇಳಿಕೊಂಡು ಪತ್ರ ವ್ಯವಹಾರ ಮಾಡಿ, ಅವರಿಂದ ಸಕಾಲದಲ್ಲಿ ಉತ್ತರ ಬರದಿದ್ದರೆ ಮರಳಿ ನೆನಪಿಸುವ ಪತ್ರವನ್ನೂ ಪರಿಷತ್ತು ಕಳುಹಿಸಬೇಕು. ನಿರ್ಣಯಗಳಲ್ಲಿ ಪ್ರಸ್ತಾಪಿಸಿದ ವಿಷಯದಲ್ಲಿ ಸಂಬಂಧಪಟ್ಟವರು ಅವಶ್ಯವಿರುವ ಕಾರ್ಯಕ್ರಮ ಕೈಗೊಳ್ಳುತ್ತಾರೆ ಅಥವಾ ಕೈಗೊಳ್ಳುವುದಿಲ್ಲ. ಈ ಸಂಗತಿಗಳನ್ನು ಖಚಿತವಾಗಿ ತಿಳಿದುಕೊಳ್ಳುವುದು ತೀರಾ ಅವಶ್ಯ; ಹಾಗಿಲ್ಲವಾದರೆ ಸಹಸ್ರ ಸಹಸ್ರ ಕಂಠಗಳ ಒಮ್ಮತದಿಂದ ಮಾಡಿದ ನಿರ್ಣಯಗಳಿಗೆ ಬೆಲೆಯೇನು? ಯಾರು ಯಾವ ನಿರ್ಣಯ ಮಂಡಿಸಿದ್ದಾರೋ ಅವರಿಗೆ ಅದರ ಪರಿಣಾಮದ ಕುರಿತು ತಿಳಿಸುವುದೂ ಅಗತ್ಯ. ಹಾಗೆ ತಿಳಿಸಿದಲ್ಲಿ ಮಂಡಿತವಾಗಿ ಮಂಜೂರಾದ ನಿರ್ಣಯಗಳು ತಿರಸ್ಕೃತವಾದರೆ ಮುಂದಿನ ಹೆಜ್ಜೆ ಅವರೂ ನಿರ್ಣಯಿಸಬಹುದು. ಸಮ್ಮೇಳನಗಳಲ್ಲಿ ಮಂಜೂರು ಮಾಡತಕ್ಕ ನಿರ್ಣಯಗಳು ನಾಡು ನುಡಿಗಳಿಗೆ, ಸಾಹಿತ್ಯ ಸಂಸ್ಕೃತಿಗಳಿಗೆ ಸಂಬಂಧಪಟ್ಟವುಗಳೇ ಆಗಿರಬೇಕೆಂಬ ಮೂಲತತ್ವವನ್ನು ಎಲ್ಲರೂ ಪರಿಪಾಲಿಸತಕ್ಕದ್ದು. ಹಾಗಾದರೆ ಮಾತ್ರ ನಿರ್ಣಯಗಳಿಗೆ ಬೆಲೆ ಬರುವುದು. ಸಂಬಂಧಪಟ್ಟವರಾದರೂ ಅವನ್ನು ಪರಿಶೀಲಿಸಿ

ಯುಕ್ತ ಕಾರ್ಯಕ್ರಮ ಕೈಗೊಳ್ಳುವರೇ ಅನುಕೂಲಕರವಾಗುವುದು. ಹಾಗಾಗಿ ನಿರ್ಣಯಗಳ ಮಂಡನೆ ಕುರಿತೂ ಗಂಭೀರ ಪರಿಶೀಲನೆ ಅಗತ್ಯ. ಹೀಗೆ ಶ್ರದ್ಧೆಯಿಂದ ಈ ನಿರ್ಣಯ ಮಂಜೂರಾತಿ ಕಾರ್ಯ ನಡೆದಲ್ಲಿ ಕೆಲವು ಕಡೆಗಳಿಂದ ಕೇಳಿಬರುವ ದೂರು ಇಲ್ಲದಾಗಿ ಸಮ್ಮೇಳನದ ಕಾರ್ಯಕಲಾಪಗಳಿಗೆ ಕಳೆಯೇರುವುದು.

ಕೊನೆಯದಾಗಿ, ಆದರೂ ಅತ್ಯಂತ ಪ್ರಾಮುಖ್ಯವಾಗಿ, ಕನ್ನಡ ನಾಡು– ನುಡಿಗಳಿಗೆ ಪ್ರತ್ಯಕ್ಷ ಸಂಬಂಧಿಸಿದ್ದು ಮಾತ್ರವಲ್ಲ, ರಾಜ್ಯ ಕೇಂದ್ರ ಸರಕಾರಗಳಿಗೂ ಸರಿಯಾಗಿ ಸಂಬಂಧಪಟ್ಟ ಮಹತ್ವದ ಒಂದು ವಿಷಯವನ್ನು ಈ ಮಹಾಸಮ್ಮೇಳನದಲ್ಲಿ ಸೇರಿದ ದೇಶ ವಿದೇಶಗಳಿಂದಲೂ ಆಗಮಿಸಿದ ಸಮಸ್ತ ಕನ್ನಡಿಗರ ಮುಂದಿಡಲು ಆಶಿಸುತ್ತೇನೆ. ರಾಷ್ಟ್ರ ಮುಖಂಡರೇ ಒಪ್ಪಿದಂತೆ, ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ, ಆಡಳಿತದ ಭಾಷೆ, ಜನಸಾಮಾನ್ಯರಿಗೂ ತಿಳಿಯಬೇಕೆಂಬ ಪ್ರಾಥಮಿಕ ತತ್ವಕ್ಕನುಸಾರವಾಗಿ ಭಾಷಾಮೂಲ ರಾಜ್ಯ ವಿಂಗಡಣೆಯ ಕಾರ್ಯ ಕೈಗೆತ್ತಿಕೊಳ್ಳುವಲ್ಲಿ ವಿಳಂಬವಾದ ಕಾರಣ, ಪೊಟ್ಟಿ ಶ್ರೀ ಸೀತಾರಾಮುಲು ಮಾಡಿದ ಆತ್ಮ ಬಲಿದಾನದ ಪರಿಣಾಮವಾಗಿ ಆಂಧ್ರ ರಾಜ್ಯ ನಿರ್ಮಾಣವಾಯಿತು. ಕನ್ನಡಿಗರೂ ಎಚ್ಚೆತ್ತರು. ದೇಶದಾದ್ಯಂತ ಭಾಷಾ ರಾಜ್ಯದ ರಚನೆಯ ಪ್ರಬಲ ಆಂದೋಲನ ಆರಂಭವಾಯಿತು. ಕೇಂದ್ರ ಸರಕಾರ ಆ ವಿಷಯ ಇತ್ಯರ್ಥ ಮಾಡಲು ಪಜುಲಾಲಿ ತ್ರಿಸದಸ್ಯ ಆಯೋಗ ನೇಮಿಸಿತು.

ಪಜುಲಾಲಿ ಆಯೋಗ ದೇಶಸರ್ವತ್ರ ಸಂಚರಿಸಿ ಜನಾಭಿಪ್ರಾಯ ಸಂಗ್ರಹಿಸಿದಂತೆ ಈ ಕಡೆಗೂ ಆಗಮಿಸಿತು; ಆಯೋಗದಲ್ಲಿ ಸರ್ದಾರ್ ಪಣಿಕ್ಕರ್ ಎಂಬ ಓರ್ವ ಕೇರಳೀಯ ಸದಸ್ಯರೂ ಇದ್ದರು. ಆಯೋಗದ ಮುಂದೆ ಇಲ್ಲಿನ ಕನ್ನಡ ಮುಖಂಡರು ಹೇಳಿಕೆ ನೀಡಿದರು. ಆಗ, ಕಾಸರಗೋಡು ತಾಲೂಕು ಸುಮಾರು 800 ಚದರ ಮೈಲು ವಿಶಾಲವಾಗಿದ್ದು ನೀಲೇಶ್ವರದ ಬಳಿಯ ಕವಾಯಿ ಹೊಳೆ ತನಕ ವಿಸ್ತರಿಸಿತ್ತು. ಸ್ವತಃ ಮಲೆಯಾಳಿಯಾದ ಸರ್ದಾರ್ ಪಣಿಕ್ಕರ್ ಎಲ್ಲವನ್ನೂ ಬಲ್ಲವರಾಗಿದ್ದು ಕಾಸರಗೋಡಿನ ಕನ್ನಡದ ಮುಖಂಡರೊಡನೆ, ಚಂದ್ರಗಿರಿ – ಪಯಸ್ವಿನಿ ಹೊಳೆ ದಾಟಿದ ಮಲೆಯಾಳಿ ಹೆಂಗಸು ಜಾತಿ ಬಹಿಷ್ಕೃತಳಾಗುತ್ತಾಳೆ ಎಂಬ ಮಲಯಾಳೀ ಶ್ಲೋಕವನ್ನು ಹೇಳಿ, ಚಂದ್ರಗಿರಿ – ಪಯಸ್ವಿನೀ ನದಿಗಳ ಉತ್ತರಭಾಗ ಕರ್ನಾಟಕದ್ದೇ ಎಂದೂ ದಕ್ಷಿಣಭಾಗದಲ್ಲಿ ಮಲೆಯಾಳ ಮಾತನಾಡುವ ಜನಸಂಖ್ಯೆ ಅಧಿಕವಿರುವುದರಿಂದ ಆ ಭಾಗ ಕೇರಳಕ್ಕೆ ಸೇರುವಲ್ಲಿ ಆಕ್ಷೇಪವಿಲ್ಲವಷ್ಟೇ ಎಂದು ಕೇಳಿದಂತೆ, ಕನ್ನಡದ ಮುಖಂಡರು 800 ಚದರ ಮೈಲು ವಿಸ್ತೀರ್ಣದ ಕಾಸರಗೋಡು ತಾಲೂಕಿನ ಸುಮಾರು 500 ಚದರ ಮೈಲುಗಳಷ್ಟು ಭಾಗವನ್ನು ಕೇರಳಕ್ಕೆ ಸೇರಿಸಲು ಉದಾರ ಮನಸ್ಕರಾಗಿ ವಿವಾದವಿಲ್ಲದೆ ಸಮಸ್ಯೆ ಪರಿಹಾರವಾಗಲಿ ಎಂದು ಒಪ್ಪಿಕೊಂಡರು. ಆದರೆ ಆಯೋಗದ ವರದಿ ಬಹಿರಂಗಗೊಂಡಾಗ ಮಾಡಿದ ವಂಚನೆಯಿಂದ ಕನ್ನಡಿಗರೆಲ್ಲರೂ ಬಹಳವಾಗಿ ನೊಂದುಕೊಂಡಿದ್ದಾರೆ. ಒಬ್ಬ ನ್ಯಾಯಮೂರ್ತಿ ತನ್ನ

ನ್ಯಾಯಾಲಯಕ್ಕೆ ಆತನ ಸಂಬಂಧಿಕನ ವ್ಯಾಜ್ಯ ಬಂದರೆ, ತನಿಖೆ ನಿಷ್ಪಕ್ಷವಾಗಬೇಕೆಂದು, ಆ ವ್ಯಾಜ್ಯವನ್ನು ಬೇರೆ ನ್ಯಾಯಾಲಯಕ್ಕೆ ವರ್ಗಾಯಿಸಬೇಕು. ಗಡಿ ವಿವಾದದ ಸಂಬಂಧದ ಆಯೋಗದಲ್ಲಿ ಸೇರಲೇಬಾರದಿತ್ತು, ಇತರರನ್ನು ಕಳುಹಿಸಬೇಕಿತ್ತು. ಅದರ ಬದಲು, ಕೇರಳಕ್ಕೆ ಸಂಬಂಧಿಸಿದ ವಿವಾದ ತನಿಖೆಗೆ, ಕೇರಳೀಯರಾದ ಬ್ಯಾರಿಸ್ಟರ್ ಪಣಿಕ್ಕರರೇ ಬಂದು, ಕನ್ನಡಿಗರಿಗೆ ನ್ಯಯದಾನ ಮಾಡುವ ಭರವಸೆಯನ್ನೂ ಕೊಟ್ಟು ಕೇರಳ ಪಕ್ಷಪಾತ ತೀರ್ಪು ಹೊರಡಿಸಿದ್ದು ತೀರಾ ಅನ್ಯಾಯ. ನ್ಯಾಯಮೂರ್ತಿಯೂ ವಕೀಲರೂ ವಾದಿಯೂ ಪ್ರತಿವಾದಿಯೂ ಎಲ್ಲವೂ ಆಗಿ ಪಣಿಕ್ಕರ್ ವ್ಯವಹರಿಸಿದ್ದು ಇದೊಂದು ಕಳಂಕಿತ ಚರಿತ್ರೆಯಾಗಿದೆ ಎನ್ನದೆ ನಿರ್ವಾಹವಿಲ್ಲ.

ಹಾಗಾಗಿ, ಸಕಲ ರಾಜಕೀಯ ಪಕ್ಷಗಳ ಕಾಸರಗೋಡಿನ ಮುಖಂಡರೂ ಅವರವರ ಪಕ್ಷಗಳಿಗೆ ಒಮ್ಮೆಲೇ ರಾಜಿನಾಮೆಯಿತ್ತು. ಕನ್ನಡವೇ ಪಕ್ಷವೆಂದು ಒಗ್ಗಟ್ಟಿನಿಂದ ಅನ್ಯಾಯದ ವಿರುದ್ಧ ಹೋರಾಟ ನಡೆಸಿದರು. ವಿದ್ಯಾರ್ಥಿಗಳು ಶಾಲೆ ಕಾಲೇಜು ಬಹಿಷ್ಕರಿಸಿ ಹೊರಬಂದು ಮೆರವಣಿಗೆ ಮಾಡುತ್ತಾ 'ಕಾಸರಗೋಡು ಕನ್ನಡನಾಡು' ಎಂದು ಘೋಷಿಸಿದರು, ತರುಣ ವೃದ್ಧರಾದಿಯಾಗಿ ಹಲವರು ಸೆರೆಮನೆ ಸಂಕಷ್ಟ ಅನುಭವಿಸಿದರು. ಮಹಿಳೆಯರೂ ಹಸುಗೂಸುಗಳನ್ನೆತ್ತಿಕೊಂಡೇ ಸೆರೆಮನೆ ಸೇರಿದ್ದರು. ಕನ್ನಡದ ಪ್ರಥಮ ರಾಷ್ಟ್ರಕವಿ ಗೋವಿಂದ ಪೈ "ನನ್ನ ಕರುಳಿನ ಕೊರಗು ಎಂದರೆ – ದಕ್ಷಿಣ ಕನ್ನಡವನ್ನು ಜೀವಂತ ಸಿಗಿದು ಅದರ ಪಂಚಪ್ರಾಣಗಳಲ್ಲಿ ಒಂದರಂತಿರುವ ಕಾಸರಗೋಡು ತಾಲೂಕನ್ನು ಅದರಿಂದ ಸೆಳೆ ತೆಗೆದ ನೃಶಂಸತೆ" – ಕಣ್ಣಿನಲ್ಲಿ ನೆತ್ತರು ತೋರುವ ನೃಶಂಸತೆ" ಎಂದು ಗುಡುಗಿದರು.

ಮುಂದೆ ಚುನಾವಣೆ ಆಗಿ, ಕನ್ನಡ ಧುರಿಣ ಶ್ರೀ ಉಮೇಶ ರಾಯರು ಮಂಜೇಶ್ವರ ಮತದಾರ ಕ್ಷೇತ್ರದಿಂದ ಅವಿರೋಧವಾಗಿ ಆಯ್ಕೆಗೊಂಡರು. ಕಾಸರಗೋಡು ಮತದಾರ ಕ್ಷೇತ್ರದಿಂದ ಕನ್ನಡಿಗರ ಬೆಂಬಲ ಪಡೆದು, ಕಾಸರಗೋಡಿಗಾದ ಅನ್ಯಾಯದ ಪರಿಮಾರ್ಜನೆಗೆ ಪ್ರಯತ್ನಿಸುವ ಲಿಖಿತ ಭರವಸೆ ನೀಡಿ, ಕಾಂಗ್ರೆಸ್ ಉಮೇದ್ವಾರ ಶ್ರೀ ಸಿ. ಕೃಷ್ಣನ್ ನಾಯರ್ ಗೆದ್ದರು. ಮಲಬಾರ್ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಿ.ಕೆ. ಗೋವಿಂದನ್ ನಾಯರರೂ ಬರಹ ಮೂಲಕ ಅಂತಹ ಭರವಸೆಯಿತ್ತರು. ಮುಂದಿನ ಚುನಾವಣೆಯಲ್ಲಿ ಕಾಸರಗೋಡು ಮತದಾರ ಕ್ಷೇತ್ರದಲ್ಲಿ ಡಾ. ಕ್ಯಾಪ್ಟನ್ ಶೆಟ್ಟರು ಚಂದ್ರಗಿರಿ ಹೊಳೆಯ ತನಕ ಬಹುಮತ ಪಡೆದರು. ಮಂಜೇಶ್ವರದಿಂದ ಶ್ರೀ ಮಹಾಬಲ ಭಂಡಾರಿಗಳು ಮೂರನೆಯ ಸಲವೂ ವಿಜಯಿಗಳಾಗಿ ಬಂದು ಕಾಸರಗೋಡು ಕರ್ನಾಟಕದೊಂದಿಗೆ ವಿಲೀನವಾಗಲು ಕಾಸರಗೋಡು ಜನಾಭಿಪ್ರಾಯ ಅನುಕೂಲವೆಂದು ರುಜುವಾತಾಯಿತು. ಕೇರಳದ ಕಮ್ಯುನಿಸ್ಟ್ ಪಾರ್ಟಿಯ ಮುಂದಾಳು, ಹಾಗೂ ಕೇರಳದ ಪ್ರಥಮ ಮುಖ್ಯಮಂತ್ರಿ ಶ್ರೀ ಇ. ಎಂ. ಎಸ್. ನಂಬೂದಿರಿಪ್ಪಾಡ್‌ರು ಚಂದ್ರಗಿರಿ ಹೊಳೆಯ ಉತ್ತರಭಾಗ ಕರ್ನಾಟಕದ್ದೆಂದು ಸ್ಪಷ್ಟವಾಗಿ ಹೇಳಿದ್ದರು;

ಆಮೇಲೆ ಮುಖ್ಯಮಂತ್ರಿಗಳಾದ ಶ್ರೀ ಅಚ್ಯುತ್ತ ಮೆನನ್, ಶ್ರೀ ಪಟ್ಟಂ ಥಾನು ಪಿಳ್ಳೆ ಇಂತಹ ಕೇರಳದ ಹಲವು ಪಕ್ಷಗಳ ಮುಖಂಡರು ಕಾಸರಗೋಡಿನ ಕನ್ನಡಿಗರಿಗೆ ಅನ್ಯಾಯವಾಗಿದೆಯೆಂದು ಒಪ್ಪಿದರು; ಕೇರಳದ ಮಂತ್ರಿಗಳಾಗಿದ್ದ ಪ್ರೊ. ಮುಂಡಶ್ಶೇರಿ, ಶ್ರೀ ಚಂದ್ರಶೇಖರನ್ ಪ್ರಭೃತಿಗಳೂ ಕನ್ನಡಿಗರಿಗಾದ ಅನ್ಯಾಯ ಪರಿಮಾರ್ಜನೆಯಾಗಬೇಕೆಂದು ಸಮ್ಮತಿಸಿದ್ದಾರೆ. ಹೀಗೆ ಈ ಕಡೆ ಕಾಸರಗೋಡಿನ ಹೋರಾಟ ಉಗ್ರವಾಗುತ್ತಿರುವಾಗ, ಆ ಕಡೆ ಮಹಾರಾಷ್ಟ್ರದವರೂ ತಮಗೆ ಅನ್ಯಾಯವಾಗಿದೆಯೆಂದು ಚಳವಳ ಹೋಡಿದ ಪರಿಣಾಮವಾಗಿ ರಾಜ್ಯಗಳೊಳಗಿನ ಗಡಿ ಸಮಸ್ಯಾ ಪರಿಹಾರಕ್ಕೆ ಸುಪ್ರಿಂ ಕೋರ್ಟಿನ ಮುಖ್ಯ ನ್ಯಾಯಧೀಶರಾಗಿದ್ದ ಜಸ್ಟಿಸ್ ಮಹಾಜನರ ಆಯೋಗವನ್ನು ಕೇಂದ್ರ ಸರಕಾರ ನೇಮಿಸಿತು. ನೇಮಕವಾದ ಮಹಾಜನ್ ಆಯೋಗದಲ್ಲಿ ಕಾಸರಗೋಡು ವಿವಾದ ಸೇರುವರೆ, ಆಗ ಪಾರ್ಲಿಮೆಂಟಿನಲ್ಲಿ ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಹಿಂದೆಯೇ ಲಿಖಿತವಾಗಿಯೂ ಬಾಯ್ದೆರೆಯಾಗಿಯೂ ಒಪ್ಪಿದ ದಾಖಲೆಯಂತೆಯೂ ಜ. ಮಹಾಜನರು ಕೂಲಂಕಷ ಎಲ್ಲವನ್ನೂ ಪರಿಶೀಲಿಸಿ, ಚಂದ್ರಗಿರಿಯ ಉತ್ತರಭಾಗ ಕರ್ನಾಟಕಕ್ಕೆ ಸೇರಬೇಕೆಂದು ಚಾರಿತ್ರಿಕ ಮಹತ್ವದ ತೀರ್ಪಿತ್ತಿದ್ದಾರೆ.

ಮಹಾಜನ ತೀರ್ಪು ಇಂದು ಪಾರ್ಲಿಮೆಂಟಿನ ಮುಂದಿದೆ. ಕೇಂದ್ರ ಸರಕಾರವೇ ನೇಮಿಸಿದ ಅಯೋಗದ ಆ ತೀರ್ಪನ್ನು ಸರಕಾರವೇ ಒಪ್ಪಿದರೆ ಮುಗಿಯಿತು. ಹಾಗೆ ಒಪ್ಪುವಂತೆ, ಯಾವ ರಾಜ್ಯಕ್ಕೆ ಕಾಸರಗೋಡು ಸೇರಬೇಕೋ ಆ ಕರ್ನಾಟಕ ಸರಕಾರ ಒತ್ತಾಯಿಸತಕ್ಕದ್ದು. ಬೆಳಗಾವಿ ಪ್ರಶ್ನೆಯಲ್ಲಿ ಕರ್ನಾಟಕಕ್ಕೆ ತೊಂದರೆಯಾದೀತೋ ಎಂಬ ಸಂದೇಹ ಸಂಪೂರ್ಣ ನಿರಾಧಾರ. ಬೆಳಗಾವಿ ಕರ್ನಾಟಕದ್ದೆಂದು ಕೇಳ್ಕರ್, ತಿಲಕ್, ಗಾಂಧಿ ಇಂತಹ ರಾಷ್ಟ್ರ ನಾಯಕರೇ ಹೇಳಿದ್ದಾರೆ. ಅದು ಹಿಂದೆಯೂ ಕರ್ನಾಟಕದಲ್ಲಿಯೇ ಇರುತ್ತದೆ. ಬೆಳಗಾವಿ ಕರ್ನಾಟಕದಲ್ಲಿ ಸ್ಥಿರವಾಗಿ ಉಳಿಯುವುದು ಮಾತ್ರವಲ್ಲ, ಮಹಾಜನ ತೀರ್ಪು ಜಾರಿಯಾದಲ್ಲಿ, ಕಾಸರಗೋಡಿನಂತೆ, ಅಚ್ಚಗನ್ನಡ ಪ್ರದೇಶಗಳಾಗಿದ್ದು ಮಹಾರಾಷ್ಟ್ರಕ್ಕೆ ಸೇರಿರುವ ಸಿದ್ಧರಾಮನ ಸೊನ್ನಲಿಗೆಯ ದಕ್ಷಿಣ ಶೊಲ್ಲಾಪುರ ಜತೆ, ಅಕ್ಕಲಕೋಟೆ ಮೊದಲಾದ ಕನ್ನಡ ಪ್ರದೇಶಗಳೂ ಮರಳಿ ಕರ್ನಾಟಕದೊಂದಿಗೆ ವಿಲೀನಗೊಳ್ಳುತ್ತವೆ.

ಈ ಸಮ್ಮೇಳನದಲ್ಲಿ ಮಹಾಜನ ವರದಿ ಜಾರಿಗೊಳಿಸುವ ಕುರಿತು ಹಿರಿಯ ರಾಷ್ಟ್ರ ನೇತಾರರಾದ ಶ್ರೀ ನಿಜಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ಗೋಷ್ಠಿ ಏರ್ಪಡಿಸಿರುವುದು ತುಂಬಾ ಸೂಕ್ತವಾಗಿದೆ. ಆ ಗೋಷ್ಠಿಯಲ್ಲಿ ಕನ್ನಡ ನಾಡಿನ ಹಲವರು ಧುರೀಣರು ಭಾಗವಹಿಸಲು ಒಪ್ಪಿರುವುದೂ ಅತೀವ ಆಶಾದಾಯಕವಾದ ಬೆಳವಣಿಗೆ. ಈ ಮಹತ್ವದ ಗೋಷ್ಠಿಯ ಚರ್ಚೆಯ ಫಲಿತಾಂಶವಾಗಿ ಕರ್ನಾಟಕ ಸರಕಾರ ಹಾಗೂ ಕನ್ನಡ ಧುರೀಣರು ಒಗ್ಗಟ್ಟಾಗಿ ಕೇಂದ್ರ ಸರಕಾರವನ್ನು ಎಚ್ಚರಿಸಬೇಕು. ಅವಶ್ಯವೂ,

ನ್ಯಾಯಸಮ್ಮತವೂ ಆದ ಈ ರಾಷ್ಟ್ರೀಯ ಕರ್ತವ್ಯದಲ್ಲಿ ಎಲ್ಲರೂ ಒಂದೇ ಮನಸ್ಸಿನಿಂದ ಸಹಕರಿಸಿ ಗಡಿನಾಡ ಕನ್ನಡಿಗರನ್ನು ಉಳಿಸಿ ಎಂದು ಬೇಡಿಕೊಳ್ಳುತ್ತೇನೆ. ಅನ್ಯಾಯದಿಂದ ಕಾಸರಗೋಡನ್ನು ಕೇರಳಕ್ಕೆ ತಳ್ಳಿದ ಅದೇ ವರ್ಷ, ಧಾರವಾಡದಲ್ಲಿ ರಾಷ್ಟ್ರಕವಿ ಕುವೆಂಪು ಅಧ್ಯಕ್ಷತೆಯಲ್ಲಿ ಜರಗಿದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾನು – "ಬೆಂಕಿ ಬಿದ್ದಿದೆ ಮನೆಗೆ ಓ ಬೇಗ ಬನ್ನಿ, ಕನ್ನಡದ ಗಡಿ ಕಾಯೆ, ಗುಡಿ ಕಾಯೆ, ನುಡಿ ಕಾಯೆ, ಕಾಯಲಾರೆವೆ ಸಾಯೆ, ಓ ಬೇಗ ಬನ್ನಿ, ಕನ್ನಡದ ನಾಡಿಂದ ಕಾಡಿಂದ ಗೂಡಿನಿಂದ ಕಡಲಿಂದ ಸಿಡಿಲಿಂದ ಗುಡುಗಿ ಬನ್ನಿ – ಅಕ್ಕದಿರೆ ಅಣ್ಣದಿರೆ ತಂಗಿಯರೆ ತಮ್ಮದಿರೆ ಬೇಗೆಯನ್ನಾರಿಸಲು ಬೇಗ ಬನ್ನಿ" ಎಂದು ನಮ್ಮ ಅಳಲನ್ನು ತೋಡಿಕೊಂಡಾಗ, ಬಂದೇ ಬರುತ್ತೇವೆ; ಧೈರ್ಯವಾಗಿರಿ ಎಂಬ ಭರವಸೆಯನ್ನು ಆ ಸಮ್ಮೇಳನ ಸಭಾ ಮಧ್ಯದಿಂದ ಎದ್ದು ನಿಂತು ಕನ್ನಡದ ಖ್ಯಾತ ಕಾದಂಬರಿಕಾರ ಬಸವರಾಜ ಕಟ್ಟೀಮನಿಯವರು ನೀಡಿದ್ದರು. ಅಂದಿನಿಂದ ಇಂದಿನವರೆಗೂ, ಮುಂದಕ್ಕೂ, ಕಾಸರಗೋಡು ಕರ್ನಾಟಕಕ್ಕೆ ಸೇರುವವವರೆಗೂ ಆ ವೀರ ಭರವಸೆ ಅವಿಸ್ಮರಣೀಯ ಆಶ್ವಾಸನೆಯೆಂದು ಕಾಸರಗೋಡಿನ ಕನ್ನಡಿಗರೆಲ್ಲರೂ ನಂಬಿದ್ದೇವೆ.

ನೀವೆಲ್ಲರೂ ಒಮ್ಮತದಿಂದ ಬೆಂಬಲವಿತ್ತರೆ ನಾಳೆಗೇ ಕೇಂದ್ರ ಸರಕಾರ ಎಚ್ಚರಗೊಳ್ಳುತ್ತದೆ, ಜನಮತವನ್ನು ಯಾವ ಸರಕಾರವೂ ಮೀರಿ ಹೋಗಲಾರದು; ವಿಳಂಬವಾದರೂ ಒಂದಲ್ಲ ಒಂದು ದಿನ ಕರ್ನಾಟಕಕ್ಕೆ ಸೇರಲೇಬೇಕಾದ ಕಾಸರಗೋಡು ಮೊದಲಾದ ಗಡಿ ಪ್ರದೇಶಗಳು ಕರ್ನಾಟಕಕ್ಕೆ ಸೇರಿಯೇ ಸೇರುತ್ತವೆ; ಎಂಭತ್ತು ವರ್ಷಗಳ ನಂತರ ಗೋಡೆ ಒಡೆದು ಜರ್ಮನ್ ರಾಷ್ಟ್ರ ಒಂದಾಯಿತು; ನೂರು ವರ್ಷಗಳಿಗೂ ಮೀರಿದ ರಶ್ಯಾ ಚೀನಾ ಗಡಿ ವಿವಾದ ಇತ್ತೀಚೆಗೆ ಇತ್ಯರ್ಥವಾಯಿತು. ಈ ಜನ್ಮದಲ್ಲಿ – ಕಾಸರಗೋಡಿನ ವಿಲೀನೀಕರಣದ ಪರಮ ಸಿದ್ಧಿ ಫಲಿಸದೇ ಹೋದರೆ, ಈ ತಾಯ್ನೆಲದಲ್ಲಿಯೇ ಮರಳಿಯೂ ಜನ್ಮವೆತ್ತಿ ಮಾತೃಭೂಮಿಯ ಋಣ ಸಲ್ಲಿಸುವ ಆಶೆ ನನ್ನದು; ಕಸರಗೋಡಿನ ಜ್ಯೋತಿ ಕರ್ನಾಟಕದ ಪರಂಜ್ಯೋತಿಯಲ್ಲಿ ಲೀನವಾಗುತ್ತದೆಯೆಂಬ ಅಚಲ ವಿಶ್ವಾಸ ನನಗಿದೆ. ತಾಯಿ ಭುವನೇಶ್ವರಿಯ ಆಶೀರ್ವಾದವನ್ನು ಶಿರಬಾಗಿ ಬೇಡುತ್ತೇನೆ.

'ಸತ್ಯಮೇವ ಜಯತೇ' ಎಂದು ದೃಢವಾಗಿ ನಂಬಿದ್ದೇನೆ.

'ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ'

ಸಿರಿಗನ್ನಡಂ ಗೆಲ್ಗೆ

●

*ಆತ್ಮಕಥನದ ಆಯ್ದ ಭಾಗ

ನಾನು ಹುಟ್ಟಿ ಬೆಳೆದ ಊರು ಹಳ್ಳಿ; ಸುಂದರವಾದ ಪರಿಸರ; ಹಸಿರು ಹೊಲಗಳುಳ್ಳ ನೆಲ; ಗೊನೆ ಹಣ್ಣ ತೋಟ. ಆ ಹಳ್ಳಿಯ ಇಬ್ಬದಿಗೂ ಎರಡು ನದಿಗಳು ಕಲಕಲ ನಿನಾದದಿಂದ ಹರಿಯುತ್ತವೆ, ತೆಂಗು ಕಂಗುಗಳು ತಲೆದೂಗುತ್ತವೆ. ತಂಪುಗಾಳಿ ಬೀಸುತ್ತದೆ; ಹಕ್ಕಿಗಳ ಕಲರವ ಯಾವಾಗಲೂ ಕೇಳಿಸುತ್ತದೆ. ಆಗ ನಮ್ಮದು ಅವಿಭಕ್ತ ಕುಟುಂಬ; ಒಂದು ಮನೆಯಲ್ಲಿ ಐವತ್ತು ನೂರು ಕುಟುಂಬದ ಜನರು ವಾಸವಾಗಿರುತ್ತಿದ್ದರು. ಆ ಮನೆಯವರು ಮಾತೇ ಪ್ರಧಾನ ಸಂತಾನದವರು, ಆ ಮನೆಗೆ ಮದುವೆಯಾಗಿ ಬಂದ ಬೇರೆ ಮನೆಯ ಸಂತಾನದ ಹೆಂಗುಸರು, ಅವರು ಮಕ್ಕಳು ಎಲ್ಲರೂ ಕೂಡಿ ಸಂಸಾರ, ನಾನು ಹುಟ್ಟಿ ಬೆಳೆದ ಮನೆ ಕಾಸರಗೋಡು ತಾಲೂಕಿನ ಪೆರಡಾಲ ಗ್ರಾಮದ (ಈಗ ಬದಿಯಡ್ಕ ಗ್ರಾಮ) ಕಲ್ಲಕಳಿಯ ಹೆಸರಿನ ಮನೆ. ಅಲ್ಲಿ ನನ್ನ ತಂದೆ, ತಾಯಿ, ಅಜ್ಜ ಶಂಕರ ಆಳ್ವ, ಅವರ ಮಾವ ಪೆರ್ಗಡೆ ರೈ, ಅವರ ಹೆಂಡಂದಿರು, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು ಎಲ್ಲಾ ವಾಸವಾಗಿದ್ದರು. ಬೇರೆ ಸಂತಾನದಿಂದ ಮದುವೆಯಾಗಿ ಬಂದ ಹೆಂಗಸರು ದಿನಕ್ಕೊಬ್ಬರಂತೆ ಅಡಿಗೆ ಮಾಡಬೇಕು. ಅದು ಮಹಾ ಸಾಹಸ; ಅಷ್ಟು ಜನರಿಗೆ ಅಡುಗೆ ಮಾಡಿ ಇಕ್ಕಬೇಕು; ಇತರ ಹೆಂಗಸರೂ ಸಹಾಯಕ್ಕೆ ಬರಬಹುದು. ಆದರೆ ಎಲ್ಲಾ ಹೊಣೆಗಾರಿಕೆ ಆ ದಿನ ಅವಳೊಬ್ಬಳಿಗೆ. ಆ ಒಂದು ದಿನ ಕಳೆದರೆ ಮತ್ತೆ ಹತ್ತಾರು ದಿನ ವಿಶ್ರಾಂತಿ; ಇತರ ಮಹಿಳೆಯರ ಸರದಿ. ರೇಶನ್ ಅಕ್ಕಿಯಲ್ಲ; ಪೇಟೆಯಿಂದ ತಂದ ತರಕಾರಿಯೂ ಅಲ್ಲ. ಎಲ್ಲಾ ಅವರೇ ಗದ್ದೆಗಳಲ್ಲಿ ಬೆಳಸಿದ್ದು; ತರಕಾರಿ ಗದ್ದೆಗಳಲ್ಲಿ ನಟ್ಟು ಮಾಡುವುದು; ಮೆಣಸಿನ ಸಾಲುಗಳನ್ನೂ ಗದ್ದೆಯಲ್ಲಿ ಚಂದವಾಗಿ ಕಾಣಬಹುದು; ಫಲ ಬಂದಾಗ ಕೆಂಪಾಗಿ ಗಿಡಗಳು ಮನೋಹರವಾಗಿ ತೋರುವುವು. ಬಸಳೆ ತೊಂಡೆ ಚಪ್ಪರಗಳು ಎಲ್ಲೆಲ್ಲೂ; ಬಾಳೆದಿಂಡಿನ ತಿರುಳಿನಿಂದ ಹಿಡಿದು, ಗೊನೆ ಕಾಯಿ ಎಲ್ಲವೂ ಮೇಲೋಗರಕ್ಕೆ ಸಾಧನ.

---

* ಕಯ್ಯಾರರ 'ದುಡಿತವೇ ದೇವರು' ಆತ್ಮಕಥನದಿಂದ.

ಗಂಡಸರು ಬೆಳಿಗ್ಗೆ ನೊಗ ನೇಗಿಲು ಹೊತ್ತುಕೊಂಡು, ಎತ್ತು-ಕೋಣಗಳನ್ನು ಗದ್ದೆಗೆ ಇಳಿಸಿ ಉಳುವ ಕೆಲಸದಲ್ಲಿ ತೊಡಗುವರು. ಹಾರೆಯಿಂದ ಗದ್ದೆ ಹುಣೆ ಕೆತ್ತುವರು; ಉತ್ತಾದ ಮೇಲೆ ಹಲಗೆ ಮೆಟ್ಟುವರು. ಒಳ್ಳೆಯ ಪುಷ್ಟಿಯ ಕೋಣಗಳಾದರೆ ಹಲಗೆ ಮೆಟ್ಟುವಾಗ, ಕೋಣಗಳನ್ನು ಗದ್ದೆಗೆ ಒಂದು ತುದಿಯಿಂದ ಇನ್ನೊಂದು ತುದಿವರೆಗೆ ಓಡಿಸುವರು. ಹಲಗೆ ಮೆಟ್ಟಲು ನಿಷ್ಣಾತರಲ್ಲದಿದ್ದರೆ ಕೆಲವೊಮ್ಮೆ ಕೋಣಗಳು ಓಡುವ ರಭಸದಲ್ಲಿ ಹಲಗೆಯಿಂದ ಗದ್ದೆಗೆ ಉರುಳಿಬಿದ್ದು ಕೆಸರಲ್ಲಿ ಅದ್ದಿಹೋಗುವುದೂ ಇತ್ತು. ಆಗ ಎಲ್ಲರಿಗೂ ಅಮಿತ ಉತ್ಸಾಹ. ಗದ್ದೆ ಉತ್ತು ಬಿತ್ತಿದ ನಂತರ ಮಧ್ಯಾಹ್ನದ ಮೇಲೆ ಹೆಚ್ಚಾಗಿ ಬೇಟೆಗೋ, ಕಂಬಳಕ್ಕೋ, ಕೋಲಕ್ಕೋ ಹೋಗುವರು; ಮನೆ ಮನೆಗಳಲ್ಲಿ ತಾಳಮದ್ದಳೆಗಳೂ ನಡೆಯುತ್ತಿದ್ದುವು. ಭಾಗವತರು, ಚೆಂಡೆ ಮದ್ದಳೆವಾದಕರು, ಅರ್ಥಧಾರಿಗಳು, ಶ್ರೋತೃಗಳು ಎಲ್ಲರೂ ಮನೆಯವರೇ. ಇಂತು ಆ ಕಾಲದ ಅವಿಭಕ್ತ ಕುಟುಂಬದವರು ಜೀವನವನ್ನು ಉಲ್ಲಾಸದಿಂದ ಕಳೆಯುತ್ತಿದ್ದರು.

ನಾನು ಹುಟ್ಟಿದ ಆ ಮನೆಯಲ್ಲಿ 'ಮೊಗೆರ' ಎಂಬ ಪಂಗಡಕ್ಕೆ ಸೇರಿದ ದಲಿತ ಸಮಾಜದ 'ಮೂಲ'ದವರು ಮನೆಮಂದಿಯೊಡನೆ ಗದ್ದೆಯ ತೋಟದ ಬೇಸಾಯದ ಕೆಲಸಗಳಲ್ಲಿ ತಮ್ಮದೇ ಮನೆಯ ಕೆಲಸವೆಂಬಂತೆ ದುಡಿಯುತ್ತಿದ್ದುದನ್ನು ಕಂಡಿದ್ದೇನೆ. 'ಮೂಲ'ದವರು ಎಂದು ಅವರನ್ನು ಹೇಳುವುದರಲ್ಲಿ ಹೆಚ್ಚಿನ ಅರ್ಥವಿತ್ತು, ಬಹಳ ಹಿಂದಿನ ಕಾಲದಲ್ಲಿ ಅವರೇ ಈ ಆಸ್ತಿ ಬದುಕಿಗೆ 'ಮೂಲ'ದವರು-ಒಡೆಯರು ಆಗಿರಬೇಕು. ಆಮೇಲೆ, ಆಸ್ತಿ ಬದುಕು ಬೇರೆಯವರಿಗಾದರೂ ಅವರೇ 'ಮೂಲ'ದವರೆಂಬ ಅಭಿಮಾನ ಮತ್ತೂ ಇತ್ತು. ಮನೆತನದ ಕೆಡುಕು ತಮ್ಮದೆಂದೇ ಅವರಿಗೂ ಭಾವನೆಯಿತ್ತು. ಹಿಂದೆ ತುಳುನಾಡಿನ ಈ ಭಾಗವನ್ನು ಈ ದಲಿತ ಜನಾಂಗದವರು ಆಳಿಕೊಂಡಿದ್ದರೆಂಬ ಚರಿತ್ರೆ ಇದೆ. ಅಲ್ಲಲ್ಲಿ ಮಾಯಿಲಕೋಟೆ ಎಂಬ ದಲಿತ ಮುಖಂಡನ ಹೆಸರಿನ ಕೋಟೆ ಇದೆ; ಮಂಜೇಶ್ವರದ ಬಳಿಯ ಪಟ್ಟದ ಮೊಗರು ಎಂಬ ಸ್ಥಳದ ಹೆಸರು ಅಲ್ಲಿ ಒಬ್ಬ ಮೊಗೆರ ರಾಜನಿಗೆ ಪಟ್ಟ ಕಟ್ಟಿದ ಸ್ಥಳವೆಂಬುದರಿಂದ ಬಂತೆಂದು ಇತಿಹಾಸ. ನಾನು ಚಿಕ್ಕವನಿರುವಾಗ, 'ಮೂಲ'ದವರೆಂಬ ಈ ಮೊಗೆರ ವಂಶದ ಹುಡುಗರು ನಮ್ಮ ಜತೆ ಆಡಲು ಬರುತ್ತಿದ್ದರು; ಹಟ್ಟಿಯ ಜಾನುವಾರುಗಳನ್ನು ಗುಡ್ಡೆಗೆ ಮೇವಿಗೆ ಹೊಡೆದುಕೊಂಡು ಹೋಗುವ ಕೆಲಸವನ್ನೂ ಆ 'ಮೂಲ'ದ ಹುಡುಗರು ಮಾಡುತ್ತಿದ್ದಾಗ, ನಾನೂ ಹಲವು ಸಲ ಅವರ ಜತೆ ಆಟವಾಡಿ ಜಾನುವಾರು ಮೇಯಿಸಿ ಬಂದಿದ್ದೇನೆ. ಶಾಲೆಯ ಪಾಠವನ್ನು ತಪ್ಪಿಸಿಯೂ ಆ ಹುಡುಗರ ಜತೆಸೇರಿ ಆಟವಾಡುವುದು, ದನಮೇಯಿಸುವುದು ಆಗ ತುಂಬಾ ಹಿತಕರವಾಗಿತ್ತು.

ಮಧ್ಯಾಹ್ನದ ನಂತರದ ಮನೆತನದ ಜವ್ವನಿಗರ ವಿನೋದಗಳಲ್ಲಿ ಕಾಲ್ಚೆಂಡಾಟವೂ ಒಂದು; ಅವರು ಆಡುತ್ತಿದ್ದ ಕಾಲ್ಚೆಂಡು ಒಳಗೆ ಗಾಳಿ ತುಂಬಿಸಿ ಕಾಲಿಂದ

ಹೊಡೆಯುವುದು. ಗಾಳಿ ತುಂಬಿಸಿದ ಕಾಲ್ಚೆಂಡಿಗಿಂತ ಇದು ಹೆಚ್ಚು ಗಟ್ಟಿ ಒರಟು; ಹೊಡೆತವೂ ಕಷ್ಟ. ಇದು 'ಪೊಳಲಿ ಚೆಂಡಿನ' ಮಾದರಿ ಎನ್ನುತ್ತಾರೆ. ಈ ಚೆಂಡಾಟಕ್ಕೆ ಊರ ಜವ್ವನಿಗರು ಇನ್ನೊಂದು ಪಂಗಡ; ಮನೆಯವರು ಆಟಕ್ಕೆ ಹೋಗುವಾಗ ಅವರ ಜತೆಗೆ ದಲಿತ ಜವ್ವನಿಗರನ್ನೂ ಕರೆತರುವರು; ಆದರೆ ಊರ ಹಿರಿಯರೂ ಈ ಸ್ಪರ್ಧೆ ನೋಡಲು ಬರುತ್ತಿದ್ದ ಕಾರಣ, ಹ್ಯೊಕೈ ಹೆಚ್ಚಾಗಿ ತಪ್ಪುತ್ತಿತ್ತು. ಊರ ಹಿರಿಯರು ಸಮಾಧಾನಗೊಳಿಸುವರು. ಇದೇ ರೀತಿ ಕೋಳಿ ಅಂಕವೂ ಯಾವುದೇ ಗೊಂದಲ ಗಲಾಟೆಯಿಲ್ಲದೆ ಶಾಂತರೀತಿಯಿಂದ ಉತ್ಸಾಹಕರವಾಗಿ ನಡೆಯುವುದು. ಈಗಿನಂತೆ ಆಗ ಕೋಳಿ ಅಂಕದಲ್ಲಿ ಜುಗಾರಿ ಇರಲೇ ಇಲ್ಲ.

ಗದ್ದೆ ಬೇಸಾಯಕ್ಕಾಗಿ ಹಾಗೂ ತೋಟಕ್ಕೆ ನೀರು ಹಾಯಿಸುವ ತೋಡಿಗೆ ಅಲ್ಲಲ್ಲಿ ಕಟ್ಟಕಟ್ಟಿ ನೀರು ತುಂಬಿವಂತೆ ಮಾಡುವುದಿತ್ತು; ಆಗ ಅಣೆಕಟ್ಟು ಇರಲಿಲ್ಲ, ಕಲ್ಲು ಮಣ್ಣುಗಳಿಂದಲೇ ಕಟ್ಟ, ಬೇಸಾಯ ಮಾಡುವವರೆಲ್ಲರೂ ಅದರ ವೆಚ್ಚ ಹಂಚಿಕೊಂಡು ಮಾಡಿಸುವರು. ಒಂದು ಉಲ್ಲಾಸದ ಕೆಲಸ; ಬೆನ್ನನ್ನು ಅಡಿಗೆ ಹಾಕಿ, ಎದೆಯನ್ನು ಅಡಿಗೆ ಹಾಕಿ, ಈಜುವ ವಿಧಾನ ಆಗ ನಮಗೆಲ್ಲಾ ಲೀಲಾಜಾಲ. ಕಟ್ಟದ ಹತ್ತಿರ ಎತ್ತರದ ಗುಡ್ಡೆ ಬದಿಯಿದ್ದರೆ, ಅಷ್ಟು ಎತ್ತರದಿಂದಲೂ ನೀರಿಗೆ ಹಾರಿ ಈಜಾಡುತ್ತಿದ್ದೆವು. ಹೊಸದಾಗಿ ಈಜು ಕಲಿಯುವವರು ಹಾಗೂ ಗೊತ್ತಿದ್ದವರು, ನೀರಿನ ಅಡಿಗೆ ಮುಳುಗಿ ಅವರನ್ನು ಕಾಲುಗಳಿಂದ ಮೇಲೆತ್ತಿ ದಡಕ್ಕೆ ತರಬೇಕಾಗುತ್ತಿತ್ತು, ನೀರಿನ ಮೇಲಿಂದ ಅವರನ್ನು ಹಿಡಿದೆಳೆದರೆ, ಅವರು ರಕ್ಷಣೆಗೆ ಬಂದವರ ಕುತ್ತಿಗೆಗೆ ನೇತಾಡಿ ಇಬ್ಬರೂ ಮುಳುಗಿ ಹೋಗುವ ಅಪಾಯವಾಗುತ್ತಿತ್ತು. ಹೀಗೆ ಈಜುಗಾರಿಕೆಯಲ್ಲಿ ನಾನು ಸಾಕಷ್ಟು ಪರಿಣತಿ ಪಡೆದಿದ್ದೆನಾದ ಕಾರಣ, ನನ್ನ ಜತೆಗೆ ಈಜಲು ಬಂದ ನನ್ನ ಸಹಪಾಠಿಯೊಬ್ಬರನ್ನು ಕಾಲಿಂದ ಹಿಡಿದು ಮೇಲೆತ್ತಿ ಹಾಕಿದೆ. ತೋಡಿನ ಕಟ್ಟದಲ್ಲಿ ನೀರು ತುಂಬಿ ಗದ್ದೆಗಳಿಗೆ ನೀರು ಹರಿದು ಹೋಗುವಾಗ, ಆ ತೋಡಿನಲ್ಲಿದ್ದ ಮೀನುಗಳೂ ಗದ್ದೆಗಳಿಗೆ ಹರಿದು ಸಾಲಾಗಿ ಹೋಗುವುದನ್ನು ನೋಡಲು ಚಂದ. ಮೇಲಿನ ಗದ್ದೆಯಿಂದ ಕೆಳಗಿನ ಗದ್ದೆಗೆ ನೀರು ಹರಿದು ಹೋಗುತ್ತಿದ್ದಾಗ, ಅದರ ಜತೆ ಕೆಳಗೆ ಬಂದ ಮೀನುಗಳು ಮತ್ತೆ ಅದೇ ದಾರಿ ಕೆಳಗಿನ ಗದ್ದೆಯಿಂದ ಹರಿವ ನೀರಿನೊಂದಿಗೆ ಮೇಲಕ್ಕೆ ಬರುತ್ತಿದ್ದವು. ಅವನ್ನು ಅಲ್ಲಿ ಕೂರಿ ಎಂಬ ಪೆಟ್ಟಿಗೆಯಾಕಾರದ ಉದ್ದದ ಗೂಡಿನಿಂದ ಹಿಡಿದುಕೊಂಡು ಹೋಗುತ್ತಿದ್ದರು. ಇವೆಲ್ಲವೂ ನನ್ನ ಬಾಲ್ಯಕಾಲದ ನೋಟಗಳು. ಆಗಿನ ಕಾಲದ ನಮ್ಮ ಆಟಗಳಲ್ಲಿ "ಕುಟ್ಟಿ-ದೊಣ್ಣೆ'ಯೂ ಒಂದು. ನೆಲದಲ್ಲಿ ಸಣ್ಣ ತೂತಿನಾಕಾರದ ಹೊಂಡ ಮಾಡಿ, ಅದರ ಅಡ್ಡಕ್ಕೆ ಒಂದು ಸಣ್ಣ ಮರದ ತುಂಡನ್ನು – ಕುಟ್ಟಿಯನ್ನು – ಇಟ್ಟು ಕೈಯಲ್ಲಿ ಹಿಡಿದ ಅದಕ್ಕಿಂತ ಬಲವಾದ ಒಂದು ಮರದ ತುಂಡಿನಿಂದ ದೊಣ್ಣೆಯಿಂದ ನೆಲದಲ್ಲಿನ ಕುಟ್ಟಿಯನ್ನು ಹಾರಿಸಿ ಹೊಡೆಯುವುದು. ಇದಿರಾಳಿ ಗಾಳಿಗೆ ಹಾರಿ ಬರುವ ಕುಟ್ಟಿಯನ್ನು

ಹಿಡಿದರೆ, ಕುಟ್ಟಿ ಹೊಡೆದ ಆಟಗಾರ ಸೋತ; ಮರದ ತುಂಡು ಆದದ್ದರಿಂದ, ದೊಣ್ಣೆಯ ತೀವ್ರವಾದ ಹೊಡೆತವೂ ಸೇರುವ ಕಾರಣ, ಕೈಯಿಂದ ಹಿಡಿಯುವುದು ತುಂಬಾ ಕಷ್ಟದ ಕೆಲಸ. ಹೀಗೆ ಅಂದಿನ ಆಟ ಓಟ ಎಲ್ಲವೂ ಸ್ವಲ್ಪ ತೀಕ್ಷ್ಣವಾದ ರೀತಿಯವುಗಳೇ ಆಗಿದ್ದವು. ಆಯಾಸ ಪ್ರಯಾಸ ಪೂರ್ವಕವಾದ ಅಂತಹ ಆಟಗಳಿಂದ ಶರೀರಕ್ಕೆ ಉತ್ತಮ ವ್ಯಾಯಾಮ ದೊರಕುತ್ತಿತ್ತು. ಪಳ್ಳಿ ಹಿಡಿಯುವುದು ಇಂತಹ ಆಟಗಳಲ್ಲಿ ಒಂದು. ಆಚೆಗೆ ಈಚೆಗೆ ಎದುರು ಬದುರು ಮುಖಮಾಡಿ, ಇಬ್ಬರು ಒಂದು ಕೈಯಿಂದ ಪರಸ್ಪರ ಗಟ್ಟಿಹಿಡಿದುಕೊಂಡು, ಇನ್ನೊಂದು ಕೈಯಿಂದ ಅವರನ್ನು ಆಕ್ರಮಿಸಿ ಹಿಡಿದ ಬಿಡಿಸುವವರಿಗೆ ಚೆನ್ನಾಗಿ ಹೊಡೆಯುವರು; ಆ ಹೊಡೆತ ತಪ್ಪಿಸಿಯೋ ಪಳ್ಳಿ ಹಿಡಿದವರನ್ನು ವಿಂಗಡಿಸಲು ಆಕ್ರಮಣಕಾರರು ಸಮರ್ಥರಾಗಬೇಕು. ಅಂದಿನ, ಇಂತಹ ಹಲವು ಆಟಗಳಲ್ಲಿ ಇವು ಕೆಲವು ಮಾತ್ರ; ಇಂದಿಗೆ ಇವೆಲ್ಲವೂ ಮಾಯವಾಗಿವೆ.

ಆ ಕಾಲದ ಕ್ರಮದಂತೆ, ನನ್ನ ಆರನೆಯ ವರ್ಷದ ಪ್ರಾಯದಲ್ಲಿ ನನಗೆ ವಿದ್ಯಾರಂಭವಾಯಿತು. ಒಂದು ವಿದ್ಯಾದಶಮಿ ದಿನ, ನನ್ನ ತಾಯಿಯ ತಂದೆ ಶಂಕರ ಆಳ್ವರು ನನ್ನನ್ನು ಬದಿಯಡ್ಕ ಪ್ರಾಥಮಿಕ ಶಾಲೆಯ ವಿದ್ಯಾದಶಮಿ ಸಮಾರಂಭಕ್ಕೆ ಕರೆದುಕೊಂಡು ಹೋದರು. ಆ ದಿನ ಹೊಸದಾಗಿ ಶಾಲೆಗೆ ಸೇರುವವರಿಗೆ ಅಲ್ಲಿ ಅಧ್ಯಾಪಕರಾಗಿದ್ದ ಪಂಜಿರ್ಕೆ ಅನಂತಭಟ್ಟರು ವಿದ್ಯೋಪದೇಶ ನೀಡುತ್ತಿದ್ದರು. ನೆಲದಲ್ಲಿ ಹೊಯಿಗೆ ಹರಡಿ ಇಟ್ಟಿದ್ದರು. ವಿದ್ಯಾರಂಭ ಮಾಡುವ ವಿದ್ಯಾರ್ಥಿಯನ್ನು ಅದರ ಮುಂದೆ ಕುಳ್ಳಿರಿಸುವರು. ಇದಿರಿಗೆ ಅಧ್ಯಾಪಕರಾದವರು ಕುಳಿತು, ವಿದ್ಯಾರ್ಥಿಯ ಬೆರಳನ್ನು ಹೊಯಿಗೆಯಲ್ಲಿ ಲೇಖನಿಯಂತೆ ಒತ್ತಿ ಅಕ್ಷರ ಒರೆಸಿ ಅವನ್ನು ಬಾಯಿಯಿಂದ ಹೇಳಿಸುವರು, ಇದೇ ವಿದ್ಯಾರಂಭ. ನನ್ನ ಬೆರಳನ್ನು ಅನಂತ ಭಟ್ಟರು ಹೊಯಿಗೆಯ ಮೇಲೆ ಒತ್ತಿ ಹಿಡಿದು 'ಶ್ರೀ ಗಣಾಧಿಪತಯೇ ನಮಃ' ಎಂದು ಬಾಯಿಯಿಂದ ಹೇಳಿಸುತ್ತಾ ಬರೆಸಿದರು, ಮುಂದಿನ ನನ್ನ ವಿದ್ಯಾಭ್ಯಾಸ ಕಾಲದಲ್ಲಿ ವಿದ್ಯಾರ್ಥಿದೆಸೆಯಲ್ಲಿ ಅಧ್ಯಾಪಕರು ಕಲಿಸಿದ್ದೆಲ್ಲವನ್ನೂ ನೆನಪಿಟ್ಟುಕೊಂಡಿದ್ದೇನೆಂದು ಹೇಳಲಾರೆ; ಆದರೆ ಆ ಮೊದಲನೆಯ ದಿನ ಬರೆದ ಬಾಯಿಂದ ಹೇಳಿದ, ಅಧ್ಯಾಪಕರು ಬೆರಳನ್ನು ಒತ್ತಿ ಬರೆಸಿದ, ಅವರೂ ಬಾಯಿಯಿಂದ ಹೇಳಿದ 'ಶ್ರೀ ಗಣಾಧಿಪತಯೇ ನಮಃ' ಎಂಬುದನ್ನು ಜೀವಮಾನ ಇಡೀ ಮಂತ್ರದಂತೇ ನೆನಪಿಟ್ಟುಕೊಂಡಿದ್ದೇನೆ. ಧನ್ಯತೆಯ ಭಾವ ತಾಳಿದ್ದೇನೆ.

ಅಂದು ವಿದ್ಯಾರಂಭ ಮಾಡಿಸಿದ ಅನಂತಭಟ್ಟರ ಹೆಸರನ್ನೂ ಜೀವಿತಪರ್ಯಂತ ಮರೆಯಲಾರೆ; ಅವರು ಸಾಕಷ್ಟು ಅನುಕೂಲವಿದ್ದ ಮನೆತನದವರು; ಬದಿಯಡ್ಕ ಪೆರಡಾಲ ಪ್ರದೇಶದಲ್ಲಿ ಆಗಿನ ಕಾಲದ ವಿದ್ಯಾವಂತರಲ್ಲಿ ಹಿರಿಯವರು; ಸ್ವತಃ ಪ್ರಾಥಮಿಕ ಶಾಲೆಯನ್ನು ಕಟ್ಟಿಸಿ ಅದರಲ್ಲಿ ಅಧ್ಯಾಪಕರಾಗಿ ಊರಿಗೇ ವಿದ್ಯಾದಾನ ಮಾಡಿದವರು; ಪೆರಡಾಲದಲ್ಲಿ ನವಜೀವನ ಹೈಸ್ಕೂಲು ಆಗುವವರೆಗೂ ವಿದ್ಯಾಕ್ಷೇತ್ರದಲ್ಲಿ ಮುಂದಾಳಾಗಿ ಅಧ್ಯಾಪಕರಾಗಿ ದುಡಿದವರು. ಹೈಸ್ಕೂಲಿನ ಆಡಳಿತ ಮಂಡಳಿಯ

ಸದಸ್ಯರೂ ಆಗಿದ್ದರು. ಊರವರೆಲ್ಲರೂ ಅವರನ್ನು ಅನಂತ ಮಾಷ್ಟ್ರರು ಎಂದೇ ಕರೆಯುತ್ತಿದ್ದರು. ನನ್ನ ತಾಯಿಗೂ, ಸೋದರಮಾವನಿಗೂ ಅವರೇ ಅಧ್ಯಾಪಕರಾಗಿದ್ದರು. ನನ್ನ ಅಜ್ಜ ಶಂಕರ ಆಳ್ವರ ಆತ್ಮೀಯರು. ಯಾವುದೇ ವಿಷಯಕ್ಕಾದರೂ ಅಜ್ಜ ಅವರ ಸಲಹೆ ಕೇಳುತ್ತಿದ್ದರು. ಅವರು ಪಂಜೆಯವರ ವಿದ್ಯಾರ್ಥಿ; ತರಬೇತಿ ಶಾಲೆಯಲ್ಲಿ. ಗೋವಿನ ಕಥೆಯ ಪದ್ಯ ತರಗತಿಯಲ್ಲಿ ಓದಿ ಪಾಠಮಾಡಿದ್ದು ಇಂದಿಗೂ ಕಿವಿಯಲ್ಲಿ ನಿನದಿಸುತ್ತದೆ. 'ತಬ್ಬಲಿಯು ನೀನಾದೆ ಮಗನೇ, ಹೆಬ್ಬುಲಿಯ ಬಾಯನ್ನು ಹೋಗುವೆನು; ಇಬ್ಬರಾ ಋಣ ತೀರಿತೆಂದು ತಬ್ಬಿಕೊಂಡಿತು ಕಂದನ' ಎಂದು ಹಾಡುವಾಗ ನಮ್ಮ ಕಣ್ಣುಗಳಲ್ಲಿ ನೀರು ಹರಿಯುತ್ತಿತ್ತು. ಅವರಿಗಿದ್ದ ಒಂದೇ ಕೊರತೆಯೆಂದರೆ ಸ್ವತಃ ಮಕ್ಕಳಿರಲಿಲ್ಲ, ಆ ಕೊರತೆಯೇ ಅವರಲ್ಲಿ ಒಂದು ವಿಶೇಷ ಯೋಗ್ಯತೆಯನ್ನೂ ತುಂಬಿರುಬೇಕು; ಶಾಲೆಯ ಎಲ್ಲಾ ಮಕ್ಕಳನ್ನೂ ಮಮತೆಯಿಂದ ನೋಡುತ್ತಿದ್ದರು. ಆ ಕಾಲದಲ್ಲಿ ಅಧ್ಯಾಪಕರು ಬೆತ್ತವನ್ನು ಉಪಯೋಗಿಸುತ್ತಿದ್ದರೂ, ಅನಂತ ಮಾಷ್ಟ್ರ ಒಮ್ಮೆಯೂ ಉಪಯೋಗಿಸಲಿಲ್ಲ; ಬೆನ್ನು ತಟ್ಟಿ ಪ್ರೋತ್ಸಾಹಿಸುವವರು; ಒಳ್ಳೆಯ ಹುಡುಗ ಚೆನ್ನಾಗಿ ಕಲಿ, ಹುಷಾರಾಗು ಎನ್ನುವರು; ಮಕ್ಕಳಿಲ್ಲದ ಕೊರತೆಯನ್ನು ಸ್ವಂತ ಜೀವನದಲ್ಲಿ ಹೋಗಲಾಡಿಸಲೆಂದು ತನ್ನ ಸೋದರ ಪುತ್ರ ಮಾಧವಭಟ್ಟರನ್ನು ಸಾಕುಮಗನಂತೆ ಸಲಹಿದರು. ವಿದ್ಯಾಭ್ಯಾಸ ಕೊಡಿಸಿದರು. ಈ ಮಾಧವ ಭಟ್ಟರೂ ನನ್ನ ಸಹಪಾಠಿ, ಮುಂದೆ ಸಹೋದ್ಯೋಗಿ.

ಆ ಕಾಲಕ್ಕೆ, ಪೆರಡಾಲದ ಪರಿಸರದಲ್ಲಿ ಸಂಸ್ಕೃತ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಆಕರ್ಷಣೆಯಿತ್ತು; ಪೆರಡಾಲದ ನೀರ್ಚಾಲಿನಲ್ಲಿ ಮಹಾಜನ ಸಂಸ್ಕೃತ ಕಾಲೇಜು ಇತ್ತು. ಈ ಕಾಲೇಜು ಪ್ರಾರಂಭವಾದದ್ದು ಉದನೇಶ್ವರ ದೇವಾಲಯದ ಗೋಪುರದಲ್ಲಿ; ಆಗಲೇ ನನ್ನ ಮಾವ ಒಬ್ಬರು ಅಲ್ಲಿಗೆ ಕಲಿಯಲು ಹೋಗಿದ್ದರು. ಉಕ್ಕಿನಡ್ಕದಲ್ಲಿ, ವಸಿಷ್ಠಾಶ್ರಮ ಸಂಸ್ಕೃತ ಶಾಲೆಯಿತ್ತು; ನೆರೆಯ ಉಬ್ರಂಗಳ ಗ್ರಾಮದ ಅಗಲ್ಪಾಡಿ ದೇವಾಲಯದ ಗೋಪುರದಲ್ಲಿ ಯೂ ಸಂಸ್ಕೃತ ಶಾಲೆಯಿತ್ತು. ಬದಿಯಡ್ಕದ ಪ್ರಾಥಮಿಕ ಶಾಲೆಯಲ್ಲಿ ಸಹಪಾಠಿಗಳಾಗಿದ್ದ ಮಾಧವ ಭಟ್ಟರೂ ನಾನೂ ಕೆಲಕಾಲ ಅಗಲ್ಪಾಡಿ ಸಂಸ್ಕೃತ ಶಾಲೆಯಲ್ಲೂ ಸಹಪಾಠಿಗಳಾಗಿದ್ದೆವು. ಮುಂದೆ ಇಂಗ್ಲಿಷ್ ವಿದ್ಯಾಭ್ಯಾಸಕ್ಕೆ ಆಗ ಹತ್ತಿರ ಎಲ್ಲಿಯೂ ಹೈಸ್ಕೂಲು ಇಲ್ಲದಿರುವ ನಿಮಿತ್ತ ಮಾಧವಭಟ್ಟರು ನಗರದ ಶಾಲೆ ಸೇರಿದರು. ಅದೇ ಸಂದರ್ಭದಲ್ಲಿ ಒಂದು ದಿನ ಅನಂತಮಾಸ್ಟರು, ಅಜ್ಜನಲ್ಲಿಗೆ ಸ್ವತಃ ಬಂದು ನನ್ನನ್ನೂ ಹೈಸ್ಕೂಲ್‌ಗೆ ಸೇರಿಸಬೇಕೆಂದು ಸಲಹೆಯಿತ್ತರು. ಅಗಲೇ ತಂದೆ ತೀರಿಹೋಗಿದ್ದುದರಿಂದ, ಮಾತಾಮಹನೇ ನನ್ನ ಎಲ್ಲಾ ಹೊಣೆಗಾರಿಕೆ ಹೊರಬೇಕಾಗಿತ್ತು. ಅಜ್ಜ ಇಂಗ್ಲಿಷ್ ಕಲಿಯಲು ನನ್ನನ್ನು ಕಳುಹಿಸುವುದಾಗಿಯೂ ಒಪ್ಪಿದರು, ಆದರೆ ನನ್ನ ತಾಯಿ ಅಜ್ಜನಿಗೆ, ಅವರ ಕುಟುಂಬ ರಕ್ಷಣೆಯ ಹೆಚ್ಚಿನ ಹೊಣೆಯಲ್ಲಿ ನನ್ನನ್ನು ನಗರದಲ್ಲಿ ವಿದ್ಯಾಭ್ಯಾಸ ಮಾಡಿಸುವುದು ಕಷ್ಟವಾದೀತೆಂದು

ಹೇಳಿದಂತೆ, ನಾನೇ ಒಪ್ಪಿ ಅಜ್ಜನೊಡನೆ ಮಹಾಜನ ಸಂಸ್ಕೃತ ಕಾಲೇಜಿಗೆ ಸೇರುವುದಾಗಿ ತಿಳಿಸಿದೆ. ಅದರಂತೆ ನನ್ನ ಸೋದರ ಮಾವ ಶಂಕರ ಆಳ್ವರು ಸಂಸ್ಕೃತ ಕಾಲೇಜಿಗೆ ಸೇರಿಸಿದರು. ಆ ಕಾಲೇಜಿನಲ್ಲಿ ಆಗ ಅಧ್ಯಾಪಕರಾಗಿದ್ದ ಸೋದರಮಾವನ ಸಹಪಾಠಿ ಎಸ್. ವೆಂಕಪ್ಪ ಶರ್ಮಾರವರೊಡನೆ ಸರಿಯಾಗಿ ನೋಡಿಕೊಳ್ಳುವಂತೆ ಹೇಳಿದ ರೀತಿಯಲ್ಲಿ ಶರ್ಮಾರು ನನ್ನನ್ನು ವಾತ್ಸಲ್ಯದಿಂದ ನಡೆಸಿಕೊಂಡರು.

ಅದು 1926–27ನೇ ಇಸವಿ; ಗಾಂಧೀಜಿ ಮಂಗಳೂರಿಗೆ ಬರುತ್ತಾರೆಂದು ಸುದ್ದಿ ಬಂತು. ಆಗ ಬದಿಯಡ್ಕದಲ್ಲಿ ನಾನು ಕಲಿಯುತ್ತಿದ್ದ ಶಾಲೆಯಲ್ಲಿ ಕೃಷ್ಣಾನಂತ ಪೈ ಎಂಬುವರು ಮುಖ್ಯೋಪಾಧ್ಯಾಯರಾಗಿದ್ದರು. ಅವರು ಶುದ್ಧ ಖಾದಿಧಾರಿಗಳು; ದೇಶ ಪ್ರೇಮಿಗಳು. ಬದಿಯಡ್ಕದ ಪ್ರಮುಖ ವ್ಯಾಪಾರಿಗಳಾದ ಉಪೇಂದ್ರಶ್ಯಾನುಭಾಗರು, ಇವರೆಲ್ಲರೂ ಖಾದಿಧಾರಿಗಳಾದ ದೇಶಭಕ್ತರು; ಸ್ವತಃ ಚರಕದಲ್ಲಿ ನೂತು, ನೂಲು ಮಾಡಿ, ಮಗ್ಗಹಾಕಿ ಖಾದಿಬಟ್ಟೆ ತಯಾರಿಸುತ್ತಿದ್ದರು; ಅವರ ತಮ್ಮಂದಿರಾದ ಅಚ್ಯುತ ಶೆಣೈ ಮತ್ತು ವಿಠಲ ಶೆಣೈ ಇವರಿಬ್ಬರೂ ನನ್ನ ಸಹಪಾಠಿಗಳು; ನಾರಾಯಣ ಶ್ಯಾನುಭಾಗರ ಮಗ ಗೋಪಾಲ ಶೆಣೈ ಕೂಡ. ಇಂತಹ ಪರಿಸರದಲ್ಲಿ ಗಾಂಧೀಜಿ ಮಂಗಳೂರಿಗೆ ಬಂದಾಗ ಅವರನ್ನು ನೋಡಲು ಹೋಗಬೇಕೆಂದು ನಮ್ಮಲ್ಲಿ ಉತ್ಸಾಹ ತುಂಬಿತು. ನಾವೆಲ್ಲರೂ ಖಾದಿಧರಿಸಬೇಕೆಂದೂ ಹಾಗಾದರೆ ಕರೆದುಕೊಂಡು ಹೋಗುವುದಾಗಿಯೂ ಕೃಷ್ಣಾನಂತ ಪೈಗಳು ಭರವಸೆಯಿತ್ತರು. ಗಾಂಧೀಜಿಗೆ ಸಮರ್ಪಿಸಲೆಂದು ನಾವು ತಯಾರಿಸುತ್ತಿದ್ದ ಒಂದು ಹಸ್ತಪತ್ರಿಕೆಯ ವಿಶೇಷ ಸಂಚಿಕೆಯನ್ನೂ ಲೇಖನ ಚಿತ್ರಗಳನ್ನೂ ಬರೆದು ಸಿದ್ಧಮಾಡಿದೆವು. ಆದರೆ ಕೊನೆಯ ಗಳಿಗೆಯಲ್ಲಿ ಅನಿವಾರ್ಯವಾದ ಕಾರಣದಿಂದ ನನಗೆ ಗಾಂಧೀಜಿ ದರ್ಶನಕ್ಕೆ ಹೋಗಲು ಆಗಲಿಲ್ಲ; ಆದರೆ ಅಂದು ತೊಟ್ಟ ಖಾದಿವ್ರತವನ್ನು ಪಾಲಿಸುತ್ತಾ ಬಂದಿದ್ದೇನೆ. ಮುಂದೆ 1930ರ ಉಪ್ಪಿನ ಸತ್ಯಾಗ್ರಹಕ್ಕೆ ಮಹಾಜನ ಕಾಲೇಜಿನ ವ್ಯವಸ್ಥಾಪಕರು ಸುಪುತ್ರರೂ ಆಗರ್ಭ ಶ್ರೀಮಂತರೂ ಆದ ಖಂಡಿಗೆ ಕೃಷ್ಣ ಭಟ್ಟರು, ರಾಜಕುಮಾರ ಸಿದ್ಧಾರ್ಥನ ತ್ಯಾಗವನ್ನು ನೆನಪು ಮಾಡುವ ರೀತಿಯಲ್ಲಿ ತೆರಳಿ ಸೆರೆಮನೆಯ ಶಿಕ್ಷೆಯನ್ನು ಅನುಭವಿಸಿ ಮರಳಿದಾಗ, ಅವರಿಗೆ ಕಾಲೇಜಿನಲ್ಲಿ ಸ್ವಾಗತ ಸನ್ಮಾನ ಸಮಾರಂಭವೇರ್ಪಡಿಸಿ ನಾವು ನೂತ ನೂಲಿನಿಂದ ಖಾದಿಬಟ್ಟೆ ತಯಾರಿಸಿ ಉಡುಗೋರೆಯಿತ್ತೆವು. ಅದನ್ನು ಅವರು ತುಂಬಾ ಸಂತೋಷದಿಂದ ಸ್ವೀಕರಿಸಿದರು.

ಸಾವಿರದ ಒಂಭತ್ತು ನೂರ ಇಪ್ಪತ್ತರಲ್ಲಿ ಮೊತ್ತ ಮೊದಲಾಗಿ ಗಾಂಧೀಜಿ ಬ್ರಿಟಿಷ್ ಸರಕಾರದ ವಿರದ್ಧ ಅಸಹಕಾರ ಚಳುವಳಿ ಪ್ರಾರಂಭಮಾಡಿದಾಗಲೇ ಕಾಸರಗೋಡು ಸಹಿತವಾದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದೇಶಭಕ್ತ ಕಾರ್ನಾಡು ಸದಾಶಿವ ರಾಯರ ಮುಂದಾಳುತನದಲ್ಲಿ ಹಲವರು ಶಾಲೆ ಬಿಟ್ಟರು, ಉದ್ಯೋಗ ತ್ಯಜಿಸಿದರು, ಕೋರ್ಟು ಕಚೇರಿಗಳನ್ನು ಬಹಿಷ್ಕರಿಸಿದರು. ಇಂಥವರಲ್ಲಿ ಕಾಸರಗೋಡಿನ

ಎಂ. ಉಮೇಶ ರಾಯರು, ಖಂಡಿಗೆ ಕೃಷ್ಣಭಟ್ಟರು, ಮಂಗಳೂರಿನ ಅರಿಬೈಲು ಭೋಜರಾಯರು, ಯಂ. ಮಾಧವರಾಯರು, ರಾಮಕೃಷ್ಣ ಕಾರಂತರು, ಯು. ಶಾಂತಾರಾಮ ರಾಯರು, ಹಿರಿಯಡ್ಕ ರಾಮರಾಯ ಮಲ್ಯರು, ಉಡುಪಿ ಗೋವಿಂದ ರಾಯರು, ಶೇಷಭಟ್ಟ ಭಿಡೆಯವರು, ಕೆ. ಕೆ. ಶೆಟ್ಟರು, ಬೋಳಾರ ಭೋಜರಾಯರು, ವಿ.ಎಸ್. ಕುಡ್ವರು, ಟಿ. ಉಪೇಂದ್ರ ಪೈಗಳು, ಸಾಂತ್ಯಾರು ಅನಂತಪದ್ಮನಾಭ ಭಟ್ಟರು, ಕೊಚ್ಚಿಕಾರ್ ಪದ್ಮನಾಭ ಪೈಗಳು, ಎ. ವಿ. ಬಾಳಿಗರು, ಬಾಳ್ಕಟ್ಟುಬೀಡು ಕೃಷ್ಣಯ್ಯ ಹೆಗ್ಗಡೆಯವರು, ದೇವಪ್ಪ ಆಳ್ವರು, ಯಂ. ಆರ್. ಪೂಂಜರು, ಕೃಷ್ಣರಾಯ ಕೊಡಗಿಯವರೇ ಮೊದಲಾದವರು ಪ್ರಮುಖರು. ಆಗ ರಾಷ್ಟ್ರೀಯ ವಿದ್ಯಾಲಯಗಳು ಸ್ಥಾಪಿತವಾದುವು, ಖಾದೀ ಪ್ರಚಾರ, ಮದ್ಯಪಾನ ನಿಷೇಧ ಮುಂತಾದ ರಚನಾತ್ಮಕ ಕಾರ್ಯಗಳು ಪ್ರಾರಂಭವಾದುವು. ಕುದ್ಮಲ್ ರಂಗರಾಯರು ದಲಿತೋದ್ಧಾರ ಕಾರ್ಯ ಕೈಗೊಂಡರು. ದೇಶಾಭಿಮಾನ ಪ್ರೇರೇಪಿಸುವ ಪತ್ರಿಕೆಗಳು, 'ಸ್ವದೇಶಾಭಿಮಾನಿ', 'ಸತ್ಯಾಗ್ರಹಿ', 'ನವಯುಗ' 'ರಾಷ್ಟ್ರಬಂಧು; ಮೊದಲಾದವು ಪ್ರಕಟವಾದುವು. ಇದಕ್ಕೆಲ್ಲಾ ಕಳಶವಿಟ್ಟಂತೆ 1922ರಲ್ಲಿ ಮಂಗಳೂರಿನಲ್ಲಿ ಸರೋಜಿನಿ ದೇವಿಯವರ ಅಧ್ಯಕ್ಷತೆಯಲ್ಲಿ ರಾಜಕೀಯ ಪರಿಷತ್ತು ಜರಗಿತು. 1923ರ ನಾಗಪುರದ ಧ್ವಜಸತ್ಯಾಗ್ರಹದಲ್ಲಿ ಮಾರಪ್ಪ ಪಕ್ಕಳ, ಚೌಕಿ ಸುಬ್ಬಯ್ಯ ಎಂಬಿಬ್ಬರು ಭಾಗವಹಿಸಿದರು. ಇಂತಹ ಹಿನ್ನೆಲೆಯಲ್ಲಿ 1930ರಲ್ಲಿ ಉಪ್ಪಿನ ಸತ್ಯಾಗ್ರಹದ ಕರೆ ಬಂತು. ದಂಡೀಯಾತ್ರೆ ಕೈಕೊಂಡು ಮೊದಲಿನ ಸತ್ಯಾಗ್ರಹಿಯಾಗಿ ಗಾಂಧೀಜಿ ಸೆರೆಮನೆ ಸೇರಿದರು. ಈ ಎಲ್ಲಾ ಸಂಭವಗಳು ಪತ್ರಿಕೆಗಳನ್ನು ಓದುತ್ತಿದ್ದ ನನಗೆ, ನನ್ನಂತಹ ಹಲವರಿಗೆ ಸ್ಫೂರ್ತಿ ನೀಡುತ್ತಿದ್ದುವು.

ಉಪ್ಪಿನ ಸತ್ಯಾಗ್ರಹದ ಕಾಲಕ್ಕೆ ನನಗೆ ಹದಿನೈದು ವರ್ಷ ಪ್ರಾಯ. ಪತ್ರಿಕೆಗಳಲ್ಲಿ ಬರುತ್ತಿರುವ ಸತ್ಯಾಗ್ರಹದ ಸುದ್ದಿಗಳನ್ನು ಎಡೆಬಿಡದೆ ಓದುತ್ತಾ ಇದ್ದೆ. ಊಟ ತಿಂಡಿಯಾದರೂ ಮರೆತೇನು; ಆ ಸುದ್ದಿಗಳನ್ನು ಓದುವುದು ಮರೆಯಲಾರೆ. ಕಾರ್ನಾಡು ಸದಾಶಿವರಾಯರು, ದೇಶಪಾಂಡೆ, ಕೌಜಲಗಿ ಇವರೆಲ್ಲರೂ ಜಿಲ್ಲೆಯದ್ಯಂತ ಮಿಂಚಿನ ಸಂಚಾರಕೈಗೊಂಡು ಸತ್ಯಾಗ್ರಹ ಸಮರ ವಾರ್ತೆ ಸಾರಿದರು. 1930 ಎಪ್ರಿಲ್ 13ನೇ ದಿನ ಮಂಗಳೂರಲ್ಲಿ ಉಪ್ಪಿನ ಸತ್ಯಾಗ್ರಹ ಪ್ರರಂಭವಾಯಿತು. ಆ ಸತ್ಯಾಗ್ರಹದಲ್ಲಿ ದೇಶದ ಜನಕೋಟಿ ಸ್ವಯಂಪ್ರೇರಿತ ಅಭೂತಪೂರ್ವ ಉತ್ಸಾಹದಿಂದ ಧುಮುಕಿತು. ಮಂಗಳೂರು ಮೈದಾನ ಸತ್ಯಾಗ್ರಹದ ಕುರುಕ್ಷೇತ್ರವಾಯಿತು. ಪ್ರತೀದಿನ ನೂರಾರು ಸತ್ಯಾಗ್ರಹಿಗಳು ಉಪ್ಪುನೀರುಕುದಿಸಿ ಉಪ್ಪುಮಾಡಿ ಮೈದಾನಿಯಲ್ಲಿ ಮಾರಾಟ ಮಾಡುತ್ತಿದ್ದರು; ಅವರ ಕೈಯಿಂದ ಉಪ್ಪನ್ನು ಪೋಲೀಸರು ಬಲಾತ್ಕಾರದಿಂದ ಹಿಡಿದೆಳೆವಾಗ ಅವರ ಬೆರಳು ಮುರಿಯುತ್ತಿತ್ತು. ಎಂಟುಜನ ಪೋಲೀಸರು ತನ್ನ ಮಗನ ಕೈಯಿಂದ ಉಪ್ಪನ್ನು ಸೆಳೆಯುತ್ತಿದ್ದಾಗ ಮುಷ್ಟಿಬಿಟ್ಟ ಬಗ್ಗೆ ಮುರ್ಡೇಶ್ವರ ರತ್ನಾಬಾಯಿಯವರು ತನ್ನ ಮಗನನ್ನು ತಿರಸ್ಕರಿಸಿ ತಾನೇ ಸತ್ಯಾಗ್ರಹಕ್ಕಿಳಿದರು. ಪರದೇಶೀ

ಬಟ್ಟೆ ಸುಡುವುದು, ಕಳ್ಳಿನಂಗಡಿ ಪಿಕೆಟಿಂಗ್ ಮಾಡುವುದು. ಪೋಲೀಸರ ಲಾಠಿಪೆಟ್ಟಿನಿಂದ ಸತ್ಯಾಗ್ರಹಿಗಳು ರಕ್ತದ ಓಕುಳಿಯಲ್ಲಿ ಮುಳುಗುವುದು ದಿನಂಪ್ರತಿ ದೃಶ್ಯಗಳು. ಇದೇ ಸಂದರ್ಭ ಬೊಂಬಾಯಿಯಲ್ಲಿ ಉದ್ಯೋಗದಲ್ಲಿದ್ದ ಪ್ರಸಿದ್ಧ ವಾಗ್ಮೀ ನಾರಾಯಣ ಕಿಲ್ಲೆಯವರು ಉದ್ಯೋಗಕ್ಕೆ ರಾಜಿನಾಮೆಯಿತ್ತು ಜಿಲ್ಲೆಗೆ ಬಂದು ಸತ್ಯಾಗ್ರಹ ಸಮರಕ್ಕೆ ಧುಮುಕಿದರು. ಈ ಉಪ್ಪಿನ ಸತ್ಯಾಗ್ರಹದಲ್ಲಿಯೆ ದೆಯ್ಯಂದ್ರೆಯ ಬೀರು ಶೆಟ್ಟರು, ಅಪ್ರಾಯಸ್ಥರು ಸ್ವಯಂಸೇವಕರಾದ ಕಾರಣ ಪೆಟ್ಟುತಿಂದು ಕಾಸರಗೋಡಿನಲ್ಲಿ ಚರಂಡಿಗೆ ಎಸೆಯಲ್ಪಟ್ಟರು. ಖಂಡಿಗೆ ಕೃಷ್ಣಭಟ್ಟರ ಭಾವ ವೈದ್ಯ ಶಂಕರನಾರಾಯಣ ಭಟ್ಟರು ಸೆರೆಮನೆ ಅನುಭವಿಸಿದರು. ಹೀಗೆ ಉಪ್ಪಿನ ಸತ್ಯಾಗ್ರಹ ಭಾರತೀಯರಿಗೆ ಸ್ವಾತಂತ್ರ್ಯ ಪ್ರಾಪ್ತಿಯಲ್ಲಿ ಇರುವ ಅದಮ್ಯ ಉತ್ಸಾಹವನ್ನು ಪ್ರದರ್ಶಿಸಿತು. ಅದೇ ಕಾಲಕ್ಕೆ ಉಡುಪಿಯಲ್ಲಿ ತುಳುವ ಮಹಾಸಭೆಯೊಂದನ್ನು ಪ್ರಾರಂಭಿಸಿ ತುಳುವ ಚಳವಳ ಕೈಗೊಂಡಿದ್ದ ಶ್ರೀ ಪಣಿಯಾಡಿ ಶ್ರೀನಿವಾಸ ಉಪಾಧ್ಯಾಯರೂ ಉಪ್ಪಿನ ಸತ್ಯಾಗ್ರಹದಲ್ಲಿ ಸೇರಿದರು; ತುಳುವ ಚಳವಳ ಮುಂದಾಳುಗಳಲ್ಲಿ ಒಬ್ಬರೂ ಸಂಶೋಧಕರೂ ಆದ ಅಮುಣಿಂಜಗುತ್ತು ಶೀನಪ್ಪ ಹೆಗ್ಗಡೆಯವರೂ ಸೆರೆಮನೆಗೆ ಹೋದರು. ಸೆರೆಮನೆ ವಾಸದ ಅವಧಿಯಲ್ಲಿಯೇ ಕಿಲ್ಲೆಯವರು 'ಕಾನಿಗೆ' ಎಂಬ ತುಳು ಕವನಸಂಗ್ರಹವನ್ನೂ ಪಣಿಯಾಡಿಯವರು ತುಳುವ್ಯಾಕರಣವನ್ನೂ ಶೀನಪ್ಪ ಹೆಗ್ಗಡೆಯವರು ಮಿತ್ಯನಾರಾಯಣ ಕಥೆಯನ್ನೂ ಬರೆದರು. ಹೀಗೆ ತುಳು ಚಳವಳಿ ಸ್ವಾತಂತ್ರ್ಯ ಆಂದೋಲನದ ಭಾಗವಾಗಿ ಬೆಳೆದುಬಂತು.

ಮೂರು ವರ್ಷಗಳ ನಂತರ ಪುನಃ ಗಾಂಧೀಜಿ ಮಂಗಳೂರಿಗೆ ಬರುವ ಸುದ್ದಿ ಬಂತು. ಹಿಂದಿನ ಸಲ ಬಂದಿದ್ದಾಗ ನೋಡಲಾಗದೆ ಇದ್ದ ಕೊರಗು ನನ್ನಲ್ಲಿ ಇದ್ದೇ ಇತ್ತು. ಹಾಗಾಗಿ ಈ ಸಲದ ಸುಸಂದರ್ಭವನ್ನು ಕಳೆದುಕೊಳ್ಳಬಾರದೆಂದು ದೃಢನಿಶ್ಚಯಮಾಡಿದೆ. ಸಹಪಾಠಿಗಳನ್ನೂ ವಿದ್ಯಾರ್ಥಿ ಮಿತ್ರರನ್ನೂ ಕೂಡಿಸಿದೆ. ಅವರಲ್ಲಿಯೂ ಉತ್ಸಾಹ ತುಂಬಿಸಿದೆ. ಆಗ ನೀರ್ಚಾಲಿನಿಂದ ಕುಂಬಳೆಗೆ ಬಸ್ಸು ಇತ್ತು. ಚಾರ್ಜೂ ಕಡಿಮೆ, ಎರಡಾಣೆಯೋ ಮೂರಾಣೆಯೋ; ಟ್ರೈನು ಕುಂಬಳೆಯಿಂದ ಮಂಗಳೂರಿಗೆ ಹಿಂದೆಯೇ ಇತ್ತು. ಆದರೂ ನಾವು ಮಹಾತ್ಮರ ದರ್ಶನಕ್ಕೆ ಈ ಪುಣ್ಯ ಕಾರ್ಯಕ್ಕೆ, ಮಂಗಳೂರಿಗೆ ನಡೆದುಕೊಂಡೇ ಹೋಗಬೇಕೆಂದು ನಿರ್ಧರಿಸಿದೆವು, ತೀರ್ಥಯಾತ್ರೆಗೆ ಹೋಗುವಂತೆ. ಹೊರಟೆವು; ಕಾಲ್ನಡಿಗೆಯ ಆಯಾಸ ಒಂದಿಷ್ಟೂ ತೋರಲಿಲ್ಲ. ಉತ್ಸಾಹ ಕುಗ್ಗಲಿಲ್ಲ. ಗಾಂಧೀಜಿಯನ್ನು ಮಂಗಳೂರು ಕೊಡಿಯಾಲ ಬೈಲಿನಲ್ಲಿ ಕುದ್ಮಲ್ ರಂಗರಾಯರು ಸ್ಥಾಪಿಸಿದ ಡಿಪ್ರೆಸ್ಡ್ ಕ್ಲಾಸ್ ಮಿಶನಿನ ಕಟ್ಟಡದ ದ್ವಾರದಲ್ಲಿ ಕಂಡೆನು. ಅಂಗಿ ಹಾಕಿರಲಿಲ್ಲ; ಸುಂದರ ಸರಳತೆಯ ಮೂರ್ತಿಯಾಗಿ ಶೋಭಿಸಿದರು. ಸಮಸ್ತ ಭಾರತದ ಆರಾಧ್ಯ ದೇವತೆಯಂತಿದ್ದ ಆ ಮಹಾತ್ಮರು ಎಷ್ಟು ಸತ್ಯ–ಸುಂದರ, ಎಷ್ಟು ಸೌಜನ್ಯಶಾಲಿ; ಎಷ್ಟು ಪರಮ ಪಾವನ ಎಂಬಂತೆ

ತೋರಿತು; ಅದೇ ಗುಂಗಿನಲ್ಲಿ 'ಗಾಂಧೀದರ್ಶನ ಎಂಬೊಂದು ಕವಿತೆಯನ್ನು ಬರೆದೆ; ಪತ್ರಿಕೆಯಲ್ಲಿ ಅದು ಆಗಲೇ ಪ್ರಕಟವೂ ಆಯಿತು; ಮುಂದೆ ನನ್ನ ಶ್ರೀಮುಖ ಕವನ ಸಂಗ್ರಹದಲ್ಲಿ ಸೇರ್ಪಡೆಯಾಗಿ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳ ಪಠ್ಯವೂ ಆದುದು ನನಗೆ ತೃಪ್ತಿನೀಡಿದೆ.

ಸ್ವಾತಂತ್ರ್ಯ ಸಂದೇಶದಂತೆ ನನ್ನ ಹೃದಯಕ್ಕೆ ಅತ್ಯಂತ ಅಪ್ಯಾಯಮಾನವಾದುದು ಸಾಹಿತ್ಯ ಸಂತೋಷ. ಬಾಲ್ಯಕಾಲದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಪಂಜೆಯವರು ಸಂಪಾದಿಸಿದ ಮೆಕ್ಮಿಲನ್ ಪಾಠಾವಳಿಯ ಪುಸ್ತಕಗಳನ್ನು ಒಳ್ಳೆಯ ಅಧ್ಯಾಪಕರಿಂದ ಕಲಿತೆ; ಗೋವಿನ ಕಥೆ, ಮೂಡುವನೂ ರವಿ ಮೂಡುವನೂ, ತಾರಮ್ಮಯ್ಯ ತಂದು ತೋರಮ್ಮಯ್ಯ, ಆವಿನದು ನೊರೆಹಾಲನೊಲ್ಲೆನು ಇಂತಹ ಮನೋಜ್ಞ ಕವನಗಳನ್ನು ಓದಿ ಬಾಯಿಪಾಠಮಾಡಿಕೊಂಡ ನನಗೆ, ಅದೇ ಕಾಲದಲ್ಲಿ ಮನೆಯಲ್ಲಿ ಜರುಗುತ್ತಿದ್ದ ತಾಳಮದ್ದಳೆ, ಪುರಾಣವಾಚನ, ಊರಲ್ಲಿ ಏರ್ಪಡಿಸುತ್ತಿದ್ದ ಬಯಲಾಟ ಇವುಗಳನ್ನೆಲ್ಲಾ ನೋಡಿ ಕೇಳಿ ಸಾಹಿತ್ಯಾಸಕ್ತಿ ಒಡಮೂಡಿತ್ತು. ಈ ಮಧ್ಯೆ ಸ್ವಲ್ಪಕಾಲ, ಅಗಲ್ಪಾಡಿಯ ಸಂಸ್ಕೃತಶಾಲೆಗೆ ಹೋದಾಗ, ಅಮರಶ್ಲೋಕಗಳನ್ನು, ಶಬ್ದಮಂಜರಿಯನ್ನು, ಧಾತುರೂಪಾವಳಿಯನ್ನು ಇಂಥವುಗಳನ್ನೆಲ್ಲಾ ಪ್ರತಿದಿನ ಬಾಯಿಪಾಠ ಒಪ್ಪಿಸಬೇಕಾದ ಸಂದರ್ಭ. ಸಂಸ್ಕೃತಾಭ್ಯಾಸದ ಕುರಿತು ಒಮ್ಮೆಗೆ ಉದಾಸೀನವು ಉಂಟಾಯಿತು. ಆದರೆ ತಾಯಿಯ ಮಾತಿನಂತೆ ಮತ್ತೆ ಸಂಸ್ಕೃತ ಕಾಲೇಜಿಗೆ ಸೇರಿ ಕಲಿಯುವ ಪ್ರಸಂಗವೆ ಬಂದಾಗ ನನ್ನಲ್ಲಿ ಹಿಂದೆ ಮೂಡಿದ್ದ ಉದಾಸೀನವನ್ನು ಸಂಪೂರ್ಣ ತೊರೆದೆ. ಪ್ರತಿದಿನವೂ ಬಾಯಿಪಾಠ ಒಪ್ಪಿಸಿದೆ. ಈ ಕಲಿಯುವಿಕೆ ಕೇವಲ ಶಬ್ದ, ಧಾತು ವ್ಯಾಕರಣಗಳಿಗೆ ಮಾತ್ರ ಸೀಮಿತವಾಗಿದೆ, ಕಾಳಿದಾಸ, ಭಾರವಿ, ಮಾಘ, ಹರ್ಷ, ಭವಭೂತಿ, ಇಂಥವರ ಕಾವ್ಯಾದಿಗಳಿಗೂ ವಿಸ್ತರಿಸಿತು. ಎಲ್ಲವನ್ನೂ ಹೀಗೆ ಬಾಯಿಪಾಠ ಮಾಡಿಕೊಂಡುದು. ಮುಂದೆ ಆ ಶ್ಲೋಕಗಳ ಅರ್ಥ ತಿಳಿಯುತ್ತಾ ಬಂದಂತೆ, ಬಾಯಿಪಾಠವು ನನಗೆ ವರದಾನದಂತಾಗಿದೆ. ಬಾಯಿಪಾಠ ಕಲಿಯುವ ಶಿಕ್ಷಣ ಪದ್ಧತಿ ಸರಿಯಲ್ಲವೆಂದು ಹೇಳುವ ಇಂದಿನ ಕೆಲ ಶಿಕ್ಷಣ ತಜ್ಞರ ಅಭಿಪ್ರಾಯ ನನ್ನ ಅನುಭವದ ಮಟ್ಟಿಗೆ ಹಾಗಲ್ಲವೆಂದು ತೋರಿದೆ. ನಲವತ್ತು ಐವತ್ತು ವರ್ಷಗಳ ಹಿಂದೆ ಅಭ್ಯಾಸ ಮಾಡಿದ ಸಂಸ್ಕೃತ ಕನ್ನಡ ಮಹಾಕವಿಗಳ ಶ್ಲೋಕಗಳು ಇಂದೂ ಮುಖೋದ್ಗತವಾಗಿ ರಸಾಸ್ವಾದನೆಗೆ ಸಹಾಯವಾಗಿವೆ. ಸಂಸ್ಕೃತ ಶಾಲೆಗೆ ಹೋಗು ಎಂದು ಹೇಳಿದ ತಾಯಿಯ ಉಪದೇಶ ನನಗೆ ಪ್ರಯೋಜನಕಾರಿಯೇ ಆಯಿತೆಂದು ತಿಳಿದುಕೊಂಡಿದ್ದೇನೆ.

ಸಂಸ್ಕೃತ ಕಾಲೇಜಿನಲ್ಲಿ ಮೊದಲನೆಯ ಸರಕಾರೀ ಸಾರ್ವಜನಿಕ ಪರೀಕ್ಷೆಗೆ ಎಂಟ್ರಾನ್ಸ್ ಪರೀಕ್ಷೆ ಎನ್ನುತ್ತಾರೆ. ವಿಶ್ವವಿದ್ಯಾನಿಲಯದ ಮುಂದಿನ ಪದವಿಪರೀಕ್ಷೆಗೆ ಅದು ಮಾರ್ಗವೆಂಬ ಅರ್ಥದಲ್ಲಿ ಇರಬೇಕು. ಎಸ್. ಎಸ್. ಎಲ್. ಸಿ. ಪರೀಕ್ಷೆಯದೇ

ಸ್ಥಾನ; ಡಿಗ್ರಿ ಪಡೆಯುವ ಮುಂದಿನ ಅಭ್ಯಾಸಕ್ಕೆ ಅದು ದಾರಿಯಾಗಿರುವಂತೆ. ಸಂಸ್ಕೃತ ಕನ್ನಡ ಎರಡು ಭಾಷೆಗಳಲ್ಲೂ ಎಂಟ್ರಾನ್ಸ್ ಪರೀಕ್ಷೆಗೆ ಕುಳಿತೆ; ತೇರ್ಗಡೆಯಾದರೆ ಎರಡು ಭಾಷೆಗಳನ್ನೂ ಸಮಪ್ರಧಾನವಾಗಿ ಕಲಿಯಬಹುದು; ಇಲ್ಲವಾದರೆ ಕೇವಲ ಕನ್ನಡ, ಕೇವಲ ಸಂಸ್ಕೃತ ಭಾಷೆಗಳನ್ನೂ ಕಲಿತು ಪದವಿ ಗಳಿಸಬಹುದು; ಎರಡೂ ಭಾಷೆಗಳಲ್ಲೂ ಸಮಾನ ಆಸಕ್ತಿ ಇದ್ದುದರಿಂದ ಅವೆರಡರಲ್ಲೂ ಪರೀಕ್ಷೆಗೆ ಕುಳಿತು ಉತ್ತೀರ್ಣನಾದೆ; ಸಂಸ್ಕೃತದಲ್ಲಿ ಶೇಕಡಾ ಅರವತ್ತಕ್ಕಿಂತಲೂ ಹೆಚ್ಚು ಅಂಕಗಳು ಬಂದವು. ಮೊದಲನೆಯ ತರಗತಿಯಲ್ಲಿಯೇ ತೇರ್ಗಡೆಯಾದೆ. ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಬಿ. ನಾರಾಯಣ ಭಟ್ಟರಿಗೆ ನನ್ನ ಕುರಿತು ತುಂಬಾ ಮೆಚ್ಚುಗೆ ಆಯಿತು. ಮೆಚ್ಚುಗೆಗೆ ಒಂದು ಮುಖ್ಯ ಕಾರಣ, ನನ್ನ ತರಗತಿಯಲ್ಲಿ ನಾನೊಬ್ಬನೇ ಬ್ರಾಹ್ಮಣನಲ್ಲದವನು; ಇತರರೆಲ್ಲರೂ ಬ್ರಹ್ಮಣರು; ಒಬ್ಬರು ಪಯ್ಯನ್ನೂರಿನ ನಂಬೂದಿರಿ ಬ್ರಾಹ್ಮಣರೂ ಇದ್ದರು. ಸಂಸ್ಕೃತ ಅವರಿಗೆಲ್ಲಾ ಸುಲಭವೆನ್ನುವುದು ಸಾಮಾನ್ಯ ಅಭಿಪ್ರಾಯ; ಆದರೆ ಅವರೆಲ್ಲರಿಗಿಂತಲೂ ನನಗೇ ಹೆಚ್ಚು ಅಂಕ ದೊರಕಿತು ಎಂಬುದು ಪ್ರಿನ್ಸಿಪಾಲರಿಗೆ ಮೆಚ್ಚುಗೆ. ನನ್ನನ್ನು ಕರೆದು ಬೆನ್ನುತಟ್ಟಿದ್ದಲ್ಲದೆ ನನಗೆ ಸರಕಾರೀ ಸ್ಕಾಲರ್ ಷಿಪ್ಪನ್ನು ಶಿಫಾರಸು ಮಾಡಿದರು. ನನ್ನ ಮೇಲೆ ಅವರಿಗಿದ್ದ ಪ್ರೀತಿ ಇನ್ನೊಂದು ಕಾರಣ, ಆಗಲೇ ನಾನು ಕವಿತೆ ಬರೆಯ ತೊಡಗಿದ್ದೆ; 'ಪೊಸಡಿಗುಂಪೆ' ಎಂಬ ಕವಿತೆ ಬರೆದೆ. ಪೊಸಡಿಗುಂಪೆ ನನ್ನ ಕುಟುಂಬದ ಕಯ್ಯಾರ ಮತ್ತು ಕುಡಾಲು ಈ ಎರಡೂ ಮನೆಗಳ ನಡುವೆ ಇರುವ ಎತ್ತರವಾದ ಒಂದು ಬೆಟ್ಟ. ಅದು ಪ್ರಿನ್ಸಿಪಾಲರ ಕುಟುಂಬದ ಮನೆ ಬಾಡೂರಿಗೂ ಹತ್ತಿರದ್ದು; ಹಿಮಾಲಯವನ್ನು ಕಾಳಿದಾಸನೇ ಹೊಗಳಿದ್ದಾನೆ; ಸಹ್ಯಾದ್ರಿಯನ್ನುಕನ್ನಡ ಕವಿಶ್ರೇಷ್ಠರು ಪ್ರಶಂಸಿಸಿದ್ದಾರೆ; ಪೊಸಡಿಗುಂಪೆಯನ್ನು ರೈ ಮೆಚ್ಚಿ ಒಳ್ಳೆಯ ಕವಿತೆ ಬರೆದಿದ್ದಾನೆಂದು ತರಗತಿಯಲ್ಲಿ ಮೆಚ್ಚುಗೆಯ ಮಾತನ್ನು ಆಡಿ ಬೆನ್ನುತಟ್ಟಿದ್ದರು.

ಪ್ರಿನ್ಸಿಪಾಲ್ ನಾರಾಯಣ ಭಟ್ಟರು ಮಂಗಳೂರು ಸೈಂಟ್ ಅಲಾಶಿಯಸ್ ಕಾಲೇಜಿನಲ್ಲಿ ಕಲಿತ ಹಳೆಯ ಕಾಲದ ಬಿ.ಎ. ಪದವೀಧರರು. ಅಲ್ಲಿ ಸಂಸ್ಕೃತಾಧ್ಯಾಪಕರಾಗಿದ್ದ ನಿಡ್ಲೋಡಿ ಅನಂತೋಪಾಧ್ಯಾಯರಲ್ಲಿ ಸಂಸ್ಕೃತವನ್ನು ಓದಿದವರು. ಪಂಡಿತ ಮುಳಿಯ ತಿಮ್ಮಪ್ಪಯ್ಯನವರ ಕನ್ನಡ ವಿದ್ಯಾರ್ಥಿ; ಹೀಗೆ ಆ ಎಲ್ಲಾ ಭಾಷೆಗಳಲ್ಲಿ ಒಳ್ಳೆಯ ಹಿಡಿತವಿದ್ದ ವಿದ್ವಾಂಸರು; ಉಪಪತ್ಯ ಪಾಠಮಾಡುತ್ತಿದ್ದರು; ಭಾಷಾಶಾಸ್ತ್ರ ಕಲಿಸುತಿದ್ದರು. ಅವರ ಪಾಠ ವಿಮರ್ಶಾಪೂರ್ಣ. ಹಳೆಯ ಭಾರತೀಯ ಸಂಸ್ಕೃತ ಸಾಹಿತ್ಯದ ಆಧುನಿಕ ವಿಚಾರ ವಿಮರ್ಶೆಯನ್ನೂ ಮೆಚ್ಚುವವರು. ಎಂ. ಆರ್. ಶ್ರೀ ಅವರ 'ನಾಗರಿಕ' ಪ್ರಕಟವಾದಾಗ, ಅದನ್ನು ಬಹಳ ಪ್ರಶಂಸಿಸಿ ತರಗತಿಯಲ್ಲಿ ಓದಿ ಹೇಳಿದರು. ಸಂಸ್ಕೃತ ಕಾಲೇಜಾದರೂ, ಅಲ್ಲಿ ಇಂಗ್ಲಿಷ್ ಭಾಷಾಪಾಠವೂ ಇತ್ತು, ಅದನ್ನು ಅವರೇ ಮಾಡುವರು. ಅದರ ಜತೆಗೆ ಇತರ ವಿಷಯಗಳನ್ನೂ ಬೋಧಿಸುವರು.

ಕಾಲೇಜಿನ ಆಂತರಿಕ ಆಡಳಿತದಲ್ಲಿಯೂ ಸಮರ್ಥರು; ಶಿಸ್ತುಪಾಲಕರು.

ಎಂಟ್ರಾನ್ಸ್ ಸಾರ್ವಜನಿಕ ಪರೀಕ್ಷೆಯಲ್ಲಿ ಉತ್ತೀರ್ಣನಾದ ಮೇಲೆ, ಯೂನಿವರ್ಸಿಟಿ ಪದವಿ ಪರೀಕ್ಷೆಗೆ ಆ ಉಭಯ ಭಾಷೆಗಳೂ ಸಮಪ್ರಧಾನವಿರುವ ವಿದ್ವಾನ್ (ಎ) ತರಗತಿಗೆ ಸೇರಿದೆ. ಪಂಪನ ಜತೆಯಲ್ಲಿ ವಾಲ್ಮೀಕಿಯ ಅಭ್ಯಾಸವೂ ಆಯಿತು; ಕೇಶಿರಾಜನ ಜತೆಯಲ್ಲಿ ಪಾಣಿನಿಯನ್ನೂ ಕಲಿತೆ. ವಾಮನ ದಂಡಿ ಭಾಮಹಾದಿ ಲಾಕ್ಷಣಿಕರ ಗ್ರಂಥಗಳೊಂದಿಗೆ ಕನ್ನಡದ ಕವಿರಾಜಮಾರ್ಗ, ರಸ ರತ್ನಾಕರ ಇವುಗಳೂ ಪಠ್ಯವಾಗಿದ್ದವು. ಬಾಣನ ಕಾದಂಬರಿ, ಕಾಳಿದಾಸನ ಕಾವ್ಯಗಳು ಅಭ್ಯಾಸ ಪುಸ್ತಕಗಳಾಗಿದ್ದುವು. ಭಾಗ್ಯವಶಾತ್, ಅಂದು ನನಗೆ ಕನ್ನಡ ಕಲಿಸಿದವರು ಕನ್ನಡದ ಓಜರೆಂದೇ ಹೆಸರು ಪಡೆದ ಪೆರಡಾಲ ಕೃಷ್ಣಯ್ಯನವರು. ಅಂತಹ ಘನವಿದ್ವಾಂಸರು ಈ ಪ್ರದೇಶದಲ್ಲಿ ಆಗ ಬೇರೊಬ್ಬರಿರಲಿಲ್ಲ; ಸಂಸ್ಕೃತಪಾಠ ಮಹೋಪಾಧ್ಯಾಯ ಪು. ಶಂಕರಶಾಸ್ತ್ರಿಗಳಿಂದ. ಅವರು ವ್ಯಾಕರಣ ಮಹೋಪಾಧ್ಯಾಯರು. ಸಾಹಿತ್ಯ, ತರ್ಕ, ಮೀಮಾಂಸ, ವೇದಾಂತ, ಆಯುರ್ವೇದ, ಜ್ಯೋತಿಷ ಈ ಎಲ್ಲಾ ವಿಷಯಗಳಲ್ಲೂ ಪರಿಣತರು. ಉತ್ತಮ ಕಂಠಶ್ರೀ; ಎದ್ದುನಿಂತೇ ಪಾಠಮಾಡುವವರು. ಚಂಪೂರಾಮಾಯಣವನ್ನು ಅವರು ಪಾಠ ಮಾಡುತ್ತಿರುವ ಸಂದರ್ಭ, ಹನುಮಂತ ಸಾಗರೋಲ್ಲಂಘನ ಮಾಡಿದ ಎಂಬ ಭಾಗವನ್ನು ವರ್ಣಿಸುವಲ್ಲಿ – ನಮ್ಮ ಕಣ್ಣಮುಂದೆ ಸಮುದ್ರ ದಾಟಿದ ಹನುಮಂತನ ಚಿತ್ರ ಕಟ್ಟಿದಂತಾಗುತ್ತಿತ್ತು. ಕರಿಹಲಗೆಯನ್ನು ಸರಿಯಾಗಿ ಉಪಯೋಗಿಸುವರು. ಅಂತೆಯೇ ಯು. ವಿಷ್ಣುಶಾಸ್ತ್ರಿಗಳು, ಎಸ್. ವೆಂಕಪ್ಪಶರ್ಮರು, ಇವರಿಬ್ಬರೂ ನನಗೆ ಸಂಸ್ಕೃತ ಭಾಷೆಯನ್ನು ಕಲಿಸಿದ ಗುರುಶ್ರೇಷ್ಠರು. ಶೂದ್ರಕನ ಮೃಚ್ಛಕಟಿಕವನ್ನು ವಿಷ್ಣುಶಾಸ್ತ್ರಿಗಳು, ಕಾಳಿದಾಸನ ಕುಮಾರಸಂಭವವನ್ನು ಶರ್ಮರೂ ಕಲಿಸುತ್ತಿದ್ದುದು ಇಂದಿಗೂ ಕಣ್ಣಿಗೆ ಕಟ್ಟಿದಂತೆ ಇದೆ.

ಶಂಕರ ಶಾಸ್ತ್ರಿಗಳ ಮಹತ್ತಮವಾದ ವಿದ್ವತ್ ಯೋಗ್ಯತೆಯ ಅಳತೆಗೆ ಒಂದು ನಿದರ್ಶನ; ಒಮ್ಮೆ ನಾವು ವಿದ್ಯಾರ್ಥಿಗಳು, ಆ ಕಾಲೇಜು ಪ್ರಾರಂಭ ಆಗುವಾಗ ಮುಖ್ಯೋಪಾಧ್ಯಾಯರಾಗಿದ್ದು ಮತ್ತೆ ಪುತ್ತೂರು ಬೋರ್ಡು ಹೈಸ್ಕೂಲಿನಲ್ಲಿದ್ದು ನಿವೃತ್ತರಾದ ಸಮೀಪದ ಕನ್ನೆಪ್ಪಾಡಿ ಮನೆತನದ ಪರಮೇಶ್ವರ ಶಾಸ್ತ್ರಿಗಳನ್ನು ಭಾಷಣಕ್ಕೆ ಕರೆದುಕೊಂಡು ಬಂದೆವು; ಅವರು ಭವಭೂತಿಯ ಉತ್ತರರಾಮಚರಿತದ ಮೇಲೆ ಮನೋಜ್ಞವಾಗಿ ಮಾತನಾಡಿದರು ಅವರು ತರ್ಕಶಾಸ್ತ್ರದಲ್ಲಿ ಮಹೋಪಾಧ್ಯಾಯರು. ಒಳ್ಳೆಯ ವಾಗ್ಮಿ; ಪರ್ಣಕುಟಿಯಲ್ಲಿ ಸೀತಾರಾಮರು ವಾಸಿಸುತ್ತಿದ್ದಾಗ ಅನುಭವಿಸಿದ ಶೃಂಗಾರ ಸನ್ನಿವೇಶವನ್ನು ಮನೋರಂಜಕವಾಗಿ ವರ್ಣಿಸಿದರು; 'ರಾತ್ರಿರೇವ ವ್ಯರಂಸೀತ್' (ರಾತ್ರಿಯೇ ಕಳೆದು ಹೋಯಿತು) ಎಂಬೀ ಪಾಠಾಂತರವನ್ನೂ ರಂಜಿಸುವ ರೀತಿ ವಿವರಿಸಿದ್ದು ಸೊಗಸಾಗಿತ್ತು. ಅಂತಹ ಉತ್ತಮ ಭಾಷಣ ಮಾಡುವಾಗ ಶಂಕರಶಾಸ್ತ್ರಿಗಳೂ ಈ ಸಭೆಯಲ್ಲಿ ಇದ್ದರು. ಭಾಷಣ ಕೇಳಿ ತಲೆದೂಗಿದರು. ಭಾಷಣದ

ಕೊನೆಗೆ ಕನ್ನೆಪ್ಪಾಡಿ ಶಾಸ್ತ್ರಿಗಳು ಹೇಳಿದ ಮಾತು ಇದು. "ನಾನು ಮೊತ್ತಮೊದಲಾಗಿ ಮಹೋಪಾಧ್ಯಾಯ ಪರೀಕ್ಷೆಯಲ್ಲಿ ಉತ್ತೀರ್ಣನಾಗಿ ಬಂದೆ; ಆಗ ನಾನೇ ದೊಡ್ಡ ಪಂಡಿತನೆಂಬ ಜಂಭ ನನ್ನಲ್ಲಿ ತುಂಬಿತ್ತು. ಆಮೇಲೆ ಶಂಕರಶಾಸ್ತ್ರಿಗಳಂಥವರೂ ಮಹೋಪಾಧ್ಯಾಯರಾಗಿ ಬಂದರು. ಅವರ ಯೋಗ್ಯತೆಯ ಮುಂದೆ ನಾನು ಕೇವಲ ಕಿರಿಯ ಪಂ ಡಿತನಾದೆ. ನನಗೆ ಭರ್ತೃಹರಿಯ ಶ್ಲೋಕ ನೆನಪಾಯಿತು. ಯಾವಾಗ ನಾನು ಸ್ವಲ್ಪ ತಿಳಿದುಕೊಂಡೆ. ಆಗ ನಾನೇ ಸರ್ವಜ್ಞನೆಂಬ ಅಹಂಕಾರ ಆವರಿಸಿತು; ಯಾವಾಗ ಉತ್ತಮ ವಿದ್ವಾಂಸರ ಸನ್ನಿಧಿಯಲ್ಲಿ ಸರಿಯಾದ ತಿಳುವಳಿಕೆ ಪಡೆದೆನೋ ಆಗ ನಾನು ಅಲ್ಪಜ್ಞನೆಂದು ನನ್ನ ಅಹಂಕಾರ ಜ್ವರದಂತೆ ಇಳಿದುಹೋಯಿತು – ಶಂಕರಶಾಸ್ತ್ರಿಗಳಂಥವರು ಬಂದ ಮೇಲೆ ನಾನು ಪಾಂಡಿತ್ಯದಲ್ಲಿ ಕೇವಲ ಕಿರಿಯವನೆಂದು ತಿಳಿದುಕೊಂಡೆ" ಎಂದರು. ಒಬ್ಬ ಹಿರಿಯ ಮಹಾವಿದ್ವಾಂಸ ತನಗಿಂತ ವಯಸ್ಸಿನಲ್ಲಿ ಕಿರಿಯವನಾದ ಇನ್ನೋರ್ವ ವಿದ್ವಾಂಸನಿಗೆ ಈ ರೀತಿ ಮನ್ನಣೆ ಕೊಡುವುದು ತೀರಾ ಅಪೂರ್ವ; ಅಂತಹ ಯೋಗ್ಯತೆ ಆ ಇಬ್ಬರು ವಿದ್ವಾಂಸರದ್ದು. ಮುಂದೆ ಗ್ರಾಮದ ಮಹಾವಿದ್ವಾಂಸರಾದ ಕನ್ನೆಪ್ಪಾಡಿ ಶಾಸ್ತ್ರಿಗಳನ್ನು ಸನ್ಮಾನಿಸಬೇಕೆಂದು, ಬದಿಯಡ್ಕ ಪಂಚ್ಯಾತ್ ಅಧ್ಯಕ್ಷನಾಗಿದ್ದಾಗ ಅವರ ಪುತ್ತೂರಿನ ಮನೆಗೆ ಹೋಗಿ ಆಮಂತ್ರಿಸಿದೆ. ವಯೋನಿಮಿತ್ತದ ಅನಾರೋಗ್ಯದಿಂದ ಅವರು ಪತ್ನಿ ಬಂದು ಈ ಸ್ಥಿತಿಯಲ್ಲಿ ಅವರನ್ನು ಕರೆದುಕೊಂಡು ಹೋಗಬೇಡಿ ಎಂದರು. ಆಗ ಹಾಸಿಗೆಯಿಂದ ಎದ್ದವರೇ ಶಾಸ್ತ್ರಿಗಳು, ಈತ ನನ್ನ ಪಂಚಾಯ್ತಿನ ಅಧ್ಯಕ್ಷ. ನಾನು ಹೋಗಲೇ ಬೇಕು. ನನ್ನ ಮಗ ಡಾ॥ ಸತ್ಯಶಂಕರನ ಹತ್ತಿರ ಒಪ್ಪಿಗೆ ಪಡೆಯಿರಿ, ಬರುತ್ತೇನೆ ಎಂದರು. ಒಪ್ಪಿಗೆ ಪಡೆದು ಕರೆದುಕೊಂಡು ಬಂದೆವು. ಅಂದು ಅರ್ಧಗಂಟೆ ಬಹಳ ರಸವತ್ತಾಗಿ ಮಾತನಾಡಿದರು. ಈ ಪಂಚಾಯತ್ ಅಧ್ಯಕ್ಷ ರೈ ನನ್ನ ಶಿಷ್ಯರ ಶಿಷ್ಯ; ಒಳ್ಳೆಯ ವಿದ್ವಾಂಸ; ದಕ್ಷ ಆಡಳಿತಗಾರ; ಈತನಿಗೆ ಮುಂದೆ ರಾಷ್ಟ್ರ ಪ್ರಶಸ್ತಿ ಸಿಗಲಿ, ಎಂದು ಆಶೀರ್ವದಿಸಿದರು. ಆ ಕಾಲಕ್ಕೆ ನಾನಾಗಲಿ, ಇತರರು ಯಾರೇ ಆಗಲಿ ಯೋಚಿಸದೆ ಇದ್ದ ರಾಷ್ಟ್ರಪ್ರಶಸ್ತಿ ಮುಂದಿನ ವರ್ಷ ನನಗೆ ಬಂತು. ಶುದ್ಧ ಹೃದಯದಿಂದ ಹೊರಟ ಆ ಪಂಡಿತ ಗೀರ್ವಾಣಿ ಹರಕೆಯು ಮಂತ್ರದಂತೆ ಫಲವನ್ನು ನೀಡಿತು ಎಂದು ಇಂದಿಗೂ ಸ್ಮರಿಸುತ್ತೇನೆ.

●

ಕನ್ನಡದ ಹಿರಿಯ ಮಹಾನ್ ಚೇತನ ನಾಡೋಜ ಡಾ॥ ಕಯ್ಯಾರ ಕಿಞ್ಞಣ್ಣರೈಗಳು ಹುಟ್ಟು ಹೋರಾಟಗಾರರು. ನೂರರ ಸಂಭ್ರಮದ ಹೊಸ್ತಿಲಲ್ಲಿರುವ ಅವರ ಕೆಲವು ಭಾಷಣಗಳ, ಲೇಖನಗಳ ಸಂಗ್ರಹವನ್ನು ಹೊರತರುತ್ತಿರುವುದು ಪ್ರಾಧಿಕಾರದ ಸೌಭಾಗ್ಯವೇ ಸರಿ. ಕನ್ನಡ, ಸಂಸ್ಕೃತ, ಇಂಗ್ಲೀಷ್, ತುಳು, ಮಲೆಯಾಳಂ ಹೀಗೆ ಪಂಚಭಾಷಾ ವಿಶಾರದರಾದ ಇವರು ಈ ವರೆಗೆ ನೂರಾರು ಲೇಖನಗಳನ್ನು ಪ್ರಕಟಿಸಿದ್ದಾರೆ. ಕಾಸರಗೋಡು ಕರ್ನಾಟಕಕ್ಕೆ ಸೇರಬೇಕೆಂದು ಕಳೆದ ಐದು ದಶಕಕ್ಕೂ ಹೆಚ್ಚಿನ ಕಾಲದಿಂದ ಹೋರಾಟ ನಡೆಸಿರುವ ಅವರ ಕನ್ನಡದ ಕೆಚ್ಚು ಈ ಇಳಿವಯಸ್ಸಿನಲ್ಲಿಯೂ ಕಡಿಮೆಯಾಗಿಲ್ಲ. ಸಾಹಿತಿಯಾಗಿ, ಅಧ್ಯಾಪಕರಾಗಿ, ಪತ್ರಿಕೋದ್ಯಮಿಯಾಗಿ, ಸ್ವಾತಂತ್ರ್ಯ ಹೋರಾಟಗಾರರಾಗಿ, ಸಮಾಜ ಸುಧಾರಕರಾಗಿ ಸಮರ್ಪಣಭಾವದಿಂದ ದುಡಿದ ಅವರ ಬದುಕಿನ ಅನುಭವ ವಿಸ್ತಾರವಾದದ್ದು. ಕಯ್ಯಾರರು ಗದ್ಯ-ಪದ್ಯ ಎರಡರಲ್ಲೂ ಪರಿಣಿತರು. ಅವರ ಎಲ್ಲ ಲೇಖನಗಳ ಸಮಗ್ರ ಸಂಪುಟವನ್ನು ಹೊರತರಬೇಕೆಂಬುದು ಪ್ರಾಧಿಕಾರದ ಆಶಯವಾದರೂ ನಮಗೆ ಇರುವ ಸೀಮಿತ ಅವಕಾಶದಲ್ಲಿ ಪ್ರಾತಿನಿಧಿಕವಾಗಿ ಹತ್ತು ಲೇಖನ, ಭಾಷಣಗಳನ್ನು ಮಾತ್ರ ಹೊರತರುತ್ತಿದ್ದೇವೆ. ಮಹಾತ್ಮಗಾಂಧೀಜಿಯವರ ತತ್ವ, ಆದರ್ಶಗಳಲ್ಲಿ ಅಚಲನಂಬಿಕೆ ಇರುವ ಇವರಿಗೆ ರಾಜ್ಯೋತ್ಸವ ಪ್ರಶಸ್ತಿ ಸೇರಿದಂತೆ ಅನೇಕ ಪ್ರಶಸ್ತಿಪುರಸ್ಕಾರಗಳು ಸಂದಿವೆ. ಭೌಗೋಳಿಕವಾಗಿ ಕನ್ನಡ ನಾಡಿನಿಂದ ಹೊರಗಿದ್ದರೂ ಇಂದಿಗೂ ಕನ್ನಡಕ್ಕಾಗಿ ಹೋರಾಡುತ್ತಿರುವ ಅವರ ಸಾಧನೆ ಹಿರಿಯದು. ಅವರ ಅಪಾರವಾದ ಸಾಹಿತ್ಯ ರಾಶಿಯಿಂದ ನಮ್ಮ ಕೋರಿಕೆಯ ಮೇರೆಗೆ ಹತ್ತು ಲೇಖನಗಳನ್ನು ಸಂಪಾದಿಸಿಕೊಟ್ಟಿರುವ ಹಿರಿಯ ಕವಿ ಹಾಗೂ ಪತ್ರಕರ್ತ ಶ್ರೀ ರಾಧಕೃಷ್ಣ ಕೆ. ಉಳಿಯತ್ತಡ್ಕ ಅವರಿಗೂ, ಗೌರವಾನ್ವಿತ ಕಯ್ಯಾರರಿಗೂ, ಪ್ರಾಧಿಕಾರದ ಪರವಾಗಿ ಹೃತ್ಪೂರ್ವಕ ಕೃತಜ್ಞತೆಗಳು.

ಡಾ॥ ಸಿದ್ಧಲಿಂಗಯ್ಯ
ಅಧ್ಯಕ್ಷರು